# ಭ್ರಷ್ಟವಿರೋಧಿ ಸಿದ್ಧಾಂತ

# ಭ್ರಷ್ಟವಿರೋಧಿ ಸಿದ್ಧಾಂತ


ಅನುವಾದಕರು :

**ವಿಜಯಾವಿಷ್ಣುಭಟ್**

ಮೂಲ ಲೇಖಕರು :

**ಶ್ರೀಯುತ ಭರತ್‌ಜಂಗಮ್**

ನೇಪಾಳ



ತಾರಾ ಪ್ರಿಂಟ್ಸ್
ಮೈಸೂರು

# BHRASHTA VIRODHI SIDDHANTA

*Written by* :

**Vijayavishnu Bhat**

*Published by :*

**TARA PRINTS**

***Publisher address :***
# 287/F-21, Ramanuja Road,
Mysuru.

| | | |
|---|---|---|
| Printers | : | Tara Printers, Mysuru. |
| First Edition | : | 2022 |
| Pages | : | iv + 320 =324 |
| Copy Right | : | Author |
| Copies | : | 1000 |
| Price | : | 320/- |
| Cover Page | : | Suresh |
| Layout | : | Asha M C |

# ಶ್ರೀಯುತ ಭರತ್ ಜಂಗಮ್‌ರವರ ಪರಿಚಯ



ಸನ್ಮಾನ್ಯ ಭರತ್ ಜಂಗಮರು 25 ನೇ ನವೆಂಬರ್ 1947ರಲ್ಲಿ ನೇಪಾಳದ ಭಕ್ತಪುರ ಎಂಬಲ್ಲಿ ಜನಿಸಿದರು. ಇವರು ಸಾಹಿತಿಗಳು, ಪತ್ರಕರ್ತರು. ಇತಿಹಾಸ ತಜ್ಞರು. ನೇಪಾಳಿ ಭಾಷೆಯಲ್ಲಿ ಅನೇಕ ಪುಸ್ತಕಗಳನ್ನು ಬರೆದಿರುವರು. ಕೆಲವೊಂದು ಪುಸ್ತಕಗಳು ಅನ್ಯ ಭಾಷೆಗಳಲ್ಲೂ ಅನುವಾದಿತವಾಗಿವೆ.

ಅತೀವ ಸಾಮಾಜಿಕ ಕಳಕಳಿಯನ್ನು ಹೊಂದಿರುವ ಇವರು ಪ್ರಜಾಸತ್ತಾತ್ಮಕವಾದ ಮಾನವೀಯ ಮೌಲ್ಯಗಳಿಗೆ ಹೆಚ್ಚಿನ ಮೌಲ್ಯಗಳಿಗೆ ಹೆಚ್ಚಿನ ಮಹತ್ವವನ್ನು ಕೊಡುವವರಾಗಿರುತ್ತಾರೆ. ಅನೇಕ ವರ್ಷಗಳಿಂದ ಭ್ರಷ್ಟ ವ್ಯವಸ್ಥೆಯನ್ನು ವಿರೋಧಿಸುವ ಕೈಂಕರ್ಯವನ್ನು ಕೈಗೊಂಡಿದ್ದಾರೆ. ಅದರ ಫಲಸ್ವರೂಪವಾಗಿ ಈ 'ಭ್ರಷ್ಟಾಚಾರ ವಿರೋಧಿ ಸಿದ್ಧಾಂತ' ಎಂಬ ಗ್ರಂಥ ರಚನೆಯನ್ನು ಮಾಡಿದರು. ಭ್ರಷ್ಟಾಚಾರವನ್ನು ಕೇವಲ ಉಪದೇಶ, ಪ್ರತಿಭಟನೆಗಳು ಅಥವಾ ಕಾನೂನಿನ ಮೂಲಕ ನಿರ್ಮೂಲನೆ ಮಾಡುವುದು ಅಸಂಭವ. ಕಾರಣ ಅದರ ಬೇರು ಮಾನವ ಸಮಾಜ ಜೀವನದಲ್ಲಿ ಆಳವಾಗಿ ಸರ್ವತ್ರ ಹರಡಿಕೊಂಡಿದೆಯಾದ್ದರಿಂದ ಈ ವ್ಯಾಧಿಯಿಂದ ಕೊಂಚವಾದರೂ ಮುಕ್ತಿ ಪಡೆಯಲು, ಈ ಸಿದ್ಧಾಂತದ ವಿಚಾರಗಳನ್ನು ಶಿಕ್ಷಣದಲ್ಲಿ ಅಳವಡಿಸಿ ಮುಂದಿನ ಪೀಳಿಗೆಗಾದರೂ ಇದರ ಅರಿವು ಮೂಡಿಸಿ, ಈ ಭ್ರಷ್ಟಾಚಾರದಿಂದ ಮನುಕುಲವನ್ನು ರಕ್ಷಿಸಬಹುದೆಂಬುದು ಶ್ರೀಯುತರ ಬಯಕೆ.

ಅವರ ಪ್ರಯತ್ನದಿಂದ ಈ ವಿಷಯವನ್ನು ನೇಪಾಳದ ತ್ರಿಭುವನ ವಿಶ್ವವಿದ್ಯಾಲಯದಲ್ಲಿ ಪಠ್ಯವಾಗಿ ಸ್ವೀಕರಿಸಿದ್ದಾರೆ. ಈ ಕೃತಿಯು ಜಗತ್ತಿನ ಅನ್ಯ ಭಾಷೆಗಳಲ್ಲೂ ಭಾಷಾಂತರಗೊಂಡು ಮಾನ್ಯತೆ ಪಡೆದಿದೆ.

ಇವರ ಪೂರ್ವಜರು ಕರ್ನಾಟಕದವರೇ ಆಗಿದ್ದು, ಬಸವ ತತ್ವಗಳ ಅನುಯಾಯಿಗಳಾಗಿದ್ದಾರೆ. ಅವರ ಈ ಹೊಸ ಸಿದ್ಧಾಂತದ ಕೃತಿ ಕನ್ನಡ ಭಾಷೆಯಲ್ಲಿ ಪರಿಚಿತವಾಗಿ, ಶೈಕ್ಷಣಿಕವಾಗಿ ಅಂಗೀಕೃತವಾಗಬೇಕೆಂಬ ಅಪೇಕ್ಷೆ ಅವರದು.

ಉದಾರ ಮನಸ್ಸಿನವರೂ ಸ್ನೇಹಪರರೂ ಆಗಿರುವ ಭರತ್ ಜಂಗಮರು ಭಾರತ ಮೂಲದವರೆಂಬುದು ಅಭಿನಂದನಾರ್ಹವಾಗಿದೆ.

*****

# ಅನುಕ್ರಮಣಿಕೆ

| | | |
|---|---|---|
| 01. | ಹೊಸ ವಿಚಾರಗಳ ಸಿದ್ಧಾಂತದ ಅಧ್ಯಯನ | 21 |
| 02. | ಭ್ರಷ್ಟವಿರೋಧಿ ಶಾಸ್ತ್ರದ ಪ್ರಸ್ತಾವನೆ | 24 |
| 03. | ಭ್ರಷ್ಟವಿರೋಧಿ ಶಾಸ್ತ್ರದ ಉದ್ದೇಶ್ಯ | 26 |
| 04. | ಪರಿಭಾಷೆ | 30 |
| 05. | ಭ್ರಷ್ಟವಿರೋಧಿ ಶಾಸ್ತ್ರದ ನೀತಿಯುತ ಸಿದ್ಧಾಂತ ಹಾಗೂ ಸೂತ್ರಗಳು | 40 |
| 06. | ಭ್ರಷ್ಟವಿರೋಧಿ ಶಾಸ್ತ್ರದ ನಾಮಕರಣ | 44 |
| 07. | ಅಧ್ಯಯನದ ಅವಶ್ಯಕತೆ | 48 |
| 08. | ಭ್ರಷ್ಟವಿರೋಧಿ ಶಾಸ್ತ್ರದ ಗುಣಗಳು/ ಅವಗುಣಗಳು | 52 |
| 09. | ಯಥಾರ್ಥವಾದಿ ಮತ್ತು ಆದರ್ಶವಾದಿ ವೈಚಾರಿಕ ಸ್ಥಿರತೆ | 57 |
| 10. | ಭ್ರಷ್ಟಾಚಾರ ಮತ್ತು ಭ್ರಷ್ಟವಿರೋಧಿ ಶಾಸ್ತ್ರದ ಸ್ವಭಾವ ಹಾಗೂ ಕಾರ್ಯಕ್ಷೇತ್ರದ ಕುರಿತಾದ ಸಂಕ್ಷಿಪ್ತ ವರದಿ | 59 |
| 11. | ಭ್ರಷ್ಟವಿರೋಧಿ ಶಾಸ್ತ್ರದ ಅನ್ಯ ಶಾಸ್ತ್ರಗಳೊಂದಿಗೆ ಸಂಬಂಧ | 67 |
| 12. | ಭ್ರಷ್ಟವಿರೋದಿ ಶಾಸ್ತ್ರ ಮತ್ತು ಸ್ವಾಭಾವಿಕ ವಿಜ್ಞಾನ | 79 |
| 13. | ಭ್ರಷ್ಟವಿರೋಧಿ ಸಿದ್ಧಾಂತದ ಕ್ಷೇತ್ರ | 85 |
| 14. | ಭ್ರಷ್ಟವಿರೋಧಿ ಶಾಸ್ತ್ರದ ಮೇರೆಗಳು | 91 |
| 15. | ಭ್ರಷ್ಟವಿರೋಧಿ ಶಾಸ್ತ್ರದ ಕಲ್ಪನೆ | 97 |
| 16. | ಭ್ರಷ್ಟವಿರೋದಿ ಶಾಸ್ತ್ರದ ಅಂಗಗಳು | 105 |
| 17. | ಭ್ರಷ್ಟಾಚಾರ ಅಂತಸ್ತಿನ (ಮಟ್ಟದ ) ನಿರ್ಧಾರ | 116 |
| 18. | ಭ್ರಷ್ಟಾಚಾರದ ಪೃಷ್ಠ ಪೋಷಕ | 135 |
| 19. | ಭ್ರಷ್ಟವಿರೋಧಿ ಶಾಸ್ತ್ರ ಅಧ್ಯಯನದ ಉಪಾಗಮ | 143 |

| | | |
|---|---|---|
| 20. | ಸಮಾಜದ ರಚನೆ ಮತ್ತು ವರ್ಗ ಪರಿವರ್ತನೆ | 154 |
| 21. | ಭ್ರಷ್ಟಾಚಾರ ವಿರುದ್ಧ ಶಾಸ್ತ್ರದ ವಿಕಾಸಕ್ರಮ | 165 |
| 22. | ಹೊಸ ವಸಾಹತು ಪದ್ಧತಿ | 174 |
| 23. | ಭ್ರಷ್ಟವಿರೋಧಿ ಶಾಸ್ತ್ರ ಮತ್ತು ಬಡತನ | 186 |
| 24. | ವಿಕಸಿತ ಮತ್ತು ವಿಕಾಸೋನ್ಮುಖ ದೇಶಗಳ ವಿಶೇಷತೆಗಳು | 188 |
| 25. | ಭ್ರಷ್ಟವಿರೋಧಿ ಸಂಸ್ಕೃತಿಯ ವಿಕಾಸ | 203 |
| 26. | ಮನಸ್ಥಿತಿಯ ಒಳಿತು ಮತ್ತು ಕೆಡುಕಿನ ಪಕ್ಷಗಳು | 211 |
| 27. | ಉಚಿತ ಹಾಗೂ ಅನುಚಿತ ಕಾರ್ಯದ ಪರಿಚಯ | 215 |
| 28. | ನೈತಿಕ ಮತ್ತು ಆಧ್ಯಾತ್ಮಿಕ ಜಾಗೃತಿ (ಚೈತನ್ಯ ) | 220 |
| 29. | ಉತ್ತಮ ಶಾಸನ | 227 |
| 30. | ಕಪ್ಪು ಹಣದ ನಿಯಂತ್ರಣ | 244 |
| 31. | ನಾಗರಿಕರಿಗೆ ಶಿಕ್ಷಣ, ಆರೋಗ್ಯ ಮತ್ತು ನ್ಯಾಯ ಒದಗಿಸುವ ರಾಜ್ಯದ ಹೊಣೆಗಾರಿಕೆ | 252 |
| 32. | ಕೇವಲ  ಕಾನೂನಿನ ಮೂಲಕ ಭ್ರಷ್ಟಾಚಾರವನ್ನು ನಿಯಂತ್ರಿಸಲಾಗದು. | 260 |
| 33. | ಒತ್ತಡ ಸಮೂಹ | 264 |
| 34. | ರಾಜ್ಯ ಮತ್ತು ರಾಜನೈತಿಕ ಪಕ್ಷ | 270 |
| 35. | ಉಪಸಂಹಾರ ಮತ್ತು ಸಲಹೆಗಳು | 299 |
| 36. | ಅಧ್ಯಯನ ಮತ್ತು ಸಂಶೋಧನೆ | 314 |

*****

ಡಾ.ಸಿ.ಸೋಮಶೇಖರ ಭಾ.ಆ.ಸೇ.(ನಿ)
ಅಧ್ಯಕ್ಷರು
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ

ಫೆಡರೇಷನ್ ಹೌಸ್, ಎಫ್.ಕೆ.ಸಿ.ಸಿ.ಐ. ಕಟ್ಟಡ
3ನೇ ಮಹಡಿ, ಕೆಂಪೇಗೌಡ ರಸ್ತೆ,
ಬೆಂಗಳೂರು - ೫೬೦ ೦೦೯.
ದೂರವಾಣಿ : 080-22356626
ಮೊಬೈಲ್ : +91 9880191228
ಇಮೇಲ್ : kbada6666@gmail.com
drcsomasekhara9@gmail.com

# ಶುಭನುಡಿ

## ಭ್ರಷ್ಟಾಚಾರದ ವಿವಿಧ ಆಯಾಮಗಳ ದರ್ಶನ

ನೇಪಾಳ ರಾಜ್ಯದ ಶ್ರೀ ಭರತ ಜಂಗಮ ರವರು ಸಾಮಾಜಿಕ ಬದುಕನ್ನು ಸುಂದರಗೊಳಿಸಲು, ಸ್ವಚ್ಛಗೊಳಿಸಲು ಸಂಕಲ್ಪ ತೊಟ್ಟಂತಹ ಒಬ್ಬ ದಾರ್ಶನಿಕರು, ಮೂಲತಃ ಇತಿಹಾಸಕಾರರಾದ ಅವರು ಅನೇಕ ಅಮೂಲ್ಯವಾದ ಕೃತಿಗಳನ್ನು ವಿಶ್ವದ ಸಾರಸ್ವತ ಲೋಕಕ್ಕೆ ನೀಡಿರುತ್ತಾರೆ.

75 ವಸಂತಗಳನ್ನು ಸಂಪೂರ್ಣಗೊಳಿಸಿರುವ ಶ್ರೀ ಭರತ ಜಂಗಮ ರವರು ಒಬ್ಬ ಪತ್ರಕರ್ತರಾಗಿ ಸಲ್ಲಿಸುತ್ತಿರುವ ಸೇವೆ ಅಪೂರ್ವವಾದದ್ದು. ಧಾರ್ಮಿಕ ಶ್ರದ್ಧೆವುಳ್ಳ ಇವರು ಪಶುಪತಿ ದೇವಾಲಯದ ಸಂರಕ್ಷಣೆ ಮತ್ತು ಅದರ ಪುನರುತ್ಥಾನದ ದಿಸೆಯಲ್ಲಿ ತಮ್ಮನ್ನು ತಾವೇ ಸಮರ್ಪಿಸಿಕೊಂಡಿರುತ್ತಾರೆ.

ಸನ್ಮಾನ್ಯ ಶ್ರೀ ಭರತ ಜಂಗಮ ರವರು ವಿಶೇಷವಾಗಿ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುತ್ತಿರುವ ಒಬ್ಬ ಮಹಾನ್ ಸಾಧಕರು, ಅವರು ಇಂಗ್ಲೀಷ್ ನಲ್ಲಿ ರಚಿಸಿರುವ ಂಟಿಣು ಅಂಡಿಡಿಣಾಣರಿಣಾಂಟಂಂಥಿ ಕೃತಿಯು ಭ್ರಷ್ಟಾಚಾರ ವಿರೋಧದ ವಿಚಾರಧಾರೆಯನ್ನು ಒಳಗೊಂಡಿದ್ದು, ಇದೊಂದು ಅಪರೂಪದ ಕೃತಿಯಾಗಿದೆ.

ಈ ಕೃತಿಯನ್ನು ಶ್ರೀಮತಿ ವಿಜಯಾ ವಿಷ್ಣು ಭಟ್ ರವರು ಕನ್ನಡಕ್ಕೆ ಅನುವಾದಿಸಿರುವುದು ತುಂಬಾ ಶ್ಲಾಘನೀಯ. ಮೂಲತಃ ಪ್ರೌಢಶಾಲಾ ಅಧ್ಯಾಪಕಿಯಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಶ್ರೀಮತಿ ವಿಜಯಾ ವಿಷ್ಣು ಭಟ್ ರವರು ಹಿಂದಿ, ಮರಾಠಿ, ಕನ್ನಡ, ತುಳು, ಕೊಡವ ಭಾಷೆಗಳಲ್ಲಿ ಅಪಾರವಾದಂತಹ ಜ್ಞಾನವನ್ನು ಹೊಂದಿರುವವರು. ಅನೇಕ ಭಾಷೆಗಳ ಮೇಲೆ ಪ್ರಾವಿಣ್ಯತೆ ಇದ್ದರೂ ಅವರು ತಮ್ಮ ಸಾಹಿತ್ಯ ಕೃಷಿಗೆ ಆಯ್ಕೆ ಮಾಡಿಕೊಂಡಿದ್ದು ಕನ್ನಡ ಭಾಷೆಯನ್ನು, ಇದುವರೆವಿಗೂ ಸುಮಾರು 10 ಕೃತಿಗಳನ್ನು ರಚಿಸಿರುವ ಇವರು ಕನ್ನಡ ಸಾಹಿತ್ಯ, ಸಂಸ್ಕೃತಿ ಕಲಾಕ್ಷೇತ್ರದಲ್ಲಿ ಅನನ್ಯ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ವಿಶೇಷವಾಗಿ ಮಹಿಳಾ ಜಾಗೃತಿ ಮತ್ತು ಮಹಿಳಾ ಸಂಘಟನೆಯ ದಿಸೆಯಲ್ಲಿ ಅನನ್ಯ ಸೇವೆ ಸಲ್ಲಿಸುತ್ತಾ ಬಂದಿರುವ ಇವರಿಗೆ ಅನೇಕ ಪ್ರಶಸ್ತಿಗಳು, ಮನ್ನಣೆಗಳು ದೊರೆತಿರುತ್ತವೆ.

ಪ್ರಸ್ತುತ ಶ್ರೀ ಭರತ ಜಂಗಮ ರವರ ಈ ಇಂಗ್ಲೀಷ್ ಕೃತಿಯನ್ನು ಕನ್ನಡಕ್ಕೆ ಬಹಳ ಸಮರ್ಥವಾಗಿ ಅನುವಾದಿಸಿರುವ ಶ್ರೀಮತಿ ವಿಜಯಾ ವಿಷ್ಣು ಭಟ್ ರವರ ಪ್ರಯತ್ನವನ್ನು ಅಭಿನಂದಿಸಲೇಬೇಕು.

ನೀತಿ, ನೈತಿಕತೆ, ಸದಾಚಾರ ಹಾಗೂ ಮಾನವೀಯ ಮೌಲ್ಯಗಳನ್ನು ಸಮಾಜದಲ್ಲಿ ಸಂರಕ್ಷಿಸಿ ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣ ಮಾಡುವುದು ನಾಗರಿಕ ಸಮಾಜದ ಕರ್ತವ್ಯ ಎನ್ನುವ ಸಂದೇಶವನ್ನು ಬಹಳ ಅರ್ಥಪೂರ್ಣವಾಗಿ ಈ ಕೃತಿಯು ಅವಿಷ್ಕಾರಗೊಳಿಸುತ್ತದೆ.

ಭ್ರಷ್ಟಾಚಾರ ವಿರೋಧಿ ಶಾಸ್ತ್ರದ ಮೂಲ ಉದ್ದೇಶಗಳ ಬಗ್ಗೆ ಸವಿಸ್ತಾರವಾಗಿ ಪ್ರಸ್ತಾಪಿಸಿರುವ ಈ ಕೃತಿಯು ಮಾನವನ ಸ್ವಚ್ಛಂದ ಪ್ರವೃತ್ತಿಯ ಮೇಲೆ ಒಂದು ನಿಯಂತ್ರಣವನ್ನು ವಿಧಿಸುವ ಅಗತ್ಯತೆಯನ್ನು ಹಾಗೂ ಸಾಮಾಜಿಕ ನ್ಯಾಯವನ್ನು ಒದಗಿಸುವ ಅನಿವಾರ್ಯತೆಯನ್ನು ಸ್ಪಷ್ಟವಾಗಿ ನಿರೂಪಿಸುತ್ತದೆ.

ಭ್ರಷ್ಟಾಚಾರ ವಿರೋಧಿ ಶಾಸ್ತ್ರದ ವ್ಯಾಖ್ಯಾನವನ್ನು ಈ ಕೃತಿಯಲ್ಲಿ ಬಹಳ ಪ್ರಭಾವಪೂರ್ಣವಾಗಿ ಅಭಿವ್ಯಕ್ತಿಗೊಳಿಸಲಾಗಿದೆ. ಲೇಖಕರ ದೃಷ್ಟಿಯಲ್ಲಿ ಭ್ರಷ್ಟಾಚಾರ ಎನ್ನುವುದು ಒಂದು ಬಹುದೊಡ್ಡ ಸಾಮಾಜಿಕ ರೋಗವಾಗಿದೆ. ಭ್ರಷ್ಟಾಚಾರವು ಭೌತಿಕ ರೂಪದಲ್ಲಿ ಸ್ಪಷ್ಟವಾಗಿ ಕಾಣದೇ ಇದ್ದರೂ ದಿನನಿತ್ಯದ ವ್ಯವಹಾರದಲ್ಲಿ ಸಾಮಾನ್ಯವಾಗಿ ಎಲ್ಲರ ಅನುಭವಕ್ಕೆ ಬರುವಂತದ್ದಾಗಿದೆ. ಅಭಿವೃದ್ಧಿಶೀಲ ರಾಷ್ಟ್ರಗಳ ಪ್ರಗತಿಗೆ ಬಹುದೊಡ್ಡ ತೊಡಕಾಗಿರುವ ಈ ಭ್ರಷ್ಟಾಚಾರವು ಆಡಳಿತ ಯಂತ್ರದ ನೈತಿಕ ಸ್ಥೈರ್ಯವನ್ನೇ ಕುಗ್ಗಿಸಿರುವ ಬಗ್ಗೆ ಲೇಖಕರು ತಮ್ಮ ಅಳಲನ್ನು ಈ ಕೃತಿಯಲ್ಲಿ ತೋಡಿಕೊಂಡಿದ್ದಾರೆ.

ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರದ ಜನರು ಹೆಚ್ಚು ಸಶಕ್ತರಾಗದೇ ಇರುವ ಲಾಭವನ್ನು ಪಡೆದುಕೊಂಡು ಆಡಳಿತ ಶಾಹಿಯು ಭ್ರಷ್ಟಾಚಾರದಲ್ಲಿ ತೊಡಗುವುದರಿಂದ ಅಭಿವೃದ್ಧಿಶೀಲ ರಾಷ್ಟ್ರಗಳ ಪ್ರಗತಿಯು ತುಂಬಾ ಕುಂಠಿತವಾಗುವುದು ಸಹಜವಾಗಿರುತ್ತದೆ ಎಂಬುದು ಲೇಖಕರ ಅಭಿಪ್ರಾಯವಾಗಿದೆ. ಲೇಖಕರ ದೃಷ್ಟಿಯಲ್ಲಿ ಯಾವ ದೇಶದಲ್ಲಿ ರಾಜನೈತಿಕ ವ್ಯವಸ್ಥೆ ಅಸ್ಥಿರವಾಗಿರುತ್ತದೆಯೋ ಅಲ್ಲಿ ಭ್ರಷ್ಟಾಚಾರವು ತಾಂಡವವಾಡುತ್ತಿರುತ್ತದೆ. ಲೇಖಕರ ದೃಷ್ಟಿಯಲ್ಲಿ ಲಂಚ ಕೊಳ್ಳುವವರು ಹಾಗೂ ಕೊಡುವವರು ಇಬ್ಬರೂ ಅಪರಾಧಿಗಳೇ, ಇವರಿಬ್ಬರನ್ನೂ ಕಾನೂನಿನ ಚೌಕಟ್ಟಿನಲ್ಲಿ ನಿಯಂತ್ರಿಸಬೇಕಾದುದು ನಾಗರಿಕ ಸಮಾಜದ ಕರ್ತವ್ಯವಾಗಿರುತ್ತದೆ.

ಭ್ರಷ್ಟಾಚಾರ ನಿಯಂತ್ರಣದ ವಿಜ್ಞಾನ, ಚಾರಿತ್ರ್ಯ ವಿಜ್ಞಾನ, ಭ್ರಷ್ಟಾಚಾರದ ನಿಯಂತ್ರಣದ ವ್ಯವಸ್ಥೆ, ಭ್ರಷ್ಟಾಚಾರ ವಿರೋಧಿ ಶಾಸ್ತ್ರ ಮುಂತಾದ ಶೀರ್ಷಿಕೆಯಲ್ಲಿ ಭ್ರಷ್ಟಾಚಾರದ ವ್ಯಾಪಕತೆ ಮತ್ತು ಸಮಾಜದ ಮೇಲೆ ಅದರಿಂದಾಗುವ ದುಷ್ಪರಿಣಾಮಗಳ ಬಗ್ಗೆ ಸವಿಸ್ತಾರವಾಗಿ ಲೇಖಕರು ಚರ್ಚಿಸಿರುತ್ತಾರೆ.

ಈ ಭ್ರಷ್ಟಾಚಾರದ ಉಪಶಮನಕ್ಕೆ ಒಂದು ನೀತಿಯ ಅವಶ್ಯಕತೆಯಿದ್ದು, ಇದರ ಅಧ್ಯಯನದ ವ್ಯಾಪ್ತಿಯನ್ನು ಆರು ಹಂತಗಳಲ್ಲಿ ಲೇಖಕರು ಗುರುತಿಸಿರುತ್ತಾರೆ. ಸಂಶೋಧನೆ ಕಾರ್ಯದ ಆರಂಭ, ಸ್ನಾತಕೋತ್ತರ ಮಟ್ಟದ ತರಗತಿ ಆರಂಭ,

ವಿದ್ಯಾವಾರಿಧಿ ಮತ್ತು ಅನುಸಂಧಾನ, ಭ್ರಷ್ಟಾಚಾರ ವಿರೋಧಿ ಪ್ರಾಜ್ಞರ ಸಿದ್ಧತೆ, ಪಠ್ಯ ಸಾಮಾಗ್ರಿ ರಚನೆ ಮತ್ತು ಭ್ರಷ್ಟಾಚಾರ ವಿರೋಧಿ ವಿಚಾರಧಾರ ಶಾಲೆಯಿಂದಲೇ ಪ್ರಾರಂಭವಾಗಬೇಕೆಂಬ ಸಂದೇಶವನ್ನು ಈ ಕೃತಿಯು ನೀಡುತ್ತದೆ. ಭ್ರಷ್ಟಾಚಾರ ವಿರೋಧಿ ಶಾಸ್ತ್ರದ ಗುಣಗಳನ್ನು ಸಹ ಲೇಖಕರು ಪಟ್ಟಿ ಮಾಡಿ ಅವುಗಳ ಬಗ್ಗೆ ಸಮಗ್ರವಾಗಿ ಚರ್ಚಿಸಿರುತ್ತಾರೆ.

"ರಾಜ್ಯ ಮತ್ತು ರಾಜನೀತಿ" ಎನ್ನುವ ಶೀರ್ಷಿಕೆ ಅಡಿಯಲ್ಲಿ ರಾಜ್ಯಾಧಿಕಾರದಲ್ಲಿ ಭ್ರಷ್ಟಾಚಾರವು ದೂರವಾಗಿ ಸೇವಾಭಾವವು ಮೂಡಬೇಕೆಂಬ ವಿಚಾರವನ್ನು ಲೇಖಕರು ಸಮರ್ಥವಾಗಿ ಮಂಡಿಸಿರುತ್ತಾರೆ.

ಅಂತೆಯೇ ಅಡಳಿತ ಕ್ಷೇತ್ರ, ಆರ್ಥಿಕ ಕ್ಷೇತ್ರ, ಸಾಮಾಜಿಕ ಕ್ಷೇತ್ರ, ಶಿಕ್ಷಣ ಕ್ಷೇತ್ರ, ಆರೋಗ್ಯ ಕ್ಷೇತ್ರ ಮುಂತಾದ ನಾಗರಿಕ ಬದುಕಿನ ಪ್ರಮುಖ ಸೇವಾ ಕ್ಷೇತ್ರಗಳಲ್ಲಿ ಭ್ರಷ್ಟಾಚಾರವು ವ್ಯಾಪಕವಾಗಿ ಹರಡಿರುವುದು ಲೇಖಕರ ಅಸಮಾಧಾನ ಮತ್ತು ನೋವಿಗೆ ಕಾರಣವಾಗಿದೆ.

ಲೇಖಕರು ಭ್ರಷ್ಟಾಚಾರದ ಉಗಮ ಮತ್ತು ಅದರ ವ್ಯಾಪಕ ವಿಸ್ತಾರವನ್ನು ಐತಿಹಾಸಿಕ ದಾರ್ಶನಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ವ್ಯವಹಾರಿಕ ಹಾಗೂ ಮನೋವೈಜ್ಞಾನಿಕ ಹಾಗೂ ಕಾನೂನು ಹಿನ್ನೆಲೆಯಲ್ಲಿ ಬಹಳ ಅರ್ಥಪೂರ್ಣವಾಗಿ ನಿರೂಪಿಸಿರುತ್ತಾರೆ.

ಭ್ರಷ್ಟಾಚಾರದ ವಿವಿಧ ನೆಲೆಗಳನ್ನು ಬಹಳ ಚೆನ್ನಾಗಿ ಗುರುತಿಸಿರುವ ಲೇಖಕರು ವಿಶೇಷವಾಗಿ ರಾಜಕೀಯ ಕ್ಷೇತ್ರದಲ್ಲಿನ ಭ್ರಷ್ಟಾಚಾರದ ಬಗ್ಗೆ ಬೆಳಕು ಚೆಲ್ಲಿದ್ದಾರೆ.

ಸನ್ಮಾನ್ಯ ಡಾ. ಭರತ ಜಂಗಮರವರ ಮೂಲ Anti Corrutptology ಕೃತಿಯು ಭ್ರಷ್ಟಾಚಾರದ ಕಲ್ಪನೆ, ಉಗಮ ಮತ್ತು ಅದರ ವಿವಿಧ ಆಯಾಮಗಳನ್ನು ಬಹಳ ವೈಜ್ಞಾನಿಕ ನೆಲೆಯಲ್ಲಿ ನಿರೂಪಿಸಿರುವ ಒಂದು ಅಪರೂಪದ ಅನನ್ಯ ಕೃತಿಯಾಗಿದೆ. ಸಾರ್ವಜನಿಕ ಜೀವನದಲ್ಲಿನ ಅವರ ಅನುಭವ ಮತ್ತು ಸೇವೆ ಈ ಕೃತಿಯ ರಚನೆಯಲ್ಲಿ ಅವರಿಗೆ ತುಂಬಾ ಸ್ಫೂರ್ತಿ ನೀಡಿದೆ.

ಹನ್ನೆರಡನೇ ಶತಮಾನದಲ್ಲಿ ಕರ್ನಾಟಕದಲ್ಲಿ ಬಸವಾದಿ ಶರಣರ ನೇತೃತ್ವದಲ್ಲಿ ನಡೆದ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಅಂದೋಲನವು ಮೂಲತಃ ಒಂದು ನೈತಿಕ ಕ್ರಾಂತಿಯೇ ಆಗಿರುವುದನ್ನು ನಾವು ವಚನ ಅಧ್ಯಯನದಿಂದ ತಿಳಿಯಬಹುದಾಗಿದೆ. ಮೂಲತಃ ಶರಣರು ಕಟ್ಟಬಯಸಿದ ಸಮಾಜವು ಅಸಮಾನತೆ, ಅಸ್ಪೃಶ್ಯತ ಹಾಗೂ ಭ್ರಷ್ಟಾಚಾರ ಮುಕ್ತವಾದ ಒಂದು ಸುಂದರ ಸಮಾಜ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,

ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,

ತನ್ನ ಬಣ್ಣಿಸಬೇಡ,

ಇದಿರ ಹಳಿಯೇಲು ಬೇಡ
ಇದೇ ಅಂತರಂಗ ಶುದ್ಧಿ,
ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗಮ ದೇವನೊಲಿಸುವ ಪರಿ. ಕೂಡಲಸಂಗಮದೇವ

ಈ ವಚನದಲ್ಲಿ ನಿರೂಪಿಸಲ್ಪಟ್ಟಿರುವ ಸಪ್ತ ಮಹಾ ಸೂತ್ರಗಳು ಇಡೀ ವಿಶ್ವಕ್ಕೆ ನೀಡಿದ ಒಂದು ಜೀವನ ಸಂವಿಧಾನವಾಗಿರುತ್ತದೆ. ಇಂತಹ ಶರಣರ, ಸಂತರ, ದಾರ್ಶನಿಕರ ವಿಚಾರಧಾರೆ ಮೂಲತಃ ಭ್ರಷ್ಟಾಚಾರ ಮುಕ್ತವಾದ ಸ್ವಚ್ಛ, ಶುದ್ಧ ಸಮಾಜದ ಕಲ್ಪನೆಯ ಆಶಯವನ್ನೇ ಹೊಂದಿರುತ್ತದೆ.

ಸನ್ಮಾನ್ಯ ಭರತ ಜಂಗಮ ರವರ ಇಂದು ಜಗತ್ತಿನಾದ್ಯಂತ ವಿಕೃತ ತಾಂಡವ ನೃತ್ಯವಾಡುತ್ತಿರುವ ಈ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಈ ಮಹಾನ್ ಕೃತಿಯು ಜಾಗತಿಕ ಶರಣರ, ಸಂತರ, ದಾರ್ಶನಿಕರ ಸದಾಶಯಕ್ಕೆ ಪೂರಕವಾಗಿ ರಚಿತವಾದ ಒಂದು ಅಪೂರ್ವ ಕೃತಿಯಾಗಿದೆ. ಇಂತಹ ಮಹಾನ್ ಕೃತಿಯನ್ನು ವಿಶ್ವಕ್ಕೆ ನೀಡಿರುವ ಪೂಜ್ಯ ಶ್ರೀ ಭರತ್ ಜಂಗಮರವರನ್ನು ನಾನು ಹೃತೂರ್ವಕವಾಗಿ ಅಭಿನಂದಿಸುತ್ತೇನೆ.

ಇಂತಹ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿರುವ ಶ್ರೀಮತಿ ವಿಜಯಾ ವಿಷ್ಣುಭಟ್ ರವರ ಪ್ರಯತ್ನ ಒಂದು ಬಹು ದೊಡ್ಡ ಸಾಧನೆಯಾಗಿದೆ. ಮೂಲತಃ ಅಧ್ಯಾಪಕಿಯಾಗಿದ್ದ ಶ್ರೀಮತಿ ವಿಜಯಾ ವಿಷ್ಣು ಭಟ್ ರವರಿಗೆ ಅವರ ಶಿಕ್ಷಕವೃತ್ತಿಯು ಇಂತಹ ಮಹತ್ತರ ಸಾಮಾಜಿಕ ಸಂದೇಶ ಸಾರುವ ಕೃತಿಯನ್ನು ಅನುವಾದಿಸುವಲ್ಲಿ ತುಂಬಾ ಸಹಕಾರಿಯಾಗಿದೆ ಎಂಬುದು ನನ್ನ ಅಭಿಪ್ರಾಯ,

ಅನುವಾದ ಮಾಡುವ ಕ್ರಿಯೆಯು ತುಂಬಾ ಕ್ಲಿಷ್ಟವಾದ ಹಾಗೂ ಸವಾಲಿನ ಕಾರ್ಯವಾಗಿರುತ್ತದೆ. ಏಕೆಂದರೆ ಮೂಲಕೃತಿಯ ಆಶಯಗಳಿಗೆ ಬಾಧಕವಾಗದ ಹಾಗೆ ಅನುವಾದ ಮಾಡುವುದು ಒಂದು ವಿಶಿಷ್ಟವಾದ ಕಲೆ, ಈ ಕಲೆಯು ಶ್ರೀಮತಿ ವಿಜಯಾ ವಿಷ್ಣುಭಟ್ ರವರಿಗೆ ಕರಗತವಾಗಿದೆ. ಈ ಕೃತಿಯ ಅನುವಾದದ ಮೂಲಕ ಶ್ರೇಷ್ಠ ಅನುವಾದಕರ ಸಾಲಿಗೆ ಸೇರಿರುವ ಶ್ರೀಮತಿ ವಿಜಯಾ ವಿಷ್ಣುಭಟ್ ರವರಿಗೆ ನಾನು ಹೃತೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇಂತಹ ಮಹತ್ವದ ಕೃತಿಗೆ ಮುನ್ನುಡಿ ಬರೆಯುವ ಅವಕಾಶ ದೊರಕಿಸಿಕೊಟ್ಟ ಸನ್ಮಾನ್ಯರಾದ ಭರತ ಜಂಗಮರವರಿಗೂ ಮತ್ತು ಶ್ರೀಮತಿ ವಿಜಯಾ ವಿಷ್ಣುಭಟ್ಟರವರಿಗೂ ನನ್ನ ಗೌರವಪೂರ್ವಕ ವಂದನೆಗಳು.

ಸಿ. ಸೋಮಶೇಖರ್,
ಅಧ್ಯಕ್ಷರು

# ಭ್ರಷ್ಟಾಚಾರದ ಆಯುರ್ವೇದ

## ಭ್ರಷ್ಟಾಚಾರದ ಕಡಿವಾಣಕ್ಕೆ ಹಲವು ದಾರಿಗಳು

"ಯಸ್ತು ಅರ್ಥೇ ಶುಚಿಹಿ ಸ ಶುಜಃ " ಯಾರು ದುಡ್ಡಿನ ವಿಷಯದಲ್ಲಿ ಶುದ್ಧರೋ, ಅವರೇ ನಿಜಾರ್ಥದಲ್ಲಿ ಶುದ್ಧರು. – 'ಮನು'

ಎಲ್ಲ ಬಗೆಯ ಶುಚಿತ್ವಗಳಲ್ಲಿ ಅರ್ಥಶುಚಿತ್ವಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ. ಅರ್ಥ ಕಾಮದ ಜಯ ಬಹಳ ಕಷ್ಟ. ಇದೇ ಭ್ರಷ್ಟಾಚಾರದ ಮೂಲ ಕಾರಣ.

ಇಂದು ಭ್ರಷ್ಟಾಚಾರ ಸಮಾಜದ, ದೇಶದ, ಅಷ್ಟೇ ಏಕೆ ವಿಶ್ವದ ವಿಕಾಸಕ್ಕೆ ದೊಡ್ಡ ಕಂಟಕವಾಗಿದೆ. ಅದರ ಸಂಪೂರ್ಣ ನಿರ್ಮೂಲನೆ ಅಸಾಧ್ಯ. ಪ್ರಪಂಚದಲ್ಲಿ ತಮೋಗುಣ ಕಳೆದುಹೋಗದು. ಆದರೆ ಅದಕ್ಕೆ ಕಡಿವಾಣ ಹಾಕಬಹುದು.  ಈ ನಿಟ್ಟಿನಲ್ಲಿ ಭ್ರಷ್ಟಾಚಾರ ನಿಗ್ರಹಕ್ಕಾಗಿ ಕೇವಲ ಸರಕಾರದ ನಿಗ್ರಹದಳ ಸಾಲದು. ಅದಕ್ಕೆ ಸಂಸ್ಕಾರ ಶಿಕ್ಷಣವೇ ನಿಜವಾದ ಉಪಾಯ. ಧರ್ಮಾರ್ಥಕಾಮ ಪುರುಷಾರ್ಥಗಳ ಸರಿಸಮವಾದ ಬಳಕೆಯ ಕುರಿತಾದ ಜ್ಞಾನ ಮತ್ತು ವಿವೇಕಗಳಲ್ಲದೇ, ದೇಶಭಕ್ತಿ, ಕರ್ತವ್ಯ ಪ್ರಜ್ಞೆ, ತನ್ನ ಹಾಗೂ ಸಮಾಜದ ಸಂಬಂಧ ಈ ಕುರಿತಾದ ಉತ್ತಮ ಸಂಸ್ಕಾರಗಳನ್ನು ಶಿಕ್ಷಣ ನೀಡುತ್ತದೆ. ಇಂತಹ ಶಿಕ್ಷಣ ಶಾಸ್ತ್ರದ ಬಲವಿಲ್ಲದೆ ಸಾಧ್ಯವಿಲ್ಲ.

ಭ್ರಷ್ಟಾಚಾರಕ್ಕೆ ನಾನಾಮುಖಗಳಿವೆ. ನಾನಾ ಆಯಾಮಗಳಿವೆ. ಅದರ ಕಬಂಧ ಬಾಹು ಎಲ್ಲೆಡೆ ಹರಡಿದೆ. ಅದರ ಮೂಲಗಳನ್ನು ಹುಡುಕಲಾಗದು. ರಕ್ತ ಬೀಜಾಸುರನಂತೆ ಕತ್ತರಿಸಿದಷ್ಟೂ ಬೆಳೆಯುತ್ತದೆ. ರಾವಣನಂತೆ ಹತ್ತಾರು ತಲೆ, ಆಕಾರವಿಲ್ಲದ ವ್ಯಾಪ್ತಿ, ಎಲ್ಲೆಡೆ ಇದ್ದರೂ ಮೂರ್ತವಲ್ಲ. ಇಂತಹ ಶತ್ರುವನ್ನು ಕಂಡುಹಿಡಿಯುವುದೇ ಕಷ್ಟ. ಹಾಗಾದಾಗ ಭ್ರಷ್ಟಾಚಾರದ ಕುರಿತಾದ ಅಧ್ಯಯನ ಅತೀ ಅವಶ್ಯ. ಮಹಾಭಾರತದ ಕಣಿಕ ನೀತಿಯಲ್ಲಿ ಭ್ರಷ್ಟಾಚಾರದ ನಾನಾಮುಖಗಳನ್ನು ಪರಿಚಯಿಸಲಾಗಿದೆ. ಅನೀತಿಯ, ವಾಮ ಮಾರ್ಗದಲ್ಲಿ ಅರ್ಥ ಸಂಚಯ ಮಾತ್ರ ಭ್ರಷ್ಟಾಚಾರವಲ್ಲ.  ತನ್ನ ಸ್ವಾರ್ಥದ ಬಯಕೆಯ ಈಡೇರಿಕೆಗಾಗಿ ಯಾವ ಮಾರ್ಗಗಳನ್ನೂ ಬಳಸಿದರೂ ಭ್ರಷ್ಟಾಚಾರವೇ.  ಇದರ ಸ್ವಭಾವ, ಲಕ್ಷಣ, ಮೂಲಕಾರಣಗಳನ್ನು ತಿಳಿದಾಗ ಮಾತ್ರ ಅದರ ಸಂಹಾರೋಪಾಯಗಳು ಸ್ಪಷ್ಟವಾಗುತ್ತವೆ. ರೋಗದ ಕಾರಣಗಳನ್ನು

ಕಂಡುಹಿಡಿಯದೇ ಔಷಧಿ ನೀಡಲಾಗದು. ಆಯುರ್ವೇದದಲ್ಲಿ ರೋಗ ಚಿಕಿತ್ಸೆಯ ಕುರಿತಾಗಿ ಚರ್ಚೆ ಇರುವಂತೆ ಅದು ಬರದಂತೆ ತಡೆಯುವ ವಿಧಾನಗಳನ್ನೂ ತಿಳಿಸಲಾಗಿದೆ. ಅದರಂತೆ, ಈ ಭ್ರಷ್ಟಾಚಾರನಿಗ್ರಹ ಶಾಸ್ತ್ರದಲ್ಲಿ ಸದಾಚಾರದ ಸೂತ್ರಗಳು, ಭ್ರಷ್ಟಾಚಾರದ ಕಾರಣಗಳು, ಅದರ ಉಪಶಮನಗಳು ಹಾಗೂ ಅದಕ್ಕೆ ಬೇಕಾದ ವ್ಯವಸ್ಥೆಯ ಕುರಿತಾಗಿ ವಿಸ್ತೃತವಾದ ವಿವರಣೆ ಇದೆ. ಹೊಸ ಯುಗದಲ್ಲಿ ಇಂತಹ ಶಾಸ್ತ್ರವೊಂದರ ಅವಶ್ಯಕತೆ ಇತ್ತು. ಅದನ್ನು ಶ್ರೀ. ಭರತ ಜಂಗಮರು ತಮ್ಮ ಆಂಗ್ಲ ಗ್ರಂಥದ ಮೂಲಕ ಪೂರೈಸಿದ್ದಾರೆ. ಆದರೆ, ಅದನ್ನು ಕನ್ನಡೀಕರಿಸಿ ಲೋಕಪ್ರಿಯಗೊಳಿಸುವ ಕಾರ್ಯವನ್ನು ಮಾಡುವ ಮೂಲಕ ಶ್ರೀಮತಿ ವಿಜಯಾ ಭಟ್‌ರವರು ಕನ್ನಡ ಜನತೆಗೆ ಮಹದುಪಕಾರ ಮಾಡಿದ್ದಾರೆ. ಇದೊಂದು ಅಪರೂಪದ ಶಾಸ್ತ್ರ. ಕನ್ನಡದಲ್ಲಿ ಇದರ ಅವತರಣ ಅಸಾಧಾರಣವೆಂದೇ ನನ್ನ ಅನಿಸಿಕೆ.

ಶ್ರೀಮತಿ ವಿಜಯಾ ವಿಷ್ಣು ಭಟ್ ಡೋಂಗ್ರೆಯವರು ಶಿಕ್ಷಕಿಯಾಗಿ, ಸಮಾಜಸೇವಕಿಯಾಗಿ, ಲೇಖಕಿಯಾಗಿ, ಸಂಘಟಕಿಯಾಗಿ ಹೆಸರು ಮಾಡಿದವರು. ಅವರ ನಿಸ್ಪೃಹ ಸಾಮಾಜಿಕ ಕಾರ್ಯಗಳ ಶೃಂಖಲೆಯಲ್ಲಿ ಈ ಗ್ರಂಥರಚನೆಯೂ ಸೇರಿದೆ. ಇದೊಂದು ಕೇವಲ ಸಾಹಿತ್ಯಿಕ ಅನುವಾದವಲ್ಲ; ಕೇವಲ ಶೈಕ್ಷಣಿಕ ಕೃತಿ ರಚನೆಯಲ್ಲ; ಹೊರತು, ಸಾಮಾಜಿಕ ಪ್ರಯೋಗವಾಗಿದೆ. ಈ ಗ್ರಂಥದ ವಿಷಯ– ಶೀರ್ಷಿಕೆಗಳನ್ನು ನೋಡಿದಾಗ, ಒಂದು ಶೈಕ್ಷಣಿಕ ಶಿಸ್ತಿಗೆ ಒಳಪಟ್ಟ ಗ್ರಂಥ ಎಂದೆನಿಸುತ್ತದೆ. ಆದರೆ, ಆ ಎಲ್ಲ ಸೀಮೆಗಳ ಆಚೆಯ ಆಶಯ ಈ ಗ್ರಂಥಕ್ಕೆ ಇದೆ. ಹೀಗಾಗಿ, ಹೊಸ ರಾಷ್ಟ್ರೀಯ ಶಿಕ್ಷಾನೀತಿಯ ಅಡಿಯಲ್ಲಿ, ಉತ್ತಮ ಸಮಾಜ ನಿರ್ಮಾಣದ ಹಿನ್ನೆಲೆಯಲ್ಲಿ ಇದೊಂದು ಪಠ್ಯ ಪುಸ್ತಕ. ಹೊಸ ಸಂಶೋಧನ ಮಾರ್ಗಕ್ಕೆ ಕೈಪಿಡಿ. ಸಾಮಾನ್ಯ ಓದುಗರಿಗೆ ಹೊಸ ಶಾಸ್ತ್ರ–ಮಾರ್ಗದ ಪರಿಚಾಯಿಕೆ. ಇಂತಹ ಕೃತಿ ಯಾವುದೇ ವಿಶ್ವವಿದ್ಯಾಲಯದ ಡಿ.ಲಿಟ್ ಪದವಿಗೆ ಅರ್ಹವಾದ ಕೃತಿಯಾಗಿದೆ.

ಕೊನೆಯ ಮಾತು – ಸುಖದ ಮೂಲ ಧರ್ಮ. ಧರ್ಮಕ್ಕೆ ಮೂಲ ಅರ್ಥ. ಅದರ ಅಡಿಪಾಯ ರಾಜ್ಯ (ಸುಶಾಸನ) .... ಹೀಗೆ ಕೌಟಿಲ್ಯನ ಸೂತ್ರಗಳಲ್ಲಿ ಅರ್ಥವ್ಯವಸ್ಥೆ ಧರ್ಮ ಸ್ಥಾಪನೆಯ ಅಡಿಪಾಯ ಎಂದು ಕರೆಯಲಾಗಿದೆ. ಆದರೆ ಅಂತಹ ಅರ್ಥವ್ಯವಸ್ಥೆಯಲ್ಲಿ ಭ್ರಷ್ಟಾಚಾರವನ್ನೂ ನಿಗ್ರಹಿಸದೆ, ಹೋದರೆ, ಅದರಿಂದ ಅಧರ್ಮವೇ ಬೆಳೆದು ನಿಲ್ಲುತ್ತದೆ. ಸಮಾಜದಲ್ಲಿ ಅಶಾಂತಿ ಉಂಟಾಗುತ್ತದೆ. ಹೀಗಾಗಿ, ಇಂದಿನ ಈ ಅಶಾಂತಿಯ ಮೂಲಕಾರಣ ಅರ್ಥವ್ಯವಸ್ಥೆಯಲ್ಲಿನ

ಭ್ರಷ್ಟಾಚಾರ. ಅದಕ್ಕೆ ಕಾರಣ ನೀತಿಯಿಲ್ಲದ ರಾಜಕಾರಣ. ಈ ಸೂತ್ರದ ಆಯಶಗಳಿಗೆ ಭಾಷ್ಯ ಬರೆದ ಶ್ರೀಮತಿ ವಿಜಯಾ ಭಟ್‌ರವರ ಈ ಕೃತಿ ಭ್ರಷ್ಟಾಚಾರಮುಕ್ತ ಅರ್ಥವ್ಯವಸ್ಥೆಯನ್ನೂ ರೂಪಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಈ ಕೃತಿಯ ಎಲ್ಲಾ ಸದಾಶಯಗಳಿಗೆ ಸಮಾಜ ಸ್ಪಂದಿಸಲಿ, ಭಗವಂತನ ಅನುಗ್ರಹ ಬೆಂಬಲವಾಗಲಿ ಎಂದು ಹಾರೈಸುತ್ತ ಶ್ರೀಮತಿ ವಿಜಯಕ್ಕನನ್ನೂ ತುಂಬುಹೃದಯದಿಂದ ಅಭಿನಂದಿಸುತ್ತೇನೆ.

ರಾಮನವಮಿ

ರಾಮಟೇಕು

ತಮ್ಮವ,

**ಪ್ರೊ. ಶ್ರೀನಿವಾಸ ವರಖೇಡಿ**

ಕುಲಪತಿ, ಕೇಂದ್ರೀಯ ಸಂಸ್ಕೃತ ವಿಶ್ವ ವಿದ್ಯಾಲಯ, ನವದೆಹಲಿ.

N.Santosh Hegde
Former Judge, Supreme Court of India
Former Lokayukta, State of Karnataka

Ph: 080 22343738
No. B34, 2nd Floor,
Embassy Palace Apartments,
No. 1/16, Cunningham Road,
Bengaluru 560 052.

# ಆಶಯ ನುಡಿ

## ಭ್ರಷ್ಟಾಚಾರ ನಿಗ್ರಹಕ್ಕೆ ಬೇಕು ಸಂಸ್ಕಾರದ ಲೇಪ

ಮನುಷ್ಯ ಸುಸಂಸ್ಕೃತ ಮಾನವ ಅಥವಾ ದಾನವನಾಗುವುದು ಆತನಿಗೆ ಬಾಲ್ಯದಲ್ಲಿ ದೊರಕುವ ಸಂಸ್ಕಾರ, ಸಂಸರ್ಗ, ಪಾರಿವಾರಿಕ ಜೀವನದ ಮೌಲ್ಯಗಳನ್ನವಲಂಬಿಸಿದೆ. ಮುಂದೆ ಪೂರಕವಾಗಿ ಸಮಾಜದಲ್ಲಿ ಪರಿಜನರಿಂದ, ಸ್ನೇಹಿತರಿಂದ ಅವುಗಳ ವಿಕಾಸವಾಗುವುದು. ಬದಲಾಗಿ ಸ್ವಾರ್ಥ, ದ್ವಂದ್ವ, ಮೇಲಾಟಗಳನ್ನು ಹಣ ಅಧಿಕಾರಗಳ ದರ್ಪವನ್ನೇ ಜೀವನವೆಂದು ತಿಳಿದವನಲ್ಲಿ ದಾನವತ್ವದ ವಿಕಾಸವಾಗುತ್ತದೆ. ಅದಕ್ಕಾಗಿಯೇ ಹೇಳುತ್ತಾರೆ.

**ಸ ಜೀವತಿ ಗುಣೋಯಸ್ಯ ಧರ್ಮೇಯಸ್ಯ ಸ ಜೀವತಿ ।**
**ಗುಣ ಧರ್ಮ ವಿಹೀನಸ್ಯ ಜೀವನಂ ನಿಷ್ಪ್ರಯೋಜನಂ ॥**

ಧರ್ಮ (ಮನುಷ್ಯತ್ವ )ಸದ್ಗುಣಗಳು ಇರುವವನ ಜೀವನವೇ ನಿಜವಾದ ಜೀವನ. ಗುಣ-ಧರ್ಮಗಳಿಲ್ಲದವನ ಬಾಳು ನಿಷ್ಪ್ರಯೋಜಕ. ಇಂದು ವಿಶ್ವವ್ಯಾಪಿಯಾಗಿ ಹರಡಿರುವ ಭ್ರಷ್ಟಾಚಾರವೆಂಬ ವ್ಯಾಧಿಯಿಂದ ಮಾನವ ಜೀವನದಲ್ಲಿ ಶಾಂತಿ-ಪ್ರೀತಿ, ಮನುಷ್ಯತ್ವ - ಬಂಧುತ್ವ ಎಲ್ಲವೂ ನಶಿಸುತ್ತಿದೆ. ಸ್ವಾರ್ಥ, ಅಹಮಿಕೆ, ದರ್ಪ ವಿಕಸಿಸುತ್ತಿದೆ. ಪರಿಣಾಮ ಅನಾಚಾರ, ಅತ್ಯಾಚಾರ ಅಕ್ರಮ ದುಷ್ಟ ಚಟುವಟಿಕೆಗಳು ಎಲ್ಲಾ ಕ್ಷೇತ್ರಗಳಲ್ಲೂ ತಾಂಡವಾಡುತ್ತಿವೆ. ಇಂತಹ ವ್ಯವಸ್ಥೆಯನ್ನು ಕೇವಲ ಧರ್ಮದ ಉಪದೇಶಗಳಿಂದಾಗಲಿ, ಕಾನೂನಿನಿಂದಾಗಲಿ, ರಾಜದಂಡದಿಂದಾಗಲಿ, ನಿಯಂತ್ರಿಸಲು ಸಾಧ್ಯವಾಗದು. ಸಮಾಜವೇ ಬದಲಾಗಬೇಕಿದೆ. ಅಂದರೆ ಪ್ರತಿ ಪ್ರಜೆಯಲ್ಲಿಯೂ ತನ್ನ ಮನೆ, ಸಮಾಜ, ರಾಷ್ಟ್ರದ ಕುರಿತಾದ ನೈತಿಕ ಜವಾಬ್ದಾರಿಯ ಅರಿವು ಉಂಟಾಗಬೇಕು. ಇದಕ್ಕೆ ಪೂರಕವಾಗಿ, ತಮ್ಮ ಪರಂಪರಾಗತವಾದ ಈ ನೆಲ-ಜಲ, ಪರಿಸರದ ಮೌಲ್ಯ ಪ್ರಾಮಾಣಿಕ ಬದುಕಿನ ಉದ್ದೇಶ್ಯ ತಿಳಿಸುವ ಶಿಕ್ಷಣ ದೊರೆತು, ನಾಗರಿಕ ಸಮಾಜದಲ್ಲಿ ಸಭ್ಯ ಸೌಹಾರ್ದಯುತವಾಗಿ, ತಾನೂ ಬದುಕಿ ಇನ್ನೊಬ್ಬರಿಗೂ ಬದುಕಲು ಅವಕಾಶ ನೀಡುವಂತಹ ವಿವೇಕ ಪ್ರತಿ ಪ್ರಜೆಯಲ್ಲೂ ಉಂಟಾಗಬೇಕು. ಆಗ ಬಹುಶಃ ಮುಂದಿನ ಪೀಳಿಗೆಯಲ್ಲಾದರೂ ಬದಲಾವಣೆ ಕಾಣುವಂತಾದೀತು.

ಜಗತ್ತಿನಲ್ಲೇ ಹೆಚ್ಚು ಜನಸಂಖ್ಯೆ ಹೊಂದಿರುವ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ನಮ್ಮ ಭಾರತ ! ಇದು ರಾಜ್ಯಾಂಗ, ಕಾರ್ಯಾಂಗ. ನ್ಯಾಯಾಂಗ ಮತ್ತು

ಪ್ರಸಾರಾಂಗ ಎಂಬ ನಾಲ್ಕು ಸ್ತಂಭಗಳ ಮೇಲೆ ನಿಂತಿದೆ. ಆದರೆ ಇಂದು ಆ ಸ್ತಂಭಗಳಿಗೂ ಭ್ರಷ್ಟತೆಯ ವ್ಯಾಧಿ ಆವರಿಸಿ ಎಲ್ಲಾ ರೀತಿಯಿಂದಲೂ ದೇಶವನ್ನು ದುರ್ಬಲಗೊಳಿಸುತ್ತಿದೆ. ಅತಂತ್ರ, ಅಸ್ಥಿರ ವ್ಯವಸ್ಥೆಯಲ್ಲಿ ನಲುಗುವುದು ಜನತಂತ್ರ. ನೋವು ತಟ್ಟುವುದು ಜನಸಾಮಾನ್ಯನಿಗೆ. ಹಾಗಾಗಿ ನಾವೆಲ್ಲ ಇಂದು ಜಾಗರೂಕರಾಗಬೇಕಾಗಿದೆ.

ಈ ನಿಟ್ಟಿನಲ್ಲಿ, ಪ್ರಸ್ತುತ, ನೇಪಾಳದವರಾದ ಸಜ್ಜನ, ಚಿಂತಕ, ಇತಿಹಾಸಕಾರ, ಶಿಕ್ಷಣತಜ್ಞ ಹಾಗೂ ಪತ್ರಕರ್ತರಾಗಿರುವ ಶ್ರೀಯುತ 'ಭರತ ಜಂಗಮ'ರವರು "ಭ್ರಷ್ಟಾಚಾರ ವಿರೋಧಿ ಸಿದ್ದಾಂತ" ಎಂಬ ಹಲವು ಆಯಾಮಗಳಲ್ಲಿ ಚಿಂತನೆ, ಸಂಶೋಧನೆಯನ್ನು ಮಾಡಿ, ಮನುಕುಲಕ್ಕೆ ಕೊಂಚವಾದರೂ ಸಹಕಾರಿಯಾದೀತೆಂಬ ಉದ್ದೇಶ್ಯದಿಂದ ಈ ಗ್ರಂಥ ರಚನೆಯನ್ನು ಮಾಡಿದ್ದಾರೆ. ನೇಪಾಳದ ವಿಶ್ವವಿದ್ಯಾಲಯದಲ್ಲಿ ಪಠ್ಯವಾಗಿ ಸ್ವೀಕೃತವಾಗಿರುವ ಈ ಕೃತಿಯು ಇನ್ನಿತರ ದೇಶಗಳಲ್ಲೂ ಮಾನ್ಯತೆ ಪಡೆದು ಸ್ವೀಕೃತವಾಗಿದೆ. ಶ್ರೀಯುತರ ಈ ಪ್ರಯತ್ನ ಸ್ತುತ್ಯರ್ಹವಾಗಿದೆ.

ಇದೀಗ ಕನ್ನಡನಾಡಿನಲ್ಲೂ ಇದನ್ನು ಪರಿಚಯಿಸುವ ಅವರ ಅಭೀಷ್ಟವನ್ನು ಶ್ರೀಮತಿ ವಿಜಯಾ ವಿಷ್ಣು ಭಟ್‌ರವರು ಪೂರೈಸಿದ್ದಾರೆ. ಹಿಂದಿಯಲ್ಲಿದ್ದ ಬರಹದ ಕಡತವನ್ನು ಭರತ ಜಂಗಮರಿಂದ ಪಡೆದು, ಕನ್ನಡಕ್ಕೆ ಅನುವಾದಿಸಿ ಓದುಗರ ಮುಂದಿಡುವ ಪ್ರಯತ್ನ ಮಾಡಿದ್ದಾರೆ. ಶ್ರೀಮತಿ ವಿಜಯಾರವರು ಸ್ವತಃ ಲೇಖಕಿಯಾಗಿದ್ದು, ಅಧ್ಯಾಪಕಿ, ಸಮಾಜ ಸೇವಕಿಯಾಗಿ ಸಾಮಾಜಿಕ ಬದುಕಿನೊಂದಿಗೆ ನಿಕಟವಾಗಿರುವುದರಿಂದ ಇಂತಹ ಕೃತಿಯನ್ನು ರಚಿಸುವಲ್ಲಿ ಸಫಲರಾಗಿರುವರೆಂದು ತೋರುತ್ತದೆ.

ಸರಳ– ಸಜ್ಜನಿಕೆ, ನ್ಯಾಯ, ದಾನ ದಯೆಗಳನ್ನೊಳಗೊಂಡ ಮೌಲ್ಯಯುತ ಶಿಕ್ಷಣದೊಂದಿಗೆ ಭ್ರಷ್ಟಾಚಾರ ವಿರೋಧಿ ಸಿದ್ಧಾಂತದ ವಿಷಯವನ್ನು ಕಲಿಕೆಯಲ್ಲಿ ಅಳವಡಿಸುವ ಕಾರ್ಯವಾಗಬೇಕಿದೆ. ಈ ಅಭಿಯಾನದಲ್ಲಿ ನಮ್ಮ ಶಿಕ್ಷಣ ಸಂಸ್ಥೆಗಳು, ಶಿಕ್ಷಣ ತಜ್ಞರು, ಚಿಂತಕರು ಗಮನಹರಿಸಬೇಕಾಗಿದೆ. ಮಾತ್ರವಲ್ಲ, ಈ ವಿಚಾರಗಳಲ್ಲಿ ಇನ್ನಷ್ಟು ಸಂಶೋಧನೆಗಳಾಗಿ, ಸರಳೀಕರಿಸಿ ವಿದ್ಯಾರ್ಥಿಗಳಿಗೆ ಮನ ಮುಟ್ಟಿಸುವ ಕಾರ್ಯವೂ ಆಗಬೇಕಿದೆ. ಈ ಹೊಣೆ ನಾಡಿನ ವಿದ್ವಾಂಸರ ಮೇಲಿದೆ.

ಭವಿಷ್ಯದಲ್ಲಿ ಆರೋಗ್ಯಪೂರ್ಣ, ಸಮೃದ್ಧ, ಸುಂದರ ಸಮಾಜ ನಿರ್ಮಾಣವಾಗಲೆಂಬುದು ನನ್ನ ಸದಾಶಯ.

**(ಎನ್. ಸಂತೋಷ್ ಹೆಗ್ಡೆ)**
ವಿಶ್ರಾಂತ ನ್ಯಾಯಧೀಶರು

# ಅಂತರಂಗದ ಮಾತು



ಬಂಧುಗಳೇ, ಬರಹಗಾರನ ಸಾಹಿತ್ಯಸೇವೆಯಲ್ಲಿ ಓದುಗನ ಪಾತ್ರ ಬಹು ಮುಖ್ಯವಾದುದು. ಅವನು ಸಮಾಜದಲ್ಲಿ ಎಲ್ಲರೊಳಗೊಬ್ಬನಾಗಿ ಇರುವವನು. ಅವನು ತಾನಿರುವ ಸಮಾಜದ ವಿಭಿನ್ನ ಮುಖಗಳ ಅಧ್ಯಯನ ಮಾಡುತ್ತಾನೆ. ತನ್ನ ವೈಚಾರಿಕ ಕುಲುಮೆಯಲ್ಲಿ ಚಿಂತನ ಮಂಥನ ಮಾಡುತ್ತಾನೆ. ಮಾನವಹಿತ, ಸಮಾಜ ಹಿತ, ರಾಷ್ಟ್ರಹಿತಕ್ಕಾಗಿ ಮಾನವೀಯ ಮೌಲ್ಯಗಳನ್ನು ರಕ್ಷಿಸುವ ತುಡಿತ ಅವನಲ್ಲಿರುತ್ತದೆ. ಸಾಹಿತಿಯಾದವರು ತನ್ನ ಬರಹಗಳ ಮೂಲಕ ಸಮಾಜದಲ್ಲಿರುವ ವಿಭಿನ್ನ ರೀತಿ ನೀತಿಗಳು, ಹಿತ ಅಹಿತವಾದ ಪ್ರವೃತ್ತಿಗಳನ್ನು ವಿಶ್ಲೇಷಿಸುವ ಮೂಲಕ ಅದರಿಂದ ಸಮಾಜಕ್ಕಾಗುವ ಅಪಾಯ ಉಪಾಯಗಳನ್ನು ತನ್ನದೇ ಆದ ದೃಷ್ಟಿಕೋನದಿಂದ ಭಾವ–ಭಾಷೆಗಳ ಸೂತ್ರದಲ್ಲಿ ಅಕ್ಷರಗಳನ್ನು ಪೋಣಿಸಿ, ತಿದ್ದಿ, ತೀಡಿ, ಬರಹರೂಪದಲ್ಲಿ ವ್ಯಕ್ತಪಡಿಸುತ್ತಾನೆ. ಅದರಲ್ಲಿ ಗತಕಾಲದ ಅಧ್ಯಯನ, ವರ್ತಮಾನದ ವಸ್ತುಸ್ಥಿತಿಯ ಚಿತ್ರಣ, ಭವಿಷ್ಯದ ಸುಂದರ ಉದಾರ ಆರೋಗ್ಯಪೂರ್ಣ ಕಲ್ಪನೆ ಇರುತ್ತದೆ. ಓದುಗನಿಗೆ ಆ ಸಾಹಿತ್ಯದಲ್ಲಿ ಮಾಹಿತಿಯೋ, ಸಂದೇಶವೋ ಸಿಗುವಂತಿರಬೇಕು. ಅದು ಜೀವಂತ ಸಾಹಿತ್ಯವೆನಿಸುತ್ತದೆ. ಬರಹಗಾರನ ಉದ್ದೇಶವೂ ಸಾರ್ಥಕವಾಗುತ್ತದೆ.

ನಾನು ಇದುವರೆಗೆ, ಹತ್ತು ಕೃತಿಗಳನ್ನು ಕನ್ನಡದ ಕಣಜದಲ್ಲಿಟ್ಟಿದ್ದೇನೆ. ಹಿಂದಿಯಿಂದ ಕನ್ನಡಕ್ಕೆ ಈ ಮೊದಲು ಭಾಷಾಂತರಿಸಿದ್ದು, 'ಕೈಕೇಯಿ ಚೇತನಾ ಶಿಖಾ' ಎಂಬ ಪೌರಾಣಿಕ ಉಪನ್ಯಾಸವನ್ನು [ಕಾದಂಬರಿ]. ಇದೀಗ 'ಭ್ರಷ್ಟಾಚಾರ ವಿರೋಧಿ ಸಿದ್ಧಾಂತ' (Anti corruptology) ಎಂಬ ಅನುವಾದಿತ ಕೃತಿಯನ್ನು ತಮ್ಮ ಮುಂದಿಡುತ್ತಿದ್ದೇನೆ. ಈ ಕೃತಿಯ ಮೂಲ ಲೇಖಕರು, ನೇಪಾಳದ ಶ್ರೀಯುತ ಭರತ ಜಂಗಮರು. ಇವರು ಇತಿಹಾಸಕಾರರು. ಪತ್ರಕರ್ತರು. ಚಿಂತಕರು, ಸಮಾಜ ಸುಧಾರಕರು ಆಗಿದ್ದು, ಈ ಗ್ರಂಥದಲ್ಲಿ ಸಮಾಜವನ್ನು ಆವರಿಸಿರುವ ಭ್ರಷ್ಟಾಚಾರವೆಂಬ ವ್ಯಾಧಿಯ ಕುರಿತಾದ ಸಾಮಾಜಿಕ, ರಾಜನೈತಿಕ,ವೈಜ್ಞಾನಿಕವಾದ ಸಮಗ್ರ ವಿಶ್ಲೇಷಣೆಯನ್ನು ಮಾಡಿದ್ದಾರೆ. ಭ್ರಷ್ಟಾಚಾರವು ಮನುಕುಲವನ್ನು ಹೇಗೆ

ವಿನಾಶದ ಅಂಚಿಗೆ ಕೊಂಡೊಯ್ಯುತ್ತದೆ ಎಂಬುದನ್ನು ವಿಷದವಾಗಿ, ಪ್ರಸ್ತುತಪಡಿಸಿದ್ದಾರೆ. ಇದಕ್ಕೆ ಪರಿಹಾರೋಪಾಯವನ್ನೂ ಸೂಚಿಸುವ ಪ್ರಯತ್ನವನ್ನು ಮಾಡಿದ್ದಾರೆ. ಶಿಕ್ಷಣದ ಮೂಲಕ ಮಾತ್ರ ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸಬಹುದು ಎಂಬುದು ಅವರ ದೃಢ ನಂಬಿಕೆ.ನೇಪಾಳದ ತ್ರಿಭುವನ ವಿಶ್ವವಿದ್ಯಾಲಯದಲ್ಲಿ ಈ ವಿಚಾರವನ್ನು ಪಠ್ಯದೊಂದಿಗೆ ಅಳವಡಿಸಲಾಗಿದೆ. ಅಲ್ಲದೆ, ಇನ್ನಿತರ ಕೆಲ ದೇಶಗಳಲ್ಲಿ ಈ ಹೊಸವಿಚಾರದ ಸಿದ್ಧಾಂತ ಮಾನ್ಯತೆ ಪಡೆದುಕೊಂಡಿದೆ. ಶ್ರೀಯುತರ ಪರಿಚಯವಾಗಿದ್ದು ದೂರವಾಣಿ ಮೂಲಕ. ಈ ಸಂಪರ್ಕ ಸಂಭಾಷಣೆಯಿಂದ ಪರಿಚಯ ಘನಿಷ್ಟವಾಯಿತು. ಅವರು ತಮ್ಮ ಈ ಕೃತಿಯನ್ನು ಕನ್ನಡದಲ್ಲಿ ಭಾಷಾಂತರಿಸಲು ಕೇಳಿಕೊಂಡಾಗ ಇದು ನನ್ನಿಂದ ಸಾಧ್ಯವೇ ? ಎನಿಸಿದ್ದೂ ಇದೆ. ಪ್ರಯತ್ನಿಸಬಹುದಲ್ಲಾ ಎಂದು ಒಪ್ಪಿಗೆಯನ್ನಿತ್ತೆ. ಹರ್ಷೋತ್ಸಾಹದಿಂದ ಕೆಲಸವನ್ನು ಕೈಗೆತ್ತಿಕೊಂಡೆ. ಹಿಂದಿಯಲ್ಲಿದ್ದ ಬರಹದ ಕಡತವನ್ನು ಕಳುಹಿಸಿಕೊಟ್ಟರು. ಸಂಕಲ್ಪ, ಶ್ರಮ, ಛಲ ಒಂದಾದಾಗ ಯಾವುದೂ ಅಸಾಧ್ಯವಲ್ಲವೆನಿಸಿತು. ಕಾರ್ಯೋನ್ಮುಖಳಾದೆ. ಸುಮಾರು ಆರು ತಿಂಗಳ ಶ್ರಮದ ಫಲವಾಗಿ ಈ ಕೃತಿ ಕನ್ನಡಭ಼ಾಷೆಯಲ್ಲಿ ರೂಪುಗೊಂಡಿತು. ಸಂತೃಪ್ತ ಭಾವವೂ ಮೂಡಿತು.

ಮುಂದಿನ ಹೆಜ್ಜೆ ಪ್ರಕಟಣೆಯದ್ದು. "ಅಕ್ಕ.., ಎಲ್ಲಾ ಜವಾಬ್ದಾರಿ ನಿಮ್ಮದೇ ಎಂದು ಬಿಟ್ಟರು ಜಂಗಮರು. ಹಾಗೂ ಮಾನ್ಯ ಶ್ರೀ. ಸಿ. ಸೋಮಶೇಖರವರನ್ನು ಸಂಪರ್ಕಿಸಲು ತಿಳಿಸಿದರು. ಶ್ರೀಯುತ ಸಿ. ಸೋಮಶೇಖರರವರನ್ನು ದೂರವಾಣಿಯ ಮೂಲಕ ಸಂಪರ್ಕಿಸಿ, 'ಮುನ್ನುಡಿ' ಯ ವಿಚಾರವನ್ನು ಪ್ರಸ್ತಾಪಿಸಿದೊಡನೆ, ಬಹಳ ಹರ್ಷದಿಂದ ಸಮ್ಮತಿಸಿದರು. "ಮುತ್ತೈದೆಯ ಹಣೆಗೆ ಹಾಳಿತವಾದ ಸಿಂಧೂರ ತಿಲಕವಿಟ್ಟಂತೆ" ಪುಸ್ತಕಕ್ಕೆ ಮುನ್ನುಡಿ ಶೋಭೆಯನ್ನುಂಟು ಮಾಡುವುದು! ಈ ಮಹತ್ವವನ್ನು ನಿರೂಪಿಸಿದ್ದಾರೆ ಶ್ರೀಯುತರು. ಸನ್ಮಾನ್ಯ ಶ್ರೀ. ಸಿ. ಸೋಮಶೇಖರವರನ್ನು ಸದಾ ಸ್ಮರಿಸುವೆನು.

ಮುನ್ನುಡಿಯ ನಂತರ ಈ ಕೃತಿಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯುನ್ನತ ಸ್ಥಾನದ ಜವಾಬ್ದಾರಿಯುಳ್ಳ ದೆಹಲಿಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀಯುತ ಶ್ರೀನಿವಾಸ ವರಖೇಡಿಯುವರು ವಿಮರ್ಶಾತ್ಮಕವಾಗಿ, ರಚನಾತ್ಮಕವಾಗಿ ತಮ್ಮ ಅನಿಸಿಕೆಗಳನ್ನು ನೀಡಿ, ಕೃತಿಯ ಮೆರುಗನ್ನು ಹೆಚ್ಚಿಸಿದ್ದಾರೆ. ನನಗೂ ಒಬ್ಬ ಸಹೋದರನಂತೆ ಪ್ರೋತ್ಸಾಹಕರಾಗಿ ಸಹಕರಿಸಿದ್ದಾರೆ. ಇವರು ಸದಾ ನೆನೆಪಿನಲ್ಲಿದ್ದು ನನಗೆ ಪ್ರೇರಣದಾಯಕರಾಗಿರುತ್ತಾರೆ.

ಇನ್ನೋರ್ವ ಮೇರು ವ್ಯಕ್ತಿ ಸನ್ಮಾನ್ಯ ಶ್ರೀಯುತರಾದ ಸಂತೋಷ ಹೆಗ್ಡೆಯವರು. ನ್ಯಾಯಾಂಗದ ಅತ್ಯುನ್ನತ ಹುದ್ದೆಯನ್ನು ನಿರ್ವಹಿಸಿ, ಕರ್ನಾಟಕ ಸರಕಾರದ ಲೋಕಾಯುಕ್ತರಾಗಿ, ಭ್ರಷ್ಟಾಚಾರಿಗಳಿಗೆ ಸಿಂಹಸ್ವಪ್ನವಾಗಿದ್ದವರು. ಇವರ ಆಶಯ, ಅಭಿಪ್ರಾಯ ಈ ಕೃತಿಗೆ ಪಡೆಯುವಂತಾದರೆ,...... ಚಿನ್ನದ ಹೂವಿಗೆ ಪರಿಮಳವಿದ್ದಂತಾದೀತು ಎಂಬ ಕಲ್ಪನೆ ನನ್ನದಾಗಿತ್ತು. ಆದರೆ, ಯಾರ ಮೂಲಕವಾದರೂ ಕೇಳಿದ್ದಾಗಲಿ, ಭೇಟಿಯಾಗಿದ್ದಾಗಲಿ ಇಲ್ಲ. ಹೇಗೆಂದು ಯೋಚಿಸುತ್ತಿದ್ದಂತೆ, ನೇರವಾಗಿ ದೂರವಾಣಿಯಲ್ಲಿ ಸಂಪರ್ಕಿಸಿದೆ. ನನ್ನ ಮನದ ಇಂಗಿತವನ್ನು ತಿಳಿಸಿದೆ. ಒಪ್ಪಿಗೆಯನ್ನೂ ಸೂಚಿಸಿದರು. " ನಾನು ಹೇಗೆ ಏನು ಬರೆಯಬೇಕು?" ಎಂದು ಕೇಳಿದರು. ನನ್ನ ಪುಸ್ತಕಕ್ಕೆ ತಮ್ಮ ಆಶಯ ನುಡಿ ಬೇಕೆಂದೆ. ನಂತರ ನಾನು ತಮ್ಮನ್ನು ಭೇಟಿ ಮಾಡಲು ಬರಬಹುದೇ ? ಎಂದಾಗ ತತ್‌ಕ್ಷಣ ಆಯಿತು. ಸೋಮವಾರ ಹತ್ತು ಗಂಟೆಗೆ ಬನ್ನಿ ಎಂದರು. ತಮ್ಮ ವಿಳಾಸವನ್ನೂ ಕಳುಹಿಸಿದರು. ನನಗೆ ಆತ್ಮೀಯರೂ, ಪತ್ರಕರ್ತರೂ ಆದ ಶ್ರೀ. ಮುರಳಿಕೃಷ್ಣ ಬೆಳಾಲು ಇವರೊಂದಿಗೆ ಸಂತೋಷ ಹೆಗ್ಡೆಯವರನ್ನು ಅವರ ಮನೆಯಲ್ಲಿ ಭೇಟಿಯಾದೆವು. ಹತ್ತು ಗಂಟೆಯಿಂದ ಸುಮಾರು ಒಂದುವರೆ ಗಂಟೆಗೂ ಮಿಕ್ಕಿ ಅವರು ನಮ್ಮೊಂದಿಗೆ ತಮ್ಮ ಅನುಭವ, ಸಾಮಾಜಿಕ ವಿಚಾರಗಳು, ಪ್ರಸ್ತುತ ರಾಜಕೀಯದ ಕುರಿತಾಗಿ ಹಲವು ವಿಚಾರಗಳನ್ನು ಹಂಚಿಕೊಂಡರು. ಅವರ ಸರಳ ಸಜ್ಜನಿಕೆಗೆ ನಾವು ಮಂತ್ರಮುಗ್ಧರಾದೆವು. ಅವರೊಂದಿಗೆ ಕಳೆದ ಆ ಕ್ಷಣಗಳು ಅವಿಸ್ಮರಣೀಯ. ಅವರು ನೀಡಿದ ಆಶಯ 'ಮುಕುರ ಮೂಗುತಿಯಂತೆ' ಈ ಕೃತಿಗೆ ಹೊಳಪು ನೀಡಿದೆ.

ನನಗೆ ಭರತ ಜಂಗಮರನ್ನು ಪರಿಚಯಿಸಿದ್ದು, ಸ್ತ್ರೀ ಜಾಗೃತಿ ಪತ್ರಿಕೆಯ ಸಂಪಾದಕರಾದ ಶ್ರೀಮತಿ ಶೋಭಾರವರು. ಇವರನ್ನು ಬೆನ್ನುಡಿ ಬರೆದುಕೊಡಲು ಕೇಳಿದಾಗ 'ಆಗಲೀ ವಿಜಯಕ್ಕ' ಎಂದು ಸಂತಸದಿಂದ ಒಪ್ಪಿ ಬರೆದುಕೊಟ್ಟು ಬೆಂಬಲವನ್ನೂ ನೀಡಿರುವ ಇವರಿಗೆ ಈ ಸಂದರ್ಭದಲ್ಲಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಇನ್ನು ಈ ಪುಸ್ತಕದ ಹಸ್ತಪ್ರತಿಯನ್ನು ಅರ್ಥೈಸಿಕೊಂಡು, ಶ್ರಮವಹಿಸಿ, ಟೈಪಿಂಗ್ (ಬೆರಳಚ್ಚು ) ಮಾಡಿ ಮುದ್ರಣಕ್ಕೆ ಅಣಿಗೊಳಿಸಿದ್ದು ಮೆಚ್ಚುಗೆಯ ಕೆಲಸವೇ ಸರಿ. ನನ್ನ ಸಹೋದರಿ ಶ್ರೀಮತಿ ಸ್ನೇಹಲತಾ ಮೋಡಕ್‌ರಿಗೆ ಮನಃಪೂರ್ವಕ ಕೃತಜ್ಞತೆಗಳು.

ನನ್ನ ಎಲ್ಲಾ ಕಾರ್ಯಗಳಲ್ಲೂ ನನ್ನೊಂದಿಗಿರುವ ನನ್ನ ಪರಿವಾರವನ್ನು ಮರೆಯಲಾದೀತೆ ? ಹೀಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ ವಂದನೆಗಳು.

ಹೀಗೆ ಪ್ರಕಟಣೆಗೆ ಸಿದ್ಧವಾದ ಬರಹಗಳಿಗೆ ಮುದ್ರಣರೂಪವಿತ್ತು ಪುಸ್ತಕಾಕಾರದಲ್ಲಿ ಹೊರತರುತ್ತಿರುವ ಪ್ರಕಾಶಕರಾದ ಶ್ರೀಯುತ ಶಿವಪ್ರಕಾಶ ಇವರಿಗೂ ಮತ್ತು ತಾರಾ ಪ್ರಿಂಟರ್ಸ್‌ರವರಿಗೂ ಪುಸ್ತಕ ವಿನ್ಯಾಸಕಾರರಿಗೂ ಮನ ತುಂಬಿ ಕೃತಜ್ಞತೆಗಳನ್ನರ್ಪಿಸುತ್ತೇನೆ.

ಈ ಎಲ್ಲಾ ಶ್ರಮ ಸಾರ್ಥಕವಾಗುವುದು ಓದುಗರು ಸ್ವೀಕರಿಸಿ, ಮೆಚ್ಚಿಕೊಂಡಲ್ಲಿ ಮಾತ್ರ. ಪಾಠಕ ಬಂಧುಗಳಿಂದ ಸಲಹೆ ಸದಭಿಪ್ರಾಯವನ್ನು ನಿರೀಕ್ಷಿಸುತ್ತೇನೆ.

**ವಿಜಯಾ ವಿಷ್ಣುಭಟ್**
ಬೆಂಗಳೂರು
ಮೊ : 9980803404

*****

# 1. ಹೊಸ ವಿಚಾರಗಳ ಸಿದ್ಧಾಂತದ ಅಧ್ಯಯನ

ವಿಶ್ವಮಾನವ ಸಮುದಾಯದ ವಿಕಾಸವು, ಮಾನವನ ಮಸ್ತಿಷ್ಕದಲ್ಲಿ ಜನ್ಮ ತಳೆಯುವ ವಿಚಾರಗಳ ಬೆಳವಣಿಗೆಯಾಗಿದೆ. ಸೃಷ್ಟಿಕಾಲದಿಂದಲೂ ಮಾನವನು ವೈಚಾರಿಕ ದೃಷ್ಟಿಕೋನದಲ್ಲಿ ಮಹತ್ವದ ಸ್ಥಾನವನ್ನು ಪಡೆದಿದ್ದಾನೆ. ಸಮಸ್ಯೆಗಳು ಚಿಕ್ಕದಾಗಿರಲಿ, ದೊಡ್ಡದಾಗಿರಲಿ, ಎದುರಾದಾಗಲೆಲ್ಲಾ ಮಾನವನು ತನ್ನ ವೈಚಾರಿಕ ಮಾಧ್ಯಮದಿಂದ ಆ ಸಮಸ್ಯೆಗಳಿಗೆ ಸಮಾಧಾನ ಮತ್ತು ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡುತ್ತಾನೆ. ಮತ್ತು ಅದರಲ್ಲಿ ಸಫಲನೂ ಆಗುತ್ತಾನೆ. ಇದೇ ರೀತಿ ವಿಶ್ವಮಾನವ ವಿಕಾಸಕ್ರಮದಲ್ಲಿ ಎದುರಾಗುವ ಸಮಸ್ಯೆಗಳನ್ನು ಶಮನಗೊಳಿಸುತ್ತಾ ವಿಶ್ವಮಾನವನು ಒಂದು ವಿಕಸಿತ ರೂಪವನ್ನು ಪಡೆದಿದ್ದಾನೆ.

ವಿಚಾರ ಅಥವಾ ದರ್ಶನಗಳು ಸಮಯದ ಅವಶ್ಯಕತೆಗನುಸಾರವಾಗಿ ಹುಟ್ಟಿಕೊಳ್ಳುತ್ತವೆ. ಇಂತಹ ವಿಚಾರಗಳೇ ಎದುರಾದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುತ್ತಾ ಹೋಗುತ್ತವೆ. ವಿಚಾರವು ವಿಷಯದಲ್ಲಿ ಯಾವಾಗ ರೂಪಾಂತರಗೊಳ್ಳುತ್ತದೋ, ಆಗ ಅದು ವಿಷಯ ಜ್ಞಾನದ ಮುಖಾಂತರ ವ್ಯಾಖ್ಯಾನದ ರೂಪದಲ್ಲಿ ಸ್ಥಾಪಿತವಾಗಲು ಬಯಸುತ್ತದೆ. ಹೀಗೆ ಜ್ಞಾನದ ಮೂಲಕ ವಿಚಾರ ಸ್ಥಾಪಿತವಾಗಬಲ್ಲುದು. ಜ್ಞಾನದ ನಿರಂತರ ಅಧ್ಯಯನದಿಂದ ವಿಚಾರದ ವಿಶ್ಲೇಷಣೆಯಾಗಿ ಪ್ರಮಾಣಿಸಲ್ಪಟ್ಟು ವಿಜ್ಞಾನದ ರೂಪವನ್ನು ಧರಿಸುತ್ತದೆ. ವಿಜ್ಞಾನದ ಮೂಲಕ ಶೋಧ ಮತ್ತು ಅದರ ಪರಿಣಾಮವೇ ವಿಜ್ಞಾನಕ್ಕೆ ಮೂಲ ಆಧಾರವಾಗಿದೆ. ಎಲ್ಲಿ ಕಾರಣ ಜನ್ಮ ತಳೆಯುತ್ತದೆಯೋ ಅಲ್ಲಿ ಪರಿಣಾಮದ ಉತ್ಪತ್ತಿಯಾಗುತ್ತದೆ. ವಿಜ್ಞಾನವು ಪ್ರಮಾಣವನ್ನು ಶೋಧಿಸುತ್ತದೆ ಮತ್ತು ಪ್ರಮಾಣದ ಆಧಾರದ ಮೇಲೆ ವಿಜ್ಞಾನ ಸ್ಥಾಪಿತವಾಗುತ್ತದೆ. ವಿಜ್ಞಾನದ ಸ್ರೋತವು ಜ್ಞಾನವಾದರೆ, ಜ್ಞಾನದ ಹುಟ್ಟು ವಿಜ್ಞಾನವಾಗಿದೆ. ಭ್ರಷ್ಟಾಚಾರದ ವಿರುದ್ಧವಾದ ವಿಜ್ಞಾನರೂಪದಲ್ಲಿ

ಸ್ಥಾಪಿತವಾಗಿರುವ ಈ ಭ್ರಷ್ಟ ವಿರೋಧಿ ಶಾಸ್ತ್ರವನ್ನು ಭೌತಿಕ ಮತ್ತು ರಸಾಯನ ಶಾಸ್ತ್ರದಂತೆ ಕಟು ನಿಖರವೆಂದು ಪರಿಗಣಿಸದೆ, ಅನ್ಯ ಸಾಮಾಜಿಕ ವಿಜ್ಞಾನದಂತೆ, ರಾಜ ನೀತಿ ಶಾಸ್ತ್ರ, ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರದಂತೆ, ಮೃದು ಸರಳ ವಿಜ್ಞಾನವೆಂದು ಪರಿಗಣಿಸಬಹುದು. ಈ ಭ್ರಷ್ಟ ವಿರೋಧಿ ಶಾಸ್ತ್ರದಲ್ಲಿ ಪ್ರಯೋಗ, ಪರೀಕ್ಷಣ, ಅಂಕಿ ಅಂಶ ಮತ್ತು ಗಣಕೀಯ ಕಾರಣದಿಂದ ಇದು ಶಾಸ್ತ್ರವಿಜ್ಞಾನದ ಸರಣಿಯಲ್ಲಿ ಬರುತ್ತದೆ.

ಮಾನವ ಜೀವನದ ವಿಕಾಸದ ಕ್ರಮದಲ್ಲಿ, ಸಮಯ ಮತ್ತು ಸಮಾಜದ ಮೂಲಕ ಮನವರಿಕೆಯಾದ ವಿಷಯದ ಆಳ ಅಧ್ಯಯನ ಮಾಡಿ, ಅದರಿಂದ ಜನಿತ (ಹುಟ್ಟಿದ) ಮಾರ್ಗದರ್ಶನವೇ ಈ ವಿಷಯದ ಸಿದ್ಧಾಂತವೆಂದು ಮಾನ್ಯ ಮಾಡಬಹುದಾಗಿದೆ. ಯಾವುದೇ ಸಿದ್ಧಾಂತದ ಸೃಜನ (ಉತ್ಪತ್ತಿ) ಮತ್ತು ಅದರ ಅವಶ್ಯಕತೆಯ ಅರಿವು ಸಮಾಜದ ಚಿಂತನಶೀಲ ವ್ಯಕ್ತಿಗಳಿಗೆ ಮನವರಿಕೆಯಾದ ನಂತರವೇ ಸಮಸ್ಯೆಗಳ ಸಮಾಧಾನಕ್ಕಾಗಿ, ಆ ವಿಷಯದ ಕುರಿತು ಅಧ್ಯಯನವನ್ನು ಮಾಡಲಾಗುತ್ತದೆ. ಇಂತಹ ಅವಶ್ಯಕ ವಿಷಯಗಳನ್ನು ಜ್ಞಾನದ ಮೂಲಕ ಕ್ರಮಬದ್ಧ ಹಾಗೂ ವಿಸ್ತೃತ ಅಧ್ಯಯನ ಮಾಡಿ ಪ್ರಮಾಣೀಕೃತ ರೂಪದಲ್ಲಿ ಆ ವಿಷಯವನ್ನು ಪ್ರಸ್ತುತಪಡಿಸುವುದೇ ವಿಷಯಗತ ವಿಜ್ಞಾನದ ಸ್ಥಾಪನೆ ಎಂದು ಹೇಳಲಾಗುತ್ತದೆ. ವಿಷಯ ಜ್ಞಾನದ ಏಕಿಕೃತ ಭಂಡಾರವೇ ವಿಜ್ಞಾನದ ತಾತ್ಪರ್ಯವಾಗಿದೆ. ಅದು ಸೂಕ್ಷ್ಮ ರೀತಿಯ ಅಧ್ಯಯನ ವಿಧಿವತ್ತಾದ ಪರೀಕ್ಷಣ (ಚಿಂತನೆ) ಹಾಗೂ ವಿಸ್ತೃತ ವ್ಯಾಖ್ಯಾನದಮೂಲಕನಿರ್ಮಾಣವಾಗುತ್ತದೆ.ಈ ಭ್ರಷ್ಟವಿರೋಧಿ ಶಾಸ್ತ್ರವನ್ನು ಇದೇ ಭೌತ ಸಿದ್ಧಾಂತದ ಆಧಾರದಿಂದ ಸಿದ್ಧಗೊಳಿಸಲಾಗಿದೆ.

ಭ್ರಷ್ಟಾಚಾರವೆಂಬುದೊಂದು ಸಂಪೂರ್ಣವಾಗಿ ಸಾಮಾಜಿಕ ಸಮಸ್ಯೆಯಾಗಿದೆ. ಇದರ ಹೊಣೆಯನ್ನೂ ಸಮಾಜವೇ ಹೊರಬೇಕಾಗಿದೆ. ಸಮಾಜ ಮಾನವ ಜಾತಿಯ ಸಂಘಟನೆಯಾದುದರಿಂದ ಮಾನವನನ್ನು ಸಾಮಾಜಿಕ ಪ್ರಾಣಿಯೆಂದು ಹೇಳಲಾಗಿದೆ.ಯಾವುದೇ ಒಂದು ಸಮಾಜದ ಉತ್ಥಾನ ಅಥವಾ ಪತನ ಆ ಸಮಾಜದಲ್ಲಿ ವಾಸಿಸುವ ಮಾನವನ ಕಾರ್ಯ ಮತ್ತು ವ್ಯವಹಾರವನ್ನವ ಲಂಬಿಸುತ್ತದೆ. ಸಮಾಜದಲ್ಲಿ ಒಂದು ವೇಳೆ ವಿಕೃತಿಯು ಹರಡಿದರೆ ಆ ಸಮಾಜವೇ ಅದರ ಹೊಣೆ ಹೊರಬೇಕಾಗುತ್ತದೆ. ಸಮಾಜದ ಯಾವುದೇ ಒಂದು ಭಾಗದಲ್ಲಿ ಭ್ರಷ್ಟಾಚಾರ ತಳವೂರಿದಾಗ ಇತರರು ಈ ಕುರಿತಾದ ಜಾಗೃತಿ ಮೂಡಿಸಲು ಸನ್ನಧರಾಗಿ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಇದು ಪ್ರಕೃತಿಯ ನಿಯಮವೂ ಹೌದು. ಭ್ರಷ್ಟಾಚಾರವೆಂಬುದು ಮಾನವ ವಿಕಾಸಕ್ಕೆ ತೊಡಕಾಗಿದೆ. ಅಲ್ಲದೆ ಸಮಾಜ ವಿಕಾಸದಲ್ಲಿ ಬಾಧಕವೂ ಆಗಿದೆ. ಇದರ ನಿರಾಕರಣ (ಅಸ್ವೀಕಾರ)

ಮತ್ತು ಶಮನಕ್ಕಾಗಿ ಹೊಸ ವಿಚಾರ ಮತ್ತು ಸಿದ್ಧಾಂತದ ಅವಶ್ಯಕತೆ ಇತ್ತು. ಈ ಅವಶ್ಯಕತೆಯನ್ನು ಈ ಭ್ರಷ್ಟವಿರೋಧಿ ಶಾಸ್ತ್ರವು ಪೂರ್ಣಗೊಳಿಸುತ್ತಿದೆ.

ಹೊಸ ವಿಚಾರ ಮತ್ತು ಸಿದ್ಧಾಂತದ ರೂಪದಲ್ಲಿ ಪ್ರಸ್ತುತ ಈ ಭ್ರಷ್ಟವಿರೋಧಿ ಶಾಸ್ತ್ರವು ನಿಜವಾಗಿಯೂ ಆವಶ್ಯಕ ಅಧ್ಯಯನದ ವಿಷಯವೆಂದು ವಿಶ್ವದ ಪ್ರಾಜ್ಞರ (ಕ್ಷೇತ್ರದಲ್ಲಿ)ವಲಯದಲ್ಲಿ ಮಾನ್ಯವಾಗಿದೆ. ಇದರ ಅಧ್ಯಯನದ ಹೊರತು ಮಾನವ ವಿಕಾಸ ಮತ್ತು ಮಾನವ ಹಿತಕ್ಕಾಗಿ ಕೈಗೊಳ್ಳುವ ಯಾವುದೇ ಯೋಜನೆಯು ಸಫಲತೆಯವರೆಗೆ ಸಾಗದು. ಅದೂ ಅಲ್ಲದೆ, ರಾಜ್ಯದ ವ್ಯವಸ್ಥೆ ಪ್ರಕ್ರಿಯೆಗೆ ಸವಾಲು ಒಡ್ಡುವಂತಹ ಅನೇಕ ಅನುಚಿತ ಕಾರ್ಯ ಮತ್ತು ಭ್ರಷ್ಟಾಚಾರದ ಕಾರ್ಯವನ್ನು ತಡೆಯುವಲ್ಲಿಯೂ ಈ ಹೊಸವಿಚಾರ ಮತ್ತು ಸಿದ್ಧಾಂತವು ಅಭೂತಪೂರ್ವ ಸಫಲ ಕಾರ್ಯವನ್ನು ಮಾಡಬಲ್ಲದು, ಎಂಬ ವಿಶ್ವಾಸ ಉಂಟಾಗಬೇಕು. ಇದರಿಂದ ರಾಜ ನೈತಿಕ ಪಕ್ಷಗಳ ಅನುಚಿತ ಕಾರ್ಯಗಳನ್ನು ಕೂಡ ಈ ಶಾಸ್ತ್ರದಿಂದ ಕೊನೆಗೊಳಿಸಬಹುದಾಗಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಭ್ರಷ್ಟ ವಿರೋಧಿ ಶಾಸ್ತ್ರದ ಕೆಲಸ, ಯಾವುದೇ ಅನುಚಿತ ಕಾರ್ಯವೆಸಗಿದ ಹಾಗೂ ಭ್ರಷ್ಟ ಕಾರ್ಯವನ್ನು ವಿರೋಧಿಸುವುದಾಗಿರದೆ, ಬದಲಾಗಿ, ಇದರ ಮೂಲ ಉದ್ದೇಶ – ಸಮಾಜದಲ್ಲಿ ಸದಾಚಾರಯುಕ್ತ ವ್ಯವಹಾರ ನೆಲೆಗೊಳಿಸುವ ಉತ್ತಮ ವಾತಾವರಣ ನಿರ್ಮಾಣ ಮಾಡಿ ಮಾರ್ಗದರ್ಶನ ಮಾಡುವುದಾಗಿದೆ. ವ್ಯಕ್ತಿಯ ದೈನಂದಿನ ಜೀವನದಲ್ಲಿ ಉಂಟಾಗುವ ಅಸಮಾನತೆ, ಅನುಚಿತ ಕಾರ್ಯಗಳು, ಅದರಿಂದ ಸಮುದಾಯದಲ್ಲಿ ಹರಡುವ ದುರ್ಗುಣಯುಕ್ತ ವ್ಯವಹಾರ, ಅವ್ಯವಹಾರಗಳಿಂದ ನಡೆಯುವ ಲಾಭಕೋರತನ, ರಾಜ್ಯ ಅಥವಾ ದೇಶದ ಶಾಸನದಿಂದಾಗುವ ಭ್ರಷ್ಟಾಚಾರ ಹಾಗೂ ರಾಜನೈತಿಕ ಕ್ಷೇತ್ರಗಳಲ್ಲಿ ವ್ಯಾಪಿಸಿರುವ ಅವಕಾಶವಾದಿತ್ವ, ಇಂತಹ ದುರ್ಗುಣಗಳನ್ನು ಹುಡುಕಿ ವಿಶ್ಲೇಷಣೆ ಮಾಡಿ, ಅದರಲ್ಲಿರುವ ಸತ್ಯ. ಅಸತ್ಯಗಳನ್ನು ಬೇರ್ಪಡಿಸುವ ಸಾಮರ್ಥ್ಯ ಭ್ರಷ್ಟವಿರೋಧಿ ಶಾಸ್ತ್ರದಲ್ಲಿದೆ.

ಇದಕ್ಕಾಗಿ ಇದರ ಮರ್ಮ, ಮೌಲ್ಯಗಳು ಮತ್ತು ಅವಶ್ಯಕತೆಯನ್ನು ಗಮನಿಸಿ, ಇದಕ್ಕೆ ಸಂಬಂಧಿತ ಅಧ್ಯಯನ ಕೇಂದ್ರ ಹಾಗೂ ವಿಶ್ವವಿದ್ಯಾಲಯಗಳಲ್ಲಿ, ಅಧ್ಯಯನ – ಅಧ್ಯಾಪನ ವಾತಾವರಣದ ನಿರ್ಮಾಣ ಆಗಬೇಕಾಗಿದೆ. ಈ ನವೀನ (ಹೊಸ) ವಿಚಾರ ಹಾಗೂ ಸಿದ್ಧಾಂತವನ್ನು ಸಮಯದ ಬೇಡಿಕೆಗನುಸಾರವಾಗಿ ಅಧ್ಯಯನ ಮತ್ತು ಅಧ್ಯಾಪನಕ್ಕಾಗಿ ಪ್ರಸ್ತುತಪಡಿಸಲಾಗಿದೆ.

***

# 2. ಭ್ರಷ್ಟವಿರೋಧಿ ಶಾಸ್ತ್ರದ ಪ್ರಸ್ತಾವನೆ
## (Preamble of Anticorruptology)

- ವಿಶ್ವ ಮಾನವ ಸಮುದಾಯದ ಪ್ರವೃತ್ತಿ ಹಾಗೂ ವ್ಯವಹಾರಗಳನ್ನು ಸ್ವಚ್ಛ, ಪವಿತ್ರ ಮತ್ತು ಮಾನವ ಮುಖಿಯನ್ನಾಗಿ ಮಾಡುವುದು.
- ಸಮಾಜದಲ್ಲಿ ಪ್ರಚಲಿತವಿರುವ ಅನಪೇಕ್ಷಿತ ಕ್ರಿಯಾ ಕಲಾಪಗಳನ್ನು ತಡೆಗಟ್ಟುವುದು. ಮತ್ತು ಮಾನವ ಮಾನವನ ನಡುವೆ, ಸಚ್ಚಾರಿತ್ರ್ಯದಿಂದ ಕೂಡಿದ ಪ್ರತಿಸ್ಪರ್ಧೆಯನ್ನು ನೆಲೆಸುವಂತೆ ಮಾಡುವುದು.
- ನ್ಯಾಯ ಸಮ್ಮತ ಸಿದ್ಧಾಂತದ ಆಧಾರದೊಂದಿಗೆ, ಕಾನೂನುಬದ್ಧ ರಾಜ್ಯ ಸ್ಥಾಪನೆ ಮಾಡುವುದರೊಂದಿಗೆ ಸುವ್ಯವಸ್ಥಿತ ಶಾಸನ ಪದ್ಧತಿಯನ್ನು ಚಾಲನೆಗೆ ತರುವುದು.
- ಸಮಸ್ತ ನಾಗರೀಕರ ಮೌಲಿಕ ಹಕ್ಕುಗಳನ್ನು ಸ್ಥಾಪಿಸಿ, ಸ್ವಚ್ಛ ಮತ್ತು ಆದರ್ಶ ಪ್ರಜಾ ತಂತ್ರಕ್ಕೆ ಚಾಲನೆ ನೀಡುವುದು.
- ಪ್ರಾಚೀನಕಾಲದಿಂದಲೂ ಪ್ರಚಲಿತವಾಗಿರುವ, ಆಗುತ್ತಿರುವ ಆಧ್ಯಾತ್ಮಿಕ ಚಿಂತನೆಗಳನ್ನು ರಕ್ಷಿಸುವುದು.
- ಪ್ರಾಕೃತಿಕ ಸ್ರೋತಸಾಧನಗಳು ಮತ್ತು ಪ್ರಾಚೀನ ಸಂಪತ್ತುಗಳ ರಕ್ಷಣೆ ಮಾಡುವುದು.
- ಮಾನವನ ಅಂತರಂಗದಲ್ಲಿರುವ ಪ್ರಾಕೃತಿಕ ಗುಣಗಳನ್ನು ವಿಕಸಿಸಿ, ಪ್ರಕೃತಿಯ ಆಶೀರ್ವಾದವನ್ನು ಪಡೆದುಕೊಳ್ಳುತ್ತಾ ಕಾರ್ಯರತರಾಗಿರುವುದು.
- ಸಮಾಜ ಮತ್ತು ರಾಜ್ಯಗಳಿಂದ ಪಡೆದುಕೊಂಡ ಅಧಿಕಾರ ಮತ್ತು ಜವಾಬ್ದಾರಿಯ ಅರಿವನ್ನು ಪಡೆದು ಕರ್ತವ್ಯನಿಷ್ಠರಾಗಿ, ಎಲ್ಲಾ ಹಂತಗಳಲ್ಲೂ

ಮತ್ತು ಸುತ್ತಲಿನ ಪರಿಸರದಲ್ಲಿ, ಯಾವುದೇ ಪ್ರಶ್ನೆಯನ್ನು ಬಗೆಹರಿಸುವ ಸ್ಥಿತಿಯನ್ನುಂಟುಮಾಡುವುದು.

- ರಾಜ್ಯ ವ್ಯವಸ್ಥೆ ( ರಾಷ್ಟ್ರೀಯ) ಮತ್ತು ರಾಜನೈತಿಕ ಪಕ್ಷಗಳ ನಡುವೆ ಸಂತುಲನ ಮತ್ತು ನಿಯಂತ್ರಣದ ವ್ಯವಸ್ಥೆಯನ್ನುಂಟುಮಾಡುವುದು.
- ನೀತಿ, ನೈತಿಕತೆ, ಸದಾಚಾರ ಹಾಗೂ ಮಾನವ ಮರ್ಯಾದೆಯ ಮೌಲ್ಯಗಳನ್ನು ಸಮಾಜದಲ್ಲಿ ಯಥಾವತ್ತಾಗಿ ರಕ್ಷಿಸುವ ಮೂಲಕ ಭ್ರಷ್ಟಾಚಾರಮುಕ್ತ ಸಮಾಜ ನಿರ್ಮಾಣ ಮಾಡುವುದು. ಹಾಗೂ
- ಸಮಯಾನುಸಾರವಾಗಿ ಮಾನವ ಸಮಾಜದಲ್ಲಿ ಆಗುತ್ತಿರುವ, ಆಗಲಿರುವ ಪರಿವರ್ತಿತ ಸ್ಥಿತಿಗತಿಗಳನ್ನು ಸದಾಚಾರಯುಕ್ತಗೊಳಿಸುವುದು ಮತ್ತು ಅದರ ನಿರಂತರತೆಯೂ ಅಷ್ಟೇ ಅಪೇಕ್ಷಿತವಾಗಿರುವುದರಿಂದ ಭ್ರಷ್ಟವಿರೋಧಿ ಶಾಸ್ತ್ರದ ಆವಶ್ಯಕತೆ ಇದೆ.

***

# 3. ಭ್ರಷ್ಟವಿರೋಧಿ ಶಾಸ್ತ್ರದ ಉದ್ದೇಶ್ಯ
## (Objectives of Anticurruptology)

ಈ ಭ್ರಷ್ಟವಿರೋಧಿ ಶಾಸ್ತ್ರದ ಮೂಲ ಉದ್ದೇಶ್ಯ, ಭ್ರಷ್ಟಾಚಾರದ ಶೂನ್ಯ ಸಹನಶೀಲತೆಯ ವ್ಯವಸ್ಥೆಯನ್ನುಂಟುಮಾಡಿ, ಭ್ರಷ್ಟಾಚಾರ ಮುಕ್ತ ಸಮಾಜದ ಸ್ಥಾಪನೆ ಮಾಡುವುದು. ಈ ಉದ್ದೇಶ್ಯ ಪ್ರಾಪ್ತಿಗಾಗಿ ಮತ್ತು ಸಮಾಜ ಹಾಗೂ ದೇಶದಲ್ಲಿ ನ್ಯಾಯಪೂರ್ಣ, ಪ್ರಜಾತಾಂತ್ರಿಕ ಹಾಗೂ ಆದರ್ಶ ಸಮಾಜ ಸ್ಥಾಪನೆ ಮಾಡುವುದಕ್ಕಾಗಿ ಇದುವರೆಗೆ ಈ ಕೆಳಗಿನಂತಿವೆ. ( ನಿಮ್ನ ಲಿಖಿತ) ಉದ್ದೇಶ್ಯಗಳ ಈ ಶಾಸ್ತ್ರವನ್ನು ಅಂಗೀಕರಿಸಲಾಗಿದೆ.

- ಸರ್ವ ಸಾಧಾರಣ (ಜನಸಾಮಾನ್ಯ) ನಾಗರಿಕರಿಗೆ, ಸುಖ ಶಾಂತಿ, ಸಮೃದ್ಧಿಗಾಗಿ ಆರ್ಥಿಕ ಅನುಶಾಸನ, ನೈತಿಕತೆ ಮತ್ತು ಸದಾಚಾರವನ್ನು ಸುರಕ್ಷಿತವಾಗಿರಿಸಿರುವುದು.
- ಎಲ್ಲಾ ನಾಗರಿಕರಲ್ಲಿ ಸಕಾರಾತ್ಮಕ ಚಿಂತನೆಯ ಜೊತೆಗೆ ವಿವೇಚನಾ ಪೂರ್ಣ ಸ್ಥಿತಿಯನ್ನು ನಿರ್ಮಿಸುವುದು.
- ಭ್ರಷ್ಟಾಚಾರ ವಿರುದ್ಧ ವಿಷಯದ ಅಧ್ಯಯನ ಹಾಗೂ ಅಧ್ಯಾಪನಕ್ಕಾಗಿ, ಈ ವಿಚಾರದಲ್ಲಿ ಪ್ರಾಜ್ಞರ ಕ್ಷೇತ್ರಗಳಲ್ಲಿ ಪ್ರಚಾರ ಪ್ರಸಾರ ಮಾಡುವ– ಮಾಡಿಸುವಂತೆ ಮಾಡುವುದು.
- ವಿಶ್ವದ ಎಲ್ಲಾ ದೇಶಗಳಲ್ಲಿ, ಭ್ರಷ್ಟವಿರೋಧಿ ಕ್ರಿಯಾ ಕಲಾಪಗಳ ಕುರಿತು ಒಮ್ಮತವನ್ನುಂಟು ಮಾಡಿ, ಮಾನವನ ಸರ್ವಾಂಗೀಣ ವಿಕಾಸದಲ್ಲಿ, ಇದರ ಮಹತ್ವಪೂರ್ಣ ವಿಷಯಗಳ ಪರಿಪೂರ್ಣ ತಿಳುವಳಿಕೆ (ಮಾಹಿತಿ) ನೀಡುವುದು, ಸರ್ವತ್ರ ಅರಿವನ್ನುಂಟುಮಾಡಿಸುವುದು.

- ಸದಾಚಾರ ಸದ್ವಿಚಾರ, ಸತ್ ವ್ಯವಹಾರಗಳಂತಹ ಉನ್ನತ ಮಾನವೀಯ ಗುಣಗಳ ವಿಕಾಸಮಾಡಿ, ಇವುಗಳನ್ನೂ ಮಾನವ ಸಮಾಜದಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ಅವುಗಳ ನಿರಂತರತೆಯನ್ನು ವ್ಯವಸ್ಥೆಗೊಳಿಸುವುದು. ಇದನ್ನು ಸಮಷ್ಟಿಯಲ್ಲೂ ವಿಸ್ತರಿಸುವುದು.
- ಪ್ರಾಚೀನ ಕಾಲದಿಂದಲೂ ಆಚರಿಸಿಕೊಂಡು ಬರುತ್ತಿರುವ ಆಧ್ಯಾತ್ಮಿಕ ಚಿಂತನೆಯ ವಿಷಯಗಳನ್ನು ಸುರಕ್ಷಿತಗೊಳಿಸುವ ಸೂಕ್ತ ವಾತಾವರಣ ನಿರ್ಮಾಣ ಮಾಡುವುದು.
- ಪ್ರತಿಯೊಂದು ದೇಶದಲ್ಲಿ ಭ್ರಷ್ಟಾಚಾರವನ್ನು ಅಂಕುಶದಲ್ಲಿಟ್ಟುಕೊಳ್ಳಲು, ಸಂಶೋಧಿತ ವ್ಯಾಖ್ಯಾನ ಹಾಗೂ ನ್ಯಾಯ ಸಮ್ಮತ ನಿರೂಪಣೆಯ ಮೂಲಕ ಜನಜಾಗೃತಿಯನ್ನು ಪಸರಿಸುವಂತೆ ಮಾಡುವುದು ಮತ್ತು ಮಾಡಿಸುವುದು.
- ನ್ಯಾಯ ಸಮ್ಮತ ರಾಷ್ಟ್ರ ಹಾಗೂ ಸತ್ಯ–ಶುದ್ಧ ಶಾಸನ ಪದ್ಧತಿಯನ್ನು ಸ್ಥಾಪಿಸುವುದಕ್ಕಾಗಿ, ವಿಶ್ವವ್ಯಾಪಿ ಪ್ರಚಾರ ಮತ್ತು ಪ್ರಸಾರ ಮಾಡುವುದು ಹಾಗೂ ಮಾಡಿಸುವುದು.
- ಸಾಮಾಜಿಕ, ರಾಜನೈತಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಅನ್ಯ ದೇಶಗಳ ಸಹಯೋಗ ಹಾಗೂ ಸಂಬಂಧಿತ ವಿಚಾರಗಳಲ್ಲಿ, ಕಾನೂನು ಬಾಹಿರ ಸಂಸ್ಥೆ ಮೂಲಕ ಆಗುತ್ತಿರುವ ಸಮಯೋಚಿತವಲ್ಲದ, ಕಾನೂನು ಬಾಹಿರ ಕ್ರಿಯಾ ಕಲಾಪಗಳನ್ನು ಕೊನೆಗೊಳಿಸುವುದು ಮತ್ತು ಎಲ್ಲೆಡೆ ಇವುಗಳನ್ನು ನಿರ್ಬಂಧಿಸುವಂತೆ ಮಾಡುವುದು.
- ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ರಾಜನೈತಿಕ ಪಕ್ಷಗಳು ಗೆಲ್ಲುವ ಉದ್ದೇಶಕ್ಕಾಗಿ, ವ್ಯಾಪಾರಿಕ ಸಮುದಾಯದವರಿಂದ ಚಂದಾ ಸಂಗ್ರಹಿಸುವ ಪ್ರಕ್ರಿಯೆಯನ್ನು ಕೊನೆಗೊಳಿಸುವುದು ಮಾತ್ರವಲ್ಲ ಸಂಪೂರ್ಣವಾಗಿ ಕೊನೆ ಗೊಳಿಸುವಂತಾಗಬೇಕು.
- ರಾಜನೈತಿಕ ಪಕ್ಷಗಳ ಅಧಿಕಾರ ಶಾಹಿ ಪ್ರವೃತ್ತಿ ಮತ್ತು ಮನಸೋ ಇಚ್ಛೆಯಿಂದ ಮಾಡುವ ಕ್ರಿಯಾಕಲಾಪಗಳು ಕೊನೆಗೊಳ್ಳಬೇಕು. ಸೈದ್ಧಾಂತಿಕ ರಾಜನೈತಿಕ ಪಕ್ಷಗಳ ಕ್ರಿಯಾಶೀಲತೆಯ ವ್ಯವಸ್ಥೆಯ ನಿರ್ಮಾಣವಾಗಬೇಕು.
- ದೇಶದಲ್ಲಿ ಕಾರ್ಯರತ ರಾಜನೈತಿಕ ಪಕ್ಷದ ಸಿದ್ಧಾಂತ, ಘೋಷಣಾಪತ್ರ ಮತ್ತು ಜನರು ಹಾಗೂ ರಾಷ್ಟ್ರದ ಕುರಿತಾದ ಪ್ರತಿಬದ್ಧತೆಗನುಗುಣವಾಗಿ ಪಕ್ಷದ ಮುಖಂಡ ಹಾಗೂ ಕಾರ್ಯಕರ್ತರ ಕಾರ್ಯಕಲಾಪಗಳ ಪಾರದರ್ಶಕ ವಾತಾವರಣ ಸಿದ್ಧವಾಗಬೇಕು.
- ನಾಗರೀಕನ ಚೈತನ್ಯ ಮಟ್ಟವನ್ನಾಧರಿಸಿ ಚುನಾವಣಾ ಪ್ರಣಾಲಿಯನ್ನು ನಿಶ್ಚಿತಗೊಳಿಸಬೇಕು. ಇಂತಹ ವ್ಯವಸ್ಥೆಯನ್ನು ಮಾಡಿಸಬೇಕು.

- ಆರ್ಥಿಕ ಹಾಗೂ ಸಾಂಸ್ಕೃತಿಕ ಉಪನಿವೇಶವಾದವನ್ನೂ (ಅನ್ಯರಿಂದ ಹೇರಲ್ಪಡುವ ) ಕೊನೆಗೊಳಿಸುವ ಪ್ರಯತ್ನವನ್ನು ಮಾಡುವುದು.
- ದೇಶದ ರಾಜನೈತಿಕ ಹಾಗೂ ಶಾಸಕಾಂಗದ ತಳಮಟ್ಟದಲ್ಲಿ ಕೆಲಸ ಮಾಡುವ, ಸಾರ್ವಜನಿಕವಾಗಿ ಗುರುತಿಸಿಕೊಂಡ, ವ್ಯಕ್ತಿ ಅಥವಾ ಸಮೂಹದ ಮೂಲಕ ಅನುಚಿತ ಕೆಲಸವನ್ನು ಮಾಡುವ ಅಥವಾ ಮಾಡಿಸುವವರ ಮೇಲೆ ಕ್ರಮ ಕೈಗೊಳ್ಳುವುದು, ಕ್ರಮಕೈಗೊಳ್ಳುವಂತೆ ಮಾಡುವುದು.
- ಒಂದು ದೇಶ ಇನ್ನೊಂದು ದೇಶಕ್ಕೆ ಕೊಡುವ ಯಾವುದೇ ರೀತಿಯ ಅನುದಾನ– ಸಹಯೋಗ ಸಾಲ ಸಂಬಂಧಿತವಾದುದನ್ನು ದೇಶದ ಸರಕಾರಿ ಮಟ್ಟದಿಂದ ಮಾತ್ರ ಕೊಡುವ ಕೊಡಿಸುವ ಕಾರ್ಯ ಮಾಡುವುದು, ಮಾಡಿಸುವುದು.
- ವ್ಯಕ್ತಿ, ಸಮುದಾಯ, ರಾಜನೈತಿಕ ಕರ್ಮಚಾರಿಗಳು ಮತ್ತು ಸಾರ್ವಜನಿಕರೆಂದು ಗುರುತಿಸಿಕೊಂಡವರು, ಎಲ್ಲಾ ರೀತಿಯ ವ್ಯಕ್ತಿ ಅಥವಾ ಸಮುದಾಯಗಳನ್ನು ಭ್ರಷ್ಟಾಚಾರದ ವಲಯದಲ್ಲಿ ತಂದು, ಕಾನೂನು ಕ್ರಮ ಕೈಗೊಳ್ಳಲು ಅವಶ್ಯಕವಾದ ಪರಿಶೋಧನೆ ಹಾಗೂ ತಿದ್ದುಪಡಿ ಮಾಡಬೇಕು–ಮಾಡಿಸಬೇಕು.
- ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಯಾವುದೇ ರೀತಿಯ ಪ್ರಾಕೃತಿಕವಾದ ಸಂಪತ್ತಿನ ಸಾಧನಗಳನ್ನು ಅಲ್ಪಕಾಲಿಕವಾಗಿರಲಿ, ದೀರ್ಘಕಾಲಿಕವಾಗಿರಲಿ, ಇನ್ನಿತರ ದೇಶಗಳಿಗೆ ಪ್ರಯೋಗಾರ್ಥಕ್ಕಾಗಿ ಕೊಡುವ ಸಂಧಿ – ಮಾತುಕತೆ, ಒಪ್ಪಂದಗಳಾವುದನ್ನು ವ್ಯವಸ್ಥೆಯಲ್ಲಿ ಸೇರಿಸಬಾರದು.
- ಕಾನೂನುಬಾಹಿರ ವ್ಯವಸಾಯ – ವ್ಯವಹಾರಗಳನ್ನು ತಡೆಯಬೇಕು ಮತ್ತು ಕಪ್ಪು ಹಣ ನಿಯಂತ್ರಿಸುವ ವ್ಯವಸ್ಥೆ ಮಾಡಬೇಕು.
- ಸಂಚಾರ ಮಾಧ್ಯಮದಲ್ಲಿ ಸ್ವಚ್ಛಂದ ಪ್ರವೃತ್ತಿಯ ಮೇಲೆ ನಿಯಂತ್ರಣ ತರಬೇಕು.
- ರಾಷ್ಟ್ರಕ್ಕೆ ಹಾನಿಯಾಗುವಂತಹ, ಆಘಾತವನ್ನುಂಟುಮಾಡುವಂತಹ ಯಾವುದೇ ರೀತಿಯ ಸಂಧಿ, ಮಾತುಕತೆ, ಒಪ್ಪಂದ ಪತ್ರಗಳನ್ನು ಮಾಡುವ ವ್ಯವಸ್ಥೆಯಾದರೂ ಅದನ್ನು ಕೊನೆಗೊಳಿಸಬೇಕು–ಕೊನೆಗೊಳಿಸುವಂತೆ ಮಾಡಬೇಕು.
- ಭ್ರಷ್ಟವಿರೋಧಿ ಶಾಸ್ತ್ರ (ಸಿದ್ಧಾಂತ)ಕ್ಕೆ ಹತ್ತಿರವಾದ ಸಂಬಂಧಿತ ಎಲ್ಲಾ ಶಾಸ್ತ್ರಗಳ (ಸಿದ್ಧಾಂತಗಳ) ವಿಷಯವನ್ನೊಳಗೊಂಡಂತೆ, ವಿಷಯಾಧಾರಿತವಾಗಿ ಸ್ವೀಕರಿಸುವುದರೊಂದಿಗೆ ಅವುಗಳೊಂದಿಗೆ ಈ ಶಾಸ್ತ್ರವನ್ನು (ಸಿದ್ಧಾಂತವನ್ನು) ಇದರ ನೀತಿಯನ್ನು ಸೇರಿಸಿಕೊಳ್ಳುವಂತೆ ಮಾಡುವುದು

ಹಾಗೂ

- ಭ್ರಷ್ಟವಿರೋಧಿ ಶಾಸ್ತ್ರವನ್ನು, ವಿಶ್ವದಲ್ಲಿ ಪ್ರಚಲಿತವಿರುವ, ಪ್ರಾಜ್ಞರ ಸಂಸ್ಥೆಗಳು ಅಧ್ಯಯನ ಕೇಂದ್ರಗಳು ಅಥವಾ ವಿಶ್ವವಿದ್ಯಾಲಯಗಳಿಗೆ ತಲುಪಿಸಿ, ಅಧ್ಯಯನ ಹಾಗೂ ಅನುಸಂಧಾನದ ಮೂಲಕ, ಮಾಧ್ಯಮಗಳ ಮೂಲಕ "ಭ್ರಷ್ಟಾಚಾರ ವಿರುದ್ಧ" ದ ವಿಚಾರವನ್ನು (ಶಾಸ್ತ್ರವನ್ನು) ವಿಜ್ಞಾನ ರೂಪದಲ್ಲಿ ಪ್ರಮಾಣಿಕರಿಸುವ ಕೆಲಸ ಮಾಡಿ, ಮಾಡಿಸುವುದು.

***

# 4. ಪರಿಭಾಷೆ
# (Defination of Anticorruptology)

- ಭ್ರಷ್ಟವಿರೋಧಿ ಶಾಸ್ತ್ರದ ತಾತ್ಪರ್ಯವೆಂದರೆ, ಭ್ರಷ್ಟಾಚಾರ ವಿರುದ್ಧದ ಅಧ್ಯಯನದೊಂದಿಗಿದೆ. ಇದು ಭ್ರಷ್ಟಾಚಾರ ವಿರುದ್ಧದ ವಿಜ್ಞಾನವಾಗಿದೆ. ವಿಜ್ಞಾನವು ಜ್ಞಾನದ ಅತ್ಯುನ್ನತ ತಿಳುವಳಿಕೆಯಾಗಿದೆ. ಅರ್ಥಾತ್ ವಿಷಯದ ನಿರಂತರ ಅಧ್ಯಯನದಿಂದ ಜ್ಞಾನ ಪ್ರಾಪ್ತಿಯಾಗುತ್ತದೆ. ಮತ್ತು ಜ್ಞಾನದ ಸೂಕ್ಷ್ಮರೂಪದಿಂದ ಅಧ್ಯಯನ ಅನುಸಂಧಾನ ಮತ್ತು ವಿಶ್ಲೇಷಣೆ ಮಾಡಿ, ಪ್ರಮಾಣ ಸಹಿತವಾಗಿ ಪ್ರಸ್ತುತಪಡಿಸುವುದೇ ವಿಜ್ಞಾನವಾಗಿದೆ. ಈ ಭ್ರಷ್ಟಾಚಾರ ವಿರೋಧಿ ವಿಜ್ಞಾನಕ್ಕೆ ಪ್ರಮಾಣಿಕರಿಸಲ್ಪಟ್ಟ ಇನ್ನೊಂದು ಹೆಸರು ಕೊಡುವವರೆಗೆ ಇದನ್ನು ಭ್ರಷ್ಟಾಚಾರ ವಿರುದ್ಧದ ವಿಜ್ಞಾನವೆಂದು ಹೇಳುವುದೇ ಭ್ರಷ್ಟಾಚಾರ ವಿರೋಧಿ ಶಾಸ್ತ್ರವಾಗಿದೆ. ಭ್ರಷ್ಟ ವಿರೋಧಿ ಶಾಸ್ತ್ರವನ್ನು ಪರಿಚಯಿಸಬೇಕಾಗಿದೆ. ಈ ರೀತಿ ಸ್ಥಾಪಿತವಾದ ಭ್ರಷ್ಟವಿರೋಧಿ ಶಾಸ್ತ್ರವನ್ನು ಭ್ರಷ್ಟಾಚಾರ ವಿರೋಧದ ವಿಜ್ಞಾನವೆಂದು ವಿಶ್ಲೇಷಿಸಬಹುದಾಗಿದೆ. ಭ್ರಷ್ಟಾಚಾರ ವಿರುದ್ಧದ ಅಭಿಯಾನವನ್ನು ವಿಭಿನ್ನ ಸಮಯದಲ್ಲಿ ಪ್ರಯೋಗಗಳಲ್ಲಿ ಬರುವ ವಿಷಯ, ನೀತಿ ಹಾಗೂ ಸಿದ್ಧಾಂತ ಇತ್ಯಾದಿಗಳನ್ನೇ ಭ್ರಷ್ಟವಿರೋಧಿ ಶಾಸ್ತ್ರದ ವಿಶ್ಲೇಷಣಾ ಭಾಗದಲ್ಲಿ ವಿಶ್ಲೇಷಿತವಾಗಬಹುದು. ಭ್ರಷ್ಟಾಚಾರ ಅನುಕರಣೀಯ ಪ್ರಕೃತಿಯದ್ದಾಗಿದೆ. ಒಬ್ಬರಿಂದ ಮಾಡಲ್ಪಟ್ಟ ಭ್ರಷ್ಟಾಚಾರ ಜನ್ಯ ಕಾರ್ಯವನ್ನು ನೋಡಿ, ಇನ್ನೊಬ್ಬರು ಕಲಿಯುತ್ತಾರೆ. ಇಂತಹ ಅನುಕರಣೀಯ ಸ್ವಭಾವವನ್ನು ನಿಸ್ತೇಜಗೊಳಿಸಬಹುದಾಗಿದೆ.
- ಭ್ರಷ್ಟಾಚಾರವೆಂಬುದು ಸಾಮಾಜಿಕ ರೋಗವಾಗಿದೆ. ಇತ್ತೀಚಿನ ದಿನಗಳಲ್ಲಂತೂ ಇದು ಮಹಾ ರೋಗವಾಗಿ ರೂಪಿತವಾಗಿದೆ. ಇದೊಂದು

ರೋಗವಾಗಿರುವುದರಿಂದ ಇದಕ್ಕೆ ಚಿಕಿತ್ಸೆಯನ್ನು ಮಾಡಬಹುದಾಗಿದೆ. ರೋಗದ ನಿವಾರಣೆಗಾಗಿ ಔಷಧೀಯ ಅವಶ್ಯಕತೆ ಆಗಬೇಕಾಗಿದೆ. ಭ್ರಷ್ಟ ವಿರೋಧಿ ವಿಜ್ಞಾನವೇ ಭ್ರಷ್ಟಾಚಾರ ನಿವಾರಣೆ ಮಾಡುವುದರ ಮೂಲ ತತ್ವವಾಗಿದೆ.

- ಭ್ರಷ್ಟಾಚಾರವೆಂಬುದು ಸಾಮಾಜಿಕ ಸಮಸ್ಯೆಯಾಗಿದೆ. ಸಾಮಾಜಿಕ ಸಮಸ್ಯೆಗಳ ಅಧ್ಯಯನ ರೀತಿಯಲ್ಲೇ ಈ ವಿಷಯದ ಅಧ್ಯಯನವೂ ಆಗಬಹುದಾಗಿದೆ. ಇದೂ ಸಾಮಾಜಿಕ ವಿಜ್ಞಾನವೇ ಆಗಿರುವುದರಿಂದ ಅನ್ಯ ಸಾಮಾಜಿಕ ವಿಜ್ಞಾನದಂತೆಯೇ ಭ್ರಷ್ಟ ವಿರೋಧಿ ಶಾಸ್ತ್ರವೂ ಕೂಡ ಸಾಮಾಜಿಕ ವಿಜ್ಞಾನದಂತೆಯೇ ಸ್ಥಾಪಿತವಾಗಬೇಕಿದೆ.

- ಆಯುರ್ವೇದ ವಿಜ್ಞಾನದಲ್ಲಿ (ಹೇಳುವಂತೆ) ಕೀಟಾಣುಗಳೇ ರೋಗವನ್ನು ಹರಡುತ್ತವೆ. ಅದೇ ರೀತಿ ಭ್ರಷ್ಟಾಚಾರವೂ ಕೂಡ ವಿಶಿಷ್ಟ ಕೀಟಾಣುಯುಕ್ತ ಮನೋಸ್ಥಿತಿಯಿಂದಾಗಿ ವ್ಯಾಪಿಸುತ್ತದೆ. ಯಾವ ರೀತಿ ಆಯುರ್ವೇದವು ಸಾಂಕ್ರಾಮಿಕ ರೋಗಗಳಿಗೆ ಚಿಕಿತ್ಸೆ ನೀಡುವಲ್ಲಿ ಸಕ್ಷಮವಾಗಿದೆ. ಅದೇ ರೀತಿ ಇದಕ್ಕೂ ನಿಧಾನವಾಗಿಯಾದರೂ ನಿವಾರಣೆ ಸಂಭವನೀಯವಾಗಿದೆ.

- ಭೌತಿಕ ವಿಜ್ಞಾನ ಯಾವ ರೀತಿ ನೀರಿನ ಪರಿವರ್ತಿತ ರೂಪದ ವ್ಯಾಖ್ಯಾನ ಮಾಡುತ್ತದೋ ಅದೇ ರೀತಿ ಭ್ರಷ್ಟಾಚಾರವೂ ಕೂಡ, ಅಸ್ಥಿರ (ಚಂಚಲ) ಭಾಷ್ಪವಾಗಿ ನಂತರ ಸ್ಥಿರ (ಗಟ್ಟಿ) ಸ್ಥಿತಿಗೆ ಪರಿವರ್ತಿತವಾಗುತ್ತದೆ. ಈ ರೀತಿಯಲ್ಲಿ ಭ್ರಷ್ಟಾಚಾರ ಮತ್ತು ನೀರಿನ ಪ್ರಕೃತಿ ಒಂದೇ ಆಗಿದೆ. ನೀರಿನಂತೆಯೇ ಭ್ರಷ್ಟಾಚಾರವು ಕೂಡ ಮೇಲಿನಿಂದ ಕೆಳಕ್ಕೆ ಬೀಳುತ್ತದೆ. ಆದರೆ ಒಂದು ನಿಶ್ಚಿತ ಮಾನದಂಡವನ್ನು ಮಾಡಿಕೊಂಡು ತನ್ನ ಹಂತವನ್ನು ರಕ್ಷಿಸಿಕೊಳ್ಳುತ್ತದೆ.

- ಭ್ರಷ್ಟಾಚಾರ ಭೌತಿಕ ರೂಪದಲ್ಲಿ ಸ್ಪಷ್ಟವಾಗಿ ಕಾಣಸಿಗಲಾರದು. ವ್ಯವಹಾರದಲ್ಲಿ ನೋಡುವ, ಅನುಭವಕ್ಕೆ ಬರುವ ಕಾರಣದಿಂದಾಗಿ ಇದನ್ನು ನಿಯಂತ್ರಿತ ಸ್ಥಿತಿಯಲ್ಲಿ ಯಾವತ್ತೂ ಇಡಬಹುದಾಗಿದೆ.

- ಭ್ರಷ್ಟಾಚಾರ ರಾಜಕೀಯ ಅಸ್ಥಿರತೆಗೆ ಜನ್ಮ ನೀಡುತ್ತದೆ. ಇಂತಹ ಸ್ಥಿತಿ ವಿಕಾಸಕ್ಕೆ ತಡೆಯುನ್ನುಂಟು ಮಾಡುತ್ತದೆ. ವಿಕಾಸದ ತಡೆ ಅಭಾವವನ್ನು ಹುಟ್ಟು ಹಾಕುತ್ತದೆ. ಅಭಾವ ದ್ವಂದ್ವಕ್ಕೆ ಜನ್ಮ ನೀಡುತ್ತದೆ. ಮತ್ತು ದ್ವಂದ್ವ – ರಾಜನೈತಿಕ ಅಸ್ಥಿರತೆಯನ್ನುಂಟು ಮಾಡುತ್ತದೆ. ಈ ಚಕ್ರಿಯ (ಸುಳಿ) ಪ್ರಣಾಲಿ (ಕ್ರಮ )ಯ ನಿಯಂತ್ರಣವನ್ನು ಭ್ರಷ್ಟ ವಿರೋಧಿ ಶಾಸ್ತ್ರ ಮಾಡಬಲ್ಲುದಾಗಿದೆ.

- ಅಭಿವೃದ್ಧಿಶೀಲ ರಾಷ್ಟ್ರಗಳ ಖಾಸಗಿ ಸಂಸ್ಥೆಗಳನ್ನು ಕಾರ್ಯರತ ಮಾಡಲಾಗುವುದಿಲ್ಲ. ಏಕೆಂದರೆ ಬಹು ಸಂಖ್ಯೆಯಲ್ಲಿರುವ ಬಡವರು ಹಾಗೂ ಅಶಿಕ್ಷಿತವಾದ ನಾಗರೀಕರಿರುವ ದೇಶಗಳಲ್ಲಿ ಚತುರ ಮತಿಯುಳ್ಳ ಜನರಿಂದ ಸಮಾನಾಂತರವಾಗಿ ಸರಕಾರ ನಡೆಸುವ ಸಂಭವನೀಯತೆ ಪ್ರಬಲವಾಗಿರುತ್ತದೆ. ಈ ಕಾರಣಗಳಿಂದ ದೇಶ ಸಂಚಾಲನೆ ಮಾಡುವ ರಾಜ್ಯಾಡಳಿತ ವ್ಯವಸ್ಥೆ ದುರ್ಬಲವಾಗತೊಡಗುತ್ತದೆ.
- ಭ್ರಷ್ಟಾಚಾರ ಮಾಡುವವರು ಮತ್ತು ಮಾಡಿಸುವವರು ಇಬ್ಬರೂ ಅಪರಾಧಿಗಳಾಗುತ್ತಾರೆ. ಈ ಇಬ್ಬರೂ ಶಿಕ್ಷೆಗೆ ಭಾಗಿಗಳಾಗುತ್ತಾರೆ. ಭ್ರಷ್ಟ ಆಚರಣೆ ಮಾಡುವವರು ಸಮಾಜದಲ್ಲಿ ಜುಗುಪ್ಸಿತರು, ತಿರಸ್ಕೃತರು ಆಗುತ್ತಾರೆ.
- ಯಾವುದೇ ವ್ಯಕ್ತಿಯ ನಿಯತ್ತಿನ ವಿಷಯದಲ್ಲಿ ಖಚಿತವಾದ ನಿರ್ಣಯ ಕೈಗೊಳ್ಳುವಲ್ಲಿ ನ್ಯಾಯಾಲಯಕ್ಕೆ ಕಷ್ಟವಾಗಬಹುದು. ಆದರೆ ನಿಯತ್ತಿನ ವಿಷಯದಲ್ಲಿ ಭ್ರಷ್ಟವಿರೋಧಿ ಶಾಸ್ತ್ರದ ಸಹಾಯದಿಂದ ಭ್ರಷ್ಟ ವ್ಯಕ್ತಿಯ ಅಸಲಿ ರೂಪದ ವ್ಯಾಖ್ಯಾನವನ್ನು ಮಾಡಿ, ನ್ಯಾಯ ಸಮ್ಮತ ನಿರೂಪಣೆ ಮಾಡುವಲ್ಲಿ ನ್ಯಾಯಾಲಯ ಸಮರ್ಥವಾಗಬಹುದು.
- ಆಡಳಿತಾತ್ಮಕ ಯಂತ್ರದ ಸಂಪೂರ್ಣ ಚಾಲನೆಗಾಗಿ, ನೀತಿ, ನಿಯಮ ಮತ್ತು ಕಾನೂನುಗಳನ್ನು ಮಾಡುವುದರಿಂದಲೇ ಏನೂ ಮಾಡಲಾಗದು. ಬದಲಾಗಿ ಸಮಯಾನುಸಾರವಾಗಿ ಅದರ ಪರೀಕ್ಷಣ – ನಿರೀಕ್ಷಣೆ ಮತ್ತು ಮೌಲ್ಯಾಂಕನವನ್ನೂ ಮಾಡಬೇಕಾಗುತ್ತದೆ. ಅಪರಾಧಿಗೆ ದಂಡ ಹಾಗೂ ಕರ್ಮ ನಿಷ್ಠನಿಗೆ ಉಚಿತವಾದ ಪುರಸ್ಕಾರವನ್ನು ನೀಡುವ ವ್ಯವಸ್ಥೆಯನ್ನೂ ಮಾಡಬೇಕಾಗುತ್ತದೆ.
- ರಾಜಕೀಯ ಪಕ್ಷಗಳ ಮೂಲಕ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಚಂದಾ ಅಥವಾ ಅನುದಾನದ ರೂಪದಲ್ಲಿ ಅರ್ಥ (ಹಣ) ಸಂಗ್ರಹ ಮಾಡುವುದು ಭ್ರಷ್ಟಾಚಾರವಾಗುತ್ತದೆ. ಇಂತಹ ಕಾರ್ಯವನ್ನು ತಡೆಯಬೇಕಾಗಬಹುದು.
- ಭ್ರಷ್ಟಾಚಾರ ಎಂಬುದೊಂದು ಚುಂಬಕವಿದ್ದಂತೆ. ಅದು ಯಾರನ್ನೂ, ಎಲ್ಲೆಲ್ಲಿಂದಲೂ ತನ್ನೆಡೆಗೆ ಸೆಳೆದುಕೊಳ್ಳಬಲ್ಲುದು. ಕಾರಣ ಇದು ಹಣದೊಂದಿಗೆ ಸಂಬಂಧವನ್ನೂ ಹೊಂದಿದೆ. ಆದ್ದರಿಂದ ಇದರ ಆಕರ್ಷಣೆ ಅಧಿಕ ಶಕ್ತಿಶಾಲಿಯಾಗಿದೆ.
- ಭ್ರಷ್ಟಾಚಾರವು ವರ್ತಮಾನ ಪ್ರಜಾತಾಂತ್ರಿಕ ಯುಗದ ಶತ್ರುವಾಗಿದೆ. ಪ್ರಜಾತಂತ್ರಕ್ಕೆ ಇದು ಅಪಾಯಕಾರಿ ಎಂಬುದು ಖಚಿತವಾಗಿದೆ.

- ಪ್ರಜಾತಂತ್ರದ ಈ ಶತ್ರುವನ್ನು ಸೋಲಿಸುವ ವಿಧಿಯ (ವಿಧಾನ) ನಿರ್ಮಾಣವು ಕೂಡ ಭ್ರಷ್ಟವಿರೋಧಿ ವಿಜ್ಞಾನ ಮಾಡಬಲ್ಲುದು.
- ಭ್ರಷ್ಟಾಚಾರಿ ದೇಶದ್ರೋಹಿಯಾಗಿರುತ್ತಾನೆ. ಅವನು ಅಪರಾಧಿಯೂ ಹೌದು ಮತ್ತು ಮಾನವ ಸಮಾಜದ ವಿಕಾಸಕ್ಕೆ ತೊಡಕಾಗಿದ್ದಾನೆ. ಇಂತಹವರನ್ನು ಶಿಕ್ಷಿಸಿ ಮಾನವ ಸಮಾಜದಿಂದ ಬಹಿಷ್ಕೃತಗೊಳಿಸಬೇಕು.
- ಮುಖ್ಯವಾಗಿ ಸರಕಾರ ಬಹಿರಂಗವಾಗಿ ಭ್ರಷ್ಟವಿರೋಧಿ ಕಾರ್ಯಕ್ಕಾಗಿ ಕಾರ್ಯಕ್ರಮಗಳನ್ನೂ ನಿರ್ವಹಿಸುವುದಿಲ್ಲ. ಹೀಗೆ ಮಾಡಿದಲ್ಲಿ ಸರಕಾರ ಸ್ವತಃ ದುರ್ಬಲವಾಗುತ್ತದೆ.
- ಭ್ರಷ್ಟಾಚಾರದಿಂದ ಸಂಗ್ರಹಿತ ಮೊತ್ತದಿಂದಲೇ ರಾಜಕೀಯ ಪಕ್ಷಗಳ ನಿರ್ವಹಣೆಯಾಗುತ್ತದೆ. ಇದೇ ಕಾರಣದಿಂದಾಗಿ ರಾಜಕೀಯ ಪಕ್ಷಗಳ ನೀತಿ ಮತ್ತು ಸಿದ್ಧಾಂತಗಳಲ್ಲಿ ಚ್ಯುತಿಯುಂಟಾಗುತ್ತದೆ. ಇಂತಹ ರಾಜಕೀಯ ಪಕ್ಷಗಳ ಆದರ್ಶ ಮತ್ತು ವಿಶ್ವಸನೀಯತೆ ಬಗ್ಗೆ ಸಂಶಯಪಡುವಂತಾಗುತ್ತದೆ.
- ಭ್ರಷ್ಟಾಚಾರವು ಆರಂಭವಾಗುವುದು ವ್ಯಾಪಾರಿ ವರ್ಗದಿಂದ. ವ್ಯಾಪಾರಿಗಳ ವರ್ಗ ಅಂದರೆ ಲಾಭಗಳಿಸುವ ವರ್ಗ. ಕಠೋರ ಹಾಗೂ ಸಂತುಲಿತ ಕಾನೂನಿನ ನಿಯಮವೇ ಈ ವರ್ಗದವರನ್ನು ನಿಯಂತ್ರಿಸಬೇಕಿದೆ. ಎಂದಿನವರೆಗೆ ರಾಜ್ಯ ಸಂಚಾಲನೆ ಮಾಡುವವರು, ಶಾಸನಬದ್ಧ ಆಡಳಿತ ಯಂತ್ರದಲ್ಲಡಗಿರುವ ಎಲ್ಲಾ ವಿಕೃತಿಗಳನ್ನು ಗುರುತಿಸಿ, ಸುಧಾರಣೆ ತರುವುದಿಲ್ಲವೋ ಅಂದಿನವರೆಗೆ ಶಾಸಕೀಯ ಆಡಳಿತ ಯಂತ್ರವು ಅವಶ್ಯಕತೆಗನುಗುಣವಾಗಿ ಸಮರ್ಥ ಮತ್ತು ಬಲಿಷ್ಟವಾಗಲಾರದು.
- ರಾಜ್ಯದ ಸಮುದಾಯದ ಜವಾಬ್ದಾರಿಯನ್ನರಿತ ಶಾಸಕನು ತನ್ನ ಸ್ಥಾನದ ಪ್ರಾಮಾಣಿಕ ಸದುಪಯೋಗ ಮಾಡಿಕೊಂಡು ಹಾಗೂ ಕಾನೂನು ನೀಡಿರುವ ಅಧಿಕಾರವನ್ನು ಸದ್ಬಳಕೆ ಮಾಡಿಕೊಂಡಾಗ ಶಾಸಕೀಯ ಆಡಳಿತ ಯಂತ್ರದೊಳಗೆ ವ್ಯಾಪಿಸಿರುವ ಮಲಿನತೆಯನ್ನು ಹಂತ ಹಂತವಾಗಿ ಮುಗಿಸಬಹುದು.
- ಭ್ರಷ್ಟಾಚಾರ ರಾಜನೈತಿಕ ಸಂಕಟಕ್ಕೆ ಜನ್ಮ ನೀಡುತ್ತದೆ. ಆರ್ಥಿಕ ತಡೆಯನ್ನುಂಟು ಮಾಡುತ್ತದೆ ಮತ್ತು ಸಮಾಜದಲ್ಲಿ ಅವಿಶ್ವಾಸದ ಸಂಕಟವನ್ನು ಹುಟ್ಟು ಹಾಕುತ್ತದೆ.
- ಪ್ರಜಾತಂತ್ರದಲ್ಲಿ ಸರಕಾರಗಳು ಬದಲಾಗುತ್ತಿರುತ್ತವೆ. ದೇಶದಲ್ಲಿ ಪ್ರಶಾಸನಿಕ ಆಡಳಿತ ಯಂತ್ರ ಸುಸ್ಥಿರವಾಗಿರುವ ದೃಷ್ಟಿಯಿಂದ ಸ್ಥಾಯಿ ಸರಕಾರ ಇರುವುದೂ ಇದೆ.

ಸ್ಥಾಯಿ ರೂಪದ ಇಂತಹ ಪ್ರಶಾಸನಿಕ ಸರಕಾರದ ಕುಶಲ ಕಾರ್ಯದಕ್ಷತೆಯ ಆಧಾರದಲ್ಲಿ ಕೇವಲ ಸ್ವಚ್ಛ ಆಡಳಿತ ಸಂಚಾಲಿತವಾಗುತ್ತದೆ. ಆದ್ದರಿಂದ ಸ್ಥಾಯಿ ಸರಕಾರಕ್ಕೆ ಸಂಬಂಧಿತ ನೀತಿ ಸುಭದ್ರ ಮತ್ತು ಸರ್ವಪ್ರಿಯವಾಗಿರಬೇಕು.

- ಪ್ರಬುದ್ಧ ಶಾಸನ ನಡೆಸಲು ಚತುರ ಆಡಳಿತದ ಅವಶ್ಯಕತೆ ಇರಬೇಕು ಮತ್ತು ಪರಿಣಿತ ಆಡಳಿತಕ್ಕಾಗಿ ಪ್ರಬುದ್ಧ ಶಾಸಕನ ಅವಶ್ಯಕತೆ ಇರಬೇಕು. ಇವೆರಡು ತಮ್ಮೊಳಗೆ ಭಿನ್ನವಾಗಿದ್ದರೂ ಒಂದು ಇನ್ನೊಂದಕ್ಕೆ ಪೂರಕವಾಗಿದೆ. ಒಂದರ ಕೊರತೆಯಲ್ಲಿ ಇನ್ನೊಂದು ಪೂರ್ಣವಾಗದು.
- ಯಾವುದೇ ರಾಜ್ಯ ವ್ಯವಸ್ಥೆಯ ಸಂಚಾಲಕತ್ವವನ್ನು ನಿರ್ವಹಿಸಲು ಆಡಳಿತ ಕ್ಷೇತ್ರದಲ್ಲಿ ಕೆಲಸಮಾಡುವ ನಾಗರೀಕನಿಗೆ ರಾಜ್ಯ ವಿಶೇಷ ಸೌಲಭ್ಯವನ್ನಿತ್ತು ಹೊಣೆಗಾರಿಕೆಗನುಸಾರವಾಗಿ ವಿಶೇಷ ಅಧಿಕಾರವನ್ನು ನೀಡುತ್ತದೆ. ಇಂತಹ ಸಮೂಹವನ್ನು 'ನಾಗರಿಕ ಸೇವಕ' ಅಥವಾ 'ರಾಷ್ಟ್ರಸೇವಕ' ಸಮೂಹವೆಂದು ಕೂಡ ಹೇಳುತ್ತಾರೆ. ರಾಜ್ಯದಿಂದ ವಿಶೇಷ ಸೌಲಭ್ಯಗಳನ್ನು ಪಡೆದ ಈ ಕರ್ಮಚಾರಿಗಳಿಂದ ರಾಜ್ಯವು ಸಾಕಷ್ಟು ಕೆಲಸವನ್ನು ಪಡೆದು ಕೊಳ್ಳುವಂತಾಗುತ್ತದೆ. ಆದ್ದರಿಂದ ಈ ಸಮೂಹದಲ್ಲಿ ಆಜ್ಞಾಪಾಲಕರು, ಪ್ರಾಮಾಣಿಕರು, ನೀತಿವಂತರು ಜವಾಬ್ದಾರಿಯುನ್ನರಿತ ಮತ್ತು ಉತ್ತರದಾಯಿತ್ವಪೂರ್ಣ ಸಮರ್ಥ ವ್ಯಕ್ತಿಗಳಿರಬೇಕಾಗುತ್ತದೆ.
- ದೇಶದ ಆಡಳಿತಾತ್ಮಕ ನಿಯಂತ್ರಣವು ವಿಶ್ವಾಸಪೂರ್ಣ, ಸುದೃಢ ಮತ್ತು ಭದ್ರವಾಗಿಲ್ಲದಿದ್ದಲ್ಲಿ ಆಡಳಿತವು ಸ್ವಯಂಚಾಲಿತವಾಗಲಾರದು. ಯಾವ ದೇಶದಲ್ಲಿ ಜನ ಸಾಮಾನ್ಯರು ಆಡಳಿತ ವ್ಯವಸ್ಥೆಯಿಂದ ಸಹಜ ರೀತಿಯಲ್ಲಿ ಸೇವೆ –ಸವಲತ್ತುಗಳನ್ನು ಪಡೆಯಲಾರರೋ ಆ ದೇಶದ ಶಾಸನ ವ್ಯವಸ್ಥೆ ಅಸಮರ್ಥವಾಗಿದೆ ಎಂದು ಪ್ರಮಾಣಿತವಾಗುತ್ತದೆ.
- ಭ್ರಷ್ಟಾಚಾರದ ನಿರ್ಮೂಲನೆ ಸಾಧ್ಯವಾಗದು. ಆದರೆ ಭ್ರಷ್ಟಾಚಾರವನ್ನು ಸಂಪೂರ್ಣ ನಿಯಂತ್ರಿಸಬಹುದು. ಭ್ರಷ್ಟಾಚಾರವನ್ನು ನಿಯಂತ್ರಿಸುವ ಕಾರ್ಯವಿಧಾನದ ವಿಕಾಸ ಮಾಡಬಹುದಾಗಿದೆ. ಭ್ರಷ್ಟಾಚಾರದ ಪೂರ್ಣ ನಿಯಂತ್ರಣವೇ ಭ್ರಷ್ಟಾಚಾರ ನಿರ್ಮೂಲನೆಯಾಗಿದೆ.
- ಭ್ರಷ್ಟಾಚಾರದ ವಿರುದ್ಧ ಪ್ರಬುದ್ಧ ಜನಶಕ್ತಿ ಸಿದ್ಧವಾದಲ್ಲಿ ಯಾವುದೇ ಅಭಿವೃದ್ಧಿಶೀಲ ಅಥವಾ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಿಸಬಹುದಾಗಿದೆ.

- ಯಾವುದೇ ಕಾನೂನು ದ್ವಂದ್ವಾರ್ಥವನ್ನು ಹೊಂದಿರಬಾರದು. ಅಪರಾಧಿಗೆ ಆತನ ಅಪರಾಧಕ್ಕನುಸಾರವಾಗಿ ಶಿಕ್ಷೆ ಪಡೆಯುವ ವ್ಯವಸ್ಥೆ ಇರಬೇಕು.
- ಯಾವ ವ್ಯಕ್ತಿಯೂ ಹುಟ್ಟಿನಿಂದ ಅಪ್ರಾಮಾಣಿಕನೂ ಆಗಿರುವುದಿಲ್ಲ. ಅಪರಾಧಿಯೂ ಆಗಿರುವುದಿಲ್ಲ. ಆದರೆ ಸಮಾಜ ಮತ್ತು ಸಮಾಜದ ವಾತಾವರಣ, ವ್ಯಕ್ತಿಯ ಯೋಚನೆ (ಚಿಂತನೆ) ಮತ್ತು ಅವನ ಕಾರ್ಯ ಕಲಾಪಗಳನ್ನು ನಕಾರಾತ್ಮಕ ಹಾದಿಯತ್ತ ಕೊಂಡೊಯ್ಯುತ್ತದೆ. ಇಂತಹ ನಕಾರಾತ್ಮಕ ಪ್ರವೃತ್ತಿಯಿಂದ ಸಕಾರಾತ್ಮಕ ಚಿಂತನೆಯ ಉತ್ಪತ್ತಿಯಾಗುತ್ತದೆ. ರಾಜ್ಯ ಮತ್ತು ಸಮಾಜದಲ್ಲಿ ಸಕಾರಾತ್ಮಕ ಚಿಂತನೆಯ ಉತ್ಪತ್ತಿಗೆ ಉತ್ತೇಜನ ನೀಡಬೇಕು.
- ಭ್ರಷ್ಟ ಮಾಫಿಯ ರಾಜನೈತಿಕ ಕ್ಷೇತ್ರದಲ್ಲಿ ಜನಿಸುತ್ತದೆ. ರಾಜಕೀಯದಲ್ಲಿ ಭ್ರಷ್ಟ ಮಾಫಿಯಾದ ವಿಷಯಗತ ಮಾತಿರುವುದರಿಂದ ರಾಜಕೀಯ ಕ್ಷೇತ್ರದ ಹೊರತಾಗಿ ಎಲ್ಲಾ ಕ್ಷೇತ್ರಗಳೂ ಭ್ರಷ್ಟವಾಗುತ್ತವೆ.
- ಕಾನೂನು ವ್ಯವಸ್ಥೆ ದುರ್ಬಲವಾಗುವುದರಿಂದ ಭ್ರಷ್ಟಾಚಾರಕ್ಕೆ ಉತ್ತೇಜನ ದೊರೆಯುತ್ತದೆ. ಆದ್ದರಿಂದ ಭ್ರಷ್ಟಾಚಾರವನ್ನು ನಿಯಂತ್ರಿಸುವ ಕಾನೂನು ಮಾಡಬೇಕು.
- ವ್ಯಕ್ತಿಯು ತನ್ನ ಯೋಗ್ಯತೆ (ಅರ್ಹತೆ)ಯನ್ನು ಮೀರಿ ಹಣ ಸಂಗ್ರಹಿಸಬಾರದು. ಆರ್ಥಿಕ ಸಂಪತ್ತು ಸಂಗ್ರಹಿಸುವವರ ಮೇಲೆ ತತ್‌ಕ್ಷಣ ಕಾನೂನು ಕ್ರಮ ಕೈಗೊಳ್ಳುವಂತಾಗಬೇಕು.
- ಭ್ರಷ್ಟಾಚಾರವೆಂಬುದು ಪ್ರವೃತ್ತಿಯಾಗಿದೆ. ಇಂತಹ ಪ್ರವೃತ್ತಿ ಶಕ್ತಿ ಸಂಪನ್ನ ವ್ಯಕ್ತಿಗಳಲ್ಲಿ ವಿಕಸಿಸುತ್ತದೆ. ಇಂತಹ ಹೀನ ಪ್ರವೃತ್ತಿ ದೀರ್ಘಕಾಲ ಉಳಿಯುವುದಿಲ್ಲ.
- ಪ್ರತಿಯೊಂದು ಅಪರಾಧವು ಯೋಜನಾಬದ್ಧವಾಗಿ ಸಂಚಾಲನಗೊಳ್ಳುತ್ತದೆ.
- ಇಂತಹ ಯೋಜನೆ ತನ್ನ ಹೆಜ್ಜೆ ಗುರುತು ಬಿಟ್ಟು ಮುಂದೆ ಸಾಗುತ್ತದೆ. ಇದೇ ಹೆಜ್ಜೆ ಗುರುತು ಅಪರಾಧದ ಪ್ರಮಾಣವಾಗಿ (ಸಾಕ್ಷಿ) ಸಿಗುತ್ತದೆ.
- ಅಭಿವೃದ್ಧಿಶೀಲ ರಾಷ್ಟ್ರದ ಜನ ಬಡವರು, ಅಸಹಾಯಕರು ಮತ್ತು ದುರ್ಬಲರಾಗಿರುತ್ತಾರೆ. ಜನ ಜಾಗೃತರಾಗಲು ಶಿಕ್ಷಣ ಪಡೆದವರಾಗಿರ ಬೇಕಾಗುತ್ತದೆ. ಸುಶಿಕ್ಷತ ವ್ಯಕ್ತಿ ಮಾತ್ರ ಸಕಾರಾತ್ಮಕ ಚಿಂತನೆಯನ್ನು ಕಾಪಾಡಬಲ್ಲ.
- ಬಹುಸಂಖ್ಯಾತ ನಾಗರಿಕರು ಅಶಿಕ್ಷಿತರಾಗಿದ್ದಲ್ಲಿ ದೇಶದಲ್ಲಿ ಪ್ರಜಾತಂತ್ರದ

ವ್ಯವಸ್ಥೆ ಮಾಡಲಾಗುವುದಿಲ್ಲ. ಎಚ್ಚೆತ್ತ ನಾಗರಿಕ ಮಾತ್ರ ಶಾಸನ ಮಾಡುವ ಪಕ್ಷದ ತಪ್ಪುಗಳನ್ನು ಹೇಳಬಲ್ಲವನಾಗಿರುತ್ತಾನೆ.

- ಕಾನೂನಿನ ಆಧಾರದಲ್ಲಿ ಭ್ರಷ್ಟಾಚಾರ ನಿಯಂತ್ರಣ ಮಾಡುವಂತಹ ಸಶಕ್ತ ಕಾನೂನಿನ ನಿರ್ಮಾಣವಾಗಬೇಕಿದೆ.
- ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಸಕ್ರಿಯವಾಗುವ ಸರಕಾರೇತರ ಸಂಸ್ಥೆಗಳು ಭ್ರಷ್ಟಾಚಾರಜನ್ಯ ಕಾರ್ಯಗಳಲ್ಲಿ ತೊಡಗುತ್ತವೆ. ಇಂತಹ ಸಂಸ್ಥೆಗಳ ಮೇಲೆ ಕಟ್ಟುನಿಟ್ಟಾದ ಗಮನವಿಟ್ಟಿರಬೇಕು.
- ಭ್ರಷ್ಟಾಚಾರ ನಿಯಂತ್ರಣ ಮಾಡುವುದಕ್ಕಾಗಿ, ಮೂರು ರೀತಿಯ ಯೋಜನೆಗಳನ್ನು ಜೊತೆಜೊತೆಯಾಗಿ ಪ್ರಾರಂಭಿಸಬೇಕು. ತತ್ಕಾಲೀನ, ಅಲ್ಪಕಾಲೀನ ಮತ್ತು ದೀರ್ಘಕಾಲೀನ ಯೋಜನೆಗಳನ್ನು ಬೇರೆ ಬೇರೆ ರೀತಿಯಲ್ಲಿ ಪ್ರಾರಂಭಿಸಿದಾಗ ಪ್ರಭಾವಕಾರಿಯಾಗಿ ಭ್ರಷ್ಟಾಚಾರ ನಿಯಂತ್ರಣ ಕಾರ್ಯ ಸಫಲವಾಗುವುದು.
- ಲಂಚ ಪಡೆಯುವವರು, ಕೊಡುವವರು ಇಬ್ಬರೂ ಭ್ರಷ್ಟಾಚಾರಿಗಳಾಗುತ್ತಾರೆ. ಇಬ್ಬರ ಮೇಲೂ ಕ್ರಮ ಕೈಗೊಳ್ಳುವಂತಹ ಕಾನೂನಿನ ವ್ಯವಸ್ಥೆಯಾಗಬೇಕು.
- ಲಂಚ ಪಡೆಯುವುದು– ಕೊಡುವುದು, ಪ್ರಾಪ್ತವಾದ ಅವಕಾಶದ ದುರುಪಯೋಗ ಮಾಡುವುದು ಮತ್ತು ಕಾನೂನು ಮಾಡಿ ದೇಶದ ಸಂಪತ್ತನ್ನು ಕೊಳ್ಳೆ ಹೊಡೆಯುವ ಪ್ರಯತ್ನ ಮಾಡುವುದು. ಇವೆಲ್ಲವೂ ಭ್ರಷ್ಟಾಚಾರದೊಳಗೇ ಬರುತ್ತವೆ. ಇವೆಲ್ಲದರ ಮೇಲೆ ಕಠಿಣ ಕ್ರಮ ಕೈಗೊಳ್ಳುವ ವ್ಯವಸ್ಥೆಯನ್ನು ದೇಶ ಮಾಡಬೇಕು.
- ಚಿಕ್ಕದಿರಲಿ, ದೊಡ್ಡದಿರಲಿ, ಭ್ರಷ್ಟಾಚಾರಕ್ಕೆ ಸಂಬಂಧಿತ ದೂರು ನೀಡಲು ಪ್ರತಿಯೊಬ್ಬ ನಾಗರಿಕನಿಗೂ ಕಾನೂನಿನ ಅಧಿಕಾರ ದೊರೆಯಬೇಕು.
- ವ್ಯಕ್ತಿ, ಸಮುದಾಯ ಮತ್ತು ಸಾರ್ವಜನಿಕ ಹುದ್ದೆಯಲ್ಲಿರುವ ಪದಾಧಿಕಾರಿಗಳನ್ನು ಭ್ರಷ್ಟಾಚಾರ ಜನ್ಯ ಕಾರ್ಯಗಳಲ್ಲಿ, ತನಿಖೆ ಮತ್ತು ಕಾರ್ಯಚರಣೆಯ ವಲಯದೊಳಗೆ ತಂದು, ಇಂತಹ ಭ್ರಷ್ಟಾಚಾರಿಗಳ ಮೇಲೆ ಕಾನೂನಿನ ಕಾರ್ಯಾಚರಣೆ ಮಾಡುವ ವ್ಯವಸ್ಥೆಯಾಗಬೇಕು.
- ಭ್ರಷ್ಟಾಚಾರಿಯನ್ನು ರಾಜ್ಯವು ಪರಿಶೀಲನೆ ನಡೆಸಿ, ಸಾಕ್ಷಾಧಾರಗಳನ್ನು ಸಂಗ್ರಹಿಸಿ ಕಾರ್ಯಾಚರಣೆ ನಡೆಸುವ ವ್ಯವಸ್ಥೆ ಆಗಬೇಕು.
- ಯಾವ ದೇಶದಲ್ಲಿ ರಾಜನೈತಿಕ ವ್ಯವಸ್ಥೆ ಅಸ್ಥಿರವಾಗಿರುತ್ತದೋ ಅಲ್ಲಿ

ಭ್ರಷ್ಟಾಚಾರವು ಸಾಂಸ್ಥಿಕ ರೂಪದಲ್ಲಿ ವಿಕಸಿಸುತ್ತದೆ. ಭ್ರಷ್ಟಾಚಾರವು ಸಾಂಸ್ಥಿವಾಗಿ ಬೆಳೆದಾಗ ಸಮುದಾಯ ಹಾಗೂ ಜನರು ದುರ್ಬಲವಾಗುತ್ತಾ ಹೋಗುತ್ತಾರೆ. ಇಂತಹ ಸ್ಥಿತಿಯನ್ನು ತತ್ಕ್ಷಣ ನಿಯಂತ್ರಿಸಬೇಕು.

- ಯಾವ ಸಮಾಜದಲ್ಲಿ ನೈತಿಕತೆ, ವಿಶ್ವಾಸ ಮತ್ತು ಪ್ರಾಮಾಣಿಕತೆ ಇರುತ್ತದೋ, ಆ ಸಮಾಜ ಯಾವಾಗಲೂ ಮುಂದುವರೆಯುತ್ತದೆ. (ಪ್ರಗತಿ ಸಾಧಿಸುತ್ತದೆ) ಸಮಾಜದಲ್ಲಿ ನಾಗರಿಕರು ನೈತಿಕತೆ ವಿಶ್ವಾಸ ಮತ್ತು ಪ್ರಾಮಾಣಿಕತೆಯನ್ನು ಕಳಕೊಂಡಾಗ ಸಮಾಜದ ವ್ಯವಸ್ಥೆ ಕೆಡುತ್ತಾ ಹೋಗುತ್ತದೆ.
- ಪ್ರಜಾತಂತ್ರವಿರುವ ದೇಶದಲ್ಲಿ ನಿಯುಮಾನುಸಾರವಾಗಿಯೇ ಸಂಚಾಲಕತ್ವವಿರುವುದರಿಂದ, ನಿಯಮಗಳ ಮೂಲಕವೇ ನಿಯಂತ್ರಿತ ಆಡಳಿತ ನಡೆಯುವ ನಡೆಸುವ ವಾತಾವರಣ ರಾಜನೈತಿಕ ಕ್ಷೇತ್ರದಲ್ಲಿ ಆಗಬೇಕಾಗಿದೆ.
- ಶಾಸನ ವ್ಯವಸ್ಥೆಯಲ್ಲಿರುವ ಕರ್ಮಚಾರಿ (ಕಾರ್ಮಿಕರನ್ನು ) ಗಳನ್ನು ಸಂಘಟಿಸಿ ರಾಜಕೀಯ ಗುಂಪುಗಾರಿಕೆ ಮಾಡುವುದನ್ನು ನಿಯಂತ್ರಿಸಬೇಕು.
- ವೃತ್ತಿಯ ಬಗ್ಗೆ ಹೊಣೆ ಹೊರುವಂತೆ ಮಾಡಬೇಕು. ಹುದ್ದೆಯ ಜವಾಬ್ದಾರಿ ಮತ್ತು ವಾರ್ತಾಲಾಪ (ಪ್ರಶ್ನೋತ್ತರ ) ದ ಹೊಣೆಯನ್ನರಿತ ವಾತಾವರಣವು ಶಾಸನ ಕ್ಷೇತ್ರವನ್ನು ಸುದೃಢಗೊಳಿಸುವುದು.
- ಪ್ರಶಾಸನಿಕ ನಿಯಂತ್ರಿತ ಸಂಚಾಲನೆಗಾಗಿ, ದಂಡನೆ ಇಲ್ಲದ (ಶಿಕ್ಷೆ ) ವ್ಯವಸ್ಥೆ ಇರಬಾರದು. ಕೆಲಸ ಮಾಡುವವರಿಗೆ ಪುರಸ್ಕಾರ ಮತ್ತು ಕೆಲಸ ಮಾಡದಿರುವವರಿಗೆ ಶಿಕ್ಷೆ ನೀಡುವ ವ್ಯವಸ್ಥೆಯಿಂದ ಶಾಸನ ಕ್ಷೇತ್ರವು ಸೇವಾಪರ ಮತ್ತು ಶಾಸನ ಬದ್ಧವಾಗುತ್ತದೆ.
- ಸತ್ಯವನ್ನು ಉಪೇಕ್ಷಿಸಿ, ಮಹತ್ವದ ಸುದ್ದಿ ಎಂಬ ಶಿರೋನಾಮೆಯಲ್ಲಿ ಜನರನ್ನು ದಿಕ್ಕು ತಪ್ಪಿಸುವ (ಮಾಧ್ಯಮ) ಪತ್ರಿಕೆಗಳಿಂದಾಗಿ ರಾಜಕಾರಣದಲ್ಲಿ ಅಸ್ಥಿರತೆಯುಂಟಾಗುತ್ತದೆ. ಇದರಿಂದ ಭ್ರಷ್ಟಾಚಾರವೂ ಹೆಚ್ಚುತ್ತದೆ. ಪ್ರಜಾತಂತ್ರದ ವಿಕಾಸದಲ್ಲಿ ಇಂತಹ ದಿಕ್ಕು ತಪ್ಪಿಸುವ ಪತ್ರಿಕಾರಂಗವು ಅಭಿಷಾಪವಾಗಿದೆ. ಆದ್ದರಿಂದ ಇವುಗಳ ಮೇಲೆ ನಿಯಂತ್ರಣ ಅವಶ್ಯಕವಾಗಿದೆ.
- ಯಾವುದೇ ದೇಶದ ಸಂಚಾರ ಮಾಧ್ಯಮವು ಬೇರೆ ದೇಶದ ಅಕ್ರಮ ಪ್ರವೇಶದಲ್ಲಿ ಮುನ್ನಡೆಯುವಂತಾಗಬಾರದು. ಸಂಚಾರ ಮಾಧ್ಯಮದ ನಡೆ ಸ್ವಚ್ಛ ಹಾಗೂ ಸ್ವದೇಶಿ ಆಗಿರಬೇಕು. ವಿದೇಶಿ ಅಕ್ರಮ ಪ್ರವೇಶದಿಂದ ದಿಕ್ಕು ತಪ್ಪಿಸುವ ಭ್ರಮೆಯನ್ನುಂಟುಮಾಡುವ ಪತ್ರಾಚಾರದ ಉದಯವಾಗುತ್ತದೆ.

- ರಾಷ್ಟ್ರದ ರಾಷ್ಟ್ರೀಯತೆಗೆ ಆರ್ಥಿಕ ಭ್ರಷ್ಟಾಚಾರಕ್ಕಿಂತಲೂ ನೈತಿಕ ಭ್ರಷ್ಟಾಚಾರ ಹೆಚ್ಚು ಘಾತಕವಾಗುತ್ತದೆ. ಇಲ್ಲಿ ನೈತಿಕ ಭ್ರಷ್ಟಾಚಾರದಲ್ಲಿ ನಿಶ್ಚಿತವಾಗಿ ರಾಜಕೀಯ ಪಕ್ಷಗಳೇ ದೋಷಿಗಳಾಗಿರುತ್ತವೆ. ವ್ಯವಸ್ಥಾಪನೆಯು ರಾಜಕೀಯ ಪಕ್ಷಗಳ ಹೊಣೆಯಿಂದ ಗತಿಶೀಲ (ನಡೆಸಲ್ಪಡುವ) ವಾಗುವುದರಿಂದ, ರಾಷ್ಟ್ರ ಹಿತಕ್ಕಿಂತಲೂ ಹೆಚ್ಚು ವ್ಯಕ್ತಿಗತ ಮತ್ತು ಪಕ್ಷಹಿತಕ್ಕಾಗಿಯೇ ನೀತಿ ನಿರ್ಮಾಣವಾಗುವ ಪ್ರವೃತ್ತಿ ಪ್ರಬಲವಾಗಬಹುದಾಗುತ್ತದೆ. ಇಂತಹ ರಾಜಕೀಯ ಪಕ್ಷಗಳನ್ನು ನಿಷೇಧಿಸುವ ವಾತಾವರಣ ನಿರ್ಮಾಣವಾಗಬೇಕು.
- ನಾಗರಿಕನಲ್ಲಿ ಸಕಾರಾತ್ಮಕ ಚಿಂತನೆ ವಿಕಾಸವಾಗುವಂತೆ ಮಾಡಬೇಕು. ಸಕಾರಾತ್ಮಕ ಚಿಂತನೆಯಿಂದ ವಿವೇಕ ಉದಯಿಸುತ್ತದೆ. ವಿವೇಕದ ಉದಯದಿಂದಲೇ ಆದರ್ಶ ಸಮಾಜದ ಸ್ಥಾಪನೆಯಾಗುತ್ತದೆ.
- ಕರ್ಮ ನಿರತ ಉದ್ಯೋಗಿಗಳ ಭ್ರಷ್ಟಾಚಾರವನ್ನು ರಾಜನೀತಿಯ ನಿಯಮಗಳಿಂದ ನಿಯಂತ್ರಿಸಬೇಕು. ಮತ್ತು ರಾಜನೀತಿಯ ನಿಯಮಗಳನ್ನು ಜನತೆಯ ಮೂಲಕ ನಿಯಂತ್ರಿಸುವ ವಾತಾವರಣ ನಿರ್ಮಾಣವಾಗಬೇಕು.
- ದೇಶದ ರಾಜ್ಯ ವ್ಯವಸ್ಥೆಯಿಂದ ತೊಡಗಿರುವ ವ್ಯಕ್ತಿಯು ಸ್ವಚ್ಛ, ಪ್ರಾಮಾಣಿಕ ಮತ್ತು ನೀತಿವಂತನಾಗಿರುವುದು ಅನಿವಾರ್ಯವಾಗಿದೆ. ಒಂದು ವೇಳೆ ಇಂತಹ ವ್ಯಕ್ತಿಗಳು, ಅಪ್ರಾಮಾಣಿಕರುವ ಅವಕಾಶವಾದಿಗಳು ಮತ್ತು ಅನೈತಿಕರಾದರೆ, ಜನ ಸಾಮಾನ್ಯರ ಜೀವನ ಉನ್ನತಿ ಸಾಧಿಸಲಾರದು. ಜನರ ಜೀವನದಲ್ಲಿ ಉನ್ನತಿಯಾಗದಿದ್ದಲ್ಲಿ, ವಿದ್ರೋಹದ ಭಾವನೆ ಜಾಗೃತಗೊಳ್ಳುವ ಸಂಭವವಿರುತ್ತದೆ. ಆದ್ದರಿಂದ ಅಧಿಕಾರ ಹೊತ್ತವರು ಜವಾಬ್ದಾರಿಯುತರಾಗಿರಬೇಕು.
- ರಾಜಕೀಯ ಪರಿವರ್ತನೆ ಕೆಲವೊಮ್ಮೆ ಅಸ್ಥಿರತೆಯನ್ನು ಹುಟ್ಟು ಹಾಕುತ್ತದೆ. ಅಸ್ಥಿರತೆಯು ಅವಿಶ್ವಾಸದೊಂದಿಗೆ ಸ್ವಾರ್ಥವನ್ನೂ ಹೊಂದಿಕೊಳ್ಳುತ್ತದೆ. ಅವಿಶ್ವಾಸ ಮತ್ತು ಸ್ವಾರ್ಥವನ್ನು ತೊಡೆದು ಹಾಕಲು ನೈತಿಕ, ಮೌಲ್ಯಯುತ ಸಮಾಜದ ನಿರ್ಮಾಣ ಮಾಡಬೇಕಾಗಿದೆ.
- ಭ್ರಷ್ಟಾಚಾರವನ್ನು ನಿಯಂತ್ರಿಸದ ಹೊರತು ರಾಜಕಾರಣದ ವಾತಾವರಣ ಸ್ಥಿರತೆ ಬರಲಾರದು. ಅಸ್ಥಿರ ರಾಜನೈತಿಕ ವಾತಾವರಣದಿಂದ ದೇಶದ ವಿಕಾಸ ಸಂಭವವಿಲ್ಲ. ಹಾಗೂ ದೇಶದ ಆರ್ಥಿಕ ವಿಕಾಸದ ಹೊರತು ಜನಮಾನಸದ ವಿಕಾಸವೂ ಸಂಭವವಿಲ್ಲ.

- ರಾಜಕೀಯ ಪಕ್ಷಗಳು ಚುನಾವಣೆಯ ಹೆಸರಿನಲ್ಲಿ ಆರ್ಥಿಕ ಅನುದಾನ ಕೊಡುವ ಮತ್ತು ಅರ್ಥ ಸಂಗ್ರಹಿಸುವ ವ್ಯವಸ್ಥೆ ಭ್ರಷ್ಟಾಚಾರ ಹೆಚ್ಚಿಸುವಲ್ಲಿ ಸಹಕರಿಸುತ್ತವೆ. ರಾಜ ನೈತಿಕ ಪಕ್ಷಗಳು ವ್ಯಕ್ತಿ, ಸಂಸ್ಥೆ ಅಥವಾ ವಿದೇಶಿ ಸಮುದಾಯಗಳಿಂದ ಚುನಾವಣೆಯ ಖರ್ಚನ್ನು ಪಡೆಯಬಾರದು.
- ಭ್ರಷ್ಟಾಚಾರಿ ಕಮಿಷನ್ ಗಳು ಭ್ರಷ್ಟಾಚಾರವನ್ನು ಒಪ್ಪಿಕೊಳ್ಳಲು ಸಿದ್ಧರಾಗಿರುವುದಿಲ್ಲ. ಆದರೆ ಕಮಿಷನ್ ಗಳ ಲೇವಾ ದೇವಿ ಸಂಪೂರ್ಣವಾಗಿ ಭ್ರಷ್ಟಾಚಾರವೇ ಆಗಿದೆ. ಈ ಪದ್ಧತಿಯನ್ನು ತಡೆಯಬೇಕು.
- ನಾಗರಿಕ ಸಮಾಜ ಮತ್ತು ದೇಶ ಹೆಚ್ಚು ಹೆಚ್ಚು ನವಯುಗವನ್ನು ಪ್ರವೇಶಿಸುವರೋ ಭ್ರಷ್ಟಾಚಾರವೂ ತನ್ನ ಬಣ್ಣ ಬದಲಿಸಿ, ಇನ್ನಷ್ಟು ಜಟಿಲ ರೂಪದಲ್ಲಿ ಪ್ರಸ್ತುತಗೊಳ್ಳುತ್ತಾ ಹೋಗುವುದು. ಇಂತಹ ಪರಿವರ್ತಿತ ಅಪರಾಧಗಳ ನಿಯಂತ್ರಣಕ್ಕಾಗಿ ಸಮಯದ ಬೇಡಿಕೆಯಂತೆ (ಅವಶ್ಯಕತೆಯಂತೆ) ವ್ಯವಸ್ಥೆಯ ನಿರ್ಮಾಣವಾಗಬೇಕು.
- ಸಂಪತ್ಭರಿತ ದೇಶ ಅರ್ಥಾತ್ ನೀಡುವವನ ಸಹಯೋಗ ಅಥವಾ ಸಾಲದ ಮೊತ್ತವನ್ನು ತೆಗೆದುಕೊಳ್ಳುವ ಅಧಿಕಾರವುಳ್ಳ ವ್ಯಕ್ತಿ ಒಂದು ವೇಳೆ ದುರಾಸೆ ಉಳ್ಳವನಾಗಿದ್ದರೆ ಅಭಿವೃದ್ಧಿಶೀಲ ದೇಶದಲ್ಲಿ ಭ್ರಷ್ಟಾಚಾರ ಜನ್ಮ ತಳೆಯುವುದು. ಸಹಾಯ ನೀಡುವ ಸಹಯೋಗಿ ಸಮೂಹಗಳನ್ನು ಕೂಡ ಭ್ರಷ್ಟಾಚಾರ ಸಂಬಂಧಿತ ಕಾರ್ಯಾಚರಣೆಯಲ್ಲಿ ಒಳಪಡಿಸಬೇಕು.
- ಯಾವ ದೇಶದಲ್ಲಿ ಕಳ್ಳ ವಹಿವಾಟು (ಅಕ್ರಮ) ಹೆಚ್ಚಾಗಿರುತ್ತದೋ ಆ ರಾಜ್ಯದ ಶಾಸನ ಮತ್ತು ರಾಜ್ಯ ಕೋಶ (ಖಜಾನೆ) ದುರ್ಬಲ ವಾಗುತ್ತಾ ಹೋಗುತ್ತವೆ. ನಾಗರಿಕರಲ್ಲಿ ಅಂತರ ಹೆಚ್ಚುತ್ತಾ ಹೋಗುತ್ತದೆ. ಮತ್ತು ರಾಜ್ಯದಲ್ಲಿ ಆತಂಕವು ಜನ್ಮ ತಳೆಯುತ್ತದೆ. ಈ ಮೇಲಿನ ವಿವರಣೆಯಿಂದ (ಪರಿಭಾಷೆಯಿಂದ) ಕೇವಲ ಭ್ರಷ್ಟ ವಿರೋಧಿ ಶಾಸ್ತ್ರ ಪೂರ್ಣವಾಗಲಾರದು. ಈ ಪುಸ್ತಕದಲ್ಲಿ ಪ್ರಯೋಗದಲ್ಲಿ ಬಂದಿರುವ ಮೇಲೆ ವಿವರಿಸಲಾದ ಮುಖ್ಯ ಬಿಂದುಗಳನ್ನು ಪರಿಭಾಷೆಯ ಕ್ಷೇತ್ರದಲ್ಲಿ ಸಮಾವಿಷ್ಟಗೊಳಿಸಿ ನೋಡಬೇಕಾದೀತು. ಇದಲ್ಲದೆ ಸಮಯದ ಬೇಡಿಕೆ (ಅವಶ್ಯಕತೆ)ಗನುಸಾರವಾಗಿ ಇದಾದ ನಂತರ ವ್ಯಾಖ್ಯಾನ ಹಾಗೂ ವಿಶ್ಲೇಷಣೆಯಾಗುತ್ತಿರುವ ಅಧ್ಯಯನ ಮತ್ತು ಶೋಧದಿಂದ ಹೊರಬರುವ ಬಿಂದುಗಳನ್ನು (ಪಾಯಿಂಟ್ಸ್) ಕೂಡ ಪರಿಭಾಷೆಯಲ್ಲಿ ಸೇರಿಸುತ್ತಾ ಹೋಗಬೇಕು.

## 5. ಭ್ರಷ್ಟವಿರೋಧಿ ಶಾಸ್ತ್ರದ ನೀತಿಯುತ ಸಿದ್ಧಾಂತ ಹಾಗೂ ಸೂತ್ರಗಳು [Ethical Principles and Anti- corruption Formulas]

ಸದಾಚಾರ ಮಾನವನ ಜನ್ಮಜಾತ ಗುಣವಾಗಿದೆ. – **'ನೀತಿ ವಿಜ್ಞಾನ'**

ಮಾನವ ವಿಕಾಸಶೀಲ ಪ್ರಾಣಿ. ಆತ ಯಾವಾಗಲೂ ಸಮಾಜದಲ್ಲಿ ಹಿತವಾದ ರೀತಿಯಲ್ಲಿ ಇರಬಯಸುತ್ತಾನೆ. – **ಸಮಾಜ ಶಾಸ್ತ್ರ.**

ವ್ಯಕ್ತಿಯು ಸರ್ವಾಂಗೀಣ ವಿಕಾಸವು ಅವನ ಮನೋಭಾವದಿಂದ ನಿರ್ದೇಶಿಸಲ್ಪಡುತ್ತದೆ. – **ಮನೋವಿಜ್ಞಾನ**

ಆರ್ಥಿಕ ವಹಿವಾಟು ಮತ್ತು ವ್ಯವಹಾರದಲ್ಲಿ ಚಂಚಲತೆ ಬರಬಾರದು. – **ಅರ್ಥ ಶಾಸ್ತ್ರ**

ಮಾನವ ಸಮಾಜದ ವಿಕಾಸವು ವ್ಯಕ್ತಿಯ ವ್ಯವಹಾರಗಳಿಂದಾಗುತ್ತದೆ. – **ಮಾನವ ಶಾಸ್ತ್ರ.**

ನೈತಿಕವಾದ ಅಭ್ಯಾಸಗಳಿಂದ ಸರಿಯಾದ ಮತ್ತು ಸಕಾರಾತ್ಮಕ ಚಿಂತನೆಗಳು ಹುಟ್ಟುತ್ತವೆ. – **'ನೀತಿ ಶಾಸ್ತ್ರ'**

ವ್ಯಕ್ತಿಯ ಸಮರ್ಪಕ ಯೋಚನೆಗಳಿಂದ ರಾಜನೈತಿಕ ಪರಿವರ್ತನೆಯಾಗುತ್ತದೆ.– **'ರಾಜನೀತಿ ಶಾಸ್ತ್ರ'**.

ಲಂಚ ಪಡೆಯುವುದು ಮತ್ತು ನೀಡುವುದು ಎರಡೂ 'ಪಾಪ'ವಾಗಿದೆ. ಇದು ಮಾನವ ಜೀವನದಲ್ಲಿ ನಿಷೇಧಿತ (ವರ್ಜಿತ) ವಾಗಿದೆ.– **ಧರ್ಮಶಾಸ್ತ್ರ.**

ಲಂಚ ಕೊಳ್ಳುವವರು, ಕೊಡುವವರು ಇಬ್ಬರೂ ಅಪರಾಧಿಗಳೆ, ಅಪರಾಧಿ ಕಾನೂನಿನಿಂದ ತಪ್ಪಿಸಿಕೊಳ್ಳಲಾರ– **ವಿಧಿ ಶಾಸ್ತ್ರ.**

**ಈ ಮೇಲಿನ ಸಿದ್ಧಾಂತಗಳು ಶಾಶ್ವತವು ಪ್ರಮಾಣಿತವೂ ಆಗಿವೆ,**

ಭ್ರಷ್ಟಾಚಾರ ವಿರೋಧಿ ಶಾಸ್ತ್ರದ ಸಿದ್ಧಾಂತ ಮತ್ತು ಸೂತ್ರವನ್ನು ಆಳವಾಗಿ ತಿಳಿದುಕೊಳ್ಳಬೇಕಾದರೆ ಮಾನವ ಸಮಾಜದ ಸಂರಚನೆಯನ್ನು ನೋಡಬೇಕಾದೀತು. ಎಲ್ಲಾ ದೇಶ ಸಮಾಜಗಳು ಒಂದೇ ತೆರನಾಗಿರುವುದಿಲ್ಲ. ಹಾಗೂ ನಿಯಮಗಳು (ವಿಧಿ – ವಿಧಾನಗಳು) ವ್ಯವಸ್ಥೆ ಮತ್ತು ಸಂಸ್ಕೃತಿಯಂತೆ ನಡೆದುಕೊಳ್ಳಲಾರವು. ಹೀಗಿದ್ದರೂ ಸಾಮಾಜಿಕ ಸಂರಚನೆ (ವ್ಯವಸ್ಥೆಯ) ಏಕಾಂಗಿ ತತ್ವ (ವ್ಯಷ್ಟಿ) ವ್ಯಕ್ತಿಯೇ ಆಗಿದ್ದಾನೆ. ಈ ಅಧ್ಯಯನದ ಸೂತ್ರ ಮತ್ತು ಸಿದ್ಧಾಂತವನ್ನು ಪರಿಶೀಲಿಸುತ್ತಾ ಮತ್ತು ವ್ಯಾಖ್ಯಾನಿಸುತ್ತಾ ಹೋದಂತೆ ಅನ್ಯ ಸಿದ್ಧಾಂತ ಮತ್ತು ಸೂತ್ರ ಹುಟ್ಟಿಕೊಳ್ಳಬಹುದು. ಅಂತಹ ಸಿದ್ಧಾಂತಗಳು ಹಾಗೂ ಸೂತ್ರಗಳನ್ನು ನಂತರದಲ್ಲಿ ಸೂಕ್ತ ರೀತಿಯಲ್ಲಿ ಪರಿಶೀಲಿಸಿ ಸೇರಿಸಿಕೊಳ್ಳಬಹುದು. ಇದೀಗ ವರ್ತಮಾನದಲ್ಲಿ ನಿಮ್ನ ಲಿಖಿತ (ಕೆಳಗೆ ಕೊಟ್ಟಿರುವ) ವಿಚಾರಗಳನ್ನು ಸೂತ್ರ ಮತ್ತು ಸಿದ್ಧಾಂತಗಳಲ್ಲಿ ಸಮ್ಮಿಳಿತಗೊಳಿಸಲಾಗಿದೆ.

ಮನುಷ್ಯ ಹುಟ್ಟಿನೊಂದಿಗೇ ಮಾನವೀಯ ಪ್ರಕೃತಿಯ ಆಚಾರ ಮತ್ತು ವ್ಯವಹಾರವನ್ನು ಜೊತೆಗೆ ತರುತ್ತಾನೆ. ಜನ್ಮತಃ ಮನುಷ್ಯ ಅಪರಾಧಿಯಾಗಿರುವುದಿಲ್ಲ. ಸಮಾಜದ ವಾತಾವರಣ ಮನುಷ್ಯನನ್ನು ಭ್ರಷ್ಟಗೊಳಿಸುತ್ತದೆ. ಈ ಪರಿವರ್ತಿತ ಪ್ರವೃತ್ತಿಯು ತನ್ನ ಮೂಲ (ಪೂರ್ವ) ಸ್ವಭಾವದಲ್ಲಿ ಹಿಂತಿರುಗುವ ಸಾಧ್ಯತೆ ಇದೆ.

ಭ್ರಷ್ಟಾಚಾರ ಮತ್ತು ಸದಾಚಾರ ಎರಡೂ ಮನುಷ್ಯನಲ್ಲಿ ಇರುವ ತತ್ವಗಳೆ. ಇವುಗಳನ್ನು ನಿಯಂತ್ರಿಸಬಹುದಾಗಿದೆ.

ವ್ಯಕ್ತಿಯೇ ಭ್ರಷ್ಟಾಚಾರದ ಪ್ರಾರಂಭ ಮತ್ತು ಕೊನೆಯ ಒಂದು ಭಾಗವಾಗಿದ್ದಾನೆ. ವ್ಯಕ್ತಿಯೇ ಮೂಲ ಬಿಂದುವಾದ ಕಾರಣ ಮೂಲ ರೂಪದಲ್ಲಿ ಕಂಡುಬರುವ ಒಂದಂಶವೂ ವ್ಯಕ್ತಿಯೇ ಆಗಿದ್ದಾನೆ.

ಯಾವ ವ್ಯಕ್ತಿಯಾದರೂ ದೈವಿ ಶಕ್ತಿಯನ್ನು ಪಡೆದುಕೊಳ್ಳಬಲ್ಲ ಅವನ ಚೈತನ್ಯದ ಮಟ್ಟ (ಹಂತ) ಅವನ ಆಂತರಿಕ ಮತ್ತು ಬಾಹ್ಯ ಶಕ್ತಿಯ ನಿರ್ಧಾರ ಮಾಡುತ್ತದೆ.

ವ್ಯಕ್ತಿಯಿಂದ ಸಮಾಜ ಮತ್ತು ಸಮುದಾಯ, ಸಂಘ ಸಂಸ್ಥೆ,ಶಾಸಕ, ಶಾಸನಕ್ಕೊಳಪಟ್ಟ ಮತ್ತು ರಾಜ ನೈತಿಕ ಸಂಘಟನೆಗಳಾದಿಯ ನಿರ್ಮಾಣವಾಗುತ್ತದೆ. ವ್ಯಕ್ತಿಯಿಂದ ನಿರ್ಮಿತ ಸಮಾಜದ ಅನ್ಯ ಸಮುದಾಯ ಸುದೃಢ ಸ್ವಚ್ಛ ಮತ್ತು

ಜವಾಬ್ದಾರಿಯುತವಾಗಿರುತ್ತದೆ. ಆದ್ದರಿಂದ ವ್ಯಕ್ತಿಯಿಂದಲೇ ಆಚಾರ ಶುದ್ಧತೆ ಮತ್ತು ವ್ಯವಹಾರ ಶುದ್ಧತೆಯು ಪ್ರಾರಂಭವಾಗಬೇಕಾಗಿದೆ.

ವ್ಯಕ್ತಿಯಿಂದ ಸ್ಥಾಪಿತ ಮೌಲ್ಯಗಳನ್ನು ಸಮಾಜ ಅಂಗೀಕರಿಸುತ್ತದೆ. ಇಂತಹ ಮೌಲ್ಯಗಳನ್ನು ಕಾಪಿಡುವುದಕ್ಕಾಗಿ ವಾತಾವರಣ ನಿರ್ಮಾಣ ಮಾಡಬೇಕಾಗಿದೆ.

ಭ್ರಷ್ಟಾಚಾರ ಸಾಮಾಜಿಕ ಸಮಸ್ಯೆಯಾಗಿದೆ. ಇನ್ನೊಂದರ್ಥದಲ್ಲಿ ಸಾಮಾಜಿಕ ರೋಗವೂ ಹೌದು. ವ್ಯಕ್ತಿ ಸಮಾಜದ ಒಂದು ಅಂಗ. ಆದ್ದರಿಂದ ವ್ಯಕ್ತಿಯಿಂದಲೇ ರೋಗದ ನಿದಾನಕ್ಕಾಗಿ ಉಪಚಾರವೂ ಪ್ರಾರಂಭವಾಗಬೇಕಾಗಿದೆ.

ಭ್ರಷ್ಟಾಚಾರದ ಉತ್ಪತ್ತಿ ವ್ಯಕ್ತಿಯ ಮನೋಭಾವದಿಂದ ಪ್ರಾರಂಭವಾಗುತ್ತದೆ. ಮನೋಭಾವ ಮತ್ತು ವಿಚಾರ ಗೋಚರಿಸುವುದಿಲ್ಲ. ಆದರೆ ಅನುಭವಿಸ ಬಹುದಾಗಿದೆ. ಕಾರ್ಯರೂಪದಲ್ಲಿ ಬಂದಾಗ ನೋಡಲೂಬಹುದಾಗಿದೆ. ಇಂತಹ ವಿಕೃತ ಮನೋರೋಗವನ್ನು ಆಚಾರ ಮತ್ತು ಸಂಸ್ಕೃತಿಯ ಸುಧಾರಣೆಯ ಮೂಲಕ ನಿಯಂತ್ರಿಸಬೇಕು.

ಉಚಿತ ಅಥವಾ ಅನುಚಿತವನ್ನು ಬೇರ್ಪಡಿಸುವ ಸಾಮರ್ಥ್ಯ ಮನುಷ್ಯನಲ್ಲಿದೆ. ಏಕೆಂದರೆ ಮನುಷ್ಯ ವಿವೇಕಶೀಲನಾಗಿದ್ದಾನೆ. ಈ ವಿವೇಕದ ಆಧಾರದಲ್ಲಿಯೇ ಅವನಿಗೆ ಪರಿಧಿ(ಆಯಾಮ) ನಿರ್ಮಾಣವಾಗಿದೆ.

ಸಾಂಕ್ರಾಮಿಕ ರೋಗದಂತಹ ಪ್ರಕೃತಿಯುಳ್ಳ ಮನೋಸ್ಥಿತಿಯನ್ನು ಚಿಕಿತ್ಸೆ ಮತ್ತು ಶುಶ್ರೂಷಾ ಪದ್ಧತಿಯ ಆಧಾರದಲ್ಲಿ ನಿರ್ಮೂಲನೆ ಮಾಡಬಹುದಾಗಿದೆ. ಇದು ಅನುಕರಣೀಯ ಪ್ರಕೃತಿಯದ್ದಾಗಿರುವ ಕಾರಣ ಇದನ್ನು ಮುಕ್ತವಾಗಿಡುವುದರಿಂದ ಹಾನಿಯುಂಟು ಮಾಡಬಹುದಾಗಿದೆ. ಇದಕ್ಕಾಗಿ ನದಿ, ದಡ, ಬಂಧಿಸುವ ವಿಧಾನದಿಂದ ನಿಯಂತ್ರಣದಲ್ಲಿಡುವುದರಿಂದ ಕೇವಲ ಭೂಮಿ ಫಲವತ್ತಾಗುವುದು ಮಾತ್ರವಲ್ಲ, ವಿದ್ಯುತ್ತಿನ ಉತ್ಪಾದನೆಯು ಆಗುತ್ತದೆ. ಆದ್ದರಿಂದ ಇದರ ಶಕ್ತಿಯನ್ನು ಗುರುತಿಸಿ, ಇದನ್ನು ನಿಯಂತ್ರಣಕ್ಕೊಳಪಡಿಸಬೇಕು.

ವ್ಯಕ್ತಿಯ ಸ್ವಭಾವವೇ ಸಮಾಜದ ಗತಿಯನ್ನು ನಿರ್ಧರಿಸುವ ಕಾರಣದಿಂದಾಗಿ ವ್ಯಕ್ತಿಯಲ್ಲಿ ಅರಿವಿನ ವಿಕಾಸ ಮಾಡಬೇಕಾಗಿದೆ. ಈ ವಿಕಾಸವನ್ನು ಶಿಕ್ಷಣ ಸಂಸ್ಥೆಗಳಿಂದಲೇ ಸಾಧ್ಯ ಮಾಡಬಹುದಾಗಿದೆ.

ಆಧಾರ ಭೂತ ಅವಶ್ಯಕತೆಗಳು ಪೂರ್ಣಗೊಳ್ಳುವ ಸ್ಥಿತಿಯಲ್ಲಿ, ಮನುಷ್ಯನ ಕೇವಲ ಕೆಟ್ಟ ಭಾಗವನ್ನು ನಿಯಂತ್ರಣದಲ್ಲಿಡಬಹುದಾಗಿದೆ.

ಮೂಲತಃ ವ್ಯಕ್ತಿ ಮತ್ತು ವ್ಯಕ್ತಿಗಳಲ್ಲಿ ಕಂಡುಬರುವ ಆಚಾರ ವಿಚಾರ ಮತ್ತು ವ್ಯವಹಾರದ ಸ್ವಭಾವಗತ ರೂಪಕ್ಕೆ ಸೂಕ್ತ ರೀತಿಯ ಚಾಲನೆ ಕೊಟ್ಟು ಮತ್ತು ಚಾಲನೆಗೊಳಿಸುವ ಅವಶ್ಯಕ ನಿಯಮ ಹಾಗೂ ಸಂಸ್ಕೃತಿಯ ನಿರ್ಮಾಣ ಮಾಡುವುದು ಮತ್ತು ಮಾಡಿಸುವುದು ಆಗಬೇಕಾಗಿದೆ. ......... ಇತ್ಯಾದಿ.

***

# 6. ಭ್ರಷ್ಟವಿರೋಧಿ ಶಾಸ್ತ್ರದ ನಾಮಕರಣ
## (Naming of Anticurruptology)

ಭ್ರಷ್ಟಾಚಾರವು ಸಾಮಾಜಿಕ ಸಮಸ್ಯೆಯಾಗಿದೆ. ಆದ್ದರಿಂದ ಸಾಮಾಜಿಕ ಸಮಸ್ಯೆಯನ್ನು ಆಳವಾಗಿ ಅಧ್ಯಯನ ಮಾಡುವ ಸ್ಥಿತಿಯುಂಟಾಯಿತು.

ನಿಷ್ಕರ್ಷವಾಗಿ ಹೇಳುವುದಾದರೆ, ಭ್ರಷ್ಟಾಚಾರವು ಸಾಮಾಜಿಕ ಸಮಸ್ಯೆಗಿಂತ ಭಿನ್ನ ಪ್ರಕೃತಿಯ ಸಮಸ್ಯೆಯೆಂದು ತಿಳಿಯಲ್ಪಡುತ್ತದೆ. ಇದನ್ನು ಸಮಾಜ ಶಾಸ್ತ್ರದ ಅಂಗವಾಗಿ ಸ್ವೀಕರಿಸಿದಾಗ ಇದರ ವ್ಯಾಪ್ತಿ ಸಂಕುಚಿತವಾಗುತ್ತದೆ. ಇದಕ್ಕಾಗಿ, ಇದನ್ನು ಬೇರೊಂದು ರೂಪದಲ್ಲಿ ಸ್ವೀಕರಿಸಿ, ಇದರ ವಿಸ್ತೃತವಾಗಿ ಅಧ್ಯಯನ ಮಾಡಲಾಯಿತು. ಕ್ರಮವಾದ ಅಧ್ಯಯನದಿಂದ ದೃಢಪಟ್ಟಿರುವುದೆಂದರೆ, ಇದು ಕೇವಲ ಸಾಮಾಜಿಕ ಸಮಸ್ಯೆಯಲ್ಲ, ಬದಲಾಗಿ, ಸಾಮಾಜಿಕ ರೋಗವೂ ಆಗಿದೆ. ಈ ರೋಗ ಮಾನವರಿಗೆ ಬರುವ ಸಾಂಕ್ರಾಮಿಕ ರೋಗದಂತೆಯೇ ಎಂದು ತಿಳಿಯಲಾಗಿದೆ. (ಒಪ್ಪಿತವಾಗಿದೆ) ರೋಗ ಇದೆ, ಅದರ ಸುಳಿವು ಸಿಕ್ಕಿದ ಮೇಲೆ ನಿವಾರಣೆಯ ಸಂಭವವು ದೃಢವಾಯಿತು.

ಭ್ರಷ್ಟಾಚಾರ ರೋಗವಾಗಿದೆ ಎಂಬುದನ್ನು ನಿರ್ಣಾಯಕವಾಗಿ ಒಪ್ಪಲಾಗಿದೆ. ಹಾಗಾಗಿ, ಇದರ ರೋಗ ಶೋಧವೂ ಸಂಭವವಿದೆ. ಇದಕ್ಕೆ ಔಷಧಿ ಮತ್ತು ವಿಧಾನದ ಪರಿಚಯವಾದ ಮೇಲೆ ಚಿಕಿತ್ಸಾ ವಿಜ್ಞಾನದಂತೆ ಮುಂದುವರಿಯುವ ನಿರ್ಣಯ ಕೈಗೊಳ್ಳಲಾಯಿತು. ಅದು ರೋಗ ಬಾರದಿರಲೆಂಬ ರೀತಿಯಾಗಿದೆ. ಒಂದು ವೇಳೆ ರೋಗ ತಗುಲಿದರೆ, ಆಗ ಅದರ ಚಿಕಿತ್ಸೆಗಾಗಿ ಸಾಧಾರಣ ಔಷಧಿಯ ಉಪಚಾರ ಪ್ರಾರಂಭಿಸುವುದು. ಹಾಗೂ ಸಾಧಾರಣ ಉಪಚಾರದಿಂದ ರೋಗದಲ್ಲಿ ಪರಿಹಾರ ಅಸಂಭವಾದಾಗ ಎಂ ಟಿ ಬಯೋಟಿಕ್ ನ ಪ್ರಯೋಗ

ಮಾಡುವುದು, ಇದರಿಂದಲೂ ರೋಗ ಗುಣವಾಗದಿದ್ದಲ್ಲಿ ಶರೀರವನ್ನು ಭಾಗವಾಗಿ ಕತ್ತರಿಸಿ ತೆಗೆಯುವುದು, ಇಂತಹುದೇ ಚಿಕಿತ್ಸಕೀಯ ನೀತಿಗನುಸಾರವಾಗಿ 'ಭ್ರಷ್ಟ ವಿರೋಧಿ ಶಾಸ್ತ್ರ ವಿಜ್ಞಾನ' ದ ರೂಪದಲ್ಲಿ ವಿಕಸಿತವಾಯಿತು. ಭ್ರಷ್ಟ ವಿರೋಧಿ ವಿಜ್ಞಾನ ಸಿದ್ಧವಾದ ನಂತರ ಅದಕ್ಕೆ ನಾಮಕರಣದ ವಿಚಾರ ಎದುರಾಯಿತು. ಆಗ ಅನೇಕ ಸಂಭಾವ್ಯ ನಾಮಗಳು ಗೋಚರಕ್ಕೆ ಬಂದವು.

01. ಭ್ರಷ್ಟಾಚಾರ ನಿಯಂತ್ರಣದ ವಿಜ್ಞಾನ, 02. ಚರಿತ್ರ ವಿಜ್ಞಾನ.

03. ಭ್ರಷ್ಟಾಚಾರ ನಿಯಂತ್ರಣದ ಸ್ಥಾಪನೆ. 04. ಭ್ರಷ್ಟ ವಿರೋಧಿ ಶಾಸ್ತ್ರ.

**01. ಭ್ರಷ್ಟಾಚಾರ ನಿಯಂತ್ರಣದ ವಿಜ್ಞಾನ (Corruption Preventive Science)**

ಭ್ರಷ್ಟಾಚಾರ ವಿರುದ್ಧದ ವಿಜ್ಞಾನದ ಹೆಸರು ಭ್ರಷ್ಟಾಚಾರ ನಿಯಂತ್ರಣದ ವಿಜ್ಞಾನವೆಂದು ಇಟ್ಟಿದ್ದರು, ಸರಿಯಾಗುತ್ತಿತ್ತು. ಭ್ರಷ್ಟಾಚಾರ ನಿಯಂತ್ರಣವೆಂದು ಹೇಳುವುದರೊಂದಿಗೆ ಯಾವುದೋ ಒಂದು ಪದ್ಧತಿಯ ವಿಕಾಸವೆಂಬಂ ತೆ ಕಂಡುಬರುತ್ತದೆ. ಈ ಹೆಸರಿನೊಂದಿಗೆ ಪದ್ಧತಿಯ ವಿಕಾಸ ಕಂಡು ಬರುತ್ತದೆ. ಈ ಹೆಸರಿನಿಂದ ಅದರ ಮೇರೆಯಿಂದಾಚೆ ಅದು ಹೋಗದಂತಹ ಪರಿಸ್ಥಿಯು ಉಂಟಾಗಬಹುದು. ಹಾಗಾಗಿ ಈ ಕ್ಷೇತ್ರಕ್ಕೆ ವಿಸ್ತೃತ ವಿಕಾಸ ಮಾಡತಕ್ಕಂತಹ ಒಂದು ಹೆಸರು ಬೇಕೆಂಬ ಅವಶ್ಯಕತೆಯ ಮನವರಿಕೆಯಾಯಿತು. ಆದ್ದರಿಂದ ಭ್ರಷ್ಟಾಚಾರ ನಿಯಂತ್ರಣದ ವಿಜ್ಞಾನ ಅರ್ಥಪೂರ್ಣವಲ್ಲ ಎನಿಸಿತು.

**02. 'ಚರಿತ್ರ ವಿಜ್ಞಾನ' (Character Science) :–** ಭ್ರಷ್ಟಾಚಾರದ ವಿಜ್ಞಾನವು ವ್ಯಕ್ತಿಯ ಚಾರಿತ್ರ್ಯಕ್ಕೆ ಸಂಬಂಧಿಸಿದ ವಿಷಯವಾಗಿದೆ. ಮನುಷ್ಯನ ಶಾರೀರಿಕ, ಮಾನಸಿಕ, ಆರ್ಥಿಕ, ಸಾಮಾಜಿಕ, ರಾಜ ನೈತಿಕ ವಿಕಾಸವೇ ವ್ಯಕ್ತಿಯ ಚರಿತ್ರವನ್ನು ನಿರ್ಧರಿಸುತ್ತದೆ. ಸಚ್ಚರಿತ್ರ ವ್ಯಕ್ತಿ ಭ್ರಷ್ಟನಾಗಿರುವುದಿಲ್ಲ. ಹಾಗೂ ಸಂಸ್ಥೆಗಳಲ್ಲೂ ಭ್ರಷ್ಟಾಚಾರದ ವಿಕಾಸವಾಗಲು ಬಿಡಲಾರ. ಚರಿತ್ರವಿಜ್ಞಾನ, ವ್ಯಕ್ತಿ, ಸಮುದಾಯ ಮತ್ತು ಸಮಾಜದಲ್ಲಿ ಸುಖಿ ಸಮೃದ್ಧ ಜೀವನ ಹೇಗೆ ಮಾಡಬಹುದು.ಎಂಬುದರ ಮೂಲಸ್ವರೂಪವನ್ನು ತಿಳಿಸುತ್ತದೆ. ಚರಿತ್ರ ವಿಜ್ಞಾನ ಅಥವಾ ಆಚಾರ ವಿಚಾರ ವಿಜ್ಞಾನವನ್ನೊಳಗೊಂಡ ವ್ಯಕ್ತ ಸಮಾಜವು ಯಾವಾಗಲೂ ಒಳ್ಳೆಯ ಉನ್ನತಿಶೀಲ (ಪ್ರಗತಿಪರ) ಕಾರ್ಯವನ್ನೇ ಮಾಡುತ್ತಾನೆ. ಆದ್ದರಿಂದ ಭ್ರಷ್ಟವಿರೋಧಿ ವಿಜ್ಞಾನದಲ್ಲಿ ಮಾನವ ಚಾರಿತ್ರ್ಯ ಮತ್ತು ಆಚಾರಕ್ಕೆ ಮಹತ್ವ ಪೂರ್ಣವಾದ ಸ್ಥಾನವಿದೆ. ನಾವು ಚಾರಿತ್ರ್ಯ ವಿಜ್ಞಾನವನ್ನೇ ಭ್ರಷ್ಟವಿರೋಧಿ ವಿಜ್ಞಾನವೆಂಬುದಾಗಿ ವಿವೇಚನೆ ಮಾಡಬಹುದಾಗಿದೆ.

## 03. ಭ್ರಷ್ಟಾಚಾರ ನಿಯಂತ್ರಣದ ವ್ಯವಸ್ಥಾಪನೆ (Corruption Preventive Management)

ಭ್ರಷ್ಟಾಚಾರ ನಿಯಂತ್ರಣಕ್ಕಾಗಿ ಭ್ರಷ್ಟಾಚಾರ ನಿಯಂತ್ರಣದ ವ್ಯವಸ್ಥಾಪನೆಯು ಸಹ ಅರ್ಥಪೂರ್ಣವಾಗಿ ಕಂಡುಬರುತ್ತದೆ. ವ್ಯವಸ್ಥಾಪನೆಗೆ (ವ್ಯವಸ್ಥೆಗೊಳಪಟ್ಟದ್ದು) ಸಂಬಂಧಿತ ನಿಯಮಾನುಸಾರ ನಿಯಂತ್ರಣದ ಉಪಾಯಗಳನ್ನು ಶೋಧಿಸುವುದೂ ಸಹಜವೇ ಆಗಿದೆ. ವಾಸ್ತವವಾಗಿ ನಿಯಂತ್ರಣ ನಿಯಮದ ವಿಕಾಸ ಮಾಡಿ, ಭ್ರಷ್ಟಾಚಾರವನ್ನು ಶೂನ್ಯ ಸಹನಶೀಲತೆಯ ಸ್ಥಿತಿಗೆ ಕೊಂಡೊಯ್ಯುವ ವಿಶೇಷ ನಿಯಮದ ವ್ಯವಸ್ಥಾಪನೆಯ ಸಿದ್ಧಾಂತದಲ್ಲಿ ಒಳಗೊಂಡಂತೆ ಕಂಡುಬರುತ್ತದೆ. ಭ್ರಷ್ಟಾಚಾರ ನಿಯಂತ್ರಣದ ವ್ಯವಸ್ಥಾಪನ ಸಿದ್ಧಾಂತದ ಅನುಸಾರವಾಗಿಯೂ ಭ್ರಷ್ಟವಿರೋಧಿ ವಿಜ್ಞಾನವನ್ನು ಪರಿಚಯಿಸಬಹುದಾಗಿದೆ.

## 04. ಭ್ರಷ್ಟವಿರೋಧಿ ಶಾಸ್ತ್ರ (Anticurruptology)

ಭ್ರಷ್ಟವಿರೋಧಿ ವಿಜ್ಞಾನಕ್ಕೆ ಎಲ್ಲದಕ್ಕಿಂತ ಹೆಚ್ಚು ಸೂಕ್ತವೆನಿಸುವುದು– ಭ್ರಷ್ಟ ವಿರೋಧಿ ಶಾಸ್ತ್ರವೇ ಆಗಿದೆ. ಭ್ರಷ್ಟ ವಿರೋಧಿ ಅಂದರೆ ಭ್ರಷ್ಟಾಚಾರದೊಂದಿಗೆ ಸಂಬಂಧಿಸಿದ ಎಲ್ಲಾ ರೀತಿಯ ಕ್ರಿಯಾಕಲಾಪಗಳನ್ನು ಅಧ್ಯಯನದಲ್ಲಿ ಸೇರಿಸಿಕೊಳ್ಳುವ ಸಾಮರ್ಥ್ಯವಿರುವುದು ಭ್ರಷ್ಟ ಮತ್ತು ವಿರೋಧಿ, ಈ ಎರಡು ಶಬ್ದಗಳು ಸೇರಿ 'ಭ್ರಷ್ಟವಿರೋಧಿ' ಎಂಬ ಒಂದು ಶಬ್ದವಾಗುತ್ತದೆ. ಇದು ವಿಶೇಷ ಅರ್ಥವನ್ನು ನೀಡುತ್ತದೆ. ಶಾಸ್ತ್ರದಲ್ಲಿ ವಿಷಯ ಸಂಬಂಧಿತವಾಗಿ ವಿಸ್ತೃತ ಅಧ್ಯಯನ ಮಾಡಲು ಉತ್ತಮ ವಿಷಯಗಳು ಒಳಗೊಂಡಿರುವುದು ಅವಶ್ಯಕವಾಗಿದೆ. ಇದಕ್ಕಾಗಿ 'ಭ್ರಷ್ಟವಿರೋಧಿ ಶಾಸ್ತ್ರ'ವು ಭ್ರಷ್ಟಾಚಾರದೊಂದಿಗೆ ಸಂಬಂಧಿತ ಮತ್ತು ಅದನ್ನು ತಡೆಗಟ್ಟುವ ನಿಯಮ, ವ್ಯವಸ್ಥಾಪನೆಯ ನೀತಿ, ನಿಯಂತ್ರಿಸುವ ಪದ್ಧತಿ ಮತ್ತು ವಿಶೇಷಾಧ್ಯಯನದ ವಿಸ್ತೃತವಾದ ಅಧ್ಯಯನದ ಶಾಸ್ತ್ರವಾಗಿದೆ.

ಮೇಲೆ ಉಲ್ಲೇಖಿಸಲಾದ 1. ಭ್ರಷ್ಟಾಚಾರ ನಿಯಂತ್ರಣದ ವಿಜ್ಞಾನವಾಗಿದೆ. 2. ಚರಿತ್ರ ವಿಜ್ಞಾನ . 3. ಭ್ರಷ್ಟಾಚಾರ ನಿಯಂತ್ರಣದ ವ್ಯವಸ್ಥಾಪನೆ, ಈ ಮೂರು ಶೀರ್ಷಿಕೆಗಳು ಉಪಯುಕ್ತವೇ ಆಗಿವೆ. ಆದರೆ ಈ ಮೂರಕ್ಕಿಂತಲೂ ಅಧಿಕ ಉಪಯುಕ್ತ (4) ನೆಯ ಶೀರ್ಷಿಕೆ. ಇದರಲ್ಲಿ ಉಲ್ಲೇಖಿತ ಭ್ರಷ್ಟ ವಿರೋಧಿ ಶಾಸ್ತ್ರವೇ ಹೆಚ್ಚು ಸೂಕ್ತ ಮತ್ತು ವಿಷಯ ವಸ್ತುವಿನ ದೃಷ್ಟಿಯಲ್ಲಿ ಹೆಚ್ಚು ಹತ್ತಿರವಾಗಿದೆ. ಏಕೆಂದರೆ ಇದರೊಳಗೆ ಅಧ್ಯಯನಕ್ಕಿರುವ ಎಲ್ಲಾ ಕ್ಷೇತ್ರಗಳನ್ನೂ ಒಟ್ಟುಗೂಡಿಸುವ ಸಾಮರ್ಥ್ಯವಿದೆ. ಭ್ರಷ್ಟಾಚಾರ ವಿರುದ್ಧದ ವಿಜ್ಞಾನವೆನ್ನುವುದರಲ್ಲಿ ಭ್ರಷ್ಟಾಚಾರದ ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡೂ ಪಕ್ಷಗಳ ಅಧ್ಯಯನ

ಸಂಭವನೀಯವಾಗಿದೆ. ಇದರೊಂದಿಗೆ ಭ್ರಷ್ಟಾಚಾರ ವಿರುದ್ಧದ ಅಧ್ಯಯನ ಸಂಭವನೀಯವಾಗಿದೆ. ಇದರೊಂದಿಗೆ ಭ್ರಷ್ಟಾಚಾರದ ವಿರುದ್ಧದ ಅಧ್ಯಯನ ಕ್ರಮದಲ್ಲಿ ಯಾವ ತತ್ವದ ವಿಶ್ಲೇಷಣೆಯಿಂದ ಉಪಾಯವನ್ನು ಕಂಡು ಹಿಡಿಯಬಹುದು ಮತ್ತು ಯಾವ ವಿಶೇಷ ನಿಯಮದ ವಿಕಾಸದಿಂದ ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣ ಮಾಡಬಹುದಾಗಿದೆ. ಇದರ ಅಧ್ಯಯನವೂ ಅವಶ್ಯಕವಾಗಿದೆ. ಭ್ರಷ್ಟವಿರೋಧಿ ಶಾಸ್ತ್ರದೊಳಗೆ (ಆಂತರ್ಯದಲ್ಲಿ) ಭ್ರಷ್ಟಾಚಾರ ವಿರುದ್ಧದ ಎಲ್ಲಾ ಪಕ್ಷಗಳ ಅಧ್ಯಯನ ನಡೆಯುತ್ತದೆ. ಇದಕ್ಕಾಗಿಯೇ ಭ್ರಷ್ಟವಿರೋಧಿ ಹೆಸರು ಎಲ್ಲಕ್ಕಿಂತ ಹೆಚ್ಚು ಉಪಯುಕ್ತವಾಗಿದೆ.

ಭ್ರಷ್ಟಾಚಾರ ವಿಷಯ ಮತ್ತು ಮಾನವರೋಗದ ವಿಷಯಗಳ ಪ್ರಕೃತಿಯಲ್ಲಿ (ಮೂಲಗುಣ) ಹೋಲಿಕೆ ಇರುವುದರಿಂದ ಭ್ರಷ್ಟಾಚಾರ ವಿರುದ್ಧ ವಿಜ್ಞಾನ ಮತ್ತು ಚಿಕಿತ್ಸಾ ವಿಜ್ಞಾನ (ಮೆಡಿಕಲ್ ಸೈನ್ಸ್) ಎರಡೂ ಜೊತೆಗೂಡಿವೆ. ಚಿಕಿತ್ಸಾ ವಿಧಾನದ ಸಿದ್ಧಾಂತ, ವ್ಯಾಖ್ಯಾನ, ನಿಯಮ, ಪದ್ಧತಿ ಮತ್ತು ನಿರ್ಣಯಗಳಂತೆಯೇ 'ಭ್ರಷ್ಟವಿರೋಧಿ' ಶಾಸ್ತ್ರದ ಸ್ವರೂಪವೂ ಆಗಿದೆ. ಇದಕ್ಕಾಗಿ ವರ್ತಮಾನ ಸ್ಥಿತಿಯಲ್ಲಿ ಇದರ ಅಧ್ಯಯನ ಹೇಗೇ ಇದ್ದರೂ ಭವಿಷ್ಯದಲ್ಲಿ ಇದರೊಳಗೆ ರೋಗದ ಆಧಾರದಲ್ಲಿ ಚಿಕಿತ್ಸಾ ಪದ್ಧತಿಯ ನಿರ್ಮಾಣ ಆಗುತ್ತಾ ಹೋಗುವುದು. ಈ ರೀತಿಯಲ್ಲಿ ಸಮಯ ಹಾಗೂ ವಿಷಯಕ್ಕನುಸಾರವಾಗಿ ವ್ಯಾಖ್ಯಾನ ವಿಶ್ಲೇಷಣೆಗಳನ್ನು ಮಾಡುತ್ತಾ ಚಿಕಿತ್ಸೆಯ ಪದ್ಧತಿಯ ನಿರ್ಮಾಣವನ್ನು ಭ್ರಷ್ಟವಿರೋಧಿ ಶಾಸ್ತ್ರ ಮಾಡಬಹುದಾಗಿದೆ.

ವರ್ತಮಾನ ಸ್ಥಿತಿಯಲ್ಲಿ 'ಭ್ರಷ್ಟವಿರೋಧಿ ಶಾಸ್ತ್ರ' ಎಂಬ ಹೆಸರೇ ಉಪಯುಕ್ತವಾಗಿದೆ. ನಂತರದಲ್ಲಿ ಸಮಯಾನುಸಾರವಾಗಿ ಇದರಲ್ಲಿ ಪರಿವರ್ತನೆ ಮಾಡಬಹುದಾಗಿದೆ.

***

# 7. ಅಧ್ಯಯನದ ಅವಶ್ಯಕತೆ
# (Necesity of the Study of Aniticorruptology)

ಸೃಷ್ಟಿ ಕಾಲದಿಂದಲೂ ಸಮಾಜದಲ್ಲಿ ಅನೇಕ ರೀತಿಯ ಸಮಸ್ಯೆಗಳು ಉತ್ಪನ್ನವಾಗುತ್ತಿರುತ್ತವೆ. ಕಾಲ ಕಾಲಕ್ಕೂ ಉತ್ಪನ್ನವಾಗುವ ಮತ್ತು ಇಂತಹ ಸಮಸ್ಯೆಗಳಿಗೆ ಪರಿಹಾರವೂ ಕೂಡ ಸಮಾಜದಲ್ಲಿ ಅಂತರ್ನಿಹಿತವಾಗಿರುತ್ತದೆ. ಮಾನವೀಯ ಸಮಾಜದಲ್ಲಿ ಸಮಯಾನುಸಾರವಾಗಿ ಸಮಸ್ಯೆಗಳು ಬರುತ್ತಲೇ ಇರುತ್ತವೆ ಮತ್ತು ಸಮಾಜವನ್ನು ಸಮಸ್ಯಾಗ್ರಸ್ತಗೊಳಿಸುತ್ತವೆ. ಇವುಗಳನ್ನು ಪರಿಹರಿಸುವುದಕ್ಕೂ ಉಪಾಯ ಕಂಡು ಹಿಡಿಯಲಾಗುತ್ತದೆ. ಮಾನವ ಸಮಾಜದಲ್ಲಿ ಉತ್ಪನ್ನವಾಗುವ ಯಾವುದೇ ಸಮಸ್ಯೆಯ ಪ್ರತಿರೋಧ ಮಾಡುವುದು ಮತ್ತು ಅದಕ್ಕೆ ಸಮಾಧಾನ ಕಂಡುಹಿಡಿಯುವುದು ನಡೆಯುತ್ತಲೇ ಇರುತ್ತದೆ.

ಇದೇ ಕ್ರಮದಲ್ಲಿ ವಿಶ್ವದ ಎಲ್ಲಾ ದೇಶಗಳಲ್ಲಿ ಭ್ರಷ್ಟಾಚಾರವು ಸಮಸ್ಯೆಯ ರೂಪದಲ್ಲಿ ವಿಕಸಿತವಾಗುತ್ತಿದೆ. ಈ ಸಮಸ್ಯೆಯು ವಿಕಾಸಗೊಳ್ಳುತ್ತಾ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಜೀವನವನ್ನೇ ಮುಗಿಸುವಂತಹ ಮಹಾಮಾರಿಯ ರೂಪದಲ್ಲಿ ಸ್ಥಾಪಿತವಾಗಿದೆ. ದೇಶದ ರಾಜನೈತಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳಿಗನುಗುಣವಾಗಿ ಭ್ರಷ್ಟಾಚಾರವು ತನ್ನ ಭಿನ್ನ ಪ್ರಕೃತಿಗನುಗುಣವಾಗಿ ಪ್ರವೇಶಿಸುತ್ತಿರುತ್ತದೆ. ಹಾಗೂ ಎಲ್ಲಾ ದೇಶಗಳಲ್ಲಿ ಇದರ ಪ್ರಭಾವ ಸ್ಥಾಪಿತವಾಗುತ್ತದೆ.

ಮಾನವ ಜೀವನ ವಿಕಾಸ ಕ್ರಮದಲ್ಲಿ ಮಾನವ ಜೀವನವನ್ನು ಮುಗಿಸಲೋಸುಗ ಅನೇಕ ರೀತಿಯ ಮಹಾಮಾರಿಗಳಾದ ಪ್ಲೇಗು, ಕ್ಷಯ, ದಡಾರ, ಲೈಂಗಿಕ ಮುಂತಾದ ರೋಗಗಳು ಸಾವಿರಾರು ಮಾನವ ಜೀವನಗಳನ್ನು ಮುಗಿಸಿವೆ. ಯಾವಾಗ ರೋಗ ಹರಡುತ್ತದೋ ಆ ಸಮಯದಲ್ಲಿ ಚಿಕಿತ್ಸಾ

ವಿಧಾನಗಳಿಲ್ಲದಿರುವುದರಿಂದಲೂ ರೋಗದ ಅತಿಕ್ರಮಣವಾಗುವುದರಿಂದ ಆಗ ರೋಗವನ್ನು ನಾಶಪಡಿಸುವುದಕ್ಕಲ್ಲ ಬದಲಾಗಿ ರೋಗದ ಮೇಲೆ ಪೂರ್ಣ ನಿಯಂತ್ರಣ ಸಾಧಿಸುವ ವಿಧಾನದಿಂದ ಚಿಕಿತ್ಸಾ ವಿಜ್ಞಾನದ ನಿರ್ಮಾಣ ಮಾಡಿ, ಮಾನವ ಜೀವನದ ರಕ್ಷಣೆ ಮಾಡಿದೆ. ಇದೇ ರೀತಿ ವಿಶ್ವದ ಎಲ್ಲಾ ಕಡೆ ಹರಡಿರುವ ಈ ಮನೋರೋಗವನ್ನು ಮತ್ತಷ್ಟು ಹರಡದಂತೆ ಮತ್ತು ನಿಯಂತ್ರಿತ ಸ್ಥಿತಿಯಲ್ಲಿರಿಸಲು, ಭ್ರಷ್ಟವಿರೋಧಿ ಶಾಸ್ತ್ರದ ಪ್ರಾದುರ್ಭಾವ ಆಗಿದೆ. ಹಾಗೇ ಈ ವಿಷಯದ ಅಧ್ಯಯನವೂ ಅವಶ್ಯಕವಾಗಿದೆ.

ಭ್ರಷ್ಟಾಚಾರವು ಸಾಮಾಜಿಕ ಸಮಸ್ಯೆಯಾಗಿದೆ. ಅರ್ಥಾತ್ ಸಾಮಾಜಿಕ ರೋಗವಾಗಿದೆ. ರೋಗವೆಂದೊಡನೆ ಇದರ ಉಪಶಮನವೂ ಸಂಭವನೀಯ ವಾಗಿದೆ. ರೋಗದ ಉಪಚಾರ (ಶಮನಕ್ಕೆ) ಔಷಧಿಯ ವಿಧಾನವಿದೆ. ಔಷಧದ ವಿಧಿ ವಿಧಾನದ ವಿಜ್ಞಾನದಿಂದ ಔಷಧ ಉತ್ಪಾದಿಸಿ ಅವರ ಚಿಕಿತ್ಸೆಯಿಂದ ರೋಗವನ್ನು ನಿಯಂತ್ರಿಸಲಾಗುತ್ತದೆ. ಇದೇ ರೀತಿ ಭ್ರಷ್ಟಾಚಾರದಂತಹ ಮಾನಸಿಕ ರೋಗದ ಉಪಚಾರಕ್ಕಾಗಿ ಕೂಡ ಅಧ್ಯಯನ ಅಧ್ಯಾಪನದ ವಿಧಾನಗಳ ನಿರ್ಮಾಣದ ಅವಶ್ಯಕತೆ ಇದೆ. ಇದನ್ನು ಈ ಕೆಳಗೆ ನಿರೂಪಿಸಿದಂತೆ ಸಿದ್ಧಗೊಳಿಸಲಾಗಿದೆ.

1. ಸಂಶೋಧನೆ ಕಾರ್ಯದ ಆರಂಭ
2. ಸ್ನಾತಕೋತ್ತರ ಮಟ್ಟದ ತರಗತಿಯ ಪ್ರಾರಂಭ
3. ವಿದ್ಯಾವಾರಿಧಿ ಹಾಗೂ ಅನುಸಂಧಾನ
4. ಭ್ರಷ್ಟವಿರೋಧಿ ಪ್ರಾಜ್ಞರ ಸಿದ್ಧತೆ
5. ಲೇಖನ ಪಠ್ಯ ಸಾಮಗ್ರಿಗಳು
6. ಶಾಲೆಯಿಂದಲೇ ಪಠನ ಪಾಠನದ ಪ್ರಾರಂಭ

**1. ಶೋಧ ಕಾರ್ಯದ ಪ್ರಾರಂಭ :– Starting of Research**

ಅಧ್ಯಯನದ ಸ್ಥಾನವು ವಿಶ್ವವಿದ್ಯಾಲಯವಾಗಿರುವುದರಿಂದ ಉಚ್ಚ ಶಿಕ್ಷಣದಲ್ಲಿ ಸ್ನಾತಕ ಅಥವಾ ಸ್ನಾತಕೋತ್ತರ ತರಗತಿಗಳ ವಿದ್ಯಾರ್ಥಿಗಳಿಂದ ಭ್ರಷ್ಟಾಚಾರ ವಿರುದ್ಧದ ವಿಷಯದಲ್ಲಿ ಶೋಧಕಾರ್ಯದ ಆರಂಭ ಮಾಡಿಸಬೇಕಾಗಿದೆ. ಭ್ರಷ್ಟಾಚಾರ ನಿಯಂತ್ರಣ ವಿಧಾನವನ್ನು ಮೂಲ ವಿಷಯವನ್ನಾಗಿಸಿ, ಅದಕ್ಕೆ ಸಂಬಂಧಿಸಿದ ವಿಷಯದಲ್ಲಿ ಶೋಧಕಾರ್ಯ ಮಾಡಬಹುದಾಗಿದೆ. ಈ ರೀತಿಯಲ್ಲಿ

ಶೋಧ ಕಾರ್ಯವನ್ನು ಮಾಡಿಸುವುದೇ ಅಧ್ಯಯನದ ಆರಂಭವಾಗಿದೆ.

**2. ಸ್ನಾತಕೋತ್ತರ ಮಟ್ಟದ ತರಗತಿಯ ಆರಂಭ (Strarting the Post graduate study)**

ಶಾಲೆಗಳಲ್ಲಿ ಭ್ರಷ್ಟವಿರೋಧಿ ವಿಷಯಗಳ ಕಲಿಕೆ, ಕಲಿಸುವಿಕೆ ಇಲ್ಲದಿರುವ ಕಾರಣ, ಪ್ರಪ್ರಥಮವಾಗಿ ಇದೇ ವಿಷಯವನ್ನು ಸ್ನಾತಕೋತ್ತರ ಸ್ತರದಲ್ಲಿ ಅಧ್ಯಯನ ಅಧ್ಯಾಪನವನ್ನು ಪ್ರಾರಂಭಿಸುವ ಅವಶ್ಯಕತೆ ಇದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ, ರಾಜನೀತಿ ಶಾಸ್ತ್ರ, ಅರ್ಥ ಶಾಸ್ತ್ರ, ಸಮಾಜ ಶಾಸ್ತ್ರ, ಗ್ರಾಮೀಣ ವಿಕಾಸ ಶಾಸ್ತ್ರ ಜನ ಪ್ರಶಾಸನ, (ಜನಾಡಳಿತ ) ಪತ್ರೋದ್ಯಮ ವ್ಯವಸ್ಥಾಪನೆ ಮತ್ತು ಕಾನೂನು ಇತ್ಯಾದಿ ವಿಷಯವನ್ನೊಳಗೊಂಡು ಅಧ್ಯಯನ ಪ್ರಾರಂಭಿಸಬಹುದಾಗಿದೆ. ಮೂಲ ವಿಷಯ 'ಭ್ರಷ್ಟ ವಿರೋಧಿ' ಯಾಗಿರುವುದರಿಂದ ಸ್ನಾತಕೋತ್ತರದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಸಾಮಾನ್ಯ ಪ್ರಾಜ್ಞರಾಗಿ ಸಿದ್ಧಗೊಳ್ಳಬಹುದು.

**3. ವಿದ್ಯಾ ವಾರಿಧಿ ಹಾಗೂ ಅನುಸಂಧಾನ (Ph.D and Investigation)**


ಸ್ನಾತಕೋತ್ತರ ಉತ್ತೀರ್ಣರಾದ ವಿದ್ಯಾರ್ಥಿಗಳು ವಿದ್ಯಾವಾರಿಧಿಯ (Ph.D) ಶೋಧ ಕಾರ್ಯ ಮತ್ತು ಅನುಸಂಧಾನವನ್ನು ಪ್ರಾರಂಭಿಸಿದರಾದರೆ, ಇನ್ನಿತರರಿಗೂ ಈ ವಿಷಯದ ಕುರಿತು ಆಸಕ್ತಿ ಆಕರ್ಷಣೆ ಹೆಚ್ಚಾಗಬಹುದು.

**4. ಭ್ರಷ್ಟವಿರೋಧಿ ವಿಷಯದಲ್ಲಿ ಸಿದ್ಧರಾದ ಪ್ರಾಜ್ಞರು (Preparation of Anticorruption)** ಈ ರೀತಿಯಲ್ಲಿ ಸ್ನಾತಕೋತ್ತರ ಅಧ್ಯಯನ ಮಾಡಿ ಭ್ರಷ್ಟವಿರೋಧಿ ವಿಷಯದಲ್ಲಿ ವಿದ್ಯಾವಾರಿಧಿ ((Ph.D ) ಮಾಡಿದ ನಂತರ ಪೂರ್ಣ ಪ್ರಾಜ್ಞ ಜನಶಕ್ತಿ ತಯಾರಾಗಬಹುದು.

**5. ಪಾಠ್ಯ ಸಾಮಗ್ರಿ ಲೇಖನ (Booklets and Course of Study)** ಪ್ರಾಜ್ಞ ಜನಶಕ್ತಿಯ ಮೂಲಕ ಶಾಲಾ ಮಟ್ಟದಿಂದ ಉಚ್ಚ ಶಿಕ್ಷಣದವರೆಗಿನ ವಿದ್ಯಾರ್ಥಿಗಳಿಗಾಗಿ ಪಠ್ಯ ಸಾಮಗ್ರಿಯನ್ನು ಸಿದ್ಧಗೊಳಿಸಬಹುದು.

**6. ಶಾಲೆಯ ಹಂತದಿಂದ ಅಧ್ಯಯನ- ಅಧ್ಯಾಪನ ಪ್ರಾರಂಭ (Study from School level )** ಈ ರೀತಿಯ ಪಠ್ಯ ಸಾಮಗ್ರಿ ಸಿದ್ಧವಾದ ನಂತರ ಶಾಲೆಯಿಂದ ಉನ್ನತ ಶಿಕ್ಷಣದವರೆಗೆ ಭ್ರಷ್ಟವಿರೋಧಿ ಅಧ್ಯಯನ-ಅಧ್ಯಾಪನ ಆರಂಭ ವಾಗಬಹುದು.

ಅಧ್ಯಯನ – ಅಧ್ಯಾಪನದ ಕ್ರಮವನ್ನು ಈ ಕೆಳಗೆ ಕೊಟ್ಟಿರುವುದನ್ನು ನೋಡೋಣ.




ಕ್ರಮಶಃ 1. ಶೋಧಕಾರ್ಯದ ಆರಂಭ. 2. ಸ್ನಾತಕೋತ್ತರ ತರಗತಿಯ ಆರಂಭ. 3. ವಿದ್ಯಾವಾರಿಧಿ ಮತ್ತು ಅನುಸಂಧಾನ.4. ಭ್ರಷ್ಟವಿರೋಧಿ ಪ್ರಾಜ್ಞ ಸಿದ್ಧತೆ. 5. ಪಠ್ಯ ಸಾಮಗ್ರಿ ಲೇಖನ. 6.ಶಾಲಾ ಹಂತದಿಂದ ಅಧ್ಯಯನ – ಅಧ್ಯಾಪನ ಪ್ರಾರಂಭ ಮಾಡಿ, ಭ್ರಷ್ಟಾಚಾರ ವಿರುದ್ಧದ ಅಧ್ಯಯನ ಪ್ರಾರಂಭಿಸುವ ಅವಶ್ಯಕತೆ ಇದೆ.

ಭ್ರಷ್ಟವಿರೋಧಿ ಅಧ್ಯಯನ – ಅಧ್ಯಾಪನ ಇಂದಿನ ಅವಶ್ಯಕತೆಯಾಗಿದೆ. ವಿಶ್ವದ ಎಲ್ಲಾ ದೇಶಗಳು ಭ್ರಷ್ಟಾಚಾರದಂತಹ ಸಾಂಕ್ರಾಮಿಕ ರೋಗದಿಂದ ಗ್ರಸ್ತವಾಗಿದೆ. ಇದಕ್ಕಾಗಿ ಈ ಸಂಕ್ರಮಿತ ( ರೋಗ ) ಪ್ರಕೃತಿಯ ಮನೋರೋಗದ ನಿಯಂತ್ರಣವು, ಪ್ರಾಜ್ಞ ಜನಶಕ್ತಿ ಉತ್ಪಾದನೆಯಿಂದ ಸಂಭವವಾಗಬಹುದು.

***

# 8. ಭ್ರಷ್ಟವಿರೋಧಿ ಶಾಸ್ತ್ರದ ಗುಣ ಹಾಗೂ ಅವಗುಣಗಳು
## (Merits and Demerits of Anty Corruptology)

ಎಲ್ಲಾ ಶಾಸ್ತ್ರಗಳಲ್ಲಿ ಗುಣ ಅವಗುಣಗಳು ಇರುತ್ತವೆ. ಇದೇ ರೀತಿ ಭ್ರಷ್ಟವಿರೋಧಿ ಶಾಸ್ತ್ರದ ಗುಣಪಕ್ಷ ಮತ್ತು ಅವಗುಣ ಪಕ್ಷಗಳಿವೆ. ಈ ಎರಡು ಪಕ್ಷಗಳು ಈ ಕೆಳಗಿನಂತಿವೆ.

**ಭ್ರಷ್ಟವಿರೋಧಿ ಶಾಸ್ತ್ರದ ಗುಣಗಳು (Merits of Anty Corruptology)**

ಮಾನವನ ವಿಚಾರಗಳಲ್ಲಿ ಸಕಾರಾತ್ಮಕ ಚಿಂತನೆಯನ್ನು ಹುಟ್ಟುಹಾಕುವುದು.

- ಮಾನವನಲ್ಲಿ ರಚನಾತ್ಮಕ ಪ್ರವೃತ್ತಿಯ ವಿಕಾಸ ಮಾಡುವುದು
- ಮಾನವ –ಮಾನವನಲ್ಲಿ ಸದ್–ವ್ಯವಹಾರ ಮತ್ತು ಸಹಯೋಗವನ್ನು ಹೆಚ್ಚಿಸುವುದು.
- ಸದಾಚಾರಯುಕ್ತ ಜೀವನ ನಿರ್ವಹಿಸಲು ಮಾರ್ಗದರ್ಶನ ಮಾಡುವುದು.
- ಸಮಾಜದಲ್ಲಿ ಸನ್ನಡತೆಯ ಪಾಠವನ್ನು ಕಲಿಸುವುದು.
- ವ್ಯಾಪಾರ – ಉದ್ಯೋಗ ಕ್ಷೇತ್ರಗಳಲ್ಲಿ ನಿಯಮಪೂರ್ವಕ ಕಾರ್ಯಗಳಲ್ಲಿ ತೊಡಗುವಂತೆ ಮಾಡುವುದು.

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಸ್ವಚ್ಛ ಮತ್ತು ಪ್ರಭಾವಕಾರಿ ಕಾರ್ಯ ಮಾಡುವುದು ಮತ್ತು ಕಲಿಸುವುದು. ಒಂದು ಕ್ಷೇತ್ರದಿಂದ ಇನ್ನೊಂದು ಕ್ಷೇತ್ರದೊಂದಿಗೆ ವ್ಯವಹರಿಸುವಾಗ ಸ್ವಚ್ಛತೆ (ಪ್ರಾಮಾಣಿಕತೆ) ಯನ್ನು ಅನುಸರಿಸುವುದು.

ವ್ಯಕ್ತಿ ಮತ್ತು ಸಂಸ್ಥೆಗಳನ್ನು ಸಂಪೂರ್ಣ ವ್ಯವಸಾಯ (ಕಾರ್ಯ) ನಿರತ ಮಾಡುವುದು.

ಸಮಾಜದಲ್ಲಿ ಭ್ರಷ್ಟವಿರೋಧಿ ಸಂಸ್ಕೃತಿಯನ್ನು ವಿಕಾಸಗೊಳಿಸುವುದು.

ನ್ಯಾಯ ಕೊಡುವ, ಕೊಡಿಸುವ ಕ್ಷೇತ್ರದಲ್ಲಿ ನ್ಯಾಯಯುತ (ನೈತಿಕ) ಮಾನಸಿಕತೆಯನ್ನುಂಟು ಮಾಡುವುದು.

ನೀತಿ ಮತ್ತು ನಿಯಮಗಳನ್ನು ಸರಿಯಾಗಿ ಆಚರಣೆ ಮಾಡುವುದು ಮತ್ತು ಈ ನಿಯಮಗಳನ್ನು ಪಾಲಿಸುವಂತೆ ಮಾಡುವುದು.

ಸೈದ್ಧಾಂತಿಕವಾದ ರಾಜನೈತಿಕ ಸಮೂಹಗಳ ರಚನೆಗೆ ಸಹಕರಿಸುವುದು.

ನೈತಿಕ ಹಾಗೂ ಸೈದ್ಧಾಂತಿಕವಾದಿ ನೇತಾರರು ಮತ್ತು ಕಾರ್ಯಕರ್ತರ ನಿರ್ಮಾಣ ಕಾರ್ಯ.

ರಾಜ್ಯಪ್ರಶಾಸನದ ಹೊಣೆ ಹೊತ್ತ ವ್ಯಕ್ತಿಗಳನ್ನು ಪೂರ್ಣ ಜವಾಬ್ದಾರಿ ಯುತರನ್ನಾಗಿ ಮಾಡುವುದು.

ರಾಷ್ಟ್ರಸೇವಕರೆನಿಸಿಕೊಂಡವರನ್ನು ವಾಸ್ತವಾರ್ಥದಲ್ಲಿ ರಾಷ್ಟ್ರಸೇವಕರನ್ನಾಗಿ ರೂಪಿಸುವುದು.

ಸ್ವಚ್ಛ ಹಾಗೂ ಸುರಕ್ಷಿತ ಪ್ರಶಾಸನ ಸೇವೆಯನ್ನು ಮುನ್ನಡೆಸುವುದು.

ಪೂರ್ಣರೂಪದಲ್ಲಿ ಆರ್ಥಿಕ ಅನುಶಾಸನವನ್ನು ನೆಲೆಗೊಳಿಸುವಲ್ಲಿ ಸಹಾಯ ಮಾಡುವುದು.

ಸಮಾಜ ಹಾಗೂ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಸುದೃಢಗೊಳಿಸುವುದು. ರಾಜ್ಯದ ಆದಾಯವನ್ನು ಹೆಚ್ಚಿಸುವುದು ಮತ್ತು ರಕ್ಷಣೆ ನೀಡುವುದು. ದೇಶ ಮತ್ತು ಜನತೆಯನ್ನು ಸಮೃದ್ಧಗೊಳಿಸಲು ಸಹಾಯ ಮಾಡುವುದು.

ರಾಷ್ಟ್ರೀಯತೆಯನ್ನು ನಾಶಪಡಿಸುವ ಜನರನ್ನು ಬೆಳೆಯಲು ಬಿಡದೆ, ರಾಷ್ಟ್ರಭಕ್ತ ಜನಶಕ್ತಿಯನ್ನು ಸಿದ್ಧಗೊಳಿಸುವುದು.

ದೇಶದ ಅವಶ್ಯಕತೆಗನುಸಾರವಾಗಿ ಶಿಕ್ಷಣ ಪದ್ಧತಿಯನ್ನು ಜಾರಿಗೊಳಿಸಲು ಸಹಕರಿಸುವುದು. ಸಮಾಜ ಮತ್ತು ರಾಷ್ಟ್ರದ ಕುರಿತಾಗಿ ಸದಾ ಜಾಗೃತವಾಗಿರುವ ಬೌದ್ಧಿಕ ಸಮುದಾಯ ಬೆಳೆಸುವುದು.

ಸ್ವಾಸ್ಥ ಕ್ಷೇತ್ರದಲ್ಲಿ ಆಗುತ್ತಿರುವ ಅನಪೇಕ್ಷಿತ ಅಭ್ಯಾಸಗಳನ್ನು ನಿಷ್ಕ್ರಿಯ ಗೊಳಿಸುವುದು.

ಎಲ್ಲರಿಗೂ ಆರೋಗ್ಯ ಈ ಅವಶ್ಯಕ ತತ್ವದ ಬೋಧೆ (ಅರಿವು) ಮೂಡಿಸುವುದು.

ಔಷಧದ ಉತ್ಪಾದನೆ ಮತ್ತು ಆಮದು ಮಾಡಿಕೊಳ್ಳುವಲ್ಲಿ ಸಂಪೂರ್ಣ ನಿಯಂತ್ರಣವನ್ನು ಕಾಪಾಡುವುದು.

ದೇಶದ ಪ್ರಾಕೃತಿಕ ಸಂಪತ್ತು ಮತ್ತು ಸಾಧನಗಳನ್ನು ಸಂರಕ್ಷಿಸುವುದು.

ಕಾನೂನುಬಾಹಿರ ಸಂಸ್ಥೆಗಳನ್ನು ಪೂರ್ಣ ಹತೋಟಿಯಲ್ಲಿಡಲು ಸಹಾಯ ಮಾಡುವುದು.

ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಆಗುತ್ತಿರುವ ಅಪರಾಧಗಳನ್ನು ನಿಷ್ಪ್ರಭಗೊಳಿಸುವುದು.

ರಾಜನೈತಿಕ ಕ್ಷೇತ್ರದಲ್ಲಿ ಆಗುತ್ತಿರುವ ದೊಡ್ಡದಿರಲಿ, ಚಿಕ್ಕದಿರಲಿ ಅಪರಾಧಗಳನ್ನು ತೊಲಗಿಸುವುದು.

## ಭ್ರಷ್ಟವಿರೋಧಿ ಶಾಸ್ತ್ರದ ಅವಗುಣಗಳು (Determintation of Anticorruptology)

ಸಮಾಜದಲ್ಲಿ ನಕಾರಾತ್ಮಕ ಪ್ರವೃತ್ತಿಯುಳ್ಳ ವ್ಯಕ್ತಿಗಳಲ್ಲಿ ಇದರ ಕುರಿತು ಜುಗುಪ್ಸೆ ಹುಟ್ಟಿಕೊಳ್ಳಬಹುದು.

ಧನಾರ್ಜನೆ (ಹಣ ಸಂಪಾದನೆ)ಯಲ್ಲಿ ತಡೆಯುಂಟಾಗುವ ಕಾರಣದಿಂದಾಗಿ ಇಂತಹ ವ್ಯಕ್ತಿಗಳು ಅಸಂತುಷ್ಟರಾಗಬಹುದು.

ಭ್ರಷ್ಟ ಆಚರಣೆಯ ವ್ಯಕ್ತಿಗಳು ಚಿಂತೆಗೊಳಗಾಗಬಹುದು.

ಕಾನೂನುಬಾಹಿರ ಕಾರುಬಾರುಗಳನ್ನು ಮಾಡುವ ವ್ಯಕ್ತಿ ಅಥವಾ ಸಮೂಹಕ್ಕೆ ಆಘಾತವುಂಟಾಗಬಹುದು.

ಲಂಚ ಕೊಡುವ ತೆಗೆದುಕೊಳ್ಳುವ ಸಮೂಹಗಳು ಕಷ್ಟಕ್ಕೊಳಗಾಗಬಹುದು.

ಅನುಚಿತ ಕಾರ್ಯಗಳನ್ನು ಮಾಡುವ ವ್ಯಕ್ತಿ ಅಥವಾ ಸಮೂಹಗಳು ಅಸಂತುಷ್ಟರಾಗಬಹುದು.

ಅಧಿಕಾರ ದುರುಪಯೋಗ ಮಾಡುವ ವ್ಯಕ್ತಿ ಅಥವಾ ಸಂಸ್ಥೆಗಳು ನಿರಾಶರಾಗಬಹುದು.

ರಾಜನೈತಿಕ ಪಕ್ಷಗಳ ಕಾರ್ಯ ನಿರ್ವಹಣೆಯಲ್ಲಿ ಕಷ್ಟವಾಗಬಹುದು.

ರಾಜಕೀಯ ಪಕ್ಷದ ಮುಖಂಡರ ಕುರಿತಾದ ಆಕರ್ಷಣೆ ಕಾರ್ಯಕರ್ತರಲ್ಲಿ ಭಗ್ನವಾಗಬಹುದು.

ವಿಕಾಸೋನ್ಮುಖ ದೇಶದ ಮತದಾತನಿಗೆ ನಷ್ಟವಾಗಬಹುದು.

ರಾಜ್ಯದ ಕೋಶದಿಂದ (ಖಜಾನೆ) ಮನಸೋ ಇಚ್ಛೆ ಖರ್ಚುಮಾಡುವ ಪದಾಧಿಕಾರಿಗಳಿಗೆ ಕಡಿವಾಣ ಹಾಕುವುದರಿಂದ ಕೋಪಗೊಳ್ಳಬಹುದು.

ಸರಕಾರೇತರ ಸಂಸ್ಥೆ ನಡೆಸುವವರು ಪ್ರತಿಭಟನೆಗೆ ಇಳಿದಾರು.

ದೇಶದ ಉತ್ಪನ್ನಗಳನ್ನು ಖರೀದಿಸುವ ಮತ್ತು ಖರೀದಿ ಮಾಡಿಸುವ ದಲ್ಲಾಲಿಗಳು ಉತ್ಸಾಹ ಕಳೆದುಕೊಂಡಾರು.

ಹಣದ ಮೊತ್ತವನ್ನು ಖರ್ಚುಮಾಡಿ ಜಾತೀಯ ಭೇದ ಭಾವ ಹುಟ್ಟು ಹಾಕುವವರು ಧರ್ಮ ಸಂಸ್ಕೃತಿಯ ಪರಿವರ್ತನೆ ಮಾಡುವ ಸಮುದಾಯಗಳು ಕಷ್ಟಗಳಿಗೊಳಗಾಗಬಹುದು.

ಖಾಸಗಿ ಕ್ಷೇತ್ರಗಳಲ್ಲಿ ನಡೆಸಲಾಗುತ್ತಿರುವ ಶಿಕ್ಷಣ ಹಾಗೂ ಸ್ವಾಸ್ಥ ಸಂಬಂಧಿತ ಸಂಸ್ಥೆಗಳಿಂದ ಶೋಷಣೆ ಮಾಡಲಾಗದ ಸ್ಥಿತಿಯುಂಟಾಗಿ ಕಷ್ಟಕ್ಕೊಳಗಾಗ ಬಹುದು. ಹಣ ಬಲದಿಂದ ಸಮಾಜ ಮತ್ತು ರಾಜ್ಯದ ವ್ಯವಸ್ಥೆಯಲ್ಲಿ ಬದಲಾವಣೆಯನ್ನುಂಟು ಮಾಡುವ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಗುಂಪುಗಳಿಗೆ ನಿರುತ್ಸಾಹವುಂಟಾಗಬಹುದು.

ಆರ್ಥಿಕ ಹಾಗೂ ಸಾಂಸ್ಕೃತಿಕ ಹೂಡಿಕೆ ಮಾಡಲಾಗದವರು. ಸಣ್ಣ ಮತ್ತು ದೊಡ್ಡ ರಾಷ್ಟ್ರಗಳೊಂದಿಗಿನ ಕೂಟನೀತಿಯ ವ್ಯವಹಾರಗಳನ್ನು ಕೆಡಿಸುವರು. (ಕೆಡಿಸಬಹುದು)

ಬಳಕೆಯ ಪದಾರ್ಥಗಳ ಉತ್ಪಾದನೆ ಹಾಗೂ ವಹಿವಾಟು ಮಾಡುವವರು ಇದನ್ನೂ ವಿರೋಧಿಸತೊಡಗಬಹುದು.

ಕಪ್ಪು ಹಣಕ್ಕೆ ಮಾನ್ಯತೆ ಕೊಡುವ ತಂಡಗಳ (ಗುಂಪು) ವ್ಯಾಪಾರ– ವಹಿವಾಟು ನಿಂತುಹೋಗಬಹುದು.

ಈ ಮೇಲೆ ನೀಡಲಾದ ಭ್ರಷ್ಟವಿರೋಧಿ ಶಾಸ್ತ್ರದ ಗುಣ ಮತ್ತು ಅವಗುಣ ಎರಡೂ ಬಣಗಳ ವಿಷಯಗಳನ್ನು ಯಥಾಶಕ್ತಿ ಪ್ರಸ್ತುತ ಪಡಿಸುವ ಪ್ರಯತ್ನ ಮಾಡಲಾಗಿದೆ. ಹೊಸ ವಿಚಾರಗಳ ಮೂಲಕ ನಿರ್ಮಿತ ಶಾಸ್ತ್ರವಾದ ಕಾರಣ ಇಲ್ಲಿ ಕೇವಲ ಸೀಮಿತವಾಗಿ ಗುಣ ಮತ್ತು ಅವಗುಣಗಳನ್ನು ಉಲ್ಲೇಖಿಸುವ ಕೆಲಸ ಮಾಡಲಾಗಿದೆ. ವಿಶ್ವದಾದ್ಯಂತ ಈ ಶಾಸ್ತ್ರದ ಅಧ್ಯಯನ ಪ್ರಾರಂಭವಾದ ಮೇಲೆ, ಪ್ರತಿಯೊಂದು ದೇಶದ ಸ್ಥಿತಿಗನುಸಾರವಾಗಿ ಗುಣ ಅವಗುಣಗಳು ಪರಿಚಿತವಾಗಬಹುದು. ಆದರೆ ವರ್ತಮಾನ ಸಮಯದಲ್ಲಿ ಭ್ರಷ್ಟವಿರೋಧಿ ಶಾಸ್ತ್ರದ ಗುಣಗಳೇ ಹೆಚ್ಚಾಗಿ ಕಂಡು ಬರುತ್ತವೆ. ಮಾನವ ಜೀವನ ಮಾನವ ಸಮಾಜ

ಮತ್ತು ಮಾನವ ಸಂಘಟನೆಗಳು ಈ ಶಾಸ್ತ್ರದಿಂದ ಸಾಕಷ್ಟು ಲಾಭ ಪಡೆಯುವ ಸ್ಥಿತಿ ಕಂಡುಬರುತ್ತಿದೆ. ಇದರ ಅಧ್ಯಯನ ಪ್ರಾರಂಭವಾದ ಮೇಲೆ ಇನ್ನೂ ಹೆಚ್ಚು ಸಮರ್ಥರು ಮುಂದೆ ಬರುವರು. ನಮಗೆ ಈ ಕುರಿತಾದ ವಿಶ್ವಾಸವಿದೆ.

***

# 9. ಯರ್ಥಾರ್ಥವಾದಿ ಮತ್ತು ಆದರ್ಶವಾದಿ ವೈಚಾರಿಕ ಸ್ಥಿರತೆ (Realistic Concept of Anticorruptology)

ಭ್ರಷ್ಟವಿರೋಧಿ ಶಾಸ್ತ್ರ ವಿಜ್ಞಾನವು ಹೌದು ಕಲೆಯು ಹೌದು.

ವಿಜ್ಞಾನದಲ್ಲಿ ಎರಡು ಪಕ್ಷಗಳಿವೆ. ಒಂದು ಯಥಾರ್ಥವಾದಿ (Positive) ಮತ್ತು ಇನ್ನೊಂದು ಆದರ್ಶವಾದಿ (Normative) ಭ್ರಷ್ಟವಿರೋಧಿಶಾಸ್ತ್ರ ಯಥಾರ್ಥವಾದಿ ಹಾಗೂ ಆದರ್ಶವಾದಿ ವಿಜ್ಞಾನವಾಗಿದೆ.

## 01. ಯಥಾರ್ಥವಾದಿ ವಿಜ್ಞಾನ (Realistic )

ಭ್ರಷ್ಟವಿರೋಧಿ ವಿಜ್ಞಾನವನ್ನು ಯಥಾರ್ಥವಾಗಿ ವಿಜ್ಞಾನವೆಂದು ಒಪ್ಪಿಕೊಳ್ಳಬೇಕಾದೀತು. ವಿಜ್ಞಾನವು ಯಾವುದೇ ತತ್ಥ್ಯಾಂಶವನ್ನು ಪ್ರಮಾಣಿಕರಿಸುತ್ತದೆ. ಇದು ಆ ತತ್ಥ್ಯಾಂಶ (ವಿಚಾರ)ದ ಕಾರಣ ಮತ್ತು ಪರಿಣಾಮದ ಕುರಿತು ವಿವರಿಸುತ್ತದೆ. ಆದರೆ ಆ ಪರಿಣಾಮ ಹೀಗೆ ಆಗಬಹುದು ಎಂಬುದನ್ನು ಹೇಳುವುದಿಲ್ಲ, ಹೀಗಾಗಿ ಯರ್ಥಾರ್ಥವಾದಿ ವಿಜ್ಞಾನವು ಜ್ಞಾನದಾಯಿಯಾಗಿದೆ. ಇದು ಜ್ಞಾನವರ್ಧನೆಗೆ ದಾರಿ ತೋರಿಸುವ ಕೆಲಸವನ್ನು ಮಾಡುತ್ತದೆ. ಈ ರೀತಿಯಲ್ಲಿ ಇದು ಭ್ರಷ್ಟವಿರೋಧಿ ವಿಷಯಕ್ಕೆ ಸಂಬಂಧಪಟ್ಟಂತೆ ವಿಚಾರಗಳ ಯಥಾರ್ಥ ವಿಶ್ಲೇಷಣೆ ಮಾಡುವ ಕಾರಣದಿಂದಾಗಿ ಇದನ್ನು ಯಥಾರ್ಥವಾದಿ ವಿಜ್ಞಾನವೆನ್ನಬಹುದು.

## 2. ಆದರ್ಶವಾದಿ ವಿಜ್ಞಾನ (Idealistic Science)

ಭ್ರಷ್ಟವಿರೋಧಿ ಶಾಸ್ತ್ರವು, ನೀತಿ ಶಾಸ್ತ್ರ, ಸಮಾಜ ಶಾಸ್ತ್ರ, ರಾಜನೀತಿಶಾಸ್ತ್ರ ಅರ್ಥಶಾಸ್ತ್ರ ಮತ್ತು ಅನ್ಯ ಸಾಮಾಜಿಕ ಶಾಸ್ತ್ರಗಳೊಂದಿಗೆ ನಿಕಟ ಸಂಬಂಧಗಳನ್ನಿಟ್ಟುಕೊಳ್ಳುತ್ತದೆ. ಇದು ಮನುಷ್ಯ ಮತ್ತು ಅವನ ವ್ಯವಹಾರಗಳನ್ನು

ಸರಿ ಮತ್ತು ತಪ್ಪು, ಒಳಿತು ಮತ್ತು ಕೆಡುಕು, ಶುಭ ಮತ್ತು ಅಶುಭ ಭ್ರಷ್ಟ ಮತ್ತು ಪ್ರಾಮಾಣಿಕ ಹಾಗೂ ಲಾಭ ಮತ್ತು ನಷ್ಟ ಇತ್ಯಾದಿಗಳ ಕುರಿತಾದ ಅರಿವು ಉಂಟುಮಾಡುಸುತ್ತದೆ. ಈ ಶಾಸ್ತ್ರವು ಮನುಷ್ಯನ ಆಚರಣೆ ನಡವಳಿಕೆ ವ್ಯವಹಾರ ಮತ್ತು ಉದ್ದೇಶ್ಯದೊಂದಿಗೆ ಕರ್ತವ್ಯಗಳ ಕುರಿತು ಜಾಗೃತಗೊಳಿಸುತ್ತದೆ. ಇದರೊಂದಿಗೆ ಮಾನವನಿಗೆ ತನ್ನ ಜೀವನದ ಸಾರ್ಥಕತೆಗಾಗಿ ಅಳವಡಿಸಿ ಕೊಳ್ಳಬೇಕಾದ ಆಚಾರ ವಿಚಾರ ಮತ್ತು ಹೆಚ್ಚಿನ ಜವಾಬ್ದಾರಿಯ ಬೋಧನೆಯನ್ನು ಮೂಡಿಸುತ್ತದೆ. ಆದ್ದರಿಂದ ಈ ಭ್ರಷ್ಟವಿರೋಧಿ ಶಾಸ್ತ್ರವು ಆದರ್ಶವಾದಿ ವಿಜ್ಞಾನವು ಕೂಡ ಹೌದು.

ಭ್ರಷ್ಟವಿರೋಧಿ ಶಾಸ್ತ್ರವು ವ್ಯಕ್ತಿ ಸಮಾಜ ಮತ್ತು ದೇಶದಲ್ಲಿಯ ವಿದ್ಯಮಾನ ಭ್ರಷ್ಟಾಚಾರ, ಅನಾಚಾರ, ದುರಾಚಾರ ಮತ್ತು ಅತ್ಯಾಚಾರ ಇವುಗಳೊಂದಿಗೆ ಆರ್ಥಿಕ ಅಸಮಾನತೆ ಇತ್ಯಾದಿಗಳ ಕುರಿತು ಅಧ್ಯಯನ ಮಾಡುತ್ತದೆ ಮತ್ತು ಈ ಎಲ್ಲಾ ಕಾರಣಗಳು ಮತ್ತು ಯಥಾರ್ಥವನ್ನು ಕಂಡುಹಿಡಿಯುತ್ತದೆ. ಇದಕ್ಕಾಗಿ ಇದು ಯಥಾರ್ಥವಾದಿಯಾಗಿದೆ. ಇನ್ನೊಂದೆಡೆ ಈ ಶಾಸ್ತ್ರವು ಈ ಮೇಲಿನ ಸಮಸ್ಯೆಗಳಿಗೆ ಪರಿಹಾರ ಮತ್ತು ವ್ಯಕ್ತಿ, ಸಮಾಜ ಮತ್ತು ದೇಶದ ಮಂಗಳಕರ ಅಭಿವೃದ್ಧಿಗಾಗಿ ಉಪಾಯವನ್ನು ಕಂಡುಹಿಡಿಯುತ್ತದೆ. ಹೀಗಾಗಿ ಇದನ್ನೂ ಭ್ರಷ್ಟವಿರೋಧಿ ಶಾಸ್ತ್ರವನ್ನು ಯಥಾರ್ಥವಾದಿ ಮತ್ತು ಆದರ್ಶವಾದಿಯೆಂದು ಹೇಳಲ್ಪಟ್ಟಿದೆ.

# 10. ಭ್ರಷ್ಟಾಚಾರ ಮತ್ತು ಭ್ರಷ್ಟವಿರೋಧಿ ಶಾಸ್ತ್ರದ ಸ್ವಭಾವ ಹಾಗೂ ಕಾರ್ಯಕ್ಷೇತ್ರದ ಕುರಿತಾದ ಸಂಕ್ಷಿಪ್ತ ಮಾಹಿತಿ.

## Nature and Scope of corrupt and Non- corrupt : A brief Overview.

ಭ್ರಷ್ಟಾಚಾರವನ್ನು ನಿಯಂತ್ರಿತ ಸ್ಥಿತಿಯಲ್ಲಿಡುವುದಕ್ಕಾಗಿ ಭ್ರಷ್ಟಚಾರ ವಿರೋಧಿ ಶಾಸ್ತ್ರದ ಪ್ರಾದುರ್ಭಾವವಾಯಿತು. ಭ್ರಷ್ಟಾಚಾರದ ಸ್ವರೂಪ ಕಾಲ ಕಾಲದಲ್ಲಿ ಬದಲಾಗುತ್ತಿರುವತ್ತದೆ. ಇದರ ನಿರಾಕರಣೆಗಾಗಿ ಅದೆಷ್ಟೋ ಉಪಾಯಗಳಾದ ನಂತರವು ಕೂಡ ನಿಯಂತ್ರಿಸರಾಗುತ್ತಿಲ್ಲ. ಈ ನಿಟ್ಟಿನಲ್ಲಿ ಸಮಯದ ಬೇಡಿಕೆಗನುಗುಣವಾಗಿ ಭ್ರಷ್ಟವಿರೋಧಿ ಶಾಸ್ತ್ರ ಇವುಗಳೆಲ್ಲದರ ಅಧ್ಯಯನ ಮಾಡುತ್ತದೆ. ಭ್ರಷ್ಟಾಚಾರದ ಸ್ವಭಾವ ಮತ್ತು ಕಾರ್ಯಕ್ಷೇತ್ರದ ಮೇಲೆ ಪ್ರಭಾವ ಬೀರುವ ಕ್ಷೇತ್ರಗಳನ್ನೂ ತುಲನಾತ್ಮಕ ರೀತಿಯಲ್ಲಿ ಈ ಕೆಳಗಿನ ರೀತಿಯಲ್ಲಿ ನೋಡಬಹುದಾಗಿದೆ.

**ಸ್ವಭಾವ (Nature)**

**ಭ್ರಷ್ಟಾಚಾರ**

ಮಾನವ ಪ್ರಕೃತಿಯ ಉತ್ಪತ್ತಿಯಾಗಿದ್ದಾನೆ.

ನ್ಯಾಯಯುತ ಮನಸ್ಸನ್ನು ವಿಚಲಿತಗೊಳಿಸುತ್ತದೆ.

ಸಾಂಕ್ರಾಮಿಕತೆ ಪ್ರಕೃತಿಯ ರೋಗವಾಗಿದೆ.

ಅರ್ಥ (ಸಂಪತ್ತು) ಗಳಿಸುವ ಉದ್ಯೋಗವಾಗಿದೆ.

ಶೀಘ್ರ ಧನ ಸಂಗ್ರಹಿಸುವ ವ್ಯವಸಾಯವಾಗಿದೆ.

ವ್ಯಕ್ತಿಗೆ ಅನುಚಿತ ಕಾರ್ಯ ಮಾಡಲು ಪ್ರಚೋದಿಸುತ್ತದೆ.

ಅನುಕರಣೀಯ ಸ್ವಭಾವವಾಗಿರುವುದರಿಂದ ಭ್ರಷ್ಟ ಸಂಸ್ಕೃತಿಯ ವಿಕಾಸವನ್ನು ಮಾಡುತ್ತದೆ.

**ಭ್ರಷ್ಟವಿರೋಧಿ ಶಾಸ್ತ್ರ.**

ಮಾನವ ಪ್ರಕೃತಿಗೆ ಸಕಾರಾತ್ಮಕ ದಾರಿ ತೋರಿಸುತ್ತದೆ.

ಸಾಮಾಜಿಕ ಮರ್ಯಾದೆಯನ್ನು ಬೋಧಿಸುತ್ತದೆ.

ಇಂತಹ ಸಾಂಕ್ರಾಮಿಕ ಪ್ರವೃತ್ತಿಯನ್ನು ತಡೆಗಟ್ಟುವ ಕೆಲಸ ಮಾಡುತ್ತದೆ.

ಇದಕ್ಕೆ ಉದ್ಯೋಗದಲ್ಲಿ ತಿಳಿದುಕೊಳ್ಳುವ ಜ್ಞಾನ ಉಂಟಾಗುತ್ತದೆ.

ಇದನ್ನು ವ್ಯಾವಸಾಯಿಕ ರೂಪದಲ್ಲಿ ಸ್ವೀಕರಿಸಲಾಗುವುದಿಲ್ಲ.

ಅನುಚಿತ ಕೆಲಸವನ್ನು ನಿರುತ್ಸಾಹಗೊಳಿಸುತ್ತದೆ.

ಭ್ರಷ್ಟ ಸಂಸ್ಕೃತಿಯನ್ನು ನಷ್ಟಗೊಳಿಸಿ, ಭ್ರಷ್ಟವಿರೋಧಿ ಸಂಸ್ಕೃತಿಯನ್ನು ಸ್ಥಾಪಿಸುತ್ತದೆ.

**ನ್ಯಾಯ ಹಾಗೂ ಕಾನೂನು : (Justice and Lawsection)**

**ಭ್ರಷ್ಟಾಚಾರ**

ಉಚಿತ ಮತ್ತು ಅನುಚಿತವನ್ನು ತಿಳಿಯುವ ವಿವೇಕವನ್ನು ನಷ್ಟಗೊಳಿಸುತ್ತದೆ.

ನ್ಯಾಯಯುತ ಮನಸ್ಸನ್ನು ವಿಚಲಿತಗೊಳಿಸುತ್ತದೆ.

ನ್ಯಾಯಕ್ಷೇತ್ರದಲ್ಲಿ ಕಾನೂನಿನ ತಪ್ಪು ವ್ಯಾಖ್ಯೆ ಮಾಡುತ್ತದೆ.

ನೀತಿ ಮತ್ತು ನಿಯಮಗಳ ಮರೆಯಲ್ಲಿ ಅನ್ಯಾಯ ಮಾಡುತ್ತಾನೆ.

**ಭ್ರಷ್ಟವಿರೋಧಿ ಶಾಸ್ತ್ರ :–**

ಉಚಿತ ನಿರ್ಣಯಗಳನ್ನು ಕೈಗೊಳ್ಳುವ ಮಾನವೀಯ ವಿವೇಕವನ್ನು ಸ್ಥಾಪಿಸುತ್ತದೆ.

ನ್ಯಾಯಯುತ ಮನಸ್ಸಿಗೆ ಧೈರ್ಯವನ್ನು ನೀಡುತ್ತದೆ.

ಕಾನೂನಿನ ಸರಿಯಾದ ವ್ಯಾಖ್ಯಾನಕ್ಕೆ ಒಳ್ಳೆಯ ವಾತಾವರಣ ನಿರ್ಮಿಸುತ್ತದೆ.

ನೀತಿ ನಿಯಮಗಳನ್ನು ಸರಿಯಾದ ರೀತಿಯಲ್ಲಿ ಪ್ರಯೋಗಿಸುವುದನ್ನು ಕಲಿಸುತ್ತದೆ.

**ರಾಜ್ಯ ಮತ್ತು ರಾಜನೀತಿ. (State and Political sectior)**

**ಭ್ರಷ್ಟಾಚಾರ :–**

ರಾಜ್ಯಾಧಿಕಾರ ವಶಪಡಿಸಿಕೊಳ್ಳುವ ಆಸೆ (ಮೋಹ) ಜಾಗೃತಗೊಳಿಸುತ್ತದೆ.

ಯಾವುದೇ ಸಿದ್ಧಾಂತವಿಲ್ಲದ ರಾಜಕೀಯ ಸಮೂಹಕ್ಕೆ ಜನ್ಮ ನೀಡುತ್ತದೆ.

ಅನೈತಿಕ ಹಾಗೂ ಬೇಜವಾಬ್ದಾರ ರಾಜಕೀಯ ನೇತಾರ ಹಾಗೂ ಕಾರ್ಯಕರ್ತರಿಗೆ ಜನ್ಮ ನೀಡುತ್ತದೆ.

ಚುನಾಯಿತ ಪರಂಪರೆಯ ನೀತಿಗತ ಪದ್ಧತಿಯನ್ನು ಮುಗಿಸಿ ಬಿಡುತ್ತದೆ.

ಸ್ವಚ್ಛ ರಾಜನೈತಿಕ ಪದ್ಧತಿಯ ವಿಕಾಸದಲ್ಲಿ ತಡೆಯನ್ನುಂಟು ಮಾಡುತ್ತದೆ.

**ಭ್ರಷ್ಟವಿರೋಧಿ ಶಾಸ್ತ್ರ**

ರಾಜ್ಯಾಧಿಕಾರದಲ್ಲಿ ಸೇವಾಭಾವದ ಸ್ಥಿತಿಯ ನಿರ್ಮಾಣ ಮಾಡುತ್ತದೆ.

ಸಿದ್ಧಾಂತವಾದಿ ರಾಜನೈತಿಕ ಸಮೂಹ ನೆಲೆನಿಲ್ಲಿಸುವಲ್ಲಿ ಸಹಾಯ ಮಾಡುತ್ತದೆ.

ನೀತಿವಂತ ಹಾಗೂ ಜವಾಬ್ದಾರಿಯುತ ರಾಜನೈತಿಕ ನೇತಾ (ಮುಖಂಡ) ಕಾರ್ಯಕರ್ತರನ್ನು ಸಿದ್ಧಗೊಳಿಸಲು ಸಹಾಯ ಮಾಡುತ್ತದೆ.

ಚುನಾವಣಾ ಪ್ರಣಾಲಿಯಲ್ಲಿ ನೈತಿಕವಾದ ಪದ್ಧತಿಯ ವಿಕಾಸ ಮಾಡುತ್ತದೆ.

ನೈಜ ರಾಜಕೀಯ ಪದ್ಧತಿಯ ವಿಕಾಸದಲ್ಲಿ ಸಹಯೋಗ ಸಾಬೀತಾಗುತ್ತದೆ.

**ರಾಜ್ಯ ಪ್ರಶಾಸನ :– (Administrative Sector)**

**ಭ್ರಷ್ಟಾಚಾರ :–**

ರಾಜ್ಯಾಡಳಿತದ ನೌಕರರನ್ನು ಬೇಜವಾಬ್ದಾರಿರನ್ನಾಗಿ ಮಾಡುತ್ತದೆ.

ಜವಾಬ್ದಾರಿಯುಳ್ಳ ಪದಾಧಿಕಾರಿಯುನ್ನು ಭ್ರಷ್ಟಗೊಳಿಸಿ, ಪದಚ್ಯುತಗೊಳಿಸಬಹುದು.

ರಾಷ್ಟ್ರಸೇವಕನನ್ನು ರಾಷ್ಟ್ರದ್ರೋಹಿಯಾಗಿ ಮಾಡಬಲ್ಲುದು.

ಸೇವಾಭಾವದ ಕಾರ್ಯವನ್ನು ಶೋಷಣೆಯಲ್ಲಿ ಪರಿವರ್ತಿಸುತ್ತದೆ.

ಸೇವಾ ಆಡಳಿತವು ಸಂಪೂರ್ಣವಾಗಿ ನಾಶ ಮಾಡಬಹುದು.

**ಭ್ರಷ್ಟ ವಿರೋಧಿ ಶಾಸ್ತ್ರ :–**

ರಾಜ್ಯ ಆಡಳಿತದ ನೌಕರರನ್ನು ಜವಾಬ್ದಾರರನ್ನಾಗಿಸುತ್ತದೆ.

ಪದಾಧಿಕಾರಿಗಳಿಂದ ಪ್ರಾಮಾಣಿಕವಾದ ಕೆಲಸ ಮಾಡುವ ವಾತಾವರಣದ ನಿರ್ಮಾಣ ಮಾಡುತ್ತದೆ.

ರಾಷ್ಟ್ರ ಸೇವಕರನ್ನು ರಾಷ್ಟ್ರಸೇವಕನ ರೂಪದಲ್ಲೇ ನೆಲೆಸುವಲ್ಲಿ ಸಹಾಯ ಮಾಡುತ್ತದೆ.

ಸೇವಾಗ್ರಾಹಿ ಹಾಗೂ ಸಮಯೋಚಿತ ಸೇವೆಯನ್ನು ಪಡೆಯುವಂತಹ ವಾತಾವರಣವನ್ನು ನಿರ್ಮಿಸುತ್ತದೆ.

ಕುಶಲ ಹಾಗೂ ಪ್ರಾಮಾಣಿಕ ಸೇವಾ ಆಡಳಿತದ ಚಾಲನೆ ಆಗಬಲ್ಲುದು.

**ಆರ್ಥಿಕ ಕ್ಷೇತ್ರ :– <u>(Economic Sector)</u>**

**ಭ್ರಷ್ಟಾಚಾರ :–**

ಅನುಶಾಸಿತ ಆರ್ಥಿಕ ಸ್ಥಿತಿ ಇಲ್ಲದಂತಹ ಸ್ಥಿತಿಯನ್ನು ನಿರ್ಮಿಸುತ್ತದೆ.

ನೀತಿಗತ ಲೇಖಾ ಪದ್ಧತಿಯನ್ನು ವಿಚಲಿತಗೊಳಿಸುತ್ತದೆ.

ರಾಜ್ಯಸ್ವದ ಸಂಗ್ರಹದಲ್ಲಿ ಕೊರತೆಯುಂಟು ಮಾಡುತ್ತದೆ.

ರಾಜ್ಯದ ಆದಾಯವನ್ನು ನಾಶ ಮಾಡುತ್ತದೆ.

ಸಮಾಜ ಮತ್ತು ರಾಜ್ಯ ಎರಡರ ಆರ್ಥಿಕ ಸ್ಥಿತಿಯನ್ನು ದುರ್ಬಲಗೊಳಿಸುತ್ತದೆ.

ದೇಶ ಮತ್ತು ಜನರನ್ನು ಆರ್ಥಿಕವಾಗಿ ದುರ್ಬಲಗೊಳಿಸುತ್ತದೆ.

**ಭ್ರಷ್ಟವಿರೋಧಿ ಶಾಸ್ತ್ರ :–**

ಪೂರ್ಣರೂಪದಿಂದ ಅನುಶಾಸನದಲ್ಲಿ ಸ್ಥಿರತೆಯನ್ನುಂಟುಮಾಡುವಲ್ಲಿ ಸಹಾಯ ಮಾಡುತ್ತದೆ.

ರಾಜ್ಯದ ಏಕೀಕರಣದಲ್ಲಿ ಸಂಪೂರ್ಣ ಸಹಾಯ ಮಾಡುತ್ತದೆ.

ಆದಾಯದ ಸುರಕ್ಷತೆಯನ್ನು ಕಾಪಾಡುತ್ತದೆ.

ಸಮಾಜ ಮತ್ತು ರಾಜ್ಯ ಇವೆರಡರ ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸುತ್ತದೆ.

ದೇಶ ಹಾಗೂ ಜನರಿಗಾಗಿ ನ್ಯಾಯ ಸಮ್ಮತ ಸಮೂಹ ರಚಿಸುವ ಕಾರ್ಯದಲ್ಲಿ ಸಹಾಯ ಮಾಡುತ್ತದೆ.

**ಸಾಮಾಜಿಕ ಕ್ಷೇತ್ರ : (Social Sector )**

**ಭ್ರಷ್ಟಾಚಾರ :–**

ಸಾಮಾಜಿಕ ರೀತಿ, ಸ್ಥಿತಿ ಮತ್ತು ಸಂಸ್ಕೃತಿಯನ್ನು ನಷ್ಟ ಮಾಡಬಹುದಾಗಿದೆ.

ಸಾಮಾಜಿಕ ಭಿನ್ನತೆಯನ್ನುಂಟುಮಾಡಬಲ್ಲುದು.

ಜಾತೀಯ ಅಸ್ತಿತ್ವ ಮತ್ತು ಸಂಸ್ಕೃತಿಯಲ್ಲಿ ಪರಿವರ್ತನೆಯನ್ನುಂಟು ಮಾಡುಬಹುದಾಗಿದೆ.

ಸಮಾಜದಲ್ಲಿ ಅಶಾಂತಿಯನ್ನು ಉಂಟುಮಾಡಿ ದ್ವಂದ್ವವನ್ನು ಬಿತ್ತರಿಸ ಬಹುದಾಗಿದೆ.

ರಾಷ್ಟ್ರದಲ್ಲಿ ಗೃಹಯುದ್ಧ ನಡೆಸಬಹುದಾಗಿದೆ.

**ಭ್ರಷ್ಟವಿರೋಧಿ ಶಾಸ್ತ್ರ :–**

ಸಾಮಾಜಿಕ ರೀತಿ, ಸ್ಥಿತಿ ಸಂಸ್ಕೃತಿಯನ್ನು ರಕ್ಷಿಸಬಹುದಾಗಿದೆ.

ಸಾಮಾಜಿಕ ಭೇದ–ಭಾವಗಳನ್ನು ಕೊನೆಗೊಳಿಸಬಹುದಾಗಿದೆ.

ಜಾತೀಯ ಅಸ್ತಿತ್ವ ಮತ್ತು ಸಂಸ್ಕೃತಿಯ ರಕ್ಷಣೆ ಮಾಡುತ್ತದೆ.

ಶಕ್ತಿಯನ್ನು ಸ್ಥಿರಗೊಳಿಸಿ ಸದ್ಭಾವನೆಯನ್ನು ಉಂಟು ಮಾಡಬಲ್ಲುದಾಗಿದೆ, ಗೃಹಯುದ್ಧದ ಪರಿಸ್ಥಿತಿ ಉಂಟಾಗಲಾರದು.

**ಶಿಕ್ಷಣ ಕ್ಷೇತ್ರ : (Education Sector)**

**ಭ್ರಷ್ಟಾಚಾರ :–**

ಭೌದ್ಧಿಕ ಮಟ್ಟವನ್ನು ವಿಚಾರ ಶೂನ್ಯ ಮಾಡುತ್ತದೆ.

ಅವಶ್ಯಕ ಶಿಕ್ಷಣ ಪದ್ಧತಿಯ ದಿಕ್ಕು ತಪ್ಪಿಸುತ್ತದೆ. ಮತ್ತು ತನ್ನದೇ ಆದ ಕ್ಷುದ್ರ ವ್ಯಾವಹಾರಿಕ ವಿದ್ಯಾಲಯಗಳ ವಿಕಾಸವಾಗುತ್ತದೆ.

ಖಾಸಗಿ ಮತ್ತು ಸಾಮುದಾಯಿಕ ವಿದ್ಯಾಲಯಗಳಲ್ಲಿ ಭಿನ್ನತೆಯನ್ನುಂಟು ಮಾಡುತ್ತದೆ.

ಶಿಕ್ಷಣ ನೀತಿಯಲ್ಲಿ ವ್ಯಾಪಾರೀಕರಣವನ್ನು ಮಾಡುತ್ತದೆ.

ಒಂದು ರಾಷ್ಟ್ರದ ಸಮರ್ಥ ಜನಶಕ್ತಿಯನ್ನು ಬೇರೊಂದು ರಾಷ್ಟ್ರದಲ್ಲಿ ವಿಲೀನಗೊಳಿಸುತ್ತದೆ.

**ಭ್ರಷ್ಟವಿರೋಧಿ ಶಾಸ್ತ್ರ :–**

ಬೌದ್ಧಿಕ ಮಟ್ಟವನ್ನು ಸಮಾಜ ಮತ್ತು ರಾಷ್ಟ್ರದ ಕುರಿತು ಜವಾಬ್ದಾರಿಯುತವಾಗಿ ಜಾಗೃತಗೊಳಿಸುತ್ತದೆ.

ಸುಗಮ ಶಿಕ್ಷಣ ಪ್ರಣಾಲಿಯನ್ನ ಜಾರಿಗೆ ತರಲು ಸಹಾಯ ಮಾಡುತ್ತದೆ.

ಎಲ್ಲಾ ವಿದ್ಯಾಲಯಗಳಲ್ಲಿ ಶಿಕ್ಷಣ ಸಂಬಂಧಿ ಏಕರೂಪತೆಯನ್ನು ಸ್ಥಿರಗೊಳಿಸುತ್ತದೆ.

ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಜಾರಿಗೊಳಿಸಬಹುದಾಗಿದೆ.

ಸುಶಿಕ್ಷಿತ ಜನಶಕ್ತಿಯನ್ನು ರಾಷ್ಟ್ರದೊಳಗೆ ಕ್ರಿಯಾಶೀಲವನ್ನಾಗಿ ಮಾಡುತ್ತದೆ.

**ಸ್ವಾಸ್ಥ್ಯಕ್ಷೇತ್ರ (ಆರೋಗ್ಯ ಕ್ಷೇತ್ರ ) [Health Sector ]**

**ಭ್ರಷ್ಟಾಚಾರ :–**

ಮಾನವ ಆರೋಗ್ಯ ಕ್ಷೇತ್ರದಲ್ಲಿ ಸೇವೆಗೆ ಬದಲಾಗಿ ನೀಚ, ಸ್ವಾರ್ಥ ಪರವಾದ ವ್ಯಾಪಾರ ಮಾಡುವಂತಾಗಬಹುದು.

ಮಾನವ ಅಂಗಾಂಗಗಳ ವ್ಯಾಪಾರ ಮಾಡುವಂತಾಗುತ್ತಾನೆ.

ಅಂಗ ಪುನಃ ಜೋಡಣೆ ಮತ್ತು ಪ್ರಜನನದ ( ಹುಟ್ಟಿನ ) ಹೆಸರಿನಲ್ಲಿ ಜೀವನವನ್ನೇ ಕೊನೆಗೊಳಿಸಬಹುದು.

ಕಲಬೆರಕೆ ಮತ್ತು ನಕಲಿ ಔಷಧಿಗಳ ಉತ್ಪಾದನೆ ಮಾಡುತ್ತಾನೆ.

ಆರೋಗ್ಯ ಶಿಕ್ಷಣದ ಹೆಸರಿನಲ್ಲಿ ಉನ್ನತ ಮಟ್ಟದಲ್ಲಿ ಶೋಷಣೆ ನಡೆಯುತ್ತದೆ.

**ಭ್ರಷ್ಟವಿರೋಧಿ ಶಾಸ್ತ್ರ : –**

ಆರೋಗ್ಯ ಕ್ಷೇತ್ರವನ್ನು ಸೇವಾಕ್ಷೇತ್ರವನ್ನಾಗಿ ಮಾಡಿ ಕಾರ್ಯಾಚರಣೆ ಮಾಡುವುದು.

ಮಾನವ ಅಂಗಾಂಗಳ ಸಂರಕ್ಷಣೆ ಮಾಡುವಂತಾಗುತ್ತದೆ.

ಅಂಗ ಪುನರ್ಜೋಡಣೆ ಮತ್ತು ಪ್ರಜನನ ಕಾರ್ಯವನ್ನು ವಿಧಿವತ್ತಾಗಿ

ವ್ಯವಸ್ಥಿತಗೊಳಿಸುವುದು.

ಔಷಧದಂತಹ ಮಹತ್ವಪೂರ್ಣ ವಸ್ತುಗಳಲ್ಲಿ ಕಲಬೆರಕೆ ಆಗದಂತೆ ಮಾಡುತ್ತದೆ.

ಆರೋಗ್ಯ ಶಿಕ್ಷಣ ಕ್ಷೇತ್ರದಲ್ಲಿ ಶೋಷಣೆ ಆಗಗೊಡುವುದಿಲ್ಲ.

**ರಾಷ್ಟ್ರ ಮತ್ತು ರಾಷ್ಟ್ರೀಯತೆ (Nation and Nationalism Sector )**

**ಭ್ರಷ್ಟಾಚಾರ :–**

ದೇಶದ ಪ್ರಾಕೃತಿಕ ಸಂಪತ್ ಸಾಧನಗಳನ್ನು ಅನ್ಯ ದೇಶಗಳಲ್ಲಿ ಮಾರಾಟ ಮಾಡಬಹುದಾಗಿದೆ.

ಸರ್ಕಾರೇತರ ಸಂಸ್ಥೆಗಳ ಮೂಲಕ ದೇಶದ್ರೋಹಿ ಸಮಾಜದ್ರೋಹಿ ಕಾರ್ಯಗಳನ್ನು ಮಾಡಿಸುತ್ತದೆ.

ದೇಶದ ಪರಂಪರಾಗತ ರಾಜನೀತಿ ಮತ್ತು ಸಂಸ್ಕೃತಿಯನ್ನು ವಿಕೃತಗೊಳಿಸುತ್ತದೆ.

ರಾಷ್ಟ್ರ ಮತ್ತು ರಾಷ್ಟ್ರೀಯತೆಯನ್ನೇ ಮುಗಿಸಿಬಿಡುವಂತೆ ಮಾಡುವುದು.

**ಭ್ರಷ್ಟವಿರೋಧಿ ಶಾಸ್ತ್ರ :–**

ದೇಶದ ಪ್ರಾಕೃತಿಕ ಸಂಪತ್ ಸಾಧನಗಳನ್ನು ಸಂರಕ್ಷಿಸುವ ವಾತಾವರಣ ನಿರ್ಮಾಣ ಮಾಡಬಹುದು.

ಸರಕಾರೇತರ ಸಂಸ್ಥೆಗಳನ್ನು ಸಂಪೂರ್ಣ ರಾಷ್ಟ್ರಹಿತದ ಪಕ್ಷದಲ್ಲಿ ನಡೆಸುತ್ತದೆ.

ದೇಶದ ಪರಂಪರಾಗತ ಪದ್ಧತಿಯ ಸ್ಥಿತಿಯನ್ನು ರಕ್ಷಿಸುತ್ತದೆ.

ರಾಷ್ಟ್ರ ಹಾಗೂ ರಾಷ್ಟ್ರೀಯತೆಯನ್ನು ಸುರಕ್ಷಿತಗೊಳಿಸುತ್ತದೆ.

**ಅಪರಾಧಿಕ ಕಾರ್ಯಗಳು (Criminal Activities Sector)**

**ಭ್ರಷ್ಟಾಚಾರ :–**

ಸಮಾಜದ ವಿಭಿನ್ನ ಕ್ಷೇತ್ರಗಳಲ್ಲಿ ಅಪರಾಧ ಹೆಚ್ಚುತ್ತದೆ.

ಆರ್ಥಿಕ ಕ್ಷೇತ್ರದಲ್ಲಿ ವಿಭಿನ್ನ ರೀತಿಯ ಅಪರಾಧಗಳನ್ನು ಸೃಷ್ಟಿಸುತ್ತದೆ.

ಅಧಿಕಾರ ಪ್ರಾಪ್ತಿಗಾಗಿ ರಾಜನೈತಿಕ ಅಪರಾಧಗಳು ಹೆಚ್ಚುತ್ತವೆ.

ದೇಶದಲ್ಲಿ ವಿಪ್ಲವವನ್ನುಂಟುಮಾಡುವ ಅಪರಾಧಗಳು ಹಬ್ಬುತ್ತವೆ.

**ಭ್ರಷ್ಟವಿರೋಧಿ ಶಾಸ್ತ್ರ :-**

ಸಮಾಜದಲ್ಲಿ ಅಪರಾಧಿ ಕಾರ್ಯಗಳನ್ನು ಕಡಿಮೆ ಮಾಡುತ್ತದೆ.

ಆರ್ಥಿಕ ಕ್ಷೇತ್ರದಲ್ಲಿ ಅಪರಾಧವನ್ನು ನ್ಯೂನತಮ ಹಂತಕ್ಕೆ ತರುತ್ತದೆ.

ರಾಜನೈತಿಕ ಅಪರಾಧಗಳನ್ನು ಅತ್ಯಂತ ಕಡಿಮೆ ಮಟ್ಟಕ್ಕೆ ತರುತ್ತದೆ.

ರಾಷ್ಟ್ರವನ್ನು ರಕ್ಷಿಸುವ ಕಾರ್ಯ ಗಂಭೀರತೆಯಿಂದ ಮಾಡುತ್ತದೆ.

ಭ್ರಷ್ಟಾಚಾರದಿಂದಾಗುವ ಹಾನಿ (ಅಪಾಯ) ಮತ್ತು ಅದರಿಂದ ರಕ್ಷಿಸಿಕೊಳ್ಳುವಲ್ಲಿ, ಭ್ರಷ್ಟವಿರೋಧಿ ಶಾಸ್ತ್ರದ ಪೀಠಿಕೆಯಲ್ಲಿ ಸಂಕ್ಷೇಪವಾಗಿ ಉಲ್ಲೇಖಿಸಲಾಗಿದೆ. ಭ್ರಷ್ಟಾಚಾರದ ಕಾರಣದಿಂದ ಮೇಲೆ ಎಷ್ಟು ವಿಚಾರಗಳು ಉಲ್ಲೇಖವಾಗಿವೆಯೋ, ಅದಕ್ಕಿಂತ ಹೆಚ್ಚು ದೇಶದ ಜನತೆಗೆ ಅಹಿತವಾಗಬಹುದು. ಅದರ ಸಂರಕ್ಷಣೆಗಾಗಿ ಭ್ರಷ್ಟವಿರೋಧಿ ಶಾಸ್ತ್ರವು ವಿಶೇಷವಾದ ಭೂಮಿಕೆಯನ್ನು ರಚಿಸಬಲ್ಲುದು. ಇದರ ಸಂಕ್ಷಿಪ್ತ ಉಲ್ಲೇಖವನ್ನು ಮೇಲೆ ನೀಡಲಾಗಿದೆ.

***

# 11. ಭ್ರಷ್ಟವಿರೋಧಿ ಶಾಸ್ತ್ರದ ಅನ್ಯ ಶಾಸ್ತ್ರಗಳೊಂದಿಗೆ ಸಂಬಂಧ
# (Relationship between Anticurruptionology and other Disciplines )

ಭ್ರಷ್ಟವಿರೋಧಿ ಶಾಸ್ತ್ರವನ್ನು ವಿಕೃತ ಸಮಾಜವನ್ನು ಸುಧಾರಿಸುವ ಶಾಸ್ತ್ರ ವಿಜ್ಞಾನವೆಂದೂ ಹೇಳಬಹುದಾಗಿದೆ. ಈ ಶಾಸ್ತ್ರದ ಪ್ರತ್ಯಕ್ಷ ಸಂಬಂಧ ಮಾನವೀಯ ಶಾಸ್ತ್ರದೊಂದಿಗೂ ಇದೆ. ಈ ಶಾಸ್ತ್ರದಲ್ಲಿ ಮಾನವ ಮತ್ತು ಮಾನವ ಸಮಾಜದ ವಿಭಿನ್ನ ಸ್ವಭಾವಗಳು, ವ್ಯವಹಾರ, ಪರಿವರ್ತಿತ (ಬದಲಾದ) ಮನೋಭಾವ ಮತ್ತು ಕ್ರಿಯಾಕಲಾಪಗಳ ವಿಷಯದಲ್ಲಿ ಅಧ್ಯಯನ ಮಾಡಲಾಗುತ್ತದೆ. ಸಾಮಾಜಿಕ ಜೀವನದಲ್ಲಿ ವ್ಯಕ್ತಿಯಿಂದಾಗುವ ನೈತಿಕ ಅಥವಾ ಅನೈತಿಕ ಕ್ರಿಯಾಕಲಾಪಗಳನ್ನು ವಿಭಿನ್ನವಾದ ಅನ್ಯ ಶಾಸ್ತ್ರಗಳೊಂದಿಗೆ ನಿರೀಕ್ಷಣೆ ಅಧ್ಯಯನ ಮತ್ತು ಮೌಲ್ಯಾಂಕನ ಮಾಡಬಹುದಾಗಿದೆ. ಇದೇ ರೀತಿಯ ಅಧ್ಯಯನ ಕ್ರಮದಲ್ಲಿ ಈ ಭ್ರಷ್ಟವಿರೋಧಿ ಶಾಸ್ತ್ರ ಮತ್ತು ಅನ್ಯ ಸಾಮಾಜಿಕ ಶಾಸ್ತ್ರಗಳ ನಡುವಿನ ಸಂಬಂಧಗಳನ್ನು ಈ ಕೆಳಗಿನಂತೆ ವರ್ಣನೆ ಮಾಡಬಹುದಾಗಿದೆ.

## 01. ಭ್ರಷ್ಟಾಚಾರ ವಿರೋಧಿ ಶಾಸ್ತ್ರ ಮತ್ತು ಅರ್ಥ ಶಾಸ್ತ್ರ (Anticorruptiology and Economics)

ಅರ್ಥಶಾಸ್ತ್ರದ ತಾತ್ಪರ್ಯವೆಂದರೆ ವಿಭಿನ್ನ ರೀತಿಯ ಜನರ ಆರ್ಥಿಕ ಕ್ರಿಯಾ ಕಲಾಪಗಳ ಕುರಿತಾದ ಅಧ್ಯಯನ ಶಾಸ್ತ್ರವಾಗಿದೆ. ಮನುಷ್ಯನಿಗೆ ಆದಾಯ ಹೇಗೆ ಪ್ರಾಪ್ತವಾಗುತ್ತದೆ ಮತ್ತು ಹೇಗೆ ಖರ್ಚು ಮಾಡುತ್ತಾನೆ ? ಈ ವಿಚಾರವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ, ಮಾನವ ಸಮಾಜದಲ್ಲಿ ಆರ್ಥಿಕ ವ್ಯವಸ್ಥೆಯ

ಅನೇಕ ಒಳ್ಳೆಯ ಮತ್ತು ಕೆಟ್ಟ ಪಕ್ಷಗಳನ್ನು ಆಳವಾಗಿ ಅಧ್ಯಯನ ಮಾಡಿ, ಅನುಸಂಧಾನ ಮತ್ತು ವಿಶ್ಲೇಷಣೆ ಮಾಡುವ ವಿಧಿ ವಿಧಾನಗಳಿಂದ ಅರ್ಥ ತಂತ್ರದ ವ್ಯವಸ್ಥಿತ ಹಾದಿಯ ನಿರ್ಮಾಣ ಮಾಡುತ್ತದೆ. ಮತ್ತು ಈ ಅರ್ಥ ವ್ಯವಸ್ಥೆಯ ವಿಸ್ತೃತ ಅಧ್ಯಯನವನ್ನು ಮಾಡಿಸುತ್ತದೆ. ಇದೇ ರೀತಿ, ಭ್ರಷ್ಟವಿರೋಧಿ ಶಾಸ್ತ್ರವು ಮಾನವನ ಅರ್ಜಿತ ಸಂಪತ್ತು, ಗಳಿಸಿದ ಸಂಪತ್ತಿನ ಪ್ರದರ್ಶನ ಮಾಡುವ ಪ್ರವೃತ್ತಿ, ಸ್ವಭಾವ ಮತ್ತು ಪ್ರಕೃತಿಯ ವೈಜ್ಞಾನಿಕ ಅಧ್ಯಯನ ಮಾಡುವ ಶಾಸ್ತ್ರವಾಗಿದೆ. ಅರ್ಥ ಶಾಸ್ತ್ರದಲ್ಲಿ ವ್ಯವಸ್ಥಿತವಾದ ವ್ಯಾಪಾರ ವಹಿವಾಟು ಮಾಡುವ ಮೂಲಕ ಧನಾರ್ಜನೆ ಮಾಡುವುದು ಮತ್ತು ಅದನ್ನು ವ್ಯವಸ್ಥಿತ ರೂಪದಲ್ಲಿ ಸದುಪಯೋಗಪಡಿಸಿಕೊಳ್ಳುವ ತಿಳುವಳಿಕೆಯನ್ನು ಕೊಡುವುದಾಗಿದೆ. ಭ್ರಷ್ಟವಿರೋಧಿ ಶಾಸ್ತ್ರ, ಅನೈತಿಕ ಮತ್ತು ಕಾನೂನು ಬಾಹಿರ ರೀತಿಯಲ್ಲಿ ಸಂಪಾದಿಸಿದ ಹಣದ ವಿಪಕ್ಷದಲ್ಲಿ ನಿಂತು, ಆ ಹಣಕ್ಕೆ ನಿಯಂತ್ರಣ ಸಂಬಂಧಿತ ನಿಯಮಗಳನ್ನು ಸಿದ್ಧಗೊಳಿಸುತ್ತದೆ. ಅರ್ಥಶಾಸ್ತ್ರವು ಯಾವ ರೀತಿಯಲ್ಲಾದರೂ ಹಣ ಸಂಪಾದಿಸುವುದು ಮತ್ತು ಆ ಹಣದ ವ್ಯವಸ್ಥಾಪನೆ ಮಾಡಲು ಅವಕಾಶವನ್ನು ಕೊಡುವುದಿಲ್ಲ. ಭ್ರಷ್ಟಾಚಾರ ನಿಯಂತ್ರಣದ ಹೊರತು ಜನರ, ಸಮಾಜ ಮತ್ತು ದೇಶದ ಆರ್ಥಿಕ ಉನ್ನತಿ ಆಗಲಾರದು. ಈ ಸಿದ್ಧಾಂತದೊಂದಿಗೆ ಭ್ರಷ್ಟವಿರೋಧಿ ಶಾಸ್ತ್ರವು ಸಮಾಜದಲ್ಲಿ ವ್ಯಾಪಿಸಿರುವ ಭ್ರಷ್ಟ ವ್ಯವಹಾರವನ್ನು ಬಹಿರಂಗವಾಗಿ, ವಿರೋಧಿಸುತ್ತದೆ. ಅರ್ಥ, ಧನವನ್ನು ವ್ಯವಸ್ಥಿತಗೊಳಿಸುವ ಶಾಸ್ತ್ರವಾಗಿದೆ. ಭ್ರಷ್ಟವಿರೋಧಿ ಶಾಸ್ತ್ರವು, ಕೆಟ್ಟ ನಿಯತ್ತಿನಿಂದ ಸಂಗ್ರಹಿಸಿದ ಹಣದ ವಿರುದ್ಧವಾಗಿ ಅಧ್ಯಯನ ಮಾಡುವ ಶಾಸ್ತ್ರವಾಗಿದೆ. ಈ ಎರಡೂ ಶಾಸ್ತ್ರಗಳ ನಡುವಿನಲ್ಲಿ ಆರ್ಥಿಕ ಕಾರಣದಿಂದಾಗಿಯೂ ಕೂಡ ಅತ್ಯಂತ ಘನಿಷ್ಟ ಸಂಬಂಧವಿದೆ.

## 02. ಭ್ರಷ್ಟವಿರೋಧಿ ಶಾಸ್ತ್ರ ಮತ್ತು ರಾಜನೀತಿ ಶಾಸ್ತ್ರ (Anticorruptology and Political Science )

ರಾಜನೀತಿ ಶಾಸ್ತ್ರ ದೇಶ, ದೇಶದ ಸರಕಾರ, ರಾಜ್ಯ, ರಾಜ್ಯದ ವ್ಯವಸ್ಥೆ ಮತ್ತು ರಾಜನೈತಿಕ ಆಗು ಹೋಗುಗಳ ವಿಚಾರದಲ್ಲಿ ಅಧ್ಯಯನ ಮಾಡುವ ಶಾಸ್ತ್ರವಾಗಿದೆ. ರಾಜನೀತಿ ಶಾಸ್ತ್ರದೊಳಗೆ ದೇಶದಲ್ಲಿ ಶಾಂತಿ, ಸುವ್ಯವಸ್ಥೆ, ರಾಜ್ಯದ ಕಾನೂನು ವ್ಯವಸ್ಥೆ, ಲೋಕತಂತ್ರದ ಸ್ಥಾಯಿತ್ವ ಮತ್ತು ರಾಜಕೀಯ ಪಕ್ಷಗಳ ಕ್ರಿಯಾ ಕಲಾಪ, ನಾಗರಿಕರ ಹಕ್ಕು, ಅಧಿಕಾರ ಇತ್ಯಾದಿಗಳ ಅಧ್ಯಯನವಿರುತ್ತದೆ. ಇದೇ ರೀತಿಯ ಭ್ರಷ್ಟವಿರೋಧಿ ಶಾಸ್ತ್ರದಲ್ಲಿ ಸಮಾಜ ಮತ್ತು ರಾಜನೈತಿಕ ಪರಿಧಿಯಲ್ಲಿ ಹೇಗೆ ಭ್ರಷ್ಟಾಚಾರಮುಕ್ತ ವ್ಯವಸ್ಥೆಯನ್ನು ಸ್ಥಿರಗೊಳಿಸಬಹುದಾಗಿದೆ. ಎಂಬುದರ

(ವಿಷಯದ ) ಕುರಿತು ವಿಸ್ತೃತ ಅಧ್ಯಯನವಿರುತ್ತದೆ. ಭ್ರಷ್ಟಾಚಾರ ನಿಯಂತ್ರಣದಿಂದ ಸಮಾಜದಲ್ಲಿ ರಾಜನೈತಿಕವಾಗಿ ಶಾಂತಿ ಸ್ಥಾಪಿತವಾಗುತ್ತದೆ. ಯಾವ ದೇಶದಲ್ಲಿ ಭ್ರಷ್ಟಾಚಾರ ವ್ಯಾಪಿಸಿರುತ್ತದೋ ಆ ದೇಶ ರಾಜನೈತಿಕವಾಗಿ, ಅಸ್ಥಿರವಾಗುತ್ತದೆ. ವಿಶ್ವದ ಹಲವು ದೇಶಗಳಲ್ಲಿ ಭ್ರಷ್ಟಾಚಾರದ ಕಾರಣದಿಂದಾಗಿ ರಾಜನೈತಿಕ ಅಸ್ಥಿರತೆ ಸ್ಥಾಪಿತವಾಗಿದೆ. ಅಸ್ಥಿರ ರಾಜನೈತಿಕ ವ್ಯವಸ್ಥೆಯಿಂದಾಗಿ, ದೇಶ ಮತ್ತು ಜನರ ಉನ್ನತಿ ಆಗುತ್ತಿಲ್ಲ. ಭ್ರಷ್ಟಾಚಾರಯುಕ್ತ ದೇಶದಲ್ಲಿ ಆರ್ಥಿಕ ವಿಕಾಸ ಶೂನ್ಯವಾಗಿ, ಅನೇಕ ರಾಜನೈತಿಕ ಸಮಸ್ಯೆಗಳುಂಟಾಗುತ್ತವೆ. ಇಂತಹ ಸಮಸ್ಯೆಗಳಿಗೆ ಸಮಾಧಾನ ಕಂಡುಕೊಳ್ಳುವುದಕ್ಕಾಗಿ ಜನತೆ, ಸಮಾಜ ಮತ್ತು ಸರಕಾರಗಳಿಗೆ ಭ್ರಷ್ಟವಿರೋಧಿ ಶಾಸ್ತ್ರವು ಸಹಾಯ ಮಾಡುತ್ತದೆ. ಮತ್ತು ಸರಕಾರಗಳಿಗೆ ಭ್ರಷ್ಟವಿರೋಧಿ ಶಾಸ್ತ್ರವು ಸಹಾಯ ಮಾಡುತ್ತದೆ. ಮತ್ತು ಭ್ರಷ್ಟಾಚಾರ ನಿಯಂತ್ರಿತ ಸಮಾಜ ಸ್ಥಾಪನೆ ಮಾಡಿ, ವಿಕಾಸ ಕಾರ್ಯವನ್ನು ಪ್ರಾರಂಭಿಸುವಲ್ಲಿ, ಅದೇ ರೀತಿ ಅನುಶಾಸಿತ ಮತ್ತು ಮರ್ಯಾದಿತ ಸಮಾಜ ರಚನೆ ಮಾಡುವಲ್ಲಿ ಸಹಾಯ ಮಾಡುತ್ತದೆ. ಜನರ ಜೀವನ ಮಟ್ಟ ಉನ್ನತವಾಗುವುದರಿಂದ ಸ್ಥಿರತೆ ಸ್ಥಾಪಿತವಾಗುತ್ತದೆ. ಈ ರೀತಿಯಲ್ಲಿ ಭ್ರಷ್ಟವಿರೋಧಿ ಶಾಸ್ತ್ರ ಮತ್ತು ರಾಜನೀತಿ ಶಾಸ್ತ್ರ ಒಂದು ಇನ್ನೊಂದನ್ನು ಅವಲಂಬಿಸುವುದರಿಂದ ಇವುಗಳಲ್ಲಿ ಘನಿಷ್ಟವಾದ ಸಂಬಂಧವಿದೆ.

### 03. ಭ್ರಷ್ಟವಿರೋಧಿ ಶಾಸ್ತ್ರ ಮತ್ತು ಸಮಾಜ ಶಾಸ್ತ್ರ (Anticorruptology and Sociology)

ಸಮಾಜಶಾಸ್ತ್ರದ ತಾತ್ಪರ್ಯವೆಂದರೆ, ಸಮಾಜದ ಸಂಪೂರ್ಣ ಕ್ರಿಯಾಕಲಾಪದ ಅಧ್ಯಯನದ ಶಾಸ್ತ್ರವಾಗಿದೆ. ಈ ಸಮಾಜಶಾಸ್ತ್ರದಲ್ಲಿ, ಸಮಾಜದ ಉತ್ಪತ್ತಿ, ಸಮಾಜದ ರಚನೆ, ಸಾಮಾಜಿಕ ಪರಂಪರೆ, ರೀತಿ ರಿವಾಜುಗಳು, ಸಂಸ್ಕೃತಿ ಮತ್ತು ಸಮಾಜ ವಿಕಾಸದ ಅಧ್ಯಯನವಿರುತ್ತದೆ. ಇದರ ಹೊರತಾಗಿ, ಸಮಾಜದಲ್ಲಿ ಉಪಸ್ಥಿತವಿರುವ ಕೆಟ್ಟ ರೀತಿ ನೀತಿಗಳು ಮತ್ತು ಕೆಟ್ಟ ನಡವಳಿಕೆಗಳನ್ನು ನಿರ್ಮೂಲನೆ ಮಾಡುವ ಉಪಾಯ ಕಂಡು ಹಿಡಿದು, ರಾಜನೈತಿಕ ಆರ್ಥಿಕ ಐತಿಹಾಸಿಕ, ನೈತಿಕ, ನ್ಯಾಯ ಮೊದಲಾದ ವಿಭಿನ್ನ ವಿಚಾರಗಳ ವಿಷಯದಲ್ಲಿ ಅಧ್ಯಯನ ಮಾಡುತ್ತದೆ. ಈ ಎಲ್ಲಾ ತರಹದ ಅಧ್ಯಯನ ಭ್ರಷ್ಟವಿರೋಧಿ ಶಾಸ್ತ್ರದಲ್ಲಿ ಇರುತ್ತದೆ. ಏಕೆಂದರೆ, ಸಮಾಜ ಶಾಸ್ತ್ರ ಮತ್ತು ಭ್ರಷ್ಟವಿರೋಧಿ ಶಾಸ್ತ್ರಕ್ಕೆ ಅತ್ಯಂತ ನಿಕಟವಾದ ಸಂಬಂಧವಿದೆ. ಯಾವ ಸಮಸ್ಯೆಗೆ ಪರಿಹಾರ ಸಮಾಜಶಾಸ್ತ್ರ ನೀಡಲಾಗುವುದಿಲ್ಲವೋ ... ಅದಕ್ಕೆ ಭ್ರಷ್ಟವಿರೋಧಿ ಶಾಸ್ತ್ರ ಪರಿಹಾರದ ಉಪಾಯವನ್ನು ನೀಡುತ್ತದೆ. ಆದ್ದರಿಂದ ಸಮಾಜ ಶಾಸ್ತ್ರ ಮತ್ತು ಭ್ರಷ್ಟವಿರೋಧಿ ಶಾಸ್ತ್ರ ಒಂದು ಇನ್ನೊಂದರ ಪೂರಕವಾಗಿದೆ.

## 04. ಭ್ರಷ್ಟವಿರೋಧಿ ಶಾಸ್ತ್ರ ಮತ್ತು ನೀತಿ ಶಾಸ್ತ್ರ (Anticorruptiology and Ethics )

ಜೀವನದಲ್ಲಿ ಯಾವ ನೀತಿಯ ಪಾಲನೆ ಮಾಡಬೇಕು ಎಂಬ ಶಾಸ್ತ್ರದ ತಾತ್ಪರ್ಯವೇ ನೀತಿ ಶಾಸ್ತ್ರ. ಇದು ಅದರ ಅಧ್ಯಯನದಿಂದ ತಿಳಿದು ಬರುತ್ತದೆ. ಈ ಶಾಸ್ತ್ರವು ಯಾವುದೇ ಒಳಿತು – ಕೆಡುಕು, ಸರಿ–ತಪ್ಪು, ಉಚಿತ – ಅನುಚಿತ, ನೈತಿಕ– ಅನೈತಿಕ ಪಕ್ಷಗಳ ಸಂಬಂಧ ಕುರಿತಾದ ವ್ಯಾಖ್ಯಾನವನ್ನು ಮಾಡುತ್ತದೆ. ಮತ್ತು ನೀತಿಯನ್ನು ವ್ಯವಸ್ಥಿತಗೊಳಿಸುತ್ತದೆ. ನೀತಿ ಶಾಸ್ತ್ರ ಮನುಷ್ಯನ ನೈತಿಕ ನಿಯಮಗಳ ಆಧಾರದಲ್ಲಿ, ಮನುಷ್ಯ ಮತ್ತು ಸಮಾಜದ ಕಲ್ಯಾಣಕರ (ಶುಭ) ಸಂಬಂಧದ ಅಧ್ಯಯನವನ್ನು ಮಾಡಿಸುತ್ತದೆ. ನೈತಿಕ ನಿಯಮಗಳು ಮತ್ತು ಅಸಲಿ ಆಚರಣೆಗಳ ಆಧಾರದಲ್ಲಿ ಸಮಾಜದ ವಿಕಾಸವನ್ನು ಮಾಡಬೇಕು. ಇದಕ್ಕಾಗಿ ವ್ಯಕ್ತಿ ಮತ್ತು ಸಮಾಜದ ಹಿರಿಮೆಯ ಔನ್ನತ್ಯವನ್ನು ಸ್ಥಾಪಿಸುವಲ್ಲಿ ಸಹಾಯ ಮಾಡುವುದೇ ನೀತಿ ಶಾಸ್ತ್ರದ ಸಾರತತ್ವವಾಗಿದೆ. ಭ್ರಷ್ಟವಿರೋಧಿ ಶಾಸ್ತ್ರದ ಮೂಲ ಉದ್ದೇಶವೇ ನೀತಿ ಶಾಸ್ತ್ರದ ಆಧಾರದಲ್ಲಿ ವ್ಯಕ್ತಿ ಮತ್ತು ಸಮಾಜದಲ್ಲಿ ನೈತಿಕ ನಿಯಮಗಳ ಪಾಲನೆ ಮಾಡಿ, ಆಚಾರವಂತ ವ್ಯಕ್ತಿ, ಸ್ವಚ್ಛ ಸಮಾಜ, ನ್ಯಾಯ ಪೂರ್ಣ ವ್ಯವಸ್ಥೆ ಮತ್ತು ನೀತಿಯುಕ್ತ ವ್ಯವಹಾರ ಸ್ಥಿರಗೊಳಿಸುವ ಕಾರಣದಿಂದಾಗಿ ನೀತಿಶಾಸ್ತ್ರ ಮತ್ತು ಭ್ರಷ್ಟವಿರೋಧಿ ಶಾಸ್ತ್ರದಲ್ಲಿ ಆತ್ಮೀಯ ಸಂಬಂಧವಿದೆ.

## 05. ಭ್ರಷ್ಟವಿರೋಧಿ ಶಾಸ್ತ್ರ ಮತ್ತು ಮನೋ ವಿಜ್ಞಾನ : (Anticorruptology and Psychology)

ಮಾನವನ ಮಾನಸಿಕತೆ ಹಾಗೂ ಸ್ವಭಾವಜನ್ಯ ವ್ಯವಹಾರಗಳ ಕ್ರಿಯೆ ಪ್ರತಿಕ್ರಿಯೆಗಳ ವಿಷಯ ಕುರಿತ ಅಧ್ಯಯನ ಮಾಡುವ ಶಾಸ್ತ್ರವನ್ನು ಮನೋವಿಜ್ಞಾನ ಶಾಸ್ತ್ರವೆನ್ನುತ್ತಾರೆ. ಇದರ ಅಧ್ಯಯನ ಮನುಷ್ಯನ ಮನಸ್ಸಿನ ಉದ್ವೇಗ ಮತ್ತು ಭಾವನೆಗಳ ಮೇಲೆ ಆಧಾರಿತವಾಗಿರುತ್ತದೆ. ಮನುಷ್ಯನ ಎಲ್ಲಾ ಒಳ್ಳೆಯ ಕೆಟ್ಟ ಕೆಲಸಗಳು ಅವನ ಮಾನಸಿಕ ಸ್ಥಿತಿಯನ್ನು ಅವಲಂಬಿಸುತ್ತದೆ. ಮನಸ್ಸು ಚಂಚಲವಾಗುತ್ತದೆ. ಹೀಗಾಗಿ, ಮನುಷ್ಯನ ಉನ್ನತಿ–ಅವನತಿ ಮತ್ತು ವ್ಯಕ್ತಿಗತ ವಿಕಾಸ, ಇವೆಲ್ಲಾ ಮಾನಸಿಕ ಸ್ಥಿತಿಗನುಸಾರವಾಗಿ ಆಗುವುದು. ಮನುಷ್ಯನ ಸ್ವಭಾವ, ಸಂಸ್ಕಾರ ಪ್ರಕೃತಿಯ ನಿಯಂತ್ರಣ ಮಾನಸಿಕ ಉದ್ವೇಗವೇ ನಿಯಂತ್ರಿಸುತ್ತದೆ. ಇದಕ್ಕಗಿಯೇ ವಿಜ್ಞಾನದ ರೀತಿಯಲ್ಲಿ ಇದರ ಅಧ್ಯಯನ ಮಾಡಲಾಗುತ್ತದೆ. ಮನುಷ್ಯ ಜನಿಸುವಾಗಲೆ ಭ್ರಷ್ಟ ಮನಸ್ಸು ಹಾಗೂ ನೈತಿಕತೆಯೊಂದಿಗೆ ಹುಟ್ಟು

ಪಡೆಯುವುದಿಲ್ಲ. ಪ್ರಾಕೃತಿಕವಾಗಿ ಮನುಜ ಸ್ವಚ್ಛ, ಪವಿತ್ರ ಮತ್ತು ನೀತಿವಂತನಾಗಿಯೇ ಜನ್ಮ ಪಡೆಯುತ್ತಾನೆ. ಆದರೆ ವಾತಾವರಣ, ಪರಿಸ್ಥಿತಿ, ಮತ್ತು ಸಾಮಾಜಿಕ ವ್ಯವಹಾರಗಳಿಂದ ಮಾನವ ಮನಸ್ಸು ಪರಿವರ್ತಿತವಾಗುತ್ತದೆ. ಈ ರೀತಿಯ ಪರಿವರ್ತನೆ ಮನುಷ್ಯನ ಮನಸ್ಸು ಭಾವನೆಗಳಿಂದ ಉತ್ಪನ್ನವಾದ ಕ್ರಿಯೆ ಮತ್ತು ಪ್ರತಿಕ್ರಿಯೆಗಳಿಂದ ಉತ್ಪನ್ನವಾದ ಸಮಸ್ಯೆಗಳಿಗೆ ಸಮಾಧಾನ (ಪರಿಹಾರ)ವನ್ನು ಮನೋವಿಜ್ಞಾನದಲ್ಲಿ ಶೋಧಿಸಲಾಗುತ್ತದೆ. ಇದೇ ರೀತಿಯಲ್ಲಿ ಭ್ರಷ್ಟವಿರೋಧಿ ಶಾಸ್ತ್ರದಲ್ಲಿಯು ಕೂಡ, ಮನುಷ್ಯನಲ್ಲಾಗುವ ಪರಿವರ್ತಿತ ಮನೋದ್ವೇಗ ಮತ್ತು ಮನೋಭಾವವನ್ನು ನಿಯಂತ್ರಿತ ಸ್ಥಿತಿಯಲ್ಲಿಡುವ ವಿಧಿ ವಿಧಾನಗಳ ರಚನೆ ಇರುತ್ತದೆ. ಭ್ರಷ್ಟಾಚಾರವು ಮನಸ್ಸು ಮತ್ತು ಭಾವನೆಗಳೊಂದಿಗೆ ಸಂಬಂಧಿತವಾಗಿರುವುದರಿಂದ ಭ್ರಷ್ಟವಿರೋಧಿ ಸಿದ್ಧಾಂತ (ಶಾಸ್ತ್ರ) ಮತ್ತು ಮನೋವಿಜ್ಞಾನ ಒಂದೇ ಆಗಿರುವುದರಿಂದ ಭ್ರಷ್ಟವಿರೋಧಿ ಸಿದ್ಧಾಂತ (ಶಾಸ್ತ್ರ) ಮತ್ತು ಮನೋ ವಿಜ್ಞಾನ ಒಂದೇ ಶರೀರದೊಂದಿಗೆ ಸಂಬಂಧಿತವಾಗಿರುವುದರಿಂದ (ಒಂದೇ ಪ್ರಕೃತಿಯುದ್ದಾಗಿರುವುದರಿಂದ) ಒಂದೇ ನಾಣ್ಯದ ಎರಡು ಮುಖಗಳಿರುವಂತಿದೆ. ಇದನ್ನು ಬೇರ್ಪಡಿಸಲಾಗದು. ಆದ್ದರಿಂದ ಈ ಎರಡೂ ಸಿದ್ಧಾಂತಗಳಲ್ಲಿ ನಿಕಟ ಸಂಬಂಧವಿದೆ.

## 06. ಭ್ರಷ್ಟವಿರೋಧಿ ಶಾಸ್ತ್ರ (ಸಿದ್ಧಾಂತ) ಮತ್ತು ಇತಿಹಾಸ (Anticorruptology and History)

ಇತಿಹಾಸ ಎಂದರೆ, ಅತೀತ (ಗತ)ದ ಘಟನೆ. ಮತ್ತು ಸ್ಥಿತಿಯ ಅಧ್ಯಯನ ಮಾಡುವ ಶಾಸ್ತ್ರವಾಗಿದೆ. ಈ ಶಾಸ್ತ್ರವನ್ನು ಲಿಖಿತ – ಅಲಿಖಿತದ ಆಧಾರದಲ್ಲಿ ಮಾತ್ರವಲ್ಲ, ಭೌತಿಕ ಸಂರಚನೆ, ರೀತಿಗತ ಸ್ಥಿತಿಯಲ್ಲಿ ಮತ್ತು ಸಂಸ್ಕೃತಿಯ ಮೂಲಕವೂ ಮಾಡಬಹುದಾಗಿದೆ. ಯಾವುದೇ ದೇಶದ ಸಾಮಾಜಿಕ , ಆರ್ಥಿಕ, ರಾಜನೈತಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಘಟನಾಕ್ರಮದಿಂದ ಆ ದೇಶದ ಉನ್ನತಿ ಅವನತಿಯ ಘಟನಾವಳಿಯನ್ನು ಇತಿಹಾಸ ಹೇಳುತ್ತದೆ. ಮತ್ತು ಇಂತಹ ಸತ್ಯ ಘಟನಾಕ್ರಮಗಳು ಸಮಾಜದಲ್ಲಿ ಮಹತ್ವಪೂರ್ಣ ಸ್ಥಾನವನ್ನು ಪಡೆಯುತ್ತವೆ. ನೈತಿಕ ಮತ್ತು ಪ್ರಾಮಾಣಿಕತೆಯಿಂದ ಪ್ರತಿನಿಧಿಸಲ್ಪಟ್ಟ ಸಮಯ ಮತ್ತು ಅನೈತಿಕ ಹಾಗೂ ಭ್ರಷ್ಟ ವ್ಯಕ್ತಿಗಳ ನೇತೃತ್ವದಲ್ಲಿ ಘಟಿಸಿದ ಸಮಯ, ಇತಿಹಾಸದಲ್ಲಿ ಸುರಕ್ಷಿತವಾಗಿ ನಿಲ್ಲುತ್ತದೆ. ವರ್ತಮಾನವು, ಮುಖಂಡತ್ವವನ್ನು ಹೊಂದಿರುವ ಸಮೂಹದ ಇತಿಹಾಸದ ಮಾರ್ಗ ನಿರ್ದೇಶನ ಮಾಡುತ್ತದೆ. ಭ್ರಷ್ಟಾಚಾರ ನಿನ್ನೆ (ಹಿಂದೆ) ಇತ್ತು. ಅದನ್ನು ಯಾವ ರೀತಿಯಲ್ಲಿ ನಿಯಂತ್ರಿಸಲಾಯಿತು ಮತ್ತು

ಇಂದು ಹೇಗೆ ಮಾಡಬಹುದು, ಇದರ ಮಾರ್ಗ ನಿರ್ದೇಶನ ಇತಿಹಾಸದಿಂದ ಪ್ರಾಪ್ತವಾಗುತ್ತದೆ. ನಾಳಿನ ಭವಿಷ್ಯದ ಯುಗದ ಅಧ್ಯಯನವನ್ನು ಕೂಡ ಇತಿಹಾಸ ಮಾಡಿಸುತ್ತದೆ. ಆದ್ದರಿಂದ ಇತಿಹಾಸದ ಹೊರತು ಭ್ರಷ್ಟವಿರೋಧಿ ಶಾಸ್ತ್ರ ಅಪೂರ್ಣವಾಗಿದೆ.

## 07. ಭ್ರಷ್ಟವಿರೋಧಿಶಾಸ್ತ್ರ ಮತ್ತು ಪತ್ರಿಕಾರಂಗ (Anticorruptology and Journalism)

ವ್ಯಕ್ತಿ, ಸಮಾಜ, ದೇಶ ಮತ್ತು ವಿಶ್ವದಲ್ಲಿ ಘಟಿಸುವ ವಿಭಿನ್ನ ರೀತಿಯ ಸೂಚನೆಗಳನ್ನು ಪ್ರಾಮಾಣಿಕವಾಗಿ ವ್ಯಕ್ತಿಯಿಂದ ವ್ಯಕ್ತಿಗೆ ಪ್ರವಹಿಸುವ ಕೆಲಸ ಮಾಡುವ ಉದ್ದೇಶವೇ ಪತ್ರಿಕಾರಂಗದ್ದು. ಈ ಪತ್ರಿಕೆಗಳ ಕೆಲಸದಲ್ಲಿ ಸತ್ಯಾಂಶದ ವಿಷಯಗಳು ಮತ್ತು ಘಟನೆಗಳನ್ನು ಇದ್ದುದ್ದನ್ನು ಇದ್ದಂತೆ ಜನಮಾನಸದಲ್ಲಿ ಪಸರಿಸುವ ಕೆಲಸವನ್ನು ಮಾಡಬೇಕಾಗುತ್ತದೆ. ಪತ್ರಿಕಾ ಪ್ರಕಟಣೆಯಲ್ಲಿ ಅಪ್ರಾಮಾಣಿಕತೆ, ದಾರಿತಪ್ಪಿಸುವ ವಿಷಯಗಳಿದ್ದಲ್ಲಿ ಅಂತಹ ಪತ್ರಿಕಾರಂಗವನ್ನು ಹಳದಿ ಪತ್ರಿಕಾರಂಗವೆಂದು (Yellow Journalism) ಪರಿಗಣಿಸಲಾಗುತ್ತದೆ. ಇಂತಹ ಪೀತ ಪತ್ರಿಕಾರಂಗದೊಂದಿಗೆ ಭ್ರಷ್ಟವಿರೋಧಿ ಶಾಸ್ತ್ರದ ಪರಸ್ಪರ ವಿರೋಧಾಭಾಸದ ಸಂಬಂಧವನ್ನು ತೋರಿಸುತ್ತದೆ. ಪತ್ರಿಕಾರಂಗವು, ಒಂದು ಮರ್ಯಾದಿತ ವೃತ್ತಿಯಾಗಿದೆ. ಇದು ರಾಜ್ಯ ವ್ಯವಸ್ಥೆಯಲ್ಲಿ ಅತ್ಯಂತ ಶಕ್ತಿಯುತ ಸ್ವರೂಪದಲ್ಲಿ ಸ್ಥಾಪಿತವಾಗುತ್ತದೆ. ಹಾಗಾಗಿ, ಇದನ್ನು ಸಂವಿಧಾನದಲ್ಲಿ ನಾಲ್ಕನೇ ಸ್ಥಂಭದ ರೂಪದಲ್ಲಿ ಸ್ವೀಕರಿಸಲಾಗಿದೆ. ರಾಜ್ಯ ಶಕ್ತಿಯ ಸಂತುಲನದಲ್ಲಿ ಪತ್ರಿಕಾರಂಗವು ಮಹತ್ವದ ಪಾತ್ರವನ್ನು ನಿಭಾಯಿಸುತ್ತದೆ. ಪತ್ರಿಕಾ ಮಾಧ್ಯಮ ಹಾಗೂ ಸಾಮಾನ್ಯ ಸಂಚಾರ ಮಾಧ್ಯಮದ ನಿಯತ್ತಿನಲ್ಲಿ ಬದಲಾವಣೆಯುಂಟಾದಾಗ, ವ್ಯಕ್ತಿ, ಸಮಾಜ ಮತ್ತು ದೇಶ ಕೆಟ್ಟ (ಭ್ರಷ್ಟ) ಪರಿಣಾಮಗಳನ್ನೆದುರಿಸಬೇಕಾಗಿ ಬರುತ್ತದೆ. ಇದರೊಂದಿಗೆ ಭ್ರಷ್ಟವಿರೋಧಿ ಶಾಸ್ತ್ರದ ಅಂತಃಸಂಬಂಧಗಳು ಸ್ಥಿರವಾಗಿವೆ.

## 08. ಭ್ರಷ್ಟವಿರೋಧಿ ಶಾಸ್ತ್ರ ಮತ್ತು ಮಾನವ ಶಾಸ್ತ್ರ (Anticorruptology and Anthropology)

ಮಾನವ ವಿಕಾಸದ ಎಲ್ಲಾ ಆಯಾಮಗಳ ತಥ್ಯಾಂಶದ ಅಧ್ಯಯನವೇ ಮಾನವ ಶಾಸ್ತ್ರದ ತಾತ್ಪರ್ಯವಾಗಿದೆ. ಈ ಶಾಸ್ತ್ರದಲ್ಲಿ, ಮನುಷ್ಯ ಅವನ ಸಂಸ್ಕೃತಿ, ಸಮಾಜದ ಸಂರಚನೆಯ ಸಮಗ್ರ ಅಧ್ಯಯನವಿರುತ್ತದೆ. ಈ ಶಾಸ್ತ್ರದ ಅಂತರಾಳದಲ್ಲಿ ಮನುಷ್ಯನ ವರ್ಣ, ಜಾತಿ, ಧರ್ಮ, ಸಂಸ್ಕೃತಿ ಮತ್ತು ಮಾನ್ಯತೆ ಇತ್ಯಾದಿಗಳ

ಅಧ್ಯಯನವೂ ಇರುವುದರಿಂದ ಮನುಷ್ಯನ ಸ್ವಭಾವ, ಪ್ರಕೃತಿ, ಆಚಾರ, ವಿಚಾರ ಮತ್ತು ವ್ಯವಹಾರಗಳ ಅಧ್ಯಯನವು ಕೂಡ ಆಗುತ್ತದೆ. ಇವೆಲ್ಲಾ ಸಮಯಾನಸಾರವಾಗಿ, ಪರಿವರ್ತಿತವಾಗುತ್ತಿರುತ್ತದೆ. ಆದ್ದರಿಂದ ಮನುಷ್ಯನ ಚಿಂತನೆ –ಭಾವನೆ ಮತ್ತು ವ್ಯವಹಾರಗಳು, ಪ್ರದೂಷಿತಗೊಳ್ಳುತ್ತವೆ ಇದರ ಸಂಬಂಧ ಭ್ರಷ್ಟ ವಿರೋಧಿ ಶಾಸ್ತ್ರದೊಂದಿಗಿದೆ. ವಿಶ್ವದಲ್ಲಿ, ಭೌಗೋಳಿಕವಾಗಿ, ಹಲವಾರು, ಭಾಗಗಳಲ್ಲಿ ಜನಿಸುವ ಮಾನವ ಸಮುದಾಯದ ವರ್ಣ, ಜಾತಿ, ಮತ್ತು ಅವರ ಭಾಷೆ ಬೇರೆ ಬೇರೆಯಾಗಿರುತ್ತವೆ. ಇವರ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಮಾನ್ಯತೆಗಳು ಕೂಡ ಭಿನ್ನ ಭಿನ್ನವಾಗಿರುತ್ತವೆ. ಇವರ ಚಿಂತನೆ, ಸ್ವಭಾವ ಮತ್ತು ವ್ಯವಹಾರಗಳಲ್ಲಿ ವ್ಯತ್ಯಾಸಗಳಿರುವುದೂ ಸ್ವಾಭಾವಿಕವೇ ಆಗಿದೆ. ಮಾನವ ಸ್ವಭಾವ, ಯೋಚನೆ, ಭಾವನೆ ಮತ್ತು ವ್ಯವಹಾರಗಳ ಅಧ್ಯಯನವೂ ಇದೇ ಭ್ರಷ್ಟವಿರೋಧಿ ಶಾಸ್ತ್ರದೊಳಗೆ ಇರುವುದರಿಂದ ಈ ಎರಡೂ ಶಾಸ್ತ್ರಗಳ ನಡುವೆ ವಿಶೇಷವಾದ ಸಂಬಂಧ ಸ್ಥಾಪಿತವಾಗಿದೆ.

## 09. ಭ್ರಷ್ಟವಿರೋಧಿ ಶಾಸ್ತ್ರ ಮತ್ತು ಜನ ಪ್ರಶಾಸನ (ಜನಾಡಳಿತ) (Anticorruptology and Public Administration)

ಜನಾಡಳಿತದ ಅರ್ಥವೆಂದರೆ, ರಾಜ್ಯ ಶಾಸನದ ಪ್ರಮುಖ ಅಂಗವಾದ ಕಾರ್ಯಾಂಗದ ಮೂಲಕ ನಡೆಯುವ ಕೆಲಸ – ಕರ್ತವ್ಯ ಮತ್ತು ಅಧಿಕಾರದ ಅಧ್ಯಯನವಾಗಿದೆ. ಈ ಅಧ್ಯಯನದಲ್ಲಿ ಸೇವೆಯನ್ನು ಸ್ವೀಕರಿಸುವವರು ಮತ್ತು ಸೇವೆಯನ್ನು ನೀಡುವವರು ಇವರ ನಡುವೆ ಉಂಟಾಗುವ ವ್ಯವಸ್ಥಾಪನೆಯ ವಿಧಿಯ ವಿಸ್ತೃತ ವ್ಯಾಖ್ಯೆಯನ್ನು ಮಾಡುತ್ತಾ, ಇವುಗಳ ಮಧ್ಯೆ ಬರುವ ಸಮಸ್ಯೆಗೆ ವಿಧಿವತ್ತಾದ ಸಮಾಧಾನ ಹೇಗೆ ಆಗಬಹುದು, ಎಂಬುದರ ಮಾಹಿತಿ ತಿಳಿದುಬರುತ್ತದೆ. ಜನಾಡಳಿತದಲ್ಲಿ ರಾಷ್ಟ್ರ ಮತ್ತು ಜನತೆಯ ಹಿತ ದೃಷ್ಟಿಯಿಂದ ಅನೇಕ ರೀತಿಯ ಕಾರ್ಯ ಯೋಜನೆಗಳು ಸಿದ್ಧಪಡಿಸುವುದು ಇರುತ್ತದೆ. ಇಂತಹ ಯೋಜನೆಗಳನ್ನೂ ಸಿದ್ಧಪಡಿಸುವ ಸಮಯದಲ್ಲಿ ಆಳುವ ಪಕ್ಷ ವಿರೋಧಪಕ್ಷ ಮತ್ತು ಜನರಿಗೆ ಆಗುವ ಲಾಭ ಆಗಬಹುದು. ಇದರಿಂದ ಸೇವೆಯನ್ನು ನೀಡುವ ಮತ್ತು ಪಡೆಯುವ ಎರಡೂ ಅಧಿಕಾರ ಮತ್ತು ಕರ್ತವ್ಯದಲ್ಲಿ ಅನಿಶ್ಚಿತತೆಯುಂಟಾಗಬಹುದು. ಇದೇ ಅಸಾಮಾನ್ಯ ಸ್ಥಿತಿಯನ್ನು ಕೊಡಬಲ್ಲುದು. ಆದ್ದರಿಂದ ಜನಾಡಳಿತ ವಿಷಯ ಮತ್ತು ಭ್ರಷ್ಟವಿರೋಧಿ ಶಾಸ್ತ್ರದಲ್ಲಿ ಆಂತರಿಕ ಸಂಬಂಧವಿದೆ.

## 10. ಭ್ರಷ್ಟವಿರೋಧಿ ಶಾಸ್ತ್ರ ಮತ್ತು ಗ್ರಾಮೀಣ ವಿಕಾಸ (Anticorruptology and Rural Developement)

ದೇಶದ ಅತ್ಯಂತ ಚಿಕ್ಕ ರೂಪ ಹಳ್ಳಿ ಗ್ರಾಮ ಮತ್ತು ಗ್ರಾಮ ವಿಕಾಸವೇ ರಾಷ್ಟ್ರೀಯ ವಿಕಾಸದ ಮೇರುದಂಡವಾಗಿದೆ. ಇದೇ ಸಿದ್ಧಾಂತದ ಆಧಾರದಲ್ಲಿ ಗ್ರಾಮೀಣ ವಿಕಾಸವನ್ನು ಅಧ್ಯಯನ ವಿಷಯವನ್ನಾಗಿ ಮಾಡಲಾಗಿದೆ. ಯಾವುದೇ ದೇಶದಲ್ಲಿಯೂ ನಗರ ಮತ್ತು ಹಳ್ಳಿ (ಗ್ರಾಮ) ಎಂಬ ವ್ಯವಸ್ಥೆಯಲ್ಲಿ ವಸತಿ ಪ್ರದೇಶಗಳನ್ನಾಗಿ ವಿಭಜಿಸಲಾಗುತ್ತದೆ. ನಗರಗಳಲ್ಲಿ ವಾಸಿಸುವ ಮತ್ತು ಹಳ್ಳಿಗಳಲ್ಲಿ ವಾಸಿಸುವ ಮನುಷ್ಯನ ಸ್ತರ (ಮಟ್ಟ) ಬೇರೆ ಬೇರೆಯದಾಗಿರುತ್ತದೆ. ಹಾಗಾಗಿ, ಅವರಲ್ಲಿ ಇಂತಹ ಬೇಧಗಳಿರಬಾರದೆಂದ ದೃಷ್ಟಿಯಿಂದ ಆವಶ್ಯಕತೆ, ಸಂಪರ್ಕಿತ, ಗುರಿ ಅವಕಾಶ ಮತ್ತು ವಿಕಾಸದ ಸಮಾನ ಅನುಪಾತದ ಲೆಕ್ಕದಲ್ಲಿ ಸಮಾನ ಶ್ರೇಣಿಯಲ್ಲಿ ವೃದ್ಧಿಯಾಬೇಕೆಂಬ ಉದ್ದೇಶದಿಂದ ಗ್ರಾಮೀಣ ವಿಕಾಸದ ಸಿದ್ಧಾಂತದ ನಿರ್ಮಾಣವಾಗಿದೆ. ಈ ಸಿದ್ಧಾಂತದಿಂದ ಭ್ರಷ್ಟಾಚಾರ ವಿರೋಧಿ ಶಾಸ್ತ್ರವನ್ನು ಬೇರ್ಪಡಿಸಿಟ್ಟು ನೋಡಬೇಕಾದೀತು. ಏಕೆಂದರೆ, ಗ್ರಾಮೀಣ ವಿಕಾಸದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಾತ್ರವಲ್ಲದೆ ಆರ್ಥಿಕ ವಿಕಾಸವು ಮುಖ್ಯ ಪಾತ್ರವನ್ನು ನಿರ್ವಹಿಸುತ್ತದೆ. ಗ್ರಾಮೀಣವಿಕಾಸದ ಮೂಲ ವಿಕಾಸವೇ ಆರ್ಥಿಕ ವಿಕಾಸವಾಗಿರುತ್ತದೆ. ಅದರಲ್ಲಿ ಆರ್ಥಿಕ ಭ್ರಷ್ಟಾಚಾರ ವಿಕಸಿತವಾಗುವ ಸಂಭವನೀಯತೆ ಹೆಚ್ಚಾಗಿರುವುದರಿಂದಲೂ ಈ ಭ್ರಷ್ಟವಿರೋಧಿ ಶಾಸ್ತ್ರದ ಸಿದ್ಧಾಂತ ಮತ್ತು ಕಾರ್ಯ ಯೋಜನೆಯಿಂದ ಮಾತ್ರ ಇಂತಹ ಆರ್ಥಿಕ ಭ್ರಷ್ಟಾಚಾರ ನಿಯಂತ್ರಿಸುವುದರಿಂದ ಈ ಭ್ರಷ್ಟವಿರೋಧಿ ಶಾಸ್ತ್ರ ಮತ್ತು ಗ್ರಾಮೀಣ ವಿಕಾಸದಲ್ಲಿ ಹತ್ತಿರದ ಸಂಬಂಧವಿದೆ.

## 11. ಭ್ರಷ್ಟವಿರೋಧಿ ಶಾಸ್ತ್ರ ಮತ್ತು ವ್ಯವಸ್ಥಾಪನೆ (Anticorruptology and Management)

ವ್ಯವಸ್ಥಾಪನ ಶಾಸ್ತ್ರವು ವ್ಯವಸ್ಥಾಪಕ ಸಿದ್ಧಾಂತದ ಆಧಾರದಲ್ಲಿ ವ್ಯವಸ್ಥಾಪನೆಯ ನಿಯಮಗಳ ಪ್ರತಿಪಾದನೆ ಮಾಡಲಿರುವ ವಿಧಿ ವಿಧಾನಗಳ ಅಧ್ಯಯನವಾಗಿದೆ. ಇದರಲ್ಲಿ ಮುಖ್ಯವಾಗಿ ವ್ಯವಸ್ಥಾಪಕತ್ವದಲ್ಲಿ ವ್ಯವಸ್ಥೆಗೊಳಿಸುವುದು, ಮಾರುಕಟ್ಟೆ ವ್ಯವಸ್ಥೆ, ಹಾಗೂ ವಿತ್ತೀಯ ವ್ಯವಸ್ಥೆಯ ಅಧ್ಯಯನವೂ ಬರುತ್ತದೆ. ಈ ಎಲ್ಲಾ ವ್ಯವಸ್ಥೆಯ ಸಮಗ್ರ ಅಧ್ಯಯನವೇ ವ್ಯವಸ್ಥಾಪಕೀಯ ಅಧ್ಯಯನವಾಗಿದೆ. ಈ ಅಧ್ಯಯನದ ಜೊತೆಗೆ ಒಳಗೊಂಡಂತೆ ಸಂಬಂಧಿತ ಮಾನವ ಸಂಸಾಧನ, ಉದ್ಯೋಗ ಯಂತ್ರೋಪಕರಣ, ಉತ್ಪಾದನೆ ಮತ್ತು ವಿತರಣೆಯ ಹೊರತಾಗಿ,

ಪ್ರಶಾಸನ ಮತ್ತು ಲೆಕ್ಕ ಪತ್ರಗಳ ವ್ಯವಸ್ಥೆ ಇತ್ಯಾದಿ ಕೂಡ ಸಮ್ಮಿಲಿತವಾಗಿರುತ್ತದೆ. ವ್ಯವಸ್ಥಾಪನ (ವ್ಯವಸ್ಥೆಯನ್ನು ರೂಪಿಸುವಲ್ಲಿ) ದಲ್ಲಿ ಕೊರತೆ ದೌರ್ಬಲ್ಯ ಉಂಟಾದಲ್ಲಿ ಉದ್ಯೋಗ ವ್ಯವಸಾಯ ಹಾಗೂ ವ್ಯಾಪಾರಗಳಲ್ಲಿ ನೆಲಕಚ್ಚುವ ಪರಿಸ್ಥಿತಿಯುಂಟಾಗಬಹುದು. ಮಾರುಕಟ್ಟೆಯಲ್ಲಿ ಕೃತಕ ಅಭಾವ ಹಾಗೂ ನಕಲಿ ಸಾಮಾನುಗಳ ವಿತರಣೆಯಿಂದ ಜನರಿಗೆ ಮೋಸ ಹಾಗೂ ನಷ್ಟಗಳಾಗಬಹುದು. ಇದೇ ರೀತಿ ವಿತ್ತೀಯ ಕಾರುಬಾರು ಅಪವಿತ್ರವಾದಾಗಲೂ ವಿತ್ತೀಯ ಕ್ಷೇತ್ರ ನೆಲಸಮ (ನಾಶ ) ವಾಗುವುದು. ಈ ಎಲ್ಲಾ ಸ್ಥಿತಿಯನ್ನು ಭ್ರಷ್ಟವಿರೋಧಿ ಶಾಸ್ತ್ರ ಸಿದ್ಧಾಂತದ ಸುವ್ಯವಸ್ಥಿತ ಕಾರ್ಯಾಚರಣೆಯಿಂದ, ಈ ಸುವ್ಯವಸ್ಥೆಯನ್ನು ಸ್ಥಿರಗೊಳಿಸಲು ಬಲ ಸಾಮರ್ಥ್ಯ ಮತ್ತು ಪ್ರಭಾವಕಾರಿಯಾದ ಸಂಚಾಲಕತ್ವವನ್ನು ಮಾಡಬಹುದಾಗಿದೆ. ಆದ್ದರಿಂದ ಭ್ರಷ್ಟವಿರೋಧಿಶಾಸ್ತ್ರ ಮತ್ತು ವ್ಯವಸ್ಥಾಪಕತ್ವದಲ್ಲಿ ವಿಶೇಷವಾದ ಸಂಬಂಧವಿದೆ.

## 12. ಭ್ರಷ್ಟವಿರೋಧಿ ಶಾಸ್ತ್ರ ಮತ್ತು ಕಾನೂನು (Anticorroptology and Law)

ಕಾನೂನು ಎಂದರೆ, ರಾಜ್ಯದ ಆಡಳಿತ ವ್ಯವಸ್ಥೆಗೆ ಬೇಕಾಗಿರುವ ಲಿಖಿತ ನಿಯಮಗಳಾಗಿವೆ. ಇದನ್ನು ದೇಶದ ಎಲ್ಲಾ ಸಮುದಾಯ, ವ್ಯಕ್ತಿ,ಸಂಸ್ಥೆ ಮತ್ತು ಸರಕಾರಗಳು ಪಾಲಿಸಬೇಕಾಗುತ್ತದೆ. ಕಾನೂನಿನಲ್ಲಿ ಯಾವುದೇ ವ್ಯಾಖ್ಯಾನ (ವಿವರಣೆ) ಇಲ್ಲದಿದ್ದಲ್ಲಿ, ಅಂತಹ ಪರಿಸ್ಥಿತಿಯಲ್ಲಿ ನ್ಯಾಯಾಲಯಗಳ ಮೂಲಕ, ಕಾನೂನಿನ ವಿವರಣೆ ಪಡೆದ ಮೇಲೆ ರಾಜ್ಯ ವ್ಯವಸ್ಥೆಯ ಮೂಲಕ ವ್ಯವಹಾರದಲ್ಲಿ ಜಾರಿಗೊಳಿಸಲಾಗುತ್ತದೆ. ಕಾನೂನು ಅಧ್ಯಯನದ ವಿಷಯವಾಗಿದೆ. ಕಾನೂನುಗಳಿಗೆ ಸ್ಥಾಯಿತ್ವ ನೀಡುವುದಕ್ಕಾಗಿ, ಇದರ ಅಧ್ಯಯನ ಮಾಡಲಾಗುತ್ತದೆ. ಕಾನೂನು ಸ್ವಯಂ ನಿರ್ಮಿತ ಅಭಿಲೇಖವಲ್ಲ. ಇದು ಜನರಿಗಾಗಿ, ಮತ್ತು ಜನರಿಂದಲೇ ಬರೆದು ಕಾನೂನಿನ ಪರಿಭಾಷೆಗಳನ್ನು ಸಿದ್ಧಗೊಳಿಸಲಾಗುತ್ತದೆ. ಮತ್ತು ಅದೇ ವ್ಯಾಖ್ಯಾನಿತ ಪರಿಭಾಷೆ ರಾಜ್ಯದ ಆಡಳಿತದಲ್ಲಿ ಜಾರಿಗೊಳಿಸಲಾಗುತ್ತದೆ. ಆದರೆ ಕೆಲವೊಮ್ಮೆ ಕಾನೂನು ನಿರ್ಮಾಣ ಮಾಡುವ ಅಧಿಕಾರ ಪಡೆದವರು– ಜನಪ್ರತಿನಿಧಿಗಳು, ರಾಜಕೀಯ ಪಕ್ಷಗಳವರು ಸ್ವಾರ್ಥಪರವಾಗಿ, ಜನಹಿತದ ವಿರುದ್ಧವಾದ ಕಾನೂನು ನಿರ್ಮಿಸಿ, ಜಾರಿಗೊಳಿಸುತ್ತಾರೆ. ಇದರಿಂದ ಜನರು, ಹಾಗೂ ದೇಶಕ್ಕೂ ಅನ್ಯಾಯವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಈ ಭ್ರಷ್ಟವಿರೋಧಿ ಶಾಸ್ತ್ರವು ನ್ಯಾಯಯುತವಾಗಿ, ನಿಯಂತ್ರಣ ಮಾಡುತ್ತದೆ. ಇದಕ್ಕಾಗಿಯೇ ಈ ಶಾಸ್ತ್ರದ ಸಂಬಂಧ ಕಾನೂನಿಗೆ ಹತ್ತಿರವಾಗಿದೆ.

## 13. ಭ್ರಷ್ಟವಿರೋಧಿ ಶಾಸ್ತ್ರ ಮತ್ತು ಸಂಸ್ಕೃತಿ (Anticorrputology and Culture)

ಸಂಸ್ಕೃತಿ ಎಂದರೆ ಮನುಷ್ಯನ ನಡವಳಿಕೆ, ಆಚಾರ ವಿಚಾರ, ಜಾತೀಯವಾದ ಮೌಲ್ಯಗಳು,ಪರಂಪರಾಗತವಾಗಿ, ಆಚರಿಸಲ್ಪಡುವ ರೀತಿ –ರಿವಾಜುಗಳು ಮತ್ತು ಜೀವನ ನಿರ್ವಹಣೆಯ ಪದ್ಧತಿಯ ಸಮಗ್ರ ಅಧ್ಯಯನವೇ ಸಂಸ್ಕೃತಿ. ಮಾನವ ಸಮುದಾಯದ ಜಾತಿ, ಧರ್ಮ, ವರ್ಗ ಪಂಥಗಳ ಭಿನ್ನತೆಯಿಂದಾಗಿ ವಿಶ್ವಮಾನವ ಸಮುದಾಯದ ಸಂಸ್ಕೃತಿಯಲ್ಲಿ ಏಕರೂಪತೆ ಇಲ್ಲ. ಹೀಗಿದ್ದರೂ ಜಾತಿ, ವರ್ಗ ಮತ್ತು ಧರ್ಮದಲ್ಲಿ ವಿಭಜಿತವಾದ ಮಾನವ ಸಮುದಾಯದ ಸಂಸ್ಕೃತಿ ಜೀವನ ನಿರ್ವಹಣೆಯ ಪದ್ಧತಿಯೊಂದಿಗೆ ಸಂಬಂಧಿತವಾಗುತ್ತದೆ. ಮಾನವೀಯ ಗುಣದ ನಿರ್ವಹಿಸುವ ಈ ಪದ್ಧತಿಯೇ ಸಂಸ್ಕೃತಿ. ಇದನ್ನು ಮಾನವೀಯ ಭಾವನೆಗಳು, ಆಸಕ್ತಿ ಆಶಯಗಳು ಮತ್ತು ಮಾನ್ಯತೆಗಳು ನಿರ್ದೇಶಿಸುತ್ತವೆ. ಅವುಗಳು ಭ್ರಷ್ಟವಿರೋಧಿ ಶಾಸ್ತ್ರದ ಮೂಲ ಸಿದ್ಧಾಂತಗಳೊಂದಿಗೆ ಪ್ರತ್ಯಕ್ಷ ಸಂಬಂಧಿತವಾಗಿವೆ. ವ್ಯಕ್ತಿ ಮತ್ತು ಸಮುದಾಯವನ್ನು ಸಂಸ್ಕೃತಿಯೇ ಭ್ರಷ್ಟಗೊಳಿಸಬಲ್ಲುದು ಮತ್ತು ಈ ಸಂಸ್ಕೃತಿಯೇ ಸತ್ಯದ ಹಾದಿಯಲ್ಲಿ ಕೊಂಡೊಯ್ಯಬಲ್ಲುದು. ಮಾನವ ಹಾಗೂ ಸಮುದಾಯದ ಉನ್ನತಿ ಅವನತಿಯಲ್ಲಿ ಅಂಗೀಕೃತವಾದ ಸುಸಂಸ್ಕೃತಿ ಸತ್ಯವಾದುದು. ಮತ್ತು ಕುಸಂಸ್ಕೃತಿ ಅಥವಾ ವಿಕೃತಿ ಅಸತ್ಯವೂ ಭ್ರಷ್ಟವೂ ಆಗಿದೆ. ಇದಕ್ಕಾಗಿಯೇ ಭ್ರಷ್ಟವಿರೋಧಿ ಶಾಸ್ತ್ರ ಮತ್ತು ಸಂಸ್ಕೃತಿಯ ನಡುವೆ ಅತ್ಯಂತ ಬಲಿಷ್ಠ ಸಂಬಂಧವಿದೆ.

## 14. ಭ್ರಷ್ಟವಿರೋಧಿ ಶಾಸ್ತ್ರ ಮತ್ತು ದರ್ಶನ ಶಾಸ್ತ್ರ (Anicorrptology and Philosophy)

ದರ್ಶನ ಶಾಸ್ತ್ರ ಮಾನವ ಜೀವನದ ಮೌಲಿಕ ಸಿದ್ಧಾಂತ, ವ್ಯವಹಾರ ಮತ್ತು ಅದರ ಧಾರಣಶಕ್ತಿಯ ವಿಸ್ತೃತ ವ್ಯಾಖ್ಯಾನವನ್ನು ಮಾಡುತ್ತದೆ. ಅಲ್ಲದೆ, ವ್ಯಕ್ತಿಯ ಸಾಮಾಜಿಕ ಜೀವನದ ಅತ್ಯುನ್ನತ ಮೌಲ್ಯಗಳನ್ನು ಪ್ರಭಾವಶಾಲಿಯನ್ನಾಗಿ ಮಾಡುವ ಪ್ರಯತ್ನ ಮಾಡುತ್ತದೆ. ಇದರೊಂದಿಗೆ ಸಮಯಾನುಸಾರವಾಗಿ ವ್ಯಕ್ತಿ ಮತ್ತು ಸಮಾಜದಲ್ಲಿ ನೈತಿಕ ಮತ್ತು ಆದರ್ಶ ವ್ಯವಹಾರಗಳನ್ನು ಸ್ಥಾಪಿಸುವ ಕಾರ್ಯವನ್ನು ಮಾಡುತ್ತದೆ. ಜ್ಞಾನ ಮತ್ತು ವಿಜ್ಞಾನ, ಅಧ್ಯಾತ್ಮ ಮತ್ತು ಭೌತಿಕ ಹಾಗೂ ಪಕ್ಷ ಮತ್ತು ಪಕ್ಷಾಂತರದ ವ್ಯಾಖ್ಯೆಯ ವಿವೇಚನೆ ಮಾಡಿ ಮಾನವ ಜೀವನದೊಂದಿಗೆ ಮಾನವ ಸಮಾಜಕ್ಕೂ ಸರಿಯಾದ ದಾರಿಯಲ್ಲಿ ಮುನ್ನಡೆಯಲು ಪ್ರೇರಣ ನೀಡುತ್ತದೆ. ಇಷ್ಟು ಮಾತ್ರವಲ್ಲದೆ, ವ್ಯಕ್ತಿ ಮತ್ತು ಸಮಾಜದ ಬೇಡಿಕೆಗನುಗುಣವಾಗಿ ಹೊಸ ವಿಷಯವನ್ನು ಹುಟ್ಟುಹಾಕಿ, ಅದರ ವಿಕಾಸದ

ಮಾರ್ಗವನ್ನು ಸ್ಥಾಪಿಸುವ ನೀತಿ ನಿಯಮಗಳು ದರ್ಶನ ಶಾಸ್ತ್ರದ ಅಂತರಗತವಾಗುತ್ತವೆ. ಭ್ರಷ್ಟವಿರೋಧಿ ಶಾಸ್ತ್ರವು ಕೂಡ ವ್ಯಕ್ತಿ ಮತ್ತು ಸಮಾಜವನ್ನು ಪಥ ಭ್ರಷ್ಟವಾಗುವುದನ್ನು ತಡೆಯುತ್ತದೆ. ಇದು ಸಮಯದ ಬೇಡಿಕೆಯಂತೆ ನೀತಿ ನಿಯಮಗಳನ್ನು ರಚಿಸಿ, ಭ್ರಷ್ಟಾಚಾರದ ಹಾದಿಯಲ್ಲಿರುವ ತೊಡಕುಗಳನ್ನು ನಿವಾರಿಸುತ್ತದೆ ಮತ್ತು ವ್ಯಕ್ತಿಯ ಜೀವನಕ್ಕೆ ನೈತಿಕ ಮೌಲ್ಯ ಮತ್ತು ಮಾನ್ಯತೆ ಪ್ರದಾನ ಮಾಡಿ, ಮಾನವ ಜೀವನ ಮತ್ತು ಮಾನವ ಸಮಾಜ ಸಕಾರಾತ್ಮಕ, ಸ್ವಾಭಾವಿಕ ವಿಕಾಸವನ್ನು ಅಪೇಕ್ಷಿಸುತ್ತದೆ. ಈ ರೀತಿಯಾಗಿ, ದರ್ಶನ ಶಾಸ್ತ್ರ ಮತ್ತು ಭ್ರಷ್ಟವಿರೋಧಿ ಶಾಸ್ತ್ರದ ನಡುವೆ ಅವಿನಾಭಾವ ಸಂಬಂಧವಿದೆ.

## 15. ಭ್ರಷ್ಟವಿರೋಧಿ ಶಾಸ್ತ್ರ ಮತ್ತು ಧರ್ಮಶಾಸ್ತ್ರ (Anticorruptology and Theology)

ಧರ್ಮ ಶಾಸ್ತ್ರವೆಂದರೆ, ಜೀವನ ನಿರ್ವಹಣೆಯ ಜೀವನ ಪದ್ಧತಿಯ ಶಾಸ್ತ್ರವಾಗಿದೆ. ಹೆಚ್ಚಿನ ಜನರು ಇದನ್ನು ಸಾಂಪ್ರದಾಯಿಕ ಶಾಸ್ತ್ರವೆನ್ನುತ್ತಾರೆ. ಆದರೆ, ಇದು ಸರಿಯಲ್ಲ, ಇದು ಕೇವಲ ಭ್ರಮೆಯಷ್ಟೆ. ಪ್ರಾಜ್ಞ ಸಮುದಾಯವು ಕೂಡ ಕೆಲವೊಮ್ಮೆ ಧರ್ಮಶಾಸ್ತ್ರ ಎನ್ನುವಲ್ಲಿ, ಇದನ್ನು ಸಾಂಪ್ರದಾಯಿಕ ಶಾಸ್ತ್ರವೆಂದು ತಿಳಿಯುತ್ತಾರೆ. ಇದನ್ನು ಬಹಳ ಗಂಭೀರವಾಗಿ ವ್ಯಾಖ್ಯಾನಿಸುವ, ವಿಶ್ಲೇಷಿಸುವ ರೊಂದಿಗೆ ಪರಿಭಾಷೆಯನ್ನು ನೀಡಬೇಕಾಗಿದೆ. ಧರ್ಮಶಾಸ್ತ್ರದ ಅಧ್ಯಯನ ವೈದಿಕ ಸನಾತನ ಪದ್ಧತಿಯ ವ್ಯಾಖ್ಯಾನ ಹೊಂದಿರುವುದರಿಂದಲೇ ಸಾಂಪ್ರದಾಯಿಕ ಪಕ್ಷದಲ್ಲಿ ವಿಭಜಿಸಿ ಇದರ ವ್ಯಾಖ್ಯಾನ ಮಾಡಲಾಗಿದೆ.

ಧರ್ಮಶಾಸ್ತ್ರವು, ಪೂರ್ವದೇಶಗಳವರ ದರ್ಶನದ ಉತ್ಕೃಷ್ಟವಾದ ದರ್ಶನಶಾಸ್ತ್ರವಾಗಿದೆ. ಇದನ್ನು ಪಾಶ್ಚಿಮಾತ್ಯ ಪ್ರಾಜ್ಞರು, ಅವರ ಸಮುದಾಯದವರು ಸಹಜವಾಗಿಯೇ ಇದನ್ನು ಅಂಗೀಕರಿಸುವುದಿಲ್ಲ. ಇದರ ಹೊರತಾಗಿಯೂ ಬಹು ಸಂಖ್ಯಾತ ಜನರನ್ನು ಪ್ರತಿನಿಧಿಸುತ್ತಿರುವ ಪೌರಾತ್ಯ ಧರ್ಮ ಸಂಸ್ಕೃತಿಯನ್ನು ಮಾನವ ಸಮುದಾಯವು ಸ್ವೀಕರಿಲೇಬೇಕಾಗುವುದು. ಔದಾರ್ಯ, ಸಂಯಮ,ಹಾಗೂ ಸಹನಶೀಲತೆಯೇ ಪೌರಾತ್ಯ ಧರ್ಮಶಾಸ್ತ್ರದ ಪಸರಿಸುವ ಸುಗಂಧವಾಗಿದೆ. ಮಾನವ ವಿಕಾಸದ ಇತಿಹಾಸದಲ್ಲಿ ಈ ಸಿದ್ಧಾಂತವು ಅತ್ಯುತ್ತಮ ಸ್ಥಾನ ಪಡೆದುಕೊಂಡಿದೆ. ಪೌರಾತ್ಯ ದರ್ಶನವನ್ನು ವಿಶ್ವದ ಅನೇಕ ಧರ್ಮ ಸಂಪ್ರದಾಯದವರು ಅನುಸರಿಸಿದ್ದಾರೆ. ಮತ್ತು ಪೌರಾತ್ಯ ಧರ್ಮವು ಕೂಡ ಅನ್ಯ ಧರ್ಮ ಸಂಪ್ರದಾಯಗಳಿಗೆ ಮಹತ್ವವನ್ನು ನೀಡಿದೆ. ಪೌರಾತ್ಯ ಧರ್ಮ ದರ್ಶನವು ಮಾನವ ಕಲ್ಯಾಣಕ್ಕಾಗಿಯೇ ಇದೆ. ಇದಕ್ಕಾಗಿಯೇ ಅನ್ಯ ಸಾಂಪ್ರದಾಯಿಕ ದರ್ಶನಗಳ

ಜೊತೆಯಲ್ಲಿ ಇದನ್ನು ಸೇರಿಸಲಾಗದು. ಪೌರಾತ್ಯ ಧರ್ಮಶಾಸ್ತ್ರವೆಂದರೆ, ಮಾನವೀಯ ಸತ್ಯೋನ್ಮುಖ ಜೀವನ–ಪದ್ಧತಿಯ ಮೂಲ ಸ್ರೋತ, ಇದನ್ನು ಜೀವನದಿಂದ ಬೇರ್ಪಡಿಸಿದಲ್ಲಿ ಮಾನವ ಜೀವನ ಅಪೂರ್ಣವಾಗುತ್ತದೆ. ವಿಶ್ವದಲ್ಲಿ ಯಾವಾಗ ಧರ್ಮಶಾಸ್ತ್ರದ ಅಧ್ಯಯನ ಪ್ರಾರಂಭವಾಯಿತೋ ಆ ಸಮಯದಲ್ಲಿ ಬೌದ್ಧಿಕ ಸನಾತನ ಧರ್ಮ ಮಾನವ ಸಮುದಾಯದ ಧರ್ಮವಾಗಿತ್ತು. ಧರ್ಮವೆಂದರೆ ಜೀವನದಲ್ಲಿ ಸ್ವೀಕರಿಸಲಾಗುವ ಜೀವನ ಪದ್ಧತಿಯಾಗಿದೆ. ಬೆಂಕಿಯ ಗುಣ ಬಿಸಿಯಾಗುವುದು ಹಾಗೂ ನೀರಿನ ಗುಣ ತಣ್ಣಗಾಗುವುದು. ಇದೇ ರೀತಿ ಮನುಷ್ಯನ ಗುಣ ಮಾನವೀಯತೆಯನ್ನು ಹೊಂದುವುದಾಗಿದೆ. ಮಾನವ ಜೀವನ ಯಾಪನೆಯ ಪದ್ಧತಿಯೇ ಮಾನವ ಧರ್ಮವಾಗಿದೆ. ಧರ್ಮದ ನೆರಳಿನಲ್ಲಿ ಮಾನವ ಜೀವನ ಸುಖಮಯವಾಗಿ ಕಳೆಯಬಹುದಾಗಿದೆ. ಸದಾಚಾರ, ನೈತಿಕತೆ, ಅನುಶಾಸನ, ಪ್ರಾಮಾಣಿಕತೆ, ಪರಂಪರಾಗತ ರೀತಿ ರಿವಾಜು, ಧರ್ಮಶಾಸ್ತ್ರದ ಮೂಲ ಸಿದ್ಧಾಂತವಾಗಿದೆ.  ಅದೇ ರೀತಿ ಭ್ರಷ್ಟವಿರೋಧಿ ಶಾಸ್ತ್ರದ ಮೂಲ ಸಿದ್ಧಾಂತವು ಕೂಡ ಒಂದಾಗಿರುವುದರಿಂದ ಧರ್ಮಶಾಸ್ತ್ರ ಮತ್ತು ಭ್ರಷ್ಟವಿರೋಧಿ ಶಾಸ್ತ್ರದ ಸಂಬಂಧವೂ ಒಂದೇ ತೆರನಾಗಿದೆ.

***

# 12. ಭ್ರಷ್ಟವಿರೋಧಿ ಶಾಸ್ತ್ರ ಸ್ವಾಭಾವಿಕ ವಿಜ್ಞಾನ
# (Anticorruptology as a Natural Science )

ಯಾವುದೇ ವ್ಯಕ್ತಿ ಸಮುದಾಯ ಮತ್ತು ಸಂಪೂರ್ಣ ಸಮಾಜದ ಮನೋಭಾವ ಹಾಗೂ ವ್ಯವಹಾರಗಳಂತಹ ಅದೃಷ್ಟ ವಿಷಯಗಳನ್ನು ನಿಶ್ಚಿತವಾದ ಚೌಕಟ್ಟಿನಲ್ಲಿ ಕೇಂದ್ರಿಕರಿಸಿ, ವಿಜ್ಞಾನ ಕ್ಷೇತ್ರದೊಳಗೆ ಸೀಮಾಬದ್ಧಗೊಳಿಸುವುದು ಕಠಿಣ ಕೆಲಸವೇ ಸರಿ !. ಆದರೂ  ಸಾಮಯಿಕ ಬೇಡಿಕೆಗನುಗುಣವಾಗಿ ಇದರ ವ್ಯಾಖ್ಯಾನ–ವಿಶ್ಲೇಷಣೆ ಮತ್ತು ಮೇರೆಯನ್ನು ನಿರ್ಧರಿಸುದು ಆವಶ್ಯಕವಾಗಿದೆ. ಆದ್ದರಿಂದ ವಿಜ್ಞಾನದ ವಿಭಿನ್ನ ಆಯಾಮಗಳೊಂದಿಗೆ ಜೋಡಿಸಿಕೊಂಡು ಅಧ್ಯಯನ ಮಾಡಬೇಕಾಗಿರುತ್ತದೆ. ಸಮಯ ಪರಿವರ್ತನೆಗನುಸಾರವಾಗಿ ಹಾಗೂ ಪರಂಪರಾಗತ ರೀತಿ ರಿವಾಜುಗಳು ಮತ್ತು ನಂಬಿಕೊಂಡು ಬಂದಿರುವ ಮಾನ್ಯತೆಗಳೊಂದಿಗೆ ಪರಿವರ್ತಿತ ಸ್ಥಿತಿಯಲ್ಲಿ, ಭ್ರಷ್ಟಾಚಾರ ವಿರುದ್ಧದ ಕ್ರಿಯಾಕಲಾಪಗಳು ಕೂಡ ಸಮಯಾನುಸಾರವಾಗಿ ಪರಿವರ್ತಿತವಾಗಿ ಪ್ರಭಾವಶಾಲಿಯಾಗಿ ಅನುಸರಣೆ ಸ್ಥಾಪಿತವಾಗುತ್ತದೆ. ಭ್ರಷ್ಟಾಚಾರ ವಿರುದ್ಧದ ವಿಜ್ಞಾನವನ್ನು ಆಳವಾಗಿ ಅಧ್ಯಯನ ಮಾಡಿದ ಮೇಲೆ, ಮೌಲ್ಯಗಳು – ಮಾನ್ಯತೆಗಳನ್ನು ಇದರೊಳಗೆ ಅಳವಡಿಸಿಕೊಂಡು ನಿರೀಕ್ಷೆ ಮಾಡಬೇಕಾಗುತ್ತದೆ. ಹೊಸ ಮಾನ್ಯತೆಗಳನ್ನು ಇದರೊಳಗೆ ಅಳವಡಿಸಿಕೊಂಡು ನಿರೀಕ್ಷೆ ಮಾಡಬೇಕಾಗುತ್ತದೆ. ಹೊಸ ಮಾನ್ಯತೆಗಳನ್ನು ಇದರೊಳಗೆ ಅಳವಡಿಸಿಕೊಂಡು ನಿರೀಕ್ಷೆ ಮಾಡಬೇಕಾಗುತ್ತದೆ. ಹೊಸ ಮಾನ್ಯತೆಗಳನ್ನು ಆಚರಣೆಯಲ್ಲಿ ತರುವ ಸಂದರ್ಭದಲ್ಲಿ ಹಳೆಯ ಮಾನ್ಯತೆಗಳನ್ನು ತ್ಯಜಿಸದೆ, ಎರಡನ್ನೂ ಸಮನ್ವಯಗೊಳಿಸುವುದು ಅವಶ್ಯಕತವಾಗುತ್ತದೆ. ಯಾವುದೇ ವಿಜ್ಞಾನವನ್ನು ಒಂದು ನಿಶ್ಚಿತ ಪರಿಭಾಷೆಯಲ್ಲಿ ಸೀಮಿತಗೊಳಿಸಲಾಗದು. ಸಮಾಜದಲ್ಲಿ ಪ್ರಚಲಿತದಲ್ಲಿರುವ

ಅನೇಕ ನಿಯಮಗಳು ಹಾಗೂ ವ್ಯವಹಾರಗಳು ವಿಜ್ಞಾನದ ರೂಪವನ್ನು ಪಡೆಯುತ್ತವೆ. ಈ ಎಲ್ಲಾ ವಿಷಯಗಳೊಂದಿಗೆ ಪ್ರಸ್ತುತ ಈ ಸಿದ್ಧಾಂತದ ಸ್ವಾಭಾವಿಕ ಸಂಬಂಧವು ಸ್ಥಾಪಿತವಾಗಿದೆ.

ಅದು ಹೀಗೆ :–

01. ಮಾನವೀಯ ವ್ಯವಹಾರಗಳ ವಿಜ್ಞಾನ.

02. ಮಾನವೀಯ ಸದಾಚಾರದ ವಿಜ್ಞಾನ.

03. ಸಾಮಾಜಿಕ ವ್ಯವಹಾರದ ವಿಜ್ಞಾನ.

04. ಭೌತಿಕ ವಿಕಾಸದ ವಿಜ್ಞಾನ.

05. ಆರ್ಥಿಕ ಸಮೃದ್ಧಿಯ ವಿಜ್ಞಾನ

06. ಆಡಳಿತಾತ್ಮಕ ಅನುಶಾಸನದ ವಿಜ್ಞಾನ.

07. ರಾಜಕೀಯ ಸ್ವಚ್ಛತೆಯ ವಿಜ್ಞಾನ.

**01. ಮಾನವೀಯ ವ್ಯವಹಾರಗಳ ವಿಜ್ಞಾನ – (Science of Human behaviour)**

ಜಗತ್ತಿನಲ್ಲಿ ಎಷ್ಟು ಜೀವಿಗಳು ಜನ್ಮ ತಳೆಯುತ್ತವೋ ಅವುಗಳೆಲ್ಲಾ ತಮ್ಮ ಜೀವನದೊಂದಿಗೆ ತಮ್ಮದೇ ಆದ ಸ್ವಭಾವ ಮತ್ತು ಗುಣ ದೋಷಗಳನ್ನು ಹೊಂದಿರುತ್ತವೆ. ಮಾನವನೊಂದಿಗೆ ಇರುವ ನಾಯಿ ಬೆಕ್ಕುಗಳಿಂದ ಹಿಡಿದು, ಮನುಷ್ಯನಿಂದ ದೂರ ಕಾಡುಗಳಲ್ಲಿ ವಾಸಿಸುವ ನರಿ– ಹುಲಿಗಳ ನಡವಳಿಕೆ ಭಿನ್ನ ಭಿನ್ನವಾಗಿರುತ್ತದೆ. ಮನುಷ್ಯನೊಂದಿಗೆ ವಾಸಿಸುವ ಜೀವಿಗಳನ್ನು (ಪ್ರಾಣಿಗಳನ್ನು) ಮನುಷ್ಯ ಪ್ರೀತಿಸುತ್ತಾನೆ. ಅದೆ ಕಾಡು ಪ್ರಾಣಿಯನ್ನು ತಿರಸ್ಕರಿಸುತ್ತಾನೆ. ಮತ್ತು ಅವುಗಳಿಂದ ದೂರವಿರುತ್ತಾನೆ. ಸಾಕು ಪ್ರಾಣಿಗಳ ನಡವಳಿಕೆ ಮನುಷ್ಯನಂತೆಯೇ ಇರುವುದರಿಂದ ಮನುಷ್ಯನು ಅವುಗಳೊಂದಿಗೆ ಹಾಗೇ ವರ್ತಿಸುತ್ತಾನೆ. ಅದೇ ಕಾಡುಗಳಲ್ಲಿರುವ, ಹುಲಿ ಸಿಂಹ, ನರಿ ಇತ್ಯಾದಿ ಪ್ರಾಣಿಗಳೊಂದಿಗೆ ಮನುಷ್ಯ ಪ್ರೀತಿತೋರುವುದು ಪ್ರಾಕೃತಿಕವಾಗಿ ಅಸಂಭವವೇ ಸರಿ!. ಹಾಗಾಗಿಯೇ, ಮನುಷ್ಯನ ನಡವಳಿಕೆಯೂ ಅವನವನ ಸ್ವಭಾವಕ್ಕನು ಗುಣವಾಗಿಯೇ ಇರುತ್ತದೆ. ಮನುಷ್ಯ ಮಾನವ ಸಮೂಹದಲ್ಲೇ ಇರಬಲ್ಲ. ಆದ್ದರಿಂದ ಅವನ ಮನೋವೃತ್ತಿ (ನಡವಳಿಕೆ) ಮಾನವೀಯತೆಯನ್ನು

ಹೊಂದಿರಬೇಕು. ಒಂದು ವೇಳೆ ಮನುಷ್ಯ ಮಾನವೀಯ ಮೌಲ್ಯಗಳು ಮಾನ್ಯತೆಗಳಿಂದ ದೂರವಾದರೆ, ಆತ ಮಾನವ ಸಮಾಜದಿಂದಲೂ ದೂರವಾಗುತ್ತಾನೆ. ಯಾವ ವ್ಯಕ್ತಿಯೇ ಆಗಿರಲಿ, ಅವನ ನಡವಳಿಕೆಯೇ ಅವನನ್ನು ಮತ್ತೊಬ್ಬ ವ್ಯಕ್ತಿಯೊಂದಿಗೆ ಹತ್ತಿರವಾಗುವಂತೆ ಅಥವಾ ದೂರವಾಗುವಂತೆ ಮಾಡುತ್ತದೆ.

ವ್ಯಕ್ತಿಯು ತನ್ನ ನಡವಳಿಕೆಯಿಂದಲೇ ಸಮಾಜದಲ್ಲಿ ಪರಿಚಿತನಾಗುತ್ತಾನೆ. ಮಾನವ ಸಮಾಜದಲ್ಲಿ ತಳಮಟ್ಟದಿಂದ ಮೇಲ್ಮಟ್ಟದವರೆಗೆ, ಮನುಷ್ಯನ ಯೋಗ್ಯತೆ (ಅಂತಸ್ತು ) ತಿಳಿಸುವಲ್ಲಿ ಆತನ ನಡವಳಿಕೆ ಸ್ವಭಾವವೇ ಸಹಕಾರಿಯಾಗುತ್ತದೆ. ಮನುಷ್ಯನ ವ್ಯವಹಾರ (ನಡವಳಿಕೆ) ಎರಡು ಭಿನ್ನ ದೃಷ್ಟಿಕೋನದಿಂದ ನೋಡಬಹುದಾಗಿದೆ.

**01. ಅ) ಓಳ್ಳೆಯ ನಡವಳಿಕೆ, 02. ಆ) ಕೆಟ್ಟ ನಡವಳಿಕೆ**

ವ್ಯಕ್ತಿಯು ಸದ್‌ವ್ಯವಹಾರ, ಸದಾಚರದ ಗುಣಗಳಿಂದಾಗಿ ಸಮಾಜದಲ್ಲಿ ಮನುಷ್ಯನೆನಿಸಿಕೊಳ್ಳುತ್ತಾನೆಂದರೆ, ಕೆಟ್ಟ ಆಚರಣೆಗಳಿಂದ ಅಮಾನವನೆನಿಸಿಕೊಳ್ಳುತ್ತಾನೆ. ಮನುಷ್ಯನ ದುರಾಚಾರಗಳಲ್ಲಿ ಭ್ರಷ್ಟಾಚಾರ ಜನಿಸುತ್ತದೆ. ಅದಕ್ಕಾಗಿ, ಮಾನವ ಪ್ರವೃತ್ತಿಗಳ (ವ್ಯವಹಾರ) ಅಧ್ಯಯನ ಮಾನವ ಪ್ರವೃತ್ತಿಯನ್ನು ವಿಜ್ಞಾನಾಂತರ್ಗತವಾಗಿದ್ದು ನೋಡುವುದೇ ಮಾನವ ವ್ಯವಹಾರಗಳ ವಿಜ್ಞಾನವಾಗಿದೆ.

**02. ಮಾನವೀಯ ಸದಾಚಾರದ ವಿಜ್ಞಾನ (Science of Human Virtue )**

ಎಲ್ಲಾ ಜೀವಿಗಳಿಗೆ ತನ್ನದೇ ಆದ ಪ್ರಕೃತಿಗನುಗುಣವಾದ ಆಚಾರ ಸಂಹಿತೆ (ನಿಯಮಾವಳಿ) ನಿಶ್ಚಿತವಾಗಿರುತ್ತದೆ. ಮತ್ತು ಅದೇ ನಿಯಮಾವಳಿಗಳಿಯ ಸೀಮೆಯೊಳಗೆ ಅವರ ಜೀವನ ನಿಶ್ಚಿತವಾಗುತ್ತದೆ. ಆದರೆ ಮನುಷ್ಯನ ನಿಯಮ ನೀತಿ ಅನ್ಯ ಜೀವಿಗಳಿಗೆ ಹೋಲಿಸಿದಾಗ ಭಿನ್ನವಾಗಿ ನಿರೂಪಿತವಾಗಿರುತ್ತದೆ. ಮಾನವ ಗುಣಗಳಲ್ಲಿ ಸ್ಥಾಪಿತಗೊಳ್ಳುವ ಸದಾಚಾರ ಮತ್ತು ಅದಕ್ಕೆ ತದ್ವರುದ್ಧವಾದ ಅರ್ಥವನ್ನು ನೀಡುವ ಭ್ರಷ್ಟಾಚಾರವೂ ಮಾನವೀಯ ಪ್ರಕೃತಿಯಲ್ಲಿ ಸೇರಿಕೊಳ್ಳುತ್ತವೆ. ಮನುಷ್ಯ ಮನುಷ್ಯನಾಗಿದ್ದರೆ ಮಾತ್ರ ಸುರಕ್ಷಿತವಾಗಿರಬಲ್ಲ. ಅದಕ್ಕಾಗಿ ಸದಾಚಾರಕ್ಕೆ ಪೂರ್ಣ ಅವಲಂಬಿತವಾಗಿರುವುದರಿಂದ ಅವನ (ಮನುಷ್ಯನ) ಜೀವನ ಸಂಪೂರ್ಣ ಸಫಲವಾಗುವುದು. ಸದಾಚಾರದ ಪಾಲನೆ ಮತ್ತು ಅಭ್ಯಾಸಗಳಿಂದ ಮನುಷ್ಯನಲ್ಲುಂಟಾಗುವ ದುರ್ಗುಣ, ವ್ಯಭಿಚಾರ ಮತ್ತು ಭ್ರಷ್ಟಾಚಾರದಂತಹ

ಮಾನವೀಯತೆಯ ಶತ್ರುಗಳ ನಾಶವಾಗುವುದು.

ಸದಾಚಾರದ ಇನ್ನೊಂದು ಮುಖ ಭ್ರಷ್ಟಾಚಾರವಾಗಿದೆ. ಮಾನವೀಯ ಆಚಾರದ ಪಕ್ಷಗಳನ್ನು ನೋಡಿದರೆ –(ಅ) ಒಳ್ಳೆಯ ನಡವಳಿಕೆ. (ಆ) ಭ್ರಷ್ಟಾಚಾರ, ಇವೆರಡೂ ಮಾನವ ಸ್ಥಿತಿಯಲ್ಲಿ ಸ್ಥಿತವಾಗಿರುವ ತತ್ವಗಳಾಗಿವೆ. ಒಂದರ ವಿಕಾಸದಿಂದ ಇನ್ನೊಂದರ ನಾಶವಾಗುತ್ತದೆ. ಅಂದರೆ ಒಂದು ಸಬಲವಾಗಿದ್ದರೆ ಇನ್ನೊಂದು ದುರ್ಬಲವಾಗುತ್ತದೆ. ಇದುವೇ ವಿಜ್ಞಾನದ ನಿಯಮವೂ ಆಗಿದೆ.

## 03. ಸಾಮಾಜಿಕ ವ್ಯವಹಾರದ ವಿಜ್ಞಾನ (Science of Social behaviour)

ಸಂಬಂಧಿತ ಸಮಾಜದ ರೀತಿ ಸ್ಥಿತಿ ಮತ್ತು ಸಂಸ್ಕೃತಿಯನ್ನಾಧರಿಸಿ, ಸಾಮಾಜಿಕ ವ್ಯವಹಾರದ ಸ್ಥಾಪನೆಯಾಗುತ್ತದೆ. ಸಮಾಜದ ಐತಿಹಾಸಿಕ ಕಟ್ಟಳೆಗಳು, ಜಾತೀಯ (ಜನಾಂಗೀಯ) ಮೌಲ್ಯಗಳು ಮತ್ತು ಮಾನ್ಯತೆಗಳು ಪರಂಪರಾಗತ ರೀತಿ – ರಿವಾಜುಗಳು ಹಾಗೂ ಸಂಸ್ಕೃತಿಯಿಂದ ಸಾಮಾಜಿಕ ವ್ಯವಹಾರವು ಅಭ್ಯಾಸವಾಗಿ ಬರುತ್ತದೆ. ಇದಕ್ಕನುಗುಣವಾಗಿ ಸಾಮಾಜಿಕ ವ್ಯವಹಾರವು ನಡೆಯುತ್ತವೆ. ಈ ಸಾಮಾಜಿಕ ವ್ಯವಹಾರ ತತ್ಕಾಲೀನ ಮತ್ತು ಅಲ್ಪಕಾಲೀನ ಒಪ್ಪಂದವನ್ನು ಮಾಡಿ, ತನ್ನದೇ ಆದ ರೀತಿಯಿಂದ ನಿಶ್ಚಿತವಾದ ಹಾದಿಯಲ್ಲಿ ಮುನ್ನಡೆಯುತ್ತದೆ. ಮತ್ತು ದೀರ್ಘ ಸಮಯದವರೆಗೆ ನಡೆಯುತ್ತಿರುತ್ತದೆ. ಅಂತೆಯೇ ಇದು ದೀರ್ಘ ಸಮಯದವರೆಗೆ ನಡೆದುಕೊಂಡು ಬರುತ್ತಿರುವುದರಿಂದ ವ್ಯವಹಾರ ವಿಜ್ಞಾನದ ರೂಪದಲ್ಲಿ ಸ್ಥಾಪಿತವಾಗುತ್ತದೆ. ಇಂತಹ ಸಾಮಾಜಿಕ ವ್ಯವಹಾರವನ್ನು ರಕ್ಷಿಸುವ ಕೆಲಸವನ್ನು ಭ್ರಷ್ಟವಿರೋಧಿ ಶಾಸ್ತ್ರ ಮಾಡುತ್ತದೆ. ಇದರಿಂದಾಗಿ ಈ ಸಾಮಾಜಿಕ ವ್ಯವಹಾರ (ಪ್ರವೃತ್ತಿ) ಸ್ಥಿರವಾಗಿ ಸಂಚಲಿಸುತ್ತದೆ.

## 04. ಭೌತಿಕ ವಿಕಾಸದ ವಿಜ್ಞಾನ – (Science of Physical development)

ಸಾಮಾಜಿಕ ವಿಕಾಸಕ್ಕೆ ಭೌತಿಕ ವಿಕಾಸವು ಅವಶ್ಯಕ ತತ್ವವಾಗಿದೆ. ಯಾವುದೇ ಸಂದರ್ಭದಲ್ಲಿ ಅಥವಾ ಪರಿಸ್ಥಿತಿಯಲ್ಲಿ ಮನುಷ್ಯ ಭೌತಿಕವಾಗಿ ಪೂರ್ಣತ್ವವನ್ನು ಬಯಸುತ್ತಾನೆ. ಅವಶ್ಯಕ ಭೌತಿಕ –ಸಾಧನಗಳು ಪ್ರಾಪ್ತವಾದಾಗ ಸಂತುಷ್ಟನಾಗುತ್ತಾನೆ. ಇದು ಮಾನವನ ದೌರ್ಬಲ್ಯ. ಭೌತಿಕ ಅಭೌತಿಕ ಎರಡು ರೀತಿಯಲ್ಲಿ ಮನುಷ್ಯ ತನ್ನ ಒಳಿತನ್ನೇ ಬಯಸುತ್ತಾನೆ. ಮತ್ತು ಒಳಿತನ್ನೇ ಸ್ವೀಕರಿಸಲು ಇಚ್ಛಿಸುತ್ತಾನೆ. ಈ ಅಪೇಕ್ಷೆಯ ಕಾರಣದಿಂದಲೇ ಭೌತಿಕ ವಿಕಾಸದ ಪೂರ್ವಾಧಾರ ನಿರ್ಮಾಣವಾಗುತ್ತದೆ. ಮತ್ತು ಅದಕ್ಕನುಸಾರವಾಗಿ ಮನುಷ್ಯ ತನ್ನ ಅವಶ್ಯಕತೆಗಳನ್ನು ಪೂರ್ತಿಗೊಳಿಸುತ್ತಾನೆ. ಅರ್ಥಾತ್ ಭೌತಿಕ ವಿಕಾಸವು ಗತಿಶೀಲತೆಯ ರೂಪದಲ್ಲಿ

ಮುಂದುವರೆಯುತ್ತದೆ. ಮನುಷ್ಯನ ಸೀಮಾತೀತವಾದ ಬೇಡಿಕೆಗಳ (ಅಪೇಕ್ಷೆಗಳ) ಈಡೇರಿಕೆ ಆಶ್ಚರ್ಯಕರ ರೀತಿಯಲ್ಲಿ ಭೌತಿಕ ವಿಕಾಸದಿಂದಾಗುತ್ತದೆ. ಮತ್ತು ಇದು ಪ್ರಮಾಣಿತವೂ ಆಗಿದೆ. ಆದ್ದರಿಂದ ಇದು ವಿಜ್ಞಾನರೂಪದಲ್ಲಿ ಪ್ರತಿಷ್ಠಾಪಿತವಾಗಿದೆ. ಇಂತಹ ಭೌತಿಕ ವಿಕಾಸದಲ್ಲಿ ಯಾವುದೇ ವಿಘ್ನ ಬಾಧೆಗಳು ಬಾರದಿರಲಿ. ಇದಕ್ಕಾಗಿ ಭ್ರಷ್ಟವಿರೋಧಿ ಶಾಸ್ತ್ರ ಸಹಾಯ ಮಾಡುತ್ತದೆ.

## 05. ಆರ್ಥಿಕ ಸಮೃದ್ಧಿಯ ವಿಜ್ಞಾನ (Science of Economic Prosperity)

ಆಧುನಿಕ ಯುಗದಲ್ಲಿ ಆರ್ಥಿಕವಾಗಿ ಸಬಲ ಮತ್ತು ಸಮೃದ್ಧ ವ್ಯಕ್ತಿ ಅಥವಾ ಸಮಾಜವನ್ನು ಮಾತ್ರ ಸಫಲವೆಂದು ಮಾನ್ಯ ಮಾಡಲಾಗುತ್ತದೆ. ಆರ್ಥಿಕ ಸಬಲತೆ ಮತ್ತು ಸಮೃದ್ಧಿಗಾಗಿ ವ್ಯಕ್ತಿ ಅಥವಾ ಸಮಾಜವು ತ್ವರಿತಗತಿಯಲ್ಲಿ ಕಾರ್ಯಾನ್ವಿತವಾಗುತ್ತದೆ. ಇಂತಹ ಆರ್ಥಿಕ ವಿಕಾಸಕ್ರಮದಲ್ಲಿ ತೊಡಗಿರುವ ಜನರು ಆರ್ಥಿಕ ವಹಿವಾಟಿನಲ್ಲಿ ಪ್ರತಿಸ್ಪರ್ಧಾತ್ಮಕವಾಗಿ ಪ್ರಸ್ತುತವಾಗುತ್ತಾರೆ. ಪ್ರತಿಸ್ಪರ್ಧೆ ಎಂದು ಉಲ್ಲೇಖಿಸಿದಾಗ ಅಲ್ಲಿ ಸ್ವಚ್ಛತೆ, ನೀತಿಯುತ ಮತ್ತು ನಿಯಮಾನುಸಾರವಾದ ಮಾರ್ಗವನ್ನು ಸ್ವೀಕರಿಸಲಾಗುವುದಿಲ್ಲ. ಈ ನಿಟ್ಟಿನಲ್ಲಿ ದೂಷಿತ ಮಾರ್ಗವನ್ನು ಸಹ ಅನುಸರಿಸಲಾಗಬಹುದಾಗಿದೆ. ದೂಷಿತ ಅಭ್ಯಾಸಗಳು ಆರ್ಥಿಕ ಕ್ಷೇತ್ರದಲ್ಲಿ ವಿಕೃತಿಯನ್ನುಂಟು ಮಾಡುತ್ತವೆ. ಆರ್ಥಿಕ ಸಮೃದ್ಧಿಗೆ ಯಾವ ಮಾನದಂಡವೂ ಇರುವುದಿಲ್ಲ. ಒಂದು ವೇಳೆ ಮಾನದಂಡವಿದ್ದರೆ ಅದು ಸಂತುಷ್ಟಿ. ಸಮಯ ಮತ್ತು ಪರಿಸ್ಥಿತಿಯ ಮೂಲಕ ನಿರ್ಧರಿಸಲ್ಪಟ್ಟ ನಿಶ್ಚಿತತೆ. ವ್ಯಕ್ತಿ ಸಮಾಜ ಅಥವಾ ರಾಜ್ಯದ ಆರ್ಥಿಕ ಸಮೃದ್ಧಿಗಾಗಿ ಆಕಾಂಕ್ಷೆ ಹೊಂದಿರುತ್ತಾನೆ. ಮತ್ತು ಅದರ ಪ್ರಾಪ್ತಿಗಾಗಿ, ಯೋಜನೆಗಳನ್ನು ರೂಪಿಸಿ ಮುಂದುವರೆಯುತ್ತಾನೆ. ದುರ್ಬಲ ನಿಯಮಗಳು ಮತ್ತು ನೀತಿಗಳನ್ನು ತಪ್ಪಾಗಿ ವ್ಯಾಖ್ಯಾನಿಸಿ, ಆರ್ಥಿಕ ಕ್ಷೇತ್ರದಲ್ಲಿ ಸಮೃದ್ಧಿ ಗಳಿಸುತ್ತಾರೆ. ಇಂತಹ ದುರ್ಬಲ ನೀತಿ ಮತ್ತು ಕಾನೂನುಗಳನ್ನು (ನಿಯಮಗಳನ್ನು) ಕಿತ್ತು ಎಸೆಯುವುದಕ್ಕಾಗಿ, ಮತ್ತು ನಿಷ್ಫಲಗೊಳಿಸುವುದಕ್ಕಾಗಿ ಮತ್ತು ಆರ್ಥಿಕ ಸಬಲತೆಯನ್ನು ಸ್ಥಿರಗೊಳಿಸುವುದಕ್ಕಾಗಿ ಭ್ರಷ್ಟ ವಿರೋಧಿ ಶಾಸ್ತ್ರ ( ಸಿದ್ಧಾಂತ ) ಸಹಾಯಕವಾಗಿ ಸಿದ್ಧವಾಗುತ್ತದೆ.

## 06. ಆಡಳಿತಾತ್ಮಕ ಅನುಶಾಸನದ ವಿಜ್ಞಾನ (Science of Administrative Descipline)

ಯಾವುದೇ ಸಂಘಟಿತ ಸಂಸ್ಥೆ, ವ್ಯಾಪಾರಿ ಕಂಪೆನಿ, ಸರಕಾರೇತರ ಸಮುದಾಯ ಮತ್ತು ರಾಜ್ಯ ವ್ಯವಸ್ಥೆಯನ್ನು ಸಂಚಾಲನೆ ಮಾಡುವುದಕ್ಕಾಗಿ

ಆಡಳಿತಾತ್ಮಕ ಸಂಘಟನೆಯ ಅವಶ್ಯಕತೆ ಉಂಟಾಗುತ್ತದೆ. ಇಂತಹ ಆಡಳಿತಾತ್ಮಕ ಸಂಘಟನೆಯನ್ನು ಸಂಚಾಲನೆ ಮಾಡುವುದಕ್ಕಾಗಿ, ಸರಿಯಾದ ನಿಯಮ ವಿನಿಮಯ ಮತ್ತು ನೀತಿಗಳಿರುತ್ತವೆ. ಅವು ಇವನ್ನೆಲ್ಲಾ ನಿರ್ವಹಿಸುವುದಕ್ಕಾಗಿ, ವಿಧಿ ವಿಧಾನ ಮತ್ತು ಆಡಳಿತಯಂತ್ರವನ್ನು ಪ್ರಭಾವಿತವನ್ನಾಗಿ ಮಾಡುವ ಸಮುದಾಯ ಎಲ್ಲವೂ ಅನುಶಾಸನದ ರೂಪದಲ್ಲಿ ಸಂಚಾಲನೆಗೊಳ್ಳುತ್ತವೆ. ಆಗಲೇ ಆಡಳಿತಾತ್ಮಕ ಅನುಶಾಸನ ಸ್ಥಿರಗೊಳ್ಳುತ್ತದೆ. ಆಡಳಿತದಲ್ಲಿ ಅನುಶಾಸನವಿಲ್ಲದಿದ್ದರೆ ಸ್ವಚ್ಛ ಆಡಳಿತದ ನಿರ್ವಹಣೆ ಸಾಧ್ಯವಾಗದು. ಎಲ್ಲಿ ಸ್ವಚ್ಛ ಆಡಳಿತವಿರುವುದಿಲ್ಲವೋ ಅಲ್ಲಿ ವಿಕೃತಿ ಪ್ರವೇಶಿಸುತ್ತದೆ. ಆಡಳಿತಾತ್ಮಕ ಅನುಶಾಸನ ಸ್ಥಿರಗೊಳಿಸುವಲ್ಲಿ ಭ್ರಷ್ಟ ವಿರೋಧಿ (ಸಿದ್ಧಾಂತ) ಸಮರ್ಥವಾಗಿದೆ.

**07. ರಾಜನೈತಿಕ ಸ್ವಚ್ಛತೆಯ ವಿಜ್ಞಾನ (Science of Political Trasnparency)**

ಎಲ್ಲಿ ರಾಜನೈತಿಕ ಸ್ವಚ್ಛತೆ ಮತ್ತು ಪಾವಿತ್ರ್ಯತೆ ಇರುವುದಿಲ್ಲವೋ, ಅಂತಹ ರಾಜನೀತಿಯನ್ನು ಅರಾಜಕತೆ ಅವ್ಯವಸ್ಥೆಯ ರಾಜನೀತಿ ಎನ್ನುತ್ತಾರೆ. ಅರಾಜಕತೆ ವ್ಯವಸ್ಥೆಯ ರಾಜನೀತಿಯಿಂದಾಗಿ ವಿಕಾಸೋನ್ಮೂಖ ದೇಶಗಳಲ್ಲಿ, ರಾಜಕೀಯ ಅಧಿಕಾರದ ಹಿಡಿತ ಸರ್ವಾಧಿಕಾರಿ ಮತ್ತು ಆತಂಕವಾದಿಗಳ ಕೈಯಲ್ಲಿ ಹಲವು ಸಂದರ್ಭಗಳಲ್ಲಿ ವಶವಾಗುತ್ತದೆ. ಸರ್ವಾಧಿಕಾರಿ ಹಾಗೂ ಆತಂಕವಾದಿಗಳ ಹಿಡಿತವಿರುವ ರಾಜ್ಯವ್ಯವಸ್ಥೆಯಿಂದಾಗಿ ಅರಾಜಕತೆ ಮತ್ತು ಅತಂತ್ರ ಪ್ರಜಾತಾಂತ್ರಿಕತೆಯ ಅಭ್ಯಾಸ ಹೆಚ್ಚುತ್ತಾ ಹೋಗುತ್ತದೆ. ಈ ಕಾರಣಗಳಿಂದಾಗಿ ಪ್ರಜೆಗಳು, ದೇಶ ಮತ್ತು ರಾಜ್ಯ ವ್ಯವಸ್ಥೆಯ ಶೋಷಣೆಯಾಗುತ್ತದೆ. ಅಂತಹ ಸಂದರ್ಭಗಳಲ್ಲಿ ರಾಜಸತ್ತಾತ್ಮಕ (ಪ್ರಜಾತಂತ್ರಾತ್ಮಕ ) ವ್ಯವಸ್ಥೆಯನ್ನು ನಿರ್ವಹಣೆ ಮಾಡಲು ಸಾಧ್ಯವಾಗದು. ಈ ರೀತಿಯಲ್ಲಿ ರಾಜನೈತಿಕ ಸ್ವಚ್ಛತೆ ಅಸ್ಥಿರವಾಗುವುದರಿಂದ ಈ ಸ್ಥಿತಿಯಲ್ಲಿ ಭ್ರಷ್ಟವಿರೋಧಿ ಸಿದ್ಧಾಂತವು ರಾಜನೈತಿಕ ಸ್ವಚ್ಛತೆಯನ್ನು ಸ್ಥಿರಗೊಳಿಸಬಲ್ಲುದು. ಈ ಸಿದ್ಧಾಂತವು ಸಮಾಜದ ವಿಭಿನ್ನ ಕೋನಗಳಿಂದ ಆಳದಿಂದ ಮತ್ತು ಗುಂಪು ಹಾಗೂ ವರ್ಗೀಯ ದೃಷ್ಟಿಕೋನಗಳಿಂದ ಸ್ವಯಂ ತನ್ನದೆ ಪರಿಚಯವನ್ನು ವಿಷದಿಕರಿಸುತ್ತಾ, ಭ್ರಷ್ಟವಿರೋಧಿ ಸಿದ್ಧಾಂತದೊಳಗೆ ಸಮೂಹಗತ ರೂಪದಲ್ಲಿ ವಿಭಜಿಸಲ್ಪಡುತ್ತದೆ. ಮತ್ತು ವಿಜ್ಞಾನದ ರೂಪದಲ್ಲಿ ತನ್ನನ್ನು ಪ್ರಮಾಣಿಕರಿಸಿ, ಭ್ರಷ್ಟವಿರೋಧಿ ಸಿದ್ಧಾಂತ ಸ್ವಾಭಾವಿಕ ವಿಜ್ಞಾನದ ರೂಪದಲ್ಲಿ ತನ್ನನ್ನು ಪ್ರಮಾಣಿಕರಿಸಿ, ಭ್ರಷ್ಟವಿರೋಧಿ ಸಿದ್ಧಾಂತ ಸ್ವಾಭಾವಿಕ ವಿಜ್ಞಾನದ ರೂಪದಲ್ಲಿ ಸ್ಥಾಪಿತವಾಗುತ್ತದೆ.

***

# 13. ಭ್ರಷ್ಟವಿರೋಧಿ ಸಿದ್ಧಾಂತದ ಕ್ಷೇತ್ರ
## (Scope of Anticorruptiology)

ಭ್ರಷ್ಟವಿರೋಧಿ ಶಾಸ್ತ್ರದ ಅಧ್ಯಯನವೆಂದರೆ, ಭ್ರಷ್ಟವಿರೋಧಿ ಕಾರ್ಯ ವಿಧಾನಗಳ ಅಧ್ಯಯನವಾಗಿದೆ. ಈ ಕಾರ್ಯದ ಪರಿದಿಯೊಳಗೆ ಅಧ್ಯಯನ ಮಾಡಬೇಕಾಗಿರುವ ಶಾಸ್ತ್ರದ ಎಲ್ಲಾ ಅಂಗ (ಕೋನ)ಗಳು ಸಮ್ಮಿಲಿತವಾಗುತ್ತವೆ. ಈ ಶಾಸ್ತ್ರವು ಮೊದಲಿಗೆ ಭ್ರಷ್ಟಾಚಾರದ ವಿವಿಧ ಕ್ಷೇತ್ರಗಳ ವಿಷಯಗಳ, ವ್ಯಾಖ್ಯಾನ, ವಿಶ್ಲೇಷಣೆ ಮಾಡುವ ಪ್ರಯತ್ನ ಮಾಡುತ್ತದೆ. ಇದರ ಸೈದ್ಧಾಂತಿಕ ಹಾಗೂ ವ್ಯಾವಹಾರಿಕ ಪಕ್ಷಗಳನ್ನು ವ್ಯಾಖ್ಯಾನಿಸಲ್ಪಟ್ಟಾಗ ಭ್ರಷ್ಟ ವಿರೋಧಿ ಕ್ಷೇತ್ರ,ಅದರ ವಿಭಿನ್ನ ವ್ಯವಹಾರಗಳು ಮತ್ತು  ಕ್ರಿಯಾಕಲಾಪಗಳ ವಿಸ್ತೃತ ಅಧ್ಯಯನವನ್ನು ಮಾಡುತ್ರದೆ. ಭ್ರಷ್ಟವಿರೋದಿ ಸಿದ್ಧಾಂತವನ್ನು ವ್ಯಾವಹಾರಿಕ ರೂಪದಲ್ಲಿ ಕಾರ್ಯಾನ್ವಿತ ಮಾಡುವುದಕ್ಕಾಗಿ, ವಿಭಿನ್ನ ನಿಯಮ ಉಪನಿಯಮಗಳನ್ನು ಮಾಡಿ ಅದರ ಅಭ್ಯಾಸಕ್ಕಾಗಿ ದಾರಿ ಮಾಡಿಕೊಡುತ್ತದೆ. ನಿಯಮಗಳು ಹಾಗೂ ಅಭ್ಯಾಸ ಇದರ ವ್ಯಾವಹಾರಿಕ ಪಕ್ಷವಾಗಿದೆ. ಈ ರೀತಿಯಲ್ಲಿ ಭ್ರಷ್ಟವಿರೋಧಿ ಶಾಸ್ತ್ರದ ಕ್ಷೇತ್ರ, ಇದರ ಸ್ವಭಾವ ವಿಷಯವಸ್ತು ಮತ್ತು ಮೇರೆಯನ್ನು ನಿರ್ಧರಿಸುತ್ತದೆ.

01. ಭ್ರಷ್ಟವಿರೋಧಿ ಶಾಸ್ತ್ರದ ಸ್ವಭಾವ

02. ಭ್ರಷ್ಟವಿರೋಧಿ ಶಾಸ್ತ್ರದ ವಿಷಯವಸ್ತು

03. ಭ್ರಷ್ಟವಿರೋಧಿ ಶಾಸ್ತ್ರದ ಮೇರೆ ( ಸೀಮೆ)

### 01. ಭ್ರಷ್ಟವಿರೋಧಿ ಶಾಸ್ತ್ರದ ಸ್ವಭಾವ (Nature of Anticorruptology)

ಮಾನವೀಯ ಕ್ರಿಯಾಕಲಾಪ, ಮಾನವೀಯ ಆಚರಣೆ ಮತ್ತು ಮಾನವೀಯ ಸ್ವಭಾವ ಸಂಬಂಧಿತ ವಿಸ್ತೃತ ಹಾಗೂ ವಿಶ್ಲೇಷಣಾತ್ಮಕ ಜ್ಞಾನವೇ ಭ್ರಷ್ಟವಿರೋಧಿ

ಶಾಸ್ತ್ರದ ತಾತ್ಪರ್ಯವಾಗಿದೆ. ಈ ಜ್ಞಾನದ ಸ್ವಭಾವವನ್ನು ಸಿದ್ಧಾಂತ ಮತ್ತು ವ್ಯವಹಾರ ಎಂಬ ಎರಡು ಭಾಗಗಳಲ್ಲಿ ವಿಭಾಜಿಸಬಹುದಾಗಿದೆ.

ಕ). ಸಿದ್ಧಾಂತ, ಖ) ವ್ಯವಹಾರ.

ಕ) ಸಿದ್ಧಾಂತ (Theory ) – ಇದು ಜ್ಞಾನದ ಸೂಚಿ (ವಿವರಣೆ)ಯಾಗಿದೆ. ಇದರ ವಿಭಾಗಮಟ್ಟದಲ್ಲಿ ಅಧ್ಯಯನ ಮಾಡಬಹುದಾಗಿದೆ. ಮತ್ತು ಇದನ್ನು ವಿಜ್ಞಾನವೆಂದೂ ಹೇಳಬಹುದಾಗಿದೆ. ವಿಜ್ಞಾನವೆಂದರೆ ಯಾವುದೇ ವಿಷಯ ಅಥವಾ ಜ್ಞಾನದ ಪ್ರಮಾಣಿತ ಅಧ್ಯಯನದ ವಿಧಾನವಾಗಿದೆ. ವೈಜ್ಞಾನಿಕ ಸೂತ್ರವನ್ನು ಸಿದ್ಧಾಂತವೆನ್ನುತ್ತೇವೆ. ಮತ್ತು ಸಿದ್ಧಾಂತದ ಆಧಾರದಲ್ಲಿ ಪ್ರಮಾಣಿಸಲ್ಪಡುವ ವಿಧಾನವನ್ನು ವಿಜ್ಞಾನವೆನ್ನುತ್ತೇವೆ.

ಖ) ವ್ಯವಹಾರ (Practice) :– ವ್ಯವಹಾರವೆಂದರೆ ಕೆಲಸಮಾಡುವ ರೀತಿಯಾಗಿದೆ. ಇದೊಂದು ಕಲೆಯೂ ಹೌದು. ಈ ಕಲೆಯೇ ಮಾನವ ಜೀವನ ಮತ್ತು ಮಾನವ ಸಮಾಜಕ್ಕೆ ಸೌಂದರ್ಯ ಪ್ರದಾನ ಮಾಡುತ್ತದೆ. ಅದರಲ್ಲಿ ಮನುಷ್ಯ ವಿಹರಿಸುತ್ತಾನೆ, ಮತ್ತು ಜೀವನದ ಒಳಿತು –ಕೆಡುಕುಗಳ ಪ್ರತಿ ಕ್ಷಣವನ್ನು ಸ್ವೀಕರಿಸುತ್ತಾನೆ. ಹಾಗೂ ಜೀವನವನ್ನು ನಿರ್ವಹಿಸುತ್ತಾನೆ. (ಜೀವಿಸುತ್ತಾನೆ) ಹೀಗೆ ಈ ಕಲೆಯು ಮಾನವ ಜೀವನನೊಂದಿಗೆ ಸಂಬಂಧಿತವಾಗಿದೆ. ಮತ್ತು ಮಾನವ ಜೀವನವು ವ್ಯವಹಾರ ಕಲೆಯೊಂದಿಗೆ ಇರುತ್ತದೆ.

**ಭ್ರಷ್ಟ ವಿರೋಧಿ ಶಾಸ್ತ್ರ ವಿಜ್ಞಾನವಾಗಿದೆ. (Anticorruptology as a Science)**

ಭ್ರಷ್ಟವಿರೋಧಿ ಶಾಸ್ತ್ರ ವಿಜ್ಞಾನವಾಗಿದೆ. ವಿಜ್ಞಾನವೆಂದರೆ ಜ್ಞಾನವನ್ನು ಕ್ರಮಬದ್ಧಗೊಳಿಸುವ ವಿವರಣೆ, ವಿಜ್ಞಾನದ ಪ್ರಕ್ರಿಯೆ ಮತ್ತು ನಿಯಮಗಳು ನಿಶ್ಚಿತವಾದ ರೀತಿಯಲ್ಲಿ ನಡೆಯುತ್ತವೆ. ಮತ್ತು ಎಲ್ಲಾ ಕಡೆಗಳಲ್ಲಿ, ಒಂದೇ ರೀತಿಯಲ್ಲಿ, ಕ್ರಿಯಾಶೀಲವಾಗುತ್ತವೆ. ಭೌತಿಕ ವಿಜ್ಞಾನದ ನಿಯುಮಗಳು ಇದಕ್ಕೆ ಉದಾಹರಣೆಯಾಗಿವೆ. ಇದು ಕಾರಣ ಮತ್ತು ಪರಿಣಾಮಗಳ ನಡುವೆ ಸಂಬಂಧವನ್ನು ಸ್ಥಾಪಿಸುತ್ತದೆ. ಭ್ರಷ್ಟವಿರೋಧಿ ಶಾಸ್ತ್ರ ಮನುಷ್ಯನ ಸ್ವಭಾವ, ಪ್ರಕೃತಿ. ಆಚರಣೆ, ಸಾಮಾಜಿಕ ಹಾಗೂ ಆರ್ಥಿಕ ವ್ಯವಹಾರ ಮತ್ತು ಕ್ರಿಯಾಕಲಾಗಪಗಳ ಕಾರಣ ಮತ್ತು ಪರಿಣಾಮಗಳ ನಡುವೆ ಸಂಬಂಧ ಸ್ಥಾಪಿಸುತ್ತಾ ಅಧ್ಯಯನ ಮಾಡುವುದರಿಂದ ಇದು ಸಾಮಾಜಿಕ ವಿಜ್ಞಾನವಾಗಿದೆ.

**ಭ್ರಷ್ಟವಿರೋಧಿ ಶಾಸ್ತ್ರ ಕಲೆಯಾಗಿದೆ. (Anticorrtology as an art )**

ಭ್ರಷ್ಟವಿರೋಧಿ ಶಾಸ್ತ್ರ ಕಲೆಯೂ ಹೌದು. ಕಲೆ ಎಂದರೆ,ಕೆಲಸ ಮಾಡುವ ರೀತಿ. ನೀತಿ ನಿರ್ಮಾಣ ಮತ್ತು ವ್ಯವಹಾರಿಕ ಪರವಾದ ಜ್ಞಾನವನ್ನು ನೀಡುವಂತಹ

ಪ್ರಕಿಯೆ ಆಗಿದೆ. ಇದು ವಿಭಿನ್ನ ರೀತಿಯ ನೀತಿ ಮತ್ತು ಆಚರಣೆಯ ವಿರುದ್ಧ ಉಂಟಾಗುವ ಸಮಸ್ಯೆಗಳಿಗೆ ಸಮಾಧಾನಕರವಾದ ರೀತಿಯನ್ನೂ ಕಲಿಸುತ್ತದೆ. ಈ ಸಿದ್ಧಾಂತವು (ಶಾಸ್ತ್ರ ) ಮನುಷ್ಯನಿಗೆ ಭೌತಿಕ ಹಾಗೂ ಅಭೌತಿಕ ಸ್ಥಿತಿಯ ಸುಧಾರಣಾ ಕ್ರಮದಲ್ಲಿ ವ್ಯಾವಹಾರಿಕ ರೂಪದಿಂದ ಸಹಾಯ ಮಾಡುತ್ತದೆ. ಇದಕ್ಕಾಗಿ ಈ ಸಿದ್ಧಾಂತವು ಕಲೆಯೂ ಆಗಿದೆ.

ಭ್ರಷ್ಟವಿರೋಧಿ ಶಾಸ್ತ್ರ ವಿಜ್ಞಾನವಾಗಿದೆ. ಅಥವಾ ಕಲೆ, ಇದನ್ನು ಬೇರ್ಪಡಿಸಿ ವ್ಯಾಖ್ಯಾನಿಸಲಾಗುವುದಿಲ್ಲ. ಇದು ವಿಜ್ಞಾನದ ರೂಪದಲ್ಲಿ ನೀತಿ ಹಾಗೂ ಸೈದ್ಧಾಂತಿಕ ಜ್ಞಾನವನ್ನು ಪ್ರದಾನ ಮಾಡುವುದರೊಂದಿಗೆ ವ್ಯಾವಹಾರಿಕ ರೀತಿಯಲ್ಲಿ ಕೂಡ ಅಭ್ಯಸ್ತವನ್ನಾಗಿ ಮಾಡುತ್ತದೆ. ಭ್ರಷ್ಟವಿರೋಧಿ ಶಾಸ್ತ್ರ ವಿಜ್ಞಾನ, ಕಲೆ ಎರಡೂ ಆಗಿದೆ. ಅದಕ್ಕಾಗಿಯೇ ವಿಜ್ಞಾನ ಮತ್ತು ಕಲೆಯ ಸಮ್ಮಿಶ್ರಣವೇ ಈ ಶಾಸ್ತ್ರದ ಸ್ವಭಾವವಾಗಿದೆ.

**ಭ್ರಷ್ಟವಿರೋಧಿ ಶಾಸ್ತ್ರದ ವಿಷಯವಸ್ತು (Subject matter of Anticorruptology)**

ಭ್ರಷ್ಟವಿರೋಧಿ ಶಾಸ್ತ್ರದ ವಿಷಯ ವಸ್ತುವನ್ನು ವರ್ತಮಾನದ ಪರಿಭಾಷೆಯ ಆಧಾರದಲ್ಲಿ ನಿರ್ಧರಿಸಬೇಕಾಗುತ್ತದೆ. ಆದರೆ, ಇದನ್ನು ವಿಷಯ ವಸ್ತುವಿನ ಆಧಾರದಲ್ಲಿ ನೋಡುವುದರಿಂದ ಎರಡು ಒಪ್ಪಿತ ವಿಚಾರಗಳತ್ತ ಗಮನ ಹರಿಸಬೇಕಾಗಿದೆ. (ಕ ) ಪರಂಪರಾಗತ ವಿಚಾರ ಮತ್ತು ಖ) ಆಧುನಿಕ ವಿಚಾರ.

**ಕ.) ಪರಂಪರಾಗತ ಅವಧಾರಣೆ (Traditional approach)**

ಪರಂಪರಾಗತ ಒಪ್ಪಿತ ವಿಚಾರಗಳಿಂದ ಈ ಶಾಸ್ತ್ರದ ವಿಷಯ ವಸ್ತುವನ್ನು ನೋಡಿದ ಮೇಲೆ ಮನುಷ್ಯನಲ್ಲಿ ವಿಕಸಿತವಾಗುವ ಭ್ರಷ್ಟಾಚಾರ ನಿಯಂತ್ರಣ ಮಾಡುವ ಪ್ರಯತ್ನ ಮತ್ತು ಅದರಿಂದ ನಿರ್ಮಿತ ಸಮಾಜದ ಸ್ಥಿತಿಯನ್ನು ನೋಡುವುದಾಗಿದೆ. ಇದನ್ನು ಈ ಕೆಳಗೆ ಕೊಟ್ಟಂತೆ ವಿಭಜಿಸಬಹುದಾಗಿದೆ.

01) ಪಾಪ ಮತ್ತು ಪುಣ್ಯ (ಧರ್ಮದ) ಮೇರೆಯ ನಿರ್ಧಾರದಿಂದ ನಿಯಂತ್ರಿಸುವುದು.

02) ಸಾಮಾಜಿಕ ಮಾನ್ಯತೆಗಳಿಂದ ನಿಯಂತ್ರಿಸುವುದು.

03) ಪರಿವಾರ ಮತ್ತು ಸಮುದಾಯದಿಂದ ನಿಯಂತ್ರಿಸುವುದು.

04) ಮಾನವೀಯ ಸದ್ಗುಣಗಳಿಂದ ನಿಯಂತ್ರಿಸುವುದು.

05) ಅಧಿಕಾರಬಲದಿಂದ ನಿಯಂತ್ರಿಸುವುದು.

**01) ಪಾಪ ಮತ್ತು ಪುಣ್ಯ (ಧರ್ಮದ) ಮೇರೆಯ ನಿರ್ಧಾರದಿಂದ ನಿಯಂತ್ರಿಸುವುದು (Determination between reghteousness sin)**

ಭ್ರಷ್ಟಾಚಾರ ಮಾಡುವ ವ್ಯಕ್ತಿಗಳು ಪಾಪಿಗಳಾಗುತ್ತಾರೆ ಮತ್ತು ಪಾಪಿ ವ್ಯಕ್ತಿಯು ಎಂದೂ ಭಗವಂತನ ಭಕ್ತನಾಗಲಾರ. ಇವರು ಅದೇ ಪಾಪದ ಕಾರಣದಿಂದಾಗಿ ಸ್ವರ್ಗ ಪ್ರಾಪ್ತಿಯ ಅಧಿಕಾರವನ್ನು ಹೊಂದಲಾರರು. ಎಲ್ಲಾ ಧಾರ್ಮಿಕ ಗ್ರಂಥಗಳಲ್ಲಿ ಒಂದು ವೇಳೆ ಹೀಗೆ ಬರೆದಿದ್ದರೆ (ಭ್ರಷ್ಟಾಚಾರಿ ಎಂದೂ ಸ್ವರ್ಗಕ್ಕೆ ಹೋಗಲಾರರು) ಹಾಗಾಗಿದ್ದರೆ ಯಾರೂ ಇಂತಹ ಕಾರ್ಯವನ್ನು ಮಾಡುತ್ತಿರಲಿಲ್ಲ.

**02) ಸಾಮಾಜಿಕ ಮಾನ್ಯತೆಯಿಂದ ನಿಯಂತ್ರಣ (Control of Social values)**

ಪರಿವಾರ ಮತ್ತು ಸಮುದಾಯ, ಸಮಾಜದ ಒಂದು ಚಿಕ್ಕ ಭಾಗ. ಈ ಚಿಕ್ಕ ಮೇರೆಯೊಳಗೆ ಭ್ರಷ್ಟ ಮತ್ತು ಅನೈತಿಕ ವ್ಯಕ್ತಿಗಳು ಬಹು ಬೇಗ ಗುರುತಿಸಲ್ಪಡುತ್ತಾರೆ. ಮತ್ತು ಇವರು ತಮ್ಮ ಪರಿವಾರ ಹಾಗೂ ಸಮಾಜದ ಅವಹೇಳನಕ್ಕೆ ಗುರಿಯಾಗುತ್ತಾರೆ. ಆದ್ದರಿಂದ ಮನುಷ್ಯ ಜಾಗರೂಕನಾಗುತ್ತಾನೆ. ಭ್ರಷ್ಟ ಕಾರ್ಯಗಳಿಂದ ತನ್ನನ್ನು ತಾನು ದೂರವಿಡಲು ಪ್ರಯತ್ನಿಸುತ್ತಾನೆ.

**03. ಪರಿವಾರ ಮತ್ತು ಸಾಮಾಜಿಕ ಮಾನ್ಯತೆಯಿಂದ ನಿಯಂತ್ರಣ (Control by Family and Community)**

ಪರಿವಾರ, ಸಮಾಜದಲ್ಲಿ ಎಲ್ಲಾ ರೀತಿಯ ಜನರಿರುತ್ತಾರೆ. ಅವರಲ್ಲಿ ಪರಸ್ಪರ ಸಂಬಂಧಗಳಿರುತ್ತವೆ. ಮತ್ತು ಇವರೊಳಗೆ ಮೌಲ್ಯಗಳು– ಮಾನ್ಯತೆಗಳು ಹಾಗೂ ಸಂಸ್ಕೃತಿಯ ಆಧಾರದಲ್ಲಿ ಪರಸ್ಪರರ ಸಂಬಂಧ ಜೋಡಿಸಲ್ಪಟ್ಟಿರುತ್ತದೆ. ಇವರಲ್ಲಿ ಯಾರಾದರೊಬ್ಬ ಅನೈತಿಕ ಕಾರ್ಯ ಮಾಡಿದಾಗ ಅವನನ್ನು ಸ್ಪಷ್ಟವಾಗಿ ಗುರುತಿಸಲಾಗುತ್ತದೆ. ಮತ್ತು ಅವನ ಸಾಮಾಜಿಕ ಬಹಿಷ್ಕಾರವಾಗುತ್ತದೆ. ಈ ರೀತಿಯಿಂದಲೂ ಸಾಮಾಜಿಕ ಅಪರಾಧಗಳನ್ನು ತಡೆಯಬಹುದಾಗಿದೆ. ಸಭ್ಯ ಸಮಾಜವು ಯಾವುದೇ ಸಾಮಾಜಿಕ ಅಪರಾಧಕ್ಕೆ ಆಸ್ಪದ ನೀಡುವುದಿಲ್ಲ. ಆದ್ದರಿಂದ ಸಾಮಾಜಿಕ ಮೌಲ್ಯಗಳು ಮಾನ್ಯತೆ, ಸಂಸ್ಕೃತಿಯು ಇಂತಹ ಭ್ರಷ್ಟ ಸ್ಥಿತಿಯನ್ನು ನಿಯಂತ್ರಿಸುತ್ತದೆ.

**04) ಮಾನವೀಯ ಸದ್ಗುಣಗಳಿಂದ ನಿಯಂತ್ರಣ (Control by Human Virtue)**

ಮಾನವೀಯ ಸದ್ಗುಣಗಳೆಂದರೆ ಮಾನವನ ಆಚಾರ ವಿಚಾರ ಮತ್ತು ಸಂಸ್ಕಾರ. ಇದರಲ್ಲಿ ಪ್ರಾಮಾಣಿಕತೆ, ಸತ್ಯನಿಷ್ಠೆ, ವಿವೇಕ ಮತ್ತು ವಿಶ್ವಾಸಗಳಿಂದ

ಮಾನವೀಯ ಗುಣಗಳು ಮನುಷ್ಯನನ್ನು ಭ್ರಷ್ಟ ಆಚರಣೆಯಿಂದ ರಕ್ಷಿಸುತ್ತವೆ. ವಾಸ್ತವದಲ್ಲಿ ಮನುಷ್ಯ ತನ್ನ ಸದ್ಗುಣಗಳಿಂದಲೇ ನಿಯಂತ್ರಿಸಲ್ಪಡುತ್ತಾನೆ. ಆ ನಂತರ ಆತ ಮನುಷ್ಯನೆಂದು ಪ್ರಮಾಣಿತನಾಗುತ್ತಾನೆ.

### 05. ಶಾಸನದ ಮೂಲಕ ನಿಯಂತ್ರಣ (Control by the ruler)

ಮಾನವ ಸಮಾಜದಲ್ಲಿ ರಾಜ್ಯ ಮತ್ತು ರಾಜ್ಯ ವ್ಯವಸ್ಥೆಯ ಸ್ಥಾಪನೆಯಿಂದಲೇ ರಾಜ್ಯ ಆಳುವವರು ಶಾಸನದ ಅಧಿಕಾರದಿಂದ ಭ್ರಷ್ಟಾಚಾರದಂತಹ ಅಮಾನವೀಯ ಕ್ರಿಯಾಕಲಾಪದ ನಿಯಂತ್ರಣವಾಗುತ್ತದೆ. ರಾಜ್ಯದ ಸರ್ವೋಚ್ಚವ್ಯಕ್ತಿ ಅಥವಾ ಸಮುದಾಯ ಯಾವಾಗಲೂ ಭ್ರಷ್ಟಾಚಾರದ ವಿರುದ್ಧವಾಗಿರುತ್ತದೆ. ಇತಿಹಾಸ ಇದನ್ನು ಹೇಳುತ್ತದೆ. ಹಾಗಾಗಿ ಭ್ರಷ್ಟಾಚಾರ ವಿರೋಧಿ ಕ್ರಿಯಾ – ಕಲಾಪಗಳು ಪರಂಪರಾಗತ ರೂಪದಲ್ಲಿ ನಡೆದುಕೊಂಡು ಬಂದ ವ್ಯವಸ್ಥೆಯಾಗಿದೆ. ಇದನ್ನು ಮುಂದುವರಿಸಬಹುದಾಗಿದೆ.

## ಆಧುನಿಕ ವಿಚಾರಧಾರೆ :– (Modern Approach)

ಆಧುನಿಕ ಯುಗದ ವಿಕಾಸದ ಜೊತೆ ಜೊತೆಗೆ ಮನುಷ್ಯ ಬರುಬರುತ್ತಾ ವ್ಯಕ್ತಿವಾದಿಯಾಗುತ್ತಾ ಹೋದ. ಮನುಷ್ಯ ಸಮಾಜದಿಂದ ಹೆಚ್ಚು ಸಮುದಾಯ, ಸಮುದಾಯದಿಂದ ಹೆಚ್ಚು ಪರಿವಾರ ಮತ್ತು ಪರಿವಾರಕ್ಕಿಂತ ಹೆಚ್ಚು ತಾನು (ಸ್ವಯಂ) ಹೀಗೆ ಸಂಕುಚಿತವಾಗುತ್ತಾ ಮಾನವತಾವಾದದ ಸಿದ್ಧಾಂತದೊಳಗೆ ಮುದುಡಿಕೊಳ್ಳುತ್ತಿದ್ದಾನೆ. ಮಾನವ ಸಮಾಜದಲ್ಲಿ ಯಾವ ರೀತಿಯಲ್ಲಿ ಮೌಲ್ಯಗಳು ಹಾಗೂ ಮಾನ್ಯತೆಗಳನ್ನು ಸ್ಥಾಪಿಸಬೇಕಾಗಿದೆ. ಯಾವ ರೀತಿಯ ವಿಕಾಸವಾಗುತ್ತದೆ, ಸಮಾಜದ ಹೊಣೆ ಹೊತ್ತ ಸಮೂಹದ ರೂಪದಲ್ಲಿರುವ ಸಮುದಾಯ ಹಾಗೂ ಪರಿವಾರ ಇದನ್ನು ಹೇಗೆ ನೋಡುತ್ತಿದ್ದಾರೆ, ಸಮುದಾಯ ಹಾಗೂ ಪರಿವಾರದ ಹೊಣೆಗಾರಿಕೆ ಏನು? ಈ ಎಲ್ಲದರಿಂದ ಮನುಷ್ಯ ಹಿಂದಡಿ ಇಡುತ್ತಾ ಸಾಗುತ್ತಿದ್ದಾನೆ. ಇಂತಹ ವ್ಯಕ್ತಿವಾದದ ಸ್ಥಿತಿ ವಿಕಾಸದಿಂದ ಮನುಷ್ಯ, ಅವನ ಸಮುದಾಯ ಮತ್ತು ಸಾಮಾಜಿಕ ವಾತಾವರಣ ತೀವ್ರವಾಗಿ ಭ್ರಷ್ಟವಾಗುತ್ತಾ ಹೋಗುತ್ತದೆ. ಮತ್ತು ನಂತರದಲ್ಲಿ ಸಮಾಜದ ಎಲ್ಲಾ ಹಂತಗಳಲ್ಲಿ ವಿಭೇದವನ್ನುಂಟು ಮಾಡುತ್ತದೆ. ಇದು ಮಾನವ ಮತ್ತು ಮಾನವ ವಿಕಾಸದ ಶತ್ರುವಾಗಿದೆ. ಇದನ್ನು ನಿಯಂತ್ರಿತ ಸ್ಥಿತಿಯಲ್ಲಿಡುವುದು ಅವಶ್ಯಕವಾಗಿರುವುದರಿಂದ ಈ ನಿಮ್ನಲಿಖಿತ ಅಧ್ಯಯನವನ್ನು ಸ್ವೀಕರಿಸಬೇಕಾಗಿದೆ.

## ಒಳ್ಳೆಯ ಶಾಸನ :– (Good Governance)

ಯಾವುದೇ ದೇಶದಲ್ಲಿ ಒಳ್ಳೆಯ ಶಾಸನವಿರಬೇಕಾದರೆ, ಕಾನೂನಾತ್ಮಕ ನಿರ್ಧಾರಿತ ಕಾರ್ಯಗಳಿಗೆ ಸಂಬಂಧಿತ ಸಮೂಹದಿಂದ ಸಮಯಾನುಸಾರವಾಗಿ ಕಾನೂನಿಗನುಗುಣವಾಗಿ ಸಂಪನ್ನ ಮಾಡುವ ಮತ್ತು ಮಾಡಿಸುವ ಸ್ಥಿತಿ ಉಂಟಾಗಬೇಕು. ಯಾವುದೇ ರಾಜ್ಯದ ವ್ಯವಸ್ಥೆಯ ನೀತಿ ನಿರ್ಮಿಸುವ ಮತ್ತು ನಿರ್ಣಯಿಸುವ ಕಾರ್ಯಾನ್ವಯನದಿಂದ ಆಡಳಿತದಲ್ಲಿ ಭ್ರಷ್ಟಾಚಾರ ಇರುವವರೆಗೆ ಒಳ್ಳೆಯ ಶಾಸನದ ಪರಿಕಲ್ಪನೆಯನ್ನು ಮಾಡಲಾಗದು. ಇದಕ್ಕಾಗಿ ಒಳ್ಳೆಯ ಶಾಸನ ಪದ್ಧತಿಯ ವಿಕಾಸಕ್ಕಾಗಿ, ನೀತಿ– ನಿಯಮ ಮತ್ತು ಕಾನೂನಿನ ಪೂರ್ಣರೂಪದಲ್ಲಿ ಪಾಲನೆ ಮಾಡುವ ವ್ಯವಸ್ಥೆ ಆಗಬೇಕಾಗಿದೆ. ಇದರ ವಿಸ್ತೃತ ಅಧ್ಯಯನ ಶಾಸನ ಸಂಬಂಧಿತ ಪರಿಚ್ಛೇದದಲ್ಲಿ ಉಲ್ಲೇಖಿಸಲಾಗಿದೆ.

## ನ್ಯಾಯಿಕ ರಾಜ್ಯ [Leagal State]

ಆಧುನಿಕ ವಿಚಾರಧಾರೆಯಲ್ಲಿ ಕಾನೂನಾತ್ಮಕ ರಾಜ್ಯ ವ್ಯವಸ್ಥೆಯ ಅವಶ್ಯಕತೆಯ ಆಭಾಸವಾಗುವುದರಿಂದಲೇ ವರ್ತಮಾನ ರಾಜನೈತಿಕ ಸ್ಥಿತಿಯಲ್ಲಿ ನ್ಯಾಯಿಕ ರಾಜ್ಯದ ವಿಚಾರ ಬಂದಿದೆ. ಇದರ ವಿಸ್ತೃತ ಅಧ್ಯಯನವು ಕೂಡ ಒಳ್ಳೆಯ ಶಾಸನ ಪರೀಚ್ಛೇದದಲ್ಲಿ ಉಲ್ಲೇಖಿತವಾಗಿವೆ.

***

# 14. ಭ್ರಷ್ಟವಿರೋಧಿ ಶಾಸ್ತ್ರದ ಮೇರೆಗಳು
# [Limitation of Anticorruptology]

ಭ್ರಷ್ಟವಿರೋಧಿ ಶಾಸ್ತ್ರವು ಮಾನವ ಆಚರಣೆಯನ್ನು ವ್ಯಾಖ್ಯಾನಿಸುವ ವಿಜ್ಞಾನವಾಗಿದೆ. ಇದಕ್ಕೆ ಮೇಲೆ ಚೌಕಟ್ಟು ನಿರ್ಧರಿಸುವುದು ಕಷ್ಟಕರವಾಗಿದೆ. ಆದರೂ ಅಧ್ಯಯನವನ್ನು ವ್ಯವಸ್ಥಿತಿಗೊಳಿಸುವುದಕ್ಕಾಗಿ ಈ ಶಾಸ್ತ್ರಕ್ಕೆ ಮೇರೆಯನ್ನು ನಿರ್ಧರಿಸುವುದು ಅವಶ್ಯಕವಾಗಿದೆ. ಭ್ರಷ್ಟಾಚಾರದ ಕ್ಷೇತ್ರ ವ್ಯಾಪಕವಾಗಿದೆ. ಇದರಲ್ಲಿ ಚಿಕ್ಕ ಪುಟ್ಟ ಲಂಚ ಪಡೆಯುವವರಿಂದ ಹಿಡಿದು, ದೇಶದ ರಾಷ್ಟ್ರೀಯ ಕೋಷವನ್ನು ಲೂಟಿ ಮಾಡುವವರ ಆರ್ಥಿಕ ಹಗರಣದವರೆಗೆ ಇದು ವ್ಯಾಪಕವಾಗಿದೆ. ಮನುಷ್ಯನ ನೀತಿ, ನೈತಿಕತೆ, ವ್ಯವಹಾರ, ಅಧಿಕಾರ, ಕರ್ತವ್ಯ ಮತ್ತು ಹೊಣೆಗಾರಿಕೆಯಂತಹ ಸಂವೇದನಶೀಲ ವಿಷಯಗಳಿಂದ ಹಿಡಿದು ಸ್ವೀಕೃತಿಯ ದುರುಪಯೋಗದವರೆಗೂ ತೆಗೆದುಕೊಳ್ಳಬಹುದು. ಭ್ರಷ್ಟಾಚಾರ ಸೀಮಾತೀತವಾಗಿ ಹರಡುತ್ತಿದೆ. ಆದ್ದರಿಂದ ಇದನ್ನು ಮೇರೆಗಳಲ್ಲಿರಿಸಿ ನೋಡಬೇಕಾಗಿದೆ. ವರ್ತಮಾನದಲ್ಲಿ ಈ ಶಾಸ್ತ್ರದ ಮೇರೆಗಳನ್ನು ಈ ಕೆಳಗಿನಂತೆ ನಿರ್ಧರಿಸಲಾಗಿದೆ.

1. ಮಾನವ ವ್ಯವಹಾರ, ಆಚರಣೆ ಮತ್ತು ಮನಃಸ್ಥಿತಿ
2. ಸೇವಾದಾಯಿ ಹಾಗೂ ಸೇವಾಗ್ರಾಹಿಯ ಮತ್ತು ಸಂಚಾಲನೆಯಾದ ಸ್ಥಿತಿಯಲ್ಲಿ ಉಂಟಾಗುವ ಹಗರಣ.
3. ಯೋಜನೆಯ ಸಂಚಾಲನೆ ಮತ್ತು ಸಂಚಾಲನೆಯಾದ ಸ್ಥಿತಿಯಲ್ಲಿ ಉಂಟಾಗುವ ಹಗರಣ
4. ರಾಜನೈತಿಕ ದಳ ಹಾಗೂ ರಾಜ್ಯವ್ಯವಸ್ಥೆಯ ಸಂಬಂಧ.

5. ಸಂವಿದಾನ ಹಾಗೂ ಪ್ರಚಲಿತ ಕಾನೂನು ಸಂಶೋಧನೆ.

6. ಅನ್ಯದೇಶಗಳಿಂದ ನುಸುಳುವಿಕೆ.

7. ಆಂತರೀಕ ರಾಜ್ಯ ವ್ಯವಸ್ಥೆಯಲ್ಲಿ ಆಗುತ್ತಿರುವ ಅವ್ಯವಸ್ಥೆ.

**1) ಮಾನವ ವ್ಯವಹಾರ ಆಚರಣೆ ಮತ್ತು ಮನಃಸ್ಥಿತಿ [Human behaviour, character and mentality ]**

ಮಾನವ – ವ್ಯವಹಾರ, ಆಚರಣೆ ಮತ್ತು ಮನಃಸ್ಥಿತಿ ಕಣ್ಣಿಗೆ ಕಾಣುವ ವಸ್ತುವಲ್ಲ. ಇದು ಅನುಭೂತಿ (ಅನುಭವ) ಉಂಟುಮಾಡುವ ತತ್ವವಾಗಿದೆ. ಆದ್ದರಿಂದಲೇ ಮಾನವೀಯ ಭಾವನೆಗಳ ಕಾರಣದಿಂದಾಗಿ ಈ ವಿಷಯದ ಕುರಿತು ಬರೆಯುವುದು ಮತ್ತು ಪ್ರಮಾಣವನ್ನು ಸೃಷ್ಟಿಸುವುದು ಕಠಿಣವಾಗಿದೆ. ಇದನ್ನು ತಿಳಿದುಕೊಳ್ಳಬಹುದಾಗಿದೆ. ಯಾರು ಇದನ್ನು ತಿಳಿದಿದ್ದಾರೋ ಅಥವಾ ಈ ಸ್ಥಿತಿಯನ್ನು ಅನುಭವಿಸಿದ್ದಾರೋ, ಅಂತಹ ವ್ಯಕ್ತಿ ಅಥವಾ ಸಂಸ್ಥೆ ಪ್ರಮಾಣವನ್ನು ಪ್ರಸ್ತುತಗೊಳಿಸಬಲ್ಲರು. ಇದು ಸ್ವಯಂ (ತಾನೇ) ಪ್ರಮಾಣಿತವಾಗಲಾರದು. ಈ ಪರಿಸ್ಥಿತಿಯಲ್ಲಿ ಅದು ವ್ಯವಹಾರ ಆಚರಣೆ ಮತ್ತು ಮನಃಸ್ಥಿತಿ ತಿಳಿದ ಅಥವಾ ತಿಳುವಳಿಕೆ ಪಡೆದುಕೊಳ್ಳುವ ಬೇರೊಂದು ಪಕ್ಷವೇ ಪ್ರಮಾಣದ ರೂಪದಲ್ಲಿ ಪ್ರಸ್ತುತವಾಗುವ ಸಂಭವವೂ ಇದೆ. ಈ ವಿಷಯವನ್ನು ಸ್ಪಷ್ಟ ಹಾಗೂ ಆಳವಾಗಿ ವ್ಯಾಖ್ಯಾನಿಸುವ, ವಿಶ್ಲೇಷಿಸುವ ಅಥವಾ ಪ್ರಮಾಣವನ್ನು ಕಲೆ ಹಾಕುವುದು ಕಠಿಣವಾಗಿದೆ. ಆದರೂ ಮಾನವ ವ್ಯವಹಾರ ಆಚರಣೆ ಮತ್ತು ಮನಃ ಸ್ಥಿತಿಯನ್ನು ಭ್ರಷ್ಟವಿರೋಧಿ ಶಾಸ್ತ್ರ ವ್ಯಾಖ್ಯಾನಿಸಬಲ್ಲುದು.

**2) ಸೇವಾದಾಯಿ ಹಾಗೂ ಸೇವಾಗ್ರಾಹಿಗಳ ನಡುವೆ ಆಗುವ ನುಸುಳುವಿಕೆ [Bribery between Service Provider and eleant]**

ಯಾವುದೇ ಸರಕಾರವು ಸಾಮಾನ್ಯವಾಗಿ ಜನರಿಗೆ ಸೇವೆಯನ್ನು ಒದಗಿಸುವಂತಹ ನೈತಿಕ ವ್ಯವಸ್ಥೆಯ ನಿರ್ಮಾಣ ಮಾಡುತ್ತದೆ. ಇಂತಹ ಸೇವೆಯನ್ನು ನೀಡುವುದಕ್ಕಾಗಿ ಸರಕಾರ ಮಾಸಿಕ ವೇತನವನ್ನಿತ್ತು, ಕರ್ಮಚಾರಿಗಳ ನಿಯುಕ್ತಿ ಮಾಡುತ್ತದೆ. ಪದಾಧಿಕಾರಿಗಳು ಹಾಗೂ ಕರ್ಮಚಾರಿಗಳು, ನಾಗರೀಕರಿಗೆ ನಿಃಶುಲ್ಕ ಹಾಗೂ ಸೇವಾಮನೋಭಾವದಿಂದ ಕೂಡಿ ಸೇವೆಯನ್ನು ನೀಡಬೇಕು. ಆದರೆ, ಬಡ ದೇಶಗಳಲ್ಲಿಯ ಇಂತಹ ಪದಾಧಿಕಾರಿಗಳು ಹಾಗೂ ಕರ್ಮಚಾರಿಗಳ ಮೂಲಕವೇ ವಿಷಯಗತ ಆಧಾರದಲ್ಲಿ ಲಂಚ ಕೊಡುಕೊಳ್ಳುವಿಕೆಯ ಕಾರ್ಯಕಲಾಪ ನಡೆಯುತ್ತಿರುತ್ತದೆ. ದೇಶ ಕಾಲ ಮತ್ತು ಪರಿಸ್ಥಿತಿಗನುಗುಣವಾಗಿ

ಸೇವಾಗ್ರಾಹಿ (ಸೇವೆ ನೀಡುವವರು ಮತ್ತು ಪಡೆಯುವವರು ಇಬ್ಬರೂ ಸಮಾನ ರೂಪದಲ್ಲಿ ದೋಷಿಗಳಾಗುತ್ತಾರೆ.

**3. ಯೋಜನೆಗಳ ಕಾರ್ಯಾಚರಣೆ ಮತ್ತು ಕಾರ್ಯಾನ್ವಿತವಾಗುವಲ್ಲಿ ಆಗುವ ಧಾಂಧಲೆ (ಹಗರಣ ಅಥವಾ ಅನೈತಿಕ ವ್ಯವಹಾರ) [Illegal transaction during operation of Project]**

ಯಾವುದೇ ದೇಶದಲ್ಲಿ ಕಾರ್ಯಾನ್ವಿತಗೊಳ್ಳುವ, ಸಣ್ಣ ಮಧ್ಯಮ ಮಟ್ಟದ ಹಾಗೂ ದೊಡ್ಡ ಯೋಜನೆಗಳು ಕಾರ್ಯಾನ್ವಿತಗೊಳ್ಳುವ ಮೊದಲೇ ಕಮಿಷನಿನ–(ಯೋಜನಾಮೊತ್ತದಲ್ಲಿ ಪಾಲು)ರಾಜಕೀಯ ಪ್ರಾರಂಭವಾಗುತ್ತದೆ. ಸಣ್ಣ ಯೋಜನೆಗಳಲ್ಲಿ ಸರಕಾರದ ಪದಾಧಿಕಾರಿಗಳ ಕಣ್ಗಾವಲಿನಲ್ಲಿ ಕಮಿಷನ್ನಿನ ಮೊತ್ತವನ್ನು ಹಂಚುವ ಅಥವಾ ನಿಶ್ಚಿತಗೊಳಿಸುವ ಕಾರ್ಯ ಪ್ರಾರಂಭವಾಗುತ್ತದೆ. ಯಾವುದೇ ಯೋಜನೆಯನ್ನು ಸಂಪನ್ನಗೊಳಿಸುವುದು ಅಥವಾ ಪೂರೈಸುವಲ್ಲಿ ಈ ಕುರಿತು ಕೂಡ ಪದಾಧಿಕಾರಿಗಳು ಮೊತ್ತವನ್ನು (ಕಮಿಷನ್) ಕಡಿಮೆ ಮಾಡುವ ಹೆಚ್ಚಿಸುವ ಕೆಲಸವನ್ನು ಮಾಡುತ್ತಾರೆ. ಈ ಅಧಿಕಾರಿಗಳು ಇಂತಹ ಕಾರ್ಯಗಳನ್ನು (ವ್ಯವಹಾರ) ಮಾಡುವ ಸಂದರ್ಭದಲ್ಲಿ ರಾಜಕೀಯ ಶಕ್ತಿಗಳ ಮರೆಯಲ್ಲಿ ಅಥವಾ ಅವರ ಸಹಯೋಗ, ಸಂಕೇತಗಳಿಂದ ಇಂತಹ ಅನೈತಿಕ ಕಾರ್ಯಗಳಿಗೆ ಪ್ರೋತ್ಸಾಹ ಕೊಡುತ್ತಾರೆ. ಈ ರೀತಿ ಆಂತರಿಕ ಮಾತ್ರವಲ್ಲ ಬಾಹ್ಯ ಕ್ಷೇತ್ರವೂ ಅರ್ಥಾತ್ ಯೋಜನೆಗಳ ಪ್ರವರ್ತಕರು ಹಾಗೂ ಸಮರ್ಥಕರು, ರಾಷ್ಟ್ರ ಅಥವಾ ಸಹಯೋಗದ ರೂಪದಲ್ಲಿ ಕಂಡುಬರುವ ಅಂತರಾಷ್ಟ್ರೀಯ ಕೊಡುವ ಸಂಸ್ಥೆ ಅಥವಾ ಪದಾಧಿಕಾರಿಗಳ ಸಹಯೋಗದಲ್ಲಿಯೂ ಕೂಡ ಯೋಜನಾ ವೆಚ್ಚವನ್ನು ಹೆಚ್ಚಿಸುವ ಕೆಲಸ ನಡೆಯುತ್ತದೆ. ಇಷ್ಟು ಮಾತ್ರವಲ್ಲದೆ ಇಂತಹ ಯೋಜನೆಗಳಿಂದ ಬಡ ದೇಶಗಳು ಮೋಸಕ್ಕೊಳಪಡುತ್ತವೆ. (ವಂಚಿಸಲ್ಪಡುತ್ತವೆ) ಶ್ರೀಮಂತ ರಾಷ್ಟ್ರ ಹಾಗೂ ಸಹಯೋಗಿಗಳೆಂಬಂತೆ ಕಂಡುಬರುವ ಸಂಸ್ಥೆ ಹಾಗೂ ಸಮೂಹಗಳ ಪದಾಧಿಕಾರಿಗಳು ಆದಷ್ಟು ಹೆಚ್ಚಿನ ಲಾಭ ಪಡೆಯುವ ಕಾರ್ಯವನ್ನು ಮಾಡುತ್ತಾರೆ. ಆದ್ದರಿಂದ ಬಡ ರಾಷ್ಟ್ರಗಳಲ್ಲಿ ಕಾರ್ಯಾನ್ವಿತಗೊಳ್ಳುವ ಯೋಜನೆಗಳಲ್ಲಿ ಆಗುವ ಅನೈತಿಕ ವ್ಯವಹಾರಗಳನ್ನು ತಡೆಯುವಂತಹ ಕಾರ್ಯ ವಿಧಾನ ನಿರ್ಮಿಸುವ ಅವಶ್ಯಕತೆ ಇದೆ.

## 4. ರಾಜ ನೈತಿಕ ಪಕ್ಷ ಹಾಗೂ ರಾಜ್ಯ ವ್ಯವಸ್ಥೆಯ ಸಂಬಂಧ (Relationship between political party and State affair)

ರಾಜ್ಯದ ಆಡಳಿತ ವ್ಯವಸ್ಥೆಗಾಗಿ ನಿಶ್ಚಿತವಾದ ನೀತಿ ನಿಯಮಾವಳಿಗಳಿರುತ್ತವೆ. ಈ ನೀತಿ ನಿಯಮಗಳಿಗನುಸಾರವಾಗಿ ಸ್ವಚ್ಛ ಮತ್ತು ಹಸ್ತಕ್ಷೇಪ ಮುಕ್ತವಾದ, ಸುಲಲಿತ ಶಾಸನದ ರೀತಿಯಿಂದ ಶಾಸನ ವ್ಯವಸ್ಥಿತಗೊಳ್ಳುತ್ತದೆ. ಆದರೆ, ಬಡ ದೇಶಗಳ ರಾಜ್ಯವ್ಯವಸ್ಥೆಯನ್ನು (ಆಡಳಿತವನ್ನು) ನೀತಿ ನಿಯಮಗಳಲ್ಲಿ ಬದಲಾಗಿ ರಾಜಕೀಯ ಶಕ್ತಿಗಳು ನಡೆಸುತ್ತವೆ. ಇಂತಹ ರಾಜ್ಯಾಡಳಿತದಲ್ಲಿ ರಾಜಕೀಯ ಶಕ್ತಿಗಳ ಪ್ರಭಾವವಿರುವುದರಿಂದ ರಾಜ್ಯದ ಆಡಳಿತ ವ್ಯವಸ್ಥೆ ದುರ್ಬಲವಾಗುತ್ತಾ ಹೋಗುತ್ತದೆ. ಆಡಳಿತ (ಶಾಸನ) ದುರ್ಬಲವಾಗುವುದರಿಂದ ಸರಕಾರದ ನೇತೃತ್ವದಲ್ಲಿ ಅಸ್ಥಿರತೆಯುಂಟಾಗುತ್ತದೆ. ಅಲ್ಪಾವಧಿಗಾಗಿ ಅಧಿಕಾರಕ್ಕೆ ಬರುವ ರಾಜಕೀಯ ಶಕ್ತಿಗಳು ಸಮರ್ಪಕವಾಗಿ, ಪ್ರಭಾವಪೂರ್ಣವಾಗಿ ಕೆಲಸ ಮಾಡಲಾರವು. ಬಡ ದೇಶದಲ್ಲಿ ರಾಜಕೀಯ ಪಕ್ಷದ ಮುಖಂಡರು ಹೆಚ್ಚು ಅವಕಾಶವಾದಿಗಳಾಗಿ ಆಡಳಿತ ವ್ಯವಸ್ಥೆಯ ಶೋಷಣೆ ಮಾಡುತ್ತಾರೆ. ಏಕೆಂದರೆ, ನಿಶ್ಚಿತ ಸಮಯದವರೆಗೆ ಶಾಸನ ಮಾಡುವ ಪರಿಸ್ಥಿತಿ ಇರುವುದಿಲ್ಲ. ರಾಜಕೀಯ ಪಕ್ಷ ಮತ್ತು ರಾಜ್ಯಾಡಳಿತದ ನಡುವೆ ಇಂತಹ ಅಸ್ವಾಭಾವಿಕ ಸಂಬಂಧವು ಕೊನೆಗೊಳ್ಳುವ ತನಕ ರಾಜ್ಯವ್ಯವಸ್ಥೆ ಸ್ವಚ್ಛ, ಸಶಕ್ತ ಮತ್ತು ನ್ಯಾಯಯುತವಾಗಿ ನಡೆಯಲಾರದು.

## 5. ಸಂವಿಧಾನ ಮತ್ತು ಪ್ರಚಲಿತ ಕಾನೂನಿನಲ್ಲಿ ಸಂಶೋಧನೆ (Amendment of Consticturion and existing Law)

ಸಂವಿಧಾನವೇ ದೇಶದ ಮೂಲ ಕಾನೂನಾಗಿದೆ. ಈ ಸಂವಿಧಾನದ ಆಧಾರದ ಮೇಲೆ ಅವಶ್ಯ ಕಾನೂನಿನ ನಿರ್ಮಾಣವಾಗುತ್ತದೆ. ಲಿಖಿತ ಕಾನೂನು ಅಸ್ಪಷ್ಟ ಮತ್ತು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ. ಇಬ್ಬಗೆಯ ಅರ್ಥ ನೀಡುವಂತಿರಬಾರದು. ಕಾನೂನಿನ ಭಾಷೆ ಸ್ಪಷ್ಟ ಮತ್ತು ಅರ್ಥಪೂರ್ಣ ವಿವರಣೆಯಿಂದ ಕೂಡಿರಬೇಕು. ಆದರೆ ಬಡ ದೇಶಗಳ ಕಾನೂನಿನ ಪ್ರಕ್ರಿಯೆ ಸ್ಪಷ್ಟ ಹಾಗೂ ಏಕಾರ್ಥ (ಒಂದೇ ಅರ್ಥವುಳ್ಳದ್ದು)ವಾಗಿರುವುದಿಲ್ಲ. ಕಾನೂನು ನಿರ್ಮಾಣ ಪ್ರಕ್ರಿಯೆಯಲ್ಲಿ ಬಲಾಢ್ಯ ದೇಶಗಳ ಹಸ್ತಕ್ಷೇಪವಿರುವುದರಿಂದ ಅವಶ್ಯಕತೆಗನುಸಾರವಾಗಿ ವ್ಯಾಖ್ಯಾನ ಮಾಡುವ ಸಂಭವವಿರುತ್ತದೆ. ಹೀಗೆ ಪಾರದರ್ಶಕವಲ್ಲದ ಕಾನೂನಿನ ವ್ಯವಸ್ಥೆ ಇರುವುದರಿಂದ ದೇಶದಲ್ಲಿ ರಾಜಕೀಯ ಪಕ್ಷಗಳ ಮುಖಂಡರು ಸ್ವಾರ್ಥಸಾಧನೆಗೆ ಅನುಕೂಲವಾಗುವಂತೆ ಕಾನೂನಿನಲ್ಲಿ ಸಂಶೋಧನೆ ಅಥವಾ ಪರಿವರ್ತನೆಯನ್ನು ಮಾಡಿ ರಾಜ್ಯಕೋಶದ ಸಂಪತ್ತನ್ನು

ದುರುಪಯೋಗ ಮಾಡಿಕೊಳ್ಳುತ್ತಾರೆ ಮತ್ತು ಅಧಿಕಾರವನ್ನು ಕಳಕೊಂಡ ಮೇಲೂ ಶಕ್ತಿ ಸಾಮರ್ಥ್ಯವನ್ನು ಸ್ಥಿರವಾಗಿಸುತ್ತಾರೆ ಹಾಗೂ ಜನರ ಶೋಷಣೆ ಮಾಡುತ್ತಾರೆ. ಇಂತಹ ಪ್ರವೃತ್ತಿಯನ್ನು ತಡೆಗಟ್ಟುವುದು ಅತಿ ಅವಶ್ಯಕವಾಗಿದೆ.

### 6. ಅನ್ಯ ದೇಶಗಳ ಸ್ವಾರ್ಥವಶ ಪ್ರವೇಶ (Vested Penetration from another country)

ವಿಕಾಸಶೀಲ ದೇಶದಲ್ಲಿ ಅನ್ಯ ದೇಶಗಳ ಸ್ವಾರ್ಥಪರ ಪ್ರವೇಶ ಆಗುತ್ತಲೇ ಇರುತ್ತದೆ. ಹೀಗೆ ಪ್ರವೇಶ ಮಾಡಿದ ದೇಶಗಳು, ಪರಂಪರಾಗತ ರೀತಿ –ಸ್ಥಿತಿ, ಪರಂಪರಾಗತವಾದ ಮೌಲ್ಯ –ಮಾನ್ಯತೆಗಳು ಮತ್ತು ಸಂಸ್ಕೃತಿಗಳನ್ನು ಕೆಡಿಸುವ ಕೆಲಸವನ್ನು ಮಾಡುತ್ತವೆ. ಹೀಗೆ ದೇಶದೊಳಗೆ ಪ್ರವೇಶಿಸದವರು.ರಾಜಕೀಯ ಪಕ್ಷಗಳ ನಾಯಕರಿಗೆ ಆಸೆ ಆಮಿಷಗಳನ್ನು ತಮ್ಮ ಪರ ವಕಾಲತ್ತು ಮಾಡುವಂತೆ ವಾತಾವರಣ ಸೃಷ್ಟಿಸುತ್ತಾರೆ ಮತ್ತು ದೇಶದ ಸಂಪತ್ತು ಹಾಗೂ ಪ್ರಾಕೃತಿಕ ಸಂಪನ್ಮೂಲ (ಪ್ರಾಕೃತಿಕ ಹರಿವು ) ಗಳನ್ನು ಬೇರೆ ದೇಶಗಳ ವ್ಯಾಪಾರಿ ಸಮುದಾಯಗಳಿಗೆ ನೀಡುವ (ಒಪ್ಪಿಸುವ) ಕೆಲಸ ಮಾಡುತ್ತಾರೆ. ಬಡ ಹಾಗೂ ದುರ್ಬಲ ದೇಶಗಳನ್ನು ಆರ್ಥಿಕ ದೃಷ್ಟಿಯಿಂದ ಸಬಲ ಹಾಗೂ ಶಕ್ತಿ ಸಂಪನ್ನ ದೇಶಗಳು ತಮ್ಮ ಪ್ರಭಾವಕ್ಕೊಳಪಡಿಸಿಕೊಂಡು ತಮಗನುಣವಾಗಿ ನಡೆದುಕೊಳ್ಳುವಂತೆ ಮಾಡುತ್ತವೆ. ಆದ್ದರಿಂದ ಈ ಅಧ್ಯಯನ ಅವಶ್ಯಕತೆ ಮನಗಾಣುವಂತಾಗಿದೆ.

### 07. ಆಂತರಿಕ ರಾಜ್ಯ ವ್ಯವಸ್ಥೆಯಲ್ಲಿ ಉಂಟಾಗುವ ಅವ್ಯವಸ್ಥೆ (Mismanagement in internal state affair)

ವರ್ತಮಾನ ಲೋಕತಾಂತ್ರಿಕ ವ್ಯವಸ್ಥೆಯ ಆಂತರಿಕ ರಾಜ್ಯ ವ್ಯವಸ್ಥೆಯಲ್ಲಿ ಅನುಶಾಸನ ಮತ್ತು ನೀತಿ ನಿಯಮಾನುಸಾರ ಆಡಳಿತ ನಡೆಸುವಲ್ಲಿ, ವಿಶೇಷವಾಗಿ ವಿಕಾಸೋನ್ಮುಖ ದೇಶಗಳಲ್ಲಿ ಈ ಸ್ಥಿತಿ ಉಂಟಾಗುತ್ತದೆ. ಲೋಕತಂತ್ರದ ಘೋಷಣೆಗಳನ್ನು ಮಾಡುತ್ತಾ ಲೋಕಕಂಟಕ ಕಾರ್ಯಗಳ ಅಭ್ಯಾಸವನ್ನು ರಾಜ್ಯವ್ಯವಸ್ಥೆಯಲ್ಲಿ ಗಣನೀಯವಾಗಿ ಪ್ರಚುರಪಡಿಸುವ ಪ್ರಕ್ರಿಯೆ ನಡೆಯುತ್ತದೆ. ರಾಜ್ಯ ಶಾಸನದ ಒಳಗೆ ಈ ವ್ಯವಸ್ಥೆಯನ್ನು ವ್ಯವಸ್ಥಿತವಾದ ನೀತಿ ಮೌಲ್ಯ ಮತ್ತು ಮಾನ್ಯತೆಗಳ ಅಧೀನದಲ್ಲಿ ನಡೆಸುವ ಶಾಸನದ ವ್ಯವಸ್ಥೆ ಆಗಬೇಕಾಗಿದೆ. ಆಂತರಿಕ ರಾಜ್ಯವ್ಯವಸ್ಥೆಯಲ್ಲಿ ಆಗುವ ಅವ್ಯವಸ್ಥೆಗೆ ಕೊನೆ ಹಾಡಬೇಕು. ಆದರೆ ವರ್ತಮಾನದ ದೂಷಿತ ರಾಜಕಾರಣದ ವ್ಯವಸ್ಥೆಯಿಂದಾಗಿ ರಾಜ್ಯದ ವ್ಯವಸ್ಥೆಯೊಳಗೆ ಅನುಶಾಸನ ಹೀನತೆ ಬೇಜವಾಬ್ದಾರಿತನ ಮತ್ತು ಸ್ವೇಚ್ಛೆ–

ಕಾರ್ಯಗಳನ್ನು ಮಾಡುವ ಪರಿಯಿಂದಾಗಿ ಆಂತರಿಕ ರಾಜ್ಯವ್ಯವಸ್ಥೆಯಲ್ಲಿ ಅವ್ಯವಸ್ಥೆ ಅಧಿಕವಾಗಿದೆ. ಇದನ್ನು ವಿಶೇಷ ರೂಪದಲ್ಲಿ ನಿಯಂತ್ರಿಸಿ, ಸಂತುಲನೆಯ ನೀತಿಗನುಗುಣವಾಗಿ ನಡೆಸುವಂತಹ ಸಂಯಂತ್ರ (ಸ್ವಯಂ ನಿಯಂತ್ರಿತ ವ್ಯವಸ್ಥೆ) ಸಿದ್ಧಗೊಳಿಸಬೇಕಾಗಿದೆ.

ಭ್ರಷ್ಟವಿರೋಧಿ ಶಾಸ್ತ್ರದ ಅಧ್ಯಯನದ ಮೇರೆ ಸೀಮಾತೀತವಾಗಿದೆ. ಆದರೂ ಬಡದೇಶಗಳಲ್ಲಿ ಉಪಯುಕ್ತ ಮಹತ್ವಪೂರ್ಣ ಬಿಂದುಗಳನ್ನು ಭ್ರಷ್ಟವಿರೋಧಿ ಶಾಸ್ತ್ರದ ಅಧ್ಯಯನಕ್ಕೆ ಮೇರೆಯನ್ನು ನಿರ್ಧರಿಸಬಹುದಾಗಿದೆ.

***

# 15. ಭ್ರಷ್ಟವಿರೋಧಿ ಶಾಸ್ತ್ರದ ಕಲ್ಪನೆ
# (Concept of Anticorruptology )

ಭ್ರಷ್ಟಾಚಾರಮುಕ್ತ ಸಮಾಜದ ಸ್ಥಾಪನೆಯೇ ಭ್ರಷ್ಟವಿರೋಧಿಶಾಸ್ತ್ರದ ಮೂಲದ್ದೇಶವಾಗಿದೆ. ಈ ಉದ್ದೇಶದ ಪ್ರಾಪ್ತಿಗಾಗಿ ಸ್ಪಷ್ಟ ಕಲ್ಪನೆ (ಸಾಮಾನ್ಯ ಜ್ಞಾನ)ಯು ಇರುವುದು ಅವಶ್ಯಕವಾಗಿದೆ. ಭ್ರಷ್ಟಾಚಾರ ಮುಕ್ತ ಸಮಾಜದ ಸ್ಥಾಪನೆಗಾಗಿ ವಿಭಿನ್ನ ಹೊಣೆಯಿರುವ ಸಮುದಾಯಗಳ ಈ ಕಲ್ಪನೆಗೆ ಅನುರೂಪವಾದ ದುಷ್ಕೃತ್ಯವನ್ನು ತಡೆಯುವುದರ ಜೊತೆಗೆ ಕೆಲಸದತ್ತ ಗಮನ ಹರಿಸಬಹುದಾಗಿದೆ. ಅದರಲ್ಲೂ ಈ ಕಾರ್ಯದ ಸಫಲತೆಗಾಗಿ ಮುಖ್ಯವಾಗಿ ಎರಡು ತತ್ವಗಳಲ್ಲಿ ಹೊಣೆಯಾಗಬೇಕಾಗುತ್ತದೆ.ಅವುಗಳೆಂದರೆ,

1. ನಾಗರಿಕ ಸಮಾಜ ಮತ್ತು

2. ಆ ಸಮಾಜದಲ್ಲಿ ಸ್ಥಾಪಿತವಿರುವ ರಾಜಕೀಯ ಪಕ್ಷ.

ಯಾವ ದೇಶದಲ್ಲಾದರೂ ಭ್ರಷ್ಟಾಚಾರ ನಿಯಂತ್ರಿತ ಸಮಾಜ ಸ್ಥಾಪಿಸುವುದಕ್ಕಾಗಿ ಅಲ್ಲಿ ಜವಾಬ್ದಾರ ನಾಗರಿಕರು ಇರುವುದು ಅವಶ್ಯಕವಾಗಿದೆ. ಏಕೆಂದರೆಅದರ ಪ್ರತಿಫಲವೂ ಅದೇ ನಾಗರಿಕರಿಗೆ ಲಭಿಸುವುದು. ಅದೇ ನಾಗರಿಕ ಸಮುದಾಯದಿಂದ ಯಾವುದಾದರೂ ರಾಜನೈತಿಕ ಸಿದ್ಧಾಂತದಿಂದ ಪ್ರೇರಿತರಾಗಿ, ಸಮೂಹ ವಿಭಜನೆಗೊಂದು ಒಂದು ರಾಜಕೀಯ ಪಕ್ಷದ ಸ್ಥಾಪನೆಯಾಗುತ್ತದೆ. ಆ ರಾಜಕೀಯ ಪಕ್ಷದಲ್ಲಿ ಅದೇ ನಾಗರಿಕರು ತೊಡಗಿಕೊಂಡು ಸಮೂಹ ಸಂಘಟನೆ ಮಾಡುತ್ತಾರೆ. ಇಷ್ಟು ಮಾತ್ರವಲ್ಲ ಶಾಸನಾಧಿಕಾರ ಹೊಂದಿ, ತಮ್ಮ ಬಲವರ್ಧನೆ ಮಾಡಿಕೊಳ್ಳುವ ಮೋಹದಲ್ಲಿ ನಾಗರಿಕರು ಮತ್ತು ರಾಜಕೀಯ

ಪಕ್ಷಗಳ ನಡುವೆ ವಿಶ್ವಾಸಯುಕ್ತ ಸಂಬಂಧ ಸ್ಥಾಪಿತವಾಗಲು ಸಾಧ್ಯವಾಗದು. ಇಂತಹ ಅಧಿಕಾರದ ಮದದಲ್ಲಿ ಸಿಲುಕಿದ ರಾಜಕೀಯ ಪಕ್ಷ ತನ್ನ ಪಕ್ಷದ ಕಾರ್ಯಕರ್ತರನ್ನು ಸಾಕುವುದಕ್ಕಾಗಿಯೂ ಕೂಡ ನಾಗರಿಕ ಸಮೂಹವು ಉಪೇಕ್ಷಿತವಾಗಬಹುದಾಗಿದೆ. ಇದಕ್ಕಾಗಿ ನಾಗರಿಕ ಸಮಾಜ ಮತ್ತು ರಾಜಕೀಯ ಪಕ್ಷಗಳನ್ನು ಬೇರೆ ಬೇರೆಯಾಗಿಯೇ ಇರಿಸಿ, ಜವಾಬ್ದಾರಿಯನ್ನು ನೀಡಬೇಕು. ಇವುಗಳನ್ನು ಎರಡು ರೀತಿಯಲ್ಲಿ (ಹೆಸರಿನಲ್ಲಿ) ವಿಭಜಿಸಬಹುದಾಗಿದೆ.

1. ಸ್ವಚ್ಛ ಹಾಗೂ ಅನುಶಾಸಿತ ಸಮಾಜದ ನಿರ್ಮಾಣ.
2. ರಾಷ್ಟ್ರವಾದಿ ರಾಜಕೀಯ ಪಕ್ಷಗಳ ಸ್ಥಾಪನೆ.

## 1. ಸ್ವಚ್ಛ ಹಾಗೂ ಅನುಶಾಸಿತ ಸಮಾಜದ ನಿರ್ಮಾಣ (Creation of a Transparent and disciplined Society)

ಯಾವುದೇ ದೇಶದಲ್ಲಿ ಉಪಸ್ಥಿತ ಸಮಾಜವೇ ದೇಶದ ಸರ್ವತೋಮುಖ ವಿಕಾಸದ ಹೊಣೆಗಾರವಾಗುತ್ತದೆ. ಸಮಾಜದವೆಂದರೆ ಸಮಾಜದಿಂದ ಸಂಬಂಧಿತ ನಾಗರಿಕ ಸಮೂಹವೇ ಆಗಿದೆ. ಯಾವ ಸಮಾಜದಲ್ಲಿ ನಾಗರಿಕ ಸಮುದಾಯ ಬದ್ಧತೆಯಿಂದಿರುತ್ತಾರೋ ಅದೇ ಸವಾಜದ ಪ್ರಗತಿಗಾಗಿ, (ಉನ್ನತಿ) ಕ್ರಿಯಾಶೀಲರಾಗಿರುವುದು ಅವರ ಕರ್ತವ್ಯವಾಗಿದೆ. ಈ ರೀತಿ ಕ್ರಿಯಾಶೀಲವಾಗಿದ್ದು ಸಮಾಜದ ಕುರಿತಾದ ಕರ್ತವ್ಯವನ್ನು ನಾಗರಿಕ ಸಮೂಹವನ್ನು ಮರೆಯಬಾರದು. ನಾಗರಿಕ ಸಮಾಜದಿಂದ ಪಾಲಿಸಬೇಕಾಗಿರುವ ಕರ್ತವ್ಯಗಳು ಈ ಕೆಳಗಿನಂತಿವೆ.

1. ನೈತಿಕ ಚೇತನೆ (ಜಾಗೃತಿ )
2. ಸತ್ಕಾರ್ಯ
3. ರಾಷ್ಟ್ರವಾದಿ ಭಾವ
4. ಸ್ವಚ್ಛ ಆಚರಣೆ.
5. ಜವಾಬ್ದಾರಿಯ ಅರಿವು.

### 1. ನೈತಿಕ ಚೇತನ (Moral Awarness)

ಯಾವುದೇ ವ್ಯಕ್ತಿಯ ವ್ಯಕ್ತಿತ್ವದ ತುಲನೆ, ಅವನಲ್ಲಿರುವ ಜಾಗೃತಿಯ ಮಟ್ಟವನ್ನು ಅವಲಂಬಿಸಿರುತ್ತದೆ. ಜಾಗೃತಿ ಎನ್ನುವುದು ಎಲ್ಲರಲ್ಲಿರುತ್ತದೆ. ಆದರೆ ಯಾವ ಮಟ್ಟದಲ್ಲಿ ಮತ್ತು ಪರಿಧಿಯಲ್ಲಿ (ಚೌಕಟ್ಟಿನಲ್ಲಿ ) ಜಾಗೃತಿ ಇದೆ, ಇದು

ಮಹತ್ವಪೂರ್ಣವಾಗುತ್ತದೆ. ಅದರಲ್ಲೂ ನೈತಿಕ ಜಾಗೃತಿಯಾದರೋ ವ್ಯಕ್ತಿಯ ವ್ಯಕ್ತಿತ್ವ ಮಾತ್ರವಲ್ಲ, ಅವನ ಜೀವನ ಮಟ್ಟವನ್ನು ಉನ್ನತಿಯತ್ತ ಕೊಂಡೊಯ್ದು ನಿಲ್ಲಿಸುತ್ತದೆ. ಆದ್ದರಿಂದ " ನೈತಿಕ ಜಾಗೃತಿ" ಗೆ ವಿಶೇಷವಾದ ಮಹತ್ವವಿದೆ. ಯಾವ ಸಮಾಜದಲ್ಲಿ ನೈತಿಕ ಜಾಗೃತಿಯುಳ್ಳ ವ್ಯಕ್ತಿಗಳು ಹೆಚ್ಚು ಇರುತ್ತಾರೋ ಆ ಸಮಾಜ, ಮಾನವ ಹಿತ ಮಾನವ ಕಲ್ಯಾಣ ಹಾಗೂ ಸರ್ವತೋಮುಖ ಮಾನವ ವಿಕಾಸದತ್ತ ಕೊಂಡೊಯ್ಯುವ ವಾಹಕನಂತೆ ಹೊಳೆಯುತ್ತದೆ. ಮಾನವ ಜಾಗೃತಿಯಲ್ಲಿ ನೈತಿಕ, ಅನೈತಿಕ ಎರಡೂ ತತ್ವಗಳು ಶಾಸನ ಮಾಡುತ್ತವೆ. ಆದರೆ ಯಾರು ಅನೈತಿಕತೆಯನ್ನು ತ್ಯಜಿಸಿ, ನೈತಿಕ ಮೌಲ್ಯ ಮಾನ್ಯತೆಗಳನ್ನು ಸ್ವೀಕರಿಸುತ್ತಾರೋ, ಅವರೇ ನಿಜವಾದ ಮಾನವೀಯ ಗುಣಗಳುಳ್ಳ ವ್ಯಕ್ತಿ ಎನಿಸಿಕೊಳ್ಳುತ್ತಾರೆ. ಇದಕ್ಕಾಗಿ ಇಂತಹ ನೈತಿಕತೆಯಿಂದ ಕೂಡಿದ, ಜಾಗೃತಿ ಪಡೆದ ನಾಗರಿಕರೇ, ರಾಷ್ಟ್ರ, ರಾಷ್ಟ್ರೀಯತೆ ಮತ್ತು ಸಮಾಜದ ಏಳಿಗೆಗಾಗಿ ಪ್ರಮುಖ ಪಾತ್ರ ನಿರ್ವಹಿಸುವಲ್ಲಿ ಸಮರ್ಥರಾಗುತ್ತಾರೆ.

## 2. ಸತ್ಕಾರ್ಯ (Good Deed )

ಸಮಾಜದ ಯಾವ ಸದಸ್ಯನು ಜನನದಿಂದ ಮರಣದವರೆಗೆ ಒಂದಲ್ಲ ಒಂದು ಕಾರ್ಯದಲ್ಲಿ ಕ್ರಿಯಾಶೀಲನಾಗಿರುತ್ತಾನೆ. ವಯೋಮಾನದ ಪ್ರಮಾಣದಲ್ಲಿ ಅವನ ಕಾರ್ಯ ನಿರ್ಧಾರವಾಗುತ್ತದೆ. ಮನುಷ್ಯ ಬಾಲ್ಯಕಾಲದ ನಂತರದ ಜೀವನದಲ್ಲಿ ಜೀವನವನ್ನು ರಕ್ಷಿಸುವ ಕಾರ್ಯದಿಂದ ಹಿಡಿದು, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಸಮಸ್ಯೆಗಳನ್ನು ತನ್ನ ಸಮಸ್ಯೆ ಎಂದು ತಿಳಿದು ಕ್ರಿಯಾಶೀಲನಾಗುತ್ತಾನೆ. ಇದೇ ಸತ್ಕಾರ್ಯವೂ ಆಗಿದೆ. ಸತ್ಕಾರ್ಯದಲ್ಲಿ ಕ್ರಿಯಾಶೀಲ ವ್ಯಕ್ತಿ ತನ್ನ ಪರಿವಾರ, ತನ್ನ ಸಮಾಜ,ತನ್ನ ರಾಷ್ಟ್ರದ ಸೇವೆ ಮಾಡುತ್ತಾನೆ. ಸತ್ಕಾರ್ಯದಲ್ಲಿ ಕ್ರಿಯಾಶೀಲ ನಾಗರಿಕ ಸಮಾಜ, ರಾಷ್ಟ್ರದ ನಿಧಿಯಾಗಿದೆ. ರಾಷ್ಟ್ರದ ಹಿರಿಮೆ –ಗರಿಮೆ ಮತ್ತು ರಾಷ್ಟ್ರದ ಗೌರವವೂ ಕೂಡ ಆಗಿದೆ.

## 3. ರಾಷ್ಟ್ರವಾದಿ ಭಾವನೆ (Nationalistic Feeling)

ಮನುಷ್ಯನಾಗಿ ಜನಿಸಿದೊಡನೆ ಅವನ ಹೊಣೆ ( ಜವಾಬ್ದಾರಿ ) ಯು ಜೊತೆಗೆ ಬರುತ್ತದೆ. ಮನುಷ್ಯ ಹುಟ್ಟಿದ ನಂತರ ಪ್ರಾರಂಭ ಕಾಲದಲ್ಲಿ ಪರಿವಾರದ ಆಶ್ರಯದಲ್ಲಿ ಬೆಳೆಯುತ್ತಾನೆ. ಬಾಲ್ಯಕಾಲದ ನಂತರ ಯುವಾವಸ್ಥೆಯಲ್ಲಿ ಪ್ರವೇಶಿಸಿದ ಮೇಲೆ ಸಮಾಜದ ಅನ್ಯ ಸದಸ್ಯರೊಂದಿಗೆ ಸಹಕಾರ್ಯಗಳನ್ನು ಮಾಡುತ್ತಾ, ಪೂರ್ಣ ಯುವಾವಸ್ಥೆಯನ್ನು ತಲುಪುತ್ತಾನೆ. ಆಗ ಅವನಲ್ಲಿ ಜ್ಞಾನ ( ತಿಳುವಳಿಕೆ) ಉಂಟಾಗುತ್ತದೆ. ಪರಿವಾರದಿಂದ ಹೊರಗಿನ ಸಮಾಜ ಮತ್ತು ವಿಶ್ವ ರಾಜನೀತಿಯ

ಭೂಗೋಳದಲ್ಲಿ ತನ್ನ ರಾಷ್ಟ್ರದ ಅಸ್ತಿತ್ವದ ಪರಿಚಯವಾಗುತ್ತದೆ. ಆಗ ಅವನು ಯಾವುದಕ್ಕೆ ಹೆಚ್ಚಿನ ಮಹತ್ವ ನೀಡಬೇಕೆಂಬುದನ್ನು ನಿರ್ಣಯಿಸುತ್ತಾನೆ. ಇದೇ ಕರ್ತವ್ಯ ಬೋಧೆಯ ನಂತರ ರಾಷ್ಟ್ರ, ರಾಷ್ಟ್ರೀಯತೆ ಮತ್ತು ರಾಷ್ಟ್ರೀಯ ವಿಕಾಸದಲ್ಲಿ ತನ್ನ ಉನ್ನತಿಯ ಅರಿವಾದ ಮೇಲೆ ರಾಷ್ಟ್ರವಾದಿ ಭಾವನೆ ಜನ್ಮ ತಳೆಯುತ್ತದೆ. ಯಾವುದೇ ದೇಶದ ಸರ್ವತೋಮುಖ ವಿಕಾಸವಾಗಬೇಕಾದರೆ, ಅಲ್ಲಿಯ ನಾಗರಿಕ ರಾಷ್ಟ್ರವಾದದ ಭಾವನೆಯನ್ನು ಆತ್ಮಸಾತ್ ( ತನ್ನದಾಗಿ ) ಮಾಡಿಕೊಳ್ಳುತ್ತಾನೆ. ಯಾವ ದೇಶದ ನಾಗರಿಕನು ರಾಷ್ಟ್ರವಾದಿಯಾಗಿರುತ್ತಾನೋ, ಅವನು ಪ್ರತಿ ಕ್ಷೇತ್ರದಲ್ಲಿ ವಿಕಾಸ ಮಾಡುತ್ತಾನೆ. ರಾಷ್ಟ್ರವಾದಿ ಭಾವನೆಯೇ ದೇಶದ ಪ್ರಗತಿಯ ಮೂಲವಾಗಿದೆ.

### 4. ಸ್ವಚ್ಛ ಆಚರಣೆ (Trasnparent Character)

ಸ್ವಚ್ಛ (ಪಾರದರ್ಶಕ ) ಆಚರಣೆಯೇ ನೈತಿಕ ಆಚರಣೆಯಾಗಿದೆ. ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣ ಹಾಗೂ ವಿಕಾಸದಲ್ಲಿ 'ಆಚರಣೆ' ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಮನುಷ್ಯನ ಆಚರಣೆ ಒಳ್ಳೆಯದು ಅಥವಾ ಕೆಟ್ಟವೂ ಆಗಬಹುದು. ಅನೈತಿಕ ಆಚರಣೆಯುಳ್ಳ ವ್ಯಕ್ತಿ, ತನ್ನ ಪರಿವಾರ ಮತ್ತು ಸಮಾಜವನ್ನು ಕಳಂಕಿತಗೊಳಿಸುತ್ತಾನೆ. ಇದರ ಪ್ರಭಾವ ರಾಷ್ಟ್ರದ ಮೇಲೂ ಆಗುತ್ತದೆ. ಆದ್ದರಿಂದ ಸಮಾಜ ಹಾಗೂ ರಾಷ್ಟ್ರೀಯ ವಿಕಾಸಕ್ಕೆ ನಾಗರಿಕರಲ್ಲಿ ಪಾರದರ್ಶಕ ( ಉತ್ತಮ) ಆಚರಣೆಯ ವಿಕಾಸ ಸಾಕಷ್ಟು ಆಗಬೇಕಾಗಿದೆ. ಆಗಲೇ ಸಮಾಜ ಹಾಗೂ ರಾಷ್ಟ್ರದ ವಿಕಾಸವಾಗಬಲ್ಲುದು.

## Establishment of the nationalist Political Parties

ಹಿಂದಿನ ರಾಜ್ಯ ವ್ಯವಸ್ಥೆಯ ತುಲನೆಯಲ್ಲಿ ಇಂದಿನ ಸ್ಥಿತಿಯಲ್ಲಿ ರಾಜ್ಯ ಸಂಚಾಲಕತ್ವವು ಭಿನ್ನವಾಗಿದೆ. ವಿಶ್ವದ ಎಲ್ಲಾ ದೇಶಗಳ ರಾಜವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳ ಬಾಹುಳ್ಯ (ಹೆಚ್ಚು) ದ ಸ್ಥಾಪನೆಯಾಗಿದೆ. ರಾಜಕೀಯ ಪಕ್ಷಗಳೆಂದರೆ, ಆಯಾ ಸಮೂಹವದಿಂದಾಗಿದೆ. ಆ ಸಮೂಹಗಳು ರಾಜನೈತಿಕ ಸಿದ್ಧಾಂತಗಳ ಅನುಸರಣೆ ಮಾಡುತ್ತಾ ರಾಜ್ಯ ವ್ಯವಸ್ಥೆಯ ಸಂಚಾಲನೆ ಮಾಡುತ್ತವೆ. ಇಂತಹ ರಾಜನೈತಿಕ ಸಮೂಹ, ರಾಜ್ಯ ಸಂಚಾಲನೆ ಮಾಡುವ, ರೀತಿ ರಿವಾಜುಗಳ ನೀತಿಗಳನ್ನು ನಿಶ್ಚಯಿಸಿ, ಸಂಘಟಿತರಾಗಿ, ನಾಗರಿಕ ಸಮುದಾಯಗಳ ಮಧ್ಯೆ ಅಧಿಕಾರವನ್ನು ಹೊಂದುವ ಮತ್ತು ಆ ನಂತರದಲ್ಲಿ ಮಾಡಲಿರುವ ಸೇವೆ ಮತ್ತು ವಿಕಾಸದ ಕಾರ್ಯಗಳ ಘೋಷಣೆಯನ್ನು ಮಾಡುತ್ತದೆ. ಈ ಘೋಷಣೆಗಳು ಅಂಶತಃ ಅಥವಾ ನೂರು ಪ್ರತಿಶತ ಪೂರ್ಣವಾಗಲೂ

ಬಹುದು.  ಆಗದೆಯೂ ಉಳಿಯಬಹುದು. ಇದರ ಆಧಾರದ ಮೇಲೆ ಅಧಿಕಾರದಲ್ಲಿ ಸ್ಥಿರವಾಗಿ ಉಳಿಯುವ ಅಥವಾ ಇಳಿಯುವ ಸ್ಥಿತಿಯುಂಟಾಗುತ್ತದೆ. ಈ ರೀತಿಯಲ್ಲಿ ವಿಭಿನ್ನ ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬರುತ್ತವೆ. ಹೋಗುತ್ತವೆ. ಪ್ರಜೆಯ ಅಥವಾ ನಾಗರಿಕರ  ಅವಶ್ಯಕತೆಗಳನ್ನು ಪೂರೈಸುವ ಅಥವಾ ಪೂರೈಸದೆ ಇರುವ ಮತ್ತು ರಾಜ್ಯದ ವಿಕಾಸ ಕಾರ್ಯಗಳು ಮಾಡುವ  ಯಾ ಮಾಡದೇ ಇರುವ ಪರಿಸ್ಥಿತಿಯಲ್ಲಿ ಅಲ್ಪಾವಧಿಯಲ್ಲಿ ಅಧಿಕಾರದಿಂದ ಹೊರಗುಳಿಯಬೇಕಾದ ಸ್ಥಿತಿ ಉಂಟಾಗಬಹುದು. ಅಲ್ಪಾವಧಿಯಲ್ಲಿ ಶಾಸನಾಧಿಕಾರದ ಪರಿವರ್ತನೆಯಿಂದ ದೇಶದ ರಾಜನೈತಿಕ ಸ್ಥಿತಿಯು ಅಸ್ಥಿರವಾಗುತ್ತದೆ.  ರಾಜನೈತಿಕ ಅಸ್ಥಿರತೆ ದ್ವಂದ್ವಕ್ಕೆ ಅವಕಾಶ ಮಾಡಿಕೊಡುತ್ತದೆ. ಅದಕ್ಕಾಗಿ, ರಾಷ್ಟ್ರ ಮತ್ತು ಪ್ರಜೆಗಳನ್ನು ಪ್ರೀತಿಸುವ ಹಾಗೂ ಸೇವಾ ಮನೋಭಾವವುಳ್ಳ ರಾಷ್ಟ್ರವಾದಿ ರಾಜಕೀಯ ಪಕ್ಷಗಳ ಸ್ಥಾಪನೆಯಾಗುವುದರಿಂದಲೇ ಪ್ರಜೆಗಳು ಹಾಗೂ ದೇಶದ ವಿಕಾಸ ಸಾಧ್ಯವಾಗುತ್ತದೆ. ಇದಕ್ಕಾಗಿ, ಕೆಳಗೆ ಕೊಟ್ಟಿರುವ ತತ್ವಗಳ ಅವಶ್ಯಕತೆ ಇದೆ.

1. ಸಿದ್ಧಾಂತ,
2. ರಾಷ್ಟ್ರೀಯ ವಿಕಾಸ,
3. ರಾಷ್ಟ್ರೀಯ ಚಿಂತನೆ,
4. ಆರ್ಥಿಕ ಪಾರದರ್ಶಕತೆ,
5. ಕಾರ್ಯ ನಿಷ್ಠೆಯ ಹೊಣೆ (ಬದ್ಧತೆ)

**1. ಸಿದ್ಧಾಂತ (Principle )**

ರಾಜಕೀಯ ಪಕ್ಷದ ಸಂಘಟನೆ ಸಿದ್ಧಾಂತದ ಆಧಾರದ ಮೇಲಾಗುತ್ತದೆ. ಯಾವುದೇ ರಾಜಕೀಯ ಪಕ್ಷ ಅಂತಾರಾಷ್ಟ್ರೀಯವಾಗಿರುವುದಿಲ್ಲ. ಅಂತಾರಾಷ್ಟ್ರೀಯ ಸ್ವರೂಪವನ್ನು ಆಧರಿಸಿದ ಚಿಂತನೆಯುಳ್ಳ ರಾಜಕೀಯ ಪಕ್ಷಗಳು ತಮ್ಮ ದೇಶದಲ್ಲಿ ಅಸಫಲವಾಗುತ್ತವೆ. ಹಾಗಾಗಿ, ಯಾವುದೇ ದೇಶದಲ್ಲಿ, ಆ ದೇಶದ ಭೂಗೋಳ, ಇತಿಹಾಸ ಪರಂಪರೆ, ಸಂಸ್ಕೃತಿ ಮತ್ತು ರೂಪಿತ ಸಮಾಜದ ಆಧಾರದ ಮೇಲೆ ದೇಶದ ಹಿತವನ್ನು ಹೊಂದಿರುವ ರಾಜನೈತಿಕ ಪಕ್ಷಗಳು ಸಿದ್ಧಾಂತವನ್ನು ಸ್ವೀಕರಿಸುತ್ತವೆ. ಇಂತಹ ರಾಜನೈತಿಕ ಪಕ್ಷಗಳು ದೀರ್ಘಾವಧಿಯವರೆಗೆ ಕ್ರಿಯಾಶೀಲವಾಗಿರುತ್ತವೆ. ವಿಶ್ವದ ಅನೇಕ ವಿಕಸಿತ ದೇಶಗಳಲ್ಲಿ ಕನಿಷ್ಟ ಸಂಖ್ಯೆಯಲ್ಲಿ ರಾಜನೈತಿಕ ಪಕ್ಷಗಳು ಕ್ರಿಯಾಶೀಲವಾಗಿದ್ದು, ದೀರ್ಘಾವಧಿಯವರೆಗೆ ರಾಜನೀತಿಯಲ್ಲಿ ತೊಡಗಿಕೊಂಡಿದ್ದು ರಾಜ್ಯವ್ಯವಸ್ಥೆಯಲ್ಲಿ ಬಂದು

ಹೋಗುತ್ತಿರುತ್ತಾರೆ. ಆದರೆ ಬಡ ಮತ್ತು ಪ್ರಗತಿಶೀಲ ರಾಷ್ಟ್ರಗಳಲ್ಲಿ (ವಿಕಾಸೋನ್ಮುಖ) ಹೆಚ್ಚಿನ ಮಟ್ಟದಲ್ಲಿ (ಗರಿಷ್ಟ) ರಾಜಕೀಯ ಪಕ್ಷಗಳು ಕ್ರಿಯಾಶೀಲ ಸಿದ್ಧಾಂತದ ಕಾರಣ ಅಸ್ಥಿರ ರಾಜನೀತಿಯ ವ್ಯವಸ್ಥೆಯನ್ನು ಸ್ವೀಕರಿಸುತ್ತವೆ. ರಾಜಕೀಯ ಪಕ್ಷಗಳು ದೇಶ ಮತ್ತು ಜನ ಹಿತಕ್ಕಾಗಿ, ದೃಢ ಹಾಗೂ ಸ್ಥಿರ ರಾಜನೈತಿಕ ಸಿದ್ಧಾಂತಗಳನ್ನು ಸ್ವೀಕರಿಸಬೇಕಾಗುತ್ತದೆ.

## 2) ರಾಷ್ಟ್ರೀಯ ವಿಕಾಸ (National Development)

ರಾಜನೈತಿಕ ಪಕ್ಷಗಳ ಮೂಲ ಅಜೆಂಡಾ (ಕಾರ್ಯಕ್ರಮ ) ರಾಷ್ಟ್ರೀಯ ವಿಕಾಸವಾಗಬೇಕು. ವಿಕಾಸೋನ್ಮುಖ ದೇಶಗಳ ರಾಜಕೀಯ ಪಕ್ಷಗಳು, ದೇಶಕ್ಕಿಂತಲೂ ಹೆಚ್ಚಾಗಿ, ತನ್ನ ಮತ್ತು ಕಾರ್ಯಕರ್ತರ ವಿಕಾಸದಲ್ಲಿ ತೊಡಗಿಕೊಂಡಿರುತ್ತಾರೆ. ಇದೇ ಕಾರಣದಿಂದಾಗಿಯೂ ಈ ರಾಜಕೀಯ ಪಕ್ಷಗಳು ಜನರಿಂದ ತಿರಸ್ಕೃತವಾಗುತ್ತಾ ಹೋಗುತ್ತವೆ. ಹೀಗಿದ್ದುದರಿಂದ ಯಾವ ರಾಜಕೀಯ ಪಕ್ಷಗಳು ದೇಶ ಹಾಗೂ ಪ್ರಜೆಗಳ ಬೃಹತ್ ವಿಕಾಸದಲ್ಲಿ ತೊಡಗಿಕೊಂಡಿರುತ್ತಾರೋ, ಅಂತಹ ಪಕ್ಷಗಳು ದೇಶ ಮತ್ತು ಜನತೆಗೆ ಪ್ರಿಯವಾಗುತ್ತವೆ. ಮತ್ತು ದೀರ್ಘಾವಧಿಯವರೆಗೆ ನೆಲೆಗೊಳ್ಳುತ್ತವೆ.

## 3. ರಾಷ್ಟ್ರೀಯ ಚಿಂತನೆ – (National Thinking)

ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರಲ್ಲಿ ರಾಷ್ಟ್ರೀಯ ಚಿಂತನೆ ಇರುವುದು ಅವಶ್ಯಕವಾಗಿದೆ. ಈ ಕಾರಣದಿಂದ ದೇಶ ಮತ್ತು ಜನತೆ ದೇಶದ ವಿಕಾಸದಲ್ಲಿ ಸಹಾಯಕರಾಗುತ್ತಾರೆ.

## 4. ಆರ್ಥಿಕ ಪಾರದರ್ಶಕತೆ (Economics Transparency)

ರಾಜನೈತಿಕ ಪಕ್ಷಗಳಲ್ಲಿ ಆರ್ಥಿಕ ಪಾರದರ್ಶಕತೆ ಬಹಳ ಅವಶ್ಯಕವಾಗಿದೆ. ಆರ್ಥಿಕ ಪಾರದರ್ಶಕತೆ ಇಲ್ಲದಿದ್ದಲ್ಲಿ, ರಾಜನೀತಿಯಲ್ಲಿರುವವರು, ಧನಾಢ್ಯರಾಗುವುದು ಮಾತ್ರವಲ್ಲ, ಅಧಿಕಾರಶಾಹಿಗಳೂ ಆಗುತ್ತಾರೆ. ವಿಕಾಸೋನ್ಮುಖ ದೇಶದ ರೋಗದ ಮೂಲವೇ. ರಾಜನೈತಿಕ ಪಕ್ಷಗಳಲ್ಲಿ ಉಂಟಾಗುವ ಆರ್ಥಿಕ ಅಸ್ಥಿರತೆಯಾಗಿದೆ. ಇದರಿಂದ ವಿಸ್ತಾ ರವಾದ ರೀತಿಯಲ್ಲಿ ಅರ್ಥ ಸಂಚಯಿಸುವ ಪ್ರವೃತ್ತಿ ಬೆಳೆಯುತ್ತಾ ಹೋಗುತ್ತದೆ. ಈ ಸಂಚಯಿಸಿದ ಮೊತ್ತ ಚುನಾವಣೆಗಳ ಸಮಯದಲ್ಲಿ ವ್ಯಯಿಸಲು ಮತ್ತು ಉಳಿದ ಸಂಪತ್ತು. (ಮೊತ್ತ ) ಮುಖಂಡರು, ತಮ್ಮ ಅವಶ್ಯಕತೆಗಳಿಗಾಗಿ, ಖರ್ಚು ಮಾಡುವ ಪ್ರತೀತಿ ಬೆಳೆಯುತ್ತಿದೆ. ಇಂತಹ


ಪ್ರವೃತ್ತಿಯಿಂದ ರಾಜನೈತಿಕ ಪಕ್ಷಗಳ ಜೊತೆಗೆ ಸಂಬಂಧಿತ ವ್ಯಕ್ತಿಗಳು ಧನವಂತರಾಗುತ್ತಾ ಹೋಗುತ್ತಾರೆ. ಮತ್ತು ಪ್ರಜೆಗಳು ಅಭಾವಗ್ರಸ್ತ ಜೀವನ ನಿರ್ವಹಿಸಲು ಬಾಧ್ಯರಾಗುತ್ತಾರೆ. ವಿಕಾಸೋನ್ಮುಖ ದೇಶಗಳ ನಾಯಕರ ಏಕಮಾತ್ರ ಚಿಂತನೆಯೆಂದರೆ, ಅದು ಚುನಾವಣೆಗಾಗಿ, ಬೇಕಾಗುವ ಅತ್ಯಧಿಕ ಧನರಾಶಿಯ ಅವಶ್ಯಕತೆ. ಇದಕ್ಕಾಗಿ, ಅವರು ಯಾವುದೇ ರೀತಿಯಲ್ಲಾದರೂ ಧನ ಸಂಗ್ರಹ ಮಾಡಲು ಇಚ್ಛಿಸುತ್ತಾರೆ. ಇಂತಹ ವ್ಯವಸ್ಥೆ ಪ್ರಜಾತಂತ್ರದಲ್ಲಿ ಘಾತಕವಾಗುತ್ತದೆ. ಹಣದ ಲೆಕ್ಕಾಚಾರದಲ್ಲಿ ಪಾರದರ್ಶಕತೆ ಇದ್ದಲ್ಲಿ ಶಾಸನ ವ್ಯವಸ್ಥೆಯೂ ಸುರಕ್ಷಿತವಾಗಿರುತ್ತದೆ. ಆದ್ದರಿಂದ ರಾಜನೈತಿಕ ಪಕ್ಷಗಳು ಆರ್ಥಿಕ ರೂಪದಲ್ಲಿ ಪಾರದರ್ಶಕವಾಗಿರಬೇಕು.

### 5. ಹೊಣೆಗಾರಿಕೆ (Responsibility)

ವರ್ತಮಾನಯುಗದ ಹೊಸ ಸಿದ್ಧಾಂತ ಜವಾಬ್ದಾರಿಯಿಂದ ಯಾವುದೇ ವ್ಯಕ್ತಿ ಸಂಸ್ಥೆ ಅಥವಾ ಸಮೂಹ,ಯಾವ ಕಾರ್ಯದ ಅಧಿಕಾರವನ್ನು ಪಡೆಯುತ್ತಾರೆ, ಅದನ್ನು ಪೂರ್ಣಗೊಳಿಸುವ ರೀತಿಯಲ್ಲಿ ಅದರ ಪರಿಣಾಮವನ್ನು ಪಡೆದು ಅವರು ಹೊಣೆಗಾರರಾಗಬೇಕಗುತ್ತದೆ. ಕಾರ್ಯ ನಿರ್ವಹಿಸುವ ರೀತಿಯಲ್ಲಿ ಯಾವುದೇ ಒಳಿತು –ಕೆಡುಕು ಪರಿಣಾಮ ಉಂಟಾಗುತ್ತದೋ, ಅದರ ಜವಾಬ್ದಾರಿಯನ್ನು ತೆಗೆದುಕೊಳ್ಳುವುದೇ ಹೊಣೆಗಾರಿಕೆಯಾಗಿದೆ. ಇದೇ ಸಿದ್ಧಾಂತದ ಆಧಾರದಲ್ಲಿ ರಾಜನೈತಿಕ ಪಕ್ಷಗಳಿಗೆ ರಾಜ್ಯವ್ಯವಸ್ಥೆಯಲ್ಲಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಮಾಡಲ್ಪಟ್ಟ ಕಾರ್ಯದ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ ಮತ್ತು ಜನರಿಗೆ ಉತ್ತರ ಕೊಡಬೇಕಾಗುತ್ತದೆ. ಆದರೆ ವಿಕಾಸೋನ್ಮುಖ ದೇಶಗಳಲ್ಲಿ ರಾಜಕೀಯ ಪಕ್ಷಗಳು ತಮ್ಮ ಹೊಣೆಗಾರಿಕೆಯನ್ನು ತಿಳಿದುಕೊಂಡಿಲ್ಲ. ಕ್ರಿಯಾಶೀಲ ರಾಜಕೀಯ ಪಕ್ಷಗಳು ದೇಶದಲ್ಲಿ ಯಾವರೀತಿ ಪ್ರಜೆಗಳ ಕುರಿತು ಉತ್ತರದಾಯಿಗಳಾಗಿರುತ್ತಾರೆ. ಅದೇ ರೀತಿ ವಿಕಾಸೋನ್ಮುಖ ದೇಶಗಳ ರಾಜನೈತಿಕ ಪಕ್ಷಗಳು ಕೂಡ, ಪ್ರಜೆಗಳು ಮತ್ತು ರಾಜ್ಯವ್ಯವಸ್ಥೆಯ ಕುರಿತು ಹೊಣೆಗಾರರಾಗಬೇಕು. ನಾಗರಿಕ ಸಮಾಜ ಮತ್ತು ರಾಜನೈತಿಕ ಪಕ್ಷಗಳದಾಯಿತ್ವ ಈ ಮೇಲಿನಂತೆ ಬೇರೆ ಬೇರೆ ರೂಪಗಳಲ್ಲಿ ಉಲ್ಲೇಖವಾದ ನಂತರ ಇವುಗಳನ್ನು ಯೋಜನಾಬದ್ಧವಾಗಿರಿಸುವುದರಿಂದ ನಾಗರಿಕ ಸಮಾಜ ಮತ್ತು ರಾಜಕೀಯ ಪಕ್ಷಗಳದಾಯಿತ್ವ (ಹೊಣೆಗಾರಿಕೆ ) ಒಂದೇ ತೆರವಾಗಿ ಕಾಣುತ್ತದೆ. ವಾಸ್ತವವಾಗಿ ಇವೆರಡರದಾಯಿತ್ವ ಒಂದೇ ಆದ ನಂತರವೇ ಭ್ರಷ್ಟ ವಿರೋಧಿ ಶಾಸ್ತ್ರದ ಸ್ವೀಕಾರ್ಯ ಸ್ಪಷ್ಟವಾಗುತ್ತದೆ. ಇದು ಕ್ರಮಶಃ ಇಂತಿದೆ.

| ನಾಗರಿಕ ಸಮಾಜ | ರಾಜನೈತಿಕ ಪಕ್ಷ |
|---|---|
| 1. ನೈತಿಕ ಜಾಗೃತಿ | ಸಿದ್ಧಾಂತ |
| 2. ಸತ್ಕಾರ್ಯ | ರಾಷ್ಟ್ರೀಯ ವಿಕಾಸ |
| 3. ರಾಷ್ಟ್ರವಾದಿ ಭಾವನೆ | ರಾಷ್ಟ್ರೀಯ ಚಿಂತನೆ |
| 4. ಸ್ವಚ್ಛ ಆಚಾರ | ಆರ್ಥಿಕ ಪಾರದರ್ಶಕತೆ |
| 5. ಜವಾಬ್ದಾರಿಯ ಹೊಣೆ | ಉತ್ತರದಾಯಿತ್ವ |

ಇದನ್ನು ಈ ಕೆಳಗಿನ ವಿವರಣೆಯ ಮೂಲಕ ತಿಳಿಯಬಹುದು.




**ನಾಗರಿಕ ಸಮಾಜ**


ಮತ್ತು ರಾಜಕೀಯ ಪಕ್ಷಗಳ ನೆಲೆ ಒಂದೇ ಆಗಿದ್ದರೂ ಕೂಡ ಭಿನ್ನ ಖಂಡಗಳಲ್ಲಿ ವಿಭಾಜಿತವಾಗಿವೆ. ಇಂತಹ ಭಿನ್ನ ಆಕಾರಗಳಲ್ಲಿರುವ ನಾಗರಿಕ ಸಮಾಜ ಮತ್ತು ರಾಜನೈತಿಕ ಪಕ್ಷಗಳ ದಾಯಿತ್ವದಲ್ಲಿ ಪರಸ್ಪರ ಹೋಲಿಕೆ ಇದೆ. ಮೇಲಿನ ಚಿತ್ರದಿಂದ ಪ್ರಮಾಣಿತವಾಗುವುದೇನೆಂದರೆ, ಸ್ವಚ್ಛ ಹಾಗೂ ಅನುಶಾಸಿತ ಸಮಾಜದ ನಿರ್ಮಾಣ ಹಾಗೂ ರಾಷ್ಟ್ರವಾದಿ ರಾಜಕೀಯ ಪಕ್ಷಗಳ ಸ್ಥಾಪನೆಯೇ ಭ್ರಷ್ಟ ವಿರೋಧಿ ಸ್ವೀಕಾರಾತ್ಮಕ ವಿಚಾರವಾಗಿದೆ.

***

# 16. ಭ್ರಷ್ಟವಿರೋಧಿ ಶಾಸ್ತ್ರದ ಅಂಗಗಳು
# (Components of Anticorruptology)

ಭ್ರಷ್ಟವಿರೋಧಿ ಶಾಸ್ತ್ರದ ಅಂಗವೆಂದರೆ, ಈ ಶಾಸ್ತ್ರವನ್ನು ಜೀವಂತ (ಪ್ರಚಲಿತ)ವಾಗಿಡುವಲ್ಲಿ, ಇದರ ಪ್ರಸ್ತಾವನೆಯನ್ನು ನಿಭಾಯಿಸುವ ಸಮುದಾಯುದೊಂದಿಗಿದೆ. ಯಾವ ರೀತಿ ಮಾನವ ಶರೀರವನ್ನು ಆರೋಗ್ಯಕರವಾಗಿಸಿಕೊಳ್ಳುವಲ್ಲಿ ಕಾರ್ಯಾನ್ವಿತರಾಗಲು ಶರೀರದ ವಿಭಿನ್ನ ಅಂಗಗಳು ಕ್ರಿಯಾಶೀಲವಾಗಿರಬೇಕಾಗುತ್ತವೆ. ಭ್ರಷ್ಟ ವಿರೋಧಿಶಾಸ್ತ್ರದ ಅಂಗಗಳು ಕೂಡ ಇದೇ ರೀತಿ ಸ್ವಯಂಚಾಲಿತವಾಗುತ್ತವೆ. ಈ ರೀತಿಯಲ್ಲಿ ಮಹತ್ವ ಪೂರ್ಣ ಅಂಗಗಳು ಸ್ವಯಂಚಾಲಿತವಾಗುವುದರಿಂದ, ಭ್ರಷ್ಟವಿರೋಧಿ ಶಾಸ್ತ್ರವು, ಪ್ರಭಾವಕಾರಿಯಾಗಿ ಸಫಲತೆಯನ್ನು ಪಡೆದುಕೊಳ್ಳಬಹುದಾಗಿದೆ. ಸಮಯ, ಪರಿಸ್ಥಿತಿ, ಮತ್ತು ವಿಶೇಷ ಸಂದರ್ಭಗಳಲ್ಲಿ ಈ ಭ್ರಷ್ಟವಿರೋಧಿ ಶಾಸ್ತ್ರದ ಅಂಗ. (ಭಾಗ) ಗಳ ರೂಪದಲ್ಲಿ ಅನ್ಯ ಸಮುದಾಯ ಅಥವಾ ತತ್ವ, ಸಬಲ ರೂಪದಲ್ಲಿ ಪ್ರವೇಶ ಮಾಡದಿರುವವರೆಗೆ ಈ ಶಾಸ್ತ್ರಕ್ಕೆ ಶಕ್ತಿ ಪ್ರದಾನ ಮಾಡುವ ತತ್ವಗಳೆಂದರೆ

ಪ್ರವಿಧಿ, ವಿಧಿ ಹಾಗೂ ನೀತಿ ಮತ್ತು ಪದ್ಧತಿ. ಈ ನಾಲ್ಕು ಅಂಗಗಳನ್ನು ಈ ರೀತಿ ಜೋಡಿಸಿ ನೋಡಬಹುದಾಗಿದೆ.




ಮೇಲಿನ ಚಿತ್ರದಲ್ಲಿ ಪ್ರವಿಧಿ (ವಿಧಾನ) ಮಸ್ತಿಷ್ಕದ (ತಲೆ) ರೂಪದಲ್ಲಿದೆ.



ಆದ್ದರಿಂದ ವಿಧಾನ. ಶರೀರದ ಮುಖ್ಯ ಅಂಗವಾಗಿ ಕಾಣಿಸಿಕೊಳ್ಳುತ್ತದೆ. ಅವೆರಡು

ಪ್ರವಿಧಿ ಮತ್ತು ಪದ್ಧತಿಗೆ ಬಲಪ್ರದಾನ ಮಾಡುವವರ ನೀತಿ ನಿಯಮಗಳು ಸಹಾಯಕ ಅಂಗಗಳ ರೂಪದಲ್ಲಿವೆ. ಈ ರೀತಿಯಲ್ಲಿ ಪ್ರವಿಧಿ, ವಿಧಿ, ನೀತಿ ಮತ್ತು ಪದ್ಧತಿಯ ವಿಷಯದಲ್ಲಿ ವಿಭಜಿಸಲಾಗಿದೆ.

1. ವಿಧಿ (ನಿಯಮ) ಅಧ್ಯಯನ ಹಾಗೂ ಅಧ್ಯಾಪನ
2. ವಿಧಿ (ನಿಯಮ) ತಡೆಗಟ್ಟುವಿಕೆ.
3. ನೀತಿ – ಕಾರ್ಯಾಚರಣೆ ಹಾಗೂ ಪುರಸ್ಕಾರ
4. ಪದ್ಧತಿ – ರಾಜನೀತಿ

**ಅರ್ಥಾತ್**

1. ಅಧ್ಯಯನ ಹಾಗೂ ಅಧ್ಯಾಪನದ ವಿಧಾನ
2. ತಡೆಗಟ್ಟುವ ವಿಧಾನ (ನಿಯಮಬದ್ಧತೆ)
3. ಕಾರ್ಯಾಚರಣೆ ಹಾಗೂ ಪುರಸ್ಕಾರದ ನೀತಿ.
4. ರಾಜನೈತಿಕ (ರಾಜಕೀಯ) ಪದ್ಧತಿ

ಈ ನಾಲ್ಕು ಅಂಗಗಳ ವಿಸ್ತಾ ರವಾದ ವ್ಯಾಖ್ಯಾನ ಈ ಕೆಳಗಿನಂತಿದೆ.

**01. ಅಧ್ಯಯನ ಹಾಗೂ ಅಧ್ಯಾಪನದ ಪ್ರವಿಧಿ (ಶಿಕ್ಷಣದ ವಿಧಾನ) (Learining and teaching Technology )**

ಭ್ರಷ್ಟವಿರೋಧಿ ಶಾಸ್ತ್ರ ಎಂದೊಡನೆ ಅಧ್ಯಯನ ಮತ್ತು ಅಧ್ಯಾಪನದ ಮಾರ್ಗ ತೆರೆದುಕೊಳ್ಳುತ್ತದೆ. ಈ ಮೊದಲು ಭ್ರಷ್ಟವಿರೋಧಿ ಶಾಸ್ತ್ರವು ಅಧ್ಯಯನ ಹಾಗೂ ಅಧ್ಯಾಪನದಲ್ಲಿ ಸ್ಪಷ್ಟವಾಗಿ ಬಾರದಿರುವ ಪರಿಸ್ಥಿತಿಯಲ್ಲಿ ಇದನ್ನು ಅಧ್ಯಯನ ವಿಷಯವನ್ನಾಗಿಸುವುದು ಸುಲಭವಾಗಿರಲಿಲ್ಲ. ಆದರೆ ಭ್ರಷ್ಟವಿರೋಧಿ ಶಾಸ್ತ್ರದ ಪ್ರಾದುರ್ಭಾವದ (ಪ್ರಾರಂಭದ) ನಂತರ ಈ ಭ್ರಷ್ಟ ವಿರೋಧಿ ವಿಷಯ ವಿಶ್ವದ ಪ್ರಾಜ್ಞರ ಸಮಾಜದಲ್ಲಿ ಅಧ್ಯಯನ – ಅಧ್ಯಾಪನಕ್ಕೆ ಸಮರ್ಥವಾಗಿದೆ. ಈಗ ಇದನ್ನೂ ಅಧ್ಯಯನದ ವಿಷಯವನ್ನಾಗಿ ಮಾಡಿ ಕ್ರಮವಾದ ರೀತಿಯಲ್ಲಿ ವಿಕಾಸಗೊಳಿಸುವ ಅವಶ್ಯಕತೆ ಇದೆ. ಈ ರೀತಿಯಲ್ಲಿ ಸ್ಥಾಯಿ (ಸ್ಥಿರ ) ವಿಧಾನದ ಮಾಧ್ಯಮದಿಂದ ಇದರ ಅಧ್ಯಯನ ಪ್ರಾರಂಭಿಸಿದ ಮೇಲೆ ಇದರ ವಿಕಾಸಬವಾಗಬಹುದಾಗಿದೆ.

**ಕ) ಪ್ರಾರಂಭದ ಸ್ಥಿತಿ – (Preliminary Stage)**

ಭ್ರಷ್ಟವಿರೋಧಿ ವಿಷಯವನ್ನು ಪ್ರಾರಂಭಿಕ ಸ್ಥಿತಿಯಲ್ಲಿ ಅಧ್ಯಯನ ಆರಂಭಿಸಿದ

ಮೇಲೆ, ವಿಶ್ವ ವಿದ್ಯಾಲಯದಲ್ಲಿ ಮಾನವೀಯತೆ, ವ್ಯವಸ್ಥಾಪನೆ ಹಾಗೂ ಕಾನೂನು (ವ್ಯವಸ್ಥೆಯನ್ನು ಕೈಗೊಳ್ಳುವ ) ಸಮೂಹಗಳಿಗೆ ಸ್ನಾತಕೋತ್ತರ ಸ್ತರದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಭ್ರಷ್ಟವಿರೋಧಿ ವಿಷಯಗಳಲ್ಲಿ ತಮ್ಮ ವಿಷಯಗಳನ್ನು ಜೋಡಿಸಿಕೊಂಡು ಸಂಶೋಧನೆ ಮಾಡುವುದಕ್ಕಾಗಿ ಪ್ರೇರೇಪಿಸುವುದು ಮತ್ತು ಇಂತಹ ಶೋಧಕಾರ್ಯ ಮಾಡುವ ವಿಭಿನ್ನ ಸಮೂಹಗಳ ವಿದ್ಯಾರ್ಥಿಗಳನ್ನು ಸ್ನಾತಕೋತ್ತರದಲ್ಲಿ ಉತ್ತೀರ್ಣತೆ ಹೊಂದಿದ ಮೇಲೆ ಭ್ರಷ್ಟವಿರೋಧಿ ವಿಷಯದಲ್ಲಿ ವಿದ್ಯಾವಾರಿಧಿ (ಪಿ.ಎಚ್.ಡಿ) ಮಾಡುವುದಕ್ಕೆ ಉತ್ಸಾಹಿತಗೊಳಿಸಬೇಕು. ಈ ರೀತಿಯಲ್ಲಿ ಭ್ರಷ್ಟವಿರೋಧಿ ವಿಷಯದಲ್ಲಿ  ಜೋಡಿಸಬಹುದಾದ, ರಾಜನೀತಿ ಶಾಸ್ತ್ರ, ಅರ್ಥಶಾಸ್ತ್ರ, ಸಮಾಜ ಶಾಸ್ತ್ರ, ಪತ್ರಿಕೋದ್ಯಮ ಹಾಗೂ ಕಾನೂನುಗಳಂತಹ ವಿಷಯಗಳಲ್ಲಿ ಮೊದಲು ಸಂಶೋಧನೆ ಕಾರ್ಯ ಮತ್ತು ನಂತರದಲ್ಲಿ ವಿದ್ಯಾವಾರಿಧಿ ಮಾಡಿಸಿದ ಮೇಲೆ ಭ್ರಷ್ಟ ವಿರೋಧಿ ವಿಜ್ಞರು ( ವಿದ್ವಾಂಸರು ) ತಯಾರಾಗುವರು. ಈ ಭ್ರಷ್ಟವಿರೋದಿ ತಜ್ಞರು ಸಿದ್ಧರಾದ ಮೇಲೇ ಶಾಲೆಯಿಂದ ಪ್ರಾರಂಭಿಸಿ, ವಿಶ್ವವಿದ್ಯಾಲಯದವರೆಗೆ ಈ ತಜ್ಞರಿಂದ ಪಠನ –ಪಾಠನ ಮತ್ತು ಪಠ್ಯಪುಸ್ತಕಗಳ ನಿರ್ಮಾಣ ಮಾಡಿಸಬಹುದಾಗಿದೆ. ಈ ರೀತಿ ಯಾರು ಯಾವ ವಿಷಯದಲ್ಲಿ ಅಧ್ಯಯನ ಮಾಡುತ್ತಾರೋ ಅದೇ ವಿಷಯದ ಜೊತೆಗೆ ಭ್ರಷ್ಟವಿರೋಧಿ ವಿಷಯದ ಅಧ್ಯಯನ ವ್ಯಾಖ್ಯೆ ಮತ್ತು ವಿಶ್ಲೇಷಣೆಯ ಮೂಲಕ ವಿಷಯಕ್ಕೆ ಪೂರ್ಣತ್ವವನ್ನು ಕೊಡುವ ಕಾರ್ಯವು ಕೂಡ ಅದರಲ್ಲಿ ಮಾಡಿಸಬಹುದಾಗಿದೆ.

## ಖ) ಸ್ಥಿರ ವ್ಯವಸ್ಥೆ – [Stable Stage]

ಭ್ರಷ್ಟವಿರೋಧಿ ವಿಷಯ ಪೂರ್ಣತ್ವ ಪಡೆದ ನಂತರ, ಸಮಾಜದಲ್ಲಿ ಇದರ ಸ್ಥಿರತೆಯ ವ್ಯವಸ್ಥೆ ಮಾಡಬೇಕಾಗಿದೆ. ಇದರಲ್ಲಿ ಪ್ರಾಥಮಿಕ ವಿದ್ಯಾಲಯದಿಂದಲೇ ಈ ಬೀಜಸೂತ್ರದ ಬೀಜಾರೋಪಣ ಮಾಡಬೇಕಾಗಿದೆ. ಏಕೆಂದರೆ, ಭ್ರಷ್ಟಾಚಾರ ಮಾನವ ವಿಕಾಸದ ಶತ್ರುವಾಗಿದೆ. ಅಧ್ಯಯನ ಆಧಾರದ ತದನುಸಾರ, ಭ್ರಷ್ಟಾಚಾರ ಮತ್ತು ಭ್ರಷ್ಟವಿರೋಧಿ ವಿಚಾರದ ಸಂಪೂರ್ಣ ಮಾಹಿತಿ (ಜ್ಞಾನ) ಯನ್ನು ನೀಡುವ ಪಠ್ಯಕ್ರಮವನ್ನು ಸಿದ್ಧಪಡಿಸಿ ಅದನ್ನು ಪಠನ ಪಾಠನಗಳಲ್ಲಿ ಒಳಗೊಂಡಿರುವಂತೆ ಮಾಡಬೇಕಿದೆ. ಇದೇ ರೀತಿ ಉನ್ನತ ಶಿಕ್ಷಣದಲ್ಲಿಯೂ ಕೂಡ, ಭ್ರಷ್ಟವಿರೋಧಿ ವಿಷಯವನ್ನು ಶೋಧ, ವ್ಯಾಖ್ಯಾನ ಮತ್ತು ವಿಶ್ಲೇಷಣೆ ಮಾಡುತ್ತಾ ಈ ಹೊಸ ಸಿದ್ಧಾಂತದ ಪರಿಚಯವನ್ನು ಮಾಡಿಸುತ್ತಾ ಈ ಭ್ರಷ್ಟವಿರೋಧಿ ವಿಷಯವನ್ನು ಸಮಾಜದಲ್ಲಿ ವಿಸ್ತರಿಸುವುದರಿಂದ ಇದಕ್ಕೆ ಸ್ಥಿರತೆ ( ಸ್ಥಾಯಿತ್ವ ) ಪಡೆದಂತಾಯಿತು.

## 2) ನಿಯಂತ್ರಣ ವಿಧಾನ [Preventive Methods]

ಭ್ರಷ್ಟಾಚಾರ ವಿರೋಧಿ ಶಾಸ್ತ್ರದ ಸಾರ್ಥಕ ಸಂಚಾಲಕತ್ವಕ್ಕಾಗಿ ಹರಡುತ್ತಿರುವ ಭ್ರಷ್ಟಾಚಾರದ ಪ್ರವೃತ್ತಿಯನ್ನು ತಡೆಗಟ್ಟುವ ನಿಯಮಗಳಿಂದ ನಿಯಂತ್ರಿಸಬೇಕಾಗಿದೆ. ಅನ್ಯಥಾ ಇದನ್ನು ನಿಯಂತ್ರಿಸುವುದು ಕಠಿಣವಾಗಬಹುದು. ಭ್ರಷ್ಟಾಚಾರ ಎಂಬುದು ಒಂದು ಸಾಂಕ್ರಾಮಿಕ ರೋಗವಿದ್ದಂತೆ. ಯಾರದರೊಬ್ಬರಲ್ಲಿ ಇದು ಕಾಣಿಸಿಕೊಂಡರೆ ಹಂತ ಹಂತವಾಗಿ ಸಾಂಕ್ರಾಮಿಕ ರೋಗದಂತೆ ಹರಡುತ್ತಾ ಹೋಗುತ್ತದೆ. ಅಂತಿಮವಾಗಿ ಸಮಗ್ರ ಸಮಾಜವನ್ನು ಭ್ರಷ್ಟಗೊಳಿಸುತ್ತದೆ. ಒಬ್ಬಿಬ್ಬರು ವ್ಯಕ್ತಿಗಳಲ್ಲಿ ಒಂದು ವೇಳೆ ಭ್ರಷ್ಟಾಚಾರ ಇದ್ದುದೇ ಆದರೆ ಅದನ್ನು ನಿಗ್ರಹಿಸಿದಾಗ ಅದು ಹೆಚ್ಚು ವ್ಯಾಪಕವಾಗಿ ಹರಡಬಾರದು. ನಿಗ್ರಹಿಸುವ ವಿಧಾನ (ನಿಯಮ) ದಿಂದಲೇ ಇದನ್ನು ತಡೆಯಬಹುದಾಗಿದೆ. ಈ ನಿಯಮಗಳನ್ನು ಮೂರು ರೀತಿಯಲ್ಲಿ ಸಂಚಾಲನೆ ಮಾಡಬಹುದಾಗಿದೆ.

### ಕ) ನಾಗರಿಕ ಜಾಗೃತಿ (Civic awareness)

ಭ್ರಷ್ಟಾಚಾರವೆಂಬುದು ತಪ್ಪು, ಇದರ ಜಾಗೃತಿ ಮೂಡಿಸುವ ಪ್ರಚಾರ ಅವಶ್ಯಕವಾಗಿದೆ. ಮತ್ತು ಭ್ರಷ್ಟ ವಿರೋಧಿ ಕಾರ್ಯದಲ್ಲಿ ನಾಗರಿಕರು ಸ್ವತಃ ತಾವೇ ಮುಂದೆ ಬರಬೇಕಾಗಿದೆ, ಆಗಲೇ ಈ ಪ್ರವೃತ್ತಿಗೆ ಅಂಕುಶ ಹಾಕಬಹುದಾಗಿದೆ. ನಾಗರಿಕ ಜಾಗೃತಿಯ ಪ್ರಸಾರದಿಂದ ಸಮಾಜದಲ್ಲಿ ಭ್ರಷ್ಟಾಚಾರ ಹರಡಬಾರದು. ಇದಕ್ಕಾಗಿ ಅವರು ಸ್ವಯಂ ( ತಾವೇ ) ಕಾರ್ಯಕಲಾಪ ಶುರು ಮಾಡುವರು. ಜಾಗರೂಕ ನಾಗರಿಕರು, ಭ್ರಷ್ಟಾಚಾರದ ವಿರುದ್ಧದ ಪ್ರಕ್ರಿಯೆಯನ್ನು ಸಿದ್ಧಗೊಳಿಸುವರು. ಇಲ್ಲವಾದಲ್ಲಿ ಜಾಗೃತ ನಾಗರಿಕರು ಕೂಡ ಭ್ರಷ್ಟಚಾರದಲ್ಲಿ ಲೀನರಾಗುತ್ತಾರೆ. ! ಆದರೆ ಇಂತಹುದರ ಅಪೇಕ್ಷೆ ಮಾಡಬಾರದು. ಈ ಸಮುದಾಯಗಳಲ್ಲಿ ಜಾಗೃತಿಯನ್ನು ಮೂಡಿಸಿ, ಇದನ್ನು ನಿಯಂತ್ರಿಸಬಹುದಾಗಿದೆ.

### ಖ) ಭ್ರಷ್ಟವಿರೋಧಿ ವಿಷಯದ ಪ್ರಚಾರ – ಪ್ರಸಾರ [Publicicity of Anti Corruptology]

ಭ್ರಷ್ಟಾಚಾರವನ್ನು ತಡೆಯಲು, ಭ್ರಷ್ಟವಿರೋಧಿ ವಿಷಯಗಳ ಪ್ರಚಾರ – ಪ್ರಸಾರ ಅವಶ್ಯಕವಾಗಿದೆ. ಇದು ಜನಜಾಗೃತಿಯನ್ನು ಮೂಡಿಸುವಲ್ಲಿ ಸಹಾಯಕವಾಗುತ್ತದೆ. ಪತ್ರಿಕೆಗಳು, ರೇಡಿಯೋ, ಟೆಲಿವಿಷನ್ ಇಂಟರ್ ನೆಟ್ ಮತ್ತು ಟೆಲೆಫೋನ್ ಇವುಗಳ ಮಾಧ್ಯಮದಿಂದ ಸಂದೇಶವನ್ನು ಪ್ರಸಾರ

ಮಾಡಬೇಕು. ಮತ್ತು ತಿಳಿಸಬೇಕಾಗಿರುವುದು – ಭ್ರಷ್ಟಾಚಾರವೆಂಬುದು ಒಂದು ಮಾನಸಿಕ ಕಾಯಿಲೆ ( ಮನೋರೋಗ ) ಅದು ಮನುಷ್ಯನಲ್ಲೇ ಹುಟ್ಟಿಕೊಂಡವು. ಅದೇ ಮನುಷ್ಯನ ಪ್ರಗತಿಯಲ್ಲಿ ತೊಡಕನ್ನುಂಟುಮಾಡುತ್ತದೆ. ಎಲ್ಲಾ ಸಂಚಾರ ಮಾಧ್ಯಮಗಳಿಂದ, ನಿರಂತರವಾಗಿ, ಇಂತಹ ಸಂದೇಶಗಳು ಪ್ರಸಾರವಾಗುವುದರಿಂದ, ಅವುಗಳ ಪ್ರಭಾವದಿಂದ ನಿಯಂತ್ರಣ ನಿಯಮಗಳು ಕಾರ್ಯಗತವಾಗಬಲ್ಲುವು.

**ಗ) ಸಾಮಾಜಿಕ ತಿರಸ್ಕಾರ – [Social disgust to the corrupt person]**

ಮನುಷ್ಯನಿಗೆ ಸಮಾಜದಲ್ಲಿ ಅವನ ಸ್ಥಾನಮಾನ ಅತ್ಯಂತ ಮಹತ್ವಪೂರ್ಣದ್ದಾಗಿದೆ. ಸಮಾಜದ ಪ್ರತಿ ವ್ಯಕ್ತಿಯ ಗೌರವ ಪೂರ್ವಕವಾಗಿರಲು ಬೇಕಾದ ಅವಕಾಶವನ್ನು ಹುಡುಕುತ್ತಾನೆ. ಯಾವ ಸಮಾಜದಲ್ಲಿ ಮಾನವನು ಜನ್ಮ ತಳೆಯುತ್ತಾನೋ ಅದೇ ಅವನ ಪರಿವಾರವಾಗುತ್ತದೆ. ಹೊರಗಿನ ಸಮಾಜ ಅದರ ಮೌಲ್ಯಾಂಕನ ಮಾಡಲಾರದು, ಅಲ್ಲದೆ ಆ ಮೌಲ್ಯಾಂಕನಕ್ಕೆ ಯಾವ ಅರ್ಥವೂ ಇರದು. ಆದ್ದರಿಂದ ಯಾವ ವ್ಯಕ್ತಿಯು ಕೂಡ ತನ್ನ ಸಮಾಜದಲ್ಲಿ ತನ್ನನ್ನು ಭ್ರಷ್ಟ ವ್ಯಕ್ತಿಯಾಗಿ ಪರಿಚಯಿಸಿಕೊಳ್ಳಲು ಇಚ್ಛಿಸುವುದಿಲ್ಲ. ಇದೇ ಸೂತ್ರದ ಆಧಾರದಲ್ಲಿ ಭ್ರಷ್ಟಾಚಾರಿಯ ಸಾಮಾಜಿಕ ಸಂಬಂಧ, ಸಂಪರ್ಕ ಮತ್ತು ವ್ಯವಹಾರಗಳನ್ನು ಒಂದು ವೇಳೆ ತಿರಸ್ಕೃತ ದೃಷ್ಟಿಯಿಂದ ನೋಡಿದ್ದೇ ಆದಲ್ಲಿ, ಭ್ರಷ್ಟಾಚಾರದ ಕಾರ್ಯ ಉತ್ಸಾಹ ಕಳೆದುಕೊಳ್ಳುವಂತಾಗಬಹುದು. ಭ್ರಷ್ಟಾಚಾರಿಯನ್ನು ಸಾಮಾಜಿಕ ತಿರಸ್ಕಾರ ಮತ್ತು ಸಾಮಾಜಿಕ ಬಹಿಷ್ಕಾರದ ವಿಧಾನದಿಂದ ಆತನಲ್ಲಿ ಸುಧಾರಣೆಯನ್ನು ತರಬಹುದಾಗಿದೆ.

3) ಕಾರ್ಯಾಚರಣೆ ಶಿಕ್ಷೆ ಮತ್ತು ಪುರಸ್ಕಾರದ ನೀತಿ. **[Punishment and Reward Policy ]**

ಕಾನೂನಿನ ಆಧಾರದಲ್ಲಿ ದಂಡನೆಯ (ಕಾರ್ಯಾಚರಣೆ) ನೀತಿ ವಿಸ್ತಾರಗೊಳಿಸಬೇಕು. ಇಂದು ವಿಶ್ವದ ಹೆಚ್ಚಿನ ಎಲ್ಲಾ ದೇಶಗಳಲ್ಲಿ ಲೋಕತಂತ್ರಾತ್ಮಕ ರಾಜನೈತಿಕ ವ್ಯವಸ್ಥೆ ಇದೆ. ಲೋಕತಂತ್ರವಿರುವ ಎಲ್ಲಾ ಕಡೆಗಳಲ್ಲಿ ಕಾನೂನಿಗನುಸಾರವಾಗಿಯೇ ಶಾಸನವಿರುತ್ತದೆ. ಭ್ರಷ್ಟಾಚಾರಿಯ ಮೇಲಿನ ಕಾರ್ಯಾಚರಣೆ ಕೂಡ ಕಾನೂನಿನ ಪ್ರತಿಕ್ರಿಯೆಯಂತೆಯೇ ನಡೆಯುತ್ತದೆ. ಕಾನೂನುಗುಣವಾಗಿ ಅಪರಾಧಗಳ ಶೋಧನೆ ಮಾಡುವುದು ಘಟನೆಗಳನ್ನು ಪರಿಶೀಲಿಸುವುದು ಮತ್ತು ಕಾರ್ಯಾಚರಣೆ ಮಾಡುವ ಈ ವ್ಯವಸ್ಥೆ ಬಹುಶಃ

ಎಲ್ಲಾ ದೇಶಗಳಲ್ಲೂ ನಡೆಯುತ್ತವೆ. ಇದರೊಂದಿಗೆಯೇ ಭ್ರಷ್ಟಾಚಾರ ವಿರುದ್ಧ ಯಾವ ವ್ಯಕ್ತಿ ಅಥವಾ ಸಮೂಹ ಕೆಲಸ ಮಾಡುತ್ತಾರೋ ಅವರಿಗೆ ಪುರಸ್ಕಾರ ನೀಡುವ ವ್ಯವಸ್ಥೆಯೂ ಆಗಬೇಕು. ಕೆಲವು ದೇಶಗಳಲ್ಲಿ ಭ್ರಷ್ಟಾಚಾರ ವಿರುದ್ಧ ಕೆಲಸ ಮಾಡುವ ಸಮುದಾಯವನ್ನು ಸಂವಿಧಾನದ ಅಂಗವೆಂಬಂತೆ ಸ್ವೀಕರಿಸಲಾಗಿದೆ.

ಭ್ರಷ್ಟಾಚಾರಿ ವ್ಯಕ್ತಿ ಅಥವಾ ಸಮುದಾಯದ ಮೇಲೆ ಈ ಕೆಳಗಂಡ ರೀತಿಯಲ್ಲಿ ಕಾರ್ಯಾಚರಣೆ ಮಾಡಬಹುದಾಗಿದೆ.

ಕ) ಲಂಚ ಪಡೆಯುವ ಸಂದರ್ಭದಲ್ಲಿ

ಖ) (ನಿರೀಕ್ಷಣೆ ) ನಿರೀಕ್ಷಿತ ಸಂಶೋಧನೆಯ ಮೂಲಕ ಕಾರ್ಯಾಚರಣೆ

ಗ) ದೂರು ಹಾಗೂ ಕಾರ್ಯಾಚರಣೆ

### ಕ) ಲಂಚ ಪಡೆಯುತ್ತಿರುವ ಸ್ಥಿತಿಯಲ್ಲಿ [Situation during Bribing]

ಲಂಚ ಕೊಡುವ ಮತ್ತು ಕೊಳ್ಳುವ ಕಾರ್ಯದಿಂದ ಭ್ರಷ್ಟಾಚಾರದ ವಿಕಾಸಕ್ಕೆ ಒತ್ತು ಸಿಕ್ಕಂತಾಗುತ್ತದೆ. ಸೇವೆ ನೀಡುವಂತಹ ಸಮುದಾಯ ಸರಕಾರಿ ಅಥವಾ ಸರಕಾರೇತರ ಕ್ಷೇತ್ರಗಳಲ್ಲಿ ಸಣ್ಣ ಪುಟ್ಟ ಲಂಚ ಕೊಡು ಕೊಳ್ಳುವ ಕಾರ್ಯ ನಡೆಯುತ್ತಲೇ ಇರುತ್ತದೆ. ವಿಕಾಸೋನ್ಮುಖ ದೇಶಗಳ ಅದೆಷ್ಟೋ ಕ್ಷೇತ್ರಗಳಲ್ಲಿ ಕಾರ್ಯ ಪ್ರಚಲಿತವಿದೆ. ಇಂತಹ ಲಂಚ ಕೊಡು ಕೊಳ್ಳುವವರನ್ನು ನಿರುತ್ಸಾಹಿತರನ್ನಾಗಿ ಮಾಡಲು ಲಂಚ ಪಡೆಯುತ್ತಿರುವಾಗಲೇ ಹಿಡಿಯಬೇಕು. ಹಾಗಂತ ಈ ಕಾರ್ಯ ಕಠಿಣವೂ ಹೌದು, ಕೆಲವೊಮ್ಮೆ ನಾಟಕೀಯ ರೀತಿಯಲ್ಲಿ ಇಂತಹವರನ್ನು ಹಿಡಿಯುವ ಪ್ರಯತ್ನ ನಡೆಯುತ್ತದೆ. ಆದರೆ ಇಂತಹ ಸಂದರ್ಭಗಳಲ್ಲಿ ಕೆಲವೊಮ್ಮೆ ಪ್ರಾಮಾಣಿಕ ವ್ಯಕ್ತಿಯು ಸಿಲುಕಿಕೊಳ್ಳುತ್ತಾನೆ. ಹಾಗಾಗಿ ಇಂತಹ ಕಾರ್ಯಾಚರಣೆಯಲ್ಲಿ ಜಾಗರೂಕವಾಗಿರಬೇಕಾಗುತ್ತದೆ.

### ಖ) ನಿರೀಕ್ಷಣೆ ಮತ್ತು ಅನುಸಂಧಾನದ ಮೂಲಕ ಕಾರ್ಯಾಚರಣೆ [Punishment after Inspection and Investigation]

ಭ್ರಷ್ಟಾಚಾರವು ಸಾಮಾಜಿಕ ಅಪರಾಧವಾಗಿದೆ. ಯಾವುದೇ ದೇಶದಲ್ಲಿ ಅಪರಾಧದ ವಿರುದ್ಧ ಸರಕಾರ ಕೇವಲ ಕಾರ್ಯಾಚರಣೆ ಮಾಡಬಹುದಾಗಿದೆ. ಇದಕ್ಕಾಗಿ ಭ್ರಷ್ಟಾಚಾರದ ವಿರುದ್ಧ ಕಾರ್ಯಾಚರಣೆ ಮಾಡುವುದಕ್ಕಾಗಿ, ಸರಕಾರ ಕಾನೂನಿನ ಮೂಲಕ ವಿಭಿನ್ನ ಸಮತಿಗಳನ್ನು ಸ್ಥಾಪಿಸುತ್ತದೆ. ಆ ಸಮಿತಿಗಳು

ವಿಭಿನ್ನ ಕ್ಷೇತ್ರಗಳಲ್ಲಿ ಆಗುವ ಭ್ರಷ್ಟಾಚಾರ ಜನ್ಯ ಕಾರ್ಯಗಳ ನಿರೀಕ್ಷಣೆ, ಅನುಸರಣೆ ಮತ್ತು ಸಂಶೋಧನೆ ಮಾಡುತ್ತದೆ. ಆ ಸಮಿತಿಯು ಭ್ರಷ್ಟಾಚಾರ ಕಾರ್ಯದ ಪರಿಣಾಮವನ್ನು ನೋಡಿ, ಅಪರಾಧಿಯನ್ನು ಎಚ್ಚರಿಸುವ, ತಿಳಿಹೇಳುವ ಮತ್ತು ಕಾರ್ಯಾಚರಣೆ ಮಾಡುವ ನಿರ್ಣಯ ಮಾಡುತ್ತದೆ. ಈ ರೀತಿಯ ಕಾನೂನು ಕಾರ್ಯಾಚರಣೆ ಮಾಡುತ್ತಾ, ನ್ಯಾಯಾಂಗ ತನಿಖೆಗಾಗಿ, ನ್ಯಾಯಾಲಯ ಅಥವಾ ವಿಶೇಷ ನ್ಯಾಯಾಲಯದ ಸಹಾಯವನ್ನು ಪಡೆಯಲಾಗುತ್ತದೆ.

### ದೂರು ದಾಖಲಾತಿ ಮತ್ತು ಕಾರ್ಯಾಚರಣೆ [Complaint and Punishment]

ಭ್ರಷ್ಟಾಚಾರಿಯನ್ನು ಕಾರ್ಯಾಚರಣೆಯ ಪರಿಧಿಯೊಳಗೆ ತರುವುದಕ್ಕಾಗಿ, ದೂರು ದಾಖಲಿಸುವ ಪ್ರಕ್ರಿಯೆ ಆಗಬೇಕು. ಸರಕಾರಿ ವಲಯದಲ್ಲಿ ಭ್ರಷ್ಟಾಚಾರಿಯ ವಿರುದ್ಧ ದೂರು ದಾಖಲಾತಿಯಾದ ನಂತರ, ಸಂಬಂಧಿತ ಸಮಿತಿ ಕಾನೂನಿನ ವಲಯದೊಳಗಿದ್ದು, ಅದರ ಮೇಲೆ ಕಾರ್ಯಾಚರಣೆ ಮಾಡುತ್ತದೆ. ಭ್ರಷ್ಟಾಚಾರ ಮಾಡುವ ಮತ್ತು ಅಧಿಕಾರ ದುರುಪಯೋಗ ಇವೆರಡೂ ಅಪರಾಧವಾಗಿದೆ. ಇವೆರಡರ ಮೇಲೆ ಕಾರ್ಯಾಚರಣೆಯ ಅಧಿಕಾರ ಕಾನೂನಿನಡಿಯಲ್ಲಿ ಸುರಕ್ಷಿತವಾಗಿರುತ್ತದೆ. ದೂರು ದಾಖಲು ಮಾಡುವ ಮತ್ತೆ ಸಂಬಂಧಿತ ಸಮಿತಿಯ ಮೂಲಕ ಕಾರ್ಯಾಚರಣೆಯ ಪ್ರಕ್ರಿಯೆ ದೀರ್ಘ ಸಮಯವನ್ನು ತೆಗೆದುಕೊಳ್ಳುತ್ತದೆ. ಆದ್ದರಿಂದ ಇದು ಅಷ್ಟು ಪ್ರಭಾವಕಾರಿಯಾಗುವುದಿಲ್ಲ. ಕಾನೂನಿ ತನಿಖೆಯ ಫಲಿತಾಂಶ ಬಹಳ ತಡವಾಗಿ ಬರುವಷ್ಟರಲ್ಲಿ ಘಟನೆಗಳು ನೆನಪಿನಿಂದ ದೂರವಾಗಿರುತ್ತವೆ. ತನಿಖೆಯ ಪ್ರಕ್ರಿಯೆ ವಿಳಂಬವಾಗುವ ಕಾರಣದಿಂದ ಭ್ರಷ್ಟಾಚಾರಿಯು ಈ ನಡುವಿನ ಅವಧಿಯಲ್ಲಿ ತನ್ನನ್ನು ರಕ್ಷಿಸಿಕೊಳ್ಳುವ ಪೂರ್ಣ ಪ್ರಯತ್ನವನ್ನು ಮಾಡುತ್ತಾನೆ. ಮತ್ತು ಅನ್ಯಾನ್ಯ ಉಪಾಯಗಳನ್ನು ಕಂಡುಕೊಳ್ಳುತ್ತಾನೆ. ಇದಕ್ಕಾಗಿ ಈ ಕಾರ್ಯಾಚರಣೆಯನ್ನು ತಕ್ಷಣ ಮತ್ತು ಶೀಘ್ರವಾಗಿ ಮಾಡುವ ವ್ಯವಸ್ಥೆ ಮಾಡಬೇಕು.

### ರಾಜನೈತಿಕ ಪದ್ಧತಿ – [Political System]

ಯಾವುದೇ ಒಂದು ದೇಶವಾದರೂ ಒಂದು ನಿಶ್ಚಿತ ರಾಜಕೀಯ ಪದ್ಧತಿಯ ಆಧಾರದಲ್ಲಿ ಸಂಚಾಲಿತವಾಗುತ್ತದೆ. ಪರಂಪರಾಗತವಾಗಿರುವ ವ್ಯವಸ್ಥಿತವಾದ ರಾಜಕೀಯ ವ್ಯವಸ್ಥೆಯಾಗಿರಲಿ ಅಥವಾ ಆಧುನಿಕ ರಾಜಕೀಯ ವ್ಯವಸ್ಥೆಯಾಗಿರಬಹುದು. ಎರಡರಲ್ಲೂ ಪ್ರಜಾತಂತ್ರಾತ್ಮಕ ರಾಜನೀತಿಯ ವ್ಯವಸ್ಥೇ

ಸಂಚಾಲಿತವಾಗುತ್ತದೆ. ರಾಜ್ಯದ ಶಾಸಕಿಯ ಸ್ವರೂಪ ಹೇಗೇ ಇರಲಿ, ಆದರೆ ವರ್ತಮಾನ ಯುಗವು ಪ್ರಜಾತಂತ್ರದ ಯುಗವಾಗಿದೆ. ರಾಜನೇ ಆಡಳಿತ ಮಾಡಲಿ ಅಥವಾ ಸೈನ್ಯ ಅಥವಾ ಒಂದು ಪಕ್ಷದ ಮೂಲಕ ಶಾಸನ ಹೊಂದಿರುವ ದೇಶವೇ ಆಗಿರಲಿ, ಅಲ್ಲಿಯೂ ಪ್ರಜಾಸತ್ತಾತ್ಮಕ ವ್ಯವಸ್ಥೆಯೇ ಇರುತ್ತದೆ. ಇದಕ್ಕಾಗಿ, ವರ್ತಮಾನ ( ಪ್ರಸ್ತುತ )ದ ರಾಜ್ಯ ವ್ಯವಸ್ಥೆಯಲ್ಲಿ ಪ್ರಜಾತಂತ್ರ ವ್ಯವಸ್ಥೆಯನ್ನು ಬಿಡಲಾಗದು. ಪ್ರಜೆ ರಾಜ ಸತ್ತೆಯಲ್ಲಿ ಪ್ರವೇಶ ಎಷ್ಟು ಪಡೆಯಬಲ್ಲುದು ಮತ್ತು ಶೇಖಡಾವಾರು ಎಷ್ಟು ಜನರು ರಾಜ್ಯವ್ಯವಸ್ಥೆಯಲ್ಲಿ ಒಳಪಟ್ಟಿದ್ದಾರೆ, ಇದು ಮೂಲ ವಿಚಾರ. ವರ್ತಮಾನ ರಾಜನೈತಿಕ ಪದ್ಧತಿಯನ್ನು ಈ ಕೆಳಗಿನಂತೆ ನೋಡಬಹುದು.

ಕ) ನಿರ್ದಲೀಯ ರಾಜನೈತಿಕ ಪದ್ಧತಿ

ಖ) ಏಕಪಕ್ಷೀಯ ರಾಜನೀತಿಕ ಪದ್ಧತಿ

ಗ) ಬಹುಪಕ್ಷೀಯ ರಾಜನೀತಿಕ ಪದ್ಧತಿ

**ಕ) ನಿರ್ದಲೀಯ (ಪಕ್ಷ ರಹಿತ) ರಾಜನೈತಿಕ [Party -Less Political System]**

ಇದರ ತಾತ್ಪರ್ಯ (ಅರ್ಥ) ರಾಜಕೀಯ ಪಕ್ಷಗಳ ಹೊರತಾದ ರಾಜನೈತಿಕ ವ್ಯವಸ್ಥೆಯನ್ನು ಸಂಚಾಲಿಸುವುದು. ಈ ನಿರ್ದಲಿಯ ವ್ಯವಸ್ಥೆಯಲ್ಲಿ ಪಕ್ಷಗಳ ಅಸ್ತಿತ್ವವಿರುವುದಿಲ್ಲ. ದೇಶದ ಎಲ್ಲಾ ನಾಗರಿಕರು ಒಂದೇ ಮತ ಮತ್ತು ಒಂದೇ ಸಿದ್ಧಾಂತದೊಂದಿಗೆ ದೇಶ ಮತ್ತು ತಮ್ಮ ವಿಕಾಸದಲ್ಲಿ ತೊಡಗುತ್ತಾರೆ. ಈ ರೀತಿಯ ರಾಜಕೀಯ ಪದ್ಧತಿ ದೀರ್ಘಾವಧಿಯವರೆಗೆ ಶಾಸನ ಹೊಂದಿರುವುದರಿಂದ ದೇಶದ ಸರ್ವಾಂಗೀಣ ಉನ್ನತಿ ಶೀರ್ಘವಾಗಿ ಆಗುತ್ತದೆ. ಬಹುತ್ವದ ರಾಜನೈತಿಕ ಸಿದ್ಧಾಂತವುಳ್ಳ ದೇಶ, ಪ್ರತ್ಯಕ್ಷ ಅಥವಾ ಪರೋಕ್ಷ ರೂಪದಲ್ಲಿ ಅತಿಕ್ರಮಣ ಮಾಡುತ್ತದೆ. ಮತ್ತು ಈ ಕಾರಣದಿಂದಾಗಿ ರಾಜಕೀಯ ವ್ಯವಸ್ಥೆ ದೀರ್ಘ ಸಮಯದವರೆಗೆ ಸ್ಥಿರವಾಗಿ ನಿಲ್ಲುವುದಿಲ್ಲ, ಪಕ್ಷರಹಿತ ವ್ಯವಸ್ಥೆಯ ಪರಿಣಾಮ ಉತ್ತಮವಾಗಿರುತ್ತದೆ.

**ಖ) ಏಕ ಪಕ್ಷೀಯ ರಾಜನೈತಿಕ ಪದ್ಧತಿ [One Party Political System]**

ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಪ್ರಜಾತಂತ್ರದ ಹೊಸ ವ್ಯಾಖ್ಯಾನದೊಂದಿಗೆ ಏಕಪಕ್ಷೀಯ ರಾಜಕೀಯ ವ್ಯವಸ್ಥೆ ಆಡಳಿತದಲ್ಲಿದೆ. ಇದು ಇಪ್ಪತ್ತನೇ ಶತಮಾನದ ಹೊಸ ಪ್ರಯೋಗವಾಗಿದೆ. ಇಂತಹ ರಾಜನೈತಿಕ ಪದ್ಧತಿಯಿಂದ ಒಂದು ಸಮೂಹಕ್ಕೆ

ಲಾಭವಾಗುತ್ತದೆ. ಇವರು ಶಾಸನವನ್ನು ಸಂಭಾಳಿಸುತ್ತಾರೆ. ವಾಮಪಂಥಿ (ಎಡ ಪಂಥಿಯರು) ಯ ವಿಚಾರವಾದಿ ಸಮೂಹ ದೇಶದ ಜನರನ್ನು ತಮ್ಮ ಸಮೂಹದಲ್ಲಿ ಸೇರಿಸಿಕೊಳ್ಳುವುದಕ್ಕಾಗಿ ಏಕಪಕ್ಷೀಯ ಪ್ರಣಾಲಿಯನ್ನು ಜಾರಿ ಮಾಡುತ್ತಾರೆ. ಆದರೆ ಇಂತಹ ರಾಜನೈತಿಕ ಪ್ರಣಾಲಿಯಿಂದ ದೀರ್ಘಾವಧಿಯವರೆಗೆ ಇಂತಹ ರಾಜ್ಯವ್ಯವಸ್ಥೆ ಆಳ್ವಿಕೆ ಮಾಡಲಾರದು. ಏಕಪಕ್ಷೀಯ ರಾಜನೈತಿಕ ಪ್ರಣಾಲಿಯಲ್ಲಿ ರಾಜನೈತಿಕ ಸಿದ್ಧಾಂತದ ಬದಲಾಗಿ ರಾಷ್ಟ್ರೀಯ ವಿಕಾಸದ ಸಿದ್ಧಾಂತವನ್ನು ಸರ್ವೋನ್ನತವೆಂದುಕೊಂಡು, ಏಕಪಕ್ಷೀಯ ರಾಜನೀತಿಯ ಪದ್ಧತಿಯ ಆಳ್ವಿಕೆ ಇರುವುದರಿಂದ ದೇಶ ಮತ್ತು ಜನತೆಯ ವಿಕಾಸ ಸಂಭವಾಗುತ್ತದೆ.

### ಗ) ಬಹುಪಕ್ಷೀಯ ರಾಜಕೀಯ ವ್ಯವಸ್ಥೆ [Multi Party Political System Pluralism]

ಬಹುಶಃ ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಬಹುಪಕ್ಷೀಯ ರಾಜಕೀಯ ವ್ಯವಸ್ಥೆ ಆಳ್ವಿಕೆಯಲ್ಲಿದೆ. ಆದರೆ ವಿಕಾಸೋನ್ಮುಖ ಮತ್ತು ವಿಕಸಿತ ದೇಶಗಳಲ್ಲಿ ಈ ಪ್ರಣಾಲಿ ಬೇರೆಯೇ ಫಲಿತಾಂಶವನ್ನು ಪಡೆದುಕೊಂಡಿದೆ. ವಿಕಾಸ ಹೊಂದಿದ ದೇಶಗಳು ಬಹುಪಕ್ಷೀಯ ವ್ಯವಸ್ಥೆಯನ್ನು ಸ್ವೀಕಾರ ಮಾಡಿವೆ. ಮತ್ತು ವಿಕಾಸವನ್ನು ಮಾಡುತ್ತಿವೆ. ಆದರೆ ವಿಕಾಸೋನ್ಮುಖ ದೇಶಗಳು ಈ ವ್ಯವಸ್ಥೆಯಿಂದ ಪೀಡಿತವಾಗಿವೆ. ಈ ಅಂತರವನ್ನು ಈ ಕೆಳಗೆ ಕೊಟ್ಟಿರುವ ನಿರೂಪಣೆಯಲ್ಲಿ ನೋಡಬಹುದು.

1. ವಿಕಾಸ ಹೊಂದಿದ ದೇಶಗಳಲ್ಲಿನ ಬಹುಪಕ್ಷೀಯ ವ್ಯವಸ್ಥೆ.
2. ವಿಕಾಸೋನ್ಮುಖ ದೇಶಗಳ ಬಹು ಪಕ್ಷೀಯ ವ್ಯವಸ್ಥೆ


### 1. ವಿಕಾಸ ಹೊಂದಿದ ದೇಶಗಳಲ್ಲಿನ ಬಹುಪಕ್ಷೀಯ ವ್ಯವಸ್ಥೆ [Pluralism in the developed Countries]

ವಿಕಾಸಶೀಲ ದೇಶಗಳಲ್ಲಿ ಈ ವ್ಯವಸ್ಥೆ ಸಫಲವಾಗಿದೆ. ಇದಕ್ಕೆ ಕಾರಣವಿಷ್ಟೇ. ಮುಖ್ಯ ರಾಜಕೀಯ ಪಕ್ಷಗಳು ಎರಡು ಅಥವಾ ಮೂರು ಇರುತ್ತವೆ. ಮತ್ತು ಅನ್ಯ ಪಕ್ಷಗಳು ಇದ್ದರೂ ಕೂಡ ಅವುಗಳು ನಗಣ್ಯವಾಗಿರುತ್ತವೆ. ಹಾಗೂ ಅಧಿಕಾರದಲ್ಲಿ ಮುಖ್ಯ ಎರಡು ಪಕ್ಷಗಳೇ ಇರುತ್ತವೆ. ಆದ್ದರಿಂದ ಅಲ್ಲಿಯ ರಾಜನೈತಿಕ ವ್ಯವಸ್ಥೆ ಸ್ಥಿರವಾಗಿರುತ್ತದೆ. ಒಂದು ರಾಜಕೀಯ ಪಕ್ಷ ನಾಲ್ಕರಿಂದ ಎಂಟು ವರ್ಷಗಳವರೆಗೆ ಕಾರ್ಯರತವಾಗಿದ್ದ ನಂತರ ಇನ್ನೊಂದು ರಾಜಕೀಯ

ಪಕ್ಷಕ್ಕೆ ಅವಕಾಶ ಸಿಗುವುದರಿಂದ ತಮ್ಮ ಕಾರ್ಯಕಾಲದಲ್ಲಿ ರಾಷ್ಟ್ರಕ್ಕಾಗಿ, ಎಷ್ಟೆಲ್ಲಾ ಒಳ್ಳೆಯ ಕಾರ್ಯ ಮಾಡಬಹುದು ಎಂಬ ಪ್ರತಿಸ್ಪರ್ಧೆ ಇರುತ್ತದೆ. ಇದರಿಂದ ಸ್ಥಿರವಾದ ರಾಜನೈತಿಕ ಶಾಸನದ ವ್ಯವಸ್ಥೆಯಾಗುತ್ತದೆ. ಇಂತಹ ವ್ಯವಸ್ಥೆ ಅನೇಕ ದೇಶಗಳಲ್ಲಿದೆ. ಮತ್ತು ಒಳ್ಳೆಯ ಅಭಿಪ್ರಾಯಗಳು ಪ್ರಮಾಣಿತವಾಗಿವೆ.

### 2) ವಿಕಾಸೋನ್ಮುಖ ದೇಶಗಳ ಬಹುಪಕ್ಷೀಯ ವ್ಯವಸ್ಥೆ [Plularism in the Developing Countries]

ವಿಕಾಸೋನ್ಮುಖ ದೇಶಗಳ ಬಹುಪಕ್ಷೀಯ ವ್ಯವಸ್ಥೆ ದೇಶದಲ್ಲಿ ಅನೇಕ ಸಮಸ್ಯೆಗಳನ್ನು ಹುಟ್ಟುಹಾಕಿದೆ. ಆಳ್ವಿಕೆಯ ಸ್ವರೂಪ, ರಾಜಕೀಯ ಪಕ್ಷ ಮತ್ತು ಆ ದೇಶದ ಜನಜಾಗೃತಿಯ ಮಟ್ಟವನ್ನು ಕೊನೆಗಾಣಿಸಲಾಗದ ಕಾರಣದಿಂದ ರಾಜನೈತಿಕ ವಾತಾವರಣ ಅಸ್ಥಿರವಾಗುತ್ತದೆ. ಇಂತಹ ಸ್ಥಿತಿಯಲ್ಲಿ ದ್ವಂದ್ವ ಉಂಟಾಗುವುದು ಮತ್ತು ಸೈನಿಕ ಶಾಸನ ಜಾರಿಯಾಗುವುದು ಮುಂತಾದ ಕ್ರಿಯಾಕಲಾಪಗಳಿಗೆ ಉತ್ತೇಜನ ದೊರೆಯುತ್ತದೆ. ವಿಕಾಸೋನ್ಮುಖ ದೇಶಗಳಲ್ಲಿ ಪ್ರಾಕೃತಿಕ ಸಂಪತ್ತು ಮತ್ತು ಸಂಸ್ಕೃತಿ ಆ ದೇಶದ ಹಿರಿಮೆಯಾಗಿದೆ. ಆದರೆ ಇದೇ ಕಾರಣಕ್ಕಾಗಿ ಈ ದೇಶಗಳ ಮೇಲೆ ವಿಕಾಸಶೀಲ ಹಾಗೂ ದೊಡ್ಡ ದೇಶಗಳ ಕೆಟ್ಟ ದೃಷ್ಟಿ ಬೀಳುತ್ತದೆ. ಇಂತಹವರ ಹಸ್ತಕ್ಷೇಪದಿಂದ ಸಣ್ಣ ದೇಶಗಳ ಸಂಪತ್ತಿನ ದುರುಪಯೋಗವಾಗುತ್ತದೆ. ಮತ್ತು ಅನೇಕ ಸಲಗಳಲ್ಲಂತು ಸಾಂಸ್ಕೃತಿಕ ಪರಿವರ್ತನೆಯನ್ನು ಮಾಡಿಸಿ, ದೊಡ್ಡ ದೇಶಗಳು ಸಣ್ಣ ದೇಶಗಳನ್ನು ಲೂಟಿ ಮಾಡುತ್ತವೆ. ಈ ಕಾರಣಗಳಿಂದಾಗಿ, ದೇಶ ವಿಕಾಸ ಹೊಂದಲಾಗದೆ ಜನತೆ ಹಸಿವಿನಿಂದ ಸಾಯುತ್ತಾರೆ. ದೊಡ್ಡ ಹಾಗೂ ಶ್ರೀಮಂತ ದೇಶಗಳು ತಮ್ಮ ರಾಜನೀಯ ಕ್ರೀಡಾಂಗಣವನ್ನು ನಿರ್ಮಿಸುವುದಕ್ಕಾಗಿ, ವಿಕಾಸೋನ್ಮುಖ ದೇಶಗಳಲ್ಲಿ ವಿಭಿನ್ನ ರಾಜಕೀಯ ಪಕ್ಷಗಳ ಉಗಮಕ್ಕೆ ಸಹಕಾರ ನೀಡುತ್ತವೆ. ಮತ್ತು ಅವುಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳುತ್ತಾರೆ. ಮತ ಭೇದವನ್ನು ಹುಟ್ಟು ಹಾಕಿ, ತಮ್ಮ ಲಾಭ ಮಾಡಿಕೊಳ್ಳುತ್ತಾರೆ. ವಿಕಾಸೋನ್ಮುಖ ದೇಶಗಳಲ್ಲಿ ನೂರಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ಪಕ್ಷಗಳಿರುತ್ತವೆ. ಮೇಲೆ, ಈವರೆಗೆ ಭ್ರಷ್ಟವಿರೋಧಿ ಶಾಸ್ತ್ರದ ಅಂಗಗಳ ಕುರಿತು ವಿಸ್ತಾ ರಪೂರ್ವಕವಾಗಿ ಚರ್ಚಿಸಿದ್ದೇವೆ. ಇದನ್ನು ಚಿತ್ರದ ಮೂಲಕ ಈ ಕೆಳಗಿನಂತೆ ವಿಶ್ಲೇಷಿಸಬಹುದಾಗಿದೆ.




ಈ ಮೇಲಿನ ಚಿತ್ರ ಮಾನವಾಕೃತಿಯಂತಿದೆ. ಮಸ್ತಿಷ್ಕದಲ್ಲಿ ಅಧ್ಯಯನ ಮತ್ತು ಅಧ್ಯಾಪನದ ಕ್ರಿಯಾ ಕಲಾಪಗಳನ್ನು ಶರೀರರೂಪಿ ರಾಜನೈತಿಕ ಪದ್ಧತಿಯನ್ನು ಗ್ರಹಿಸುತ್ತದೆ. ಮತ್ತು ದೈನಂದಿನ ಕಾರ್ಯಕಲಾಪಗಳನ್ನು ಸಂಚಾಲಿಸುತ್ತದೆ. ಶರೀರದ ಮೂಲ ಅಂಗಗಳ ರೂಪದಲ್ಲಿ  ಇರುವ ರಾಜನೈತಿಕ ಪದ್ಧತಿಯು ಸಂತುಲಿತ ರೂಪದಲ್ಲಿ ಸಂಚಾಲನೆಯಾಗುವುದರಿಂದ ಶರೀರ ಪೂರ್ಣ ರೀತಿಯಲ್ಲಿ ಕೆಲಸ ಮಾಡಬಲ್ಲುದಾಗಿದೆ. ಇದಕ್ಕಾಗಿ ಭ್ರಷ್ಟವಿರೋಧಿ ಶಾಸ್ತ್ರದ ಅಂಗಗಳ ರೂಪದಲ್ಲಿ ಅಧ್ಯಯನ –ಅಧ್ಯಾಪನ ವಿಧಾನ, ನಿಯಂತ್ರಣ ವಿಧಿ, ಕಾರ್ಯಾಚರಣೆ ಮತ್ತು ಪುರಸ್ಕಾರದ ನೀತಿ ಹಾಗೂ ರಾಜನೈತಿಕ ಪದ್ಧತಿ, ಈ ನಾಲ್ಕು ಅಂಗಗಳೂ ಸಕ್ಷಮವಾದಾಗಲೇ ಭ್ರಷ್ಟವಿರೋಧಿ ಶಾಸ್ತ್ರ ಪೂರ್ಣತ್ವವನ್ನು ಪಡೆಯಬಹುದು. ಈ ತಥ್ಯ (ವಿಚಾರ) ಸ್ಪಷ್ಟವಾಗುತ್ತದೆ.

***

# 17. ಭ್ರಷ್ಟಾಚಾರದ ಅಂತಸ್ತಿನ (ಮಟ್ಟದ) ನಿರ್ಧಾರ [Determination of Corruption Level]

ವಿಶ್ವದ ಯಾವುದೇ ದೇಶದಲ್ಲಿಯೂ ಭ್ರಷ್ಟಾಚಾರ ಯಾವ ರೀತಿಯಲ್ಲಿ ಮತ್ತು ಯಾವ ರೂಪದಲ್ಲಿ ತನ್ನ ಬೇರುಗಳು ಗಟ್ಟಿ ಮಾಡಿಕೊಂಡಿದೆ, ಇದನ್ನು ತಿಳಿದ ನಂತರವೇ ಭ್ರಷ್ಟಾಚಾರ ನಿಯಂತ್ರಣದ ಉಪಾಯುವನ್ನು ಕಂಡುಹಿಡಿಯಬೇಕಾಗುತ್ತದೆ. ಪ್ರತಿಯೊಂದು ದೇಶದ ಭ್ರಷ್ಟಾಚಾರದ ಪ್ರಕೃತಿ ಭಿನ್ನವಾಗಿರುತ್ತದೆ. ಏಕೆಂದರೆ, ಪ್ರತಿದೇಶದ ವಿಭಿನ್ನ ರಾಜನೈತಿಕ, ಸಾಮಾಜಿಕ ಸಾಂಸ್ಕೃತಿಕ ಆರ್ಥಿಕ ಮತ್ತು ಪ್ರಾಕೃತಿಕ ಸ್ಥಿತಿ ಇರುವುದರಿಂದ ಭ್ರಷ್ಟಾಚಾರದ ಪ್ರಕೃತಿಯೂ ಭಿನ್ನ ಭಿನ್ನವಾಗಿರುತ್ತದೆ. ಹೀಗಿದ್ದರೂ ಪ್ರತಿಯೊಂದು ದೇಶದಲ್ಲಿ ತನ್ನ ಸ್ಥಿತಿ ಗತಿ, ಸಮಯ ಸಂದರ್ಭಗಳಿಗನುಗುಣವಾಗಿ ಭ್ರಷ್ಟಾಚಾರದ ಮಟ್ಟ (ಅಂತಸ್ತು ) ನಿರ್ಧಾರವಾಗುತ್ತದೆ.

ಹೀಗಾಗಿ, ವಿಕಸಿತ ದೇಶಗಳು ಮತ್ತು ವಿಕಾಸೋನ್ಮುಖ ದೇಶಗಳಲ್ಲಿ ಇದರ ಪ್ರಕೃತಿ ಭಿನ್ನ ಭಿನ್ನವಾಗಿರುತ್ತದೆ. (ವಿಕಸಿತ ದೇಶಗಳಲ್ಲಿ ಇದರ ಪ್ರಕೃತಿ ಭಿನ್ನ ಭಿನ್ನವಾಗಿರುತ್ತದೆ.) ವಿಕಸಿತ ದೇಶಗಳಿಗಿಂತ ವಿಕಾಸೋನ್ಮುಖ ದೇಶಗಳು ಭ್ರಷ್ಟಾಚಾರದ ಕಾರಣದಿಂದಾಗಿ ಅತ್ಯಧಿಕ ಸಮಸ್ಯೆಗಳಿಗೆ ತುತ್ತಾಗುತ್ತವೆ. ಭ್ರಷ್ಟಾಚಾರವು ಎಷ್ಟರ ಮಟ್ಟದಲ್ಲಿದೆ ಎಂಬ ನಿರ್ಧಾರ ಕೈಗೊಳ್ಳುವುದು ಕಠಿಣವಾಗಿದೆ. ಕಾರಣ ಭ್ರಷ್ಟಾಚಾರದ ಉಗಮಸ್ಥಾನವೇ ವ್ಯಕ್ತಿಯ ಮನಸ್ಸು, ಮಾನವನ ಮನಸ್ಸು ಅತ್ಯಂತ ಸಂವೇದನಶೀಲವಾಗಿರುತ್ತದೆ. ಹಾಗೂ ಮನೋಭಾವಗಳ ಏರಿಳಿತಗಳಿಂದ ಆತನ ಪ್ರವೃತ್ತಿ ನಿಶ್ಚಿತವಾಗುತ್ತದೆ. ಈ ಮನೋವೇಗದ ಅಲೆಗಳು ಕಣ್ಣಿಗೆ ಕಾಣಲಾರವು. ಆದರೆ ಅನುಭವಕ್ಕೆ ಬರಬಲ್ಲವು. ಅನುಭವಕ್ಕೆ ಬರುವ ಈ ವಿಧಾನದ ವಿಕಾಸವನ್ನು

ಭ್ರಷ್ಟವಿರೋಧಿ ವಿಜ್ಞಾನ ಮಾಡಬಲ್ಲುದು. ಈ ವಿಜ್ಞಾನದ ಸಿದ್ಧಾಂತವನ್ನು ಗಟ್ಟಿ ಹಾಗೂ ಸುದೃಢಗೊಳಿಸುವುದಕ್ಕಾಗಿ, ಭ್ರಷ್ಟಾಚಾರದ ಸ್ತರ (ಮಟ್ಟ)ವನ್ನು ನಿರ್ಧರಿಸುವ ಅವಶ್ಯಕತೆ ಇದೆ. ವಿಕಸಿತ ದೇಶಗಳು ಮತ್ತು ವಿಕಾಸೋನ್ಮುಖ ದೇಶಗಳ ಭ್ರಷ್ಟಾಚಾರದ ಸ್ತರವನ್ನು ನಿರ್ಧರಿಸುವಲ್ಲಿ ವ್ಯತ್ಯಾಸವಿದ್ದರೂ ಈ ಅಧ್ಯಯನದಲ್ಲಿ ವಿಕಾಸೋನ್ಮುಖ ದೇಶಗಳ ಭ್ರಷ್ಟಾಚಾರದ ಮಟ್ಟವನ್ನು ನಿರ್ಧರಿಸುವ ಪ್ರಯತ್ನವನ್ನು ಮಾಡಲಾಗಿದೆ.

1. ಸಾಧಾರಣ ಲಂಚದ ಕೊಡು – ಕೊಳ್ಳುವಿಕೆ
2. (ಪ್ರಶಾಸನಿಕ) ಆಡಳಿತ ಮೂಲಕ ಆಗುವ ಭ್ರಷ್ಟಾಚಾರ
3. ಸರಕಾರಿ ನಿವೇದನೆ ಸಲ್ಲಿಕೆ (ಟೆಂಡರ್ ) ಮತ್ತು ಒಪ್ಪಂದದಲ್ಲಿ ಆಗುವ ಭ್ರಷ್ಟಾಚಾರ
4. ನ್ಯಾಯಾಂಗದ ಕ್ಷೇತ್ರದಲ್ಲಿ ಆಗುವ ಭ್ರಷ್ಟಾಚಾರ
5. ಸಂಸ್ಥೆಗಳ ರೂಪದಲ್ಲಿ ಆಗುವ ಭ್ರಷ್ಟಾಚಾರ
6. ಸ್ವದೇಶಿ ಹಾಗೂ ವಿದೇಶಿ, ಸರಕಾರೇತರ ಸಂಸ್ಥೆಗಳಿಂದಾಗುವ ಭ್ರಷ್ಟಾಚಾರ
7. ಸಾಮಾಜಿಕ ಕ್ಷೇತ್ರಗಳಲ್ಲಾಗುವ ಭ್ರಷ್ಟಾಚಾರ
8. ಆರ್ಥಿಕ ಕ್ಷೇತ್ರಗಳಲ್ಲಿ ಆಗುವ ಭ್ರಷ್ಟಾಚಾರ
9. ರಾಜಕೀಯ ಕ್ಷೇತ್ರಗಳಲ್ಲಿ ಆಗುವ ಭ್ರಷ್ಟಾಚಾರ.

### 1. ಸಾಮಾನ್ಯವಾಗಿ ಲಂಚ ಕೊಡುಕೊಳ್ಳುವಿಕೆ

ಸಾಮಾನ್ಯವಾಗಿ ಲಂಚ ಕೊಡುಕೊಳ್ಳುವಿಕೆ ಜಗತ್ತಿನಾದ್ಯಂತ ನಡೆಯುವ ವ್ಯವಹಾರವಾಗಿದೆ. ಇದು ಭ್ರಷ್ಟಾಚಾರದಲ್ಲಿ ಒಳಪಡುತ್ತದೆ. ಏಕೆಂದರೆ, ಲಂಚದ ಅರ್ಥ, ಅಪೇಕ್ಷಿತವೋ, ಅನಪೇಕ್ಷಿತವೋ.., ಕೊಡು –ಕೊಳ್ಳುವಿಕೆಯ ವ್ಯವಹಾರದೊಂದಿಗಿದೆ. ಇದು ವಿಶ್ವವ್ಯಾಪ್ತವಾಗಿ, ಪ್ರಚಲಿತದಲ್ಲಿದೆ. ಕೆಲವರು, ನಗದು ರೂಪದಲ್ಲಿ, ಈ ಕೊಡು ಕೊಳ್ಳುವಿಕೆಯನ್ನು ಮಾಡಿದರೆ ಇನ್ನು ಕೆಲವರು, ವಸ್ತುಗಳ ರೂಪದಲ್ಲಿ ಮಾಡುತ್ತಾರೆ. ಯಾವುದೇ ಕೆಲಸವನ್ನು ಮಾಡುವುದಕ್ಕಾಗಿ, ಅದಕ್ಕೆ ಪ್ರತಿಫಲವಾಗಿ ಕೊಡು – ಕೊಳ್ಳುವಿಕೆ ನಡೆಯುತ್ತದೋ, ಅದನ್ನು ಭ್ರಷ್ಟಾಚಾರ ಜನ್ಯ ಕಾರ್ಯದ ಪ್ರಾರಂಭಿಕ ರೂಪವೆಂದೇ ಪರಿಗಣಿಸಲಾಗುತ್ತದೆ. ಇದನ್ನು ಮೂರು ಭಾಗಗಳಲ್ಲಿ ವರ್ಗೀಕರಿಸಬಹುದಾಗಿದೆ.

ಕ) ನಿಯತ್ತಿನನ್ವಯ ಮಾಡಲ್ಪಡುವ ಕೊಡುಕೊಳ್ಳುವಿಕೆ

ಖ) ಪ್ರಚಲಿತ ವ್ಯವಸ್ಥೆಯಲ್ಲಿ ಮಾಡಲ್ಪಡುವ ಕೊಡು ಕೊಳ್ಳುವಿಕೆ

ಗ) ಅವಶ್ಯಕತೆಗನುಸಾರವಾಗಿ ಮಾಡಲ್ಪಡುವ ಕೊಡು ಕೊಳ್ಳುವಿಕೆ

**ಕ) ನಿಯತ್ತಿನನ್ವಯ ಮಾಡಲ್ಪಡುವ ಕೊಡು ಕೊಳ್ಳುವಿಕೆ [Transaction or Bribe done Intentionally ]**

ಸರಕಾರಿ ಅಥವಾ ಸರಕಾರೇತರ ಸೇವೆಯ ಮೂಲಕ ಕಾರ್ಯದಲ್ಲಿ ತೊಡಗಿರುವ ವ್ಯಕ್ತಿ ಸೇವೆಗೆ ಪ್ರತಿಯಾಗಿ ಸೇವಾಗ್ರಾಹಿ (ಸೇವೆ ಪಡೆಯುವವರ) ಯಿಂದ, ಮೊತ್ತದ ರೂಪದಲ್ಲಿ ಅಥವಾ ವಸ್ತುವಿನ ರೂಪದಲ್ಲಿ ಪಡೆಯುತ್ತಾನೆ. ಈ ಕಾರ್ಯವನ್ನು ಲಂಚವೆಂದು ಹೇಳಲಾಗುತ್ತದೆ. ಈ ಸ್ಥಿತಿ  ಹೇಗಿರುತ್ತದೆಂದರೆ, ಉಪಯುಕ್ತ ಅಥವಾ ಅನುಪಯುಕ್ತ ಕೆಲಸಗಳನ್ನು ಮಾಡಿಸುವುದಕ್ಕಾಗಿ, ಜನ ಲಂಚವನ್ನು ಪಡೆಯುತ್ತಾರೆ. ಮತ್ತು ಕೆಲಸಗಳನ್ನು ಮಾಡಿಸುತ್ತಾರೆ. ಈ ರೀತಿಯಲ್ಲಿ ಲಂಚ ಕೊಡುವವರು ತೆಗೆದುಕೊಳ್ಳುವವರು, ಇಬ್ಬರೂ ಕಾನೂನಿನ ದೃಷ್ಟಿಯಲ್ಲಿ ಅಪರಾಧಿಗಳಾಗುತ್ತಾರೆ. ಚಿಕ್ಕ ಪ್ರಮಾಣದಲ್ಲಿ ಲಂಚ ಕೊಡು ಕೊಳ್ಳುವುದು ಕೂಡ ಭ್ರಷ್ಟಾಚಾರದ ಪ್ರಾರಂಭಿಕ ಸ್ಥಿತಿಯಾಗಿದೆ. ಈ ವ್ಯವಸ್ಥೆ ವಿಶ್ವದ ಎಲ್ಲಾ ದೇಶಗಳಲ್ಲಿ ವ್ಯಾಪ್ತವಾಗಿದೆ.

**ಖ) ಪ್ರಚಲಿತ ವ್ಯವಹಾರದಲ್ಲಿ ಮಾಡಲ್ಪಡುವ ಕೊಡು ಕೊಳ್ಳುವಿಕೆ [Customised Transaction or Bribe]**

ಸೇವಾಗ್ರಾಹಿ ವ್ಯಕ್ತಿ ಅಥವಾ ಸಮುದಾಯದ ಮೂಲಕ ನೀಡುವ ಸೇವೆಗೆ ಬದಲಾಗಿ, ತಗಲುವ ತೆರಿಗೆ ಅಥವಾ ಶುಲ್ಕವನ್ನು ಇದಕ್ಕೆ ಬೇಕಾದ ಪ್ರತಿಶತಕ್ಕಿಂತ ಕೊಂಚ ಹೆಚ್ಚಿನ ಪ್ರಮಾಣದ ಮೊತ್ತವನ್ನು ಕೊಡುವ ವ್ಯವಸ್ಥೆಯನ್ನು ವ್ಯಾವಹಾರಿಕ ರೂಪದಲ್ಲಿ ಸ್ವೀಕಾರ ಮಾಡಲಾಗಿದೆ. ಇಂತಹ ಕಾರ್ಯ ನದಿ –ಸಮುದ್ರಗಳ ದಡಗಳಲ್ಲಿ ಅಥವಾ ಗಡಿ ಕಾಯುವ ಚೆಕ್ ಪೋಸ್ಟ್ ಗಳಲ್ಲಿ ಹಾಗೂ ದೇಶದ ಗಡಿಭಾಗದಲ್ಲಿರುವ ಶುಲ್ಕ ವಸೂಲಾತಿ ಕಾರ್ಯಾಲಯಗಳಲ್ಲಿ ನಡೆಯುತ್ತದೆ. ಅತಿರಿಕ್ತ ಶುಲ್ಕವನ್ನು ಪಡೆಯುವ ಕಾರ್ಯದಲ್ಲಿ ಮೊತ್ತ (ಹಣ) ಮತ್ತು ವಸ್ತು ಎರಡೂ ಇರುತ್ತವೆ. ಈ ಪ್ರಕ್ರಿಯೆ ಸಮಾಜದಿಂದ ಸ್ವೀಕೃತವಾಗಿದೆ. ಆದರೆ ಇದು ಕೂಡ ಭ್ರಷ್ಟಾಚಾರವೇ ಆಗಿದೆ.

## ಗ) ಆವ್ಯಕತೆಗನುಸಾರವಾಗಿ ಮಾಡಲ್ಪಡುವ ಕೊಡುಕೊಳ್ಳುವಿಕೆ [Transaction or Bribe done by necessity]

ಸೇವಾಕಾರ್ಯದಲ್ಲಿ ನಿರತ ವ್ಯಕ್ತಿಗೆ ಒಂದು ವೇಳೆ ಆತನ ಅವಶ್ಯಕತೆಗನುಗುಣವಾದ ವೇತನ ಭತ್ಯೆ ಸಿಗದಿದ್ದಾಗ ಆತ ತನ್ನ ಅವಶ್ಯಕತೆಗಳ ಪೂರ್ತಿಗಾಗಿ ಸೇವಾಗ್ರಾಹಿಯಿಂದ ಒಂದಿಷ್ಟು ನಿಶ್ಚಿತ ಮೊತ್ತದ ಹಣವನ್ನು ಪ್ರಾಮಾಣಿಕವಾಗಿಯೇ ಪಡೆದುಕೊಳ್ಳುತ್ತಾನೆ. ವಿಕಾಸೋನ್ಮುಖ ದೇಶಗಳ ಸರಕಾರಿ ನೌಕರರು, ಅಧ್ಯಾಪಕರು, ವೈದ್ಯರು ಸಹ ಅತಿರಿಕ್ತ ಸೇವೆಯನ್ನು ನೀಡಿ, ಆ ಸೇವೆಗೆ ಪ್ರತಿಯಾಗಿ ಹಣ ಅಥವಾ ವಸ್ತುಗಳ ರೂಪದಲ್ಲಿ ಪಡೆದುಕೊಳ್ಳುತ್ತಾರೆ. ಇದು ಕೂಡ ಭ್ರಷ್ಟಾಚಾರ ಬೆಳೆಸುವ ಸ್ರೋತ (ಹರಿವು ) ವಾಗಿದೆ.

## 2. ಆಡಳಿತಾಧಿಕಾರಿಗಳ ಕ್ಷೇತ್ರದ ಮೂಲಕ ಆಗುವ ಭ್ರಷ್ಟಾಚಾರ [Corruption in the Administrative Sector]

ಆಡಳಿತ ಕ್ಷೇತ್ರವನ್ನು ನಾಗರಿಕ ಕ್ಷೇತ್ರವೆಂದು ಕೂಡ ಹೇಳುತ್ತಾರೆ. ವರ್ತಮಾನ ಸಮಯದಲ್ಲಿ ಆಡಳಿತದಲ್ಲಿ ಕೆಲಸಮಾಡುವ ಸಮೂಹವನ್ನು ನಾಗರಿಕರ ನೌಕರರೆಂದು ಕೂಡ ಹೇಳುತ್ತಾರೆ. ಆದರೆ, ವ್ಯವಸ್ಥೆ ತದ್ವಿರುದ್ಧವಾಗಿದೆ. ಆಡಳಿತ ನಡೆಸುವ ಈ (ನೌಕರ) ಸಮೂಹ ತಾವೇ ಮಾಲೀಕರಂತೆ ಕಂಡು ಬರುತ್ತಾರೆ. ಸರಕಾರಿ ಕೆಲಸ ಕಾರ್ಯಗಳ ಹೊಣೆ ಇರುವ ವ್ಯಕ್ತಿ, ಸಮೂಹ ಸಮುದಾಯಕ್ಕೆ ನಾಗರಿಕರ ಸೇವೆ ಮಾಡಲೇಬೇಕಾಗುತ್ತದೆ. ವಿಕಾಸೋನ್ಮುಖ ದೇಶಗಳಲ್ಲಿ ಸೇವೆ ಮಾಡುವ ಇವರು ವ್ಯಕ್ತಿ ಸಂಚಯವನ್ನು ಕೂಡ ಮಾಡುತ್ತಾರೆ. ಇವರು ತೆಗೆದುಕೊಳ್ಳುವ ನಿರ್ಣಯಗಳಿಂದ ನಾಗರಿಕರಿಗೆ ಲಾಭ ಅಥವಾ ಹಾನಿಯಾಗುತ್ತದೆ. ಇದಕ್ಕಾಗಿ, ನಾಗರಿಕರು ತಮಗೆ ಲಾಭ ಪಡೆದುಕೊಳ್ಳುವುದಕ್ಕಾಗಿ, ಸಿದ್ಧರಿರುತ್ತಾರೆ. ಈ ಸಂದರ್ಭಗಳಲ್ಲಿ ಸೇವೆ ನೀಡಬೇಕಾದವರು ಲಂಚ ಪಡೆದು ನಿರ್ಣಯ ಮಾಡುವ ಪ್ರವೃತ್ತಿ ವಿಕಾಸವಾಗುತ್ತದೆ. ಆಡಳಿತಾಳಿತಾಧಿಕಾರದ ಕ್ಷೇತ್ರವೇ ಭ್ರಷ್ಟಾಚಾರವನ್ನು ಹರಡುವ ಕ್ಷೇತ್ರಗಳಾಗಿವೆ. ಇದನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಬಹುದಾಗಿದೆ.

ಕ) ಸೇವಾಗ್ರಾಹಿ ಮತ್ತು ಸೇವಾದಾಯಕ (ಸೇವೆ ನೀಡುವವರು) ರ ಸಂಬಂಧ.

ಖ) ನಿರ್ಣಯದ ಕಾರ್ಯಾನ್ವಯನ

ಗ) ನಿರ್ವಹಣೆಯ ಉಪಾಯ, ವಂಚನೆ (ಅಪಹರಿಸುವುದು) ಮತ್ತು ವಸೂಲಿ

ಘ) ಅರೆನ್ಯಾಯಾಧಿಕಾರ ಪ್ರಯೋಗ

### ಕ) ಸೇವಾಗ್ರಾಹಿ ಮತ್ತು ಸೇವಾದಾಯಿಯ ಸಂಬಂಧ [The relationship between client and Service Provider]

ಶಾಸಕ ಮತ್ತು ಶಾಸಿತರ ಸಂಬಂದವನ್ನು ವರ್ತಮಾನದಲ್ಲಿ, ಸೇವಾಗ್ರಾಹಿ ಮತ್ತು ಸೇವಾದಾಯಿ ಎನ್ನುವ ಹೊರತಾಗಿಯೂ ವಿಕಾಸೋನ್ಮುಖ ದೇಶಗಳಲ್ಲಿ ಆಡಳಿತಾತ್ಮಕ ಅಧಿಕಾರ ಪಡೆದ ಸಮುದಾಯವು ಶಾಸಕನ ರೂಪದಲ್ಲಿ ಕ್ರಿಯಾಶೀಲವಾಗುತ್ತಾರೆ. ಸೂಕ್ತ, ನಿಯಮ , ಕಾನೂನು ಮತ್ತು ಪರಂಪರಾಗತ ರೀತಿ, ಸ್ಥಿತಿಯ ಮರೆಯಲ್ಲಿ ಆಡಳಿತಾತ್ಮಕ ಸಮುದಾಯ, ಸಂಚಾಲನೆಯೊಂದಿಗೆ ಶಾಸನ ಮಾಡುತ್ತಾರೆ. ಬಲಿಷ್ಟರು ಮತ್ತು ಬಲಹೀನರ ನಡುವಿನ ಒಪ್ಪಂದವೇ ಭ್ರಷ್ಟಾಚಾರವಾಗಿದೆ.

### ಖ) ನಿರ್ಣಯಗಳ ನಿರ್ವಹಣೆ [Execution of Decision]

ಸರಕಾರದ ಮೂಲಕ ಜನಹಿತಕ್ಕಾಗಿ, ತರಲ್ಪಡುವ ನಿರ್ಣಯಗಳ ನಿರ್ವಹಣೆ ಆಡಳಿತಾಧಿಕಾರದ ಕ್ಷೇತ್ರದಿಂದಲೇ ಆಗಬೇಕಾಗುತ್ತದೆ. ನಿರ್ಣಯಗಳನ್ನು ಕೈಗೊಳ್ಳುವ ಮತ್ತು ಅವುಗಳ ನಿರ್ವಹಿಸುವ ಅಧಿಕಾರ ಯಾವ ಶಾಸನಕ್ಕಿರುತ್ತದೋ ಅಲ್ಲಿ ಸರ್ವಾಧಿಕಾರ ಉಂಟಾಗುತ್ತದೆ. ಈ ಸರ್ವಾಧಿಕಾರದಿಂದಾಗಿಯೇ ಭ್ರಷ್ಟಾಚಾರ ಹೆಚ್ಚುತ್ತದೆ.

### ಗ) ನಿರ್ವಹಣೆಯ ವ್ಯವಸ್ಥೆ, ವಂಚಿಸುವಿಕೆ ಮತ್ತು ವಸೂಲಿ [Budjet disbursement, embezzlement and reimbursement ]

ಆರ್ಥಿಕ ಕ್ಷೇತ್ರದ ಹೊಣೆಗಾರಿಕೆಯು ಆಡಳಿತಾಧಿಕಾರದ್ದೇ ಆಗಿರುತ್ತದೆ. ವಿಕಾಸದ (ಅಭಿವೃದ್ಧಿ ) ಸಂಪತ್ತಿನ ನಿರ್ವಹಣೆ ಮತ್ತು ನಿವೇದನೆ (ಬೇಡಿಕೆ) ಖರ್ಚಿನ ಲೆಕ್ಕಾಚಾರವನ್ನು ಕೂಡ ಆಡಳಿತಾಧಿಕಾರವೇ ಇಟ್ಟುಕೊಳ್ಳುತ್ತದೆ. ಇಂತಹ ಆರ್ಥಿಕ ಕಾರ್ಯಭಾರವನ್ನು ಪಡೆವ ಅಧಿಕಾರ ಹೊಂದಿರುವ ವ್ಯಕ್ತಿ, ಆಡಳಿತದಲ್ಲಿ ನಿರತ ವ್ಯಕ್ತಿ, ಅಥವಾ ಸಮುದಾಯವು ಆರ್ಥಿಕ ಮೋಹದಲ್ಲಿ ( ಪ್ರಲೋಭನೆ) ಸಿಲುಕುವುದು ಸ್ವಾಭಾವಿಕವೇ ಆಗಿದೆ. ಇದೇ ರೀತಿ ತೆರಿಗೆ ವಸೂಲಿಯಿಂದ ಹಿಡಿದು ವಿಭಿನ್ನ ಸರಕಾರಿ ವಸೂಲಾತಿಗಳ ಸಹಿತ, ಆಡಳಿತದ ಅಧಿಕಾರ ಕ್ಷೇತ್ರದೊಳಗಿರುವುದರಿಂದ, ವಸೂಲಾತಿ ಮಾಡುವ ಅಥವಾ ಸಡಿಲಿಕೆಯನ್ನು ಕೊಡುವ ಸ್ವಾರ್ಥದಿಂದ ಕೆಲಸ ಮಾಡುವ ಕಾರಣದಿಂದ ಭ್ರಷ್ಟಾಚಾರದ ಕೆಲಸವೂ ಹೆಚ್ಚುತ್ತದೆ.

**ಫ) ಅರೆನ್ಯಾಯಿಕ [ಅರ್ಧ ಸತ್ಯದ ನ್ಯಾಯ] [Use of Quari - Judicial Authority]**

ಬಹುಶಃ ಎಲ್ಲಾ ದೇಶಗಳಲ್ಲಿ ಆಡಳಿತಕ್ಕೆ ಅರೆನ್ಯಾಯಿಕ ಅಧಿಕಾರವೂ ಪ್ರಾಪ್ತವಾಗಿರುತ್ತದೆ. ದೇಶದ ಕಾನೂನಿಗನುಸಾರವಾಗಿ, ಚಿಕ್ಕದಾಗಿರಲಿ, ದೊಡ್ಡದಾಗಿರಲಿ, ನ್ಯಾಯದ ನಿರ್ಣಯ ಮಾಡುವ ಅಧಿಕಾರ ಹೊಂದಿರುವ ಆಡಳಿತ ಮೂಲಕ ಸಮಯ, ಪರಿಸ್ಥಿತಿ ಮತ್ತು ಸಂಘಟನೆಗಳ ಆಧಾರದಲ್ಲಿ ನಿರ್ಣಯ ಮಾಡುವ ಪರಂಪರೆಯ ನ್ಯಾಯಯುತವೇ ಎಂದು ಹೇಳಲಾಗುವುದಿಲ್ಲ, ಈ ರೀತಿಯಲ್ಲಿ ನ್ಯಾಯ ನಿರ್ಣಯವಾಗದ ಸ್ಥಿತಿಯಲ್ಲಿ ಭ್ರಷ್ಟಾಚಾರದ ಸಂಭವನೀಯತೆ ಹೆಚ್ಚಾಗುತ್ತದೆ.

**3) ಸರಕಾರಿ ನಿವೇದನೆ [ಟೆಂಡರ್] ಮತ್ತು ಒಪ್ಪಂದದಲ್ಲಿ ಭ್ರಷ್ಟಾಚಾರ [Corruption in the Government Contract and Tender]**

ಅಭಿವೃದ್ಧಿಯ ಹೊಣೆಗಾರಿಕೆ ಆಡಳಿತದ್ದಾಗಿರುತ್ತದೆ. ದೇಶದ ಪ್ರಾಕೃತಿಕ ಸಂಪತ್ತಿನ ಹೊಣೆಯು ಆಡಳಿತದ್ದೇ ಆಗಿರುತ್ತದೆ. ಅಭಿವೃದ್ಧಿ ಹೊಂದಿದ ಅಥವಾ ಅಭಿವೃದ್ಧಿಶೀಲ ಈ ಎರಡೂ ರೀತಿಯ ದೇಶಗಳಲ್ಲಿ ಸರಕಾರಿ ನಿವೇದನೆ ಮತ್ತು ಒಪ್ಪಂದಗಳಲ್ಲಿ ಭ್ರಷ್ಟಾಚಾರ ಅತ್ಯಂತ ಹೆಚ್ಚಾಗುತ್ತದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಹತ್ತರಿಂದ ಹದಿನೈದು ಪ್ರತಿಶತವರೆಗೆ ಕಮಿಷನ್ನಿನ ಕೊಡು ಕೊಳ್ಳುವಿಕೆ ನಡೆಯುತ್ತದೆ. ಅದೇ ಅಭಿವೃದ್ಧಿಶೀಲ ದೇಶದಲ್ಲಿ ಐವತ್ತರಿಂದ ..... ಎಪ್ಪತ್ತೈದು ಪ್ರತಿಶತ ( ಶೇಖಡಾ) ದವರೆಗೆ ಕಮಿಷನ್ನಿನ ಕೆಲಸ ನಡೆಯುತ್ತದೆ. ಅರ್ಥಾತ್ ವಾಸ್ತವಿಕ ಕಾರ್ಯ ( ಕಾಮಗಾರಿಗಳು ) ಇಪ್ಪತ್ತೈದು ಪ್ರತಿಶತಕ್ಕಿಂತಲೂ ಕಡಿಮೆಯಲ್ಲಿಯೇ ಆಗುವುವು. ಇನ್ನು ಕೆಲವೊಮ್ಮೆ ಯೋಜನೆಗಳು ಪೂರ್ಣಗೊಳ್ಳದೆಯೇ, ಪೂರ್ಣಗೊಂಡಿರುವಂತೆ ಪ್ರಸ್ತುತಪಡಿಸಲಾಗುತ್ತದೆ. ಇದೇ ರೀತಿ ಪ್ರಾಕೃತಿಕ ಸಂಪತ್ತಿನ ಪ್ರಯೋಗಗಳ ಒಪ್ಪಂದದಲ್ಲೂ ಕೂಡ ಅಪಾರ ಭ್ರಷ್ಟಾಚಾರ ನಡೆಯುತ್ತದೆ. ಅಭಿವೃದ್ಧಿಶೀಲ ದೇಶಗಳಲ್ಲಿ ಈ ಸ್ಥಿತಿ ಈ ಕೆಳಗಿನಂತಿದೆ.

ಕ) ನಿವೇದನೆಯ (ಟೆಂಡರ್) ವ್ಯವಸ್ಥೆ ಮತ್ತು ಲೈಸೆನ್ಸ್ (ಅನುಮತಿ) ವಿತರಣೆ

ಖ) ವಿದೇಶಿ ಟೆಂಡರ್ ದಾರರು ಮತ್ತು ಒಪ್ಪಂದ

ಗ ) ಪಾಲುದಾರಿಕೆಯ ನಿರ್ಮಾಣ

## ಕ) ಟೆಂಡರ್ ವ್ಯವಸ್ಥೆ ಮತ್ತು ಲೈಸೆನ್ಸ್ ವಿತರಣೆ [Contract management and Distrtibution of Licence]

ದೇಶದ ಅನೇಕ ರೀತಿಯ ವಿಕಾಸಕಾರ್ಯಗಳಲ್ಲಿ, ಅಭಿವೃದ್ಧಿ ಕಾರ್ಯಗಳನ್ನು ಸಂಪನ್ನಗೊಳಿಸುವುದಕ್ಕಾಗಿ, ಟೆಂಡರ್ ನ ವ್ಯವಸ್ಥೆ ಮಾಡಲಾಗುತ್ತದೆ. ಇದರಲ್ಲಿ, ಯೋಜನೆಯ ಪ್ರಾರಂಭದಿಂದ ಹಿಡಿದು ಕೊನೆಯವರೆಗೂ ವಿಭಿನ್ನ ಕೋನಗಳಲ್ಲಿ ಭ್ರಷ್ಟಾಚಾರವಾಗುವುದರಿಂದ ನಿಯೋಜಿತ ಮೊತ್ತದ ( ಧನರಾಶಿ ) ಐವತ್ತು ಪ್ರತಿಶತವೂ ಕೂಡ ನಿರ್ಮಾಣ ಕಾರ್ಯದಲ್ಲಿ ವ್ಯಯಿಸಲಾಗುವುದಿಲ್ಲ. ಉಳಿದ ಐವತ್ತು ಪ್ರತಿಶತ ಧನರಾಶಿಯು, ಆ ಯೋಜನಾ ಕಾರ್ಯಗಳಲ್ಲಿ ತೊಡಗಿರುವ ವ್ಯಕ್ತಿ ಅಥವಾ ಸಮುದಾಯದಲ್ಲಿ ಖರ್ಚಾಗುತ್ತದೆ. ಹೀಗೆ ಆಡಳಿತಾಧಿಕಾರದ ಮೂಲಕ ವಿತರಿಸಲಾಗುವ ಆಮದು, ರಫ್ತು ಅಥವಾ ಅನ್ಯ ಕಾರ್ಯಗಳಿಗಾಗಿ ಲೈಸೆನ್ಸ್ ವಿತರಿಸುವಲ್ಲಿಯೂ ಕೂಡ ದೊಡ್ಡ ಮೊತ್ತದ ಧನರಾಶಿಯ ಪ್ರಯೋಗವಾಗುತ್ತದೆ.

## ಖ ) ವಿದೇಶಿ ಟೆಂಡರ್ ದಾರರು ಮತ್ತು ಒಪ್ಪಂದ [Foreign Contractor and Contractor ]

ಹೆಚ್ಚಿನ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಸಂಪನ್ನಗೊಳಿಸುವುದಕ್ಕಾಗಿ ವಿದೇಶಿ ಟೆಂಡರ್ ದಾರ ವ್ಯವಸ್ಥೆಯ ಪರಿಪಾಠವಿದೆ. ದೊಡ್ಡ ಮೊತ್ತ ಖರ್ಚಾಗುವ ದೊಡ್ಡ ಯೋಜನೆಗಳಲ್ಲಿ ಅಷ್ಟೇ ದೊಡ್ಡ ಮೊತ್ತದ ಧನರಾಶಿ ಭ್ರಷ್ಟಾಚಾರದ ಪಾಲಾಗುತ್ತದೆ. ಇಂತಹ ಯೋಜನೆಗಳು ಬಹುಶಃ ಬಾಹ್ಯ ಋಣ (ಹೊರದೇಶದ ಸಾಲ) ಅಥವಾ ಸಹಯೋಗದಲ್ಲಿ ಸಂಪನ್ನವಾಗುತ್ತದೆ. ಈ ಸ್ಥಿತಿಯಲ್ಲಿ ಋಣದಾತ – ಸಂಘಟನೆಯ ಆಸಕ್ತಿ ಮತ್ತು ಕಾರ್ಯ ತತ್ಪರತೆ ಪ್ರಾರಂಭದಿಂದ ಕೊನೆಯವರೆಗೂ ಇರುತ್ತದೆ. ಇಂತಹ ಅನೇಕ ಯೋಜನೆಗಳಲ್ಲಿ ಹೆಚ್ಚಿನ ಪ್ರತಿಫಲ ವಿದೇಶಿಗರ ಪಾಲಾಗುತ್ತದೆ. ಈ ಕೊರತೆಯನ್ನು ದೇಶ ಅಥವಾ ಜನತೆ ಭರಿಸಬೇಕಾಗುತ್ತದೆ.

## ಗ) ನಿರ್ಮಾಣ ಮತ್ತು ಪಾಲುದಾರಿಕೆ [Construction in the Partnership]

ಯಾವಾಗ ಇಬ್ಬರಿಗಿಂತ ಹೆಚ್ಚಿನ ಸಂಸ್ಥೆ, ವ್ಯಕ್ತಿ, ಅಥವಾ ಸಮುದಾಯಗಳು ಸೇರಿ ನಿರ್ಮಾಣ ಕಾರ್ಯ ಮಾಡುತ್ತಾರೋ, ಆಗ ಅದನ್ನು ಪಾಲುದಾರಿಕೆಯ ನಿರ್ಮಾಣ (ಯೋಜನೆ ) ಎನ್ನುತ್ತಾರೆ. ಈ ರೀತಿಯ ನಿರ್ಮಾಣ ಕಾರ್ಯದಲ್ಲಿ ಪ್ರಾಪ್ತವಾಗುವ ಗಳಿಕೆಯಲ್ಲಿ ಕೂಡ ಪಾಲುದಾರಿಕೆ ಇರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಬಡ ರಾಷ್ಟ್ರಗಳು ತಮ್ಮದೇ ಆದ ಪ್ರಾಕೃತಿಕ ಸಂಪತ್ತನ್ನು ಸಾಕಷ್ಟು

ಉಪಯೋಗಿಸಿಕೊಳ್ಳುವಲ್ಲಿ ಅಸಮರ್ಥವಾಗುತ್ತವೆ. ಇದರ ಲಾಭ ಸಾಮಂತ ಪ್ರವೃತ್ತಿಯ ವ್ಯಕ್ತಿಗಳು (ಪ್ರಭಾವಿಗಳು) ಸಮುದಾಯಗಳು ಮತ್ತು ದೇಶದ ಅಧಿಕಾರದಲ್ಲಿರುವ ವ್ಯಕ್ತಿಗಳು ಅಥವಾ ರಾಜಕೀಯ ಪಕ್ಷಗಳಿಗೆ ಸಿಗುತ್ತದೆ. ಇಂತಹ ಪಾಲುದಾರಿಕೆಯ ವಿಕಾಸದ ಕಾರ್ಯಗಳಲ್ಲಿ ಸಂಬಂಧಿತ ದೇಶಕ್ಕೆ ನಷ್ಟವಾಗುತ್ತದೆ. ಅದೇ ಪಾಲು ಭಂಡವಾಳ ತೊಡಗಿಸುವವರಿಗೆ, ವ್ಯಕ್ತಿ, ಸಮುದಾಯ ಆ ದೇಶಗಳಿಗೆ ಅತ್ಯಧಿಕ ಲಾಭ ದೊರಕುತ್ತದೆ. ಬಡ ದೇಶದ ಅಧಿಕಾರದ ಸ್ಥಾನದಲ್ಲಿರುವ ವ್ಯಕ್ತಿ ಅಥವಾ ರಾಜಕೀಯ ಪಕ್ಷ ಇದರಲ್ಲಿ ಶಾಮೀಲಾಗಿರುವುದರಿಂದ ದೇಶವು ಬಹಳಷ್ಟು ನಷ್ಟವನ್ನು ಅನುಭವಿಸಬೇಕಾಗುತ್ತದೆ.

### 4 ) ನ್ಯಾಯ ಕ್ಷೇತ್ರದ ಭ್ರಷ್ಟಾಚಾರ [ Coruption in the Judiciary]

ಅಭಿವೃದ್ಧಿಶೀಲ ದೇಶದಲ್ಲಿ ನ್ಯಾಯಿಕ ಕ್ಷೇತ್ರದಲ್ಲಿ ಕೂಡ ಬಹಳಷ್ಟು ಭ್ರಷ್ಟಾಚಾರ ನಡೆಯುತ್ತದೆ. ಈ ಕ್ಷೇತ್ರದಲ್ಲಿ ಭ್ರಷ್ಟಾಚಾರವಿರಲು ಕಾರಣ ನ್ಯಾಯವ್ಯವಸ್ಥೆ. ದೇಶ ಕಾಲ ಮತ್ತು ಜನಹಿತದ ನ್ಯಾಯ ಪದ್ಧತಿ ಇಲ್ಲದಿರುವುದೇ ಆಗಿದೆ. ನ್ಯಾಯವ್ಯವಸ್ಥೆಯಲ್ಲಿ ಈ ಕೆಳಗಿನ ನಾಲ್ಕು ತತ್ವಗಳು ಕೆಲಸ ಮಾಡುತ್ತವೆ. ಈ ತತ್ವಗಳ ವಿಕಾಸ ಯುರೋಪೆಲಿ ಶೈಲಿಯ ಅಂತರ್ಗತವಾಗಿದೆ. ಈ ಕಾರಣದಿಂದಲೂ ಅಭಿವೃದ್ಧಿಶೀಲ ದೇಶದ ನ್ಯಾಯ ಕ್ಷೇತ್ರದಲ್ಲಿ ಪ್ರಭಾವಕಾರಿಯಾಗಿ ಸಂಚಾಲಿತವಾಗಲು ಸಾಧ್ಯವಾಗದಾಯಿತು,

ಕ) ಕಾನೂನಿ ವ್ಯವಸ್ಥೆ ಖ) ನ್ಯಾಯ ನೀಡುವ ಪದ್ಧತಿ ಗ) ನ್ಯಾಯಾಧೀಶ ಘ) ವಕೀಲ

### ಕ) ಕಾನೂನಿ ವ್ಯವಸ್ಥೆ [Leagal System ]

ಹೆಚ್ಚಿನ ವಿಕಾಸೋನ್ಮುಖ ದೇಶಗಳಲ್ಲಿ ಯುರೋಪಿನ ವಿಭಿನ್ನ ದೇಶಗಳಲ್ಲಿ, ಆಳ್ವಿಕೆಯನ್ನು ಮಾಡಿದ್ದಾರೆ. ಆ ಕಾರಣದಿಂದಾಗಿ, ಅವರೇ ಮಾಡಿದ ಕಾನೂನುಗಳೇ ಇಂದಿಗೂ ಜಾರಿಯಲ್ಲಿದೆ. ಅನೇಕ ದೇಶಗಳು ಇದರಲ್ಲಿ ಸುಧಾರಣೆ ಮಾಡುವ ಪ್ರಯತ್ನ ಮಾಡಿದ್ದಾರೆ. ಆದರೆ ಇದರ ಮೂಲ ಸ್ವರೂಪ ಇಂದಿಗೂ ಅಸ್ತಿತ್ವದಲ್ಲಿದೆ. ದೇಶ, ಕಾಲ ಮತ್ತು ಪರಿಸ್ಥಿತಿಗನುಸಾರವಾದ ಕಾನೂನುಗಳೇ ಇಂದಿನವರೆಗೂ ಆಗಿರುವುದಿಲ್ಲ. ಏಕೆಂದರೆ, ವರ್ತಮಾನವದಲ್ಲಿರುವ ಕಾನೂನು ವ್ಯವಸ್ಥೆಯ ಜನನಿ ಯುರೋಪಿನ ದೇಶ ಗ್ರೇಟ್ ಬ್ರಿಟನ್, ಫ್ರಾನ್ಸ, ಸ್ಪೇನ್ ಮತ್ತು ಜರ್ಮನಿಯಂತಹ ದೇಶಗಳ ಮೂಲಕವಾದ ಜಾರಿ ಕಾನೂನಿ ವ್ಯವಸ್ಥೆಯೇ ವಿಶ್ವದ ಎಲ್ಲಾ ದೇಶಗಳಲ್ಲಿ ಪ್ರಚಲಿತವಾಗಿವೆ.

### ಖ) ನ್ಯಾಯ ಪ್ರದಾನ ಮಾಡುವ ಪದ್ಧತಿ [Judicial Process System]

ಯುರೋಪಿಯನ್ ಸಾಮ್ರಾಜ್ಯವಾದದಿಂದ ಹದಿನಾರು, ಹದಿನೇಳನೇ ಶತಮಾನದಲ್ಲಿ ಜಾರಿಗೆ ಬಂದ ನ್ಯಾಯ ಪ್ರದಾನ ಮಾಡುವ ಪದ್ಧತಿ ಇಂದಿನವರೆಗೆಅಸ್ತಿತ್ವದಲ್ಲಿದೆ. ಎಲ್ಲಿ ಈ ಪದ್ಧತಿ ಇರಲಿಲ್ಲವೋ ಇಪ್ಪತ್ತನೇ ಶತಮಾನದಲ್ಲಿ ಆ ದೇಶಗಳು ಕೂಡ ಇದನ್ನು ಸ್ವೀಕರಿಸಿದವು. ಸಂಭಾವ್ಯವಾಗಿ ಇದನ್ನು ವೈಜ್ಞಾನಿಕ ಪದ್ಧತಿಯೆಂದು ತಿಳಿಯಲ್ಪಟ್ಟಿತು. ಆದರೆ ವಿಕಾಸೋನ್ಮುಖ ದೇಶಗಳಿಗೆ ಇದು ಅಭಿಷಾಪವಾಗಿ ಪರಿಣಮಿಸಿತು.

### ಗ) ನ್ಯಾಯಾಧೀಶ [The Judge]

ನ್ಯಾಯ ಕ್ಷೇತ್ರದಲ್ಲಿ ಸ್ತಂಭದಂತೆ ಸ್ಥಾಪಿತರಾದ ವಕೀಲರೇ ನ್ಯಾಯ ಸಂಪಾದನೆಯ ಸಂವಾಹಕರಾಗಿರುತ್ತಾರೆ. ಈ ಕ್ಷೇತ್ರ ಶುದ್ಧ ಮತ್ತು ಪ್ರಾಮಾಣಿಕವಾಗಿದ್ದರೆ ನ್ಯಾಯ ನಿರ್ಣಯದಲ್ಲಿ ಕೂಡ ಇದರ ಪ್ರಭಾವ ಬೀಳುತ್ತದೆ. ಆದರೆ ಹೆಚ್ಚಿನಂಶ ವಕೀಲ ನ್ಯಾಯಾಲಯ ಮತ್ತು ಪೀಡಿತ ಜನತೆ ಈ ಇಬ್ಬರ ಮೇಲೂ ಪ್ರಯೋಗ ಮಾಡುವ ಅವಕಾಶವನ್ನು ಪಡೆದುಕೊಳ್ಳುತ್ತಾನೆ. ಅಭಿವೃದ್ಧಿಶೀಲ ದೇಶಗಳಲ್ಲಿ ನ್ಯಾಯ ಪಡೆಯುವುದಕ್ಕಾಗಿ ವಕೀಲರಿಗೆ ಅವರು ಬಯಸುವಷ್ಟು ಧನರಾಶಿಯನ್ನು ಕೊಡಬೇಕಾಗುತ್ತದೆ. ಈ ಪದ್ಧತಿಯ ನ್ಯಾಯದ ವ್ಯವಸ್ಥೆ ಅತ್ಯಂತ ಕಳಂಕಿತವಾಗಿದೆ.

### 5) ಸಾಂಸ್ಥಿಕ ರೂಪದಲ್ಲಿ ಆಗುವ ಭ್ರಷ್ಟಾಚಾರ [Institutional Corruption]

ಸಾಂಸ್ಥಿಕ ಭ್ರಷ್ಟಾಚಾರದ ಅರ್ಥವೆಂದರೆ, ಸಾಮೂಹಿಕ ರೂಪದಲ್ಲಿ ವ್ಯವಸ್ಥಿತವಾಗಿ ಕಾನೂನಿನ ತಪ್ಪು ವ್ಯಾಖ್ಯಾನ ಮಾಡಿ ಭ್ರಷ್ಟಾಚಾರಕ್ಕೆ ಅನುವು ಮಾಡಿ ಕೊಡುವುದು. ಈ ಸಂಸ್ಥಾಗತವಾದ ಭ್ರಷ್ಟಾಚಾರದಲ್ಲಿ ಸ್ಪಷ್ಟವಾಗಿ ಭ್ರಷ್ಟಾಚಾರ ಕಂಡು ಬರುವುದಿಲ್ಲ. ಆದರೂ ಕೂಡ ಆಂತರಿಕವಾಗಿ ಭ್ರಷ್ಟಾಚಾರದ ಕರಾಳ ರೂಪ ಸ್ಥಾನ ಪಡೆದಿರುತ್ತದೆ. ಹೀಗೆ ಸಂಸ್ಥಾಗತವಾಗಿ ನಡೆಯುವ ಭ್ರಷ್ಟಾಚಾರದಿಂದ ದೇಶದ ಆರ್ಥಿಕ ವ್ಯವಸ್ಥೆ ನೆಲಕಚ್ಚುವುದು ಮಾತ್ರವಲ್ಲ. ದೇಶದ ಅಸ್ತಿತ್ವಕ್ಕೇ ಅಪಾಯ ಉಂಟಾಗುತ್ತದೆ. ಸಂಸ್ಥಾಗತವಾಗಿ ಆಗುವ ಭ್ರಷ್ಟಾಚಾರವು, ಸಾಮಾನ್ಯ ಭ್ರಷ್ಟಾಚಾರವಾಗಿರದೆ, ದೇಶ ಮತ್ತು ಜನತೆಯನ್ನೇ ಮುಗಿಸಿ, ಬಿಡುವಂತಹ ಅಪರಾಧವಾಗಿದೆ. ಇದನ್ನು ಈ ಕೆಳಗಿನಂತೆ ವರ್ಗೀಕರಿಸಲಾಗುವುದು.

ಕ) ಸಾಮೂಹಿಕವಾಗಿ (ಸಮೂಹಗತ ರೂಪದಲ್ಲಿ ) [By the Groups]

ಖ) ರಾಜಕೀಯ ಪಕ್ಷಗಳ ರೂಪದಲ್ಲಿ

ಗ) ವ್ಯವಸ್ಥಿತವಾಗಿ ಕಾನೂನಿನ ತಪ್ಪು ವ್ಯಾಖ್ಯಾನಮಾಡುವುದರಿಂದ

ಘ) ಹೊಸ ಕಾನೂನು ಮಾಡುವುದರ ಮೂಲಕ

### ಕ) ಸಮೂಹಗತ ರೂಪದಲ್ಲಿ (By the Groups )

ಒಬ್ಬರು ಇನ್ನೊಬ್ಬರೊಂದಿಗೆ ಲಂಚ ಪಡೆಯುವ ವಿಕಸಿತ ರೂಪವೇ ಸಮೂಹಗತ ಭ್ರಷ್ಟಾಚಾರವಾಗಿದೆ. ಯಾವಾಗ ಇಂತಹ ಸಮೂಹಗತ ಭ್ರಷ್ಟಾಚಾರವು ಪ್ರಾರಂಭವಾಗುತ್ತದೋ, ಆಗ ಇದು ಸಾಂಸ್ಥಿಕ ಭ್ರಷ್ಟಾಚಾರದ ರೂಪವನ್ನು ಪಡೆಯುತ್ತದೆ. ಇದನ್ನು ಒಪ್ಪಿತ ಅಪರಾಧದ ರೂಪದಲ್ಲಿ ಸ್ವೀಕರಿಸಲಾಗುತ್ತದೆ. ಅಭಿವೃದ್ಧಿ ಹೊಂದಿದ ದೇಶಗಳಿಂದ ಹಿಡಿದು ಅಭಿವೃದ್ಧಿಶೀಲ ದೇಶಗಳಲ್ಲಿ ಸಮೂಹಗತ ರೂಪದಲ್ಲಿ ಭ್ರಷ್ಟಾಚಾರ ಪ್ರಚಲಿತವಾಗಿದೆ. ಅನೇಕ ದೇಶಗಳು ಇದನ್ನು ಕಾನೂನಿನ ನಿಯಮಗೊಳಪಡಿಸಿ, ವ್ಯವಸ್ಥೆಯಲ್ಲಿ ತಂದಿವೆ. ಇನ್ನು ಕೆಲವೆಡೆಗಳಲ್ಲಿ ಇದನ್ನು ಅಭ್ಯಾಸ ಮಾಡಿಕೊಂಡು ಸ್ವೀಕರಿಸುತ್ತಿವೆ. ಬಡ ದೇಶಗಳು ಈ ಭ್ರಷ್ಟಾಚಾರದಿಂದ ಪೀಡಿತವಾಗಿವೆ.

### ಖ) ರಾಜಕೀಯ ಪಕ್ಷಗಳ ರೂಪದಲ್ಲಿ [By the Political Parties]

ರಾಜಕೀಯ ಪಕ್ಷಗಳಿಗೆ ಆದಾಯದ ಸ್ರೋತವಿರುವುದಿಲ್ಲ. (ಹರಿವು) ಚಂದಾ, ದಾನ ಮತ್ತು ಸಹಯೋಗಗಳಿಂದ ಸಂಚಾಲನೆಗೊಳ್ಳುತ್ತವೆ. ನಿಶ್ಚಿತ ಸಿದ್ಧಾಂತದ ಆಧಾರದಲ್ಲಿ ಸಂಚಲಿತವಾಗುವ ರಾಜಕೀಯ ಪಕ್ಷಗಳ ಎಲ್ಲಾ ಮುಖಂಡರು ಹಾಗೂ ಕಾರ್ಯಕರ್ತರು, ನಿಃಶುಲ್ಕ ಸೇವೆಯಲ್ಲಿ ತೊಡಗುತ್ತಾರೆ. ಆದರೆ, ಅಭಿವೃದ್ಧಿಶೀಲ ದೇಶಗಳಲ್ಲಿ ಸಂಚಾಲಕತ್ವ ಬಹುಶಃ ರಾಜಕೀಯ ಪಕ್ಷಗಳು ಅಧಿಕಾರ ಪಡೆಯುವುದಕ್ಕಾಗಿ, ಮಾತ್ರವೇ ಕ್ರಿಯಾಶೀಲವಾಗುತ್ತವೆ. ಯಾವ ರೀತಿಯಲ್ಲಾದರೂ ಅಧಿಕಾರ ಪ್ರಾಪ್ತವಾಗಬೇಕು. ಇದಕ್ಕಾಗಿ, ಆ ಸಮಾಜದ ಪ್ರತಿ ಸಮುದಾಯದಿಂದ ಧನ ಸಂಗ್ರಹ ಮಾಡುತ್ತಾರೆ. ಮತ್ತು ಶೋಷಣೆ ಮಾಡುತ್ತಾರೆ. ಹೀಗೆ ಪಕ್ಷಗಳ ಮೂಲಕ ನಡೆಯುವ ಭ್ರಷ್ಟಾಚಾರ ಜನತೆಯ ಅರಿವಿಗೆ ಬರುವುದಿಲ್ಲ.

### ಗ) ಕಾನೂನಿನಲ್ಲಿ ವ್ಯವಸ್ಥಿತವಾಗಿ ತಪ್ಪು ವ್ಯಾಖ್ಯಾನ ನೀಡುವುದರಿಂದ [By misinterpreting the existing Law]

ಅಧಿಕಾರದತ್ತ ತಲುಪಲಿರುವ ವ್ಯಕ್ತಿ, ಸಮೂಹ ಮತ್ತು ರಾಜಕೀಯ ಪಕ್ಷದ ಮುಖಂಡ ಹಾಗೂ ಕಾರ್ಯಕರ್ತ ಕಾನೂನಿನ ತಪ್ಪು ವ್ಯಾಖ್ಯಾನವನ್ನು ಮಾಡಿ, ಲಾಭ ಪಡೆದುಕೊಳ್ಳುತ್ತಾರೆ. ಉದಾಹರಣೆಗೆ ರಾಷ್ಟ್ರದ ಸಂಪತ್ತು ಮತ್ತು ಪ್ರಾಕೃತಿಕ

ಸಂಪನ್ಮೂಲಗಳ ನೇರ ಹಸ್ತಾಂತರವಾಗದಿದ್ದಾಗ ಅಂತಹ ಸನ್ನಿವೇಶದಲ್ಲಿ ಒಪ್ಪಂದದ ಆಧಾರದಲ್ಲಿ ಲೀಜ್‌ಗೆ ಕೊಡಲಾಗುತ್ತದೆ. ಇಂತಹ ಲೀಜ್‌ನಲ್ಲಿ ಕೊಡುವ ಪ್ರಕ್ರಿಯೆಯು ಸಂಪತ್ತಿನ ಹಸ್ತಾಂತರಣವೇ ಆಗಿದೆ. ಅಧಿಕಾರದಲ್ಲಿರುವ ವ್ಯಕ್ತಿ, ಅಥವಾ ಪಕ್ಷ ಇಂತಹ ಕಾರ್ಯವನ್ನು ಮಾಡುತ್ತಾರೆ. ಇದೊಂದು ಘೋರ ಅಪರಾಧವಾಗಿದೆ.

### ಫ) ಹೊಸತಾದ ಕಾನೂನುಗಳನ್ನು ಮಾಡಿ [By Formulating the new Law ]

ಬಹುಶಃ ಎಲ್ಲಾ ದೇಶಗಳಲ್ಲೂ ರಾಷ್ಟ್ರೀಯ ಕೋಶದಿಂದ ಹಣದ ಮೊತ್ತವನ್ನು ಕಾನೂನಿನ ಹೊರತಾಗಿ ಪಡೆಯಲಾಗುವುದಿಲ್ಲ. ಅಧಿಕಾರದಲ್ಲಿರುವ ವ್ಯಕ್ತಿ, ಸಮೂಹ ಅಥವಾ ರಾಜಕೀಯ ಮುಖಂಡರು, ಕಾರ್ಯಕರ್ತರು ರಾಷ್ಟ್ರೀಯ ಕೋಶದ ಸಂಪತ್ತನ್ನು ತನ್ನ ಮತ್ತು ಪಕ್ಷದ ಆರ್ಥಿಕ ಸಂಪನ್ನತೆಯನ್ನಾಗಿ ಮಾಡಬಯಸುತ್ತಾರೆ. ಇದೇ ಉದ್ದೇಶ್ಯದ ಪ್ರಾಪ್ತಿಗಾಗಿ, ಸ್ವಂತಕ್ಕೆ ಲಾಭವಾಗುವ ರೀತಿಯಲ್ಲಿ ಕಾನೂನನ್ನು ನಿಯಮಬದ್ಧಗೊಳಿಸಿ, ರಾಷ್ಟ್ರೀಯ ಕೋಶದ ಸಂಪತ್ತು ಮತ್ತು ಸೌಲಭ್ಯಗಳನ್ನು ಪಡೆಯುವ ಕೆಲಸವನ್ನು ಮಾಡುತ್ತಾರೆ. ಇಂತಹುದೇ ನಿಯಮಗಳನ್ನು ಮಾಡಿ, ದೇಶದ ಖನಿಜ ಹಾಗೂ ಪ್ರಾಕೃತಿಕ ಸಂಪತ್ತನ್ನು ಇತರರಿಗೆ ಹಸ್ತಾಂತರ ಮಾಡುತ್ತಾರೆ. ಇದು ದೇಶದ ಕುರಿತು ಮಾಡುವ ವಂಚನೆಯಾಗಿದೆ. (ದ್ರೋಹ) ಮಾತ್ರವಲ್ಲ, ದೊಡ್ಡ ಭ್ರಷ್ಟಾಚಾರವೂ ಆಗಿದೆ.

### 6. ಸರಕಾರೇತರ ಸಂಸ್ಥೆಗಳಿಂದಾಗುವ ಭ್ರಷ್ಟಾಚಾರ [Corruption in the NGO's and Ingos ]

ಸರಕಾರದ ಮೂಲಕ ಕೆಲಸ ಮಾಡಿಸಿಕೊಳ್ಳದೆ ನಾಗರಿಕ ಸಮೂಹದಿಂದ ಮಾಡಿಸುವ ಉದ್ದೇಶ್ಯದೊಂದಿಗೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸರಕಾರೇತರ ಸಂಸ್ಥೆಗಳನ್ನು ಸಂಘಟಿಸಲಾಯಿತು. ಈ ಸಂಸ್ಥೆಗಳು ತಮ್ಮ ದೇಶದಲ್ಲಿ ಕ್ರಿಯಾಶೀಲರಾಗಿರುವುದರೊಂದಿಗೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸಹಯೋಗದ ಹೆಸರಿನಲ್ಲಿ ತಮ್ಮ ದೇಶದ ಹೊರಗೂ ಕ್ರಿಯಾಶೀಲವಾದುವು. ಅಭಿವೃದ್ಧಿಶೀಲ ದೇಶಗಳಲ್ಲಿ ಈ ಸಂಸ್ಥೆಗಳು ತಮ್ಮ ಸ್ವಾರ್ಥವಾಗಿ ಮತ್ತು ತಮ್ಮ ಪ್ರಭಾವ ಬೀರುವುದಕ್ಕಾಗಿ ಹಣದ ಹೊಳೆಯನ್ನೇ ಹರಿಸುತ್ತಾರೆ. ಬಡ ದೇಶಗಳ ಕೆಲವು ವಿದ್ಯಾವಂತ ಜನರು ಇಂತಹ ಸಂಸ್ಥೆಗಳ ಸಂಪರ್ಕಕ್ಕೆ ಬಂದರು ಮತ್ತು ಅವರ ಕೈಗೊಂಬೆಗಳಾಗಿ ಪ್ರಯೋಗಿಸಲ್ಪಡತೊಡಗಿದರು. ಹಾಗೂ ಬಡ ಸಮಾಜದಲ್ಲಿ ಭ್ರಷ್ಟಾಚಾರದ ಆಟ ಪ್ರಾರಂಭವಾಯಿತು. ಅಭಿವೃದ್ಧಿಶೀಲ ದೇಶಗಳಲ್ಲಿ ಬಹುಶಃ ಕಾನೂನಿನ ಮಾನ್ಯತೆ ಪಡೆದ ಮತ್ತು ಸರಕಾರಿ ಸಂಸ್ಥೆಗಳು ಇಲ್ಲ. ಸಾಮಾಜಿಕ ಸಂಸ್ಥೆ ಅಥವಾ ಅನ್ಯ

ಸೇವಾಪರ ಸಂಸ್ಥೆಗಳಿಗೆ ಅಂತಾರಾಷ್ಟ್ರೀಯ ಮಟ್ಟದ ಸರಕಾರೇತರ ಸಂಸ್ಥೆ ತನ್ನ ಪ್ರತಿನಿಧಿಯ ರೂಪದಲ್ಲಿ ಪ್ರಯೋಗಿಸಿದ ನಂತರ ಬಡದೇಶಗಳಲ್ಲಿ ಇಂತಹ ಸಾಮಾಜಿಕ ಸಂಸ್ಥೆ, ಸರಕಾರೇತರ ಸಂಸ್ಥೆಗಳ ರೂಪದಲ್ಲಿ ಪರಿಚಿರವಾಗತೊಡಗಿದವು.

## 7. ಸಾಮಾಜಿಕ ಕ್ಷೇತ್ರದಲ್ಲಾಗುವ ಭ್ರಷ್ಟಾಚಾರ [ Corruption in the Social Sector ]

ವಿಕಾಸೋನ್ಮುಖ ದೇಶಗಳಲ್ಲಿ ವಿವಿಧ ಸಂಸ್ಕೃತಿ ಮತ್ತು ವರ್ಗಗಳ ಸಮ್ಮಿಶ್ರಿತ ರೂಪದಿಂದ ಸಾಮಾಜಿಕ ಸಂರಚನೆಯಾಗುತ್ತದೆ. ಶ್ರೀಮಂತರು ಮತ್ತು ಅತಿ ಶ್ರೀಮಂತರದ್ದು ಒಂದು ವರ್ಗವಾದರೆ, ಇನ್ನೊಂದು ಕಡೆ ಬಡವ ಮತ್ತು ಅತಿ ಬಡವರ ವರ್ಗವಿರುತ್ತದೆ. ಇಲ್ಲಿ ಸಮನ್ವಯದ ಕೊಂಡಿ ಎನಿಸಿಕೊಂಡಿರುವ ಪರಂಪರೆಯಿಂದ ಪ್ರಚಲಿತವಾಗಿ ಬಂದಿರುವ ಸಂಸ್ಕೃತಿ ಇದೆ. ಆದರೆ, ಇಂದು ಪುರಾತನ ಪದ್ಧತಿಗಳು ನಶಿಸುತ್ತಾ ಬರುತ್ತಿವೆ. ಇದರಿಂದ ಸಾಮಾಜಿಕ ಸಮಸ್ಯೆಗಳು ಹೆಚ್ಚುತ್ತಾ ಹೋಗುತ್ತಿವೆ. ಸಾಮಾಜಿಕ ಸ್ತರಗಳಲ್ಲಿ ಉಂಟಾಗುವ ಸಮಸ್ಯೆಗಳನ್ನು ಈ ಕೆಳಗಿನಂತೆ ನೋಡುವುದಾದರೆ, ಸಮಾಜದಲ್ಲಿ ಭ್ರಷ್ಟಾಚಾರ ಜನ್ಮ ತಳೆಯಲು ಇವುಗಳು ಹೇಗೆ ಸಹಾಯವಾಗುತ್ತವೆ. ನೋಡೋಣ.

ಕ) ಧರ್ಮ – ಸಂಸ್ಕೃತಿ ಖ ) ಸಮುದಾಯ ಸಂಘಟನೆ ಗ) ಶಿಕ್ಷಣ ಘ) ಆರೋಗ್ಯ ಙ) ಶ್ರೀಮಂತ – ಬಡವರ ವಿಭೇದ.

### ಕ) ಧರ್ಮ – ಸಂಸ್ಕೃತಿ [Religion – Culture ]

ಧರ್ಮ ಸಂಸ್ಕೃತಿ ಎಂದರೆ ಜೀವನವನ್ನು ಜೀವಿಸುವ ಪದ್ಧತಿಯಾಗಿದೆ. ಜೀವನವನ್ನು ಸುಖಮಯಗೊಳಿಸುವುದಕ್ಕಾಗಿ ಧಾರಣ (ಸ್ವೀಕರಿಸುವ – ಅಳವಡಿಸಿಕೊಳ್ಳುವ ) ಪದ್ಧತಿಯೇ ಧರ್ಮ ಮತ್ತು ಅದನ್ನು ನಿರಂತರವಾಗಿ ಪಾಲಿಸಿಕೊಂಡು ಜೀವನ ಸಂಚಾಲನೆ ಮಾಡುವುದೇ ಸಂಸ್ಕೃತಿ. ಯುಗಗಳಿಂದ ಆಚರಿಸಿಕೊಂಡು ಬರುತ್ತಿರುವ ಧರ್ಮ ಸಂಸ್ಕೃತಿ ಪದ್ಧತಿಯನ್ನು, ಹೊಸ ಧಾರ್ಮಿಕ ಸಂಪ್ರದಾಯವಾದಿಗಳು ಇವಕ್ಕೆ ಅನೇಕ ಅರ್ಥಗಳನ್ನು ತೊಡಿಸಿ, ಅತಿಕ್ರಮಣ ಮಾಡಿದರು. ಈ ಕಾರಣದಿಂದಾಗಿ, ಧರ್ಮ – ಸಂಸ್ಕೃತಿಯಲ್ಲಿ ವಿಕಲ್ಪಗಳುಂಟಾದುವು. ಇದರಿಂದ ಸಾಮಾಜಿಕ ಸಮಸ್ಯೆಗಳು ಉತ್ಪನ್ನವಾದುವು. ಧನಿಕ ಸಮುದಾಯಗಳಿಂದ ಮಾನ್ಯತೆ ಪಡೆದ ಸಂಸ್ಕೃತಿಯನ್ನು ಬಡ ಸಮುದಾಯಗಳು ಒಪ್ಪಿಕೊಳ್ಳುವಂತಾಯಿತು. ಇಂತು ಹಣದ ಮರೆಯಲ್ಲಿ ಸಂಸ್ಕೃತಿಯಲ್ಲಿ ಬದಲಾವಣೆ ಆಗತೊಡಗಿತು.

### ಖ ) ಸಾಮುದಾಯಿಕ – ಸಂಘಟನೆ ( Communal Organization )

ಸಮುದಾಯದೊಳಗೆ ವಿಭಿನ್ನ ವರ್ಗೀಯ, ಕ್ಷೇತ್ರಿಯ ಮತ್ತು ಜಾತಿಯ ಹಿತಕ್ಕಾಗಿ, ಸಂಘಟನೆಗಳು ಪ್ರಾರಂಭವಾಗತೊಡಗಿದವು. ಕ್ಷೇತ್ರೀಯ ಸಂಘಟನೆಯ ಹೆಸರಿನಲ್ಲಿ ಗೂಂಡಾ ಸಂಘಟನೆಗಳೂ ಪ್ರಾರಂಭವಾಗತೊಡಗಿದವು. ಸಮಾಜದ ವಿಭಿನ್ನ ಕ್ಷೇತ್ರಗಳಲ್ಲಿ ಬೇರೆ – ಬೇರೆ ಸಂಘಟನೆಗಳು ಸ್ಥಾಪನೆಗೊಳ್ಳತೊಡಗಿದವು. ಈ ರೀತಿಯಾಗಿ ಸಾಮಾಜಿಕ ಕ್ಷೇತ್ರದಲ್ಲಿ ಭ್ರಷ್ಟಾಚಾರದ ಹೆಚ್ಚಳದ ಕ್ರಮದಲ್ಲಿ ಇಂತಹ ವಿಭಿನ್ನ ಸಂಘ – ಸಂಸ್ಥೆಗಳನ್ನು ಮುಚ್ಚಿಸುವ ( ಕೊನೆಗೊಳಿಸುವ) ಅವಶ್ಯಕತೆ ಕಂಡುಬರತೊಡಗಿತು.

### ಗ) ಶಿಕ್ಷಣ [Education ]

ಶಿಕ್ಷಣ ಸಾರ್ವತ್ರಿಕವಾಗಿ ಅವಶ್ಯಕವಾದುದಾಗಿದೆ. ಅದು ಮಾನವ ವಿಕಾಸದಲ್ಲಿ ಸಹಾಯವನ್ನುಂಟು ಮಾಡುತ್ತದೆ. ಆದರೆ, ಇಂದು ಅಭಿವೃದ್ಧಿಶೀಲ ದೇಶಗಳಲ್ಲಿ ಶಿಕ್ಷಣದಲ್ಲಿ ವ್ಯಾಪಾರಿಕರಣ ಪ್ರಾರಂಭವಾಗಿದೆ. ಶಿಕ್ಷಣದ ಹೆಸರಿನಲ್ಲಿ, ತಮ್ಮ ಶೈಕ್ಷಣಿಕ ಕ್ಷೇತ್ರಗಳ ಮೂಲಕ ಆರ್ಥಿಕ ಶೋಷಣೆಯಾಗತೊಡಗಿತು. ಶಿಕ್ಷಣ ಕ್ಷೇತ್ರವು ಉದ್ಯಮವಾದ ಕಾರಣದಿಂದಾಗಿ ಜನಸಾಮಾನ್ಯರ ಶೋಷಣೆಯಾಗತೊಡಗಿತು. ಖಾಸಗಿ ಕ್ಷೇತ್ರದ ವಿದ್ಯಾಲಯಗಳು ದೊಡ್ಡ ದೊಡ್ಡ ಆರ್ಥಿಕ ಹಗರಣಗಳನ್ನು ಮಾಡತೊಡಗಿದವು ಮತ್ತು ಭ್ರಷ್ಟಾಚಾರ ಕಾರ್ಯ ವಿಸ್ತರಿಸಲು ಅವಕಾಶವಾಯಿತು.

### ಘ ) ಆರೋಗ್ಯ [ Health ]

ಸ್ವಾಸ್ಥ್ಯೋಪಚಾರ ಪ್ರಕಿಯೆ ಜೀವನದ ರಕ್ಷಣೆ ಮಾಡುತ್ತದೆ. ಈ ಸ್ವಾಸ್ಥ್ಯೋಪಚಾರ ನಿಃಶುಲ್ಕ (ಉಚಿತ )ವಾಗಿರಬೇಕು. ಆದರೆ ವಿಕಾಸೋನ್ಮುಖ ದೇಶಗಳಲ್ಲಿ ಚಿಕಿತ್ಸೆಗಾಗಿ ಬಹಳಷ್ಟು ಹಣ ಖರ್ಚು ಮಾಡಬೇಕಾಗುತ್ತದೆ. ಖಾಸಗಿ ಕ್ಷೇತ್ರದ ಚಿಕಿತ್ಸಾ ಕೇಂದ್ರಗಳು ಅಧಿಕ ಶುಲ್ಕ ಪಡೆದು ಚಿಕಿತ್ಸೆ ನೀಡುತ್ತವೆ.

### ಙ) ಶ್ರೀಮಂತ ಮತ್ತು ಬಡವನ ಅಂತರ [Discrimination between rich and Poor ]

ವಿಕಾಸೋನ್ಮುಖ ದೇಶದ ಸರಕಾರ ಧನಿಕ ಮತ್ತು ಬಡವನಲ್ಲಿರುವ ಅಂತರವನ್ನು ಇಲ್ಲದಂತೆ ಮಾಡಲಾರದು. ಬಡವ ಯಾವ ರೀತಿಯಲ್ಲಾದರೂ ಹಣ ಗಳಿಸಲಿಚ್ಛಿಸುತ್ತಾನೆ ಮತ್ತು ಅನೇಕ ಅಪರಾಧಗಳಲ್ಲಿ ತೊಡಗಿಕೊಳ್ಳುತ್ತಾನೆ. ಮತ್ತು ಸಮಾಜದ ಕಷ್ಟಗಳಿಗೆ ಕಾರಣನಾಗುತ್ತಾನೆ. ಸಮಾಜದ ಸಂವೇದನ ಶೀಲ ಪಕ್ಷಗಳಿಗೆ

ಹಾನಿ ಉಂಟುಮಾಡಿ ಹಣ ಗಳಿಸುತ್ತಾರೆ. ಆದರೆ ಅವರ ವಿರುದ್ಧ ಇನ್ನೊಬ್ಬ ಬಡ ವ್ಯಕ್ತಿ ಪ್ರತಿಭಟಿಸತೊಡಗುತ್ತಾನೆ. ಈ ರೀತಿಯಲ್ಲಿ ಧನಿಕ – ಬಡವನ ಅಂತರ ಸಾಮಾಜಿಕ ಸಮಸ್ಯೆ ವೃದ್ಧಿಸುತ್ತದೆ.

**8 ) ಆರ್ಥಿಕ ಕ್ಷೇತ್ರದಲ್ಲಿ ಆಗುವ ಭ್ರಷ್ಟಾಚಾರ – [Corruption in the Economic Sector]**

ಯಾವುದೇ ಒಂದು ಸಮಾಜ ಮತ್ತು ರಾಷ್ಟ್ರದ ವಿಕಾಸದ ಮಾನದಂಡವೇ ಆರ್ಥಿಕ ಕ್ಷೇತ್ರದಲ್ಲಿ ಆಗುವ ಉನ್ನತಿ ಮತ್ತು ಪ್ರಗತಿಯನ್ನು ನಿರ್ಧರಿಸುತ್ತದೆ. ಅರ್ಥದ ವಹಿವಾಟು, ಹಾನಿ ಹಾಗೂ ನಷ್ಟ ಮತ್ತು ವಿಕಾಸದ ಸತ್ಯಾಂಕನವು ಕೂಡ ಇದೇ ಕ್ಷೇತ್ರದೊಂದಿಗೆ ಸಂಬದ್ಧಿಸಿದ್ದಾಗಿದೆ. ಹೀಗಾಗಿ, ದೇಶದ ವಿಕಾಸದಲ್ಲಿ ಇದರ ಮಹತ್ವ ಅತ್ಯಂತ ಹೆಚ್ಚಿನದಾಗಿದೆ. ಈ ಕ್ಷೇತ್ರವು ಭ್ರಷ್ಟಾಚಾರವನ್ನು ಅಳೆಯಲು ಕೂಡ ಉಪಯುಕ್ತವಾಗಿದೆ. ಈ ಕ್ಷೇತ್ರದಲ್ಲಿ, ಯಾರು ಯಾವ ರೂಪದಲ್ಲಿ ಮತ್ತು ಯಾವ ಸಮುದಾಯದಿಂದ ಭ್ರಷ್ಟಾಚಾರವಾಗುತ್ತದೆ, ಅದನ್ನು ಈ ಕೆಳಗೆ ಕೊಟ್ಟಿರುವಂತೆ ನೋಡಬಹುದಾಗಿದೆ.

ಕ) ಪರಂಪರಾಗತವಾದ ಕೊಡು – ಕೊಳ್ಳುವಿಕೆ,

ಖ) ವಿತ್ತೀಯ ಸಂಸ್ಥೆಗಳು,

ಗ) ಮಾರುಕಟ್ಟೆ,

ಘ) ಉದ್ಯೋಗ,

ಙ) ಅಂತಾರಾಷ್ಟ್ರೀಯ ವಹಿವಾಟು.

**ಕ) ಪರಂಪರಾಗತವಾದ ಕೊಡು – ಕೊಳ್ಳುವಿಕೆ [ Traditional Transaction]**

ಬ್ಯಾಂಕುಗಳ ಸ್ಥಾಪನೆ ಆಗುವ ಹಿಂದಿನಿಂದಲೂ (ಮೊದಲಿನಿಂದಲೂ) ಪರಂಪರಾಗತ ರೂಪದಲ್ಲಿ ಕೊಡು – ಕೊಳ್ಳುವ ಅರ್ಥಾತ್ ವಿತ್ತೀಯ ವಹಿವಾಟು ನಡೆಯುತ್ತಲೇ ಇತ್ತು. ರೈತರು ತಮ್ಮ ಹೊಲದಲ್ಲಿ ಉತ್ತು – ಬಿತ್ತುವ ಸಮಯದಲ್ಲಿ ಬೀಜವನ್ನು ಸಾಲವಾಗಿ ಪಡೆಯುತ್ತಿದ್ದರು, ಮತ್ತು ಬೆಳೆ ಬಂದ ಮೇಲೆ ಬಡ್ಡಿ ಸಹಿತ ಬೆಳೆದುದನ್ನು ಕೊಡುತ್ತಿದ್ದು. ವ್ಯಾವಸಾಯಿಕ (ವ್ಯಾವಹಾರಿಕ ) ಕ್ಷೇತ್ರಗಳಲ್ಲಿ ಕೂಡ ವ್ಯವಸಾಯದ ಹೆಚ್ಚಳಕ್ಕಾಗಿ (ಅಭಿವೃದ್ಧಿಗಾಗಿ) ಸಾಲ ಪಡೆಯುವ ಮತ್ತು ಕೊಡುವ ಪರಂಪರೆ ಇತ್ತು. ಇದೇ ರೀತಿ ವಿಶೇಷ ಪರ್ವಗಳಲ್ಲಿ, ಹಬ್ಬಗಳಲ್ಲಿಯೂ ಅವಶ್ಯಕತೆಗನುಸಾರವಾಗಿ ಸಾಲ ಪಡೆಯುವ ಮತ್ತು ಬಡ್ಡಿ ಸಹಿತ ಹಿಂತಿರುಗಿಸುವ

ಪರಂಪರೆ ಇದ್ದ ಕಾರಣ ಈ ಕ್ಷೇತ್ರದಲ್ಲಿ ಅಧಿಕ ಬಡ್ಡಿ ತೆಗೆದುಕೊಳ್ಳುವ ಮತ್ತು ಸಾಲಗಾರನಗೆ ದುಃಖವನ್ನುಂಟು ಮಾಡುವ ಕಾರ್ಯಗಳು ಪ್ರಾರಂಭವಾದುವು ಮತ್ತು ಇದೇ ಕಾರಣದಿಂದಾಗಿ, ಭ್ರಷ್ಟಾಚಾರದಲ್ಲಿ ಹೆಚ್ಚಳವಾಯಿತು.

### ಖ ) ವಿತ್ತೀಯ ಸಂಸ್ಥೆ [Financial Organization ]

ವಿತ್ತೀಯ ಸಂಸ್ಥೆಗಳು ಚಾಲನೆಗೆ ಬಂದ ನಂತರ ಪರಂಪಾರಗತ ಕೊಡುಕೊಳ್ಳುವಿಕೆಯ ವಹಿವಾಟು ಕಡಿಮೆಯಾಯಿತು. ಆದರೆ, ವಿತ್ತೀಯ ಸಂಸ್ಥೆಗಳು ಕೂಡ ಸಮಾಜಕ್ಕೆ ನಿರಾಳತೆಯನ್ನುಂಟು

(ಸಮಸ್ಯೆಗಳಿಂದ ಮುಕ್ತಿ ) ಮಾಡಲಿಲ್ಲ. ವಿತ್ತೀಯ ವಹಿವಾಟು ನಡೆಸುವ ವಿತ್ತೀಯ ಸಂಸ್ಥೆ 'ಬ್ಯಾಂಕ್' ನ ಹೆಸರಿನಿಂದ ಸ್ಥಾಪಿತವಾದುವು. ಮತ್ತು ಬಹಳ ವೇಗವಾಗಿ ವಿಶ್ವದಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಂಡವು. ಆದರೆ ಇದರಲ್ಲಿಯೂ ಖಾಸಗಿ ಕ್ಷೇತ್ರ, ಸಾರ್ವಜನಿಕ ಕ್ಷೇತ್ರ ಮತ್ತು ಸರಕಾರಿ ಹೂಡಿಕೆಯಲ್ಲಿ ತೆರೆಯಲ್ಪಟ್ಟ ಬ್ಯಾಂಕ್ ದೇಶ ಮತ್ತು ಸರಕಾರಿ ಹೂಡಿಕೆಯಲ್ಲಿ ತೆರೆಯಲ್ಪಟ್ಟ ಬ್ಯಾಂಕ್, ದೇಶ ಮತ್ತು ಜನತೆಗೆ ನಿರಾಳತೆಯನ್ನು ಕೊಡಬಹುದು. ಎಂದು ನಿರ್ಣಯಿಸುವಲ್ಲಿ ವಿತ್ತೀಯ ಕ್ಷೇತ್ರ ಇಂದು ಕೂಡ ಅಸಮಂಜಸ ಸ್ಥಿತಿಯಲ್ಲಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದ ವಿಕಾಸವಾಗಿದೆ ಮತ್ತು ಅಷ್ಟೇ ಭ್ರಷ್ಟ ನೀತಿಯೂ ವಿಕಸಿತವಾಗಿದೆ. ಇದೇ ರೀತಿಯಲ್ಲಿ ವಿಕಾಸೋನ್ಮುಖ ದೇಶಗಳಲ್ಲೂ ಬೇಂಕಿಂಗ್ ವಹಿವಾಟಿನಲ್ಲಿ ಅಭಿವೃದ್ಧಿಯಾಗಿದೆ. ಆದರೆ ಕೇವಲ ಬ್ಯಾಂಕುಗಳು ಮುಂದಿವೆ. ಜನತೆ ಬ್ಯಾಂಕಿನಿಂದ ಅಪೇಕ್ಷಿತ ಲಾಭವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ವಿಕಾಸೋನ್ಮುಖ ದೇಶಗಳಲ್ಲಿ ಪ್ರಚಲಿತವಿರುವ ಬ್ಯಾಂಕ್‌ನ ಬಡ್ಡಿಯ ಮೇಲೆ ಚಕ್ರ ಬಡ್ಡಿಯನ್ನು ಹೇರಿ ಸಾಲಗಾರನನ್ನು ಪೀಡಿಸಲಾಗುತ್ತಿದೆ.

ಇದೇ ರೀತಿ ವಿಮಾ ಕಂಪೆನಗಳಿಂದಲೂ, ಸಮಾಜದಲ್ಲಿ ಶೋಷಣೆಯಾದಾಗ ದೇಶದ ವಿಮಾ ಕಂಪೆನಿಯ ಸಂಬಂಧ ಇನ್ನೊಂದು ದೇಶದ ಕಂಪೆನಿಯೊಂದಿಗಿರುತ್ತದೆ. ಈ ರೀತಿಯಲ್ಲಿ ವಿತ್ತೀಯ ಕ್ಷೇತ್ರದಲ್ಲಿ ಆಗುವ ಪ್ರತ್ಯಕ್ಷ ಭ್ರಷ್ಟಾಚಾರದಿಂದ ದೇಶದ ಆರ್ಥಿಕ ಕ್ಷೇತ್ರವು ಕಂಗೆಡುತ್ತದೆ. ಹಾಗೆ ನೋಡಿದರೆ, ಹಲ ಕೆಲವೇ ದೇಶಗಳಲ್ಲಿ ಅಷ್ಟಿಷ್ಟು ಪ್ರಖ್ಯಾತಿ ಪಡೆದ ವಿತ್ತ ಕಂಪೆನಿಗಳಿವೆ ಮತ್ತು ಅವುಗಳ ಫಲಿತಾಂಶವು ಕೂಡ ಉತ್ತಮವಾಗಿಯೇ ಇದೆ, ಆದರೆ ಹೆಚ್ಚಿನ ವಿತ್ತ ಕಂಪೆನಿಗಳು ಉದ್ದೇಶ್ಯಕ್ಕನುಗುಣವಾಗಿ ನಡೆದುಕೊಳ್ಳುವುದಿಲ್ಲ.

**ಗ) ಮಾರುಕಟ್ಟೆ – ( Market )** 'ಇಂದಿನ ಅವಶ್ಯಕತೆ ಮಾರುಕಟ್ಟೆ ಮುಖವಾದ ಅರ್ಥ ತಂತ್ರವಾಗಿದೆ 'ಈ ಘೋಷಣೆಯಿಂದ ಮಾರುಕಟ್ಟೆಯ ಮಹತ್ವ ಹೆಚ್ಚಾಗಿದೆ. ವಿಕಾಸೋನ್ಮುಖ ದೇಶಗಳಲ್ಲಿ ಮಾರ್ಕೇಟ್ ಅನಿಯಂತ್ರಿತವಾಗಿ ಸಂಚಲಿಸುತ್ತವೆ. ವಿಕಸಿತ ದೇಶಗಳ ಮಾರ್ಕೆಟ್ ಪ್ರತಿಸ್ಪರ್ಧಾತ್ಮಕ ನೀತಿಗನುಸಾರವಾಗಿ ವಿಸ್ತಾರಗೊಳ್ಳುತ್ತದೆ. ಈ ನೀತಿಯನ್ನು ಬಡ ರಾಷ್ಟ್ರಗಳಲ್ಲೂ ಜಾರಿಗೊಳಿಸಿರುವುದರಿಂದ ಮಾರ್ಕೆಟ್ ನಿಯಂತ್ರಣವಿಲ್ಲದೆ ಸಂಚಲಿಸತೊಡಗಿವೆ. ಕಪ್ಪು ದಂಧೆ, ಲಾಭಕೋರತನ, ಮತ್ತು ಮಾಫಿಯಾ ತಂತ್ರಗಳು ಮಾರ್ಕೆಟನ್ನು ಸಂಚಾಲನೆಗೊಳಿಸುತ್ತಾ ತಮ್ಮ ಅಂಕುಶವನ್ನು ಸಾಧಿಸಿಕೊಳ್ಳುತ್ತವೆ. ಇದಕ್ಕಾಗಿಯೇ ಬಹುಶಃ ವಿಕಾಸೋನ್ಮುಖ ದೇಶಗಳ ಮಾರುಕಟ್ಟೆ ವ್ಯವಹಾರ ಸರಕಾರದ ನಿಯಂತ್ರಣದಲ್ಲಿರುವುದಿಲ್ಲ. ಇದು ಆರ್ಥಿಕ ಸಿದ್ಧಾಂತಕ್ಕೆ ವಿರುದ್ಧವಾದ ಸ್ಥಿತಿಯಾಗಿದೆ.

**ಘ) ಉದ್ಯೋಗ [Industry ]**

ಇತ್ತೀಚೆಗೆ ಗುಣಮಟ್ಟದ ವಸ್ತುಗಳ ಉತ್ಪಾದನೆ ಮಾಡುವ ಉದ್ಯೋಗಗಳು ಕಡಿಮೆಯಾಗಿವೆ ಮತ್ತು ಗುಣಮಟ್ಟವಿಲ್ಲದ ವಸ್ತು ಉತ್ಪಾದನೆ ಮಾಡುವ ಉದ್ಯಮಗಳ ಸಂಖ್ಯೆ ಹೆಚ್ಚಾಗಿದೆ. ಇದು ವಿಕಾಸೋನ್ಮುಖಗಳಿಗೆ ಅಭಿಷಾಪವಾಗಿದೆ. ನಿಶ್ಚಿತ ನಿಯಮಗಳಿದ್ದರೂ ಕೂಡ ಖಾಸಗಿ ಕ್ಷೇತ್ರಗಳಲ್ಲಿ ಗತಿಶೀಲ ಉದ್ಯಮಗಳನ್ನು ನಿಯಂತ್ರಿಸುವ ವ್ಯವಸ್ಥೆ ಇಲ್ಲದಿರುವ ಕಾರಣದಿಂದಾಗಿ ಉದ್ಯಮಗಳು ಉದ್ಯಮಗಳು ನಿಯಂತ್ರಣವಿಲ್ಲದ ಸ್ಥಿತಿಯಲ್ಲಿ ನಡೆಯುತ್ತಿವೆ. ಜೀವನವನ್ನು ರಕ್ಷಿಸುವ ಔಷಧಿಯಿಂದ ಹಿಡಿದು ದೈನಂದಿನ ಉಪಭೋಗದ ಸಾಮಗ್ರಿಗಳಲ್ಲಿಯೂ ಕಲಬೆರಕೆಯಾಗುತ್ತಿರುವ ಕಾರಣದಿಂದ ಜನರ ಬದುಕು ಅಪಾಯದಲ್ಲಿದೆ. ಬಡ ರಾಷ್ಟ್ರಗಳಲ್ಲಿ ವಾಸಿಸುವ ನಾಗರಿಕರಿಗೆ ಇದು ಅತ್ಯಂತ ದುಃಖದಾಯಕ ಸ್ಥಿತಿಯಾಗಿದೆ.

**ಙ) ಅಂತರಾಷ್ಟ್ರೀಯ ವಹಿವಾಟು [International Transaction ]**

ವರ್ತಮಾನ ಸಮಯವು ವಿಶ್ವದ ಎಲ್ಲಾ ದೇಶಗಳೊಂದಿಗೆ ಸುಮಧುರ ಸಂಬಂಧ ಸ್ಥಾಪಿಸಿ, ಅವಶ್ಯಕತೆಗನುಸಾರವಾಗಿ ವಹಿವಾಟು ನಡೆಸುವ ಸಮಯವಾಗಿದೆ. ಅಂತರಾಷ್ಟ್ರೀಯ ವಹಿವಾಟು ಆಗಿರುವುದರಿಂದ ಯಾವುದೇ ಒಂದು ದೇಶದ ಕಾನೂನಿನಿಂದ ವಹಿವಾಟು – ವ್ಯವಹಾರ ನಿಯಂತ್ರಣ ಮಾಡಲಾಗುವುದಿಲ್ಲ. ಇದಕ್ಕಾಗಿಯೇ ಇಂತಹ ವಹಿವಾಟು ಅಪಾಯಕರವೂ ಆಗಬಲ್ಲದು. ಇಂತಹ ಅಂತರಾಷ್ಟ್ರೀಯ ವಹಿವಾಟುಗಳಲ್ಲಿ ಬಹುಶಃ ಬಡ ದೇಶಗಳು ಹೊಡೆತ ತಿನ್ನುತ್ತವೆ ಮತ್ತು ನಷ್ಟವನ್ನನುಭವಿಸುತ್ತವೆ. ಇದರಿಂದಾಗಿ ಆರ್ಥಿಕ ನಷ್ಟ ಮಾತ್ರವಲ್ಲದೆ ದೇಶಕ್ಕೂ ಹಾನಿ ತಟ್ಟುತ್ತದೆ.


## 9) ರಾಜನೈತಿಕ ಕ್ಷೇತ್ರದಲ್ಲಿ ಆಗುವ ಭ್ರಷ್ಟಾಚಾರ – [Corruption in the Political Sector]

ರಾಜ್ಯದಲ್ಲಿ ಅಧಿಕಾರ ನಡೆಸುವುದಕ್ಕಾಗಿ ಒಂದು ನಿಶ್ಚಿತ ಸಿದ್ಧಾಂತದೊಂದಿಗೆ ರಾಜಕೀಯ ಪಕ್ಷಗಳ ಉದಯವಾಗುತ್ತದೆ. ಯಾವ ರಾಜಕೀಯ ಪಕ್ಷಗಳು ಶಾಸನ ಮಾಡಲಿರುತ್ತಾರೋ ಅವರು ಸ್ವಚ್ಛ, ಪವಿತ್ರ ಹಾಗೂ ವಿಶ್ವಾಸ ಹೊಂದಿದವರಾಗಿ ಬೇಕಾಗುತ್ತದೆ. ಇದೇ ಸಿದ್ಧಾಂತ. ಆದರೆ ವಿಕಾಸೋನ್ಮುಖ ದೇಶಗಳಲ್ಲಿ, ತಿರಸ್ಕೃತ, ಅಯೋಗ್ಯ ಮತ್ತು ಅಧಿಕಾರ ದಾಹದ ಮಹತ್ವಾಕಾಂಕ್ಷೆ ತುಂಬಿದ ಗುಂಪುಗಳೇ ಪಕ್ಷಗಳಂತೆ ಕಂಡುಬರುತ್ತವೆ. ಕೆಲವು ದೇಶಗಳಿವೆ, ಅಲ್ಲಿ ಸುಮಾರು ಐವತ್ತು ವರ್ಷಗಳ ಅಂತರದಲ್ಲಿ ಯಾರಾದರೊಬ್ಬ ರಾಜಕೀಯ ನೇತಾರನು ಜನ್ಮ ತಳೆದಿರುಬಹುದು. ಆದರೆ, ಹೆಚ್ಚಿನ ದೇಶಗಳಲ್ಲಿ ಬೇಜವಾಬ್ದಾರ ಮತ್ತು ಅತಿ ಮಹತ್ವಾಕಾಂಕ್ಷಿ ವ್ಯಕ್ತಿಗಳೇ ನೇತೃತ್ವವನ್ನು ಹೊಂದಿರುತ್ತಾರೆ. ಪ್ರಾರಂಭಿಕ ಸಮಯದಲ್ಲಿ ಪ್ರತಿಯೊಂದು ಪಕ್ಷಗಳೂ ಒಂದು ವಿಚಾರ ಹಾಗೂ ಸಿದ್ಧಾಂತದೊಂದಿಗೆ ಸ್ಥಾಪನೆಗೊಳ್ಳುತ್ತವೆ. ಆದರೆ, ಅಧಿಕಾರ ಪಡೆದುಕೊಂಡ ಮೇಲೆ, ಅಧಿಕಾರ ತಮ್ಮ ಕೈವಶವಾದಾಗ ಪರಿಸ್ಥಿತಿ ಬದಲಾಗುತ್ತದೆ. ಪ್ರಾರಂಭದಲ್ಲಿ ಕಾರ್ಯಕರ್ತರಿಂದ ಸಂಗ್ರಹಿಸಿದ ಅನುದಾನದಿಂದ ಪಕ್ಷದ ಸಂಚಾಲಕತ್ವ ನಡೆಯುತ್ತದೆ. ಅದೇ ಅಧಿಕಾರ ಸ್ಥಾನ ತಲುಪಿದ ಮೇಲೆ, ಆ ಅನುದಾನ ನಂತುಹೋಗುತ್ತದೆ. ಏಕೆಂದರೆ, ತಮ್ಮ ಪಕ್ಷ ಅಧಿಕಾರ ಬಂದ ಮೇಲೆ, ಆ ಕಾರ್ಯಕರ್ತರಲ್ಲಿ ತಮಗೂ ಪ್ರತಿದಾನ ಸಿಗಬಹುದೆಂಬ ಆಸೆ, ಭರವಸೆ ಜಾಗೃತವಾಗುತ್ತದೆ. ಆದರೆ ಲಕ್ಷಾಂತರ ಕಾರ್ಯಕರ್ತರಲ್ಲಿ ಕೆಲವರು ಮಾತ್ರ ಲಾಭವನ್ನು ಪಡೆದುಕೊಳ್ಳುತ್ತಾರೆ. ಇಂತಹ ಕಾರಣದಿಂದಾಗಿ ಇನ್ನಿತರ ಕಾರ್ಯಕರ್ತರು ಮುನಿಸಿಕೊಳ್ಳುತ್ತಾರೆ. ಈ ಸ್ಥಿತಿಯಲ್ಲಿ ರಾಜಕೀಯ ಪಕ್ಷದ ಮೇಲೆ ಆರ್ಥಿಕ ಹೊರೆ ಹೆಚ್ಚಾಗುತ್ತದೆ. ರಾಜಕೀಯ ಪಕ್ಷಗಳ ಆರ್ಥಿಕ ಸಂಗ್ರಹಣೆಗೆ ಅನೇಕ ವಿಧಾನಗಳಿರುತ್ತವೆ. ಉದಾಹರಣೆಗೆ –ಒತ್ತಾಯ ಪೂರ್ವಕ ಚಂದಾವಸೂಲಿ ಮಾಡುವುದು, ವಿದೇಶಿಯರೊಂದಿಗೆ ಸೇರಿ, ಹಣವನ್ನು ಅನುದಾನವಾಗಿ ತೆಗೆದುಕೊಳ್ಳುವುದು, ರಾಷ್ಟ್ರೀಯ ಸಂಪತ್ತಿನ ದುರುಪಯೋಗ ಮಾಡುವ, ಅಕ್ರಮವಾಗಿ ಸಂಪತ್ತನ್ನು ಲೀಜ್‌ಗೆ ಕೊಡುವುದು ಈ ಎಲ್ಲಾ ಕುಕಾರ್ಯಗಳಿಂದ ರಾಜಕೀಯ ಪಕ್ಷಗಳು ಶ್ರೀಮಂತವಾಗುತ್ತವೆ ಮತ್ತು ಜನತೆ (ಪ್ರಜೆಗಳು ) ಬಡವರಾಗುತ್ತಾರೆ.

ರಾಜಕೀಯ ಪಕ್ಷಗಳಿಗೆ ಹೆಚ್ಚು ಖರ್ಚಿನ ಅವಶ್ಯಕತೆ ಇರುತ್ತದೆ. ಪೂರ್ಣಕಾಲಿಕ ಕಾರ್ಯಕರ್ತರನ್ನು ವೇತನ ಕೊಟ್ಟು ಇರಿಸಿಕೊಳ್ಳಬೇಕಾಗುತ್ತದೆ. ತಮ್ಮ ವಿಚಾರಗಳನ್ನು

ಜನತೆಗೆ ತಲುಪಿಸುವಲ್ಲಿ ಸಂಚಾರ ಮಾಧ್ಯಮದ ಪ್ರಯೋಗ ಮಾಡಬೇಕಾಗುತ್ತದೆ. ಪ್ರಚಾರ – ಪ್ರಸಾರದ ಸಾಮಗ್ರಿಗಳೊಂದಿಗೆ ಜನರನ್ನು ಆಕರ್ಷಿಸುವ ಉಪಾಯಗಳೊಡನೆ ಜನರ ಸಮಕ್ಷಮಕ್ಕೆ ಹೋಗಬೇಕಾಗುತ್ತದೆ. ಇಷ್ಟೇ ಅಲ್ಲದೆ, ಚುನಾವಣೆಗೆ ಹೆಚ್ಚು ಹಣ ಖರ್ಚು ಮಾಡಿ ಮತಗಳಿಸುವುದು ಇವರ ನೀತಿಯಾಗಿರುತ್ತದೆ. ಇವೆಲ್ಲಾ ವಿಕಾಸೋನ್ಮುಖ ದೇಶಗಳಲ್ಲಿ ಸಂಚಾಲಿತ ರಾಜಕೀಯ ಪಕ್ಷಗಳಿಂದ ಮಾಡಲ್ಪಡುವ ಅನಿವಾರ್ಯ ಕಾರ್ಯಗಳಾಗಿವೆ. ಈ ಎಲ್ಲಾ ಕಾರ್ಯ ಕಲಾಪಗಳು ಅಪರಾಧಗಳಿಗಿಂತ ಹೆಚ್ಚಾಗಿ, ಭ್ರಷ್ಟಾಚಾರದಲ್ಲಿ ಸೇರಿಕೊಂಡಿವೆ.

ಭ್ರಷ್ಟಾಚಾರದ ಮಟ್ಟ (ಸ್ತರ )ವನ್ನು ನಿರ್ಧರಿಸುವ, ಗ್ರಾಫ್ ಈ ಕೆಳಗೆ ಕೊಟ್ಟಿರುವ ಚಿತ್ರದಿಂದ ತಿಳಿಯಬಹುದಾಗಿದೆ.



ತಳಮಟ್ಟದಿಂದ ವಿಕಾಸವಾಗುವ ಭ್ರಷ್ಟಾಚಾರ ಒಂದರಿಂದ ಕ್ರಮಶಃ ಅಧಿಕವಾಗುತ್ತಾ ಒಂಭತ್ತಕ್ಕೆ ತಲುಪಿ, ಇಳಿಯುತ್ತಾದರೂ ಐದರ ಸಂಖ್ಯೆಯ ಕೇಂದ್ರಿತ ನೆಲೆಯಲ್ಲಿ ನಿರ್ವಹಿಸುವುದನ್ನು ಪ್ರಮಾಣೀಕರಿಸುತ್ತದೆ.

ಸಂಖ್ಯೆ ಐದರ ಅರ್ಥ :– ಸಂಸ್ಥಾಗತ ರೂಪದಲ್ಲಿ ಆಗುವ ಭ್ರಷ್ಟಾಚಾರ, ವಾಸ್ತವಿಕವಾಗಿ, ಭ್ರಷ್ಟಾಚಾರದ ಎಲ್ಲಾ ಮೂಲಗಳ ನಿರ್ಮೂಲನೆ, ದಮನ ಮತ್ತು ನಿಯಂತ್ರಣವನ್ನೂ ಮಾಡಬಹುದಾಗಿದೆ. ಆದರೆ, ಸಂಸ್ಥಾಗತವಾಗಿ ಹರಡಿರುವ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದು, ದಮನ ಮಾಡುವುದು ಅಥವಾ ನಿಯಂತ್ರಿಸುವುದು ಕಷ್ಟವಾಗಿದೆ. ಏಕೆಂದರೆ, ಇವುಗಳು ಆದ್ಯತೆ ಪಡೆದುಕೊಂಡಿರುತ್ತವೆ. ಭ್ರಷ್ಟಾಚಾರ ವಿರೋಧಿಶಾಸ್ತ್ರದ ಉದ್ದೇಶಿತ ಗುರಿಯೇ ಸಂಸ್ಥಾಗತ ರೂಪದಲ್ಲಿ ಹರಡಿರುವ ಭ್ರಷ್ಟಾಚಾರ ನಿರ್ಮೂಲನೆ ಮಾಡುವುದಾಗಿದೆ.

***

## 18. ಭ್ರಷ್ಟಾಚಾರದ ಪೃಷ್ಠ ಪೋಷಕ [ಹಿಂಬದಿಯಿಂದ ಪೋಷಿಸುವವರು] ತತ್ವ [Back Force of Corruption ]

ಭ್ರಷ್ಟಾಚಾರ ತಾನಾಗಿಯೇ ವಿಕಸಿತವಾಗುವುದಿಲ್ಲ. ಇದನ್ನು ವಿಕಸಿತಗೊಳಿಸುವಲ್ಲಿ ರಾಜ್ಯ ವ್ಯವಸ್ಥೆಯ ವಿಭಿನ್ನ ಮೂಲಗಳಲ್ಲಿ ನಡೆಯುವ ಕ್ರಿಯಾ ಕಲಾಪಗಳಿವೆ. ಭ್ರಷ್ಟಾಚಾರ ಹೆಚ್ಚಿಸುವ ತತ್ವವನ್ನು ತಿಳಿದೋ ತಿಳಿಯದೆಯೋ, ಸಮರ್ಥಿಸಿ, ಅಥವಾ ಒತ್ತಡ ಹಾಕಿ, ಸ್ವಾರ್ಥ ಸಾಧನೆ, ಅವಕಾಶ ಪ್ರಾಪ್ತಿ ಮಾಡಿಕೊಳ್ಳುವ ಕಾರ್ಯ ಮಾಡುತ್ತಾರೆ. ಇದರಿಂದ ಭ್ರಷ್ಟಾಚಾರ ಬೆಳೆಯುತ್ತದೆ. ಇದೇ ತತ್ವವನ್ನು ಇಲ್ಲಿ ಪೃಷ್ಠ ಪೋಷಕ ರೂಪದಲ್ಲಿ ವ್ಯಾಖ್ಯಾನಿಸಲಾಗಿದೆ. ವಿಶ್ವದ ಯಾವುದೇ ದೇಶದಲ್ಲಾದರೂ, ರಾಜ್ಯ ಸಂಚಾಲಕತ್ವ ಹಾಗೂ ರಾಜ್ಯದ ವಿಕಾಸಕ್ಕಾಗಿ, ಕ್ರಿಯಾಶೀಲವಾಗಿರುವ ವಿಶೇಷ ತತ್ವಗಳು ಅಸ್ತಿತ್ವದಲ್ಲಿರುತ್ತವೆ. ಈ ತತ್ವಗಳೇ ರಾಜ್ಯದ ಉನ್ನತಿ, ಅಥವಾ ಅವನತಿಯ ಹೊಣೆಗಾರವಾಗುತ್ತವೆ. ಈ ಜವಾಬ್ದಾರಿಯುತ ತತ್ವಗಳು, ತಮ್ಮ ಹೊಣೆಯನ್ನು ಸ್ವೀಕರಿಸಿ, ಪಾಲಿಸದಿದ್ದಾಗ ಮತ್ತು ಕೇವಲ ತಮ್ಮ ಸ್ವಾರ್ಥವನ್ನೇ ನೋಡುತ್ತಾರೆಯೋ, ಆಗ ಆ ದೇಶದ ಸಮಾಜ ಮತ್ತು ರಾಜ್ಯವ್ಯವಸ್ಥೆಯನ್ನು ಭ್ರಷ್ಟಾಚಾರ ಆವರಿಸುತ್ತದೆ. ಈ ತತ್ವಗಳು ಸ್ವತಃ ತಾವೇ ಭ್ರಷ್ಟಾಚಾರ ಹರಡುವುದಿಲ್ಲ. ಆದರೆ ಭ್ರಷ್ಟಾಚಾರದ ಪೃಷ್ಠಭೂಮಿಯನ್ನು ಸಿದ್ಧಗೊಳಿಸುತ್ತಾರೆ. ಮತ್ತು ಹರಡುವಲ್ಲಿ ಸಹಾಯ ಮಾಡುತ್ತವೆ. ಇದರ ವಿವರಣೆ ಈ ಕೆಳಗಿನಂತಿದೆ. –

1) ಅಸ್ಥಿರ ಸರ್ಕಾರ,

2) ನೀತಿ ನಿಯಮಗಳ ನಿರ್ಮಾಣ ಕ್ಷೇತ್ರ,

3) ವಿಕಾಸ ಕಾರ್ಯ ಕ್ಷೇತ್ರ,

4) ವ್ಯಾಪಾರಿಕ ಕ್ಷೇತ್ರ,

5) ಎನ್.ಜಿ.ಓ ಸಮೂಹ,

6) ಸಂಚಾರಕ್ಷೇತ್ರ,

7) ರಾಜನೈತಿಕ ಕ್ಷೇತ್ರಗಳ ಪಕ್ಷ.

**01. ಅಸ್ಥಿರ ಸರಕಾರ :– [ Unstable Government ]**

ವಿಕಾಸೋನ್ಮುಖ ದೇಶದ ಸರಕಾರವು ಸಾಮಾನ್ಯವಾಗಿ, ಅಸ್ಥಿರವಾಗುತ್ತವೆ. ಯಾವ ದೇಶದಲ್ಲಿ ಸರಕಾರ ಅಸ್ಥಿರವಾಗಿರುತ್ತದೋ, ಆ ದೇಶದಲ್ಲಿ ಭ್ರಷ್ಟಾಚಾರದ ಪರಿಣಾಮ ಹೆಚ್ಚಾಗುತ್ತದೆ. ಮತ್ತು ಎಲ್ಲಿ ಭ್ರಷ್ಟಾಚಾರವಿರುವುದೋ ಅಲ್ಲಿ ಸ್ಥಿರ ಸರಕಾರ ಇರಲಾರದು. ಭ್ರಷ್ಟಾಚಾರ ಮತ್ತು ಅಸ್ಥಿರ ಸರಕಾರ ಒಂದು ಇನ್ನೊಂದಕ್ಕೆ ಪರಿಪೂರಕ ರೀತಿಯಲ್ಲಿ ಸ್ಥಾಪಿತವಾಗುತ್ತವೆ.

**02. ನೀತಿ ನಿಯಮ ನಿರ್ಮಾಣ ಕ್ಷೇತ್ರ [Policy making Sector ]**

ರಾಜ್ಯ ಶಾಸನ ಮಾಡಲು, ನೀತಿ ಹಾಗೂ ನಿಯಮ ನ್ಯಾಯ ಸಮ್ಮತವಾಗಿ ನಿರ್ಮಾಣವಾಗಬೇಕು. ಯಾವ ನೀತಿ ನಿಯಮಗಳು ನ್ಯಾಯಸಮ್ಮತವಾಗಿರುವುದಿಲ್ಲವೋ, ಅದು ಹೆಚ್ಚು ಸಮಯದವರೆಗೆ ಬಾಳುವುದಿಲ್ಲ. ಮತ್ತು ಒಂದು ವೇಳೆ ಸರಕಾರವಿದ್ದರೂ ದೇಶ, ರಾಜ್ಯ ವ್ಯವಸ್ಥೆ,ಮತ್ತು ಜನರಿಗೆ ಹಾನಿಯನ್ನೇ ಉಂಟುಮಾಡುತ್ತದೆ. ಈ ಕಾರಣಕ್ಕಾಗಿ, ರಾಜ್ಯದ ಮೂರನೇ ಅಂಗವಾಗಿ, ಸ್ಥಾಪಿತ ಶಾಸನದಿಂದ ವಿಧಿ ನಿಯಮಗಳ ನಿರ್ಮಾಣ ಮಾಡುವುದರಿಂದ ದೇಶ, ರಾಜ್ಯ ವ್ಯವಸ್ಥೆ ಮತ್ತು ಜನತೆಯ ಹಿತದೃಷ್ಟಿಯಿಂದ ನೀತಿಗಳನ್ನು ನಿರ್ಮಿಸಬೇಕು. ಇದೇ ರೀತಿ ನೀತಿ ನಿರ್ಮಾಣ ಕರ್ತಾ (ಮಾಡುವವ) ಕಾರ್ಯಪಾಲಿಕೆಯನ್ನು ಕೂಡ, ದೇಶ ಮತ್ತು ಜನತೆಯ ಹಿತವನ್ನೊಳಗೊಂಡಂತೆ ಕ್ರಿಯಾಶೀಲವಾಗುವ ನೀತಿಯ ನಿರ್ಮಾಣ ಮಾಡಬೇಕಾಗುತ್ತದೆ. ನಿಯಮ, ನೀತಿ, ನಿರ್ಮಾಣ ಮಾಡುವ ಅಧಿಕಾರ ಪಡೆಯುವ ಎಲ್ಲಾ ಸಮುದಾಯ ದೇಶ ಮತ್ತು ಜನತೆಯ ಸರ್ವತೋಮುಖ ಹಿತವನ್ನುಂಟು ಮಾಡುವ ನೀತಿ ನಿಯಮಗಳ ನಿರ್ಮಾಣ ಮಾಡಿ, ಅದನ್ನು ವ್ಯವಸ್ಥೆಯಲ್ಲಿ ಜಾರಿಗೊಳ್ಳುವ ಸ್ಥಿತಿಯು, ನಿರ್ಮಾಣ ಮಾಡಬೇಕು. ಇಲ್ಲವಾದಲ್ಲಿ ಈ ಸಮುದಾಯಗಳು ಭ್ರಷ್ಟಾಚಾರವನ್ನು ಹೆಚ್ಚಿಸುವ ಪೃಷ್ಠಪೋಷಕಗಳಾಗುತ್ತಾರೆ. ವಿಕಾಸೋನ್ಮುಖ ದೇಶಗಳಲ್ಲಿ ನೀತಿ

ನಿಯಮಗಳನ್ನು ನಿರ್ಮಾಣ ಮಾಡುವ ಸಮುದಾಯಗಳಿಗೇ, ಭ್ರಷ್ಟಾಚಾರ ಜನ್ಯ, ಕಾರ್ಯ ಸಂಸ್ಥಾಗತವಾಗಿ, ವಿಕಾಸ ಮಾಡುವುದಕ್ಕಾಗಿ, ವ್ಯಕ್ತಿ ಅಥವಾ ಸಮುದಾಯ ಸಂಬಂಧವಾಗಿರುತ್ತವೆ. ಇಂತಹ ಸಮುದಾಯಗಳು ಭ್ರಷ್ಟಾಚಾರಕ್ಕೆ ರಕ್ಷಣೆ ಕೊಡುವುದಕ್ಕಾಗಿ, ನಿಯುವುಗಳನ್ನು ನ್ಯಾಯೋನ್ಮುಖಗೊಳಿಸುವುದಕ್ಕೆ ಪ್ರಯತ್ನಶೀಲವಾಗಿರುತ್ತವೆ. ಏಕೆಂದರೆ, ಈ ಸಮುದಾಯಗಳ ಸಂಬಂಧ ಪ್ರತ್ಯಕ್ಷವಾಗಿ ರಾಜಕೀಯ ಪಕ್ಷಗಳೊಂದಿಗಿರುತ್ತದೆ. ಚುನಾಯಿತ ಶಾಸಕಿಯ ಸಭೆ ಅಥವಾ ಸರಕಾರದಲ್ಲಿ ಸಮ್ಮಿಲಿತ ಮುಖಂಡರು, ಈ ಎಲ್ಲಾ ರಾಜಕೀಯ ಶಾಸನ ಯಂತ್ರ (ಆಡಳಿತ ಯಂತ್ರ )ದೊಂದಿಗೆ ಪ್ರತ್ಯಕ್ಷವಾಗಿ ಸಂಬಂಧವನ್ನು ಹೊಂದಿರುತ್ತವೆ.

## 03. ವಿಕಾಸ ಕಾರ್ಯ ಕ್ಷೇತ್ರ [Developement Sector ]

ವಿಕಾಸ ಕಾರ್ಯ ಕ್ಷೇತ್ರವೆಂದರೆ, ದೇಶದೊಳಗಿನ ವಿಕಾಸದ ನಿರ್ಮಾಣ ಕಾರ್ಯದಲ್ಲಿ ಕ್ರಿಯಾಶೀಲ ಕ್ಷೇತ್ರವಾಗಿದೆ. ವಿಕಾಸ ಕಾರ್ಯ ಎಂಬುದರ ಅಭಿಪ್ರಾಯ – ಗ್ರಾಮ ಮಟ್ಟದಲ್ಲಿ ನಿರ್ಮಾಣವಾಗುವ ಕೃಷಿಜನ್ಯ ಆವಶ್ಯಕ ಭೌತಿಕ ಪೂರ್ವಾಧಾರದಿಂದ ರಾಷ್ಟ್ರೀಯ ಮಟ್ಟದವರೆಗಿನ ದೇಶದ ಸಂಪತ್ತಾದ, ಖನಿಜ ಮತ್ತು ಜಲವಿದ್ಯುತ್ತಿನ ವಿಕಾಸವನ್ನು ಪಡೆಯಬಹುದಾಗಿದೆ. ಚಿಕ್ಕ ಪುಟ್ಟ ವಿಕಾಸ ಕಾರ್ಯದಲ್ಲಿ ಸ್ಥಾನೀಯ (ಸ್ಥಳೀಯ ) ರಾಜಕೀಯ ಪಕ್ಷಗಳೊಂದಿಗೆ ಸಂಬಂಧವಿರಿಸಿಕೊಂಡ ವ್ಯಕ್ತಿಗಳು ಹಸ್ತಕ್ಷೇಪ ಮಾಡುತ್ತಾರೆ. ಅವರೇ , ಮುಂದೆ ದೊಡ್ಡ ರಾಷ್ಟ್ರೀಯ ಯೋಜನೆಗಳಲ್ಲಿ ಭ್ರಷ್ಟಾಚಾರ ಜನ್ಯ ಕಾರ್ಯಗಳನ್ನು ಪೂರ್ಣ ರೂಪವಾಗಿ ಕಾರ್ಯಶೀಲಗೊಳಿಸುತ್ತಾರೆ, ವಿಕಾಸೋನ್ಮುಖ ದೇಶಗಳಂತೆಯೇ ವಿಕಸಿತ ದೇಶಗಳಲ್ಲಿಯೂ ಕಮಿಷನ್‌ನ ಆಟ ನಡೆಯುತ್ತದೆ. ಇದೇ ಕಾರಣದಿಂದಾಗಿ, ನಿರ್ಮಾಣ ಕಾರ್ಯಗಳಲ್ಲಿ ಭ್ರಷ್ಟಾಚಾರವಾದ ಮೇಲೂ ಕಾರ್ಯ ಸಂಪನ್ನತೆಯಲ್ಲಿ, ಕಮಿಷನ್ನಿನ ವ್ಯವಹಾರ ಅನಿವಾರ್ಯವಾಗುವ ಕಾರ್ಯಗಳಿಂದ ವಿಕಾಸದ ನಿರ್ಮಾಣದಲ್ಲಿ ಪ್ರತ್ಯಕ್ಷ ರೂಪದಲ್ಲೇ ಭ್ರಷ್ಟಾಚಾರ ನಡೆಯುತ್ತದೆ. ವಿಕಾಸದ ಕಾರ್ಯ ಕ್ಷೇತ್ರದಲ್ಲಿ ಭ್ರಷ್ಟಾಚಾರವನ್ನು ಮುಂದುವರೆಸುವವರು, ಪೃಷ್ಠಪೋಷಕರಾಗಿ ಸ್ಥಾಪಿತವಾಗುತ್ತಾರೆ.

## 04. ವ್ಯಾಪಾರಿಕ ಕ್ಷೇತ್ರ – (Commercial Sector )

ವ್ಯಾಪಾರಿ ಕ್ಷೇತ್ರವೇ ಭ್ರಷ್ಟಾಚಾರದ ಮೂಲ ಸ್ರೋತವಾಗಿದೆ. ವ್ಯಾಪಾರಿ ಕ್ಷೇತ್ರವನ್ನು ಆಂತರಿಕ ಮತ್ತು ವಿದೇಶಿಯ ವ್ಯಾಪಾರ. ಇವನ್ನು ಎರಡು ಭಾಗಗಳಲ್ಲಿ ವಿಂಗಡಿಸಿ, ನೋಡಬಹುದಾಗಿದೆ. ಇದರ ಹೊರತು ಯಾರೇ ಲಾಭ ಗಳಿಸುವವರ

ವ್ಯವಸಾಯವನ್ನು ವ್ಯಾಪಾರಿ ಕ್ಷೇತ್ರದಲ್ಲಿಟ್ಟು ಕೊಡಬೇಕಾಗಬಹುದು. ವಾಣಿಜ್ಯ ಕ್ಷೇತ್ರ , ಹೇಗೆಂದರೆ – ಸಾಮಾನಿನ ಬೇಡಿಕೆ ಹಾಗೂ ಬೇಡಿಕೆ ಪೂರ್ಣಗೊಳಿಸುವ ಆಧಾರದಲ್ಲಿ ಮಾರುಕಟ್ಟೆ ವ್ಯವಸ್ಥೆ ಮಾಡುವ ಹಾಗೂ ಖರೀದಿ ಮೌಲ್ಯದ ಆಧಾರದಲ್ಲಿ ಮಾರಾಟ ಮೌಲ್ಯವನ್ನು ಸ್ಥಿರಗೊಳಿಸುವುದು, ಸಾಮಾನಿನ ಖರೀದಿ ಮೌಲ್ಯದ ಆಧಾರದಲ್ಲಿ ಮಾರಾಟ ಮೌಲ್ಯವನ್ನು ಸ್ಥಿರಗೊಳಿಸುವುದು. ಸಾಮಾನಿನ ಖರೀದಿ –ಮಾರಾಟ ಮಾಡುವ ಕ್ಷೇತ್ರದಿಂದ ಹಿಡಿದು, ಸೇವಾಕಾರ್ಯ ಮಾಡುವ ಡಾಕ್ಟರ್, ಎಂಜಿನಿಯರ್, ವಕೀಲ, ಶಿಕ್ಷಕ ಹೀಗೆ ಯಾವುದೇ ಕ್ಷೇತ್ರದಲ್ಲಿ (ವಿಷಯದಲ್ಲಿ) ಸೇವೆ ಮಾಡುವ ಅಥವಾ ಸಮಾಲೋಚನೆ – ಸಲಹೆ ನೀಡುವ ಕ್ಷೇತ್ರವನ್ನು ವ್ಯಾಪಾರಿಕ್ಷೇತ್ರವೆಂದು ಮಾನ್ಯ ಮಾಡಬೇಕಾದೀತು. ವ್ಯಾಪಾರಿ ಕ್ಷೇತ್ರದಲ್ಲಿ ಲಾಭ ಗಳಿಸುವವರ ಕ್ಷೇತ್ರವಾಗಿದೆ. ಈ ಲಾಭ ಗಳಿಸುವವರ ಸಿದ್ಧಾಂತವೇ ಭ್ರಷ್ಟಾಚಾರದ ಬೆಳವಣಿಗೆಯ ಮೂಲ ಕೇಂದ್ರವಾಗಿದೆ. ಏಕೆಂದರೆ, ಅತಿಯಾದ ಲಾಭ ಗಳಿಸುವಿಕೆಯಿಂದಾಗಿ, ನೀತಿ ಹಾಗೂ ನೈತಿಕ ಜವಾಬ್ದಾರಿಯ ವಿಚಾರಗಳು ಹಿಂದೆ ಬೀಳುತ್ತವೆ. ಯಾವಾಗ ನೀತಿ ಹಾಗೂ ನೈತಿಕತೆ ಹಿಂದೆ ಬೀಳುತ್ತವೋ, ಆಗ ಅನೈತಿಕ ವ್ಯವಹಾರಗಳು ಶುರುವಾಗುತ್ತವೆ. ಈ ಕಾರಣದಿಂದಾಗಿ ಭ್ರಷ್ಟಾಚಾರ ಜನ್ಯ ಕಾರ್ಯಗಳು ಪ್ರಾರಂಭವಾಗುತ್ತವೆ. ಸಾಮಾನಿನ ಕೊಡು – ಕೊಳ್ಳುವಿಕೆ ಇರಲಿ, ಸೇವೆಯ ಆದಾನ – ಪ್ರದಾನವಿರಲಿ, ವ್ಯವಸಾಯಗತ ರೂಪದಲ್ಲಿ ಕಾರ್ಯಗಳಾಗುವುದರಿಂದ ಅಲ್ಲಿ ಹಣ ಗಳಿಕೆಯ ಪ್ರಾಧಾನ್ಯವಿರುತ್ತದೆ ಮತ್ತು ಇದೇ ಕಾರಣದಿಂದಾಗಿ ಅಲ್ಲಿ ಜವಾಬ್ದಾರಿಗಳು ಕಡಿಮೆ ಹಾಗೂ ಭಷ್ಟಾಚಾರಜನ್ಯ ಕಾರ್ಯಗಳು ಪ್ರೋತ್ಸಾಹಿಸಲ್ಪಡುತ್ತವೆ.

### 05) ಸರಕಾರೇತರ ಸಮುದಾಯ (N.G.O (Non Profit Organization)

ಯಾವ ಕೆಲಸವನ್ನು ಸರಕಾರ ಮಾಡಬೇಕೋ, ಅದು ಮಾಡದಿದ್ದಾಗ ಸಮಾಜದಲ್ಲಿರುವ ವ್ಯಕ್ತಿಗಳು, ಸಮೂಹದಲ್ಲಿ ವಿಭಜಿತರಾಗಿ, ದೇಶ ಹಾಗೂ ಸಮಾಜದ ಅವಶ್ಯಕತೆಗನುಸಾರವಾಗಿ ಮಾಡಬೇಕಾಗಿರುವ ಕಾರ್ಯವನ್ನು ಮಾಡುತ್ತವೆ. ಇವುಗಳನ್ನು ಸರಕಾರೇತರ ಸಮುದಾಯಗಳೆಂದು ಪರಿಗಣಿಸಬೇಕು. ಈ ಸರಕಾರೇತರ ಸಮುದಾಯದ ವಿಕಾಸ ಮತ್ತು ವಿಸ್ತಾರ ವಿಕಸಿತ ದೇಶಗಳಲ್ಲಿ ಪ್ರಾರಂಭವಾದ ಮೇಲೆ, ಈಗ ವರ್ತಮಾನದಲ್ಲಿ ವಿಕಾಸೋನ್ಮುಖ ದೇಶಗಳಲ್ಲಿ, ಪ್ರಾರಂಭವಾದ ಮೇಲೆ, ಈಗ ಹಾಗೂ ವಿಕಾಸವಾಗುವ ಅವಕಾಶಗಳನ್ನು ಪಡೆದುಕೊಳ್ಳುತ್ತಿವೆ. ವಿಕಸಿತ ದೇಶಗಳಲ್ಲಿರುವ ಇಂತಹ ಸಂಸ್ಥೆಗಳು ವಿಕಾಸೋನ್ಮುಖ

ದೇಶಗಳಲ್ಲಿ ಹಸ್ತಕ್ಷೇಪ ಮಾಡುತ್ತವೆ. ಈ ಕಾರಣದಿಂದಾಗಿ, ವಿಕಾಸೋನ್ಮುಖ ದೇಶಗಳು, ಸರಕಾರೇತರ ಸಮುದಾಯಗಳಿಂದ ಕೆಲಸ ಮಾಡಿಸಿ, ತೊಂದರೆಯನ್ನು ಅನುಭವಿಸುತ್ತವೆ. ವಿಕಾಸೋನ್ಮುಖ ದೇಶದಲ್ಲಿ ನಡೆಸುತ್ತಿರುವ ಸರಕಾರೇತರ ಸಂಸ್ಥೆ ಪ್ರತ್ಯಕ್ಷ ಯಾ ಪರೋಕ್ಷವಾಗಿ, ಅಂತಾರಾಷ್ಟ್ರೀಯ ಸರಕಾರೇತರ ಸಂಸ್ಥೆಗಳೊಂದಿಗೆ ಸಂಬದ್ಧವಾಗಿರುವ ಕಾರಣವೂ ಕೂಡ ಭ್ರಷ್ಟಾಚಾರದ ಕಾರ್ಯವು ತೀವ್ರಗತಿಯಿಂದ ಬೆಳೆಯುತ್ತಾ ಹೋಗುತ್ತಿದೆ. ವಿಕಾಸೋನ್ಮುಖ ದೇಶಗಳಲ್ಲಿ ಗತಿಶೀಲವಾಗುವ ಕಾರಣ, ಸರಕಾರೇತರ ಸಂಸ್ಥೆಗಳ ಕ್ರಿಯಾ ಕಲಾಪದ ಕಾರಣದಿಂದಾಗಿಯೂ, ಭ್ರಷ್ಟಾಚಾರದ ವಿಕಾಸವಾಗುತ್ತದೆ. ಇದನ್ನು ಮಾನ್ಯ ಮಾಡಬಹುದಾಗಿದೆ. ಅಂತಾರಾಷ್ಟ್ರೀಯ ಸಂಸ್ಥೆಯೊಂದಿಗೆ ಬಂಧಿತವಾಗಿ ನಡೆಸುವ ಸಂಸ್ಥೆಗಳು ತಮ್ಮ ತಮ್ಮ ಸಂಸ್ಕೃತಿ, ಇತಿಹಾಸ ಮತ್ತು ಸಾಮಾಜಿಕ ವ್ಯವಹಾರ ಮತ್ತು ಸ್ವಾರ್ಥವನ್ನು ಸರ್ವೋಪರಿಯಾಗಿಟ್ಟು ಮುಂದುವರೆಯುತ್ತವೆ. ಇವರೆಲ್ಲಾ ತಮ್ಮ ವಿಷಯ ಮತ್ತು ವಸ್ತುವನ್ನು ಬಡದೇಶಗಳಲ್ಲಿ ಜಾರಿಗೊಳಿಸುವುದಕ್ಕಾಗಿ, ಯೋಜನಾಬದ್ಧವಾಗಿ ಮುಂದುವರಿಯುತ್ತವೆ. ಬಡದೇಶಗಳ ದೊಡ್ಡ ವ್ಯಕ್ತಿಗಳನ್ನು ಖರೀದಿ ಮಾಡಿ, ತಮ್ಮ ಯೋಜನೆಗಳನ್ನು ಸಫಲಗೊಳಿಸಿಕೊಳ್ಳುಲ್ಲಿ ನಿರತರಾಗಿರುತ್ತಾರೆ. ಬಡ ದೇಶದ ಹಿತದ ಒಳ್ಳೆಯ ಕೆಲಸಗಳು ಕಡಿಮೆಯಾಗುತ್ತವೆ ಮತ್ತು ಶ್ರೀಮಂತ ದೇಶದ ಸ್ವಾರ್ಥ ಸಿದ್ಧವಾಗುವ ಯೋಜನೆಗಳು ಹೆಚ್ಚಾಗುತ್ತವೆ. ಇದಕ್ಕಾಗಿಯೇ ಸರಕಾರೇತರ ಸಂಸ್ಥೆಗಳು ಬಡ ದೇಶಗಳಿಗೆ ಹಿತವನ್ನುಂಟುಮಾಡುವ ಒಳ್ಳೆಯ ಕೆಲಸವನ್ನು ಮಾಡಲು ಸಾಧ್ಯವಾಗುವುದಿಲ್ಲ. ಮತ್ತು ಇದರ ಮೂಲ ಕಾರಣ ಶಿಕ್ಷಣದ ಕೊರತೆ ಮತ್ತು ಬಡತನ. ಅಂತರಾಷ್ಟ್ರೀಯ ಸಂಬಂಧದ ಆಧಾರದಲ್ಲಿ ಬಡದೇಶದಲ್ಲಿ ತಯಾರಾದ ವಸ್ತುಗಳಿಂದ ಸರಕಾರೇತರ ಸಂಸ್ಥೆಗಳ ಮೇಲೆ ಅವಲಂಬನೆ ಮಾಡುವುದಕ್ಕಾಗಿ, ಭ್ರಷ್ಟಾಚಾರಕ್ಕೆ ಉತ್ತೇಜನ ಸಿಗುತ್ತದೆ.

## 06.) ಸಂಚಾರ ಕ್ಷೇತ್ರ – [Communication Sector ]

ಸಂಚಾರದ ವಿಕಾಸದಿಂದಲೇ ಯುಗದ ವಿಕಾಸ ಮಟ್ಟವನ್ನು ನಿರ್ಧರಿಸಲಾಗುತ್ತದೆ. ಇಂದು ಸಂಚಾರದ ವಿಕಾಸದಿಂದಲೇ ವಿಶ್ವ ಸಮುದಾಯ ಒಂದಾಗಲು ಸಾಧ್ಯವಾಗಿದೆ. ವಾಸ್ತವದಲ್ಲಿ ಸಂಚಾರದಿಂದಾಗಿ ಅತಿ ಹೆಚ್ಚಿನ ವಿಕಾಸವಾಗಿದೆ ಮತ್ತು ಭವಿಷ್ಯದಲ್ಲಿಯೂ ಕೂಡ ಇದರ ವಿಕಾಸ ಕ್ರಮವು ಜಾರಿಯಲ್ಲಿರುತ್ತದೆ. ಇಲ್ಲಿ ಸಂಚಾರದ ತಪ್ಪು ಪ್ರಯೋಗದ ಪರಿಣಾಮ ಹಾಗೂ ಅದರ ಪ್ರಭಾವ ತಪ್ಪಾಗುತ್ತದೆ ಎಂಬುದನ್ನು ಇಲ್ಲಿ ಮರೆಯುವಂತಿಲ್ಲ. ಸಂಚಾರಿ ವ್ಯವಸ್ಥೆಯನ್ನು ಮಾಡುವ ಮತ್ತು ಪ್ರಯೋಗ ಮಾಡುವ ಸಮೂಹ ಹಾಗೂ


ಸಮುದಾಯಗಳ ನೈತಿಕ ಹೊಣೆಗಾರಿಕೆಯಲ್ಲಿ ಸಂಚಾರ ಮಾಧ್ಯಮದ ಗುಣ ಮತ್ತು ದೋಷಗಳು ಅವಲಂಬಿತವಾಗುತ್ತವೆ. ವಿಕಾಸೋನ್ಮುಖ ದೇಶಗಳಲ್ಲಿ ಪ್ರಚಲಿತವಿರುವ ಎಲ್ಲಾ ಸಂಚಾರ ಮಾಧ್ಯಮಗಳೆಂದರೆ – ಪತ್ರಿಕೆಗಳು, ರೆಡಿಯೋ, ಟೆಲಿವಿಷನ್, ಇಂಟರ್ ನೆಟ್, ಸಾಮಾಜಿಕ ಜಾಲತಾಲಣಗಳು ಮತ್ತು ಟೆಲಿಫೋನ್ ಇತ್ಯಾದಿಗಳಲ್ಲಿ ನಿಸ್ವಾರ್ಥವಾದ ಸಂಚಾಲಕತ್ವ ಆಗುವುದಿಲ್ಲ. ಇವುಗಳ ಮೂಲ ಉದ್ದೇಶ್ಯವೇ ಲಾಭಗಳಿಸುವುದಾಗಿರುತ್ತದೆ. ಇಂತಹ ಲಾಭದ ನಿರೀಕ್ಷೆಯಲ್ಲೇ ಇರುವವರು ನೀತಿ ಹಾಗೂ ಸಿದ್ಧಾಂತಗಳನ್ನು ಅನುಸರಿಸುವುದಿಲ್ಲ. ವಿದೇಶಿ ಅಥವಾ ಸ್ವದೇಶಿಗಳ ಹಸ್ತಕ್ಷೇಪದಿಂದ ಈ ಸಂಚಾರ ಮಾಧ್ಯಮಗಳು ಸಂಚಾಲಕತ್ವದಲ್ಲಿ ತೊಡಗಿರುತ್ತವೆ. ಯಾವುದೇ ಸ್ಥಿತಿ ಘಟನೆಯ ವ್ಯಕ್ತಿ ಅಥವಾ ಸಮೂಹಕ್ಕೆ ತೊಂದರೆಯನ್ನುಂಟುಮಾಡುವ,  ಒತ್ತಡ ಹಾಕುವ, ಹುರಿದುಂಬಿಸುವ, ವಿನಾಕಾರಣ ಪ್ರಚಾರ ಮಾಡುವ, ಈ ಎಲ್ಲಾ ಕೆಲಸಗಳು ಸಂಚಾರ (ಪ್ರಚಾರ ) ಮಾಧ್ಯಮಗಳಿಂದ ನಡೆಯುತ್ತವೆ. ಇಂತಹ ಕಾರ್ಯಗಳು ಸ್ವಾರ್ಥಸಾಧನೆಗಾಗಿ, ಯಾವೊಬ್ಬ ವ್ಯಕ್ತಿ, ಸಮೂಹ, ರಾಜಕೀಯ ಪಕ್ಷ ಅಥವಾ ಅಂತಾರಾಷ್ಟ್ರೀಯ ನಿಯೋಗಗಳಿಂದಲೂ ಕೂಡ ಪ್ರಾಯೋಜಿಲ್ಪಡುತ್ತವೆ. ಸಂಚಾರದ (ಪ್ರಸಾರಾಂಗದ ) ಆಚಾರ ಸಂಹಿತೆಯ ಪಾಲನೆ ಮಾಡದಿರುವವರು, ವಿಕಾಸೋನ್ಮುಖ ದೇಶಗಳಲ್ಲಿ ನಿರಂತರತೆಯನ್ನು ಪಡೆದುಕೊಂಡಿದ್ದಾರೆ. ಇದರಿಂದಾಗಿ ವಿಕಸೋನ್ಮುಖ ದೇಶಗಳಲ್ಲಿ ಪ್ರಚಲಿತ ಎಲ್ಲಾ ಸಂಚಾರ ಮಾಧ್ಯಮಗಳು ಭ್ರಷ್ಟಾಚಾರವನ್ನು ಮುಂದುವರೆಸುವ ಪೃಷ್ಠ – ಪೋಷಕರ ರೂಪದಲ್ಲಿ ಮುನ್ನಡೆಯುವವರಾಗುತ್ತಾರೆ.

### 07. ರಾಜಕೀಯ ಪಕ್ಷಗಳ ಕ್ಷೇತ್ರ – [Political Parties ]

ಬಹುಶಃ ವಿಶ್ವದ ಎಲ್ಲಾ ರಾಷ್ಟ್ರಗಳಲ್ಲಿ ರಾಜಕೀಯ ಪಕ್ಷದ ಕ್ಷೇತ್ರಿಯ ಪಕ್ಷ ವಿಕಸಿತವಾಗುತ್ತದೆ. ವಿಕಸಿತ ದೇಶಗಳಲ್ಲಿ ಎರಡು ಅಥವಾ ನಾಲ್ಕು ರಾಜಕೀಯ ಪಕ್ಷ, ರಾಜಕೀಯ ಕ್ಷೇತ್ರಿಯ ಪಕ್ಷದಲ್ಲಿ ಕ್ರಿಯಾಶೀಲವಾಗಿರುತ್ತದೆ. ಈ ರೀತಿ ಹೆಚ್ಚಿನ ರಾಜಕೀಯ ಪಕ್ಷಗಳು ಕ್ರಿಯಾಶೀಲವಾಗುವ ದೇಶಗಳಲ್ಲಿ ರಾಜನೈತಿಕ ವ್ಯವಸ್ಥೆ ಸಂಪೂರ್ಣವಾಗಿ ಅಸ್ಥಿರಗೊಳ್ಳುತ್ತದೆ. ರಾಜಕೀಯ ಪಕ್ಷಗಳ ಸಂಖ್ಯೆ ಎಷ್ಟು ಹೆಚ್ಚಾಗಿರುತ್ತದೋ, ಅಸ್ಥಿರತೆಯ ಅನುಪಾತವು ಕೂಡ ಅದೇ ಕ್ರಮದಲ್ಲಿ ಅಧಿಕವಾಗುತ್ತಾ ಹೋಗುತ್ತದೆ. ರಾಜನೈತಿಕ ಪರಿಸ್ಥಿತಿ ಅಸ್ಥಿರಗೊಳ್ಳುವುದರಿಂದ ಅಧಿಕಾರಕ್ಕೆ ಬರುವ ರಾಜಕೀಯ ಪಕ್ಷ ಅಧಿಕಾರ ನಡೆಸುವ ಅವಕಾಶ ಪ್ರಾಪ್ತವಾಗುತ್ತಲೇ ರಾಜ್ಯಕೋಶವನ್ನು ದುರ್ಬಲಗೊಳಿಸಿ, ತಮ್ಮ ಪಕ್ಷದ ಕೋಶದಲ್ಲಿ ಧನ ಸಂಗ್ರಹ ಮಾಡುತ್ತಾರೆ. ಈ ರೀತಿ ಅಧಿಕಾರದಲ್ಲಿರುವವರಿಂದ

ಲೂಟಿಯಾಗುತ್ತಿರುವುದರಿಂದ ಅಧಿಕಾರದಿಂದ ಹೊರಗಿರುವ ರಾಜಕೀಯ ಪಕ್ಷ ವಿರೋಧಿಸಲು ಸಕ್ರಿಯವಾಗುತ್ತದೆ. ಅಧಿಕಾರಾರೂಢ ಭ್ರಷ್ಟ ರಾಜಕೀಯ ಪಕ್ಷವನ್ನು ಪದಚ್ಯುತಗೊಳಿಸಿ, ಬೇರೊಂದು ಪಕ್ಷ ಅಧಿಕಾರಕ್ಕೆ ಬರುತ್ತದೆ. ಹೀಗೆ ಕೇವಲ ಆಡಳಿತಾಧಿಕಾರವನ್ನು ಪಡೆಯುವುದೇ ಪಕ್ಷಗಳ ಉದ್ದೇಶ್ಯವಾಗಿರುತ್ತದೆ. ಹಾಗಾಗಿ ಅನೇಕ ಪಕ್ಷಗಳು ಸೇರಿ ಅಧಿಕಾರ ಪಡೆಯಲು ಆತುರಗೊಂಡಿರುತ್ತವೆ ಮತ್ತು ಸಣ್ಣ ಪುಟ್ಟ ವಿರೋಧಗಳಿಂದಾಗಿ ಇಂತಹ ಸರಕಾರಗಳು ಭಂಗವಾಗುತ್ತವೆ. ಈ ರೀತಿಯಾಗಿ ವಿಕಾಸೋನ್ಮುಖ ದೇಶಗಳಲ್ಲಿ ರಾಜಕೀಯ ಪಕ್ಷಗಳು ಪ್ರಯೋಗಾತ್ಮಕವಾಗಿ ಅಧಿಕಾರಕ್ಕೆ ಬರಹೋಗುವುದರಿಂದ, ದೇಶದ ನೀತಿ – ನಿಯಮಾವಳಿಗಳನ್ನು ನಿರ್ಮಿಸುವ ಸಮಿತಿಗಳು ಪಕ್ಷಮುಖಿಯಾಗುತ್ತವೆ. ದೇಶದಲ್ಲಿ ತಳಮಟ್ಟದಿಂದ ಮೇಲ್ಪಟ್ಟದವರೆಗಿನ ದೊಡ್ಡ ಸಣ್ಣ ಎಲ್ಲಾ ವಿಕಾಸ ಕಾರ್ಯಗಳಲ್ಲಿ ತಡೆಯುಂಟಾಗುತ್ತದೆ. ಆಂತರಿಕ ಮತ್ತು ಬಾಹ್ಯ ವ್ಯಾಪಾರದಲ್ಲಿ ಮಂದಿ (ಹಿನ್ನಡೆ) ಉಂಟಾಗುತ್ತದೆ ಮತ್ತು ವ್ಯಾಪಾರಕ್ಷೇತ್ರ ನಶಿಸುತ್ತದೆ. ಅಂತಾರಾಷ್ಟ್ರೀಯ ಸರಕಾರೇತರ ಸಂಸ್ಥೆಗಳು ಪ್ರಭಾವಿಯಾಗುತ್ತವೆ. ಇದರ ಜತೆಗೆ ಸಂಚಾರ (ಪ್ರಚಾರ) ಕ್ಷೇತ್ರದ ನೀತಿ ಹಾಗೂ ನಿಯಮಗಳ ಆಧಾರದಿಂದ ಮುಕ್ತವಾಗಿ ಇನ್ನೊಬ್ಬರ ಮುಖ ಪತ್ರದ ರೂಪದಲ್ಲಿ ಪ್ರಸ್ತುತವಾಗುತ್ತವೆ. ಯಾವ ಚಾಲಾಕಿ ರಾಜಕೀಯ ಮುಖಂಡ ವಿಭಜಿತವನಾಗಿ (ಪಕ್ಷದಿಂದ ಹೊರಬಂದು) ಅನೇಕ ಪಕ್ಷಗಳನ್ನು ನಿರ್ಮಾಣ ಮಾಡಿ ಆಡಳಿತ ನಡೆಸಲು ಇಚ್ಛಿಸುತ್ತಾರೆ. ಆದರೆ ಆಡಳಿತ ನಡೆಸುವಲ್ಲಿ ಅಸಮರ್ಥರಾಗಿರುತ್ತಾರೆ. ಇಂತಹ ಪಕ್ಷಗಳು ಕ್ರಿಯಾಶೀಲವಾದ ಮೇಲೆ ದೇಶದ ರಾಜನೈತಿಕ ಕ್ಷೇತ್ರವು ಕಲುಷಿತವಾಗುತ್ತವೆ. ಕಳಂಕಿತ ರಾಜನೈತಿಕ ಕ್ಷೇತ್ರೀಯ ಪಕ್ಷಗಳು ಭ್ರಷ್ಟಾಚಾರ ಹೆಚ್ಚಿಸುವ ಕೆಲಸವನ್ನು ಮಾಡುತ್ತಾರೆ.

ಭ್ರಷ್ಟಾಚಾರದ ಪೃಷ್ಠಪೋಷಕ ತತ್ವಗಳನ್ನು ವಿಭಜಿಸಿ, ಕೋಷ್ಟಕದಲ್ಲಿ ಈ ರೀತಿಯಾಗಿ ನೋಡಬಹುದು.



ಮೇಲಿನ ಕೋಷ್ಟಕದಲ್ಲಿ ಪೃಷ್ಠಪೋಷಕವಾಗಿರುವ ಏಳು (7) ಕ್ಷೇತ್ರಗಳ ಕೇಂದ್ರಬಿಂದುವಾಗಿ ಭ್ರಷ್ಟಾಚಾರವೇ ಆಗಿರುವುದನ್ನು ತೋರಿಸಲಾಗಿದೆ, ಅದು ರಾಜ ನೈತಿಕ ಕ್ಷೇತ್ರೀಯ ಪಕ್ಷವಾಗಿದೆ. ಮೂಲ ಬಿಂದುವಿನಲ್ಲಿ ಕೇಂದ್ರಿತವಾದ ರಾಜನೈತಿಕ ಕ್ಷೇತ್ರೀಯ ಪಕ್ಷವೇ ಭ್ರಷ್ಟಾಚಾರದ ಮೂಲ ಆಧಾರವಾಗಿ ಸ್ಥಿತವಾಗಿದೆ.

ನಮ್ಮ ಬಳಿ ಮೇಲಿನ ಕೋಷ್ಟಕದಲ್ಲಿ ವಿಭಜಿಸಲ್ಪಟ್ಟಿರುವ 1,2,3,4,5,6,7 ಅಂಗಗಳಿವೆ. ಚಿತ್ರದಲ್ಲಿ ಕೇಂದ್ರಿತವಾಗಿರುವ 7 ಅಂಗಗಳೂ ಪ್ರಥಮ ಮತ್ತು ದ್ವಿತೀಯಗಳ ಮೇಲೆ ಪ್ರಭಾವ ಬೀರುತ್ತಿರುವಂತೆ ಕಂಡು ಬರುತ್ತವೆ. 1+2=3 ಅರ್ಥಾತ್ 3+4+5+6=18, 7–3=4, 28 ನ್ನು 7 ರಿಂದ ಭಾಗಿಸಿದಾಗ ಫಲಿತಾಂಶ 4 ಬರುತ್ತದೆ. 28/7=4 ಅಂಕ ವ್ಯಾಪಾರ ಕ್ಷೇತ್ರವನ್ನು ಕೇಂದ್ರವನ್ನಾಗಿಸುತ್ತದೆ. ಹಾಗೆ ನೋಡಿದರೆ ವ್ಯಾಪಾರದ ಅರ್ಥ ಲಾಭಕರವೇ ಆಗಿದೆ. ಪಕ್ಷದ ಕ್ಷೇತ್ರೀಯ ಲಾಭ – ನಷ್ಟದ ಸಿದ್ಧಾಂತದಲ್ಲಿ ಮುನ್ನಡೆದ ಮೇಲೆ 1 ಮತ್ತು 2ನೇ ಸ್ಥಿತಿಯ ಸೃಷ್ಟಿಯಾಗುತ್ತದೆ ಎಂಬುದನ್ನು ನಾವು ತಿಳಿಯಬಹುದಾಗಿದೆ.

***

# 19. ಭ್ರಷ್ಟವಿರೋಧಿ ಶಾಸ್ತ್ರ ಅಧ್ಯಯನದ ಉಪಾಗಮ [Approach to the Study of Anticorruptology]

ಭ್ರಷ್ಟವಿರೋಧಿ ಶಾಸ್ತ್ರದ ಅಧ್ಯಯನದಲ್ಲಿ ಬರುವ ವಿಧಿ ವಿಧಾನಗಳನ್ನು ವಿಭಿನ್ನ ಕೋನಗಳಿಂದ ನೋಡಬೇಕಾದೀತು. ಪ್ರಾಜ್ಞ ಇತಿಹಾಸದ ಪೃಷ್ಠ ಭೂಮಿಯಲ್ಲಿ ಭ್ರಷ್ಟವಿರೋಧಿ ಶಾಸ್ತ್ರವು ಅಧ್ಯಯನದ ಹೊಸ ವಿಚಾರವಾಗಿದೆ. ಈ ವಿಷಯದ ಉಪಯೋಗ ಮತ್ತು ಮಹತ್ವದ ಕುರಿತು ವಿಶೇಷ ಅಧ್ಯಯನದ ಸಾಮಗ್ರಿಯನ್ನು ಕಲೆಹಾಕುವ ಅವಶ್ಯಕತೆ ಇದೆ. ವಿಷಯದ ಪರಿಜ್ಞಾನ ನಿಶ್ಚಿತ ವಿಷಯಗತವಾದ ಅಧ್ಯಯನದ ದ್ವಾರವನ್ನು ತೆರೆಯುತ್ತದೆ. ಇದರಲ್ಲಿಯೂ ಭ್ರಷ್ಟವಿರೋಧಿ ಶಾಸ್ತ್ರ, ಸತ್ಯವಾದ ವಿಜ್ಞಾನದ ರೂಪದಲ್ಲಿ ವರ್ತಮಾನ ಮಾನವ ಸಮಾಜದಲ್ಲಿ ಪ್ರಸ್ತುತವಾಗಲು ಇಚ್ಛಿಸುತ್ತದೆ. ಆದ್ದರಿಂದ ಇದರ ಅಧ್ಯಯನವನ್ನು ಆಳವಾಗಿ, ವಿಭಿನ್ನ ಕೋನಗಳಿಂದ ವಿಶ್ಲೇಷಣೆ ಮಾಡುವುದು ಅವಶ್ಯಕವಾಗಿದೆ. ಇದೀಗ ಈ ವಿಷಯವನ್ನು ನಾವು ಯಾವ ರೂಪದಲ್ಲಿ ನೋಡಿದ್ದೇವೆ, ವಿಶ್ಲೇಷಣೆ ಮಾಡಿದ್ದೇವೆಯೋ ಅದು, ಮುಂದಿನ ಸಮಯದಲ್ಲಿ ನಡೆಸುವ ಅಧ್ಯಯನವು ಈ ವಿಷಯದಲ್ಲಿ ವಿಶೇಷ ಅಧ್ಯಯನ ಮಾಡಿ, ಸಮಯಾನುಕೂಲವಾಗಿ ವ್ಯಾಖ್ಯಾನ ಮಾಡಬಹುದು. ವರ್ತಮಾನದಲ್ಲಿ ಇದರ ಅಧ್ಯಯನದಲ್ಲಿ ಬರುವ ವಿಚಾರಗಳನ್ನು ಎರಡು ಭಾಗಗಳಲ್ಲಿ ವಿಭಜಿಸಿ ನೋಡಬೇಕಾಗಿದೆ.

ಕ) ಪರಂಪರಾಗತವಾಗಿ ಬರುವ ವಿಷಯ (ವಿಚಾರ)

ಖ) ವರ್ತಮಾನದಲ್ಲಿರುವ ವಿಚಾರ

## ಕ) ಪರಂಪರಾಗತವಾದ ವಿಚಾರ (Traditional Approach)

ಭ್ರಷ್ಟವಿರೋಧಿ ಕ್ಷೇತ್ರದಲ್ಲಿ ಕ್ರಿಯಾಶೀಲವಾಗಿರುವ ಮೌಲ್ಯ ಮಾನ್ಯತೆ, ಆಧಾರ ಮತ್ತು ಮಾನವ ವಿಕಾಸದೊಂದಿಗೆ ತಿಳಿಯಬೇಕಾಗಿರುವುದನ್ನೇ ಪರಂಪರಾಗತ ವಿಚಾರಗಳೆನ್ನಬಹುದು. ಬರಹ ರೂಪದ ಇತಿಹಾಸ ಆಗುವ ಮೊದಲಿನಿಂದಲೂ ಭ್ರಷ್ಟವಿರೋಧಿ, ನೀತಿ ನಿಯಮಗಳ ಪಾಲನೆ ಆಗಿದೆ. ವಿಕಾಸವಾಗಿದೆ ಮತ್ತು ಮಾನವ ಸಮಾಜದಲ್ಲಿ ಸ್ಥಾಪಿತವೂ ಆಗಿದೆ. ಈ ರೀತಿಯಲ್ಲಿ ಲಿಖಿತ ಮತ್ತು ಅಲಿಖಿತ ಪರಿಸ್ಥಿತಿಯಲ್ಲೂ ಮಾನವ ಆಧಾರದೊಂದಿಗೆ ಸಂಬಂಧಿತವಾದ ಗುಣ ಮತ್ತು ಅವಗುಣಗಳ ವ್ಯಾಖ್ಯೆ ಮತ್ತು ನಿರ್ಣಯ ಕೈಗೊಳ್ಳುವ ವ್ಯವಸ್ಥೆಯು ಕೂಡ ಭ್ರಷ್ಟವಿರೋಧಿ ಕ್ಷೇತ್ರ ಹಾಗೂ ಮಾನವ ವಿಕಾಸ, ಅಭಿನ್ನ ಅಂಗವಾಗಿದೆ. ಇಂತಹ ಪರಂಪರಾಗತವಾಗಿ ಬಂದ ವಿಚಾರಗಳನ್ನು ಈ ಕೆಳಗಿನಂತೆ ವಿಭಾಗಿಸಿ ನೋಡಬಹುದಾಗಿದೆ.

1. ಐತಿಹಾಸಿಕ
2. ದಾರ್ಶನಿಕ
3. ಧಾರ್ಮಿಕ ಹಾಗೂ ಸಾಂಸ್ಕೃತಿಕ
4. ವ್ಯಾವಹಾರಿಕ ಹಾಗೂ ಮನೋ ವೈಜ್ಞಾನಿಕ
5. ನ್ಯಾಯಿಕ (ಕಾನೂನು )

### 1. ಐತಿಹಾಸಿಕ [Historical ]

ಇತಿಹಾಸವು ಲಿಖಿತ ರೂಪದಲ್ಲಿ ಪ್ರಸ್ತುತವಾಗುತ್ತದೆ. ಜೊತೆಗೆ ಅಲಿಖಿತ ರೂಪದಲ್ಲಿ ಕೂಡ ಸಮಾಜವನ್ನು ಪ್ರತಿಬಿಂಬಿಸುತ್ತದೆ. ಇತಿಹಾಸ ಪೂರ್ವಕಾರ್ಯಗಳ (ಹಿಂದಿನ) ಅಥವಾ ಘಟನೆಗಳನ್ನು ಪ್ರಮಾಣದ ರೂಪದಲ್ಲಿ ಸ್ವೀಕರಿಸುತ್ತದೆ. ಭ್ರಷ್ಟವಿರೋಧಿ ವಿಷಯವನ್ನು ಪ್ರಾಚೀನ ಹಾಗೂ ಅರ್ವಾಚೀನ ಸಮಯದಿಂದಲೂ ಮಾನವ, ಸಮಾಜ ವಿಕಾಸವನ್ನು ಅಂಗೀಕರಿಸಿದ್ದಾನೆ. ಮತ್ತು ವರ್ತಮಾನದವರೆಗೆ ಅಂಗೀಕರಿಸಿದ್ದಾನೆ. ಸದಾಚಾರ ಮಾನವೀಯ ಗುಣವಾಗಿದೆ. ಹಾಗಾಗಿ ಭ್ರಷ್ಟಾಚಾರ ಮಾನವನ ಅವಗುಣವಾಗಿದೆ. ಇತಿಹಾಸವು ಮಾನವ ವಿಕಾಸ ಕ್ರಮದಲ್ಲಿ, ಮಾನವ ಜೀವನದೊಂದಿಗೆ ಬಂದ ಗುಣ ಅಥವಾ ಅವಗುಣದ ಮೌಲ್ಯಾಂಕನ ಮಾಡುತ್ತದೆ. ಮತ್ತು ಇದನ್ನು ಭವಿಷ್ಯಕ್ಕಾಗಿ ಮಾರ್ಗದರ್ಶಕವಾಗಿ ನಿರ್ದೇಶನವನ್ನು ಕೂಡ ಮಾಡುತ್ತದೆ. ವಿಶ್ವದ ಪೂರ್ವ ಮತ್ತು ಪಶ್ಚಿಮದ

ಕ್ಷೇತ್ರಗಳಲ್ಲಿ ವಿಕಸಿತ ಸಭ್ಯತೆ ಮತ್ತು ವ್ಯವಹಾರಗಳನ್ನು ಇತಿಹಾಸ ಪರಿಚಯಿಸುತ್ತದೆ. ಭ್ರಷ್ಟಾಚಾರವು ಸದಾ ಪರಾಜಿತವಾಗುತ್ತದೆ, ಮತ್ತು ಸದಾಚಾರ ಯಾವಾಗಲೂ ಜಯಿಸುತ್ತದೆ. ಇದಕ್ಕಾಗಿ, ಭ್ರಷ್ಟವಿರೋಧಿ ವಿಷಯವನ್ನು ಮಾನವ ಸೃಷ್ಟಿಯ ಜೊತೆ ಜೊತೆಗೆ ಅಂಗೀಕರಿಸುತ್ತಾನೆ. ಇತಿಹಾಸದ ಕಾಲಘಟ್ಟದಲ್ಲಿ ಭ್ರಷ್ಟಾಚಾರದ ಬಹಿರಂಗ ವಿರೋಧವಾಗಿದೆ ಮತ್ತು ಸದಾಚಾರವನ್ನು ಸಮರ್ಥಿಸಲಾಗಿದೆ. ಆದ್ದರಿಂದ ಇತಿಹಾಸವು ಭ್ರಷ್ಟವಿರೋಧಿ ಶಾಸ್ತ್ರದ ವಿಕಾಸದಲ್ಲಿ ಸಹಾಯ ಮಾಡುತ್ತದೆ.

## 02. ದಾರ್ಶನಿಕ (Philosophical)

ಜ್ಞಾನ ಮತ್ತು ಅದರ ಅಂತರ್ನಿಹಿತ (ಒಳಗಿರುವ ) ಸಿದ್ಧಾಂತದ ವ್ಯಾಖ್ಯಾನವನ್ನು ದರ್ಶನವೆನ್ನುತ್ತಾರೆ. ಯಾವುದೇ ದರ್ಶನ ವಿಚಾರದ ಮೂಲ ಸಿದ್ಧಾಂತ ಹಾಗೂ ಪ್ರಕೃತಿಯಲ್ಲಿ ವ್ಯವಸ್ಥಿತಗೊಳಿಸಿ ವ್ಯಾಖ್ಯಾನ ಮಾಡುತ್ತದೆ ಮತ್ತು ಸತ್ಯದ ರಹಸ್ಯೋಫ್ಘಾಟನೆಯನ್ನು ಮಾಡುತ್ತದೆ. ಎಲ್ಲಾ ಜ್ಞಾನದ ಮೂಲವೇ ದರ್ಶನ. ಇದಕ್ಕಾಗಿಯೇ ದರ್ಶನವನ್ನು ಸತ್ಯದ ವಿಜ್ಞಾನವೆನ್ನುತ್ತಾರೆ. ಭ್ರಷ್ಟಾಚಾರ ಮಾನವ ಮತ್ತು ಮಾನವ ಸಮಾಜದ ದುರ್ಬಲ ಪಕ್ಷವಾಗಿದೆ. ಈ ದುರ್ಬಲ ಪಕ್ಷವನ್ನು ಬೆಳೆಯಲು ಬಿಡಬಾರದು. ಈ ದುರ್ಬಲ ದೃಷ್ಟಿಕೋನವನ್ನಿಟ್ಟುಕೊಂಡು ವಿಪಕ್ಷದಲ್ಲಿ (ವಿರುದ್ಧವಾಗಿ) ಆಗಾಗ ಅನೇಕ ವಿಚಾರಗಳು ಬರುತ್ತಿರುತ್ತವೆ. ಇಂತಹ ವಿಚಾರ, ಮಾನವ ಗುಣವನ್ನು ಸಬಲ ಮತ್ತು ಸಕ್ಷಮವಾಗಿ ಸ್ಥಾಪಿಸುತ್ತಾ ಹೋದುವು. ಮಾನವ ಸಮಾಜದ ಹಿತ ಹಾಗೂ ವಿಕಾಸಕ್ಕಾಗಿ ಇಂತಹ ದಾರ್ಶನಿಕ ದೃಷ್ಟಿಕೋನವು ವಿಶಿಷ್ಟ ಸ್ಥಾನವನ್ನು ಹೊಂದಿದೆ. ಇದು ಭ್ರಷ್ಟ ವಿರೋಧಿ ಶಾಸ್ತ್ರದ ವಿಕಾಸಕ್ಕಾಗಿಯೂ ಕೂಡ, ಆವಾಗಾವಾಗ ದಾರ್ಶನಕ ದೃಷ್ಟಿಕೋನದ ಮೂಲಕ ನಿರ್ದೇಶಿತ ವಿಚಾರ ಹಾಗೂ ಸರಿಯಾದ ಮಾರ್ಗನಿರ್ದೇಶನ ಮಾಡುತ್ತದೆ.

## 03. ಧಾರ್ಮಿಕ ಹಾಗೂ ಸಾಂಸ್ಕೃತಿಕ [Religious and Cultural ]

ಉತ್ತಮ ರೀತಿಯಲ್ಲಿ ಜೀವನ ಜೀವಿಸುವ ಪದ್ಧತಿಯೇ ಧರ್ಮ. ಆತ್ಮ ಮತ್ತು ಪರಮಾತ್ಮ ಎರಡನ್ನೂ ಧರ್ಮ ತನ್ನಲ್ಲಿ ವಿಲೀನ ಮಾಡಿಕೊಳ್ಳುತ್ತದೆ. ಜಗತ್ತಿನಲ್ಲಿ ಮಾನವ ಜೀವನದ ಜೊತೆಜೊತೆಯಲ್ಲಿ ಧರ್ಮವೂ ಹುಟ್ಟಿಕೊಂಡಿದೆ. ಮತ್ತು ಧರ್ಮ ಮಾನವ ಜೀವನದ ಅಭಿನ್ನ ರೂಪದಲ್ಲಿ ಪ್ರಚಲಿತವಾಗಿದೆ. ಧರ್ಮದ ಪರಿಭಾಷೆಯಲ್ಲಿ ಧಾರ್ಮಿಕ ಸಮುದಾಯದ ಉಲ್ಲೇಖವಾಗಿದ್ದರೂ ಧಾರ್ಮಿಕ ಸಮುದಾಯ, ಧರ್ಮವಲ್ಲ. ಧರ್ಮ ಶಾಶ್ವತ ಸತ್ಯವಾಗಿದೆ. ಅದನ್ನು ಮಾನವ ಜೀವನದಿಂದ ಬೇರ್ಪಡಿಸಲಾಗದು. ಇದೇ ಮಾನವ ಧರ್ಮಕ್ಕೆ

ನಿರಂತರತೆಯನ್ನು ಕೊಡುವ ಪದ್ಧತಿಯು ಸಂಸ್ಕೃತಿಯಾಗಿದೆ. ಧರ್ಮ ಮತ್ತು ಸಂಸ್ಕೃತಿ ಬೇರೆ ಬೇರೆಯಾದರೂ ಎರಡೂ ಒಂದೇ ತತ್ವವನ್ನೊಳಗೊಂಡು ಸಾಗಿವೆ. ವಿಶ್ವ ಮಾನವ ಸಮುದಾಯದಲ್ಲಿ ವಿಭಿನ್ನ ಧರ್ಮ ಹಾಗೂ ಸಂಸ್ಕೃತಿಗಳ ಪ್ರತಿಪಾದನೆಯಾಗಿದೆ. ಆದರೆ ಧರ್ಮ ಹಾಗೂ ಸಂಸ್ಕೃತಿಯ ಉದ್ದೇಶ್ಯ, ಮಾನವ ಸಮುದಾಯದ ಜೀವನ ಪದ್ಧತಿಯನ್ನು ಸಭ್ಯ ಹಾಗೂ ಸುಸಂಸ್ಕೃತಗೊಳಿಸುವುದೇ ಆಗಿದೆ. ಆದ್ದರಿಂದ ಧರ್ಮ ಮತ್ತು ಸಂಸ್ಕೃತಿಯು ಸಭ್ಯ ಹಾಗೂ ಸುಸಂಸ್ಕೃತಗೊಳಿಸುವುದೇ ಆಗಿದೆ. ಆದ್ದರಿಂದ ಧರ್ಮ ಮತ್ತು ಸಂಸ್ಕೃತಿಯು ವ್ಯಕ್ತಿ–ಸಮುದಾಯ ಹಾಗೂ ಸಮಾಜವನ್ನು ಭ್ರಷ್ಟಗೊಳಿಸಲಾರದು. ವ್ಯಕ್ತಿ ಸಮುದಾಯ ಹಾಗೂ ಸಮಾಜದಲ್ಲಿ ಭ್ರಷ್ಟಾಚಾರವು ಬೆಳೆದು ಮುಂದುವರಿಯುವ ಮೊದಲೇ ಅದರ ನಿಯಂತ್ರಣದ ಉಪಾಯವನ್ನು ಕೂಡಲೇ ಹುಡುಕಿ ಸಮಾಜವನ್ನು ಸ್ವಚ್ಛ ಹಾಗೂ ವಿಶ್ವಾಸಾರ್ಹ ಸಮಾಜ ನಿರ್ಮಾಣದ ಪ್ರಯತ್ನ ಮಾಡಬೇಕು. ಧರ್ಮ ಮತ್ತು ಸಂಸ್ಕೃತಿ ಯಾವಾಗಲೂ ಭ್ರಷ್ಟಾಚಾರದ ವಿರುದ್ಧವಾಗಿಯೇ ಇರುತ್ತದೆ ಮತ್ತು ಅದುವೇ ಅವರ ಗುಣವಾಗಿದೆ.

## 04. ವ್ಯಾವಹಾರಿಕ ಹಾಗೂ ಮನೋವಿಜ್ಞಾನ [Behavioral and Psychological]

ಮಾನವೀಯ ವ್ಯವಹಾರ ಮತ್ತು ಮಾನವೀಯ ಮನೋವಿಜ್ಞಾವನ್ನು ಶಾಸ್ತ್ರೀಯ ನಿಯಮದ ದೃಷ್ಟಿಕೋನದಿಂದ ನೋಡಿದರು ಕೂಡ ಭ್ರಷ್ಟ ವಿರೋಧಿಯಲ್ಲಿ ಇದನ್ನು ಸಮಾವೇಶಗೊಳಿಸಿ ನೋಡಬೇಕಾಗುತ್ತದೆ. ವ್ಯವಹಾರ ಮನುಷ್ಯನ ಪ್ರಕೃತಿಯಾಗಿದೆ. ಅಂತೆಯೇ ಸಂಸ್ಕಾರ ಮತ್ತು ಸಂಸ್ಕೃತಿಯುಕೂಡ. ಮನುಷ್ಯನ ವ್ಯವಹಾರ ಸಕಾರಾತ್ಮಕ ಮತ್ತು ನಕಾರಾತ್ಮಕ ಇವೆರಡೂ ಪ್ರಕೃತಿಗಳಿಂದ ಪ್ರಚಲಿತಗೊಳ್ಳುತ್ತವೆ. ಯಾವುದೇ ಪ್ರವೃತ್ತಿಯಿಂದ ವ್ಯವಹಾರ ಸಂಚಾಲನೆಯಾದರೂ ಭ್ರಷ್ಟಾಚಾರವನ್ನು ಅಂಗೀಕರಿಸಲಾಗದು. ಏಕೆಂದರೆ, ಭ್ರಷ್ಟಮನೋವೇಗದೊಂದಿಗೆ ವ್ಯಾವಹಾರಿಕ ಪ್ರವೃತ್ತಿಯ ಸಂಬಂಧ ಸ್ಥಾಪಿತವಾಗುವುದಿಲ್ಲ. ಅಲ್ಲದೇ ಮನೋವಿಜ್ಞಾನದ ಶಾಶ್ವತ ಪ್ರವೃತ್ತಿಯೂ ಕೂಡ ಭ್ರಷ್ಟಾಚಾರಕ್ಕೆ ಇಂಬು ಕೊಡುವುದಿಲ್ಲ. ಈ ವ್ಯವಹಾರ ಹಾಗೂ ಪ್ರವೃತ್ತಿ ಕೃತ್ರಿಮವಾಗುತ್ತವೆ. ಇದಕ್ಕಾಗಿ ಮಾನವೀಯ ವ್ಯವಹಾರ ಮತ್ತು ಮನೋವಿಜ್ಞಾನದ ದೃಷ್ಟಿ ಯಾವಾಗಲೂ ಭ್ರಷ್ಟವಿರೋಧಿ ಕ್ರಿಯಾ ಕಲಾಪದ ಮೇಲಾಗುತ್ತದೆ.

## 05. ನ್ಯಾಯಿಕ (ಕಾನೂನು ) [Legal ]

ನೀತಿ, ಸತ್ಯತ್ವ, ವ್ಯವಹಾರ ಅಲಿಖಿತವಾಗುತ್ತವೆ ಮತ್ತು ಅದೇ ನೀತಿಯನ್ನು ಕಾರ್ಯಗೊಳಿಸುವುದಕ್ಕಾಗಿ ಕಾನೂನು ಲಿಖಿತ ದಾಖಲೆಗಳ ರೂಪದಲ್ಲಿ ಸ್ಥಾಪಿತವಾಗುತ್ತದೆ. ಬಹುಶಃ ವಿಶ್ವದ ರಾಷ್ಟ್ರಗಳಲ್ಲಿ ರಾಜ್ಯ ವ್ಯವಸ್ಥೆಯನ್ನು ಸಂಚಾಲನೆ ಮಾಡುವ ನೀತಿ ಹಾಗೂ ವ್ಯವಹಾರವನ್ನು ಲಿಖಿತ ದಾಖಲೆಗಳನ್ನು ಸಿದ್ಧಗೊಳಿಸಿ ಜಾರಿ ಮಾಡಲಾಗುತ್ತದೆ. ಈ ಲಿಖಿತ ದಾಖಲೆ (ದಸ್ತಾವೇಜು) ಗಳೇ, ಕಾನೂನು, ಸಾವಿರಾರು ವರ್ಷಗಳ ಮೊದಲಿನಿಂದಲೂ ನೀತಿ ಸತ್ಯ ಹಾಗೂ ವ್ಯವಹಾರವನ್ನು ಸುಸಜ್ಜಿತ ರೀತಿಯಿಂದ ಜಾರಿ ಮಾಡುವುದಕ್ಕಾಗಿ ಲಿಖಿತ ದಸ್ತಾವೇಜುಗಳನ್ನು ಸಿದ್ಧಪಡಿಸಿ, ಅದನ್ನು ಕಾರ್ಯಗತ ಮಾಡಲಾಗುತ್ತಾ ಬರಲಾಗುತ್ತದೆ. ಮಾನವೀಯ ಸದ್ಗುಣಗಳ ಪಕ್ಷದಲ್ಲಿ ಸ್ಥಾಪಿತ ಕಾನೂನು ಭ್ರಷ್ಟಾಚಾರವನ್ನು ನಿಯಂತ್ರಿತ ಸ್ಥಿತಿಯಲ್ಲಿಡುವ ವ್ಯವಸ್ಥೆಯನ್ನು ಸ್ಥಾಪಿಸುತ್ತದೆ. ಸಾಮಾಜಿಕ ನ್ಯಾಯದ ಒಪ್ಪಿತ ಸಿದ್ಧಾಂತವನ್ನು ದಾಖಲೆಗಳ ರೂಪದಲ್ಲಿ ಕಾನೂನು ರಕ್ಷಿಸುತ್ತದೆ. ಯಾವುದು ಸತ್ಯದ ಪಕ್ಷದಲ್ಲಿರುತ್ತದೆ ಮತ್ತು ಯಾವುದು ಅಸತ್ಯದ ಪಕ್ಷದಲ್ಲಿರುತ್ತದೆ ಎಂಬುದನ್ನು ಹೀಗಾಗಿ ಭ್ರಷ್ಟವಿರೋಧಿ ಸಿದ್ಧಾಂತವನ್ನು ಕಾನೂನು ರಕ್ಷಿಸುತ್ತಾ ಬಂದಿದೆ.

## ಖ ) ವರ್ತಮಾನ ಗತಿಶೀಲತೆ – [ Present Approach ]

ಸ್ವಚ್ಛ ಸಮಾಜದ ವಿಕಾಸದಲ್ಲಿ ಯಾವಾಗ ಭ್ರಷ್ಟಾಚಾರವು ಜಟಿಲ ಸಮಸ್ಯೆಯ ರೂಪದಲ್ಲಿ ಸ್ಥಾಪಿತವಾಗುತ್ತಾ ಹೋಯಿತೋ, ಆಗ ಸಮಾಜದ ಹೊಣೆಹೊತ್ತ ಸಮುದಾಯಗಳು ಇದರ ವಿರೋಧ ಮತ್ತು ಇದನ್ನು ವ್ಯವಸ್ಥಿತಗೊಳಿಸುವ ಅವಶ್ಯಕತೆಯುನ್ನು ಕಂಡುಕೊಂಡರು. ಪರಂಪರಾಗತ ಸ್ಥಿತಿಯುನ್ನು ಸ್ಥಾಪಿತವಾಗಿರಿಸುವುದರೊಂದಿಗೆ ವರ್ತಮಾನ ಯುಗದ ಬೇಡಿಕೆಗನುಸಾರವಾಗಿ ಭ್ರಷ್ಟ ವಿರೋಧಿ ಗತಿಶೀಲತೆಯನ್ನು ಹೆಚ್ಚು ವ್ಯವಸ್ಥೆಗೊಳಿಸಿ, ಭ್ರಷ್ಟಾಚಾರಮುಕ್ತ ಸಮಾಜದ ರಚನೆ ಮಾಡುವಲ್ಲಿ ಹೆಚ್ಚಿನ ಕಾಳಜಿ ತೋರಿದವು. ಈ ಸನ್ನಿವೇಶದಲ್ಲಿ ವಿಭಿನ್ನ ನೀತಿ ಹಾಗೂ ಸಿದ್ಧಾಂತ ಪ್ರಯೋಗದ ರೂಪದಲ್ಲಿ ಬಂದುವು. ಈ ಪ್ರಯೋಗಗಳು ವಿಭಿನ್ನ ದೇಶಗಳಲ್ಲಿ ಮಾಡಲ್ಪಟ್ಟವು. ನಂತರವೂ ಮುಖ್ಯವಾಗಿ ಈ ಕೆಳಗಿನಂತೆ, ಗತಿಶೀಲತೆಯೊಂದಿಗೆ ಸ್ಥಿತಿಯನ್ನು ನಿರ್ದೇಶಿಸುವ ನಿರ್ಣಯ ಮಾಡಲಾಯಿತು. ಅವು ಈ ಕೆಳಗಿನಂತಿವೆ.

1) ಸಂವಿಧಾನಿಕ ವ್ಯವಸ್ಥೆ .

2) ವ್ಯವಸ್ಥಿತ ಶಾಸನ ನಿಯಮ

3) ಸಮನ್ವಯಾತ್ಮಕ ವಿಧಾನ

4) ಅಧ್ಯಯನ ಹಾಗೂ ಅಧ್ಯಾಪನ

5) ಪ್ರಯೋಗಾತ್ಮಕ ಪದ್ಧತಿ.

### 1. ಸಂವಿಧಾನಿಕ ವ್ಯವಸ್ಥೆ (Constituional Provision )

ವರ್ತಮಾನ ಸಮಯದಲ್ಲಿ ವಿಶ್ವದ ಎಲ್ಲಾ ದೇಶಗಳಲ್ಲಿ ರಾಜ್ಯ ವ್ಯವಸ್ಥೆಯನ್ನು ನಡೆಸಿಕೊಂಡು ಹೋಗುವುದಕ್ಕಾಗಿ ರಾಜನೈತಿಕ ಪದ್ಧತಿಯನ್ನು ಲೋಕತಂತ್ರದ ಆಧಾರದಲ್ಲಿ ಸ್ಥಾಪನೆ ಮಾಡಲಾಗಿದೆ. ಲೋಕತಂತ್ರವು ಎಲ್ಲಕ್ಕಿಂತ ಮಹತ್ವಪೂರ್ಣವಾದ ಪಕ್ಷವಾಗಿದೆ. ಶಕ್ತಿ ಪೃಥಕೀಕರಣದ ಸಿದ್ಧಾಂತ. ಶಕ್ತಿ ಪೃಥಕರಣ (ಬೇರ್ಪಡಿಸುವಿಕೆ )ದ ಸಿದ್ಧಾಂತದ ಅನುಸಾರ ಕಾರ್ಯಪಾಲಿಕೆ, ನ್ಯಾಯಪಾಲಿಕೆ, ವ್ಯವಸ್ಥಾಪಕತೆ ಸಂಪೂರ್ಣವಾಗಿ ಸ್ವತಂತ್ರವಾಗಿರಬೇಕು. ಅರ್ಥಾತ್ ಒಂದಕ್ಕೆ ಇನ್ನೊಂದರಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರ ಇರಬಾರದು. ಇಂತಹ ವ್ಯವಸ್ಥೆಯಲ್ಲಿ ಭ್ರಷ್ಟಾಚಾರದ ವಿರುದ್ಧ ಕ್ರಿಯಾಶೀಲವಿರುವ ಸಮುದಾಯವು ಕೂಡ ಸ್ವತಂತ್ರ ಮತ್ತು ಸ್ವಾಯುತ್ತವಾಗಿರಬೇಕು. ಇದೇ ಸಿದ್ಧಾಂತದ ಆಧಾರದಲ್ಲಿ ಸಮುದಾಯವನ್ನು ಸಂವಿದಾನದ ರೂಪದಲ್ಲಿ ಸ್ವೀಕರಿಸಿ, ಸಂವಿಧಾನವೇ ಅದರ ಕೆಲಸ – ಕರ್ತವ್ಯ ಮತ್ತು ಅಧಿಕಾರವನ್ನು ನಿಶ್ಚಿತಗೊಳಿಸಬೇಕು. ಆಗಲಾದರೂ ಭ್ರಷ್ಟಾಚಾರದ ವಿರುದ್ಧ ಕ್ರಿಯಾಶೀಲವಾಗುವ ಸಮುದಾಯ ಬಲಿಷ್ಠ, ಸಕ್ಷಮ ಮತ್ತು ಪ್ರಭಾವಕಾರಿಯಾಗಬಲ್ಲುದು. ವಿಶ್ವದಲ್ಲಿ ಇಂತಹ ಕೆಲವು ದೇಶಗಳಿವೆ. ಅವುಗಳು ಈ ಸಿದ್ಧಾಂತವನ್ನು ಸ್ವೀಕರಿಸಿ, ಭ್ರಷ್ಟಾಚಾರ ವಿರೋಧಿ ಸಮುದಾಯವನ್ನು ದೇಶದ ಸಂವಿಧಾನದಲ್ಲಿ ವ್ಯವಸ್ಥೆಗೊಳಿಸಿವೆ. ಇನ್ನು ಕೆಲವು ದೇಶಗಳು ಕಾರ್ಯಪಾಲಿಕೆಯದಾಯಿತ್ವ ರೂಪದಲ್ಲಿ ಸ್ಥಾಪಿಸಿವೆ. ರಾಜ್ಯ ವ್ಯವಸ್ಥೆಯಲ್ಲಿ ಕಾರ್ಯಪಾಲಿಕೆಯಲ್ಲಿ ಮುಖ್ಯ ಅಧಿಕಾರ ಸಂಚಾಲಕವಾಗಿರುತ್ತದೆ. ಹೀಗಾಗಿ ಕಾರ್ಯಪಾಲಿಕೆಯ ಕ್ಷೇತ್ರವೇ ಭ್ರಷ್ಟಾಚಾರದ ಕೇಂದ್ರವಾಗುತ್ತದೆ. ಅದಕ್ಕಾಗಿ ಭ್ರಷ್ಟಾಚಾರವನ್ನು ಕಾರ್ಯಪಾಲಿಕೆಯ ಕ್ಷೇತ್ರ ಜವಾಬ್ದಾರಿ ಹಾಗೂ ಅಧಿಕಾರ ವ್ಯಾಪ್ತಿಯಲ್ಲಿರಿಸದೆ, ಸಂವಿಧಾನದ ಒಂದು ಅಂಗವಾಗಿ ಸ್ಥಾಪಿಸಬೇಕು.

### 02. ಒಳ್ಳೆಯ ಶಾಸನ ವಿಧಾನ – [ Good Governance ]

ಯಾವ ದೇಶದಲ್ಲಾದರೂ ಶಾಸನ ನಡೆಸುವ ವ್ಯವಸ್ಥೆ ಚೆನ್ನಾಗಿರಬೇಕು. ಶಾಸನ ಮಾಡುವ ಶಾಸಕರು, ತಮ್ಮ ಶಾಸನ ವ್ಯವಸ್ಥೆ ಅತಿ ಉತ್ತಮವೆಂದೇ

ಹೇಳುತ್ತಾರೆ. ಅದೇ ಶಾಸನ ವ್ಯವಸ್ಥೆಯಲ್ಲದವರು, ಇದನ್ನು ಕೆಟ್ಟ ಶಾಸನವೆಂದು ಹೇಳುತ್ತಾರೆ. ಇದೇ ಕಾರಣಕ್ಕಾಗಿ ಶಾಸನ ಮಾಡುವ ಶಾಸಕರು ಪದಚ್ಯುತಿಗೊಳ್ಳುತ್ತಾರೆ. ಮತ್ತು ಹೊಸ ಶಾಸನ ಜನ್ಮ ತಳೆಯುತ್ತದೆ. ಇಂತಹ ಅಸ್ಥಿರ ರಾಜನೀತಿಯಲ್ಲಿ ಭ್ರಷ್ಟಾಚಾರವು ಹೆಚ್ಚುವ ಸಂಭಾವ್ಯ ಹೆಚ್ಚಾಗಿರುತ್ತದೆ. ಅಧಿಕಾರದಲ್ಲಿರುವ ಮತ್ತು ಅಧಿಕಾರದಿಂದ ಹೊರಗಿರುವವರು ಇಬ್ಬರೂ ದೇಶದಲ್ಲಿ ಶಾಸಿತ ಶಾಸನವನ್ನು ಒಳ್ಳೆಯ ಶಾಸನವೆಂದರೆ ಆಗ ಅದು ನಿಜವಾಗಿಯೂ ಒಳ್ಳೆಯ ಶಾಸನವೇ ಆಗಿರುತ್ತದೆ. ವರ್ತಮಾನದಲ್ಲಿ ಒಳ್ಳೆಯ ಶಾಸನ ವಿಧಾನ ರಾಜ್ಯ ವ್ಯವಸ್ಥೆಯ ಮೂಲಕ ಸ್ವೀಕರಿಸಿಲ್ಪಡುವ, ನ್ಯಾಯಯುತ ಶಾಸನ, ಪಾರದರ್ಶಕತೆ, ಸಾರ್ವಜನಿಕವಾದ ಹೊಣೆ, ಸೂಚನೆ ನೀಡುವ (ನಿರ್ದೇಶನ ನೀಡುವ) ಅಧಿಕಾರ, ಭ್ರಷ್ಟಾಚಾರ ನಿಯಂತ್ರಿಸುವ ಸಮಿತಿ (ಸಮುದಾಯ) ಮತ್ತು ಕಾನೂನು ಹಾಗೂ ಸ್ಥಳೀಯ ಸ್ವಾಯತ್ತ ಶಾಸನ ಹಾಗೂ ವಿಕೇಂದ್ರೀಕರಣದಂತಹ ಸಿದ್ಧಾಂತ ಪಾಲನೆ ಮಾಡುವ ವ್ಯವಸ್ಥೆಯೇ ಒಳ್ಳೆಯ ಶಾಸನ ವ್ಯವಸ್ಥೆಯಾಗಿದೆ. ಇಂತಹುದೇ ಶಾಸನ ವಿಧಾನದಿಂದ ಭ್ರಷ್ಟಾಚಾರ ವಿರೋಧಿ ಶಾಸ್ತ್ರದ ಸಿದ್ಧಾಂತವನ್ನು ಜಾರಿಗೊಳಿಸುವಲ್ಲಿ ಪೂರ್ಣ ಸಹಯೋಗವು ಲಭಿಸುತ್ತದೆ. ಇದೇ ರೀತಿಯ ಭ್ರಷ್ಟವಿರೋಧಿ ಶಾಸ್ತ್ರದ ಸಿದ್ಧಾಂತ, ವಿಧಾನ ಹಾಗೂ ಪದ್ಧತಿಯ ಆಚರಣೆಯಿಂದ ದೇಶದಲ್ಲಿ ಒಳ್ಳೆಯ ಶಾಸನ ಸಂಚಾಲನೆಗೊಳ್ಳುತ್ತದೆ. ವರ್ತಮಾನದಲ್ಲಿ ಭ್ರಷ್ಟವಿರೋಧಿ ಶಾಸ್ತ್ರ ಮತ್ತು ಒಳ್ಳೆಯ ಶಾಸನ ವಿಧಾನ ಒಂದು ಇನ್ನೊಂದರ ಪೂರಕವಾಗಿ ಕಾಣುತ್ತವೆ.

### 03. ಸಮನ್ವಯಾತ್ಮಕ ವಿಧಾನ [Co ordination Methodology ]

ಸಮನ್ವಯಾತ್ಮಕ ವಿಧಾನದ ಅರ್ಥವೆಂದರೆ, ಒಬ್ಬರು ಇನ್ನೊಬ್ಬರ ಮಹತ್ವ ಮತ್ತು ಅಸ್ತಿತ್ವವನ್ನು ಸ್ವೀಕರಿಸುತ್ತಾ ವಿಷಯ ವಿಚಾರಗಳಲ್ಲಿ ಸಮನ್ವಯ ಸ್ಥಾಪಿಸುತ್ತಾ ಹೊಸ ಶಕ್ತಿಯ ಪ್ರಾದುರ್ಭಾವವನ್ನುಂಟು ಮಾಡುವುದು. ಸಂಸ್ಕೃತಿ ಜೀವ ಪದ್ಧತಿಯೊಂದಿಗೆ ಹೇಗೆ ಬೆರೆತುಕೊಳ್ಳುವುದೋ ಅದೇ ರೀತಿ ಸಮನ್ವಯಾತ್ಮಕ ವಿಧಾನದೊಂದಿಗೆಯೂ ವರ್ತಮಾನ ಸಮಾಜದಲ್ಲಿ ಸಂಚಾಲಕತ್ವದ ಹೊಣೆ ಹೊತ್ತ ಸಮುದಾಯಗಳನ್ನು ಸೇರಿಸಿಕೊಂಡು ಹೋಗಬಹುದು. ಭ್ರಷ್ಟವಿರೋಧಿ ಕಾರ್ಯಕ್ಕಾಗಿ ಮೇಲೆ ಹೇಳಲ್ಪಟ್ಟ ಸಂವಿಧಾನ, ಒಳ್ಳೆಯ ಶಾಸನ, ಪ್ರಯೋಗಾತ್ಮಕ ಪದ್ಧತಿ ಮತ್ತು ಅಧ್ಯಯನ ಹಾಗೂ ಅಧ್ಯಾಪನ ಮಾತ್ರವಲ್ಲದೆ ಅನ್ಯ ಬಹಳಷ್ಟು ವಿಷಯಗಳಿವೆ. ಈ ಎಲ್ಲಾ ವಿಷಯಗಳನ್ನು ಸಮನ್ವಯಾತ್ಮಕ ವಿಧಾನ ಸಾರ್ಥಕವೆಂದು ಒಪ್ಪಿಕೊಳ್ಳಲಾಗುತ್ತದೆ. ಈ ಸಮನ್ವಯಾತ್ಮಕ ವಿಧಾನ ಭ್ರಷ್ಟವಿರೋಧಿ

ಶಾಸ್ತ್ರಕ್ಕೆ ಊರ್ಜೆಯನ್ನು (ಶಕ್ತಿಯನ್ನು) ಪ್ರದಾನ ಮಾಡುತ್ತದೆ. ಈ ವಿಧಾನ ಪ್ರಭಾವಶಾಲಿಯಾಗಿ ಕಾರ್ಯಗತವಾಗುವಲ್ಲಿ, ಇದಕ್ಕೆ ಭ್ರಷ್ಟ ವಿರೋಧಿ ಎಲ್ಲಾ ತತ್ವಗಳನ್ನು ಸಕ್ರಿಯತೆಯಿಂದ ಕ್ರಿಯಾಶೀಲವಾಗುತ್ತಾ ಸಮನ್ವಯಾತ್ಮಕ ವಿಧಾನದಲ್ಲಿ ವಿಲೀನವಾಗಬೇಕಾಗಬಹುದಾಗಿದೆ. ಈ ವಿಧಾನದಿಂದಲೇ ಸಮನ್ವಯಾತ್ಮಕ ವಿಧಾನವು ಸಶಕ್ತ ರೂಪದಲ್ಲಿ ಕ್ರಿಯಾಶೀಲವಾಗಬಹುದಾಗಿದೆ.

## 04. ಅಧ್ಯಯನ ಹಾಗೂ ಅಧ್ಯಾಪನ ( Teaching and Learning )

ಅಧ್ಯಯನ ಮತ್ತು ಅಧ್ಯಾಪನ ಈ ಎರಡು ಶಬ್ದಗಳು ವಿರೋಧಿಗಳಂತೆ ಕಂಡರೂ ಇವೆರಡರ ಧರ್ಮ ಒಂದೇ ಆಗಿದೆ. ಇದರಿಂದಾಗಿ ಇವುಗಳ ಫಲಿತಾಂಶವು ಕೂಡ ಒಂದೇ ಆಗಿರುತ್ತದೆ. ಅಧ್ಯಯನದ ಅರ್ಥ ಜ್ಞಾನಾರ್ಜನೆ ಮತ್ತು ಅಧ್ಯಾಪನದ ಅರ್ಥ ಅರ್ಜಿತ ಜ್ಞಾನದ ವಿಕಾಸ ಮಾಡುವುದು. ಅಂದರೆ ಜ್ಞಾನಭಂಡಾರವನ್ನು ನಿರ್ಮಿಸುವುದು ಲಿಖಿತ ದಾಖಲೆಗಳ ಅಸ್ತಿತ್ವವಿಲ್ಲದಿದ್ದ ಸಮಯದಲ್ಲೂ ಶೃತಿ ಪರಂಪರೆಯನ್ನು ಅನುಸರಿಸಿ ಜ್ಞಾನದ ವಿಕಾಸವಾಗುತ್ತಿತ್ತೆಂದೇ ತಿಳಿಯಲಾಗುತ್ತದೆ. ಆದರೆ ವರ್ತಮಾನ ಯುಗದಲ್ಲಿ, ಜ್ಞಾನ ಹಾಗೂ ವಿಜ್ಞಾನವು ಲಿಖಿತ ದಾಖಲೆಗಳ ರೂಪದಲ್ಲಿ ಬಂದ ನಂತರ ಪ್ರಜ್ಞಾವಂತಿಕೆಯ ವಿಕಾಸವಾಯಿತು.


ಯಾವುದೇ ಹೊಸ ವಿಷಯದಲ್ಲಿ ಜ್ಞಾನದ ನಿರಂತರ ಅಧ್ಯಯನದಿಂದಲೇ ಗುರಿ ಸಾಧಿಸಲು ಸಾಧ್ಯವಾಗುತ್ತದೆ. ಭ್ರಷ್ಟವಿರೋಧಿ ವಿಷಯವು ಸಾಮಾಜಿಕ ಸಮಸ್ಯೆಯಾಗಿರುವುದರಿಂದ, ಈ ವಿಷಯವನ್ನು ಅಧ್ಯಯನ ಹಾಗೂ ಅಧ್ಯಾಪನದಲ್ಲಿ ಅಳವಡಿಸಿಕೊಳ್ಳುವ ಮತ್ತು ಅಧಿಕಾಧಿಕ ವ್ಯಕ್ತಿಗಳನ್ನು ಈ ಅಧ್ಯಯನದಲ್ಲಿ ಸೇರಿಸಿಕೊಳ್ಳುವಂತಾಗಬೇಕು. ಈ ವಿಷಯದ ಕುರಿತಾದ ಆಕರ್ಷಣೆ ತಳಮಟ್ಟದಿಂದಲೇ ಹೆಚ್ಚು ಹೆಚ್ಚಾಗಿ ವೃದ್ಧಿಸಬೇಕಾಗಿದೆ. ಆದರೆ ಪಠ್ಯಕ್ರಮದ ಅಭಾವದಿಂದಾಗಿ ಕೆಳಹಂತದ ತರಗತಿಗಳಲ್ಲಿ ಅಧ್ಯಯನ ಮಾಡಿಸಲಾಗುತ್ತಿಲ್ಲ. ಇದಕ್ಕಾಗಿ ವಿಶ್ವದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಈ ವಿಷಯವನ್ನೊಳಗೊಂಡು ಸ್ನಾತಕೋತ್ತರ ಹಂತದಲ್ಲಿ ತರಗತಿಗಳನ್ನು ನಡೆಸಬೇಕಾಗಿದೆ. ಇಂತಹ ತರಗತಿಗಳನ್ನು ನಡೆಸುವ ಪೂರ್ವದಲ್ಲಿ ಪರಿಣತರು ಮತ್ತು ಪೂರ್ಣ ಪರಿಣತರನ್ನು ತಯಾರುಗೊಳಿಸುವುದಕ್ಕಾಗಿ ಮಾನವತ್ವದ ವಿಭಾಗದಲ್ಲಿ ಎಲ್ಲಾ ತರಬೇತುದಾರರು ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಶೋಧಕಾರ್ಯದಲ್ಲಿ ತೊಡಗಿಸಿ, ಶೋಧಕಾರ್ಯದಿಂದ ಜನಶಕ್ತಿಯನ್ನು ನಿರ್ಮಾಣ ಮಾಡಬಹುದಾಗಿದೆ. ಇಂತಹ ಪರಿಣತ ಜನಶಕ್ತಿಯಿಂದ ಪ್ರಾಥಮಿಕ ಹಂತದಿಂದ ಉಚ್ಚಮಟ್ಟದವರೆಗೆ ಭ್ರಷ್ಟವಿರೋಧಿ

ವಿಷಯದಲ್ಲಿ ಪಠ್ಯ ಸಾಮಗ್ರಿಯನ್ನು ಸಿದ್ಧಗೊಳಿಸಿ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಹಂತದಿಂದ ಭ್ರಷ್ಟಾಚಾರದ ವಿಷಯದಲ್ಲಿ ತಿಳುವಳಿಕೆಯನ್ನು ನೀಡಬಹುದಾಗಿದೆ. ಈ ರೀತಿಯಲ್ಲಿ ಅಧ್ಯಯನ ಹಾಗೂ ಅಧ್ಯಾಪನದ ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸಿ, ಭ್ರಷ್ಟವಿರೋಧಿ ಶಾಸ್ತ್ರದ ಸಹಯೋಗ ಮಾಡಬಹುದಾಗಿದೆ ಮತ್ತು ಇದರ ಅಧ್ಯಯನ ಅಧ್ಯಾಪನ ಇದನ್ನು ವಿಶ್ವವ್ಯಾಪಿಯಾಗಿ ವಿಕಸಿತಗೊಳಿಸ ಬಹುದಾಗಿದೆ.

## 05. ಪ್ರಯೋಗಾತ್ಮಕ ಪದ್ಧತಿ – [Practical Methodology ]

ಪ್ರಯೋಗಾತ್ಮಕ ಪದ್ಧತಿಯ ತಾತ್ಪರ್ಯ, ಕೇವಲ ಪ್ರಾಕೃತಿಕ ವಿಜ್ಞಾನವನ್ನು ಸ್ವೀಕರಿಸುವ ಪದ್ಧತಿಯಿಂದ ಅಲ್ಲ. ಈ ಪ್ರಯೋಗಾತ್ಮಕ ಪದ್ಧತಿಯು ಸಾಮಾಜಿಕ ವಿಜ್ಞಾನದೊಂದಿಗೆ ಸಂಬಂಧಿತವಾಗಿ ಅನ್ಯ ಶಾಸ್ತ್ರಗಳಲ್ಲಿ ಕೂಡ ಪ್ರಯೋಗ ಮಾಡಬಹುದಾಗಿದೆ. ಪ್ರಯೋಗ ಶಾಲೆಯಲ್ಲಿ ಪರೀಕ್ಷಣೆ ಮಾಡಿ, ವೈಜ್ಞಾನಿಕ ನಿಷ್ಕರ್ಷ ತೆಗೆದುಕೊಳ್ಳುವ ಪದ್ಧತಿಯೇ ಪ್ರಯೋಗಾತ್ಮಕ ವಿಧಾನಗಳ ಯೋಜನೆಯಾಗಿದೆ. ಯಾವುದೇ ಸಮಾಜ ಶಾಸ್ತ್ರದ ಪ್ರಯೋಗ ಶಾಲೆ ಕೇವಲ ಸಮಾಜ ಮಾತ್ರವಲ್ಲ, ಆ ದೇಶದ ಕಾರ್ಯಪಾಲಿಕೆ, ನ್ಯಾಯಪಾಲಿಕೆ ಮತ್ತು ವ್ಯವಸ್ಥಾಪಕತೆಯೂ ಅಲ್ಲದೆ ದೇಶದ ಶಾಸನ ವ್ಯವಸ್ಥೆಯೊಂದಿಗೆ ಸಂಬಂಧ ರಾಜಕೀಯ ಪಕ್ಷಗಳ ಜೊತೆಗೂ, ಶಾಸನ ವ್ಯವಸ್ಥೆಯೊಂದಿಗಿನ ಎಲ್ಲಾ ಸಮುದಾಯಗಳಿವೆ. ಎಲ್ಲಿ ಭ್ರಷ್ಟ ವಿರೋಧಿ ಶಾಸ್ತ್ರದ ನಿಯಮಾನುಸಾರ ನಿರೀಕ್ಷಣೆ, ಪರಿಕ್ಷಾತ್ಮಕತೆ ಮತ್ತು ಪ್ರವೃತ್ತರಾಗಿ ಭ್ರಷ್ಟಾಚಾರದ ಮೌಲ್ಯಾಂಕನ ಮಾಡಬಹುದಾಗಿದೆ ಮತ್ತು ನಿಷ್ಕರ್ಷ (ನಿಶ್ಚಿತ ನಿರ್ಣಯ ) ಯ ಹಂತಕ್ಕೆ ಹೋಗ ಅದರ ಪರಿಣಾಮವನ್ನು ಪ್ರಮಾಣಿತಗೊಳಿಸಬಹುದಾಗಿದೆ. ಪ್ರಯೋಗಾತ್ಮಕ ಪದ್ಧತಿಯಲ್ಲಿ ಸ್ವೀಕಾರ ಮಾಡುವವರು. ನರೀಕ್ಷಣೆ, ಪರೀಕ್ಷೆ ಪ್ರವೃತ್ತರಾಗುವಿಕೆ ಮತ್ತು ನಿರ್ಣಯ ವಿಧಾನವನ್ನು ಭ್ರಷ್ಟಾಚಾರದ ಪ್ರಕೃತಿ ಮತ್ತು ಆಕಾರಕ್ಕನುಗುಣವಾಗಿ ನಿಶ್ಚಿತಗೊಳಿಸುವುದಾಗಿರುತ್ತದೆ. ಈ ರೀತಿ ಪ್ರಯೋಗಾತ್ಮಕ ವಿಧಾನ ನಿಶ್ಚಿತವಾಗಿ ಜಾರಿಗೆ ಬರುವ ಹಂತದಲ್ಲಿ ಭ್ರಷ್ಟಾಚಾರವನ್ನು ಗುರುತಿಸಿ, ಹೆಚ್ಚುತ್ತಿರುವ ಭ್ರಷ್ಟಾಚಾರದ ಪ್ರಕೃತಿಯನ್ನು ಅಥವಾ ನಿಯಂತ್ರಿಸಬಹುದಾಗಿದೆ.

## ಚಿತ್ರಾಂಕಿತ ಸ್ಥಿತಿ ಮತ್ತು ಪ್ರಭಾವ




ಈ ಮೇಲಿನ ಚಿತ್ರವನ್ನು ಈ ರೀತಿಯಲ್ಲಿ ವಿಭಜಿಸಿ ನೋಡಬಹುದಾಗಿದೆ. ಒಂದು ಇನ್ನೊಂದರ ಜೊತೆಗೆ ರೇಖೆಗಳು ಮತ್ತು ದಿಕ್ಕುಗಳನ್ನು ಸ್ಥಾಪಿಸುವ ರೀತಿಯಲ್ಲಿ ಆಕರ್ಷಕ ಹಾಗೂ ಪ್ರಭಾವಿತವಾದಂತೆ ಕಂಡು ಬರುತ್ತವೆ.

| **ವರ್ತಮಾನ** | **ಪರಂಪರಾಗತ** |
|---|---|
| 1. ಸಂವಿಧಾನ | 1. ಐತಿಹಾಸಿಕ |
| 2. ಒಳ್ಳೆಯ ಶಾಸನ ವಿಧಾನ | 2. ದಾರ್ಶನಿಕ |
| 3. ಸಮನ್ವಿಯಾತ್ಮಕ ವಿಧಾನ | 3. ಧಾರ್ಮಿಕ ಹಾಗೂ ಸಾಂಸ್ಕೃತಿಕ |
| 4. ಅಧ್ಯಯನ ಹಾಗೂ ಅಧ್ಯಾಪನ | 4. ವ್ಯಾವಹಾರಿಕ ಹಾಗೂ ಮನೋವೈಜ್ಞಾನಿಕ |
| 5. ಪ್ರಯೋಗಾತ್ಮಕ ಪದ್ಧತಿ | 5. ಕಾನೂನು |

ಈ ರೀತಿ 1=5, 2=4, 3=3, 4=2, ಮತ್ತು 5 =1 ಸಮಾನಾಂತರ ರೂಪದಲ್ಲಿ ಸ್ಥಿತವಾಗಿದ್ದರೂ ಒಂದು ಇನ್ನೊಂದರಲ್ಲಿ ಪೂರ್ಣರೂಪವಾಗಿ ಒಳಗೊಂಡು ಪ್ರಭಾವಿತವಾಗಿವೆ. ಇದೇ ವೈಜ್ಞಾನಿಕ ತಥ್ಯವಾಗಿದೆ. ಪ್ರಮಾಣಿತ ಸತ್ಯವಾಗಿದೆ. ಹೀಗಾಗಿ ನನ್ನೆ ಮತ್ತು ಇವತ್ತಿನ ಯೋಜನೆಗಳಲ್ಲಿ ಹೆಚ್ಚಿನ ತಾತ್ವಿಕ ಅಂತರವಿಲ್ಲ. ಕೇವಲ ಸಮಯವು ವಿಷಯಗತ ಹೆಸರನ್ನು ಕೊಟ್ಟಿದೆ ಆದರೆ ಕಾರ್ಯ ಸಿದ್ಧಾಂತದಲ್ಲಿ ಅಂತರವಿಲ್ಲ. ಇದರಿಂದಿ ಸ್ಪಷ್ಟವಾಗುವುದಿಷ್ಟೆ. ಪರಂಪರಾಗತ ಯೋಜನೆಗಳ ಮಾರ್ಗನಿರ್ದೇಶನದಲ್ಲಿಯೇ ವರ್ತಮಾನ ಯೋಜನೆಗಳು ನಿಶ್ಚಿತಗೊಳ್ಳುತ್ತವೆ. ವರ್ತಮಾನ ಕಾಲದ ಆಯೋಜನೆಗಳ ಆಧಾರದಲ್ಲಿ ಪೂರ್ವಸ್ಥಿತ ನಿಶ್ಚಿತವಾಗಿ ನಡೆಯುತ್ತದೆ ಮತ್ತು ಪರಂಪರಾಗತ ಆಧಾರದಲ್ಲಿ ವರ್ತಮಾನದ ಯೋಜನೆ ನಿಶ್ಚಿತವಾಗುತ್ತದೆ.

***

# 20. ಸಮಾಜದ ರಚನೆ ಮತ್ತು ವರ್ಗ ಪರಿವರ್ತನೆ [Structure of Society and change of Social class ]

ವಿಶ್ವದ ಎಲ್ಲಾ ದೇಶಗಳಲ್ಲಿ ವಿಭಿನ್ನ ರೀತಿಯ ಸಮಾಜ ಸಂಘಟಿತವಾಗುತ್ತದೆ. ಒಂದು ದೇಶದ ಸಮಾಜ ಇನ್ನೊಂದಕ್ಕಿಂತ ಭಿನ್ನವಾಗಿದ್ದರೂ ಕೂಡ ಮಾನವ ಸಮಾಜದ ವಾಸ್ತವಿಕ ರಚನೆ ಸುಮಾರಾಗಿ ಒಂದೇ ತೆರನಾಗಿರುತ್ತದೆ. ವಿಕಸಿತ ದೇಶದ ಸಮಾಜದ ರಚನೆ ಮತ್ತು ವಿಕಾಸೋನ್ಮುಖ ದೇಶದ ಸಮಾಜದ ರಚನೆ ಕೂಡ ಒಂದೇ ತೆರನಾಗಿರುತ್ತದೆ. ಯಾವುದೇ ಸಮಾಜದ ರಚನೆ ಕೂಡ ಒಂದೇ ತೆರನಾಗಿರುತ್ತದೆ. ಯಾವುದೇ ಸಮಾಜದ ರಚನೆ ಸ್ಥಳೀಯ ಸಂಸ್ಕೃತಿಯಿಂದ ಪ್ರಭಾವಿತವಾಗಿರುತ್ತದೆ. ಸಮಾಜದ ರಚನೆಯ ಮೇಲೆ ಪ್ರಭಾವ ಬೀರುವ ಇನ್ನಿತರ ತತ್ವ, ಭೂಗೋಳ ಮತ್ತು ಪ್ರಾಕೃತಿಕ ವಾತಾವರಣವೂ ಆಗಿದೆ. ಸಮಾಜದ ರಚನೆಯ ಪ್ರಕೃತಿ ಭಿನ್ನವಾಗಿದ್ದರೂ ಕೂಡ, ಮಾನವ ಸ್ವಭಾವ, ಪ್ರಕೃತಿ ಮತ್ತು ವ್ಯವಹಾರ ಸಮಾನವಾಗಿರುವುದರಿಂದ ಸಮಾಜವನ್ನು ವರ್ಗೀಕರಣ ಮಾಡಿ ನೋಡಿದ ಮೇಲೂ ಒಂದೇ ತೆರನಾಗಿ ಕಾಣುತ್ತದೆ. ಹೇಗೆ ಕೈಯ ಐದು ಬೆರಳುಗಳು ಒಂದೇ ತೆರನಾಗಿರುವುದಿಲ್ಲವೋ, ಆದರೆ ಯಾವುದೇ ವಸ್ತುವನ್ನು ಹಿಡಿದುಕೊಳ್ಳಲು ಏನಾದರೂ ಕೆಲಸ ಮಾಡಲು ಬೆರಳೆಲ್ಲಾ ಒಟ್ಟಾಗಿ ಕೆಲಸ ಮಾಡುತ್ತವೆ. ಅದೇ ರೀತಿ ಮಾನವ ಸಮಾಜದ ವರ್ಗ ನಿರ್ಮಾಣದಲ್ಲಿಯೂ ಕೂಡ ತಮ್ಮ ತಮ್ಮೊಳಗೆ ಒಂದಾಗಿ ನಡೆಯುವ ವ್ಯವಸ್ಥೆಯಲ್ಲಿ ಈ ಪ್ರಕ್ರಿಯೆ ದೀರ್ಘಾವಧಿಯವರೆಗೆ ನಡೆಯಬಲ್ಲುದಾಗಿದೆ. ಈ ವ್ಯವಸ್ಥೆ ಮುಂದಿನವರೆಗೆ ಸ್ಥಾಪಿತವಿರುವುದೆಂದು ನಾವು ನಂಬಬಹುದಾಗಿದೆ. ವಿಕಸಿತ ದೇಶವಾಗಿರಲಿ, ವಿಕಾಸೋನ್ಮುಖ ದೇಶವಾಗಿರಲಿ,

ಎಲ್ಲಾ ದೇಶಗಳ ಸಾಮಾಜಿಕ ರಚನೆ ಒಂದೇ ತೆರನಾಗಿರುತ್ತದೆ. ಇಂತಹ ಸಮಾಜವನ್ನು ಸಾಮಾನ್ಯವಾಗಿ ಈ ಕೆಳಗಿನಂತೆ ವರ್ಗೀಕರಿಸಿ ನೋಡಬಹುದಾಗಿದೆ.

1. ಉಚ್ಛ ವರ್ಗ 2. ಮಧ್ಯಮವರ್ಗ, 3. ನಿಮ್ನ ವರ್ಗ

ಮಾನವ ಸಮಾಜದ ಸೃಷ್ಟಿಯ ಜೊತೆಜೊತೆಯಲ್ಲಿ ವರ್ಗೀಕೃತ ಸಾಮಾಜಿಕ ರಚನೆಯನ್ನು ಒಂದೇ ವರ್ಗದಲ್ಲಿ ರೂಪಾಂತರಿಸಲಾಗದು.

## 1. ಉಚ್ಚ ವರ್ಗ :– ( High Class )


ಸಮಾಜದಲ್ಲಿ ಲಭ್ಯವಿರುವ ಎಲ್ಲಾ ರೀತಿಯ ಸವಲತ್ತುಗಳನ್ನು ಹೊಂದಿರುವ ಶಕ್ತಿಶಾಲಿ ಸಮೂಹವನ್ನು ಉಚ್ಚವರ್ಗವೆಂದು ಮಾನ್ಯ ಮಾಡಲಾಗುತ್ತದೆ. ಈ ಉಚ್ಚ ವರ್ಗವೇ ಸಮಾಜದಲ್ಲಿ ಸಂಸ್ಕೃತಿ ಮತ್ತು ಧರ್ಮದ ಸಂರಕ್ಷಣೆ, ಆರ್ಥಿಕ ವಿಕಾಸ, ಸಾಮಾಜಿಕ ವಿಕಾಸ ಮತ್ತು ಸಮಾಜದ ಸಂಚಾಲಕತ್ವದ ಇನ್ನಿತರ ಅವಶ್ಯಕ ಪೂರ್ವಾಧಾರದ ವಿಕಾಸ ಮಾಡುವುದಕ್ಕಾಗಿ ಇರುತ್ತದೆ. ಇದು ಸಮಾಜದ ಸರ್ವ ಪಕ್ಷೀಯ ವಿಕಾಸದಲ್ಲಿ ಮುಂದಾಳತ್ವದ ಪಾತ್ರವನ್ನು ಕೂಡ ನಿರ್ವಹಿಸುತ್ತದೆ.

## 2. ಮಧ್ಯಮ ವರ್ಗ ( Middle Class )

ಮಧ್ಯಮ ವರ್ಗವು ಸಮಾಜದ ಉನ್ನತಿ ಮತ್ತು ಅವನತಿಗಾಗಿ ಮಹತ್ವಪೂರ್ಣವಾದ ಭೂಮಿಕೆ ನಿರ್ವಹಿಸುತ್ತದೆ. ಈ ವರ್ಗವು ಉಚ್ಚ ಮತ್ತು ನಿಮ್ನ ಈ ನಡುವಿನಲ್ಲಿರುತ್ತದೆ. ಮತ್ತು ಇದು ಉಚ್ಚ ಮತ್ತು ನಿಮ್ನ ವರ್ಗವನ್ನು ಜೋಡಿಸುವ ಕೊಂಡಿಯ ಕೆಲಸವನ್ನು ಮಾಡುತ್ತದೆ. ಇದಕ್ಕಾಗಿಯೇ ಈ ವರ್ಗ ಸಮಾಜದ ವಿಕಾಸಕ್ಕೆ ಜವಾಬ್ದಾರವಾಗುತ್ತದೆ. ಇದು ಸುಶಿಕ್ಷಿತ ವರ್ಗವಾಗಿದೆ. ತಿಳುವಳಿಕೆಯುಳ್ಳದ್ದಾಗಿರುತ್ತದೆ. ಮತ್ತು ಚೈತನ್ಯಶೀಲವೂ ಕೂಡ. ಈ ವರ್ಗದಲ್ಲಿ ವ್ಯಕ್ತಿಗಳು ಒಳ್ಳೆಯ ಮತ್ತು ಕೆಟ್ಟ ಕಾರ್ಯಗಳಲ್ಲೂ ತೊಡಗಿಕೊಂಡಿರುತ್ತಾರೆ. ಅಲ್ಪ ಸಮಯದಲ್ಲಿ ಸಾಮಾಜಿಕ ವ್ಯವಸ್ಥೆಯ ಪರಿವರ್ತನೆ ಮಾಡುವುದು ಅಥವಾ ಯಥಾ ಸ್ಥಿತಿಯಲ್ಲಿ ಸಂಚಾಲಿಸುವುದು ಮತ್ತು ಸಂಚಾಲಕತ್ವವನ್ನು ಮಾಡಿಸುವುದು, ಈ ಕಾರ್ಯಗಳು ಈ ವರ್ಗದ ಕೈಗಳಿಂದಲೇ ಆಗುತ್ತದೆ. ಈ ವರ್ಗದ ಸದಸ್ಯರಲ್ಲಿ ವಿದ್ವಾಂಸರು, ಚಿಂತಕರು, ಸಮಾಜ ಸುಧಾರಕರು ವಿಕಾಸ ಪ್ರೇಮಿ ಮತ್ತು ರಾಷ್ಟ್ರವಾದಿಗಳಿರುತ್ತಾರೆ. ದೇಶದ ರಾಜನೀತಿಯಲ್ಲೂ ಕ್ರಿಯಾಶೀಲರಾಗಿರುತ್ತಾರೆ. ಮತ್ತು ತಮ್ಮ ವರ್ಗ ದೇಶದ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳುತ್ತಾ ಶಾಸನದ (ಅಧಿಕಾರದ) ಹತ್ತಿರಕ್ಕೂ ತಲುಪುತ್ತಾರೆ. ಬಹುಶಃ ಈ ವರ್ಗದ ವಾಸಸ್ಥಾನ ಸೌಲಭ್ಯಯುಕ್ತ ನಗರ ಕೇಂದ್ರಿಕೃತವಾಗಿರುತ್ತದೆ.

### 3) ನಿಮ್ನ ವರ್ಗ ( Lower Class )


ನಿಮ್ನ ವರ್ಗವೆಂದರೆ ಸಮಾಜದ ಕೆಳಸ್ತರದಲ್ಲಿ ವಾಸಿಸುವ ಸಮುದಾಯವಾಗಿದೆ. ಇವರ ಜೀವನ ಪರಿಶ್ರಮದಿಂದ ಕೂಡಿರುತ್ತದೆ. ಇದು ಬಡ ವರ್ಗ ಎಂದರೆ ಆರ್ಥಿಕವಾಗಿ ದುರ್ಬಲವಾಗಿರುತ್ತದೆ. ಹೀಗಿದ್ದರೂ ಬದುಕು ನಿರ್ವಹಿಸುತ್ತದೆ. ಕೆಲವೊಮ್ಮೆ ಬದುಕುಳಿಯುವುದಕ್ಕಾಗಿ, ಅವಶ್ಯಕವಿರುವ ವಸ್ತುಗಳಿಂದಲೂ ವಂಚಿತರಾಗುತ್ತಾರೆ. ಆದರೂ ಇವರು ಜೀವನ ನಿರ್ವಹಣೆ ಮಾಡುತ್ತಾರೆ. ಸಮಾಜದ ದುರ್ಬಲ ಸಮುದಾಯದಲ್ಲಿ ಇರುವ ಈ ವರ್ಗವು, ಅಶಿಕ್ಷಿತ, ನಿರುದ್ಯೋಗ, ಅಸಮರ್ಥ ಹಾಗೂ ಅಸಹಾಯಕವಾಗಿರುತ್ತದೆ. ಕೂಲಿ, (ಪರಿಶ್ರಮದ ದುಡಿಮೆ) ಮತ್ತು ಕೃಷಿಕಾರ್ಯ ಮಾಡುವ ಈ ವರ್ಗ ಜೀವನ ನಿರ್ವಹಣೆಗಾಗಿ ಬೇಕಾಗುವ ಮೂಲಭೂತ ಅವಶ್ಯಕತೆಗಳ ಅಭಾವದೊಂದಿಗೆ ಬದುಕುತ್ತದೆ. ಇದರಿಂದಾಗಿ ಈ ವರ್ಗ ಬಡವರ್ಗವೆನಿಸಿಕೊಳ್ಳುತ್ತದೆ. ಇಷ್ಟಾದರೂ ಈ ವರ್ಗ ಸಮಾಜದ ಅಭಿನ್ನ ಅಂಗವಾಗಿ ಸ್ಥಾಪಿತಗೊಳ್ಳುತ್ತದೆ. ಪ್ರಾಚೀನ ಕಾಲದಿಂದಲೂ ಸಮಾಜ ಮುಖ್ಯರೂಪವಾಗಿ ಮೂರು ವರ್ಗಗಳಲ್ಲಿ ವಿಭಜಿಸಲಾಗಿದೆ.




ಮೇಲಿನ ಚಿತ್ರದಲ್ಲಿ ತೋರಿಸಲಾದ ಸಮಾಜ ರಚನೆಯು ಪ್ರಾಚೀನ ಕಾಲದಿಂದ ನಡೆದುಕೊಂಡು ಬರುತ್ತಿದೆ. ಇದು ಸ್ವಾಭಾವಿಕವಾದ ಸಮಾಜದ ರಚನೆಯಾಗಿದೆ. ಈ ವರ್ಗೀಯ ವ್ಯವಸ್ಥೆಯಲ್ಲಿ ಪರಿವರ್ತನೆ ಮಾಡಲಾಗದು. ಒಂದು ವೇಳೆ ಮಾಡಿದರೂ ಅದು ಹೆಚ್ಚು ಸಮಯ ನಿಲ್ಲಲಾರದು. ಶರೀರವು ಹೇಗೆ ಸ್ವಯಂ ಚಾಲಿತವಾಗಲು, ತಲೆ, ಶರೀರ ಮತ್ತು ಕೈಕಾಲುಗಳ ಅವಶ್ಯಕತೆ ಇರುತ್ತದೋ, ಇದೇ ರೀತಿ ಸಮಾಜವೆಂಬ ಶರೀರ ಸಂಚಲನೆಗೊಳ್ಳಲು ಮೂರು ಅಂಗಗಳ

ಅವಶ್ಯಕತೆ ಇರುತ್ತದೆ. ಆದರೆ ಭ್ರಷ್ಟಾಚಾರಯುಕ್ತ ಸಮಾಜದಲ್ಲಿ ಈ ಮೂರು ವರ್ಗಗಳಿಂದ ಅಧಿಕವಾಗುತ್ತಾ ನಾಲ್ಕು, ಐದು, ಮತ್ತು ಆರು ವರ್ಗಗಳವರೆಗೂ ವರ್ಗೀಕರಣವಾಗಬಹುದಾಗಿದೆ. ವಿಕಸಿತ ಅಥವಾ ವಿಕಾಸೋನ್ಮುಖ ಎರಡೂ ರೀತಿಯ ದೇಶಗಳಲ್ಲಿ ಭ್ರಷ್ಟಾಚಾರ ಇರುವ ಪರಿಸ್ಥಿತಿಯಲ್ಲಿಯೇ ಭ್ರಷ್ಟಾಚಾರದ ಅನುಪಾತದಲ್ಲಿಯೂ ಈ ವರ್ಗಗಳ ಹೆಚ್ಚಿಸುವ ಕಾರ್ಯ ನಿಶ್ಚಿತವಾಗುತ್ತದೆ.

ಭ್ರಷ್ಟಾಚಾರ ಹೆಚ್ಚಿದ ನಂತರ ಸಮಾಜದ ರಚನೆಯ ಅಸಾಧಾರಣ ಸ್ಥಿತಿಯ ಗ್ರಾಫ್.




ಮೇಲಿನ ಗ್ರಾಫ್ ನಿಂದ ಯಾವ ಅನುಪಾತದಲ್ಲಿ ಸಮಾಜದಲ್ಲಿ ಭ್ರಷ್ಟಾಚಾರ ಹೆಚ್ಚುತ್ತದೋ, ಕೇವಲ ಅದಕ್ಕನುಸಾರವಾಗಿ ವರ್ಗಗಳು ಹೆಚ್ಚಾಗುವುದಿಲ್ಲ ಬದಲಾಗಿ, ಜೊತೆಗೆ ಸಮಸ್ಯೆಗಳು ಕೂಡ ಅದೇ ಅನುಪಾತದಲ್ಲಿ ಹೆಚ್ಚುತ್ತವೆ, ಇದು ಪ್ರಮಾಣಿತವಾಗುತ್ತದೆ. ಎಷ್ಟು ಪ್ರತಿಶತ ಸಮಸ್ಯೆಗಳು ಹೆಚ್ಚುತ್ತವೋ ಆ ಸಮಾಜದ ವಿಕಾಸದ ಗತಿಯೂ ಕೂಡ ಅದೇ ಅನುಪಾತದಲ್ಲಿ ನಿಂತುಹೋಗುತ್ತದೆ.

ಸಮಾಜದಲ್ಲಿ ಭ್ರಷ್ಟಾಚಾರ ಹೆಚ್ಚಿದಂತೆ ಕ್ರಮಬದ್ಧ ರೀತಿಯಲ್ಲಿ ಭ್ರಷ್ಟ ಸಮುದಾಯ ಸಂಘಟಿತವಾಗುತ್ತಾ ಸಮಾಜದಲ್ಲಿ ಅನಾವಶ್ಯಕ ವರ್ಗದ ವಿಕಾಸವಾಗುತ್ತದೆ. ಈ ಕುರಿತು ನಾವು ಇದರ ಮೇಲೆ ಅಧ್ಯಯನ ಮಾಡಿದ್ದೇವೆ. ವಿಕಸಿತ ದೇಶ ಮತ್ತು ವಿಕಾಸೋನ್ಮುಖ ದೇಶಗಳಲ್ಲಿ ಯಾವ ರೀತಿಯಿಂದ ಸಾಮಾಜಿಕ ರಚನೆಯಲ್ಲಿ ಪರಿವರ್ತನೆಯಾಗುತ್ತದೆ, ಆ ದೇಶದಲ್ಲಿ ಮಧ್ಯಮ ವರ್ಗ ವಿಭಜಿಸಲ್ಪಡುತ್ತದೆ. ಸಾಮಾನ್ಯವಾಗಿ ಮಧ್ಯಮ ವರ್ಗವು ಎರಡು ವರ್ಗಗಳಲ್ಲಿ ವಿಭಜಿತವಾಗುತ್ತದೆ.

1. ಉಚ್ಚ ಮಧ್ಯಮ ವರ್ಗ
2. ನಿಮ್ನ ಮಧ್ಯಮ ವರ್ಗ

### 1. ಉಚ್ಚ ಮಧ್ಯಮ ವರ್ಗ [Upper Middle Class ]

ಉಚ್ಚ ಮಧ್ಯಮ ವರ್ಗವೆಂದರೆ, ಮಧ್ಯಮ ವರ್ಗವೇ ಆದರೂ ಉಚ್ಚ ವರ್ಗದ ಸಮ್ಮುಖದಲ್ಲಿ ಈ ವರ್ಗವು ತನ್ನ ಉಡುಗೆ ತೊಡುಗೆ ನಡೆದುಕೊಳ್ಳುವ ರೀತಿಯನ್ನು ಉನ್ನತಿಕರಿಸುತ್ತದೆ ಮತ್ತು ಸೌಲಭ್ಯಗಳ ಉಪಯೋಗಗಳನ್ನು ಮಾಡಿಕೊಳ್ಳುತ್ತದೆ. ಸರಕಾರದ ಉನ್ನತ ಪದಾಧಿಕಾರಿಗಳು ರಾಜಕೀಯ ಮುಖಂಡರು, ವ್ಯಾಪಾರಿಗಳು ಉದ್ಯೋಗಿಗಳು ಮತ್ತು ಭ್ರಷ್ಟಾಚಾರ ಜನ್ಯ ಕಾರ್ಯಗಳಿಗೆ ಪ್ರೋತ್ಸಾಹವಿತ್ತು ಸಮಾಜದಲ್ಲಿ ಭ್ರಷ್ಟಾಚಾರದ ಪ್ರದೂಷಣವನ್ನು ಹರಡುವ ವ್ಯಕ್ತಿ ಅಥವಾ ಸಮುದಾಯವೇ ಉಚ್ಚ ಮಧ್ಯಮ ವರ್ಗದಲ್ಲಿರುವ ತಮ್ಮ ಸ್ತರವನ್ನು ಉನ್ನತೀಕರಿಸಿಕೊಳ್ಳುತ್ತಾರೆ. ಅರ್ಥಾತ್ ಭ್ರಷ್ಟ ಪದಾಧಿಕಾರಿಗಳು ಹಾಗೂ ಮುಖಂಡರು, ತೆರಿಗೆ ಕಳ್ಳತನ ಮಾಡುವ ವ್ಯಾಪಾರಿ ಹಾಗೂ ಉದ್ಯೋಗಿಗಳು, ವಿದೇಶೀಯರು ಜೊತೆ ಸಂಬಂಧವಿರಿಸಿಕೊಂಡು ಸೇವಾಮುಖಿ ಕಾರ್ಯ ಸಂಚಾಲನೆ ಮಾಡುವ ಅಧಿಕಾರ ಕರ್ಮನಿರತರು. ಸಂಚಾರದ ಜೊತೆಗೆ ಸಂಬಂಧಿತ ವ್ಯಕ್ತಿಗಳೇ ಉಚ್ಚ ಮಧ್ಯಮ ವರ್ಗದಲ್ಲಿ ಪರಿವರ್ತಿತರಾಗುತ್ತಾರೆ. ಈ ವರ್ಗದವರಿಗೆ ಶಾಸನಾಧಿಕಾದಲ್ಲಿ ಹತ್ತಿರದ ಸಂಬಂಧವಿರುತ್ತದೆ. ಮತ್ತು ಶಾಸನಾಧಿಕಾರದಲ್ಲಿ ಪರಿವರ್ತನೆಯನ್ನುಂಟು ಮಾಡುವಲ್ಲಿ ಇವರ ಕೈ ಇರುತ್ತದೆ. ವಿಶ್ವದ ದೃಷ್ಟಿಕೋನದಲ್ಲಿ ಸಮಾಜದ ರಚನೆಯ ಅಧ್ಯಯನ ಮಾಡುವುದರಿಂದ ತಿಳಿದು ಬರುವುದೇನೆಂದರೆ, ಉಚ್ಚ ಮಧ್ಯಮ ವರ್ಗವನ್ನು ಸ್ಥಾಪಿಸಿ, ಹೆಚ್ಚು ಸಮಯವಾಗಿಲ್ಲ. ವಿಕಸಿತ ಹಾಗೂ ವಿಕಾಸೋನ್ಮುಖಿ ಎರಡೂ ದೇಶಗಳಲ್ಲಿ ಈ ಉಚ್ಚ ಮಧ್ಯಮ ವರ್ಗವು ವರ್ತಮಾನ ಸಮಾಜದಲ್ಲಿ ಬಲಯುತವಾಗಿ ತನ್ನ ಪ್ರಭಾವ ಸ್ಥಾಪಿಸಿದೆ. ಈ ವರ್ಗವು ವರ್ತಮಾನ ಸಮಾಜದಲ್ಲಿ ಬಲಯುತವಾಗಿ ತನ್ನ ಪ್ರಭಾವ ಸ್ಥಾಪಿಸಿದೆ. ಈ ವರ್ಗವು ಅಸ್ವಾಭಾವಿಕ ರೀತಿಯಲ್ಲಿ ಹುಟ್ಟಿಕೊಂಡ ಕಾರಣದಿಂದ ಇದರ ಸ್ಥಿರತೆ ಸ್ಥಾಪಿತವಾಗಿಲ್ಲ. ಹಾಗೂ ಇದರ ಪ್ರಾಕೃತಿಕ ಸ್ವಭಾವವೂ ಕೂಡ ಸ್ಥಾಪಿತವಾಗಲು ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ ಈ ಉಚ್ಚ ವರ್ಗ ಮತ್ತು ಮಧ್ಯಮ ವರ್ಗದ ನಡುವೆ ಸ್ಥಾಪಿತವಾಗಲಿಚ್ಛಿಸುತ್ತದೆ. ಆದ್ದರಿಂದ ಇದರ ಪ್ರಾಕೃತಿಕ ಸ್ವಭಾವ ಸ್ಥಾಪಿತವಾಗಲು ಸಾಧ್ಯವಾಗಿಲ್ಲ. ವರ್ತಮಾನದಲ್ಲಿ ಉಚ್ಚ ಮಧ್ಯಮ ವರ್ಗ ಪ್ರಚಲಿತವಿದೆ, ಇದರ ಸ್ಥಿರತೆ ಸ್ಥಾಪಿತವಾಗದಿರುವವರೆಗೆ ಇದರ ಅಸ್ತಿತ್ವ ಸಮಾಜದಲ್ಲಿ ಹೇಗೆ ಸ್ಥಾಪಿತವಾಗಲು ಸಾಧ್ಯ ಎಂಬುದನ್ನು ಹೇಳಲಾಗದು. ಏನಾದರಾಗಲಿ, ಈ ವರ್ಗವು ವಿಕಸಿತ ದೇಶದಲ್ಲಿ ಒಳಿತು ಕಂಡನಂತರವೂ ವಿಕಾಸೋನ್ಮುಖಿ ದೇಶಗಳಲ್ಲಿ ಕೆಲವು ಸಮಸ್ಯೆಗಳನ್ನು ಹುಟ್ಟುಹಾಕಿವೆ. ಸ್ಪಷ್ಟವಾಗಿ ಹೇಳುವುದಾದರೆ ಒಳ್ಳೆಯ


ವಿಚಾರಗಳು ಕಡಿಮೆಯಾಗಿವೆ ಮತ್ತು ಸಮಸ್ಯೆಗಳು ಹೆಚ್ಚು ಸೃಷ್ಟಿಸಲ್ಪಟ್ಟಿವೆ. ಈ ನವನಿರ್ಮಿತ ಉಚ್ಚ ವರ್ಗವನ್ನು ನಿಯಂತ್ರಿತವಾಗಿ ಸಂಚಾಲಿತಗೊಳಿಸುವುದಕ್ಕಾಗಿ ಮತ್ತು ಇದರ ಆಕಾರ ಪ್ರಕಾರಗಳನ್ನು ನಿಶ್ಚಿತಗೊಳಿಸುವುದಕ್ಕಾಗಿ ಭ್ರಷ್ಟವಿರೋಧಿ ಶಾಸ್ತ್ರ ಪ್ರಭಾವಕಾರಿ ಪಾತ್ರವನ್ನು ನಿರ್ವಹಿಸಬಲ್ಲುದು.

## 02. ನಿಮ್ನ ಮಧ್ಯಮ ವರ್ಗ [Lower Middle Class ]

ಇದು ಕೂಡ ಮಧ್ಯಮ ವರ್ಗವೇ ಆಗಿದೆ. ಇದು ಪ್ರಾಚೀನ ಕಾಲದಿಂದಲೂ ಸಮಾಜದ ರಚನೆಯಲ್ಲಿ ನಡುವೆ ನೆಲೆ ನಿಂತಿದೆ. ಈ ಜವಾಬ್ದಾರಿಯುತ ಮಧ್ಯಮ ವರ್ಗವನ್ನು ಮಧ್ಯಮ ವರ್ಗವೆಂದು ಹೇಳಲು ಕಾರಣವಿದೆ. ಇದೇ ವರ್ಗದಿಂದ ವಿಭಜಿಸಲ್ಪಟ್ಟು ಅದು ಉಚ್ಚ ಮಧ್ಯಮವರ್ಗದಲ್ಲಿ ಸ್ಥಾಪಿತವಾಗಿದೆ. ಇದರಿಂದಾಗಿಯೇ ಈ ವರ್ಗದಲ್ಲಿ ಸಂಪೂರ್ಣವಾಗಿ ಮಾನವೀಯ ಸದ್ಗುಣಗಳು ಸ್ಥಿರವಾಗಿರುತ್ತದೆ. ಅದಕ್ಕಾಗಿಯೇ ಈ ಸಮಾಜದಲ್ಲಿ ಈ ವರ್ಗ ಹೊಣೆಗಾರಿಕೆಯುಳ್ಳದ್ದೆಂದು ಸಾಬೀತಾಗಿದೆ. ಈ ವರ್ಗದಲ್ಲಿ ಸಕ್ಷಮ, ಪ್ರಾಮಾಣಿಕ, ಸಮಾಜ ಮತ್ತು ರಾಷ್ಟ್ರಹಿತಕ್ಕಾಗಿ ಕ್ರಿಯಾಶೀಲರಾದ ಜನರಿರುತ್ತಾರೆ. ಆದ್ದರಿಂದ ಈ ವರ್ಗದವರ ಜವಾಬ್ದಾರಿಯಲ್ಲಿ ಕೊರತೆಯುಂಟಾಗುವಂತಿಲ್ಲ.


ಮಧ್ಯಮ ವರ್ಗ ಎರಡಾಗಿ ವಿಭಜಿತವಾಗುವ ಮೂಲದಲ್ಲಿ ಭ್ರಷ್ಟಾಚಾರವಿದೆ. ಎಲ್ಲಾ ಕ್ಷೇತ್ರಗಳಲ್ಲಿ ಭ್ರಷ್ಟಾಚಾರ ಪ್ರಾರಂಭವಾಗಿರುವುದರಿಂದ ಭ್ರಷ್ಟಾಚಾರ ಜನ್ಯ ಕಾರ್ಯಗಳಲ್ಲಿ ತೊಡಗಿರುವ ವ್ಯಕ್ತಿ ಅಥವಾ ಸಮೂಹದ ಆರ್ಥಿಕ ಪಕ್ಷ ಬಲವಾಯಿತು. (ಬಲಿಷ್ಟ) ಆರ್ಥಿಕ ಸಬಲತೆಯಿಂದಾಗಿ ಈ ವ್ಯಕ್ತಿ ಹಾಗೂ ಸಮೂಹಗಳ ಮಾನಸಿಕ ಪಕ್ಷವೂ ಬಲಿಷ್ಠವಾಗುತ್ತಾ ಹೋಯಿತು. ಇದರ ಫಲಸ್ವರೂಪವಾಗಿ ಮಹತ್ವಾಕಾಂಕ್ಷಿ ಸಮುದಾಯ ಜನ್ಮ ತಳೆಯಿತು. ಈ ವರ್ಗವನ್ನು ಅನುಕರಣೆ ಮಾಡುವ ಮಧ್ಯಮ ವರ್ಗ ಮತ್ತು ನಿಮ್ನ ಮಧ್ಯಮ ವರ್ಗದ ಸದಸ್ಯರು ಕೂಡ ಈ ಮಹತ್ವಾಕಾಂಕ್ಷಿ ವರ್ಗದಲ್ಲಿ ಸೇರಿಕೊಂಡರು. ಈ ಕಾರಣದಿಂದಾಗಿ ಸಮಾಜದಲ್ಲಿ ಸತ್ಯಕ್ಕಿಂತಲೂ ಅವಕಾಶಗಳನ್ನು ಹುಡುಕುವಲ್ಲಿ ವ್ಯಕ್ತಿ ಹಾಗೂ ಸಮುದಾಯಗಳು ಹೆಚ್ಚು ಹೆಚ್ಚು ಆಕರ್ಷಿತವಾಗತೊಡಗಿದವು.

**ಭ್ರಷ್ಟವಿರೋಧಿ ಶಾಸ್ತ್ರದ ದೃಷ್ಟಿಕೋನದಲ್ಲಿ ವರ್ತಮಾನದ ಸಾಮಾಜಿಕ ರಚನೆ ಸಮಾಜ ರಚನೆ ಮತ್ತು ವರ್ಗದ ಅಂತರಸಂಬಂಧ**




ಸಮಾಜದ ರಚನೆಯಲ್ಲಿ ಭ್ರಷ್ಟವರ್ಗದ ಅಂತರಸಂಬಂಧಗಳನ್ನು ಮೇಲೆ ತೋರಿಸಲಾಗಿದೆ. ಮಧ್ಯಮ ವರ್ಗ ವಿಭಾಜಿತವಾಗಿ ಉಚ್ಚ, ಮಧ್ಯಮ ವರ್ಗ ಸ್ಥಾಪಿತವಾಗಿದೆ. ಈ ಉಚ್ಚ ಮಧ್ಯಮ ವರ್ಗವು ಉಚ್ಚ ವರ್ಗದತ್ತ ಆಕರ್ಷಿತವಾಗುತ್ತದೆ. ಭ್ರಷ್ಟ ವರ್ಗ ಮತ್ತು ಭ್ರಷ್ಟ ವಿರೋಧಿ ಶಾಸ್ತ್ರವು ವಿರುದ್ಧ ದಿಕ್ಕುಗಳಲ್ಲಿರುತ್ತವೆ. ಇವೆರಡೂ ಮಧ್ಯಮ ವರ್ಗವನ್ನು ಗಮನದಲ್ಲಿಟ್ಟುಕೊಂಡು ತಮ್ಮ ತಮ್ಮ ಪ್ರಭಾವವನ್ನು ಹುಡುಕಲೆತ್ನಿಸುತ್ತಾರೆ. ಈ ವಿರುದ್ಧ ದಿಕ್ಕುಗಳಲ್ಲಿರುವ ಭ್ರಷ್ಟ ವರ್ಗ ಮತ್ತು ಭ್ರಷ್ಟ ವಿರೋಧಿ ಶಾಸ್ತ್ರದಲ್ಲಿ ಯಾವ ತತ್ವ ಹೆಚ್ಚು ಪರಿಣಾಮಕಾರಿ ಕಾರ್ಯ ಮಾಡಬಲ್ಲುದೋ, ಸಮಾಜದ ಸ್ಥಿತಿ ಅದೇ ಅನುಸಾರವಾಗಿ ಪರಿವರ್ತಿತಗೊಳ್ಳುವುದು ನಿಶ್ಚಿತವಾಗಿದೆ. ಇಂತಹ ಅಂತರ ಸಂಬಂಧಗಳು ವಿಕಾಸೋನ್ಮುಖ ದೇಶಗಳ ಸಮಾಜವನ್ನು ಹೇಗೆ ಪ್ರಭಾವಿತಗೊಳಿಸುತ್ತವೆ, ಇದರ ತಿಳುವಳಿಕೆಗಾಗಿ ಒಂದು ದೃಷ್ಟಿ –

**ವಿಕಾಸೋನ್ಮುಖ ದೇಶಗಳಲ್ಲಿ ಸಮಾಜ ರಚನೆ**




ಮೇಲಿನ ಚಿತ್ರದಲ್ಲಿ ಭ್ರಷ್ಟ ವರ್ಗ, ಮಧ್ಯಮ ವರ್ಗದ ಅತಿಕ್ರಮಣ ಮಾಡಿ, ಮಧ್ಯಮ ವರ್ಗದಲ್ಲಿ ವಿಭಜನೆಯನ್ನು ಮಾಡುವಲ್ಲಿ ಸಮರ್ಥವಾಗಿದೆ. ಇದರ ಪ್ರತಿಕ್ರಿಯೆ ಎಂಬಂತೆ, ನಿಮ್ನ ವರ್ಗ (ಬಡವರ ವರ್ಗ) ದಿಂದ ಅಭಾವಗ್ರಸ್ತ ವಾಗುತ್ತಾ, ಅತಿ ನಿಮ್ನ ವರ್ಗ ಅರ್ಥಾತ್ ಕಡುಬಡ ವರ್ಗದ ಉತ್ಪತ್ತಿಯಾಯಿತು. ಈ ವರ್ಗವು ಹೇಗಿದೆಯೆಂದರೆ, ಇದು ಜೀವನದ ಮೂಲಭೂತ ಅವಶ್ಯಕತೆಯಾದ ಅನ್ನ ಬಟ್ಟೆ, ವಸತಿ, ಇವುಗಳ ಅಭಾವದಲ್ಲೇ ಬದುಕುತ್ತದೆ. ಅವರ ಈ ಅವಶ್ಯಕತೆ ಪೂರ್ಣವಾಗದಿದ್ದಾಗ ಇವರು ವಿದ್ರೋಹಿಗಳಾಗುತ್ತಾರೆ. ಇದರಿಂದ ಸಮಾಜ ಸಮಸ್ಯಾಗ್ರಸ್ತವಾಗತೊಡಗುತ್ತದೆ.

ವರ್ತಮಾನ ಯುಗದಲ್ಲೂ ವಿಕಾಸೋನ್ಮುಖ ದೇಶಗಳ ಸಾಮಾಜಿಕ ರಚನೆಯಲ್ಲಿ ಈ ವರ್ಗವು ಮಾನವನಿಗೆ ಅಭಿಷಾಪವಾಗಿದೆ. ಈ ಪರಿಸ್ಥಿತಿ ಭ್ರಷ್ಟಾಚಾರಕ್ಕೆ ಮುನ್ನಡೆ ನೀಡುತ್ತದೆ. ಇದಕ್ಕಾಗಿ, ವಿಕಾಸೋನ್ಮುಖ ದೇಶಗಳಲ್ಲಿ ಭ್ರಷ್ಟವಿರೋಧಿ ಶಾಸ್ತ್ರದ ಪ್ರಭಾವ ಅತಿಶೀಘ್ರವಾಗಿ ಬೀರುವುದಕ್ಕಾಗಿ ಕಡುಬಡತನವಿರುವ ವರ್ಗವನ್ನು ಸೃಷ್ಟಿಸುವುದನ್ನು ತಡೆಯಬೇಕಾಗಿದೆ.


ಇದೇ ರೀತಿ ಭ್ರಷ್ಟಾಚಾರ ವರ್ಗ ಸೃಷ್ಟಿ ಮಾಡುವುದರೊಂದಿಗೆ, ಗೂಂಡಾ ಸಮೂಹ ಅರ್ಥಾತ್ ಮಾಫಿಯಾಗಳನ್ನುಂಟುಮಾಡುತ್ತದೆ. ವಿಕಾಸೋನ್ಮುಖ

ದೇಶಗಳಲ್ಲಿ ನಗರ ಪ್ರದೇಶ, ದೇಶದ ಗಡಿ ಪ್ರದೇಶ ಮತ್ತು ಮುಖ್ಯ ಚೌಕಿ (ಸರ್ಕಲ್) ಅಥವಾ ನಗರದ ಮುಖ್ಯ ನಿಬಿಡ ಪ್ರದೇಶಗಳಲ್ಲಿ ಗೂಂಡಾ ಸಮೂಹದ ಚಟುವಟಿಕೆ ಇರುತ್ತದೆ. ಗೂಂಡಾ ಸಮೂಹ ಸಕ್ರಿಯವಾದಾಗ ಆ ಪ್ರದೇಶದಲ್ಲಿ ದೇಶದ ಕಾನೂನು ನಿಸ್ತೇಜಗೊಳ್ಳುತ್ತಾ ಹೋಗುತ್ತದೆ. ಯುರೋಪೀಯ ದೇಶಗಳಲ್ಲಿ ಈ ಮಾಫಿಯಾ ಪ್ರವೃತ್ತಿಯ ಬೀಜಾರೋಪಣವಾಗಿದ್ದು ಇಂತು ಯುರೋಪಿನ ವಿಭಿನ್ನ ದೇಶಗಳಿಂದ ಈ ಪ್ರವೃತ್ತಿಯು ವಿಶ್ವದ ಎಲ್ಲಾ ವಿಕಾಸೋನ್ಮುಖ ದೇಶಗಳಿಗೆ ತಲುಪಿ ತನ್ನ ಪ್ರಭಾವವನ್ನು ಸ್ಥಾಪಿಸಿದೆ. ಈ ವರ್ಗ ಅರಾಜಕತ್ವದ ಅರಾಜನೈತಿಕ ನಾಯಕರಿಗೆ ಜನ್ಮ ನೀಡುತ್ತದೆ. ಮತ್ತು ಈ ನಾಯಕರೆ ಈ ಮಾಫಿಯಾಗಳಿಗೆ ನಾಯಕರಾಗುತ್ತಾರೆ (ಸಂರಕ್ಷಕರಾಗುತ್ತಾರೆ) ವರ್ತಮಾನದಲ್ಲಿ ವಿಕಾಸೋನ್ಮುಖ ದೇಶಗಳ ಹಿಂದಿನ (ಹಳೆಯ) ಸಾಮಾಜಿಕ ಸಂರಚನೆಯು ಧ್ವಸ್ತವಾಗಿ (ನಷ್ಟವಾಗಿ) ಹೊಸ ಸಂರಚನೆ ತಯಾರಾಗಿದೆ. ಮತ್ತು ಈ ಕಾರಣದಿಂದ ವಿಕಾಸೋನ್ಮುಖ ದೇಶಗಳಿಗೆ ವಿಭಿನ್ನ ಸಾಮಾಜಿಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ರೀತಿಯಲ್ಲಿ ಸಮಾಜದಲ್ಲಿ ವರ್ಗ ವಿಭಜನೆಯಾಗಿ ಭಿನ್ನ ಅಸ್ತಿತ್ವದ ವರ್ಗ ತಯಾರಾಗುತ್ತದೆ. ಅದು ಸಮಾಜದ ವಿಕಾಸಕ್ಕೆ ಬಾಧಕವಾಗುತ್ತದೆ. ಆದ್ದರಿಂದ ವರ್ಗ ಪರಿವರ್ತನೆಯಾಗುವ ಮತ್ತು ಹೊಸ ವರ್ಗ ಸ್ಥಾಪನೆಯಾಗುವ ಕಾರ್ಯವನ್ನು ತಡೆಗಟ್ಟಬೇಕಾಗಿದೆ. ಈ ಸಮಸ್ಯೆಗೆ ಸಮಾಧಾನ (ಪರಿಹಾರ) ಭ್ರಷ್ಟವಿರೋಧಿ ಶಾಸ್ತ್ರ ಮಾಡಬಲ್ಲುದಾಗಿದೆ, ಎಂಬ ವಿಶ್ವಾಸವಿದೆ. ಇದು ಅಸ್ವಾಭಾವಿಕ ರೀತಿಯಲ್ಲಿ ನಿರ್ಮಾಣವಾದ ವರ್ಗವನ್ನು ಸ್ವಾಭಾವಿಕ ರೂಪದಿಂದ ನಿರ್ಮೂಲನ ಮಾಡಬಲ್ಲುದಾಗಿದೆ.

ದೇಶದ ಭೂಗೋಳ, ಭೂಸಂಬಂಧಿತ ರಾಜಕೀಯ ವ್ಯವಸ್ಥೆ, ಪ್ರಾಕೃತಿಕ ಸಂಪತ್ತು ಹಾಗೂ ರಾಜನೈತಿಕ ನೇತೃತ್ವದ ಮರೆಯಲ್ಲಿ ಸಮಾಜ ವರ್ಗೀಕೃತವಾಗಿದ್ದರೂ ಕೂಡ ಸಂಘಟಿತವಾಗಿದೆ. ಉಚ್ಚ ವರ್ಗ ಎರಡು (2) ಪ್ರತಿಶತದಿಂದ ಐದು (5) ಪ್ರತಿಶಿತ ಮತ್ತು ನಿಮ್ನ ವರ್ಗ ಮೂವತ್ತೈದು ಪ್ರತಿಶತಕ್ಕಿಂತಲೂ ಹೆಚ್ಚಾಗಬಹುದಾಗಿದೆ. ಆದರೆ ಒಮ್ಮೆ ಊಹಿಸಿ ನೋಡಿ, ಉಚ್ಚವರ್ಗ ಹದಿನೈದು (15) ಪ್ರತಿಶತ ಮತ್ತು ನಿಮ್ನ ವರ್ಗ ಹದಿನೈದು (15) ಪ್ರತಿಶತವಿರುವ

ಸಾಮಾಜಿಕ ರಚನೆಯನ್ನು ಚಿತ್ರದಲ್ಲಿ ನೋಡಿ.

**ಸ್ವಾಭಾವಿಕ ವಿನ್ಯಾಸ** **ಅಸ್ವಾಭಾವಿಕ ವಿನ್ಯಾಸ**




ಈ ಮೇಲಿನ ಚಿತ್ರ ಹೇಳುತ್ತದೆ. ಸಮಾಜದ ಸ್ವಾಭಾವಿಕ ರಚನೆಯೊಳಗೆ ಸಂತುಲಲಿತ ಸಮಾಜವು ಸಂಘಟಿತವಾಗಿರುತ್ತದೆ. 15% +70% +15% =100% ಇಂತಹ ಸಂತುಲಿತ ಸಮಾಜದೊಳಗೆ ಉಚ್ಚ ವರ್ಗದ ಮತ್ತು ನಿಮ್ನ ವರ್ಗದ ಸಂಖ್ಯೆ ಕಡಿಮೆಗೊಳಿಸುತ್ತಾ, ಆದರ್ಶ ಸಮಾಜದ ಸ್ಥಾಪನೆ ಮಾಡುವುದೇ ಇಂದಿನ ಪ್ರಜಾತಂತ್ರಾತ್ಮಕ ಯುಗದ ಬೇಡಿಕೆಯಾಗಿದೆ. ಈ ರೀತಿಯ ಮಧ್ಯಮ ವರ್ಗದ ಬಾಹುಳ್ಯದ ಸಮಾಜ ನಿರ್ಮಾಣವಾಗಬೇಕು. ಸಮಾಜದ ರಚನೆ ಮತ್ತು ಗಠಬಂಧನದಲ್ಲಿ ವಿಚ್ಛೇದಗಳುಂಟಾಗುವುದರಿಂದ ಸಮಸ್ಯೆಗಳು ಉತ್ಪನ್ನವಾಗುತ್ತವೆ. ಚಿತ್ರದಲ್ಲಿ, ಸಮಾಜದ ಸ್ವಾಭಾವಿಕ ರಚನೆ ಹೊರಹೋಗಿ ಬೇರೊಂದು ವರ್ಗವನ್ನು ನಿರ್ಮಿಸುತ್ತದೆ. ಚಿಕಿತ್ಸಾ ವಿಜ್ಞಾನದಲ್ಲಿ ಇಂತಹ ಅಸ್ವಾಭಾವಿಕ ನಿರ್ಮಾಣವಾದ ಪದಾರ್ಥವನ್ನು 'ಟ್ಯೂಮರ್' ಎನ್ನುತ್ತಾರೆ. ಅದನ್ನು ಕತ್ತರಿಸಿ ಬಿಸುಟುವುದರಿಂದ ಶರೀರ ಸ್ವಸ್ಥವಾಗುತ್ತದೆ. ಇಲ್ಲಿಯೂ ಕೂಡ ವಿಕಾಸೋನ್ಮುಖ ದೇಶಗಳಲ್ಲಿ ಸಮಾಜದ ರಚನೆ ಸ್ವಾಭಾವಿಕ ರಚನೆಯ ಮೇರೆಯ ಹೊರಗೆ ಅತಿರಿಕ್ತ (ಬೇರೆ) ಸಮಾಜದ ನಿರ್ಮಾಣವಾಗುತ್ತದೆ. ಇಂತಹ ವರ್ಗವನ್ನು ಭ್ರಷ್ಟವಿರೋಧಿ ಶಾಸ್ತ್ರದ ಹಾಗೂ ಸಿದ್ಧಾಂತದ ನೆಲೆಯಲ್ಲಿ ಸಂಪೂರ್ಣ ಸಮಾಪ್ತಗೊಳಿಸಿ, ಸಮಾಜದ ಸ್ವಾಭಾವಿಕ ರಚನೆಯ ರಕ್ಷಣೆ ಮಾಡಬಹುದಾಗಿದೆ. ಏಕೆಂದರೆ ಅತಿ ನಿಮ್ನ ವರ್ಗ ಮತ್ತು ಉಚ್ಚ ಮಧ್ಯಮ ವರ್ಗ, ಸಮಾಜದಲ್ಲಿ ದ್ವಂದ್ವ, ಅನ್ಯಾಯ, ಅತ್ಯಾಚಾರ, ದುರಾಚಾರ

ಮತ್ತು ಭ್ರಷ್ಟಾಚಾರದಂತಹ ಮಾನವೀಯ ಶತ್ರುಗಳನ್ನು ಸಂರಕ್ಷಿಸುತ್ತವೆ. ಇದಕ್ಕಾಗಿ ವಿಕಾಸೋನ್ಮುಖ ದೇಶಗಳಲ್ಲಿ ಅಸ್ವಾಭಾವಿಕ ರೂಪದಲ್ಲಿ ನಿರ್ಮಾಣವಾಗುವ ಅತಿರಿಕ್ತ ವರ್ಗದ ಉಪಚಾರ ( ಸುರಕ್ಷತೆ) ಮಾಡುವ ವಿಧಾನ ಭ್ರಷ್ಟವಿರೋಧಿ ಶಾಸ್ತ್ರದಲ್ಲಿ ಪ್ರಸ್ತುತವಿದೆ.

***

# 21. ಭ್ರಷ್ಟಚಾರ ವಿರುದ್ಧ ಶಾಸ್ತ್ರದ ವಿಕಾಸಕ್ರಮ
## (Develpeent series of Anticorruption)

ಭ್ರಷ್ಟಾಚಾರದ ವಿಕಾಸಕ್ರಮವನ್ನು ತಿಳಿಯುವುದಕ್ಕಾಗಿ, ಇದರ ಉತ್ಪತ್ತಿಯಿಂದ ಹಿಡಿದು ಗಂತವ್ಯ ಬಿಂದು [ಗುರಿಮುಟ್ಟುವ ತನಕ] ವಿನವರೆಗಿನ ಕ್ರಮಿಕ ವಿಕಾಸವನ್ನು ತಿಳಿಯಪಡಿಸಬೇಕಾಗಿದೆ. ಇದರ ಅವಶ್ಯಕತೆಯೊಂದಿಗೆ ಇದರಲ್ಲಿ ಯಾವ ಯಾವ ಸ್ಥಿತಿಯಲ್ಲಿ ಪರಿವರ್ತನೆಯಾಗುತ್ತಾ ಸಾಗಿದೆ ಮತ್ತು ಇದರ ಸ್ವಾಭಾವಿಕ ಪರಿವರ್ತನೆಯನ್ನು ಮನನ ಮಾಡಿಕೊಳ್ಳುವುದರೊಂದಿಗೆ, ಕ್ರಮವಾಗಿ ಇದರ ವಿಕಸಿತ ರೂಪದ ವಿಶ್ಲೇಷಣೆ ಮತ್ತು ವ್ಯಾಖ್ಯಾನ ಮಾಡುತ್ತಾ ಕ್ರಮವಾದ ವಿಕಾಸವನ್ನು ಸ್ವೀಕರಿಬೇಕು. ಯಾವುದೇ ವಿಷಯದ ಅಥವಾ ಯೋಜನೆಯ ವಿಕಾಸ ಅನಾಯಾಸವಾಗಿ ಆಗುವುದಿಲ್ಲ. ವಿಷಯ – ಯೋಜನೆಗಳ ವಿಕಾಸ ಕ್ರಮವಾದ ರೀತಿಯಲ್ಲಿ ಆಗುತ್ತದೆ. ಇದೇ ರೀತಿ ಭ್ರಷ್ಟಾಚಾರ ವಿರುದ್ಧದ ವಿಕಾಸವೂ ಕೂಡ ಕ್ರಮವಾದ ರೂಪದಲ್ಲೇ ಆಗುತ್ತದೆ. ಇದರ ವಿಕಾಸ ಕ್ರಮವನ್ನು ಈ ಕೆಳಗಿನಂತೆ ತಿಳಿಯಬಹುದು.

1. ಭ್ರಷ್ಟ ವಿರೋಧಿ ವಿಷಯದಲ್ಲಿ ಪ್ರಾಜ್ಞರೊಂದಿಗೆ ಸಂವಾದ
2. ಉನ್ನತ ಮಟ್ಟದ ವಿದ್ಯಾರ್ಥಿಗಳಿಂದ ಶೋಧ ಕಾರ್ಯ
3. ವಿಷಯಗತ ಪರಿಚಯ ಹಾಗೂ ವಿಶ್ಲೇಷಣೆ
4. ಸ್ನಾತಕೋತ್ತರ ಮಟ್ಟದಲ್ಲಿ ಪಠನ –ಪಾಠನ (ಅಧ್ಯಯನ– ಅಧ್ಯಾಪನ) ದ ಸಿದ್ಧತೆ.
5. ಭ್ರಷ್ಟವಿರೋಧಿ ಶಾಸ್ತ್ರದ ಪರಿಚಯ
6. ಎಲ್ಲಾ ಮಟ್ಟದ ಪಾಠ್ಯಪುಸ್ತಕಗಳ ಸಿದ್ಧತೆ

7. ವಿದ್ಯಾವಿದ ( ವಿದ್ಯಾವಂತರ ) ಜನಶಕ್ತಿಯ ನಿರ್ಮಾಣ

8. ರಾಜ್ಯವ್ಯವಸ್ಥೆಯ ಕ್ಷೇತ್ರದಲ್ಲಿ ನೀತಿ ಹಾಗೂ ನಿಯಮಗಳ ನಿರ್ಮಾಣ

9. ಭ್ರಷ್ಟಾಚಾರ ನಿಯಂತ್ರಿತ ಸಮಾಜದ ಸೃಷ್ಟಿಸುವಿಕೆ

## 1. ಭ್ರಷ್ಟವಿರೋಧಿ ವಿಷಯದಲ್ಲಿ ಪ್ರಾಜ್ಞರೊಂದಿಗಿನ ಸಂವಾದ (Academic debat and discussion on Anticorruption)

ಯಾವ ಸಮಾಜದಲ್ಲಿ ಭ್ರಷ್ಟಾಚಾರವು ವ್ಯಾಪಿಸಿರುತ್ತದೋ, ಅಲ್ಲಿ ಭ್ರಷ್ಟಾಚಾರ ಜನ್ಯ ಕಾರ್ಯದಿಂದ ದೇಶ, ಸಮಾಜ ಮತ್ತು ರಾಷ್ಟ್ರದ ಉನ್ನತಿ ಆಗಲಾರದು. ಎಲ್ಲಾ ಕ್ಷೇತ್ರಗಳ ಉನ್ನತಿ ಸ್ಥಗಿತವಾಗುವುದರಿಂದ, ಬಾಧೆ (ತೊಂದರೆ) ಯ ಕಾಲಾವಕಾಶದಲ್ಲಿ , ಅವಿಶ್ವಾಸದ ಸ್ಥಿತಿ ಉಂಟಾಗುತ್ತದೆ. ಅವಿಶ್ವಾಸದ ಪರಿಸ್ಥಿತಿಯಲ್ಲಿ ಅವಸರವಾದ ಹುಟ್ಟಿಕೊಳ್ಳುತ್ತದೆ ಮತ್ತು ಇದೊಂದು ಬೇಜವಾಬ್ದಾರ ಸಮುದಾಯವನ್ನು ಹುಟ್ಟುಹಾಕುತ್ತದೆ. ಅದು ಸಮಾಜದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜನೈತಿಕ ಸಂಕಟವನ್ನುಂಟು ಮಾಡುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಬೌದ್ಧಿಕ ಕ್ಷೇತ್ರ ಅಲ್ಲಾಡುತ್ತದೆ ಮತ್ತು ತನ್ನ ಜವಾಬ್ದಾರಿಯನ್ನು ಅರಿತುಕೊಳ್ಳುತ್ತದೆ. ಬೌದ್ಧಿಕ ವರ್ಗದ ಚಿಂತೆ ಅವರಿಗೆ ದೇಶ ಮತ್ತು ಸಮಾಜಕ್ಕಾಗಿ, ಏನನ್ನಾದರೂ ಮಾಡುವುದಕ್ಕಾಗಿ ಪ್ರೋತ್ಸಾಹಿತಗೊಳಿಸುತ್ತದೆ ಮತ್ತು ಆಗಲೇ ಈ ಪರಿಸ್ಥಿತಿಯಿಂದ ರಾಷ್ಟ್ರವನ್ನು ಹೊರ ತರುವ ಪ್ರಯತ್ನಗಳು ಶುರುವಾಗುತ್ತವೆ. ಈ ಪ್ರಯಾಸವೇ ಪ್ರಾಜ್ಞರ ಚಿಂತನೆಯಾಗಿದೆ. ಚರ್ಚೆಗಳು ಮತ್ತು ನಿರ್ಣಯಗಳು. ಈ ರೀತಿಯಲ್ಲಿ ಭ್ರಷ್ಟಾಚಾರದ ವಿರುದ್ಧದ ವಿಷಯದಲ್ಲಿ ಕ್ರಿಯಾಶೀಲವಾಗುವುದರಿಂದ ಪ್ರಾಜ್ಞಿಕ (ಪ್ರಜ್ಞಾವಂತರ) ಸಂವಾದ (ಚರ್ಚೆಗಳು) ಶುರುವಾಗುತ್ತವೆ ಮತ್ತು ಇದೇ ಪ್ರಾರಂಭಿಕ ಸ್ಥಿತಿಯಾಗಿದೆ. ಗುರಿಮುಟ್ಟುವ ನಿರ್ಣಯ ಮಾಡುವಲ್ಲಿ ಇದೇ ಪ್ರಾರಂಭಿಕ ಬಿಂದುವು ಕೂಡ ಆಗಿದೆ.

## 2. ಉನ್ನತ ಮಟ್ಟದ ವಿದ್ಯಾರ್ಥಿಗಳ ಮೂಲಕ ಸಂಶೋಧನೆ ಕಾರ್ಯ ಮಾಡಿಸುವುದು. [Research works by higher level Students ]

ಭ್ರಷ್ಟಾಚಾರದ ವಿರುದ್ಧ ಯಾವಾಗ ಪ್ರಾಜ್ಞರಲ್ಲಿ ಚರ್ಚೆಗಳಾಗುತ್ತವೋ ಆಗ ಈ ವಿಷಯದಲ್ಲಿ ಅನುಸಂದಾನದ (ಸಂಶೋಧನೆ) ಅವಶ್ಯಕತೆ ಕಂಡು ಬರುತ್ತದೆ. ಇದಕ್ಕನುಸಾರವಾಗಿ ವಿದ್ವಾಂಸರಿಂದ ಶೋಧಕಾರ್ಯ ಮಾಡಿಸುವುದರೊಂದಿಗೆ ಈ ವಿಷಯವನ್ನು ಗಂಭೀರವಾಗಿ ಪರೀಕ್ಷಿಸಿ ಸೂಕ್ಷ್ಮರೂಪದಿಂದ ಅಧ್ಯಯನದ

ವ್ಯವಸ್ಥೆಯ ಸೃಷ್ಟಿಯಾಗುತ್ತದೆ. ಮಾಧ್ಯಮಿಕ ಹಾಗೂ ಉಚ್ಚ ಮಾಧ್ಯಮಿಕ ವಿದ್ಯಾಲಯದ ವಿದ್ಯಾರ್ಥಿಯಿಂದ ಈ ಗಹನ ವಿಷಯದಲ್ಲಿ ಶೋಧಕಾರ್ಯ ಸಂಭವವಿಲ್ಲ. ಉನ್ನತ ಮಟ್ಟದ ಅಧ್ಯಯನದಿಂದಲೇ ಇದು ಸಂಭವ ಸಾಧ್ಯ. ಇದಕ್ಕಾಗಿ ಸ್ನಾತಕೋತ್ತರ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಂದ ಈ ವಿಷಯದ ಸಂಶೋಧನಾಕಾರ್ಯ ಮಾಡಿಸಬೇಕು. ಈ ವಿಷಯವನ್ನು ಸಾಮಾಜಿಕವಾಗಿ ಹಾಗೂ ಮಾನವ ಸಂಪನ್ಮೂಲ ವಿಭಾಗದ ಸಂಬಂಧಿತ ವಿಷಯಗಳ ಮೂಲಕ ಸಂಶೋಧನೆಯ ಕಾರ್ಯ ಮಾಡಿಸಬಹುದಾಗಿದೆ. ಅದು ಹೇಗೆಂದರೆ, ರಾಜನೀತಿ ಶಾಸ್ತ್ರ, ಸಮಾಜಶಾಸ್ತ್ರ, ಆರ್ಥಿಕ ಶಾಸ್ತ್ರ, ವ್ಯವಸ್ಥಾಪನೆ, ಜನಪ್ರಕಾಶನ ಸ್ಥಾನೀಯ ವಿಕಾಸ ಶಾಸ್ತ್ರ, ಪತ್ರಗಾರಿಕೆ ಹಾಗೂ ಕಾನೂನು ಇತ್ಯಾದಿ ವಿಷಯಗಳನ್ನು ಮೂಲ ವಿಷಯುವನ್ನಾಗಿಟ್ಟುಕೊಂಡು, ಶೋಧಕಾರ್ಯ ಮಾಡುವುದು, ಮಾಡಿಸುವುದಾಗಬೇಕು.

### 3. ವಿಷಯಗತ ಪರಿಜ್ಞಾನ ಹಾಗೂ ವಿಶ್ಲೇಷಣೆ [Identification and analysis subject matter ]

ಸಂಶೋಧನೆಯ ಮೂಲಕ ವಿಷಯದ ಕುರಿತಾದ ಅರಿವು ಮತ್ತು ವಿಶ್ಲೇಷಣೆ ಮಾಡಿ, ಭ್ರಷ್ಟವಿರೋಧಿ ಶಾಸ್ತ್ರವನ್ನು ಅನ್ಯ ವಿಷಯಗಳೊಂದಿಗೆ ಸಮೀಕರಿಸುವ ಕಾರ್ಯವಾಗುತ್ತದೆ. ಯಾವುದರಲ್ಲಿ [ಎಲ್ಲೆಲ್ಲಿ] ಪೂರ್ಣತ್ವ ಲಭ್ಯವಾಗಿಲ್ಲವೋ, ಆ ವಿಷಯದ ವಿಷಯಾಂತರ್ಗತ ವಿಷಯವನ್ನು ಗುರುತಿಸುವುದು ಹಾಗೂ ವಿಶ್ಲೇಷಣೆ ಮಾಡಿ, ಪೂರ್ಣತ್ವ (ಪರಿಪೂರ್ಣತೆ) ದ ಕೆಲಸವನ್ನು ಕೂಡ ಈ ಭ್ರಷ್ಟವಿರೋಧಿ ಶಾಸ್ತ್ರ ಮಾಡುತ್ತದೆ. ವಿಷಯದ ಸರಿಯಾದ ಪರಿಜ್ಞಾನ ಮತ್ತು ವಿಷಯದ ವಿಶ್ಲೇಷಣೆ ಇದರ ವಿಕಾಸಕ್ಕೆ ಅವಶ್ಯಕ ತತ್ವದ ಬೋಧೆಯನ್ನು ಮಾಡುತ್ತದೆ.

### 4. ಸ್ನಾತಕೋತ್ತರದಲ್ಲಿ ಅಧ್ಯಯನ – ಅಧ್ಯಾಪನದ ಸಿದ್ಧತೆ (Preparation to bring the subject in the curriculum of post graduate Level)

ವಿಷಯದ ಕುರಿತಾದ ಅರಿವು ಮತ್ತು ಅನ್ಯ ಅಧ್ಯಯನ – ಅಧ್ಯಾಪನದ ಸಿದ್ಧತೆ ಆಗಬೇಕಾಗಿದೆ. ಪಠ್ಯಕ್ರಮದ ಕೊರತೆಯಿಂದಾಗಿ ಶಾಲಾ –ಕಾಲೇಜುಗಳ ಹಂತದಲ್ಲಿ ಇದರ ಕಲಿಕೆಯ ಸಂಭವವಿಲ್ಲ. ಆದರೆ ವಿಶ್ವ ವಿದ್ಯಾಲಯ ಮಟ್ಟದಲ್ಲಿ ಸಾಧ್ಯವಿದೆ. ಏಕೆಂದರೆ, ವಿಷಯಗತ ಆಳಜ್ಞಾನವೇ ಅನ್ಯ ವಿಷಯಗಳೊಂದಿಗೆ ಸಂಬಂಧವನ್ನು ಸ್ಥಾಪಿಸುವುದಾಗಿದೆ. ಭ್ರಷ್ಟಾಚಾರವೆಂಬುದು ಸಮಾಜದಲ್ಲಿ ಒಂದು ವಿಕೃತಿಯಾಗಿದೆ. ಹಾಗಾಗಿ ಇದು ಸಾಮಾಜಿಕ ಸಮಸ್ಯೆಯಾಗಿದೆ. ಸಮಾಜದ

ವಿಕಾಸ ಹಾಗೂ ಉತ್ಥಾನದ ಜೊತೆಗೆ ಸಂಬಂಧವಿಟ್ಟುಕೊಳ್ಳಲು ಅದು ಎಲ್ಲಾ ಅಧ್ಯಯನ– ಅಧ್ಯಾಪನದ ವಿಷಯದೊಂದಿಗೆ ಇದರ ನಿಕಟ ಸಂಬಂಧ ಸ್ಥಾಪಿತವಾಗುತ್ತದೆ. ಇದೇ ಸೂತ್ರದ ಆಧಾರದಲ್ಲಿ ಸಂಬಂಧಿತ ವಿಷಯವನ್ನು ಈ ವಿಷಯದೊಂದಿಗೆ ಜೋಡಿಸಿ, ವಿಷಯಗಳು ಕೆಳ ಹಂತದ ಪ್ರಾರಂಭವಾಗುತ್ತದೆ. ಏಕೆಂದರೆ ಇದು ಹೊಸ ವಿಚಾರ. (ವಿಷಯ) ಪ್ರಜ್ಞಾವಂತಿಕೆಯ ಇತಿಹಾಸದಲ್ಲಿ ತನ್ನ ಉಪಸ್ಥಿತಿಯನ್ನು ಸ್ಥಾಪಿಸುತ್ತಿದೆ.

## 5. ಭ್ರಷ್ಟವಿರೋಧಿ ಶಾಸ್ತ್ರದ ಪರಿಚಯ (Introduction of Anticorruption Science )

ಭ್ರಷ್ಟಾಚಾರವು ಸಾಮಾಜಿಕ ರೋಗವಾಗಿದೆ. ಹಾಗಾಗಿ, ಇದರ ರೋಗ ಪತ್ತೆ (ನಿವಾರಣೆ ) ಕೂಡ ಸಾಧ್ಯವಿದೆ. ರೋಗದ ನಿವಾರಣೆಗಾಗಿ ಔಷಧೀಯ ಅವಶ್ಯಕತೆ ಇರುತ್ತದೆ. ಈ ಸಂದರ್ಭದಲ್ಲಿ ಭ್ರಷ್ಟಾಚಾರ ನಿಯಂತ್ರಣ ಮಾಡುವ ನೀತಿ, ನಿಯಮ, ಪದ್ಧತಿ ಮತ್ತು ಸಿದ್ಧಾಂತವೇ ಔಷಧಿಯಾಗಿದೆ. ಇದರ ಆಧಾರದಲ್ಲಿ ಅನುಸಂಧಾನ ವಿಶ್ಲೇಷಣೆ ಮತ್ತು ವ್ಯಾಖ್ಯೆಯ ಮೂಲಕ ಯಾವ ತತ್ವಗಳ ಸಮೂಹ ಸಿದ್ಧವಾಗುತ್ತದೆ. ಅದೇ ಭ್ರಷ್ಟವಿರೋಧಿ ಶಾಸ್ತ್ರ. ಭ್ರಷ್ಟವಿರೋಧಿ ಶಾಸ್ತ್ರ ಅರ್ಥಾತ್ ಭ್ರಷ್ಟಾಚಾರ ವಿರುದ್ಧದ ವಿಜ್ಞಾನವಾಗಿದೆ. ಭ್ರಷ್ಟಾಚಾರ ವಿರುದ್ಧದ ವಿಜ್ಞಾನದ ಪರಿಚಯ ಭ್ರಷ್ಟವಿರೋಧಿ ಶಾಸ್ತ್ರ ಮಾಡಿಸುತ್ತದೆ. ಈ ಹೊಸ ದರ್ಶನವು ವಿಶ್ವದ ಮಾನವ ಸಮಾಜದಲ್ಲಿ ಹರಡಿರುವ ಈ ಭ್ರಷ್ಟಾಚಾರದ ಬೇರನ್ನು ಕತ್ತರಿಸಬಲ್ಲುದಾಗಿದೆ. ಮತ್ತು ಇದರ ನಿರ್ಮೂಲನೆಯೂ ಆಗಬಲ್ಲುದು. ಭ್ರಷ್ಟಾಚಾರ ರೂಪಿ ರೋಗದಿಂದ ಭ್ರಷ್ಟಾಚಾರ ವಿರೋಧಿ ಶಾಸ್ತ್ರವು ಬಿಡುಗಡೆಯನ್ನು ನೀಡಲು ಸಕ್ಷಮವಾಗಿದೆ.

## 6. ಎಲ್ಲಾ ಹಂತದ ಪಠ್ಯಪುಸ್ತಕಗಳ ಸಿದ್ಧತೆ [Preparation of Textbooks for all Levels ]

ಪ್ರಾಥಮಿಕ ವಿದ್ಯಾಲಯದಿಂದ ಮಾಧ್ಯಮಿಕ ಮತ್ತು ಉಚ್ಚ ಸ್ತರದವರವರೆಗೂ ಭ್ರಷ್ಟವಿರೋಧಿ ವಿಷಯದ ಅಧ್ಯಯನ–ಅಧ್ಯಾಪನಕ್ಕಾಗಿ ಸಿದ್ಧ ಪಠ್ಯಪುಸ್ತಕಗಳಿಲ್ಲದಿರುವುದರಿಂದ ವಿದ್ಯಾರ್ಥಿಗಳಿಗೆ ಇದರ ಪರಿಚಯ ನೀಡಲು ಸಾಧ್ಯವಾಗದು. ಅವಶ್ಯಕತೆಗನುಗುಣವಾಗಿ ವಿದ್ವಾಂಸರಿಂದ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವ ಅವಶ್ಯಕತೆ ಇದೆ ಮತ್ತು ಸಮಯಾನುಸಾರ ಅದರಲ್ಲಿ ಪರಿಷ್ಕರಣೆಯ ಅವಶ್ಯಕತೆಯೂ ಇದೆ. ಭ್ರಷ್ಟವಿರೋಧಿ ಶಾಸ್ತ್ರದ ಅಧ್ಯಯನದಿಂದ ಸಮಾಜದಲ್ಲಿ ವ್ಯಾಪ್ತವಾಗಿರುವ ಈ ರೋಗದಿಂದ ಮುಕ್ತಿ ದೊರೆಯಬಹುದು ಮತ್ತು ಒಂದು

ಭ್ರಷ್ಟಾಚಾರಮುಕ್ತ ಸಮಾಜದ ಸ್ಥಾಪನೆಯಾಗಬಲ್ಲುದು. ಇದಕ್ಕಾಗಿ ಕೆಳಹಂತದಿಂದಲೇ ಪಠ್ಯಕ್ರಮ ಸಿದ್ಧಗೊಳಿಸುವ ಅವಶ್ಯಕತೆ ಇದೆ.

### 7. ಪರಿಣತ ಜನಶಕ್ತಿಯ ನಿರ್ಮಾಣ [Production of Experts ]

ಭ್ರಷ್ಟಾಚಾರದ ಎಲ್ಲಾ ಆಯಾಮ, ಅದರ ಸ್ವಭಾವ – ಪ್ರಭಾವದ ಕುರಿತು ಸರಿಯಾದ ರೀತಿಯಲ್ಲಿ ವಿಶ್ಲೇಷಣೆ ಮತ್ತು ವ್ಯಾಖ್ಯೆ ಹಾಗೂ ನಿರಾಕರಣೆ (ಅನುಪಯುಕ್ತ ವಿಚಾರ ನಿರಾಕರಿಸುವುದು.) ಮಾಡುವ ಸಾಮರ್ಥ್ಯವುಳ್ಳ ಜನಶಕ್ತಿಯೇ ವಿಜ್ಞ (ಪರಿಣತ) ಜನಶಕ್ತಿಯಾಗಿದೆ. ಪರಿಣತ ಜನಶಕ್ತಿಯ ನಿರ್ಮಾಣದಿಂದಲೇ ಭ್ರಷ್ಟವಿರೋಧಿ ಶಾಸ್ತ್ರದ ವಿಕಾಸ ಸಾಧ್ಯವಾಗುವುದು. ಇದಕ್ಕಾಗಿ ಇದರ ಪ್ರಾರಂಭ ಪ್ರಜ್ಞಾವಂತರಿಂದಲೇ ಆಗಬೇಕು. ಪ್ರಾರಂಭಿಕ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಅಧ್ಯಯನ–ಅಧ್ಯಾಪನದಿಂದ ಅರ್ಧಪಾಂಡಿತ್ಯ ಉಳ್ಳ ಜನಶಕ್ತಿ ತಯಾರಾಗಬಹುದು. ಆದರೆ, ಈ ಶಾಸ್ತ್ರವನ್ನು ಯಾವಾಗ ಪೂರ್ಣರೂಪದಲ್ಲಿ ಗ್ರಹಿಸುವರೋ ಆಗ ಪರಿಣತ ಜನಶಕ್ತಿ ತಯಾರಾಗಬಹುದು. ಹೀಗೆ ಭ್ರಷ್ಟವಿರೋಧಿ ಶಾಸ್ತ್ರದ ಆಧಾರದಲ್ಲಿ ಮೂಲವಿಷಯವೆಂದು ಆಯ್ಕೆಮಾಡಿ, ಅಧ್ಯಯನ ವಿಧಾನ ಮತ್ತು ಸಿದ್ಧಾಂತ ನಿರ್ಮಾಣದ ಆಧಾರದಲ್ಲಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಮತ್ತು 'ವಿದ್ಯಾವಾರಿಧಿ'ವರೆಗಿನ ಅಧ್ಯಯನವನ್ನು ಪ್ರಾರಂಭಿಸಿ, ಭ್ರಷ್ಟವಿರೋಧಿ ಪರಿಣತ ಜನಶಕ್ತಿಯ ನಿರ್ಮಾಣ ಮಾಡಬೇಕಾಗಿದೆ.

### 8. ರಾಜ್ಯ ವ್ಯವಸ್ಥೆಯ ಕ್ಷೇತ್ರದಲ್ಲಿ ನೀತಿ ಹಾಗೂ ನಿಯಮಗಳ ನಿರ್ಮಾಣ [Making Policies and plans in State affair]

ರಾಜ್ಯ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕಾಗಿ ನೀತಿ ನಿಯಮ ಹಾಗೂ ನಿಯಮಾವಳಿ (ವಿಧಾನ) ಯ ನಿರ್ಮಾಣವಾಗಬೇಕು. ಹಾಗೂ ಸಮಾಜದಲ್ಲಿ ಭ್ರಷ್ಟಾಚಾರ ನಿಯಂತ್ರಿತ ವ್ಯವಸ್ಥೆಯ ಸೃಷ್ಟಿ ಮಾಡಬೇಕು. ರಾಜ್ಯ ವ್ಯವಸ್ಥೆಯ ಮೂಲಕ ನೀತಿ ನಿಯಮಾವಳಿಯ ನಿರ್ಮಾಣ ಮಾಡಿ, ಯಾವ ಕ್ಷೇತ್ರದಲ್ಲಿ ಭ್ರಷ್ಟಾಚಾರ ವ್ಯಾಪ್ತವಾಗಿದೆಯೋ ಅಥವಾ ಎಲ್ಲಿ ಅಪರಾಧಗಳು ಸಂಭವಿಸುವ ಸಂಭವನೀಯತೆ ಇದೆಯೋ, ಅದಕ್ಕಾಗಿ ಸೂಕ್ತವಾದ ಕಾನೂನುಗಳ ನಿರ್ಮಾಣ ಮಾಡಬೇಕು. ಈ ಕಾನೂನುಗಳಿಂದ ಭ್ರಷ್ಟಾಚಾರವನ್ನು ಸ್ಪಷ್ಟವಾಗಿ ಹೆಸರಿಸಿ, ಉಲ್ಲೇಖಿಸುವಂತಾಗಬೇಕು. ಅಪರಾಧಿಯನ್ನು ಕಾನೂನಿನ ವ್ಯಾಪ್ತಿಗೆ ತರಬೇಕು. ರಾಜ್ಯ ವ್ಯವಸ್ಥೆಯ ಮೂಲಕ ನೀತಿ ಹಾಗೂ ನಿಯಮಗಳ ನಿರ್ಮಾಣ ಭ್ರಷ್ಟವಿರೋಧಿ ಶಾಸ್ತ್ರದ ಮೂಲಕ ನಿರ್ದೇಶಿಸಲ್ಪಡಬೇಕು. ಈ ಯುಗವು ಕಾನೂನಿನ ಯುಗವಾಗಿದೆ. ಕಾನೂನೆ ಸಮಾಜಕ್ಕೆ ಮಾರ್ಗದರ್ಶನ ಮಾಡಬಲ್ಲುದು. ಇದಕ್ಕಾಗಿ ಭ್ರಷ್ಟಾಚಾರದ


ವಿರುದ್ಧವಾಗಿ ನೀತಿ ನಿಯಮ ಹಾಗೂ ನಿಯಮಾವಳಿಗಳ ನಿರ್ಮಾಣ ಅವಶ್ಯಕವಾಗಿದೆ. ಒಂದು ವೇಳೆ ರಾಜ್ಯ ವ್ಯವಸ್ಥೆ ಭ್ರಷ್ಟಾಚಾರದ ವಿರುದ್ಧ ಸರಿಯಾದ ಕಾನೂನನ್ನು ಮಾಡದೇ ಹೋದರೆ ಆ ವ್ಯವಸ್ಥೆ ಅಸಫಲವಾಗುವುದು. ಆದ್ದರಿಂದ ರಾಜ್ಯವ್ಯವಸ್ಥೆಯ ಕ್ಷೇತ್ರದಲ್ಲಿ ಭ್ರಷ್ಟಾಚಾರ ವಿರುದ್ಧದ ನೀತಿ ಹಾಗೂ ನಿಯಮಗಳ ನಿರ್ಮಾಣ ಮಾಡಬೇಕು.

### 9. ಭ್ರಷ್ಟಾಚಾರ ನಿಯಂತ್ರಿತ ಸಮಾಜದ ನಿರ್ಮಾಣ (Installation of corruption –free society )


ಭ್ರಷ್ಟಾಚಾರ ನಿಯಂತ್ರಿತ ಸಮಾಜದ ನಿರ್ಮಾಣ ಇದರ ತಾತ್ಪರ್ಯ – ಆ ಸಮಾಜದಲ್ಲಿ ಎಲ್ಲಿ ಭ್ರಷ್ಟಾಚಾರಜನ್ಯ ಯಾವುದೇ ಕಾರ್ಯದ ಸಂಭವನೀಯತೆ ಇರುವುದಿಲ್ಲವೋ ಇದು ಭ್ರಷ್ಟಾಚಾರ ನಿಯಂತ್ರಿತ ಸ್ಥಿತಿಯ ಭ್ರಷ್ಟವಿರೋಧಿ ಶಾಸ್ತ್ರದ ಮೂಲ ಉದ್ದೇಶ್ಯವಾಗಿದೆ. ಭ್ರಷ್ಟವಿರೋಧಿ ಶಾಸ್ತ್ರದ ಪ್ರಭಾವಶಾಲಿ ರೀತಿಯಿಂದ ಒಂದುವೇಳೆ ಸಂಚಾಲಿತವಾದರೆ, ಸಮಾಜದಿಂದ ಭ್ರಷ್ಟಾಚಾರದ ನಿರ್ಗಮನವಾಗಬಹುದು. ಭ್ರಷ್ಟಾಚಾರ ನಿಯಂತ್ರಿತ ಸಮಾಜವನ್ನು ಭ್ರಷ್ಟಾಚಾರ ಮುಕ್ತ ಸಮಾಜವೆಂದೂ ಹೇಳುತ್ತಾರೆ. ಇದಕ್ಕಾಗಿ, ಭ್ರಷ್ಟವಿರೋಧಿ ಶಾಸ್ತ್ರ ಪೂರ್ಣ ರೂಪದಲ್ಲಿ ಕ್ರಿಯಾಶೀಲವಾಗಬೇಕಾಗಿದೆ.

ಇಂತಹ ಸಮಾಜ ನಿರ್ಮಾಣದಿಂದ ಭ್ರಷ್ಟಾಚಾರದಲ್ಲಿ ಶೂನ್ಯ ಸಹನಶೀಲತೆಯ ವ್ಯವಸ್ಥೆ ಉಂಟಾಗಬಹುದು. ಅರ್ಥಾತ್, ಭ್ರಷ್ಟಾಚಾರ ನಿಯಂತ್ರಿತ ಸಮಾಜವೇ ಭ್ರಷ್ಟಾಚಾರದ ವಿಷಯದಲ್ಲಿ ಶೂನ್ಯ ಸಹನಶೀಲತೆಯ ಸ್ಥಿತಿಯಾಗಿದೆ. ಭ್ರಷ್ಟಾಚಾರವ್ಯಾಪ್ತ ಸಮಾಜದ ತಳಹಂತದಿಂದ ಮೇಲೆದ್ದ ವಿಕಾಸಕ್ರಮ ಒಂಭತ್ತು ಹಂತಗಳನ್ನು ಪಡೆದು ಕೊನೆಯಲ್ಲಿ ಶೂನ್ಯ ಸಹನಶೀಲತೆಯ ಸ್ಥಿತಿಯನ್ನು ತಲುಪುತ್ತದೆ. ಇದನ್ನು ಈ ಕೆಳಗೆ ಕೊಟ್ಟಿರುವ ಚಿತ್ರದ ಮೂಲಕ ಅಧ್ಯಯನ ಮಾಡಬಹುದಾಗಿದೆ. ಅಂಕ ಗಣಿತೀಯ ಲೆಕ್ಕದಲ್ಲೂ ಈ ಪ್ರಯೋಗವಾಗಿದೆ. 01 ರಿಂದ 09 ಮತ್ತು ಆನಂತರ '0' ಯ ಸ್ಥಿತಿಯಲ್ಲಿ ತಲುಪಿಯೂ ಭ್ರಷ್ಟಾಚಾರದ ಶೂನ್ಯ ಸಹನಶೀಲತೆಯಲ್ಲಿ ಸ್ಥಿತಿ ಪರಿವರ್ತನೆಯಾಗುತ್ತದೆ.

ಭ್ರಷ್ಟವಿರೋಧಿ ಶಾಸ್ತ್ರದ ವಿಕಾಸ ಕ್ರಮವನ್ನು ಚಿತ್ರದ ಮೂಲಕ ತಿಳಿಯಬಹುದಾಗಿದೆ.



ಇದನ್ನು ರೇಖಾಗಣಿತೀಯ ಲೆಕ್ಕದಿಂದಲೂ ನೋಡಬಹುದಾಗಿದೆ. ಕೆಳಗೆ ರೇಖಾ ಚಿತ್ರ ಪ್ರಸ್ತುತ :–




ಮೇಲಿನ ರೇಖಾತ್ಮಕ ಚಿತ್ರದಲ್ಲಿ ಹೊರಿಜೊಂಟಲ್ ರೇಖೆ 01 ರಿಂದ 05, ಬಿಂದು ಸಮಾನ ರೂಪದಲ್ಲಿ ವಿಭಜಿತವಾಗಿವೆ. ಇದೇ ರೀತಿ ವರ್ಟಿಕಲ್ ರೇಖೆಯೂ ಕೂಡ 5 ರ ಬಿಂದುವಿನಿಂದ ಮೇಲಕ್ಕೆ 9 ರವೆರೆಗೆ ಸಮಾನವಾಗಿ ವಿಭಾಜಿತವಾಗಿದೆ. 1 ನೇ ಬಿಂದುವಿನಿಂದ ಮೇಲಕ್ಕೇರಿ ವರ್ಟಿಕಲ್ ರೇಖೆ ಮತ್ತು 9 ನೇ ಬಿಂದುವಿನಿಂದ ಮೇಲೇರಿ ಹೊರಿಜೊಂಟಲ್ ರೇಖೆಯ ಮಿಲನ ಬಿಂದುವೇ '0' ಆಗಿದೆ ಅದರ 5 ನೇ ಬಿಂದುವಿನ ಜೊತೆಗೆ ಸ್ಪಷ್ಟ ಸಂಬಂಧವಿದೆ. ಇದರೊಂದಿಗೆ 5 ನ್ನು ಕೇಂದ್ರವನ್ನಾಗಿ ಮಾಡಿ 1 ನೇಯದು 9 ರಜೊತೆಗೆ, 2ನ್ನು 8 ರ ಜೊತೆಗೆ , 3 ನ್ನು 7 ರ ಜೊತೆಗೆ ಮತ್ತು 4ನ್ನು 6 ಜೊತೆಯಲ್ಲಿ ಸ್ಪಷ್ಟ ಸಂಬಂಧ ಮಾಡಲಾಗಿದೆ. ಈ ರೀತಿಯಲ್ಲಿ 1ನೇ ಬಿಂದುವು ಎರಡನೇ ಬಿಂದುವಿನ ಜೊತೆಗೆ ಕೋನ ಹಾಗೂ ಆಯತದಲ್ಲಿ ಕೂಡ ಸಮಾನವಾಗಿ ಸಂಬಂಧ ಸ್ಥಾಪನೆ ಮಾಡಿದೆ. ಅರ್ಥಾತ್ ಒಂದರ ಬಿಂದುವಿನಿಂದ ಪ್ರಾರಂಭ ಪರಿಣತರ ಚರ್ಚೆ (ಸಂವಾದ) 9 (ಒಂಭತ್ತು) ರ ಬಿಂದು ಭ್ರಷ್ಟಾಚಾರ ನಿಯಂತ್ರಿತ ಸಮಾಜ ನಿರ್ಮಾಣ ಮಾಡಬಲ್ಲುದಾಗಿದೆ. ಒಂದು ವೇಳೆ ಅದು ಐದರ ಬಿಂದುವನ್ನು ಭ್ರಷ್ಟ ವಿರೋಧಿ ಶಾಸ್ತ್ರದ ಆಧಾರದಲ್ಲಿ ನಂತುಕೊಳ್ಳಬಹುದಾಗಿದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ಭ್ರಷ್ಟ ವಿರೋಧಿ ಶಾಸ್ತ್ರದ ವಿಕಾಸದ ಮೂಲ ಕೇಂದ್ರಬಿಂದುವೇ ಭ್ರಷ್ಟ ವಿರೋಧಿಶಾಸ್ತ್ರದ ಪರಿಚಯವಾಗಿದೆ. ಇದರ ಅಂತಿಮ ಗುರಿ (ಉದ್ದೇಶ) ಭ್ರಷ್ಟಾಚಾರದಲ್ಲಿ ಶೂನ್ಯ ಸಹನಶೀಲತೆಯ ಸ್ಥಿತಿಯನ್ನು ಸ್ಥಾಪಿಸುವುದಾಗಿದೆ.

ಈ ಸೂತ್ರವನ್ನು ಅಂಕ ಗಣಿತಿಯ ದೃಷ್ಟಿಯಿಂದ ನೋಡೋಣ. ಭ್ರಷ್ಟವಿರೋಧಿ ಶಾಸ್ತ್ರದ ವಿಕಾಸವನ್ನು ನಾವು ಒಂದರಿಂದ ಒಂಭತ್ತು ಅಂಕೆಗಳಲ್ಲಿ ವಿಭಜಿಸಿ, ವಿಸ್ತಾರಗೊಳಿಸಿದ್ದೇವೆ. ಆದ್ದರಿಂದ ಇದನ್ನು ಅಂಕಗಣಿತಿಯ ದೃಷ್ಟಿಯಿಂದ ಕೂಡ

ನೋಡುವುದ ಉಪಯುಕ್ತವೆನಿಸಬಹುದು. ನಮ್ಮಲ್ಲಿ ಜೊತೆಯಲ್ಲಿ 1,2,3,4,5,67,8 ಮತ್ತು 9 ಅಂಕಗಳಿವೆ. ಈ ಅಂಕಗಳನ್ನು ಗಣತಿಯ ಸೂತ್ರದಲ್ಲಿ (ಆಧಾರದಲ್ಲಿ) ವಿಭಜಿಸಿ ನೋಡೋಣ.

***

# 22. ಹೊಸ ವಸಾಹತು ಪದ್ಧತಿ

# [Neo – colonialism ]

ವಿಶ್ವದ ಭೂಭಾಗದಲ್ಲಿ ರಾಜ್ಯ ವ್ಯವಸ್ಥೆಯ ಜೊತೆಯಲ್ಲೇ ವಸಾಹತು ಪದ್ಧತಿ ಸ್ಥಾಪಿತವಾಯಿತು. ಒಂದು ರಾಜ್ಯದ (ರಾಷ್ಟ್ರದ) ಮೂಲಕ ಇನ್ನೊಂದು ರಾಜ್ಯದ ಜೊತೆಗೆ ರಾಜನೈತಿಕ, ಆರ್ಥಿಕ , ಸಾಮಾಜಿಕ, ಮತ್ತು ಯುದ್ಧ ಸಂಬಂಧಿ ಸಂತುಲನೆಯನ್ನು ಮಾಡುವುದಕ್ಕಾಗಿ, ಯಾವ ಒಪ್ಪಂದಗಳನ್ನು ಮಾಡಲಾಗುತ್ತವೆಯೋ, ಅದರಿಂದ ವಸಾಹತು ಪದ್ಧತಿ ಜನ್ಮ ತಳೆಯುತ್ತದೆ. ಒಂದು ಶಕ್ತಿ ಶಾಲಿ ದೇಶವು ಇನ್ನೊಂದು ದುರ್ಬಲ ದೇಶವನ್ನು ತನ್ನ ಪ್ರಭಾವಕ್ಕೊಳಪಡಿಸಿ, ದುರ್ಬಲ ದೇಶದ ಪ್ರಾಕೃತಿಕ ಸಂಸಾಧನಗಳು ಹಾಗೂ ಶ್ರಮ ಸಾಧನಗಳ ಮೇಲೆ ತನ್ನ ಅಧಿಪತ್ಯವನ್ನು ಹೇರಿ ಶೋಷಣೆ ಮಾಡಲಾರಂಭಿಸುತ್ತದೆ. ದುರ್ಬಲ ಶಕ್ತಿವಂತ ದೇಶಗಳು ಶಕ್ತಿವಂತ ದೇಶಗಳಿಗೆ ಪ್ರತ್ಯಕ್ಷ ತೆರಿಗೆಯನ್ನು ಕೊಡುವ ಪದ್ಧತಿಯೂ ಜಾರಿಯಲ್ಲಿದೆ. ಪ್ರಾಚೀನ ಕಾಲದಿಂದಲೂ ನಡೆದು ಕೊಂಡು ಬಂದಿರುವ ಈ ವ್ಯವಸ್ಥೆ ರೂಪಾಂತಗೊಳ್ಳುತ್ತಾ, ದುರ್ಬಲ ಹಾಗೂ ಹೊಸ ದೇಶಗಳನ್ನು ನಡೆಸಿಕೊಳ್ಳುವ ವ್ಯವಸ್ಥೆ ಆಗಿದೆ. ವರ್ತಮಾನದಲ್ಲಿ ಸಂಯುಕ್ತ ರಾಜ್ಯ ಅಮೇರಿಕದಿಂದ ಸಣ್ಣ–ದೊಡ್ಡ ರಾಜ್ಯಗಳಲ್ಲಿ ಪ್ರತ್ಯಕ್ಷ ಶಾಸನ ಸಂಚಾಲಿಸುವುದಕ್ಕಾಗಿ ಸಂಯುಕ್ತ ರಾಜ್ಯ, ವಿಲಾಯತ್ (ಯುರೋಪ್) ತನ್ನ ರಾಜ್ಯವನ್ನು ಸೂರ್ಯಾಸ್ತಮಾನವೇ ಆಗದಿರುವು ಸ್ಥಿತಿಯಲ್ಲಿ ಸ್ಥಾಪಿಸಿದರು. ಯುರೋಪಿನ ಫ್ರಾನ್ಸ್, ಜರ್ಮನಿ, ಸ್ಪೈನ್ ಮತ್ತು ಪೋರ್ಚುಗಲ್‌ನಂತಹ ದೇಶಗಳು, ದಕ್ಷಿಣ ಅಮೇರಿಕಾ, ಆಫ್ರಿಕಾ ಮತ್ತು ಏಷ್ಯಾದ

ಬಡ ದೇಶಗಳಲ್ಲಿ ಅಧಿಪತ್ಯವನ್ನು ನೆಲೆಯೂರಿ ಹೊಸ ವಸಾಹತು ಪದ್ಧತಿಯನ್ನು ದೀರ್ಘಕಾಲದವರೆಗೆ ಸ್ಥಾಪಿಸಿ ಬಿಟ್ಟರು.

17ನೇ ಶತಮಾನದಿಂದ ಬೀಸತೊಡಗಿದ ಹೊಸಗಾಳಿಯಿಂದಾಗಿ, ರಾಜನೈತಿಕ ಜಾಗೃತಿಯ ಕಾರಣದಿಂದಾಗಿ, ಇಂತಹ ವಸಾಹತು ಪದ್ಧತಿಯ ರಾಜ್ಯಗಳ, ಆರ್ಥಿಕ ಸಾಮಾಜಿಕ ಮತ್ತು ರಾಜನೈತಿಕ ರೂಪದಿಂದ ಹಂತ ಹಂತವಾಗಿ ಸ್ವತಂತ್ರವಾಗುತ್ತಾ ಬಂದುವು. ಆದರೆ, ಸಂಪೂರ್ಣವಾಗಿ ಎಲ್ಲಾ ರಾಜ್ಯಗಳು ಸ್ವತಂತ್ರ ಮತ್ತು ಸಾರ್ವಭೌಮ ಸಂಪನ್ನ ರಾಷ್ಟ್ರಗಳಾಗಲು ಸಾಧ್ಯವಾಗಲಿಲ್ಲ. ಈ ರೀತಿಯ ರಾಜಕೀಯ ಹಸ್ತ ಕ್ಷೇಪದಿಂದ ಚಿಕ್ಕ ಚಿಕ್ಕ ರಾಷ್ಟ್ರಗಳು ಮುಕ್ತವಾದರೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಶ್ರೀಮಂತ ಹಾಗೂ ವಿಕಸಿತ ರಾಷ್ಟ್ರಗಳ ಅಧೀನತೆಯಿಂದ ಬಿಡುಗಡೆ ಹೊಂದಲಾರದಾಗಿವೆ. ವರ್ತಮಾನ ಕಾಲಮಾನದಲ್ಲಿ ರಾಜಕೀಯ ಹಸ್ತಕ್ಷೇಪದಲ್ಲಿ ಉದಾರ ನೀತಿಯಿರುವುದಾದರೂ ಅಧಿನಾಯಕವಾದಿ (ತಾನು ದೊಡ್ಡಣ್ಣ) ಪ್ರವೃತ್ತಿಯ ಕಾರಣದಿಂದಾಗಿ ವಿಭಿನ್ನ ರೀತಿಯಿಂದ ಹೊಸ ವಸಾಹತು ಪದ್ಧತಿ ಸ್ಥಾಪಿಸುವುದಕ್ಕಾಗಿ ಈ ಶಕ್ತಿಶಾಲಿ ದೇಶಗಳು ಸನ್ನದ್ಧವಾಗಿವೆ.

ಹೊಸ ವಸಾಹತು ಪದ್ಧತಿಯ ಸ್ಥಾಪನೆಗಾಗಿ, ಶಕ್ತಿಶಾಲಿ ರಾಷ್ಟ್ರಗಳು ಭಿನ್ನ ಭಿನ್ನವಾದ ರೀತಿ ರಿವಾಜುಗಳನ್ನು ಅನುಸರಿಸಿ, ತಮ್ಮ ಪ್ರಭುತ್ವ ಸ್ಥಾಪನೆಮಾಡುವುದರಿಂದ ಹಿಂದೆ ಸರಿಯುವುದಿಲ್ಲ ಹೇಗೆಂದರೆ ,

1. ಆರ್ಥಿಕ ಪ್ರಲೋಭನೆ ( ಆಮಿಷ)
2. ಸಾಮಾಜಿಕ ಆಕರ್ಷಣ
3. ಸಾಂಸ್ಕೃತಿಕ ಪರಿವರ್ತನೆ
4. ರಾಜಕೀಯ ಒತ್ತಡ
5. ಕೂಟನೀತಿಯ ನಡೆ

## 1. ಆರ್ಥಿಕ ಪ್ರಲೋಭನೆ [Economic Temptation]

ವಿಕಾಸೋನ್ಮುಖ ದೇಶಗಳಲ್ಲಿ ಆರ್ಥಿಕ ಆಮಿಷದ ನೀತಿ ಸ್ಥಾಪನೆ ಮಾಡುವ ಕಾರ್ಯದೊಳಗೆ ಸಾಲ ಕೊಡುವುದು, ನೇರ ಆರ್ಥಿಕ ಸಹಯೋಗಕ್ಕೆ ಅನುದಾನದ ಸ್ವರೂಪ ನೀಡುವುದು ಮತ್ತು ಕೊಟ್ಟ ಸಾಲವನ್ನು ಮನ್ನಾ ಮಾಡುವಂತಹ ಕಾರ್ಯಮಾಡಿ ಬಡದೇಶಗಳನ್ನು ಆರ್ಥಿಕ ಹಾಗೂ ಮಾನಸಿಕವಾಗಿ ದುರ್ಬಲಗೊಳಿಸುವ ಕೆಲಸವನ್ನು ಮಾಡುತ್ತಾರೆ. ಈ ರೀತಿಯ ಆರ್ಥಿಕ

ಸಹಯೋಗದ ಹೆಸರಿನಲ್ಲಿ ವಿಶ್ವ ಬ್ಯಾಂಕ್ ಮತ್ತು ಅನ್ಯ ರಾಷ್ಟ್ರೀಯ ಬ್ಯಾಂಕ್ ಮೂಲಕವೂ ಸಾಲ ಹಾಗೂ ಅನುದಾನದ ಕಾರ್ಯ ಯೋಜನೆಯಲ್ಲಿ ಸಿಲುಕಿಸುವ ಕಾರ್ಯ ನಡೆಯುತ್ತದೆ. ಇಷ್ಟು ಮಾತ್ರವಲ್ಲದೆ, ಯಾವುದಾದರೂ ರಾಜಕೀಯ ಪಕ್ಷದ ಜೊತೆ ಸಂಬಂಧಿತ ಸಮುದಾಯ ಅಥವಾ ಸಹಯೋಗಿ ನಿಯೋಗದ ಕ್ಷೇತ್ರಗಳಿಂದಲೂ ಕೂಡ ಬಡರಾಷ್ಟ್ರವನ್ನು ಆರ್ಥಿಕ ಆಮಿಷವನ್ನು ನೀಡಿ ದುರ್ಬಲಗೊಳಿಸುವ ಕಾರ್ಯವು ನಡೆಯುತ್ತದೆ. ಈ ನೀತಿಯ ಅಂತರ್ಗತವೂ ಸಾಲ ಹಾಗೂ ಅನುದಾನದ ಕಾರ್ಯ ಯೋಜನೆಯಲ್ಲಿ ಮೋಸದ (ಸಿಲುಕಿಸುವ) ಕಾರ್ಯ ನಡೆಯುತ್ತದೆ. ಮಾತ್ರವಲ್ಲ, ಯಾವುದಾದರೂ, ರಾಜಕೀಯ ಪಕ್ಷದ ಸಂಬಂಧಿತ ಸಮೂಹ ಹಾಗೂ ಸಹಯೋಗಿ ಕ್ಷೇತ್ರಗಳಿಂದಲೂ ಕೂಡ ಬಡ ದೇಶಕ್ಕೆ ಆರ್ಥಿಕ ಆಮಿಷ ನೀಡಿ, ದುರ್ಬಲಗೊಳಿಸುವ ಕಾರ್ಯ ನಡೆಯುತ್ತದೆ. ಈ ನೀತಿಗನುಗುಣವಾಗಿ, ಈ ಕೆಳಗಿನ ರೀತಿಯಲ್ಲಿ ಅವಲಂಬಿತವಾಗುವಂತೆ ಮಾಡುತ್ತಾರೆ.

ಕ) ರಾಷ್ಟ್ರದ ಮೂಲಕವೇ ಯಾವುದಾದರೂ ನಿಶ್ಚಿತ ಯೋಜನೆಗಾಗಿ ಪ್ರತ್ಯಕ್ಷ ಅನುದಾನ ಕೊಡುವ ಕಾರ್ಯ

ಖ) ನಿಶ್ಚಿತ ಉದ್ದೇಶ ಪ್ರಾಪ್ತಿಗಾಗಿ ಅನ್ಯ ಸರಕಾರಿ ಸಮೂಹದಿಂದ ಸಹಯೋಗ ಪಡೆದುಕೊಳ್ಳುವ ಕಾರ್ಯ

ಗ) ವಿತ್ತೀಯ ಸಂಸ್ಥೆಯಿಂದ ನಿಶ್ಚಿತ ಕಾರ್ಯ ಸಂಪನ್ನಗೊಳಿಸುವುದಕ್ಕಾಗಿ ಸಹಯೋಗ ಉಪಲಬ್ಧವಾಗುವಂತೆ

ಮಾಡುವುದು.

ಘ) ದುರ್ಬಲ ಹಾಗೂ ಅಸ್ಥಿರ ರಾಜನೀತಿಯುಳ್ಳ ರಾಷ್ಟ್ರದಲ್ಲಿ ಅಲ್ಲಿಯ ಬುದ್ಧಿ ಜೀವಿಗಳಿಗೆ ಹೆಚ್ಚೆಚ್ಚು ಆರ್ಥಿಕ ಸಹಯೋಗ ಉಪಲಬ್ದಗೊಳಿಸಿ ಅವರ ಮಾತುಗಳನ್ನು ತಮ್ಮದೇ ಮಾತೆಂಬಂತೆ ಬಿಂಬಿಸುವುದು.

ಙ) ರಾಜಕೀಯ ನಾಯಕರುಗಳಿಗೆ ವ್ಯಕ್ತಿಗತವಾಗಿ ಆರ್ಥಿಕ ಸಹಯೋಗ ಲಭಿಸುವಂತೆ ಮಾಡುವುದು.

ಈ ರೀತಿಯಲ್ಲಿ ಆರ್ಥಿಕ ಸಹಯೋಗ ಲಭಿಸುವಂತೆ ಮಾಡಿ, ಬಡ ದೇಶವನ್ನು ಶಕ್ತಿಹೀನಗೋಳಿಸುವ ಯೋಜನೆ ವಿಕಸಿತ ರಾಷ್ಟ್ರಗಳದ್ದಾಗಿರುತ್ತದೆ.

## 2. ಸಾಮಾಜಿಕ ಆಕರ್ಷಣ [Social Atraction]

ವಿಕಸಿತ ದೇಶ ಬಡ ಹಾಗೂ ವಿಕಾಸೋನ್ಮುಖ ದೇಶಗಳ ಸಾಮಾಜಿಕ ಮೌಲ್ಯ –ಮಾನ್ಯತೆಗಳನ್ನು ಪರಿವರ್ತಿಸಿ, ಅನೇಕ ರೀತಿಯ ಕಾರ್ಯ ಯೋಜನೆಗಳ ಸಂಚಾಲನೆ ಮಾಡುತ್ತಾರೆ. ಈ ಬಡ ದೇಶಗಳ ನಾಗರಿಕರ ನಡವಳಿಕೆ, ಸಾಮಾಜಿಕ ವಿಧಾನಗಳ ವ್ಯವಹಾರ ಹಾಗೂ ಸಾಮಾಜಿಕ ವಿಚಾರಗಳನ್ನು ತಮಗೆ ಅನುಕೂಲವಾಗುವಂತೆ ಮಾಡಿಕೊಳ್ಳಲು ತೋರ್ಪಡಿಕೆಯ ವಿಭಿನ್ನ ರೀತಿಯ ಸಾಮಾಜಿಕ ವಿಚಾರಗಳನ್ನು ತಮಗೆ ಅನುಕೂಲವಾಗುವಂತೆ ಮಾಡಿಕೊಳ್ಳಲು ತೋರ್ಪಡಿಕೆಯ ವಿಭಿನ್ನ ರೀತಿಯ ಸಮಾಜಕ್ಕೆ ಹಿತವಾಗುವ ಕಾರ್ಯ ಯೋಜನೆ ಪ್ರಸ್ತುತಪಡಿಸುವುದನ್ನು ಮಾಡುತ್ತಾರೆ. ಸ್ಪೃಷ್ಯಾಸ್ಪೃಶ್ಯತೆ ಹಾಗೂ ಜಾತಿಯ ಹಾಗೂ ಲೈಂಗಿಕ ವಿಭೇದಗಳನ್ನು ಗುರಿಯಾಗಿರಿಸಿ, ಅಕ್ರಮ ವಲಸಿಗ ದೇಶ ಉಗ್ರ ಘೋಷಣೆಗಳೊಂದಿಗೆ ಬಡ ದೇಶಗಳ ಮುಂದೆ ಪ್ರಸ್ತುತವಾಗುತ್ತವೆ.

ಯಾವುದೇ ಸಮಾಜದ ರಚನೆ ಮತ್ತು ವಿಕಾಸ ಆ ಸಮಾಜದ ಪರಂಪರಾಗತ ರೀತಿ – ಸ್ಥಿತಿ ಹಾಗೂ ಸ್ಥಾಪಿತ ವಿಧಿ ವಿದಾನಗಳಿಂದ ಆಗುತ್ತದೆ. ಇಂತಹ ಸಮಾಜ ಸಂಚಲನದ ಕ್ರಿಯೆಯನ್ನು ಅದೇ ಸಮಾಜದ ಸೀಮಿತ ಹಾಗೂ ವಿಕಸಿತ ರೀತಿ ಸ್ಥಿತಿ ನಿರ್ದೇಶಿಸುತ್ತದೆ. ಆದ್ದರಿಂದ ಯಾವುದೇ ಸಮಾಜದ ಸೀಮಿತ ಹಾಗೂ ವಿಕಸಿತ ರೀತಿ ಸ್ಥಿತಿ ನರ್ದೇಶಿಸುತ್ತದೆ. ಆದ್ದರಿಂದ ಯಾವುದೇ ಸಮಾಜದ ರಚನೆಯನ್ನು ಪರಿವರ್ತಿಸುವ ಪ್ರಯತ್ನದಲ್ಲಿ ವಿಕೃತ ಸಮಾಜದ ಸ್ಥಾಪನೆ ಆಗಬಹುದು. ಸ್ಥಾಪಿತ ಪದ್ಧತಿಯನ್ನು ಬಿಡುವ ಮತ್ತು ನವ, ಆಗಂತುಕ ಸ್ಥಿತಿಯನ್ನು ಸಂಪೂರ್ಣವಾಗಿ ಸ್ವೀಕರಿಸಲಾಗದ ಸ್ಥಿತಿಯಲ್ಲಿ ಸಮಾಜ ಒಂದು ರೀತಿಯಲ್ಲಿ ತ್ರಿಶಂಕು ಸ್ಥಿತಿಯನ್ನು ತಲುಪುತ್ತದೆ. ಇಂತಹ ಸ್ಥಿತಿಯ ಸಮಾಜದಲ್ಲಿ ಪ್ರಾಕೃತಿಕವಾಗಿ ನಡೆದುಕೊಂಡು ಬಂದ ಸ್ಥಿತಿ ಪದ್ಧತಿಗಳಿಗೆ ಹಾನಿಯಾಗುತ್ತದೆ. ಇಂತಹ ಮಧ್ಯಂತರ ಸ್ಥಿತಿಯಲ್ಲಿರುವ ಸಮಾಜದಲ್ಲಿ ಇರುವ ಮಾನವನ ಮನಃಸ್ಥಿತಿ ವಿಕೃತವಾಗುತ್ತದೆ. ಈ ವಸಾಹತುವಾದಿ ದೇಶ ವಿಕಾಸೋನ್ಮುಖ ದೇಶದ ವ್ಯವಸ್ಥೆಯನ್ನು ಕೆಡಿಸುವುದಕ್ಕಾಗಿ ಪ್ರಯತ್ನಶೀಲರಾಗಿರುತ್ತಾರೆ.

## 3. ಸಾಂಸ್ಕೃತಿಕ ಪರಿವರ್ತನೆ [Cultural change ]

ವಿಕಾಸೋನ್ಮುಖ ಅಥವಾ ಬಡದೇಶಗಳಲ್ಲಿ ಆಚರಣೆಯಲ್ಲಿರುವ ಸಂಸ್ಕೃತಿಯನ್ನು ಒಂದು ವೇಳೆ ನಷ್ಟಗೊಳಿಸಿದರೆ ಆಗ ಬಡ ರಾಷ್ಟ್ರದ ಸವಾಜ ಆಧಾರಹೀನವಾಗುತ್ತದೆ. ಈ ಸ್ಥಿತಿಯ ಲಾಭವನ್ನು ಶಕ್ತಿ ಸಂಪನ್ನ ದೇಶಗಳು

ಪಡೆದುಕೊಳ್ಳುತ್ತವೆ. ಈ ರೀತಿ ಸಂಸ್ಕೃತಿ ಪರಿವರ್ತನೆ ಮಾಡುವ ಕ್ರಮದಲ್ಲಿ ಜಾತಿಯ ಧರ್ಮ, ರೀತಿ ಸ್ಥಿತಿ ಮತ್ತು ಪರಂಪರಾಗತ ರೂಪದಲ್ಲಿ ಆಚರಿಸಿಕೊಂಡು ಬರುತ್ತಿರುವ ಸಾಮಾಜಿಕ ವ್ಯವಹಾರವನ್ನು ಕೊನೆಗೊಳಿಸುವ ಯೋಜನೆ ಮಾಡಿ, ಧನಿಕ ರಾಷ್ಟ್ರಗಳು ಕಾರ್ಯಕ್ರಮ ವಿಸ್ತರಿಸುತ್ತಾರೆ. ಇದಕ್ಕಾಗಿ ಈ ಕೆಳಗಿನಂತೆ ಕ್ರಿಯಾಶೀಲವಾಗುತ್ತವೆ.

ಕ) ತಮ್ಮ ದೇಶದ ಧರ್ಮವನ್ನು ಬಡ ದೇಶಗಳಲ್ಲಿ, ಲಾಗು ಮಾಡುವುದಕ್ಕಾಗಿ, ಪ್ರಚಾರದ ಪರಿಚಾಲನೆ ಮಾಡಿ ವಿಶೇಷ ಪ್ರಭಾವ ಬೀರುವ ಪ್ರಯತ್ನ (ಮಾಡುತ್ತಾರೆ) ಮಾಡುವುದು.

ಖ) ತಮ್ಮ ರಾಷ್ಟ್ರದ ಭಾಷೆಯನ್ನು ಬಡ ರಾಷ್ಟ್ರಗಳ ಭಾಷೆಯನ್ನಾಗಿ ಮಾಡುವ ಪ್ರಯತ್ನ.

ಗ) ಬಟ್ಟೆ ಹಾಗೂ ಪೋಷಾಕು (ಉಡುಪು)ನ ಪ್ರಯೋಗದಲ್ಲಿ ಕೂಡ, ತಮಗನುಕೂಲವಾಗುವಂತೆ ಮಾಡುವ ಪ್ರಯತ್ನ.

ಘ) ಬಡ ದೇಶಗಳ ಹಬ್ಬ ಹರಿದಿನ–ಪರ್ವದಿನಗಳು, ಸಾಮಾಜಿಕ ಸದ್ಭಾವಗಳನ್ನು ಪರಿವರ್ತಿಸುವ ಪ್ರಯತ್ನ.

## ರಾಜನೈತಿಕ ಒತ್ತಡ ( Political Pressure)

ವಿಕಸಿತ ದೇಶ ಒಳಿತು ಕೆಡುಕು, ಸಫಲ – ಅಸಫಲ, ಯಾವುದೇ ರಾಜನೈತಿಕ ಪದ್ಧತಿಯ ಪ್ರಯೋಗಮಾಡಿ, ವಿಕಾಸೋನ್ಮುಖ ದೇಶಗಳ ಮೇಲೆ, ತಮ್ಮ ಪ್ರಭಾವವನ್ನು ಸ್ಥಾಪಿಸುವ ಪ್ರಯತ್ನವನ್ನು ಮಾಡುತ್ತದೆ. ಇಂತಹ ಶಕ್ತಿ ಸಂಪನ್ನ ರಾಷ್ಟ್ರದ ರಾಜನೈತಿಕ ಮಹತ್ವಾಕಾಂಕ್ಷಿ ವ್ಯಕ್ತಿ ಅಥವಾ ಸಮುದಾಯದಲ್ಲಿ ಅಕ್ರಮ ಪ್ರವೇಶ ಮಾಡಿ ತಮಗನುಕೂಲವಾದ ರಾಜನೈತಿಕ ವ್ಯವಸ್ಥೆಯನ್ನು ಮಾಡುವ ಪ್ರಯತ್ನ ಮಾಡುತ್ತಾರೆ. ಪ್ರಜಾತಂತ್ರ, ಲೋಕತಂತ್ರ, ಗಣತಂತ್ರ ಅಥವಾ ಜನತಂತ್ರದಂತಹ ಘೋಷಣೆಗಳ ಆಧಾರದಲ್ಲಿ ಹೇಗಾದರೂ ರಾಜನೈತಿಕ ಪದ್ಧತಿಯನ್ನು ಜಾರಿಗೊಳಿಸುವುದನ್ನು ಇಚ್ಛಿಸುತ್ತಾರೆ. ಬಡ ದೇಶಗಳಲ್ಲಿ ಮಾನವರಹಿತ ವಿರೋದಿ ರಾಜನೈತಿಕ ಪದ್ಧತಿಯು ಕೂಡ ಸ್ಥಾಪಿಸಲ್ಪಟ್ಟಿದೆ. ಆದರೆ ಈ ರಾಜನೈತಿಕ ಪದ್ಧತಿ ದೀರ್ಘಕಾಲದವರೆಗೆ ನಿಲ್ಲಲಾರದು.

ಯುರೋಪು ಪಕ್ಷ ವ್ಯವಸ್ಥೆಯ ಜನನಿಯಾಗಿದೆ. ಎಲ್ಲಾ ರೀತಿಯ ರಾಜನೈತಿಕ 'ವಾದ'ಗಳ ಜನ್ಮವೂ ಯುರೋಪಿನಲ್ಲೇ ಆಗಿರುವುದು. ಆದರೆ ಬಡ ದೇಶಗಳಲ್ಲಿ ಪ್ರಾಯೋಗಿಕವಾಗಿ ಜಾರಿ (ಚಾಲನೆ) ಮಾಡಿದ ನಂತರದ ಸಮಸ್ಯೆಗಳಿಂದಾಗಿ

ಯುರೋಪಿಗೆ ಹಿಂದಿರುಗಿದ್ದಾರೆ. ಇಂತಹ ಪ್ರಕ್ರಿಯೆಯಿಂದ ಯುರೋಪಿನ ದೇಶಗಳಲ್ಲೂ ದುರ್ಬಲ ಮತ್ತು ಅಸ್ಥಿರ ರಾಜನೈತಿಕ ವ್ಯವಸ್ಥೆಯ ವಿಸ್ತಾರದಲ್ಲಿ ಸಹಯೋಗ ನೀಡುತ್ತಿದೆ. ಇದು ಅವರಿಗೂ ಹಾನಿಕಾರಕವೇ ಆಗಿದೆ. ವಿಕಸಿತ ದೇಶಗಲ್ಲಿ ಚಾಲನೆಯಲ್ಲಿರುವ ರಾಜನೈತಿಕ ಪದ್ಧತಿ ಆ ದೇಶದ ಉತ್ಥಾನ ಮಾಡಬಲ್ಲದೋ ಅಥವಾ ಇಲ್ಲವೋ ಅದು ಬೇರೆ ಅಧ್ಯಯನ ವಿಷಯವಾಗಿದೆ. ಏಕೆಂದರೆ ಆರ್ಥಿಕ ವಿಕಾಸವನ್ನು ಕೂಡ ಸಮಗ್ರ ವಿಕಾಸವೆನ್ನಲಾಗದು. ಸಾಮಾಜಿಕ ವಿಕಾಸಕ್ಕೆ ಆರ್ಥಿಕ ವಿಕಾಸ ಒಂದು ಅಂಶ ಮಾತ್ರ. ಇದರ ಹೊರತಾಗಿ, ಸಾಮಾಜಿಕ, ಸಾಂಸ್ಕೃತಿಕ ಮತ್ತು ನೈತಿಕ ವಿಕಾಸದ ಜೊತೆಗೆ ಚೇತನ (ಜಾಗೃತಿ) ವಿಕಾಸವೂ ಕೂಡ ಮಹತ್ವದ್ದಾಗಿದೆ. ರಾಜನೈತಿಕ ಒತ್ತಡದ ವಿಭಿನ್ನ ಸ್ವರೂಪ ಈ ಕೆಳಗಿನಂತಿದೆ.

ಕ) ರಾಜನೈತಿಕ ಸಿದ್ಧಾಂತವನ್ನು ಅಕ್ಷರಶಃ ಜಾರಿ ಮಾಡುವುದು.

ಖ) ಅಸ್ಥಿರ ರಾಜನೈತಿಕ ವ್ಯವಸ್ಥೆ ಸ್ಥಾಪನೆಗಾಗಿ ಅಕ್ರಮ ನುಸುಳುವಿಕೆ ಮಾಡಿಸುವುದು.

ಗ) ಸ್ವಾರ್ಥಕ್ಕಾಗಿ ನೆರೆದೇಶಗಳೊಂದಿಗೆ ಅಸೈದ್ದಾಂತಿಕ (ಅಪವಿತ್ರ) ಸಂಬಂಧ

ಘ) ಆರ್ಥಿಕ ವಿಕಾಸಕ್ಕಾಗಿ ಅನುದಾರತೆ

ಙ) ಸಾಮಾಜಿಕ ಹಾಗೂ ಸಾಂಸ್ಕೃತಿ ಹಸ್ತಕ್ಷೇಪ

**ಕ) ರಾಜನೈತಿಕ ಸಿದ್ಧಾಂತವನ್ನು ಅಕ್ಷರಶಃ ಜಾರಿಗೊಳಿಸುವುದು (Implimentation of Political Priniciple word by word )**

ಧನಿಕ ದೇಶ ಬಡ ದೇಶದಲ್ಲಿ ರಾಜಕೀಯ ಒತ್ತಡವನ್ನು ಹಾಕಿ ಯಾವುದಾದರೂ ರಾಜನೈತಿಕ ಸಿದ್ದಾಂತದ ಮರೆಯಲ್ಲಿ ಸಂಚಾಲಕತ್ವ ಮಾಡುವ ರಾಜನೈತಿಕ ಪದ್ಧತಿಯನ್ನು ಅಕ್ಷರಶಃ ತಮಗೆ ಬೇಕಾದಂತೆ ಒತ್ತಡವನ್ನು ಹಾಕಿ ರಾಜಕೀಯ ವ್ಯವಸ್ಥೆಯನ್ನು ಜಾರಿಗೊಳಿಸುವಂತೆ ಮಾಡುತ್ತವೆ. ಬಹು ಸಂಖ್ಯಾತ ನಿರಕ್ಷರ ದೇಶಗಳಲ್ಲಿ ಕೂಡ ಜಾಗೃತ ನಾಗರಿಕರ ಮೂಲಕ ಮಾತ್ರ, ಉಪಭೋಗಿಸಲಾಗುವ ರಾಜನೈತಿಕ ಪದ್ಧತಿ ಜಾರಿಗೊಳಿಸಿ, ಬಡ ದೇಶಗಳನ್ನು ತಮ್ಮ ಅಧೀನದಲ್ಲಿರಿಸಿಕೊಳ್ಳುತ್ತಾರೆ.

**ಖ) ಅಸ್ಥಿರ ರಾಜನೈತಿಕ ವ್ಯವಸ್ಥೆಯನ್ನು ಸ್ಥಾಪಿಸುವುದಕ್ಕಾಗಿ ಅಕ್ರಮ ವಲಸೆ ಪ್ರವೇಶ ಮಾಡುವುದು (Infiltration to create unstable political System)**

ಬಡದೇಶಗಳಲ್ಲಿ ಅಸ್ಥಿರ ರಾಜನೈತಿಕ ವ್ಯವಸ್ಥೆಯನ್ನು ಸ್ಥಾಪನೆ ಮಾಡುವುದಕ್ಕಾಗಿ ವಿಭಿನ್ನ ರೀತಿಯ ಕಾರ್ಯಯೋಜನೆಗಳನ್ನು ನಿರ್ಮಾಣ ಮಾಡಿ, ಅಕ್ರಮ ಪ್ರವೇಶ ಮಾಡುತ್ತಾರೆ. ರಾಜಕೀಯ ಪಕ್ಷಗಳ ಮುಖಂಡರನ್ನು ತಮ್ಮ ಪ್ರಭಾವಕ್ಕೊಳಪಡಿಸಿಯೋ, ಅಥವಾ ಪಕ್ಷವನ್ನು ಸಂಚಾಲಿಸುವುದಕ್ಕಾಗಿ ಆರ್ಥಿಕ ಮತ್ತು ರಾಜನೈತಿಕ ಸಹಯೋಗದ ಉಪಲಬ್ಧಿಯನ್ನು ಮಾಡಿಸಿ, ಬಡ ದೇಶಗಳಲ್ಲಿ ಅಸ್ಥಿರತೆಯನ್ನುಂಟು ಮಾಡುವ ಪ್ರಯತ್ನ ಈ ಧನಿಕ ದೇಶಗಳು ಮಾಡುತ್ತವೆ. ಒಂದು ವೇಳೆ ರಾಜಕೀಯ ಮುಖಂಡರು ಇವರ ಕೈಗೆಟುಕದಿದ್ದಲ್ಲಿ ಆಗ ಬಡ ದೇಶಗಳ ಸ್ಥಳೀಯ ಬುದ್ಧಿಜೀವಿಗಳನ್ನು ಆರ್ಥಿಕ ಸಹಯೋಗವನ್ನಿತ್ತು ತಮ್ಮ ಪ್ರಭಾವದಲ್ಲೊಳಪಡಿಸಿಕೊಳ್ಳುತ್ತಾರೆ. ಇಷ್ಟು ಮಾತ್ರವಲ್ಲ, ಬಡ ದೇಶದ ಸಂಚಾರ ಮಾಧ್ಯಮವನ್ನು,ಆರ್ಥಿಕ ಅನುದಾನವನ್ನಿತ್ತು ನಿಯೋಜಿತ ರೀತಿಯಿಂದ ಸಮಾಚಾರ ಪ್ರಸ್ತುತಪಡಿಸಿ, ಬಡ ದೇಶದ ರಾಷ್ಟ್ರವಾದಿ ಮನುಷ್ಯನ ಮನೋಬಲವನ್ನು ಕುಗ್ಗಿಸುವಷ್ಟರ ಮಟ್ಟದ ಕೆಲಸವನ್ನು ಮಾಡುತ್ತವೆ.

### ಗ) ಸ್ವಾರ್ಥಕ್ಕಾಗಿ ನೆರೆಯವರ ಜೊತೆ ಅಸೈದ್ಧಾಂತಿಕ ಸಂಬಂಧ (Unfair relationship with the neighbouring Countries )

ನೆರೆಯ ಅಥವಾ ಕ್ಷೇತ್ರೀಯ ದೇಶಗಳಲ್ಲಿ ತಮ್ಮ ಪ್ರಭಾವ ಸ್ಥಾಪಿಸಿಡುವುದಕ್ಕಾಗಿ ಸೈದ್ಧಾಂತಿಕ ರೂಪದಲ್ಲಿ ಭಿನ್ನ ಮತಗಳಾದರೂ ಕೂಡ ಸ್ವಾರ್ಥದ ಪರಿಪೂರ್ಣತೆಗಾಗಿ, ಧನಿಕ ದೇಶ ಬಡ ದೇಶವನ್ನು ತಮ್ಮ ಅಧೀನದಲ್ಲಿ ಸಂಚಾಲಿಸುವುದಕ್ಕಾಗಿ ರಾಜನೈತಿಕ ಸಿದ್ಧಾಂತವನ್ನು ಜಾರಿಗೊಳಿಸಿ, ಬಡ ದೇಶಗಳ ಮೇಲೆ ತಮ್ಮ ಅಧಿಕಾರವನ್ನು ಚಲಾಯಿಸುವುದಕ್ಕಾಗಿ ಕ್ರಿಯಾಶೀಲವಾಗುತ್ತವೆ.

### ಘ) ಆರ್ಥಿಕ ವಿಕಾಸಕ್ಕಾಗಿ ಅನುದಾನ (Grant for Economic development)

ಬಡ ದೇಶಗಳಲ್ಲಿ ಆರ್ಥಿಕ ವಿಕಾಸಕ್ಕಾಗಿ ಧನಿಕದೇಶಗಳ, ಅನೇಕ ರೀತಿಯ ಅನುದಾನಗಳನ್ನು ನೀಡುವ ಯೋಜನೆಗಳಿರುತ್ತವೆ. ಧನಿಕ ದೇಶಗಳು ವಿಕಾಸಕ್ಕಾಗಿ ಕೊಡುವ ಅನುದಾನ ಅಥವಾ ಸಾಲ ಕೊಡುವ ಸಮಯದಲ್ಲಿ ಶರತ್ತನ್ನು ವಿಧಿಸಿರುತ್ತಾರೆ. ಆ ಕಾರಣದಿಂದಾಗಿ ಬಡ ದೇಶಗಳು ಅವರ ಅನುಗ್ರಹಕ್ಕೊಳಗಾಗುತ್ತವೆ. ಇಂತಹ ಸ್ಥಿತಿಯಲ್ಲಿ ಧನಿಕ ದೇಶ, ಬಡದೇಶದ ಎಲ್ಲಾ ಪ್ರಕಾರದ ಪ್ರಾಕೃತಿಕ ಸಂಪತ್ತಿನ ಪ್ರಯೋಗ ಮಾಡುವ ನೀತಿ ನಿರ್ಮಾಣ ಮಾಡುತ್ತವೆ. ಮತ್ತು ದೇಶದ ಶೋಷಣೆ ಮಾಡುತ್ತವೆ ಮತ್ತು ಬಡದೇಶಗಳು ಮತ್ತಷ್ಟು ನಿರ್ಧನವಾಗುತ್ತವೆ.

### ಙ) **ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಸ್ತಕ್ಷೇಪ (Social and Cultural interference )**

ಬಡದೇಶಗಳ ಸಾಲಿನಲ್ಲಿರುವ ದೇಶಗಳ ಸಾಂಸ್ಕೃತಿಕ, ಸಾಮಾಜಿಕ ಸ್ಥಿತಿಯಲ್ಲಿ ಸಿರಿವಂತ ರಾಷ್ಟ್ರಗಳ ಹಸ್ತಕ್ಷೇಪದಿಂದ ಆ ದೇಶಗಳು ದುರ್ಬಲವಾಗುತ್ತಾ ಹೋಗುತ್ತವೆ. ವಿಶ್ವದ ಪೂರ್ವ ದೇಶಗಳ ದರ್ಶನದಿಂದ (ತತ್ವಜ್ಞಾನದಿಂದ) ಸೃಜಿತವಾದ ಮಾನವ ಸಭ್ಯತೆ ಸಂಸ್ಕೃತಿ ಮತ್ತು ಧರ್ಮ ಸಂಪನ್ನತೆಯನ್ನು ಹಂತ ಹಂತವಾಗಿ ನಷ್ಟಗೊಳಿಸುವ ಯೋಜನೆಗಳನ್ನು ಅವರು ಸಿದ್ಧಪಡಿಸುತ್ತಾರೆ. ಈ ರೀತಿಯಲ್ಲಿ ಧನಿಕ ದೇಶಗಳ ಕ್ರಿಯಾಕಲಾಪಗಳಿಂದ ಬಡ ದೇಶಗಳು ದುರ್ಬಲ ಮತ್ತು ಶಿಥಿಲಗೊಳ್ಳುತ್ತಾ ಹೋಗುತ್ತವೆ.

### 5. **ಕೂಟನೀತಿಯ ನಡೆ (Diplomatic mobility ortrick)**

ರಾಜ್ಯದ ಅಸ್ತಿತ್ವದ ಜೊತೆಗಿನ ಕೂಡನೀತಿಯ ವ್ಯವಸ್ಥೆ ಕೂಡ ಶುರು ಆಗಿದೆ. ಕೂಟ ನೀತಿಯೆಂದರೆ, ತನ್ನೊಳಗಿನ ಚಿಂತನೆ ಅಥವಾ ಅಭಿಪ್ರಾಯ ಏನೇ ಇರಲಿ, ಹೊರ (ತೋರ್ಪಡಿಕೆಯ) ವ್ಯವಹಾರ ಶಿಷ್ಟ ಹಾಗೂ ಮರ್ಯಾದಿತವಾಗಿರುವುದು. ರಾಜ್ಯ ವ್ಯವಸ್ಥೆ ಸಫಲಗೊಳಿಸುವುದಕ್ಕಾಗಿ ಸಾರ್ಥಕ ಕೂಟನೀತಿಯ ವ್ಯವಹಾರವನ್ನು ಅವಲಂಬಿಸಬೇಕಾಗುತ್ತದೆ. ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿ ಬಂದಿರುವ ಕೂಟನೀತಿಯ ನಡೆ ವರ್ತಮಾನದಲ್ಲಿ ಕೂಡ ಅದೇ ರೂಪದಲ್ಲಿ ನಡೆಯುತ್ತಾ ಬಂದಿದೆ. ಈ ಕೂಟ ನೀತಿಯ ನಡೆಗೆ ಎರಡು ಪಕ್ಷಗಳಿವೆ.

ಕ) ಪರೋಕ್ಷ ಕೂಟನೀತಿಯ ಪ್ರತಿನಿಧಿ,

ಖ) ಪರೋಕ್ಷ ಕೂಟನೀತಿಯ (ಯೋಜನೆ) ಗುಂಪು

ಪ್ರತ್ಯಕ್ಷ ಕೂಟನೀತಿಯ ಪ್ರತಿನಿಧಿಗಳಲ್ಲಿ ರಾಜದೂತನ ಹೊರತಾಗಿ ಶ್ರಮ, ಸೈನಿಕ ಮತ್ತು ಪ್ರಾವಿಧಾನಕವಾದ ಗುಪ್ತಚರ ಸಹಯೋಗಿಗಳು ಮುಂತಾದವರು ಇರುತ್ತಾರೆ. ಇವರು ಬಹಿರಂಗವಾಗಿ ಸಂಬಂಧಿತ ದೇಶಗಳ ಪ್ರತಿನಿಧಿತ್ವವನ್ನು ಮಾಡುತ್ತಾರೆ. ಯಾವುದೇ ರಾಜನೈತಿಕ, ಆರ್ಥಿಕ, ಸಾಮಾಜಿಕ, ಯುದ್ಧ ಸಂಬಂಧಿತ ಹಾಗೂ ಪ್ರಾವಿಧಾನ ಇತ್ಯಾದಿ ಸಮಸ್ಯೆಗಳಿದ್ದರೂ ಇವರು ಪದಾಧಿಕಾರಿಗಳ ಸ್ಥಿತಿಯನ್ನು ಸುಧಾರಿಸುವ ಪ್ರಯತ್ನ ಮಾಡುತ್ತಾರೆ. ಒಂದು ದೇಶದ ಇನ್ನೊಂದು ದೇಶದೊಂದಿಗಿನ ಕೂಟನೀತಿಕ ಸಂಬಂಧವು ಈ ಪದಾಧಿಕಾರಿಗಳನ್ನವ ಲಂಬಿಸಿರುತ್ತದೆ. ಇವರುಗಳ ಕ್ರಿಯಾ ಕಲಾಪಗಳು ಒಂದು ವೇಳೆ ಸಂಶಯಾತ್ಮಕ

ಸುಳಿಯಲ್ಲಿದ್ದಲ್ಲಿ ಆಗ ಇವರನ್ನು ದೇಶ ಬಿಟ್ಟು ಹೋಗುವಂತೆಯೂ ಮಾಡಲಾಗುತ್ತದೆ. ಅರ್ಥಾತ್ ಪ್ರತ್ಯಕ್ಷದಲ್ಲಿ ಕೂಟನೀತಿಕ ನಿಯೋಗದ ಪದಾಧಿಕಾರಿಗಳು ಹಾಗೂ ಕರ್ಮಚಾರಿಗಳು ಸ್ವಚ್ಛ ಹಾಗೂ ಪ್ರಾಮಾಣಿಕರಾಗಿರುವುದು ಅವಶ್ಯಕವಾಗಿರುವುದಿಲ್ಲ.

**ಖ) ಅಪರೋಕ್ಷ ಕೂಟ ನೀತಿಕ ಯೋಜನೆ [Invisible diplomatic Cadre]**


ಧನಿಕ ದೇಶಗಳು ಅಪರೋಕ್ಷ ಕೂಟನೀತಿಕ ಯೋಜನೆಯನ್ನು ಸ್ಥಾಪಿಸುತ್ತಾರೆ. ಈ ಅಘೋಷಿತ ಕೂಟನೀತಿಜ್ಞರು ಅನ್ಯದೇಶಗಲ್ಲಿ ಅಡಗಿಕೊಂಡಿರುತ್ತಾರೆ. ಇವರು ವಿಭಿನ್ನ ಸ್ಥಳಗಳಲ್ಲಿ ವಿಭಜನೆಗೊಂಡಿರುತ್ತಾರೆ. ಧನಿ ದೇಶದ ಕೇಂದ್ರಿಯ ಅನುಸಂಧಾನದ ಪ್ರತಿನಿಧಿಯಿಂದ ಹಿಡಿದು, ಸೈನಿಕ, ಕಾವಲುಗಾರ ಮತ್ತು ಗುಪ್ತಚರ ವಿಭಾಗದ ಜನರು ಈ ಕಾರ್ಯದಲ್ಲಿ ನಿರತರಾಗಿರುತ್ತಾರೆ. ಇಂತಹ ಅಪರೋಕ್ಷ ಕೂಟನೀತಿಕ ಕಾರ್ಯಗಳಲ್ಲಿ ನಿರತ ವ್ಯಕ್ತಿಗಳು ವ್ಯಾಪಾರಿ, ಧರ್ಮಗುರುಗಳು, ಸಮಾಜಸೇವಕರು, ಅಥವಾ ಜನಸಾಮಾನ್ಯರ ರೂಪದಲ್ಲೂ ಕ್ರಿಯಾಶೀಲರಾಗುತ್ತಾರೆ. ಈ ಸಂಘಟನೆಯ ತಿಳುವಳಿಕೆ ಬಡ ದೇಶಗಳಿಗಿರುವುದಿಲ್ಲ. ಎಲ್ಲಾ ರೀತಿಯ ಯೋಜನೆಗಳನ್ನೂ ತಯಾರಿಸುತ್ತಾ, ಧನಿಕ ದೇಶಗಳು ಅಪರೋಕ್ಷವಾಗಿ, ಕ್ರಿಯಾಶೀಲ ಸಮುದಾಯದ ವರದಿಗಳೇ (ಲೇಖನಗಳೇ) ಹೆಚ್ಚಿನ ಮಹತ್ವವನ್ನು ಕೊಡುತ್ತಾರೆ. ಇದರಿಂದ ಪ್ರತ್ಯಕ್ಷ ಕೂಟನೀತಿಕ ನಿಯೋಗಕ್ಕಿಂತ ಹೆಚ್ಚು ಅಪ್ರತ್ಯಕ್ಷ ಕೂಟನೀತಿಕ ನಿಯೋಗವು ಬಲಾಢ್ಯವಾಗಿರುತ್ತವೆ.

ಉಲ್ಲೇಖಿತ ತಥ್ಯ ಹಾಗು ವಿವರಣೆಯ ಆಧಾರದಲ್ಲಿ ವಸಾಹತು ರಾಷ್ಟ್ರಗಳು ಬಡದೇಶಗಳಲ್ಲಿ ಹೊಸ ವಸಾಹತು ಪದ್ಧತಿಯನ್ನು (ನೀತಿಯನ್ನು) ಸ್ಥಾಪಿಸುತ್ತಾರೆ. ಸಾಮ, ದಾನ, ದಂಡ ಮತ್ತು ಭೇದ ಈ ನಾಲ್ಕು ನೀತಿಯ್ನನು ಅವಲಂಬಿಸುತ್ತಾ, ವಸಾಹತು ಪದ್ಧತಿಯನ್ನನುಸರಿಸುವವರು ಕ್ರಿಯಾಶೀಲರಾಗುತ್ತಾರೆ. ವಸಾಹತು ಇದರ ಅರ್ಥವೇ ಒತ್ತಡ ಮತ್ತು ಶೋಷಣೆ. ಆರ್ಥಿಕ, ರಾಜನೈತಿಕ ಮತ್ತು ಸಾಂಸ್ಕೃತಿಕ ಶೋಷಣೆಯಿಂದ ಬಡ ದೇಶದ ಜನತೆ ಪೀಡಿತರಾಗುತ್ತಾರೆ. ಇಂತಹ ಪೀಡಿತ ದೇಶದ ಚಾಲಾಕಿತನದ ವ್ಯಕ್ತಿಗಳು ಇದರ ಲಾಭವನ್ನು ಪಡೆಯುತ್ತಾರೆ. ಭ್ರಷ್ಟವಿರೋಧಿ ಶಾಸ್ತ್ರದ ನೀತಿ, ವಿಧಿ ಮತ್ತು ಪದ್ಧತಿಯನ್ನು ಒಂದು ವೇಳೆ ಪ್ರಭಾವಶಾಲಿಯಾಗಿ ಜಾರಿಗೊಳಿಸುವುದು ಸಾಧ್ಯವಾದರೆ ಯುಗಗಳಿಂದ ಪ್ರಚಲಿತದಲ್ಲಿರುವ ಇಂತಹ ವಸಾಹತು ಮತ್ತು ವರ್ತಮಾನದ ಹೊಸ ವಸಾಹತು ಪದ್ಧತಿಯನ್ನು ಕೂಡ ಕೊನೆಗಾಣೀಸಬಹುದಾಗಿದೆ.

**ಬಡತನ (Poverty and Corruption)**

ಬಡತನ ಪರಿಸ್ಥಿತಿ ಹೇಗಿರುತ್ತದೆಂದರೆ..., ಅದು ಮಾನವನ ಜೀವನ ನಿರ್ವಹಣೆಯ ಸ್ಥಿತಿಯನ್ನೂ ನಿರ್ಧರಿಸುತ್ತದೆ. ವ್ಯಕ್ತಿಯ ಕನಿಷ್ಠ ಅವಶ್ಯಕತೆಯ ಪರಿಪೂರ್ಣತೆಯ ಆಧಾರ, ಅವನ ಉಪಭೋಗ ಮತ್ತು ಅವನ ಆದಾಯದ ಸ್ತರವು (ಮಟ್ಟವು ) ಅವನ ಆರ್ಥಿಕ ಪರಿಸ್ಥಿತಿಯ ಮಾನದಂಡವಾಗುತ್ತದೆ. ಬಡತನವು ಸಂಘಟಿತ ಸಮಾಜದೊಳಗಿದ್ದು ಕೂಡ ಜೀವನಕ್ಕಾಗಿ ಅವಶ್ಯಕ ಕನಿಷ್ಟ ಆಧಾರಭೂತ ಅವಶ್ಯಕತೆಗಳನ್ನು ಪೂರ್ಣಗೊಳಿಸಲಾಗದ ಸಮುದಾಯವಾಗಿದೆ. ಇಂತಹ ಸಮುದಾಯದ ದೀರ್ಘಕಾಲೀನ ಸಮಸ್ಯೆಯೇ ಬಡತನವಾಗಿದೆ. ಬಡತನದ ಪ್ರಕೃತಿ, ಸ್ವರೂಪ ಚಕ್ರೀಯ ಸ್ಥಿತಿ ಮತ್ತು ಅಂತರ ಬದಲಾಗುತ್ತಿರುವ ಸನ್ನಿವೇಶಕ್ಕನುಗುಣವಾಗಿ ಬೇರೆ ಬೇರೆಯಾಗಿರುತ್ತದೆ. ಇದರಲ್ಲೂ ದೇಶ, ಕಾಲ, ಪರಿಸ್ಥಿತಿ, ಅವನ ಸ್ಥಿತಿ ಪ್ರಕೃತಿ ಮತ್ತು ಸ್ವಭಾವದಲ್ಲಿ ಬೇರೆ ಬೇರೆ ಸ್ತರಗಳು ಸ್ಥಾಪಿತವಾಗುತ್ತವೆ. ಬಡತನ ಬಡತನಕ್ಕೆ ಜನ್ಮ ನೀಡುತ್ತದೆ. ಮತ್ತು ಅಪರಾಧಿ ಭಾವದ ಪ್ರವೃತ್ತಿಯನ್ನು ಕೂಡ ಸ್ವೀಕರಿಸುತ್ತಾ ಹೋಗುತ್ತದೆ. ಬಡತನದ ಪ್ರಕಾರವಾಗಿಯೇ ಮೊದಲು ಬಡತನದ ರೇಖೆಯನ್ನು ಕೊಡುವುದು ಉಚಿತವೆನಿಸಬಹುದು. ಬಡತನದ ರೇಖೆಯೇ ಬಡತನದ ವಿಷಯದಲ್ಲಿ ಅಧ್ಯಯನ ಹಾಗೂ ವಿಶ್ಲೇಷಣೆ ಮಾಡಬಲ್ಲುದು.

## ಬಡತನದ ರೇಖೆ ಮತ್ತು ನಿಬಂಧನೆ




ಯಾವುದೇ ವ್ಯಕ್ತಿಯ ಹಾಗೂ ಸಮುದಾಯದ ಆದಾಯ ಮತ್ತು ಉಪಭೋಗದ ಸ್ತರ ಕನಿಷ್ಟ ಆಧಾರಿತ ಅವಶ್ಯಕತೆಗಿಂತ ಕಡಿಮೆಯಾಗಿದ್ದರೆ. ಆ ವ್ಯಕ್ತಿಯನ್ನು ಬಡವ ಎನ್ನುತ್ತೇವೆ, ಇದೇ ಕನಿಷ್ಟ ಆದಾಯವನ್ನೂ ಬಡತನ ರೇಖೆ ಎನ್ನುತ್ತೇವೆ. ಬಡತನದ ರೇಖೆಯನ್ನು ಬೇರ್ಪಡಿಸುವುದಕ್ಕಾಗಿ ಆಧಾರ, ಸಮಯ ಮತ್ತು ಪ್ರಕೃತಿ ಹಾಗೂ ದೇಶದ ಪರಿಸ್ಥಿತಿ ವಿಭಿನ್ನವಾಗಿರುತ್ತದೆ.

## ಬಡತನದ ವಿಧಗಳು [Types of Poverty ]

ಕೇವಲ ಬಡತನ ಎಂದ ಮಾತ್ರಕ್ಕೆ ವ್ಯಕ್ತಿ ಅಥವಾ ಸಮುದಾಯದ ಅಂತಸ್ತು ಸ್ಥಾಪಿತವಾಗುವುದಿಲ್ಲ. ಇದರಲ್ಲಿಯೂ ವಿಧಗಳಿವೆ. ಇವುಗಳ ಸ್ತರ ಮತ್ತು ಪ್ರಕಾರವನ್ನು ಈ ಕೆಳಗಿನ ರೀತಿಯಲ್ಲಿ ತಿಳಿಯಬಹುದು.

1 ಸಾಪೇಕ್ಷ ಬಡತನ

2. ನಿರಪೇಕ್ಷ ಬಡತನ

3. ಅತಿ ಬಡತನ

### 1. ಸಾಪೇಕ್ಷ ಬಡತನ :– [Absolute Poverty ]

ಯಾವುದೇ ವ್ಯಕ್ತಿ, ವರ್ಗ ಅಥವಾ ಸಮುದಾಯದ ತುಲನೆಯಲ್ಲಿ ಬೇರೆ ಯಾರಾದರೂ ವ್ಯಕ್ತಿ, ವರ್ಗ ಅಥವಾ ಸಮುದಾಯ ಎಷ್ಟು ಬಡವನದ್ದಾನೆ, ಇದರ ತುಲನಾತ್ಮಕ ಅಧ್ಯಯನದಿಂದ ಸಾಪೇಕ್ಷ ಬಡತನ ನಿಶ್ಚಿತವಾಗುತ್ತದೆ. ವ್ಯಕ್ತಿ ಹಾಗೂ ಸಮುದಾಯದ ನಡುವೆ ವ್ಯಾಪ್ತವಾಗುವ ಅಸಮಾನತೆ ಮತ್ತು ರಾಷ್ಟ್ರದ ನಡುವೆ ಆಗುವ ಜೀವನ ಸ್ತರದ ಅಸಮಾನತೆಯಿಂದ ಇಂತಹ ಬಡತನ ಜನ್ಮ ತಳೆಯುತ್ತದೆ. ಇದು ಸಾಪೇಕ್ಷ ಬಡತನದ ಸ್ಥಿತಿಯಾಗಿದೆ. ಎಲ್ಲಿ ವ್ಯಕ್ತಿ ಅಥವಾ ಸಮುದಾಯದ ಕನಿಷ್ಟ ಮೂಲಭೂತ ಅವಶ್ಯಕತೆಗಳನ ಪರಿಪೂರ್ಣತೆಯಾದ ಮೇಲೂ ಉನ್ನತ ಶೀಲ ಜೀವನದ ಅವಕಾಶದಿಂದ ವ್ಯಕ್ತಿ ಅಥವಾ ಸಮುದಾಯ ವಂಚಿತರಾಗುತ್ತಾರೆ.

### 2. ನಿರಪೇಕ್ಷ ಬಡತನ – [ Relative Poverty ]

ಮನುಷ್ಯನ ಜೀವನ ನಿರ್ವಹಣೆಗಾಗಿ ಅವಶ್ಯಕವಾದ ದೈನಂದಿನ ವಸ್ತು ಹಾಗೂ ಸೇವಾ ಸೌಲಭ್ಯಗಳ ಅಭಾವವೇ ನಿರಪೇಕ್ಷ ಬಡತನವಾಗಿದೆ. ಜೀವನ ನಿರ್ವಹಣೆಗೆ ಅವಶ್ಯಕ ಖಾದ್ಯಾನ್ನ, ಬಟ್ಟೆ ಮತ್ತು ವಸತಿಯೊಂದಿಗೆ ಸ್ವಾಸ್ಥ್ಯ, ಶಿಕ್ಷಣ ಮತ್ತು ಅನ್ಯ ಮೂಲಭೂತ ಅವಶ್ಯಕತೆಗಳ ಪೂರ್ತಿಗಾಗಿ ಆದಾಯವಿಲ್ಲದಿರುವ ವ್ಯಕ್ತಿ ಅಥವಾ ಸಮುದಾಯ ಬಡತನದ ರೇಖೆಗಿಂತ ಕೆಳಗೆ ಇರುತ್ತಾರೆ. (ಬರುತ್ತಾರೆ)

### 3) ಅತಿಯಾದ ಬಡತನ (Ultra Poverty)

ಅತಿ ಬಡತನವೆಂದರೆ ನಿರಪೇಕ್ಷ ಬಡತನಕ್ಕಿಂತಲೂ ಕಡಿಮೆ ಆರ್ಥಿಕ ಸ್ಥಿತಿಯಲ್ಲಿರುವ ಮತ್ತು ಮಾನವ ಉನ್ನತಿಯ ಅವಕಾಶಗಳಿಂದ ವಂಚಿತ ವ್ಯಕ್ತಿ ಅಥವಾ ಸಮುದಾಯವಾಗಿದೆ. ಅತ್ಯಂತ ಬಡ ವ್ಯಕ್ತಿ ಅಥವಾ ಸಮುದಾಯ ಸಮಾಜಕ್ಕೆ ಅಭಿಶಾಪವಾಗಿ ಕಂಡು ಬರುತ್ತವೆ.

***

# 23. ಭ್ರಷ್ಟವಿರೋಧಿ ಶಾಸ್ತ್ರ ಮತ್ತು ಬಡತನ
# [Corruption and Poverty ]

ಸಾಪೇಕ್ಷ, ನಿರಪೇಕ್ಷ ಮತ್ತು ಅತಿಬಡತನ ಈ ಮೂರು ಪರಿಸ್ಥಿತಿಗಳ ಬಡವ, ಭ್ರಷ್ಟ ಕಾರ್ಯದ ವಿಕಾಸದಲ್ಲಿ ಸಹಯೋಗಿ ಪಾತ್ರವನ್ನು ನಿರ್ವಹಿಸುತ್ತವೆ. ಎಲ್ಲಿ ಅಭಾವವಿರುತ್ತದೊ ಅಲ್ಲಿ ಅವಶ್ಯಕ ವಸ್ತುಗಳ ಪರಿಪೂರ್ಣತೆಗಾಗಿ ಅನೇಕ ರೀತಿಯ ಪ್ರಯತ್ನವನ್ನು ಮಾಡುತ್ತಾರೆ. ಸಹಜವಾಗಿ,ಇಂತಹ ಅವಶ್ಯಕ ವಸ್ತುಗಳ ಪೂರೈಕೆ ಆಗದಿದ್ದ ಪರಿಸ್ಥಿತಿಯಲ್ಲಿ ಪೂರೈಕೆಯಲ್ಲಿ ಪ್ರಾಪ್ತಿಗಾಗಿ ವ್ಯಕ್ತಿ ಅಥವಾ ಸಮುದಾಯ ಪ್ರಯತ್ನ ಶೀಲರಾಗಿರುವತ್ತಾರೆ. ಈ ಸಂದರ್ಭಗಳಲ್ಲಿ ಉಪಯುಕ್ತ – ಅನುಪಯುಕ್ತ, ವಿಧಾನ ಪೂರ್ವಕ – ಅವೈಧಾನಿಕ, ನೈತಿಕ – ಅನೈತಿಕ ಅಥವಾ ಪ್ರಾಮಾಣಿಕ – ಅಪ್ರಾಮಾಣಿಕ ಇತ್ಯಾದಿಗಳನ್ನು ನೋಡುವುದಿಲ್ಲ. ತಮ್ಮ ಅವಶ್ಯಕತೆಯ ಈಡೇರಿಕೆಗಾಗಿ ಯಾವ ನಿರ್ಣಯವನ್ನಾದರೂ ತೆಗೆದುಕೊಳ್ಳಬಹುದು. ಹಸಿದ ಹೊಟ್ಟೆಯಿಂದ ಸಿದ್ಧಾಂತದ ಮಾತಾಡುವುದು ಅಸಾಧ್ಯವಾದ ಮಾತು. ಆದ್ದರಿಂದ ಯಾವುದೇ ಮಟ್ಟದ ಬಡತನ ತನ್ನ ದುಃಸ್ಥಿತಿಯನ್ನು ಮರೆತು ಜನರ ರಾಜ್ಯದ ಆಡಳಿತದ ಹಿತವನ್ನುಂಟು ಮಾಡುವರು ಎಂಬುದನ್ನು ಹೇಳಲಾಗದು. ಹಾಗಾಗಿ ಈ ಬಡ ಸಮುದಾಯಗಳ ಮೂಲಕ ತಮ್ಮ ಹಿತಕ್ಕಾಗಿ ತೆಗೆದುಕೊಂಡ ನಿರ್ಧಾರ ಬೇರೆ ಸಮುದಾಯಕ್ಕೆ ಹಿತವಾಗಲಾರದು. ಅವಕಾಶವಾದಿ ತತ್ವಗಳು ಬಡವರ ದುರ್ಬಲ ಪಕ್ಷವನ್ನು ಮುಂದಿಟ್ಟುಕೊಂಡು, ಚಿಕ್ಕದಿರಲಿ,ದೊಡ್ಡದಿರಲಿ, ಭ್ರಷ್ಟಕಾರ್ಯ ಮಾಡುತ್ತಾರೆ. ಮಾಡಿಸುತ್ತಾರೆ. ಉದಾಹರಣೆಗೆ ಸ್ಥಾನಿಯ ವಿಕಾಸ ಮತ್ತು ಜನರ ಜೊತೆ ಪ್ರತ್ಯಕ್ಷ ಸಂಬಂಧ ಇಟ್ಟುಕೊಂಡವರು. ವಿಕಾಸ ಯೋಜನೆಯನ್ನು ಪಡೆದುಕೊಳ್ಳಬಹುದು. ಚುನಾವಣೆಗಳಲ್ಲಾದರೂ ಈ ಸಮುದಾಯದ ಮತಗಳೇ ನಿರ್ಣಾಯಕವಾಗುತ್ತವೆ. ಅಜ್ಞಾನ ಬಡತನವನ್ನು ಹೆಚ್ಚಿಸುತ್ತದೆ ಮತ್ತು ಈ ಕಾರಣದಿಂದಾಗಿ ಅವರಿಗೆ ಮೌಲ್ಯ ಮಾನ್ಯತೆಗಳು, ನೀತಿಗತ ಸಿದ್ಧಾಂತಗಳು

ಇವೆಲ್ಲದರ ಮೂಲ ಆಧಾರವಾಗಿದೆ. ವ್ಯಕ್ತಿ ಅಥವಾ ಸಮುದಾಯದಿಂದ ಭ್ರಷ್ಟ ಆಚರಣೆ ಮತ್ತು ಭ್ರಷ್ಟ ಕಾರ್ಯವನ್ನು ನಿಯಂತ್ರಿಸುವಲ್ಲಿ, ಅತಿ ಬಡತನ ಮತ್ತು ನಿರಪೇಕ್ಷ ಬಡತನವನ್ನು ಸಾಪೇಕ್ಷ ಬಡತನದಲ್ಲಿ ಪರಿಣತಿಗೊಳಿಸಬೇಕಾಗಿದೆ. ಆಧಾರ ಸಹಿತವಾದ ಅವಶ್ಯಕತೆಗಳ ಪೂರ್ತಿ ಅಥವಾ ಮಾನವೀಯ ಅವಶ್ಯತೆಗಳ ಪೂರ್ತಿಗೊಳಿಸಬಹುದಾದಂತಹ ಕನಿಷ್ಟ ಕ್ರಿಯಾಶಕ್ತಿ ಮತ್ತು ಇಂತಹ ಕ್ರಿಯಾಶಕ್ತಿ ಸ್ಥಾಪಿತಗೊಳಿಸುವುದಕ್ಕಾಗಿ ಕನಿಷ್ಟ ಆದಾಯದ ಮೂಲದ ವ್ಯಕ್ತಿ ಅಥವಾ ಸಮುದಾಯವನ್ನು ಸಾಪೇಕ್ಷ ಬಡತನದ ಮಟ್ಟದಲ್ಲಿ ತರಬಹುದಾಗಿದೆ. ಇದಕ್ಕಾಗಿ ಅತಿ ಬಡತನ ಮತ್ತು ನಿರಪೇಕ್ಷ ಬಡತನವನ್ನು ಸಾಪೇಕ್ಷ ಬಡತನದಲ್ಲಿ ಪರಿವರ್ತಿಸಬಲ್ಲ ಯೋಜನೆಯನ್ನು ರಾಜ್ಯ ಮತ್ತು ರಾಜ್ಯ ವ್ಯವಸ್ಥೆಯಲ್ಲಿ ಜಾರಿಗೆ ತರಬೇಕು. ಆರ್ಥಿಕ ಮಟ್ಟದ ಸುಧಾರಣೆಯ ಜೊತೆಗೆ ಶಿಕ್ಷಣ ಮತ್ತು ಸ್ವಾಸ್ಥ್ಯಕ್ಕಾಗಿಯೂ ಸುಧಾರಣೆಯ ಯೋಜನೆ ಚಾಲನೆಗೆ ತರಬೇಕು.

ಈ ರೀತಿಯಲ್ಲಿ ಬಡತನದ ವರ್ಗ ವಿಭಜನೆಯನ್ನು ಕೊನೆಗೊಳಿಸಿ, ಕೇವಲ ಕಾರ್ಮಿಕ ಮತ್ತು ರೈತವರ್ಗದ ನಿರ್ಮಾಣ ಮಾಡುವುದಕ್ಕಾಗಿ ಭ್ರಷ್ಟವಿರೋಧಿ ಶಾಸ್ತ್ರದ ನೀತಿ ಹಾಗೂ ಸಿದ್ಧಾಂತವನ್ನು ಬಡತನ ನಿರ್ಮೂಲನ ಕಾರ್ಯದಲ್ಲಿ ತೊಡಗಿಸಬೇಕು. ಬಡ ವರ್ಗದ ಅರ್ಥ ಕಾರ್ಮಿಕ ಮತ್ತು ಕೃಷಿಕ ವರ್ಗ ಮಾತ್ರವಾಗಿದೆ. ಶೋಷಿತ ಅಥವಾ ಪೀಡಿತ ವರ್ಗವಲ್ಲ ಎಂಬುದನ್ನು ಪ್ರಮಾಣೀಕರಿಸಬೇಕಾಗಿದೆ.

***

# 24. ವಿಕಸಿತ ವಿಕಾಸೋನ್ಮುಖ ದೇಶಗಳ ವಿಶೇಷತೆಗಳು
## [Characteristics of Developed and Developing Countries ]

ವಿಶ್ವದ ಎಲ್ಲಾ ದೇಶಗಳನ್ನು ಅನೇಕ ವರ್ಗಗಳಲ್ಲಿ ವಿಭಜಿಸಬಹುದಾಗಿದೆ. ಅದೆಂದರೆ ಅವಿಕಸಿತ, ವಿಕಸಿತ, ವಿಕಾಸಶೀಲ. ಆದರೆ ವರ್ತಮಾನದಲ್ಲಿ ಎಲ್ಲಾ ದೇಶಗಳಲ್ಲಿ ಆಧುನಿಕ ಉಪಕರಣಗಳ ಪ್ರಯೋಗದಿಂದಾಗಿ ಇವುಗಳನ್ನು ಎರಡು ವರ್ಗಗಳಲ್ಲಿ ವಿಭಜಿಸಿ ನೋಡಬಹುದಾಗಿದೆ.

1. ವಿಕಸಿತ
2. ವಿಕಾಸೋನ್ಮುಖ ದೇಶ.

ಈ ಎರಡು ವರ್ಗಗಳಲ್ಲಿ ವಿಭಜಿತವಾದ ದೇಶಗಳ ವಿಶೇಷತೆಗಳ ಕುರಿತು ವಿಚಾರ ಮಾಡೋಣ. ಏಕೆಂದರೆ ಭ್ರಷ್ಟವಿರೋಧಿ ಶಾಸ್ತ್ರದ ಆಧಾರದಲ್ಲಿ ಮೇಲೆಯೇ ಭ್ರಷ್ಟವಿರೋಧಿ ಶಾಸ್ತ್ರದ ನೀತಿ ನಿರ್ಮಾಣ ಮಾಡಬೇಕಾಗಿದೆ, ಅದಕ್ಕಾಗಿ ಇದರ ವಿಶೇಷತೆಗಳನ್ನು ನೋಡೋಣ.

## ವಿಕಸಿತ ದೇಶಗಳ ವಿಶೇಷತೆಗಳು
## [Characteristics of Developed Countries ]

1. ಕೃಷಿಯೊಂದಿಗೆ ಔದ್ಯೋಗಿಕ ವಿಕಾಸ
2. ಆಧುನಿಕ ವಿಶೇಷ ನಿಯಮಾವಳಿ ಮತ್ತು ಸುವ್ಯವಸ್ಥೆಯ ಸ್ಥಾಪನೆ
3. ಜನಸಂಖ್ಯೆಯ ವೃದ್ಧಿಯ ನಿಯಂತ್ರಣ ಹಾಗೂ ಉದ್ಯೋಗ ( ಕೆಲಸ ) ವ್ಯವಸ್ಥೆ
4. ನಿಯಂತ್ರಿತ ಮಾರುಕಟ್ಟೆ ಹಾಗೂ ಆರ್ಥಿಕ ಸಬಲೀಕರಣ
5. ಕಾನೂನಿ ರಾಜ್ಯ ವ್ಯವಸ್ಥೆ.

**1. ಕೃಷಿಯೊಂದಿಗೆ ಔದ್ಯೋಗಿಕ ವಿಕಾಸ [ಔದ್ಯೋಗಿಕ ವಿಕಾಸ [Agricultural and Industrial Developement]**

ವಿಕಸಿತ ದೇಶಗಳಲ್ಲಿ ಕೃಷಿಯೊಂದಿಗೆ ಔದ್ಯೋಗಿಕ ವಿಕಾಸವೂ ಕೂಡ ಆಗಿದೆ. ಕೃಷಿ ಕೇತ್ರದಲ್ಲಿ ಆಧುನಿಕ ಯಂತ್ರ ಮತ್ತು ವಿಶೇಷ ವಿಧಾನಗಳ ಪ್ರಯೋಗದಿಂದ ವ್ಯವಸ್ಥಿತ ರೀತಿಯಲ್ಲಿ ಕೃಷಿ ಉತ್ಪಾದನೆ ಮಾಡಲಾಗುತ್ತದೆ. ಇದೇ ರೀತಿ, ಔದ್ಯೋಗಿಕ ವಿಕಾಸದಲ್ಲಿಯೂ ಕೂಡ ಸಮಯದ ಬೇಡಿಕೆಗನುಸಾರವಾಗಿ, ಅತ್ಯಾಧುನಕ ವಿಶೇಷ ವಿಧಾನಗಳ ಪ್ರಯೋಗ ಮಾಡಿ ಔದ್ಯೋಗಿಕ ವಿಕಾಸವಾಗಿದೆ. ಯಾವ ದೇಶದಲ್ಲಿ ಬಲಿಷ್ಠ ಆರ್ಥಿಕತೆ, ಕೌಶಲ್ಯಗಳ ವಿಶೇಷ ವಿಧಾನಗಳು ಹಾಗೂ ಅವಶ್ಯಕ ಸಂಪನ್ಮೂಲ ಸಾಧನಗಳು ಸಂಪನ್ನವಾಗಿರುತ್ತವೆ. ಯುರೋಪ್ ಮತ್ತು ಅಮೇರಿಕಾ, ಆಸ್ಟ್ರೇಲಿಯಾ ಮುಂತಾದ ವಿಕಸಿತ ರಾಷ್ಟ್ರಗಳಲ್ಲಿ ಇದನ್ನು ಕಾಣಬಹುದಾಗಿದೆ.

**2. ಆದುನಿಕ ವಿಶೇಷ ವಿಧಾನಗಳು ಮತ್ತು ಸುವ್ಯವಸ್ಥೆಯ ಸ್ಥಾಪನೆ [Modern Techniques and Proper Management]**

ಯಾವ ದೇಶದಲ್ಲಿ ಆಧುನಿಕ ಪ್ರವಿಧಾನಗಳ ಪ್ರಯೋಗ ಮತ್ತು ಸುವ್ಯವಸ್ಥೆ ಸ್ಥಾಪಿತವಾಗುತ್ತದೋ ಅಂತಹ ದೇಶಗಳನ್ನು ವಿಕಸಿತ ದೇಶಗಳೆನ್ನುತ್ತಾರೆ. ವಿಕಸಿತ ದೇಶ, ವಿಕಾಸದ ಪೂರ್ವಾಧಾರದಂತೆ ಸ್ವೀಕರಿಸಲಾದ ದಾರಿಗಳು (ರಸ್ತೆ) ಮತ್ತು ವಿದ್ಯುತ್ತಿನ ಪೂರ್ತಿಯಾದ ನಂತರ ಸಮಯಾನುಸಾರ ಪ್ರವಿಧಾನಗಳ ವಿಕಾಸ ಮಾಡಿ, ಅದನ್ನು ಚಾಲನೆಗೆ ತರಲು ವ್ಯವಸ್ಥಾಪಕತ್ವದಲ್ಲಿ ಸುಧಾರಣೆ ಮಾಡುವ ಮೂಲಕ ದೇಶವನ್ನು ಆತ್ಮ ನಿರ್ಭರಗೊಳಿಸುತ್ತಾರೆ.

**3. ಜನಸಂಖ್ಯೆಯ ವೃದ್ಧಿಯಲ್ಲಿ ನಿಯಂತ್ರಣ ಹಾಗೂ ಉದ್ಯೋಗದ ವ್ಯವಸ್ಥೆ [Control over Population and Employment Management ]**

ವಿಕಸಿತ ದೇಶಗಳು ಜನಸಂಖ್ಯಾವೃದ್ಧಿಯನ್ನು ನಿಯಂತ್ರಿಸಿ, ಯಾವ ಅನುಪಾತದಲ್ಲಿ ಜನ ಸಂಖ್ಯೆಯ ವೃದ್ಧಿಯಾಗಿದೆಯೋ, ಅದೇ ಅನುಪಾತದಲ್ಲಿ ಉದ್ಯೋಗ ವ್ಯವಸ್ಥೆಯನ್ನು ಮಾಡಿವೆ. ಅಂದರೆ ದೇಶದಲ್ಲಿ ಎಲ್ಲಾ ನಾಗರಿಕರು ತಮ್ಮ ತಮ್ಮ ಕಲೆ ಮತ್ತು ಶ್ರಮದ ಆಧಾರದಲ್ಲಿ ಉದ್ಯೋಗವನ್ನು ಪಡೆಯುತ್ತಾರೆ. ದೇಶದೊಳಗೆ ಮಾನವೀಯ ಶ್ರಮ ಮತ್ತು ಸಾಧನಗಳೂ ವಿಕಾಸಗೊಳ್ಳುತ್ತವೆ. ವಿಕಸಿತ ದೇಶದಲ್ಲಿ ಶ್ರಮದ ಉಚಿತ ಮೌಲ್ಯವೂ ನಿರ್ಧಾರವಾಗುತ್ತವೆ.

**4. ನಿಯಂತ್ರಿತ ಮಾರುಕಟ್ಟೆ ಹಾಗೂ ಆರ್ಥಿಕ ಸಬಲತೆ [Controlled Market and Economic Growth ]**

ನಿಯಂತ್ರಿತ ಮಾರುಕಟ್ಟೆ ಹಾಗೂ ಆರ್ಥಿಕ ಸಲಬತೆಯೇ ವಿಕಸಿತ ದೇಶದ ಸಫಲತೆಯಾಗಿದೆ. ಮಾರುಕಟ್ಟೆಯಲ್ಲಿ ಸುಲಭವಾಗಿ ಅವಶ್ಯಕ ವಸ್ತುಗಳ ಪೂರೈಕೆ ಮತ್ತು ಬೆಲೆ ನಿಯಂತ್ರಣ ವ್ಯವಸ್ಥೆಯೇ ಮಾರುಕಟ್ಟೆ ವ್ಯವಸ್ಥಾಪನೆಯ ಲಕ್ಷಣವಾಗಿದೆ. ದೇಶ ಎಲ್ಲಾ ವ್ಯಕ್ತಿ ಹಾಗೂ ಸಮುದಾಯಗಳು ಇಂತಹ ವ್ಯವಸ್ಥೆಯಿಂದ ಸಂತುಷ್ಟಗೊಳ್ಳುತ್ತಾರೆ.

**5) ಕಾನೂನಾತ್ಮಕ ರಾಜ್ಯದ ಸ್ಥಾಪನೆ [Establishment of Constitutional State]**

ವಿಕಸಿತ ದೇಶಗಳಲ್ಲಿ ಕಾನೂನು ಪೂರ್ಣರೂಪದಲ್ಲಿ ಕ್ರಿಯಾಶೀಲವಾಗುತ್ತದೆ. ಯಾವ ದೇಶದಲ್ಲಿ ಸಬಲ ಕಾನೂನು ವ್ಯವಸ್ಥೆ ಸ್ಥಾಪಿತವಾಗುತ್ತದೋ, ಆ ದೇಶದಲ್ಲಿ ಕಾನೂನಾತ್ಮಕ ರಾಜ್ಯ ವ್ಯವಸ್ಥೆಯ ಸ್ಥಾಪನೆಯಾಗುತ್ತದೆ. ಆ ದೇಶಗಳಲ್ಲಿ ಕಾನೂನಾತ್ಮಕ ರಾಜ್ಯ ವ್ಯವಸ್ಥೆಯ ಚಾಲನೆಯಾಗುತ್ತದೆ. ಇಂತಹ ವ್ಯವಸ್ಥೆಯಲ್ಲಿ ನಾಗರಿಕ ಮತ್ತು ನಾಗರಿಕ ಸಮುದಾಯದ ಅಭಿಭಾವಕ ರೂಪದಲ್ಲಿ ಕಾನೂನು ಸ್ಥಾಪಿತವಾಗುತ್ತದೆ. ಕಾನೂನು ಸರ್ವೋ ಪರಿಯಾಗಿರುತ್ತದೆ ಮತ್ತು ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರಾಗಿರುತ್ತಾರೆ. ಇದನ್ನೇ ಒಳ್ಳೆಯ ಶಾಸನ ವ್ಯವಸ್ಥೆ ಎಂದು ಕೂಡ ಹೇಳುತ್ತಾರೆ.

## ವಿಕಾಸೋನ್ಮುಖ ದೇಶಗಳ ವಿಶೇಷತೆಗಳು [Characteristics of Developing Countries]

ಯಾವ ದೇಶದ ಆರ್ಥಿಕ ಪರಿಸ್ಥಿತಿ ದುರ್ಬಲವಾಗಿರುತ್ತದೋ ಮತ್ತು ಅಲ್ಲಿಯ ಔದ್ಯೋಗಿಕ ಕ್ಷೇತ್ರ ವಿಕಾಸವಾಗುವುದಿಲ್ಲವೋ, ಆ ದೇಶಗಳನ್ನು ವಿಕಾಸೋನ್ಮುಖ ಅಥವಾ ಅವಿಕಸಿತ ದೇಶಗಳೆಂದು ಹೇಳುತ್ತಾರೆ. ಇಂತಹ ದೇಶಗಳು ಲ್ಯಾಟಿನ್ ಅಮೇರಿಕಾ, ಆಫ್ರಿಕಾ, ಯುರೋಪ್ ಮತ್ತು ಏಷಿಯಾ ಮಹಾದೇಶಗಳಲ್ಲಿ ಬಹಳಷ್ಟಿವೆ. ಇಂತಹ ದೇಶಗಳಲ್ಲಿ ಪ್ರಾಕೃತಿಕ ಸಂಪತ್ ಸಾಧನಗಳು ಸಾಕಷ್ಟಿದ್ದರೂ ಸಂಪನ್ಮೂಲ ಸಾಧನಗಳು ಸರಿಯಾದ ಬಳಕೆ ಆಗುವುದಿಲ್ಲ ಮತ್ತು ಒಂದು ವೇಳೆ ಆದರೂ ಕೂಡ ಈ ಸಂಪನ್ಮೂಲಗಳು ವಿಕಸಿತ ದೇಶಗಳ ಅತಿಕ್ರಮಣದಿಂದ ಪೀಡಿತವಾಗುತ್ತವೆ. ವಿಕಾಸೋನ್ಮುಖ ಅಲ್ಪ ವಿಕಸಿತ ಅಥವಾ ಅವಿಕಸಿತ ದೇಶಗಳಲ್ಲಿ ಪ್ರತಿ ವ್ಯಕ್ತಿಯ ಆದಾಯ ಒಂದೇ ಸಮನೆ ಕಡಿಮೆಯಾಗುತ್ತದೆ. ನಾಗರಿಕರು ಉದ್ಯೋಗಾವಕಾಶಗಳಿಂದ ವಂಚಿತರಾತ್ತಾರೆ ಮಾತ್ರವಲ್ಲ, ಸ್ವಾಸ್ಥ್ಯ, ಶಿಕ್ಷಣ, ಪೌಷ್ಟಿಕ ಆಹಾರ ಮತ್ತು ವಸತಿ ಮುಂತಾದ ಮೂಲಭೂತ ಅವಶ್ಯಕತೆಗಳೂ

ಪೂರ್ಣವಾಗುವುದಿಲ್ಲ. ವಿಕಾಸೋನ್ಮುಖ ಅಲ್ಪ ವಿಕಸಿತ ಅಥವಾ ಅವಿಕಸಿತ ದೇಶಗಳ ವಿಶೇಷತೆಗಳು ಈ ಕೆಳಗಿನಂತಿವೆ.

1. ಕೃಷಿ ಆಧಾರಿತ ವ್ಯವಸ್ಥೆ
2. ಪರಂಪರಾಗತ ಕಾರ್ಯಶೈಲಿ
3. ಬಡತನ ಹಾಗೂ ಭಂಡವಾಳದ ಕೊರತೆ
4. ಉಚ್ಚ ಜನಸಂಖ್ಯೆಯಲ್ಲಿ ವೃದ್ಧಿಪರ
5. ನಿರುದ್ಯೋಗ
6. ಸಾಮಾನ್ಯ ಬಡತನ
7. ಆದಾಯದಲ್ಲಿ ತಾರತಮ್ಯ
8. ಅನಿಯಂತ್ರಿತ ಮಾರುಕಟ್ಟೆಯ ವಿಕಾಸ
9. ಸರಕಾರೇತರ ಸಂಸ್ಥೆಗಳ ಹಸ್ತಕ್ಷೇಪ
10. ಬೇಜವಾಬ್ದಾರ ಸಮೂಹಗಳ ನಿರ್ಮಾಣ
11. ಸಂಸ್ಥಾಗತವಾದ ಭ್ರಷ್ಟಾಚಾರ.
12. ರಾಜನೈತಿಕ ಪಕ್ಷಗಳು ಹಾಗೂ ನಾಯಕರ ಅಂತಾರಾಷ್ಟ್ರೀಯ ಕ್ರಿಯಾ –ಕಲಾಪ.

### 1. ಕೃಷಿ ಆಧಾರಿತ ವ್ಯವಸಾಯ [Agro – based Profession ]

ಸಾಮಾನ್ಯವಾಗಿ ವಿಕಾಸೋನ್ಮುಖ ದೇಶಗಳ ಮುಖ್ಯ ವೃತ್ತಿ ಕೃಷಿಯೇ ಆಗಿರುತ್ತದೆ. ಕೃಷಿ ವ್ಯವಸಾಯವೇ ಸಮುದಾಯದ ಮೂಲ ಆದಾಯದ ಸಂಪನ್ಮೂಲವಾಗಿರುತ್ತದೆ. ಕೃಷಿಕರು ಗ್ರಾಮಗಳಲ್ಲಿ ವಾಸಿಸುತ್ತಾರೆ. ಈ ಕೃಷಿಕ ವ್ಯವಸ್ಥಾಯವು ತನ್ನ ದೇಶದ ಅನ್ಯ ನಾಗರಿಕರಿಗಿಂತ ದುರ್ಬಲವಾಗಿರುತ್ತದೆ. ಏಕೆಂದರೆ ಅದು ಮಾರುಕಟ್ಟೆಯ ವ್ಯವಸಾಯದಿಂದ ಶೋಷಿತವಾಗಿರುತ್ತವೆ. ಆದ್ದರಿಂದ ಕೃಷಿ ವ್ಯವಸಾಯದಲ್ಲಿ ತೊಡಗಿರುವ ಸಮಾಜದ ಮನಸ್ಥಿತಿ ದುರ್ಬಲವಾಗಿರುತ್ತದೆ.

### 2. ಪರಂಪರಾಗತ ಕಾರ್ಯ ಶೈಲಿ [Traditional Technology]

ವಿಕಾಸೋನ್ಮುಖ ದೇಶಗಳ ಕಾರ್ಯ ಶೈಲಿಯಲ್ಲಿ ಪರಿವರ್ತನೆ ಆಗುವುದಿಲ್ಲ. ಆಧುನಿಕ ಶೈಲಿಯ ವಿಕಾಸಕ್ಕಾಗಿ ವ್ಯಕ್ತಿಯ ಕ್ರಿಯಾಶಕ್ತಿಯು ಕೂಡ ಅದೇ ರೀತಿಯಲ್ಲಿ

ಹೆಚ್ಚುತ್ತದೆ. ವಿಕಸಿತ ಆಧುನಿಕ ಭೌತಿಕ ತಂತ್ರಜ್ಞಾನವನ್ನು ಸ್ವೀಕರಿಸದೆ, ಆಧುನಿಕ ಶೈಲಿಯನ್ನು ಸ್ವೀಕರಿಸಲಾಗದು. ನಿಮ್ನ ಆದಾಯದ ವ್ಯಕ್ತಿ ಇದನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಇದಕ್ಕಾಗಿ ಈ ಪರಂಪರಾಗತ ಪದ್ಧತಿಯನ್ನು ಇವರು ಬಿಡಲಾಗುವುದಿಲ್ಲ.

### 3. ಬಡತನ ಹಾಗೂ ಬಂಡವಾಳದ ಕೊರತೆ [ Poverty and Lack of Capital ]

ಜೀವನ ನಿರ್ವಹಣೆಗೆ ಬೇಕಾಗುವ ಅವಶ್ಯಕ ಸಾಧನ ಸಂಪನ್ಮೂಲಗಳ ಕೊರತೆ ಇರುವಲ್ಲಿ ಬಡತನವಿರುತ್ತದೆ ಮತ್ತು ವ್ಯವಸ್ಥಿತ ಜೀವನವನ್ನು ವ್ಯವಸ್ಥೆಗೊಳಿಸಲಾಗದಿರುವ ಕಾರಣವೇ ಬಂಡವಾಳದ ಕೊರತೆ, 'ಅರ್ಥ' ಶಾಸ್ತ್ರೀಯ ಸಿದ್ಧಾಂತದ ಅನುಸಾರವಾಗಿ ಬಂಡವಾಳದ ಅರ್ಥ, ಉತ್ಪಾದನೆಯ ಸಾಧನದಿಂದಾಗಿದೆ, ಭಂಡವಾಳದ ಉಳಿತಾಯ ಆದಾಯವನ್ನವಲಂಬಿಸಿದೆ. ವಿಕಾಸೋನ್ಮುಖ ದೇಶದ ವ್ಯಕ್ತಿ ಎಷ್ಟು ಸಂಪಾದಿಸುತ್ತಾನೋ ಅದೆಲ್ಲವೂ ಜೀವನ ನಿರ್ವಹಣೆಯಲ್ಲಿ ಖರ್ಚಾಗಿ ಹೋಗುತ್ತದೆ ಮತ್ತು ಉಳಿತಾಯದ ಪರಿಸ್ಥಿತಿಯೇ ಇರುವುದಿಲ್ಲ. ಆದ್ದರಿಂದ ಬಂಡವಾಳ ಸಂಗ್ರಹಿಸಲಾಗದವರು ಬಡವರಾಗಿರುತ್ತಾರೆ. ಭಂಡವಾಳದಿಂದ ವಂಚಿತ ವ್ಯಕ್ತಿಗಳು ಬಡವರಾಗಿರುತ್ತಾರೆ. ಹಾಗೂ ಬಡತನದಲ್ಲಿ ಬಂಡವಾಳದ ಕೊರತೆ ಇರುತ್ತದೆ.

### 4. ಉಚ್ಚ ಜನಸಂಖ್ಯೆಯ ವೃದ್ಧಿ ದರ [High population Growth Rate]

ವಿಕಾಸೋನ್ಮುಖ ದೇಶಗಳಲ್ಲಿ ಅನಿಯಂತ್ರಿತ ರೂಪದಲ್ಲಿ ಜನಸಂಖ್ಯೆ ಹೆಚ್ಚಳವಾಗುತ್ತದೆ. ಶಿಕ್ಷಣ ಮತ್ತು ಜನಜಾಗೃತಿಯ ಕೊರತೆಯಿಂದಾಗಿ, ಇಂತಹ ದೇಶಗಳಲ್ಲಿ ಸಂತಾನೋತ್ಪತ್ತಿ ಹೆಚ್ಚಾಗುತ್ತದೆ. ಇದರಿಂದಾಗಿ ಜನಸಂಖ್ಯೆ ಹೆಚ್ಚಳದಿಂದ ಬಡತನ ಹೆಚ್ಚುವುದು ಸ್ವಾಭಾವಿಕವೇ ಆಗಿದೆ. ಎಲ್ಲಿ ಬಡತನವಿರುತ್ತದೋ, ಅಲ್ಲಿ ಪ್ರಾಮಾಣಿಕತೆ ಮತ್ತು ನೈತಿಕತೆಯ ಹ್ರಾಸವಾಗುತ್ತದೆ. ವ್ಯಕ್ತಿಯ ಮಸ್ತಿಷ್ಕದಲ್ಲಿ ವಿಕೃತಿಯ ವಿಕಾಸಕ್ಕೂ ಬಡತನವೇ ಕಾರಣವಾಗಿದೆ.

### 5. ನಿರುದ್ಯೋಗ [Unemployment ]

ಸಕ್ಷಮ (ಸಮರ್ಥ ) ವ್ಯಕ್ತಿಗೆ ಉದ್ಯೋಗ ಪ್ರಾಪ್ತವಾಗದೆ ಇರುವ ಸ್ಥಿತಿಯನ್ನು ನಿರುದ್ಯೋಗ ಎನ್ನುವರು. ವಿಕಾಸೋನ್ಮುಖ ದೇಶಗಳ ಮೂಲ ಸಮಸ್ಯೆಯೇ ನಿರುದ್ಯೋಗವಾಗಿದೆ. ಕೆಲಸ ಮಾಡುವವರಿಗೆ ದೇಶದಲ್ಲಿ ಉದ್ಯೋಗ ಸಿಗದಿರುವ

ಪರಿಸ್ಥಿತಿಯಲ್ಲಿ ಅವರು ವಿದೇಶಗಳಿಗೆ ಹೋಗುತ್ತಾರೆ. ಇಂತಹ ಸ್ಥಿತಿ ಯಾವುದೇ ದೇಶಕ್ಕೆ ಒಳ್ಳೆಯದಲ್ಲ. ಯಾವುದೇ ದೇಶದಲ್ಲಿ ನಿರುದ್ಯೋಗ ಹೆಚ್ಚಿದಾಗ ಅಲ್ಲಿಯ ಜನರು ಅಪ್ರಮಾಣಿಕರು ಮತ್ತು ಅವಕಾಶವಾದಿಗಳಾಗುತ್ತಾರೆ. ನಿರುದ್ಯೋಗದಿಂದಾಗಿ ವ್ಯಕ್ತಿಯ ಮಾನವೀಯ ಮೌಲ್ಯ ಮತ್ತು ಮಾನ್ಯತೆ ಸಮಾಪ್ತವಾಗುತ್ತದೆ. ಇದರಿಂದ ನಿರುದ್ಯೋಗದಿಂದ ಬಡತನ ಮತ್ತು ಬಡತನದಿಂದ ಅಭಾವ ಸೃಷ್ಟಿಯಾಗುತ್ತದೆ ಮತ್ತು ಭ್ರಷ್ಟಾಚಾರದ ಜನನವಾಗುತ್ತದೆ.

### 6) ಸಾರ್ವತ್ರಿಕ ಬಡತನ [Mass Poverty ]

ವಿಕಾಸೋನ್ಮುಖ ದೇಶದ ಪ್ರಮುಖ ಸಮಸ್ಯೆ ಬಡತನವಾಗಿದೆ. ಬಡತನ ದೂರ ಮಾಡುವುದಕ್ಕಾಗಿ, ಯಾವುದೇ ದಿಟ್ಟ ಯೋಜನೆ ಇಲ್ಲದಿರುವ ಕಾರಣ ದೇಶದೊಳಗೆ ಬಡತನ ಪ್ರಚಲಿತದಲ್ಲಿರುತ್ತದೆ. ಈ ಕಾರಣದಿಂದಾಗಿ ವ್ಯಕ್ತಿಯ ಆಚರಣೆಯಲ್ಲಿ ಚಂಚಲತೆಯುಂಟಾಗುತ್ತದೆ. ಇದರಿಂದ ಭ್ರಷ್ಟಾಚಾರ ಹೆಚ್ಚುತ್ತದೆ.

### 7. ಆದಾಯದಲ್ಲಿ ಅಂತರ [Discrimination in the Income]

ವಿಕಾಸೋನ್ಮುಖ ದೇಶದಲ್ಲಿ ವ್ಯಕ್ತಿಯ ಆದಾಯದಲ್ಲಿ ಅಂತರವಿರುತ್ತದೆ. ಉದ್ಯೋಗದ ಅವಕಾಶ ಪ್ರಾಪ್ತವಾಗದೇ ಇರುವುದರಿಂದ ದುಡಿಮೆ ಕಡಿಮೆಯಾಗುವುದರಿಂದ ಸಾಮಾನ್ಯ ವ್ಯಕ್ತಿ ಬಡತನದಿಂದ ಪೀಡಿತನಾಗುತ್ತಾನೆ. ಒಬ್ಬ ವ್ಯಕ್ತಿ ಎಷ್ಟು ಕೆಲಸ ಮಾಡುತ್ತಾನೋ ಇನ್ನೊಬ್ಬನು ಅಷ್ಟೇ ಕೆಲಸ ಮಾಡುತ್ತಾನೆ. ಆದರೆ ಕೆಲವೊಮ್ಮೆ ಮೊದಲನೆಯವನಗಿಂತ ಮತ್ತೊಬ್ಬನ ಆದಾಯ ದುಪ್ಪಟ್ಟು ಅಥವಾ ಮೂರು ಪಟ್ಟು ಹೆಚ್ಚಾಗುವುದೂ ಇದೆ. ಇದರಿಂದ ಆದಾಯದಲ್ಲಿ ಅಂತರ ( ತಾರತಮ್ಯ) ಉಂಟಾಗುತ್ತದೆ. ಈ ಸ್ಥಿತಿಯಲ್ಲಿ, ವ್ಯಕ್ತಿ ವ್ಯಕ್ತಿಗಳ ನಡುವೆ ನಿರಾಶೆ ಉತ್ಪನ್ನವಾಗುತ್ತದೆ. ಮತ್ತು ಸಮಾಜದಲ್ಲಿ ಅವಿಶ್ವಾಸದ ವಾತಾವರಣ ಉಂಟಾಗುತ್ತದೆ.

### 8. ಅನಿಯಂತ್ರಿತ ಮಾರುಕಟ್ಟೆಯ ವಿಕಾಸ [Developement Uncontrolled Market ]

ವಿಕಾಸೋನ್ಮುಖ ದೇಶಗಳಲ್ಲಿ ಮಾರುಕಟ್ಟೆಗಳು ಅನಿಯಂತ್ರಿತ ರೂಪದಲ್ಲಿ ವಿಕಸಿತವಾಗುತ್ತಿವೆ. ಮಾರುಕಟ್ಟೆ ಚಾಲಾಕಿಗಳು ಮತ್ತು ಧೂರ್ತ ಜನರ ನಿಯಂತ್ರಣದಲ್ಲಿವೆ. ಇದೇ ಕಾರಣಕ್ಕಾಗಿ, ಪೂರೈಕೆ ಹಾಗೂ ಬೇಡಿಕೆ ಮತ್ತು ಬೆಲೆನಿಯಂತ್ರಣದ ಸಿದ್ಧಾಂತದ ಕೆಲಸ ಮಾಡುತ್ತಿಲ್ಲ. ಕೃತ್ರಿಮ ಅಭಾವದ ಕಾರಣದಿಂದಾಗಿ ವಸ್ತುವಿನ ಸ್ಥಿರ ಬೆಲೆಗಳು ಕೂಡ ಅಸ್ಥಿರವಾಗುತ್ತವೆ. ಮತ್ತು

ಬೆಲೆಗಳು ಅನಿಯಂತ್ರಿತವಾಗುತ್ತವೆ. ಈ ರೀತಿ ಬೆಲೆಗಳು ಅನಿಯಂತ್ರಿವಾದ ಮೇಲೆ ಗ್ರಾಹಕರ ಮೇಲೆ ಆರ್ಥಿಕ ಹೊರೆ ಹೆಚ್ಚಾಗುತ್ತದೆ ಮತ್ತು ವ್ಯಾಪಾರಿಗಳು ಆರ್ಥಿಕವಾಗಿ ಸಬಲರಾಗುತ್ತಾರೆ. ಇಂತಹ ಅನಿಯಂತ್ರಿತ ಮಾರುಕಟ್ಟೆಯ ವಿಕಾಸದಿಂದ ಜನರಲ್ಲಿ ಬಡತನ ಹೆಚ್ಚುತ್ತದೆ.

**9. ಸರಕಾರೇತರ ಸಂಸ್ಥೆಗಳ ಹಸ್ತಕ್ಷೇಪ [Influence of Foreign non Governmental organization ]**

ವಿಕಾಸೋನ್ಮುಖ ದೇಶಗಳಲ್ಲಿ ವಿಕಸಿತ ದೇಶಗಳ ಸರಕಾರೇತರ ಸಂಸ್ಥೆಗಳ ಹಸ್ತಕ್ಷೇಪವಿರುತ್ತದೆ. ಇದೇ ಕಾರಣಕ್ಕೆ ಆ ದೇಶದ ಧರ್ಮ, ಸಂಸ್ಕೃತಿ ಮತ್ತು ಪರಂಪರಾಗತ ರೀತಿ ರಿವಾಜುಗಳನ್ನು ಬದಲಿಸಿ, ಜೀವನ ಪದ್ಧತಿಯನ್ನೇ ಬದಲಿಸುವ ಪ್ರಯತ್ನ ಮಾಡುತ್ತವೆ. ಈ ಕಾರಣದಿಂದ ವಿಕೃತಿ ಹರಡುತ್ತದೆ. ವಿಶ್ವದ ಯಾವುದೇ ಭಾಗದಲ್ಲಿ ಹುಟ್ಟಿಕೊಂಡ ಸಮುದಾಯ ಅಥವಾ ಸಮಾಜ ತಮ್ಮ ರೀತಿ, ಪರಂಪರಾಗತ ಮಾನ್ಯತೆಗಳು, ಸಂಸ್ಕಾರ ಮತ್ತು ಸಂಸ್ಕೃತಿಯ ನೆಲೆಯಲ್ಲಿ ವಿಕಸಿತ ಸಾಮಾಜಿಕ ಮೌಲ್ಯ ಮತ್ತು ಮಾನ್ಯತೆಯ ಆಧಾರದಲ್ಲಿ ಮಾನವೋಚಿತ ಜೀವನ ನಿರ್ವಹಣೆ ಮಾಡುತ್ತಾರೆ. ಇಂತಹ ಸಾಮಾಜಿಕ ವಿಕಾಸ ಶತಮಾನದಿಂದ ನಡೆದುಕೊಂಡು ಬರುತ್ತಿದೆ. ಯಾವುದೇ ಸಮುದಾಯ ಅಥವಾ ಸಮಾಜದಿಂದ ಅಂಗೀಕೃತವಾದ ರೀತಿ ಮತ್ತು ಸಂಸ್ಕೃತಿಯಲ್ಲಿ ಬೇರೆ ದೇಶಗಳು ಹಸ್ತಕ್ಷೇಪ ಮಾಡಬಾರದು. ಆದರೆ ವಿಕಸಿತ ದೇಶಗಳ ಸರಕಾರೇತರ ಸಂಸ್ಥಾನಗಳು ವಿಕಾಸೋನ್ಮುಖ ದೇಶಗಳಲ್ಲಿ ಪ್ರತ್ಯಕ್ಷವಾಗಿಯೇ ಹಸ್ತಕ್ಷೇಪ ಮಾಡುವ ಕಾರಣದಿಂದಾಗಿ ಸಮಾಜದ ತನ್ನದೇ ಆದ ಮಾನ್ಯತೆ ಮೌಲ್ಯಗಳು ಮತ್ತು ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಪರಿವರ್ತನೆಯಾಗತೊಡುಗುತ್ತದೆ. ವಿಕಾಸೋನ್ಮುಖ ದೇಶಗಳಲ್ಲಿ ಇರುವ ಚಾಲಾಕಿಗಳು ಮತ್ತು ಧೂರ್ತರು ಆಮಿಷವನ್ನು ನೀಡಿ, ಸಮಾಜ ಸುಧಾರಣೆಯ ಹೆಸರಲ್ಲಿ ಮಾಡುತ್ತಿರುವ ರೈತ ಸಮಾಜವನ್ನು ದುರ್ಬಲ ಮತ್ತು ಪರಾವಲಂಬಿ ಯನ್ನಾಗಿಸುತ್ತವೆ.

**10. ಬೇಜವಾಬ್ದಾರ ಸಮೂಹದ ನಿರ್ಮಾಣ [Irrensponsible Community ]**

ಸಮಾಜದ ಅಭ್ಯುದಯ ಮಾಡುವ ಹೊಣೆಗಾರ ಸಮುದಾಯ ಸಂಘಟಿತ ರೂಪದಲ್ಲಿ ಕ್ರಿಯಾಶೀಲವಾಗುತ್ತವೆ. ಯಾರು ಯಾವ ಸಂಘಟನೆ ಮತ್ತು ಸಮುದಾಯದ ಜವಾಬ್ದಾರಿಯನ್ನು ಹೊಂದಿರುತ್ತಾರೋ, ಅವರ ಕುರಿತು ಆ ಸಮೂಹ ಅಥವಾ ಸಮುದಾಯ ಹೊಣೆಗಾರವಾಗುತ್ತವೆ. ಅದರ ಜೊತೆಗೆ

ಸ್ವತಃ ತಮ್ಮದೆ ಕೆಲಸದ ಉತ್ತರಿಸುವುದನ್ನು ಮಾಡಬೇಕು. ಆದರೆ ವಿಕಾಸೋನ್ಮುಖ ದೇಶಗಳಲ್ಲಿ ಇಂತಹ ಜವಾಬ್ದಾರ ಸಮೂಹ ಅಥವಾ ಸಮುದಾಯ ಸ್ಥಾಪಿತವಾಗಲು ಕಷ್ಟವಾಗುತ್ತದೆ. ಇದಕ್ಕಾಗಿ ವಿಕಾಸೋನ್ಮುಖ ದೇಶದ ಎಲ್ಲಾ ಕ್ಷೇತ್ರಗಳಿಂದ ಸರಕಾರೇತರ ಸಮೂಹ ಅಥವಾ ಸಮುದಾಯಗಳು ಸಂಘಟಿತವಾಗಿ ಚಾಲನೆಗೊಳ್ಳುತ್ತವೆ. ಸಾಮಾಜಿಕ, ಆರ್ಥಿಕ ಮತ್ತು ರಾಜನೈತಿಕ ಕ್ಷೇತ್ರಗಳಲ್ಲಿ ಅಲ್ಲವಾದರೂ ರಾಜ್ಯವ್ಯವಸ್ಥೆಯನ್ನು ಸಂಚಾಲಿಸುವಲ್ಲಿ ಆಡಳಿತದ ಎಲ್ಲಾ ಕ್ಷೇತ್ರಗಳಲ್ಲಿ ಬೇಜವಾಬ್ದಾರ ಸಮೂಹದ ಬಾಹುಳ್ಯ ಸ್ಥಾಪಿತವಾಗುತ್ತದೆ. ಇದೇ ದೇಶ ಹಾಗೂ ಜನತೆಯ ವಿಕಾಸಕ್ಕೆ ಬಾಧಕವಾಗಿದೆ.

### 11. ಸಂಸ್ಥಾಗತ ಭ್ರಷ್ಟಾಚಾರ [Institutiionlized corruption ]

ವಿಕಾಸೋನ್ಮುಖ ದೇಶಗಳಲ್ಲಿ ಭ್ರಷ್ಟಾಚಾರವು ಸಾಂಸ್ಥಿಕ ರೂಪದಲ್ಲಿ ವಿಕಾಸ ಮಾಡುತ್ತದೆ. ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಸೇರಿ ಮಾಡುವ ಭ್ರಷ್ಟಾಚಾರವನ್ನು ಮಾಡುತ್ತಾರಾದರೆ, ಅದನ್ನು ಸಾಂಸ್ಥಿಕ ಭ್ರಷ್ಟಾಚಾರವೆನ್ನುತ್ತಾರೆ. ಇದೇ ರೀತಿ ಕಾನೂನನ್ನು ಮಾಡಿ ಯಾವುದಾದರೂ ನಿರ್ಣಯದ ಮೂಲಕ ಆಗುವ ಭ್ರಷ್ಟಾಚಾರವು ಕೂಡ ಸಾಂಸ್ಥಿಕ ಭ್ರಷ್ಟಾಚಾರದ ವ್ಯಾಪ್ತಿಯಲ್ಲಿ ಬರುತ್ತದೆ. ಆಂತರಿಕ ಅಥವಾ ಬಾಹ್ಯ ಒತ್ತಡದ ಕಾರಣದಿಂದ ದೇಶದಲ್ಲಿರುವ ಪ್ರಾಕೃತಿಕ ಸಂಪನ್ಮೂಲದ ನಿರ್ವಹಣೆ ಮತ್ತು ಹಸ್ತಾಂತರವಾಗುತ್ತದೆ. ಇದೇ ರೀತಿ ರಾಷ್ಟ್ರೀಯ ಸ್ವಾರ್ಥದ ಪ್ರತಿಯಾಗಿ ಮಾಡುವ ಅಥವಾ ಮಾಡಿಸುವ ಕಾರ್ಯವನ್ನು ಕೂಡ ಸಾಂಸ್ಥಿಕ ಭ್ರಷ್ಟಾಚಾರವೆನ್ನುತ್ತಾರೆ. ವಿಕಸಿತ ದೇಶದ ವ್ಯಾಪಾರಿ ಸಂಸ್ಥೆ ಮತ್ತು ಸಮುದಾಯವು ಕೂಡ ವಿಕಾಸೋನ್ಮುಖ ದೇಶಗಳಲ್ಲಿ ಇಂತಹ ವ್ಯಾಪಾರಿ ವ್ಯವಹಾರಗಳ ಜಾಲವನ್ನು ನಿರ್ಮಿಸುತ್ತಾರೆ. ಇಂತಹವರು ಬಡ ರಾಷ್ಟ್ರದ ಶೋಷಣೆ ಮಾಡುತ್ತಾರೆ. ಇವರು ಶೋಷಿತ ದೇಶ ಧೂರ್ತ ಮತ್ತು ಚಾಲಾಕಿ ವ್ಯಕ್ತಿಗಳು ದೇಶ ಜನತೆ ಮತ್ತು ರಾಷ್ಟ್ರೀಯತೆಯನ್ನು ಸಾಂಸ್ಥಿಕ ಭ್ರಷ್ಟಾಚಾರದ ಬಿಳುಪಿನ (ಶುಭ್ರ) ನೀತಿಯ ನಿರ್ಮಾಣದ ಶೋಷಣೆ ಮಾಡುತ್ತಾರೆ.

### 12. ರಾಜನೈತಿಕ ಪಕ್ಷಗಳು ಮತ್ತು ನಾಯಕರ ಅಂತಾರಾಷ್ಟ್ರೀಯ ಕಾರ್ಯ ಕಲಾಪ [Antinational activities of Political Leaders and Parites]

ವಿಕಾಸೋನ್ಮುಖ ದೇಶಗಳಲ್ಲಿ ರಾಜನೈತಿಕ ಪಕ್ಷ ಹಾಗೂ ರಾಜಕೀಯ ನಾಯಕರ ರಾಷ್ಟ್ರೀಯವಲ್ಲದ ಕ್ರಿಯಾ-ಕಲಾಪ ನಿಯಂತ್ರಣವಿಲ್ಲದೆ ಹರಡುತ್ತದೆ. ಲೋಕ ತಂತ್ರದ ಹೆಸರಿನಲ್ಲಿ ರಾಜಕೀಯ ಪಕ್ಷಗಳು ಮತ್ತು ಪಕ್ಷಗಳ ನಾಯಕರು ಕೈಗೊಂಡ ಪ್ರತಿಯೊಂದು ನಿರ್ಣಯವು ದೇಶ ಮತ್ತು ಜನತೆಯ ಹಿತಕ್ಕಾಗಿಯೇ ಎಂಬ

ಭ್ರಮೆಯನ್ನುಂಟು ಮಾಡುತ್ತಾರೆ ಮತ್ತು ಅದೇ ರಾಜಕೀಯ ಭ್ರಮೆಯ ಮಾಧ್ಯಮದಿಂದ ರಾಜಕೀಯ ಪಕ್ಷ ಮತ್ತು ರಾಜಕೀಯ ಮುಖಂಡರು ತಮ್ಮ ಸ್ವಾರ್ಥವನ್ನು ಸಾಧಿಸಿಕೊಂಡು ದೇಶ ಮತ್ತು ಜನತೆಯ ಶೋಷಣೆ ಮಾಡುತ್ತಾರೆ. ಈ ರಾಜಕೀಯ ಪಕ್ಷಗಳು ಹಾಗೂ ರಾಜಕೀಯ ನಾಯಕರು ಎಷ್ಟೇ ರಾಷ್ಟ್ರೀಯವಲ್ಲದ ಕಾರ್ಯಗಳನ್ನು ಮಾಡಲಿ, ಆದರೆ ಆ ದೇಶದ ಸಾಮಾನ್ಯ ನಾಗರಿಕನು ಅವರ ವಿರುದ್ಧ ಮಾತನಾಡುವ ಅಥವಾ ವಿರೋಧಿಸುವ ಪರಿಸ್ಥಿತಿ ಇರುವುದಿಲ್ಲ. ರಾಜಕೀಯ ಪಕ್ಷವು ಅದೇ ನಿರ್ಣಯವನ್ನು ಜನತೆಗೆ ನಿಶ್ಚಿತಗೊಳಿಸುತ್ತದೆ. ಅದನ್ನೇ ಜನತೆಯ ನಿರ್ಣಯವೆನ್ನಲಾಗುತ್ತದೆ. ಈ ಸ್ಥಿತಿ (ವ್ಯವಸ್ಥೆ ) ಆಗಬಾರದಿತ್ತು. ವಿಕಾಸೋನ್ಮುಖ ದೇಶಗಳಲ್ಲಿ ರಾಜಕೀಯ ಮುಖಂಡರೇ ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ. ಈ ರೀತಿಯಲ್ಲಿ ಸರ್ವಾಧಿಕಾರಿ ಪ್ರವೃತ್ತಿಯ ವಿಕಾಸವಾಗುತ್ತದೆ. ಹಾಗೂ ಜನರು ಮತ್ತು ದೇಶ ಇವೆರಡರ ವಿರುದ್ಧವಾಗಿ ರಾಜಕೀಯ ಪಕ್ಷಗಳು ಹಾಗೂ ರಾಜಕೀಯ ನಾಯಕರು ಸ್ಥಾಪಿತರಾಗುತ್ತಾರೆ. ಇವರ ಮೂಲಕವೇ ಭ್ರಷ್ಟಾಚಾರದ ಜೋಳಿಗೆಯನ್ನು ತೆರೆಯುವ ಕೆಲಸವಾಗುತ್ತದೆ ಮತ್ತು ನಾಲ್ಕು ಕಡೆಗಳಿಂದಲೂ ಭ್ರಷ್ಟಾಚಾರಜನ್ಯ ಕಾರ್ಯಗಳು ಹರಡುವ ಅವಕಾಶ ಸಿಗುತ್ತದೆ.

ವಿಕಸಿತ ಹಾಗೂ ವಿಕಾಸೋನ್ಮುಖ ದೇಶಗಳ ವಿಶೇಷತೆಯನ್ನು ಸಂಕ್ಷೇಪವಾಗಿ ಮೇಲೆ ಉಲ್ಲೇಖಿಸಲಾಗಿದೆ. ಬಡ ಅರ್ಥಾತ್ ವಿಕಾಸೋನ್ಮುಖ ದೇಶಗಳು ವಿಕಸಿತ ದೇಶಗಳ ಸನಿಹಕ್ಕೆ ತಲುಪುವುದು ಕಷ್ಟವಾಗಿದೆ. ಮೇಲಿನ ವಿಶ್ಲೇಷಣೆಯಿಂದ ಇದು ಸ್ಪಷ್ಟವಾಗುತ್ತದೆ. ಆದರೆ ವಿಶ್ವದ ಎಲ್ಲಾ ದೇಶಗಳು ಸಮಾನ ಅವಕಾಶಗಳು ಮತ್ತು ಸಂತುಲಿತ ವಿಕಾಸದ ಅಧಿಕಾರಿಯಾಗಿದ್ದಾರೆ. ಈ ಸಮಸ್ಯೆಗಳ ಸಮಾಧಾನ (ಪರಿಹಾರ) ಭ್ರಷ್ಟವಿರೋಧಿ ಶಾಸ್ತ್ರ ಮಾಡಬಲ್ಲುದು.

### ಸಕಾರಾತ್ಮಕ ಚಿಂತನೆ ಮತ್ತು ಸಮಾಜದ ರಚನೆ [Positive Attitudes and Social Structure ]

ಯಾವುದೇ ಸಮಾಜದ ಜನರು, ಅವರ ಚಿಂತನೆ ಮತ್ತು ಕ್ರಿಯಾ – ಕಲಾಪಗಳು ಆ ಸಮಾಜದ ಸ್ತರವನ್ನು (ಮಟ್ಟವನ್ನು ) ನಿರ್ಧರಿಸುತ್ತಾರೆ. ಒಂದು ಸಮಾಜದ ಪರಿಚಯನ್ನು ಆ ಸಮಾಜದೊಂದಿಗಿನ ಪ್ರತ್ಯಕ್ಷ ಸಂಬಂಧ ವನ್ನಿಟ್ಟುಕೊಂಡಿರುವ ವ್ಯಕ್ತಿ ಮತ್ತು ಅವನ ವ್ಯಕ್ತಿತ್ವದ ಪರಿಚಯವನ್ನು ಮಾಡಿಸುತ್ತದೆ. ಸಮಾಜದ ಉನ್ನತಿ ಅಥವಾ ಅವನತಿಯ ಮೂಲವೂ ವ್ಯಕ್ತಿಯ ಚಿಂತನೆಯೇ ಆಗಿದೆ. ಮಾನವ ಸಮಾಜದ ಸಂಸ್ಕೃತಿ ಹಾಗೂ ಸಭ್ಯತೆಯ ವಿಕಾಸವು ಕೂಡ ವ್ಯಕ್ತಿಯ ಚಿಂತನೆಯ ಆಧಾರದ ಮೇಲೆ ನಿಶ್ಚಿತವಾಗುತ್ತದೆ.

ವರ್ತಮಾನ ಪರಿಸ್ಥಿತಿಯಲ್ಲಿ ಯಾವುದೇ ಉನ್ನತ ಅಥವಾ ಅವನತ ಸಮಾಜ, ಒಂದು ದೇಶದ ರಾಜನೈತಿಕ ಪರಿಧಿಯಲ್ಲಿ ಸಿಲುಕಿಕೊಂಡಿರುತ್ತದೆ. ರಾಜನೀತಿಯೂ ಕೂಡ ಅದೇ ಸಮಾಜದೊಳಗಿನ ನಾಗರಿಕರ ಸಕಾರಾತ್ಮಕ ಚಿಂತನೆಯಿಂದ ನಿರ್ಮಾಣವಾಗುತ್ತದೆ. ರಾಜ್ಯದೊಳಗಿರುವ ನಾಗರಿಕರ ಚಿಂತನೆಯೇ ದೇಶದ ರಾಜನೈತಿಕ ವ್ಯವಸ್ಥೆಯನ್ನು ನಿರ್ಧರಿಸುವ ತತ್ವವೇ ಸಾಕ್ಷಿಯಾಗುತ್ತದೆ. ಇದಕ್ಕಾಗಿ, ಪ್ರತಿಯೊಬ್ಬ ನಾಗರಿಕನ ಚಿಂತನೆ ಸಕಾರಾತ್ಮಕವಾದ ಮೇಲೆ ಸಮಾಜವು ಕೂಡ ಸಕಾರಾತ್ಮಕವಾಗಿ ದೇಶದ ಉನ್ನತಿಯಲ್ಲಿ ಸಹಾಯಕರಾಗುತ್ತಾರೆ. ನಕಾರಾತ್ಮಕ ಚಿಂತನೆ ಸಮಾಜದಲ್ಲಿ, ವ್ಯಭಿಚಾರ, ಹಿಂಸೆ ಮತ್ತು ಆತಂಕವನ್ನುಂಟುಮಾಡಲು ಆಮಂತ್ರಣ ನೀಡುತ್ತದೆ. ಇದಕ್ಕಾಗಿ, ಸಮಾಜದ ಉನ್ನತಿಗಾಗಿ ಸಕಾರಾತ್ಮಕ ಚಿಂತನೆಯ ಅವಶ್ಯಕತೆ ಕಂಡುಬರುತ್ತದೆ. ಸಕಾರಾತ್ಮಕ ಚಿಂತನೆ , ಸದ್ಭಾವ ಸದಾಚಾರ ಮತ್ತು ಮೈತ್ರಿಭಾವದ ಸ್ಥಾಪನೆ ಮಾಡುತ್ತದೆ.

ಯಂತ್ರದಿಂದ ನಿಯಂತ್ರಿಸಲು ವ್ಯಕ್ತಿ ಯಂತ್ರವಲ್ಲ. ವ್ಯಕ್ತಿಯು ಪ್ರಾಕೃತಿಕನಾಗಿದ್ದಾನೆ. ಅವನ ಎಲ್ಲಾ ಆಗು ಹೋಗುಗಳು, ವ್ಯವಹಾರ ಮತ್ತು ಚಿಂತನೆಯು ಕೂಡ ಪ್ರಾಕೃತಿಕವೇ ಆಗಿದೆ. ಸಮಯ ಸ್ಥಾನ ಮತ್ತು ವಾತಾವರಣದಿಂದ ವ್ಯಕ್ತಿಯ ಚಿಂತನೆಯಲ್ಲಿ ವ್ಯತ್ಯಾಸವಾಗಬಲ್ಲುದು. ಇದಕ್ಕಾಗಿ, ಭ್ರಷ್ಟವಿರೋಧಿ ಶಾಸ್ತ್ರದ ಸೂತ್ರಗಳ ಮಾಧ್ಯಮದಿಂದ ವ್ಯಕ್ತಿಯ ಚಿಂತನೆಯಲ್ಲಿ ಪರಿವರ್ತನೆ ತರಬಹುದಾಗಿದೆ. ಅದು ವ್ಯಕ್ತಿಗೆ ಅವನ ವ್ಯಕ್ತಿತ್ವವನ್ನು ಸ್ಥಾಪನೆ ಮಾಡಿಸುತ್ತದೆ. ವ್ಯಕ್ತಿಯ ಪರಿಚಯ ಮತ್ತು ಅವನ ಅಂತಸ್ತು ಸ್ಥಾಪಿಸುವಲ್ಲಿಯೂ ಕೂಡ ಅವನ ವ್ಯಕ್ತಿತ್ವದ ಪಾತ್ರವಿರುತ್ತದೆ. ಅರ್ಥಾತ್ ವ್ಯಕ್ತಿಯ ವ್ಯಕ್ತಿತ್ವದಲ್ಲಿ ಆತನ ಚಿಂತನೆಗೆ ವಿಶೇಷ ಮಹತ್ವವಿರುತ್ತದೆ. ವ್ಯಕ್ತಿಯ ಚಿಂತನೆಯನ್ನು ಈ ಕೆಳಗಿನ ರೀತಿಯಲ್ಲಿ ನೋಡಬಹುದು.

1. ಸಕಾರಾತ್ಮಕ ಚಿಂತನೆ.
2. ಮಿಶ್ರಿತ ಚಿಂತನೆ.
3. ನಕಾರಾತ್ಮಕ ಚಿಂತನೆ.

### 1. ಸಕಾರಾತ್ಮಕ ಚಿಂತನೆ [Positive Thought / Attitude ]

ಸಕಾರಾತ್ಮಕ ವಿಚಾರವನ್ನು ( ಚಿಂತನೆಯನ್ನು ) ಸರಿಯಾದ ವಿಚಾರವೆಂದು ಹೇಳಬಹುದಾಗಿದೆ. ಸದ್ಭಾವ,ಸದಾಚಾರ ಮತ್ತು ಮೈತ್ರಿಭಾವ ಇತ್ಯಾದಿ ಇದರ ಗುಣಗಳು. ಸರಿಯಾದ ವಿಚಾರ ಮತ್ತು ಸಕಾರಾತ್ಮಕ ಹಾಗೂ ಒಳ್ಳೆಯ ವಿಚಾರಗಳೇ ಮಾನವೀಯ ಗುಣವೂ ಆಗಿದೆ. ಮನುಷ್ಯನ ಪರಿಚಯ ಮತ್ತು ರೂಪದಲ್ಲಿ

ವ್ಯಕ್ತಿತ್ವವನ್ನು ಪರಿಷ್ಕೃತಗೊಳಿಸಿ ಸಮಾಜದಲ್ಲಿ ಸ್ಥಾಪಿಸುವುದಕ್ಕಾಗಿ ಸಕಾರಾತ್ಮಕ ಚಿಂತನೆ ಅವಶ್ಯಕತೆವಾಗಿದೆ. ಅವು ವ್ಯಕ್ತಿಯ ಸಕಾರಾತ್ಮಕ ವಿಚಾರಗಳನ್ನು ಪಡೆದುಕೊಂಡು ಸಮಾಜದಲ್ಲಿ ಕ್ರಿಯಾಶೀಲವಾಗುತ್ತವೆ. ಅಂತಹ ವ್ಯಕ್ತಿ ಸಮಾಜದ ನೇತೃತ್ವ ವಹಿಸಲು ಸಫಲರಾಗುತ್ತಾರೆ. ಒಳ್ಳೆಯ ವಿಚಾರವಂತ ವ್ಯಕ್ತಿ ತಕ್ಷಣಕ್ಕೆ ನಾಯಕತ್ವ ಸ್ವೀಕರಿಸದಿದ್ದರೂ, ನಂತರದಲ್ಲಿ ಆತನ ಚಿಂತನೆ ಸಕಾರಾತ್ಮಕ ಕ್ರಿಯಾ – ಕಲಾಪಗಳ ಮೌಲ್ಯಾಂಕನ ಆಧಾರದಲ್ಲಿ ಅವನ ವ್ಯಕ್ತಿತ್ವ ಸ್ಥಾಪಿತವಾಗಬಹುದಾಗಿದೆ. ಇದರಿಂದಾಗಿ, ಸಕಾರಾತ್ಮಕ ವಿಚಾರ ಅಥವಾ ಒಳ್ಳೆಯ ಚಿಂತನೆಯಿಂದ ಮಾತ್ರ ವ್ಯಕ್ತಿಯ, ವ್ಯಕ್ತಿತ್ವ ಸ್ಥಾಪಿತವಾಗುವುದಿಲ್ಲ. ಬದಲಾಗಿ ಸಮಾಜದ ರಚನೆ ಮತ್ತು ಸಾಮಾಜಿಕ ಮಟ್ಟದಲ್ಲಿ ಕೂಡ ಪರಿವರ್ತನೆಯಾಗುತ್ತದೆ.

### 2. ಮಿಶ್ರ ಚಿಂತನೆ ( ವಿಚಾರ ) [Mixed thought / Attitude]

ವ್ಯಕ್ತಿಯ ಚಿಂತನೆಯನ್ನು ಮೂರು ಭಾಗಗಳಲ್ಲಿ ವಿಂಗಡಿಸಿದಾಗ, ಸಕಾರಾತ್ಮಕ ಮತ್ತು ನಕಾರಾತ್ಮಕ ಚಿಂತನೆಗಳ ಮಿಶ್ರಿತ ರೂಪವನ್ನೇ ಮಿಶ್ರಿತ ಚಿಂತನೆ ಎಂದು ಹೇಳುತ್ತಾರೆ. ಈ ಮಿಶ್ರಿತನೆ ಹೆಚ್ಚಿನ ಜನರಲ್ಲಿರುತ್ತದೆ. ವಿದ್ಯಾವಂತ ಮತ್ತು ಅವಿದ್ಯಾವಂತ ಎರಡೂ ವರ್ಗದಲ್ಲಿ ಸಹಜ ರೀತಿಯಲ್ಲಿ ಸ್ವೀಕೃತವಾಗುವಂತಹ ಚಿಂತನೆ ಮಿಶ್ರಿತ ಚಿಂತನೆಯಾಗಿದೆ. ಕೇವಲ ಸಕಾರಾತ್ಮಕ ಅಥವಾ ಕೇವಲ ನಕಾರಾತ್ಮಕ ಚಿಂತನೆಯುಳ್ಳ ವ್ಯಕ್ತಿಗಳು ಸಮಾಜದಲ್ಲಿ ತುಂಬಾ ಕಡಿಮೆಯಿರುತ್ತಾರೆ. ಸಮಾಜದಲ್ಲಿ ಮಿಶ್ರಿತ ಚಿಂತನೆಯುಳ್ಳ ಜನರೆ ಹೆಚ್ಚಾಗಿರುತ್ತಾರೆ.


### 3. ನಕಾರಾತ್ಮಕ ಚಿಂತನೆ [Negative thought / Attitude ]

ಸಕಾರಾತ್ಮಕ ಚಿಂತನೆಯ ವಿರುದ್ಧದ ಚಿಂತನೆಯೇ ನಕಾರಾತ್ಮಕ ಚಿಂತನೆ. ನಕಾರಾತ್ಮಕ ವಿಚಾರಗಳ ವ್ಯಕ್ತಿಗಳು ಸ್ವಾರ್ಥ ಸ್ವಭಾವದವರಾಗಿರುತ್ತಾರೆ. ಇಂತಹ ವ್ಯಕ್ತಿಗಳು ತನ್ನ ಹಿತ ಮತ್ತು ಪರರ ಅಹಿತವಾಗುವ ಚಿಂತನೆಯಲ್ಲೇ ತೊಡಗಿರುತ್ತಾರೆ. ಇಂತಹ ಚಿಂತನೆಯುಳ್ಳ ವ್ಯಕ್ತಿಗಳು ಸಮಾಜದ ಎಲ್ಲಾ ಪಕ್ಷಗಳ ಅಹಿತವನ್ನೇ ಯೋಚಿಸುತ್ತಾರೆ ಮತ್ತು ದೇಶಕ್ಕೆ ಹಾನಿಯುಂಟುಮಾಡುವ ಕೆಲಸದಲ್ಲಿ ನಿರತರಾಗಿರುತ್ತಾರೆ. ಇಂತಹ ವ್ಯಕ್ತಿಗಳು ಸಂಶಯಗಳು ಮತ್ತು ನಿರ್ದಯರಾಗಿರುತ್ತಾರೆ ಮತ್ತು ಇವರು ಸಂತೋಷವಾಗಿಯೂ ಇರಲಾರರು.

ಮಸ್ತಿಷ್ಕವು ಚಿಂತಾಗ್ರಸ್ತವಾಗಿರುವ ಕಾರಣ ಸಮಾಜದಲ್ಲಿ ದ್ವಂದ್ವ ಮತ್ತು ಆತಂಕಿತ ಸ್ಥಿತಿಯನ್ನು ಬಯಸುತ್ತಿರುತ್ತಾರೆ. ಇಂತಹ ವಿಚಾರದ ವ್ಯಕ್ತಿಗಳು ಸಮಾಜದ ಶತ್ರುಗಳಾಗುತ್ತಾರೆ ಮತ್ತು ರಾಷ್ಟ್ರದ ಉನ್ನತಿಯಲ್ಲಿ ತೊಡಕಾಗುತ್ತಾರೆ. ಮೇಲಿನ

ಉಲ್ಲೇಖಿತ ಸಕಾರಾತ್ಮಕ, ನಕಾರಾತ್ಮಕ ಮತ್ತು ಮಿಶ್ರಿತ ಚಿಂತನೆಯುಳ್ಳ ವ್ಯಕ್ತಿಗಳು ಪರಿವಾರದ ಸಣ್ಣ ಭಾಗದಿಂದ ಹಿಡಿದು ಸಮಾಜ ಮತ್ತು ಸಮುದಾಯಗಳಲ್ಲೂ ಕಾಣಸಿಗುತ್ತಾರೆ. ಈ ಒಂದು ಸಣ್ಣ ಭಾಗದೊಳಗೆ ಎಲ್ಲರೂ ಒಂದೇ ವಿಚಾರಗಳನ್ನು ಹೊಂದಿದವರಾಗಿರುವುದಿಲ್ಲ. ಯಾವುದೇ ಸಮೂಹ ಮತ್ತು ಸಮಾಜದಲ್ಲಿ ಸಕಾರಾತ್ಮಕ ಮತ್ತು ನಕಾರಾತ್ಮಕ ಚಿಂತನೆ ಇರುವವರು ಕಡಿಮೆ ಇರುತ್ತಾರೆ. ಏಕೆಂದರೆ, ಮಿಶ್ರಿತ ಚಿಂತನೆಯುಳ್ಳವರು ಅಧಿಕವಾಗಿರುತ್ತಾರೆ. ಇವರನ್ನು ಒಂದು ವೇಳೆ ಸಕಾರಾತ್ಮಕ ಚಿಂತನೆಯುಳ್ಳವರು ತಮ್ಮೊಂದಿಗೆ ಜೊತೆ ಸೇರಿಕೊಂಡರೆ ಉನ್ನತಿ ಹಾಗೂ ವಿಕಾಸದತ್ತ ಸಮಾಜವು ಮುಂದಡಿ ಇಡಬಹುದು. ಅದೇ ನಕಾರಾತ್ಮಕ ಚಿಂತನೆಯ ಕಡೆಗೆ ಈ ದೊಡ್ಡ ಸಮೂಹ ಮುಂದುವರೆದರೆ ಸಮಾಜದಲ್ಲಿ ಅವನತಿ ಮತ್ತು ಅಸ್ಥಿರತೆ ಉಂಟಾಗುತ್ತದೆ. ಅರ್ಥಾತ್ ಮಿಶ್ರಿತ ಚಿಂತನೆಯ ಪಕ್ಷವೇ ನಿರ್ಣಾಯಕ ಪಾತ್ರ ವಹಿಸುತ್ತದೆ.

ವ್ಯಕ್ತಿಯ ಚಿಂತನೆ ಮತ್ತು ಸಮಾಜದ ನಿರ್ಮಾಣವನ್ನು ಈ ಕೆಳಗಿನ ಚಿತ್ರದಲ್ಲಿ ನೋಡಬಹುದು.





ಮೇಲಿನ ಚಿತ್ರದಲ್ಲಿ ವ್ಯಕ್ತಿಯಿಂದ ಸಕಾರಾತ್ಮಕ ಮಿಶ್ರಿತ ಮತ್ತು ನಕಾರಾತ್ಮಕ ವಿಚಾರಗಳು ಉತ್ಪನ್ನವಾಗಿ ವ್ಯಕ್ತಿಯ, ವ್ಯಕ್ತಿತ್ವದಲ್ಲಿ, ಸಮಾಜದಲ್ಲಿ ಪ್ರವೇಶಿಸುತ್ತವೆ. ಸಮಾಜದ ರಚನೆಯಲ್ಲಿ ಸಕಾರಾತ್ಮಕ ಮತ್ತು ನಕಾರಾತ್ಮಕ ವಿಚಾರವುಳ್ಳವರು ಎಂಭತ್ತು ಪ್ರತಿಶತರಿದ್ದಾರೆ. ಈ ಎಂಭತ್ತು ಪ್ರತಿಶತ ಸಾಧಾರಣ ನಾಗರಿಕರನ್ನು ಹತ್ತು ಪ್ರತಿಶತದಲ್ಲಿರುವ ಉಚ್ಚ ಅಥವಾ ಕೆಳಹಂತದಲ್ಲಿರುವ ವ್ಯಕ್ತಿತ್ವವನ್ನು ತಮ್ಮ

ಪ್ರಭಾವಕ್ಕೊಳಪಡಿಸಿ, ಸಮಾಜದ ರಚನೆಯನ್ನು ನಿಶ್ಚಿತಗೊಳಿಸುತ್ತಾರೆ. ಉನ್ನತಿ ಮತ್ತು ವಿಕಾಸದ ಹಾದಿಯಲ್ಲಿ ಮುಂದುವರೆಯುತ್ತಿರುವ ದೇಶವು, ಉಚ್ಚ ಕ್ಷೇತ್ರದವರ ಪ್ರಭಾವದಲ್ಲಿದ್ದುಕೊಂಡು, ಸಾಧಾರಣ ಕ್ಷೇತ್ರವನ್ನೂ ಪ್ರಭಾವಿತಗೊಳಿಸಿ, ಸಕಾರಾತ್ಮಕ ದಿಕ್ಕಿನತ್ತ ಸಮಾಜವನ್ನು ಕೊಂಡೊಯ್ಯುತ್ತದೆ. ಇದೇ ರೀತಿ ಉನ್ನತಿ ಹೀನ ಅಸ್ಥಿರ ಮತ್ತು ದ್ವಂದ್ವದ ಅಲೆಯಲ್ಲಿ ಸಿಲುಕಿರುವ ಕೆಳಹಂತದ ಕ್ಷೇತ್ರದವರ ಸಮಾಜದ ಪ್ರಭಾವದಲ್ಲಿ ಸಾಧಾರಣ ಕ್ಷೇತ್ರದ ವಲಯದಲ್ಲಿ ತಂದು ಸಮಾಜದ ತೊಂಭತ್ತು ಪ್ರತಿಶತ ಉಳಿದವರನ್ನು ಕ್ಷೇತ್ರವನ್ನು ಆವರಿಸಿಕೊಳ್ಳುತ್ತದೆ. ಅರ್ಥಾತ್ ಸಕಾರಾತ್ಮಕ ಪಕ್ಷದ ಉಚ್ಚ ಕ್ಷೇತ್ರ ಅಥವಾ ನಕಾರಾತ್ಮಕ ಪಕ್ಷದ ಕೆಳಹಂತದ ಕ್ಷೇತ್ರವೇ ಮಹತ್ವಪೂರ್ಣವಾದ ಕ್ಷೇತ್ರವೆನಿಸಿಕೊಳ್ಳುತ್ತದೆ. ಹೆಚ್ಚಿನ ಕ್ಷೇತ್ರಗಳನ್ನೊಳಗೊಂಡಿರುವ ಈ ಕ್ಷೇತ್ರವು ಸಾಧಾರಣ ಕ್ಷೇತ್ರವನ್ನು ತನ್ನಂತೆಯೇ ರೂಪಿಸಿ, ಸಮಾಜದಲ್ಲಿ ತನ್ನ ಛಾಪು ಮೂಡಿಸುವಲ್ಲಿ ಸಮರ್ಥವಾಗುತ್ತದೆ.

ವಿದ್ಯಾವಂತ, ಅವಿದ್ಯಾವಂತ ಎರಡೂ ರೀತಿಯ ವರ್ಗಗಳಲ್ಲಿ ವಿಭಜಿಸಲ್ಪಟ್ಟ ವ್ಯಕ್ತಿಯ ಚಿಂತನೆಯ ಪ್ರಕೃತಿಯಲ್ಲಿ ವಿಶೇಷ ವ್ಯತ್ಯಾಸವಿರುವುದಿಲ್ಲ. ವಿದ್ಯಾವಂತರ ಸಮಾಜದಲ್ಲಿ ಸಕಾರಾತ್ಮಕ ಚಿಂತನೆಗಳು ಹೆಚ್ಚಾಗಿರುತ್ತವೆ. ಅಂತೆಯೇ ಅವಿದ್ಯವಂತ ಸಮಾಜದಲ್ಲಿ ಅದು ಕಡಿಮೆಯಾಗಿರುತ್ತದೆ. ಇದೇ ರೀತಿ ವಿಕಸಿತ ಹಾಗೂ ವಿಕಾಸೋನ್ಮುಖ ಎರಡೂ ರೀತಿಯ ದೇಶಗಳಲ್ಲಿ ವ್ಯಕ್ತಿ, ಸಮುದಾಯ ಮತ್ತು ಸಮಾಜದಲ್ಲಿಯ ಪ್ರಕೃತಿಯು ಕೂಡ ಒಂದೇ ತೆರನಾಗಿರುತ್ತದೆ. ವಿಚಾರಗಳ ದೃಷ್ಟಿಯಿಂದ ಸಮಾಜದ ಉನ್ನತಿ ಮತ್ತು ಅವನತಿಯನ್ನು ಈ ಕೆಳಗಿನ ಚಿತ್ರದಲ್ಲಿ ನೋಡೋಣ.

**ಸಮಾಜದ ರಚನೆ**



## ಹಿನ್ನಡೆ ಹಾಗೂ ಅವನತಿ

ಮೇಲಿನ ಚಿತ್ರದಲ್ಲಿ ಸಮಾಜದ ರಚನೆ ಉಚ್ಚ ಅರ್ಥಾತ್ ಸಕಾರಾತ್ಮಕ ವಿಚಾರವಿರುವವರು ಹತ್ತು (10) ಪ್ರತಿಶತವೆಂದು ತೋರಿಸಲ್ಪಟ್ಟಿದೆ. ಮತ್ತು ಎಂಭತ್ತು ಪ್ರತಿಶತ ಸಾಧಾರಣ ಅರ್ಥಾತ್ ಮಿಶ್ರಿತ ವಿಚಾರ ಹೊಂದಿದವರಾಗಿರುತ್ತಾರೆ. ಸಾಧಾರಣ ವರ್ಗದಲ್ಲಿ ಬಹುಸಂಖ್ಯಾಕರು ಇದ್ದರೂ ಕೂಡ, ಈ ವರ್ಗವು ಉಚ್ಚ ಅಥವಾ ಕೆಳವರ್ಗದಲ್ಲಿ ಪ್ರಭಾವಿತವಾಗಿ ಅದೇ ನ್ಯೂನ ವರ್ಗದಲ್ಲಿ ಸೇರಿಕೊಂಡು ಬಿಡುತ್ತವೆ. ಇದೇ ರೀತಿ ನ್ಯೂನವರ್ಗದ ಜೊತೆ ಸೇರಿ, ಒಂದಾಗಿ ಸಮಾಜದ ಉನ್ನತಿ ಅಥವಾ ಅವನತಿಯ ಮಾರ್ಗ ನಿರ್ದೇಶಿಸಲ್ಪಡುತ್ತದೆ. ಅರ್ಥಾತ್ ಸಕಾರಾತ್ಮಕ ಚಿಂತನೆಯ ನಿಮ್ನ ವರ್ಗವು ಮಿಶ್ರಿತ ವರ್ಗವನ್ನು ತನ್ನೊಳಗೊಂದಾಗಿಸಿ, ಸಮಾಜ ಅಗ್ರಗ್ರಾಮಿಯಾಗುತ್ತಾ ಸಮಯಾನುಕೂಲವಾಗಿ ವಿಕಾಸ ಮಾಡುತ್ತದೆ. ಇದೇ ರೀತಿ ನಕಾರಾತ್ಮಕ ವರ್ಗ ಮಿಶ್ರಿತವರ್ಗವನ್ನು ತನ್ನೊಳಗೊಂದಾಗಿಸಿ, ಸಮಾಜದಲ್ಲಿ, ಪ್ರತಿಗಮನ ಮಾತ್ರವಲ್ಲ, ದ್ವಂದ್ವ, ಆತಂಕ ಮತ್ತು ಅಸ್ಥಿರತೆಯನ್ನು ಸ್ಥಾಪಿಸುತ್ತದೆ. ಇದೇ ರೀತಿ ಅಸ್ಥಿರತೆಯ ನೆಲೆಗಟ್ಟಿನಲ್ಲಿ ಭ್ರಷ್ಟಾಚಾರ ವಿಕಸಿತವಾಗುತ್ತದೆ. ವಿಕಸಿತ ದೇಶಗಳ ಸಾಮಾಜಿಕ ರಚನೆ ಅಗ್ರಗಾಮಿಯಾಗಿರುತ್ತದೆ ಮತ್ತು ವಿಕಾಸೋನ್ಮುಖ ದೇಶಗಳ ರಚನೆ (ಸಾಮಾಜಿಕ) ಸಾಮಾನ್ಯವಾಗಿ ಪ್ರತಿಗಾಮಿಯಾಗಿರುತ್ತದೆ.

## ಸಕಾರಾತ್ಮಕ ಚಿಂತನೆಯಿಂದ ವಿವೇಕಯುತ ನಿರ್ಣಯ [Rational Decision by Positive Thinking]

ಸಕಾರಾತ್ಮಕ ಚಿಂತನೆಯಲ್ಲಿ ವಿವೇಕಶೀಲ ನಿರ್ಣಯ ಹುಟ್ಟುತ್ತದೆ. ವಿವೇಕ ಪೂರ್ಣ ನಿರ್ಣಯ ಕೊಡಬಲ್ಲಂತಹ ವ್ಯಕ್ತಿಯೇ ಸಮಾಜದಲ್ಲಿ ಮಹಾನ್ ವ್ಯಕ್ತಿಯಾಗಿ ತನ್ನ ಛಾಪನ್ನು ಮೂಡಿಸುತ್ತಾನೆ. ಆ ನಿರ್ಣಯ ನಾಗರಿಕ ಮಟ್ಟದೇ ಇರಲಿ, ಅಥವಾ ರಾಜ್ಯದ ಅಧಿಕಾರ ಹೊಂದಿರುವ ಪದಾಧಿಕಾರಗಳ ಕಡೆಯಿಂದಲೇ ಇರಲಿ, ವಿವೇಕಪೂರ್ಣ ನಿರ್ಣಯ ಮಹತ್ವವ್ನು ಪಡೆದುಕೊಳ್ಳುತ್ತದೆ. ಸಮಾಜದ ಒಂದು ಮೂಲೆಯಲ್ಲಿರುವ ಸಕಾರಾತ್ಮಕ ವಿಚಾರವುಳ್ಳ ವ್ಯಕ್ತಿ, ವರ್ಗದ ಮೂಲಕ ಮಾಡಲ್ಪಟ್ಟ ವಿವೇಕಪೂರ್ಣ ನಿರ್ಣಯ ಮತ್ತು ಕ್ರಿಯಾಕಲಾಪದಿಂದ ಸಂಪೂರ್ಣ ಸಮಾಜಕ್ಕೆ ದಿಶಾನಿರ್ದೇಶನ ಮಾಡಬಲ್ಲರು. ಇಡೀ ಸಮಾಜವನ್ನು ಸಕಾರಾತ್ಮಕ ನಿರ್ಣಯದ ಮಾರ್ಗದಲ್ಲಿ ಮುನ್ನಡೆಸುವಲ್ಲಿ ಸಮರ್ಥಗೊಳಿಸಬಲ್ಲರು. ಇದರಿಂದಾಗಿ, ಸಕಾರಾತ್ಮಕ ಚಿಂತನೆಯಿಂದ ವಿವೇಕಶೀಲ ನಿರ್ಣಯ ಮುನ್ನಲೆಗೆ

ಬರುತ್ತದೆ. ಎಂದು ನಾವು ತಿಳಿಯಬಹುದಾಗಿದೆ. ವಿವೇಕ ಶೀಲ ನಿರ್ಣಯ ಸಮಾಜದ ಮೇರುದಂಡವಾಗಿದೆ.

## ನಕಾರಾತ್ಮಕ ಚಿಂತನೆಯಿಂದ ಸಮಾಜ ವಿರೋಧಿ ವ್ಯವಹಾರ [Antisocial Behaviour from Negative Thinking]

ನಕಾರಾತ್ಮಕ ವಿಚಾರಗಳಿಂದ ಸಮಾಜವಿರೋಧಿ ವ್ಯವಹಾರ ಉತ್ಪನ್ನವಾಗುತ್ತದೆ. ಸಮಾಜ ವಿರೋಧಿ ವ್ಯವಹಾರವನ್ನು ಸಾಮಾಜಿಕ ವಿಕೃತಿ ಎಂದೂ ಹೇಳುತ್ತಾರೆ. ನಕಾರಾತ್ಮಕ ಚಿಂತನೆಯ ವ್ಯವಹಾರವನ್ನು ಸಾಮಾಜಿಕ ವಿಕೃತಿ ಎಂದೂ ಹೇಳುತ್ತಾರೆ. ನಕಾರಾತ್ಮಕ ಚಿಂತನೆಯ ವ್ಯಕ್ತಿಗಳಲ್ಲಿ ನೈತಕತೆಯ ಅಭಾವವಿರುತ್ತದೆ. ಮತ್ತು ಸ್ವಾರ್ಥ ಮನೋಭಾವದ ವಿಕಾಸವು ಕೂಡ ಆಗುತ್ತಿರುತ್ತದೆ. ಇಂತಹ ವ್ಯಕ್ತಿಗಳು ಸುಳ್ಳು ಹೇಳುವವರು ಮತ್ತು ಇನ್ನೊಬ್ಬರಿಗೆ ಗೌರವ ಕೊಡದವರು ಹಾಗೂ ಇನ್ನೊಬ್ಬರಿಗೆ ಹಾನಿಯುಂಟು ಮಾಡುವ ಪ್ರಕೃತಿಯವರಾಗಿರುತ್ತಾರೆ. ಈ ಪ್ರವೃತ್ತಿ ದ್ವಂದ್ವ, ಆತಂಕ ಮತ್ತು ಅಪರಾಧವನ್ನು ಹೆಚ್ಚಿಸುವ ಕೆಲಸವನ್ನು ಮಾಡುತ್ತಾರೆ.

ಮೇಲೆ ಉಲ್ಲೇಖಿಸಲಾದ ವಿವೇಕಪೂರ್ಣ ನಿರ್ಣಯ, ಸಕಾರಾತ್ಮಕ ಚಿಂತನೆಯ ಜನಕವಾದರೆ, ಸಮಾಜ ವಿರೋಧಿ ವ್ಯವಹಾರ ನಕಾರಾತ್ಮಕ ಚಿಂತನೆಗೆ ಜನಕವಾಗಿದೆ. ಇವುಗಳನ್ನು ಬೇರ್ಪಡಿಸಿ ವಿಶ್ಲೇಷಣೆ ಮಾಡಬೇಕಾಗಿದೆ. ಅರ್ಥಾತ್ ಎರಡೂ ಪಕ್ಷ ಮತ್ತು ವಿಪಕ್ಷಗಳನ್ನು ಬೇರೆ ಬೇರೆ ರೂಪಗಳಲ್ಲಿ ವ್ಯಾಖ್ಯಾನಿಸಿ, ಎರಡೂ ಪಕ್ಷಗಳನ್ನು ಸರಿಯಾದ ರೀತಿಯಲ್ಲಿ ಸಂಚಾಲನೆ ಮಾಡಬೇಕು. ಸಕಾರಾತ್ಮಕ ವಿಚಾರ ಯಾವ ರೀತಿಯಲ್ಲಿ ಸಮಾಜ ಹಿತದಲ್ಲಿ ಕಾರ್ಯರೂಪಕ್ಕೆ ಬರಬಹುದು ಮತ್ತು ನಕಾರಾತ್ಮಕ ವಿಚಾರಗಳು ಯಾವ ರೀತಿಯ ಅಹಿತವನ್ನುಂಟುಮಾಡಬಹುದು. ಇದರ ನಿರ್ಣಯವನ್ನು ಭ್ರಷ್ಟ ವಿರೋಧಿ ಶಾಸ್ತ್ರ ಮಾಡಬಲ್ಲದು. ಇದಕ್ಕಾಗಿ ಇದರ ಅಧ್ಯಯನ ಅವಶ್ಯಕವಾಗಿದೆ.

***

# 25. ಭ್ರಷ್ಟವಿರೋಧಿ ಸಂಸ್ಕೃತಿಯ ವಿಕಾಸ
# [Develpement of Culture against corruption ]

ಸಮಾಜದ ಸಂಸ್ಕೃತಿ ಮನುಷ್ಯನ ಜೀವನದ ಪದ್ಧತಿಯನ್ನು ನಿರ್ಧರಿಸುತ್ತದೆ. ಸಮಾಜದಲ್ಲಿ ಯಾವ ರೀತಿಯ ಸಂಸ್ಕೃತಿಯ ವಿಕಾಸವಾಗುತ್ತದೋ, ಅದೇ ಸಮಾಜದ ಮನುಷ್ಯನ ಜೀವನ ಪದ್ಧತಿಯೂ ಅದೇ ರೀತಿ ಇರುತ್ತದೆ. ಉದಾಹರಣೆಗೆ ಮಾಂಸ– ಮೀನು ತಿನ್ನದಿರುವ ಜನರು, ಎಲ್ಲಾ ಜೀವ ಜಯಗಳನ್ನು ತಮ್ಮಂತೆಯೇ ತಿಳಿದು  ಪ್ರೀತಿಸುತ್ತಾರೆ. ಯಾವ ಸಂಸ್ಕೃತಿಯಲ್ಲಿ ವ್ಯಕ್ತಿ ಜನಸುತ್ತಾನೋ ಅವನ ಪಾಲನೆ ಪೋಷಣೆಯಾಗುತ್ತದೆ. ಅವನ್ನು ಅದೇ ಸಂಸ್ಕೃತಿಯಲ್ಲಿ ಬದುಕಲಿಚ್ಛಿಸುತ್ತಾನೆ. ಇದೇ ರೀತಿ ಭ್ರಷ್ಟಾಚಾರ ವಿರೋಧಿ ಸಂಸ್ಕೃತಿಯ ಸ್ಥಾಪನೆ ಮಾಡಿ, ಅದರ ವಿಕಾಸವನ್ನು ಒಂದುವೇಳೆ ಮಾಡಿದರೆ, ಭ್ರಷ್ಟವಿರೋಧಿ ಕ್ರಿಯಾ ಕಲಾಪದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಸಹಯೋಗ ಪಡೆಯಬಹುದು. ಇದಕ್ಕಾಗಿ ವಿಶ್ವವ್ಯಾಪಿಯಾಗಿ ಹರಡಿರುವ ಭ್ರಷ್ಟಾಚಾರವನ್ನು ಅತ್ಯಂತ ಕಡಿಮೆ ಮಟ್ಟಕ್ಕೆ ತರುವುದಕ್ಕಾಗಿ ಅದರ ನಿಯಂತ್ರಣಕ್ಕಾಗಿ ಭ್ರಷ್ಟಾಚಾರ ವಿರುದ್ಧದ ಸಂಸ್ಕೃತಿಯ ವಿಕಾಸ ಮಾಡಬೇಕಾಗಿದೆ.

## ನೀತಿ ಹಾಗೂ ಸಂಸ್ಕೃತಿ – [Ethice and Culture ]


ನೀತಿ ಮತ್ತು ಸಂಸ್ಕೃತಿಯನ್ನು ಬೇರ್ಪಡಿಸಿ ಅಥವಾ ಬೇರ್ಪಡಿಸದೆಯೂ ನೋಡಬಹುದು. ಮಾನವ ಹಾಗೂ ಮಾನವ ಸಮಾಜದ ವಿಕಾಸದ ಮೂಲ ಆಧಾರ ರೂಪದಲ್ಲಿರುವ ನೀತಿ ಹಾಗೂ ಸಂಸ್ಕೃತಿಯನ್ನು ಭ್ರಷ್ಟವಿರೋಧಿ ಶಾಸ್ತ್ರದಲ್ಲಿ ಸಮಾವೇಶಗೊಳಿಸಿ ಆಳವಾದ ಅಧ್ಯಯನ ಮಾಡಬೇಕಾಗಬಹುದು.  ನೀತಿಯನ್ನು ನೀತಿ ಶಾಸ್ತ್ರ, ವ್ಯಾಖ್ಯಾನ – ವಿಶ್ಲೇಷಣೆ ಮಾಡುತ್ತದೆ. ಹಾಗೂ ಸಂಸ್ಕೃತಿಯನ್ನು

ಮಾನವ ಸಂಸ್ಕೃತಿಯ ವಿಜ್ಞಾನ ವಿಸ್ತೃತ ಅಧ್ಯಯನವನ್ನು ಮಾಡಿಸುತ್ತದೆ. ನೀತಿ ಮತ್ತು ಸಂಸ್ಕೃತಿ ಯಾವಾಗಲೂ ಸರಿಯಾದ ದಾರಿಯಲ್ಲಿರುತ್ತದೆ. ನೀತಿ ಮತ್ತು ಸಂಸ್ಕೃತಿ ಕೆಟ್ಟು ಹೋಗುವುದರೊಂದಿಗೆ ಸಮಾಜವು ವಿರುದ್ಧ ದಿಕ್ಕಿನತ್ತ ತಿರುವು ಪಡೆಯುತ್ತದೆ. ಆದ್ದರಿಂದ ನೀತಿ ಹಾಗೂ ಸಂಸ್ಕೃತಿ ಸಕಾರಾತ್ಮಕ ಪಕ್ಷದಲ್ಲಿರುತ್ತದೆ ಮತ್ತು ಇದರ ಪರಿಣಾಮವು ಕೂಡ ಸಕಾರಾತ್ಮಕವಾಗಿಯೇ ಇರುತ್ತದೆ. ನೀತಿ ಮಾನವ ಜೀವನದಲ್ಲಿ ವಿವಿಧ ವ್ಯವಹಾರವನ್ನು ಸ್ಥಾಪಿಸುವ ದಿಕ್ಕಿನಲ್ಲಿ ನಿರ್ದೇಶನ ನೀಡುತ್ತದೆ ಮತ್ತು ಸಂಸ್ಕೃತಿ ಮಾನವೀಯ ಜೀವನ ಪದ್ಧತಿಯನ್ನು ವ್ಯವಸ್ಥಿತಗೊಳಿಸುತ್ತದೆ.

ನೀತಿ ಮತ್ತು ಸಂಸ್ಕೃತಿಯನ್ನು ಬೇರೆ ಬೇರೆಯಾಗಿ ನೋಡೋಣ – ನೀತಿ :– ಅರ್ಥಾತ್ ವಿಭಿನ್ನ ಸಮಯದಲ್ಲಿ ಸಮಾಜದಲ್ಲಿ ಮುಂದಾಳುಗಳಿಂದ ಮಾನವ ಹಿತಕ್ಕಾಗಿ ನಿರ್ಮಿಸಲಾದ ಹಾಗೂ ಅವರಿಂದ ಸ್ವೀಕರಿಸಲ್ಪಟ್ಟ ವ್ಯವಹಾರ ನಿಯಮಗಳನ್ನು ತಿಳಿದುಕೊಳ್ಳುವುದು.ಅಲ್ಲದೆ ಇದನ್ನು ಜೀವನ ಆನಂದ ಮತ್ತು ಸಫಲವಾಗಿ ನಡೆಸಲು ಇರುವ ನಿಯಮಗಳನ್ನು ಒಪ್ಪಿಕೊಳ್ಳುವುದು. ಇದನ್ನು ಜೀವನೋಪಯೋಗಿ ರೂಪದಲ್ಲಿ ಸಂಚಾಲನೆ ಮಾಡುವುದಕ್ಕಾಗಿ ನರ್ಧಾರಿತ ಆಚರಣೆ, ಆಚಾರ ಸಂಹಿತೆ ಮತ್ತು ನೀತಿ ನಿಯಮಗಳಿಗಾಗಿ ಒಪ್ಪಿಕೊಳ್ಳಬೇಕಾಗಿದೆ. ಪ್ರಾಚೀನ ಕಾಲದಿಂದಲೂ ಮಾನವ ಸಭ್ಯತೆಯ ವಿಕಾಸಕ್ಕಾಗಿ ಯಾವುದೇ ಜಾತಿ, ವರ್ಣ ಮತ್ತು ಸಂಪ್ರದಾಯದ ಪ್ರವರ್ತಕರಿಂದ ಸ್ಥಾಪಿತ ನೀತಿ ನಿಯಮ ಹಾಗೂ ಸಿದ್ಧಾಂತವನ್ನು ಕೂಡ ನೀತಿಶಾಸ್ತ್ರ ಪರಿಭಾಷೆಯನ್ನು ನೀಡುತ್ತದೆ. ನೀತಿ ವಿಜ್ಞಾನ, ಮಾನವ ಚರಿತ್ರ, ಮಾನವ ಆಚರಣೆ ಮತ್ತು ಮಾನವ ವ್ಯವಹಾರಕ್ಕಾಗಿ ಅವಶ್ಯಕ ನೀತಿಗತ ಸಿದ್ದಾಂತದ ವ್ಯಾಖ್ಯೆ ಮಾಡುತ್ತದೆ. ನೀತಿಯ ವಿಷಯದಲ್ಲಿ ಸಂಕ್ಷಿಪ್ತವಾಗಿ ಹೇಳುವುದಾದರೆ, ನೀತಿಯ ಪಾಲನೆ ಮಾಡುವುದರಿಂದ ಅತ್ಯುತ್ತಮ ಮಾನೀಯ ಗುಣ ಪ್ರದರ್ಶಿತವಾಗುತ್ತದೆ.

ಸಂಸ್ಕೃತಿ :– ಸಂಸ್ಕೃತಿ ಅರ್ಥಾತ್ ಯಾವುದೇ ಜಾತಿ, ವರ್ಗ ಹಾಗೂ ಸಮಾಜದ ಸಂಚಾಲನೆ ಮತ್ತು ಕ್ರಿಯಾಕಲಾಪ ವ್ಯವಸ್ಥಿತಗೊಳಿಸುವುದಕ್ಕಾಗಿ ಮಾಡಲ್ಪಟ್ಟ ವ್ಯವಹಾರವನ್ನು ಪರಿಷ್ಕೃತ ಹಾಗೂ ಸಭ್ಯ ರೂಪದಲ್ಲಿ ತಿಳಿದುಕೊಳ್ಳಬೇಕಾಗಿದೆ. ವ್ಯಕ್ತಿ ಹಾಗೂ ಮಾನವ ಸಮುದಾಯದ ಸಾಮಾಜಿಕ ಜೀವನ ಕಲೆ ಕೌಶಲ ಆಚಾರ ವಿಚಾರ ನಡವಳಿಕೆ ಮತ್ತು ವ್ಯವಹಾರವನ್ನು ಕೂಡ ಸಂಸ್ಕೃತಿ ಜೀವನ ನಿರ್ವಹಣೆಯ ಪದ್ಧತಿಯನ್ನು ಸಂಸ್ಕರಿತ ಹಾಗೂ ಪರಿಷ್ಕೃತಗೊಳಿಸಿ ಉನ್ನತ ಮಟ್ಟದ ಜೀವನ ನಿರ್ವಹಣೆಯ ಮಾರ್ಗವನ್ನು

ಪ್ರಶಸ್ತಗೊಳಿಸುತ್ತದೋ ಆ ಸಮಾಜ ಉನ್ನತ ಮಟ್ಟದ ವಿಕಸಿತ ಸಮಾಜವಾಗುತ್ತದೆ. ಈ ರೀತಿಯಲ್ಲಿ ಸಂಸ್ಕೃತಿ ಮಾನವ ಜೀವನದ ಪದ್ಧತಿಯನ್ನು ವ್ಯವಸ್ಥಿತ ರೂಪದಲ್ಲಿ ಸಂಚಾಲನೆ ಮಾಡಿ ಮಾನವ ವ್ಯವಹಾರಕ್ಕೆ ಸ್ಥಾಯಿತ್ವ ಪ್ರದಾನ ಮಾಡುತ್ತದೆ. ನೀತಿ ಮತ್ತು ಸಂಸ್ಕೃತಿ ವಿಭಿನ್ನ ಪ್ರಕೃತಿಯನ್ನು ಹೊಂದಿದ್ದರೂ ಅವುಗಳ ಪರಿಣಾಮ ಒಂದೇ ತರಹವಾಗಿರುವ ಕಾರಣ ಅವುಗಳನ್ನು ಈ ಕೆಳಗಿನ ಚಿತ್ರವು ಚಿತ್ರಣ ಮಾಡುತ್ತದೆ. ಇವು ಬೇರೆಯಾಗಿದ್ದರೂ ಒಂದೇ ಆಗಿವೆ ಮತ್ತು ಒಂದೇ ಆಗಿದ್ದರೂ ಭಿನ್ನವಾಗಿವೆ.




ಮೇಲಿನ ಚಿತ್ರ ಪ್ರಮಾಣೀಕರಿಸುವುದೇನೆಂದರೆ, ಮಾನವ ಹಿತಕ್ಕಾಗಿ ನಿರ್ಭೀತ ನೀತಿ ಹಾಗೂ ಪಾಲಿಸಿರುವ ಸಂಸ್ಕೃತಿ ಒಂದೇ ಸ್ಥಳದಲ್ಲಿ ಅರ್ಥಾತ್ ಒಂದೇ ಆವರಣದಲ್ಲಿಯೂ ಇರಬಲ್ಲುದು. ಆದರೆ ಒಂದು ಇನ್ನೊಂದರಲ್ಲಿ ಸಮ್ಮಿಳಿತವಾಗಲಾರದು. ಆದರೆ ಭ್ರಷ್ಟಾಚಾರ ವಿರುದ್ಧದ ಸಂಸ್ಕೃತಿಯ ವಿಕಾಸ ಮಾಡುವ ಕ್ರಮದಲ್ಲಿ ನವೀನ ನೀತಿಯ ನಿರ್ಮಾಣ ಮಾಡಿ ಸಂಸ್ಕೃತಿಯ ವ್ಯವಹಾರದಲ್ಲಿ ಸೇರಿಸಬಹದಾಗಿದೆ. ಇದಕ್ಕಾಗಿ ಪರಂಪರಾಗತ ನೀತಿ – ಸಿದ್ಧಾಂತದ ನೆಲೆಯಲ್ಲಿ ನವೀನ ರೀತಿಯ ನಿರ್ಮಾಣ ಮಾಡಿ ಒಂದು ತಮ್ಮೊಳಗೆ ಸುತ್ತುವರಿಯುವಿಕೆಯನ್ನು ಸ್ಥಾಪನೆ ಮಾಡಬಲ್ಲುದು. ಈ ರೀತಿ ಎರಡೂ ತತ್ವಗಳು ಕೇಂದ್ರಿತವಾಗಿ ಸಂಸ್ಕರಿತ ಹಾಗೂ ಪರಿಷ್ಕೃತ ಪದ್ಧತಿಯ ನಿರ್ಮಾಣ ಮಾಡಬಲ್ಲವು ಮತ್ತು ಸಭ್ಯ ಹಾಗೂ ಸುಸಂಸ್ಕೃತ ಜೀವನ ಪದ್ಧತಿಯ ವಿಕಾಸ ಕೂಡ ಮಾಡಬಹುದಾಗಿದೆ.

## ಭ್ರಷ್ಟವಿರೋಧಿ ಸಂಸ್ಕೃತಿಯ ವಿಕಾಸ

## [Develpement of Anticorruption culture ]

ಸಭ್ಯ ಹಾಗೂ ಸುಸಂಸ್ಕೃತ ಜೀವನ ಪದ್ಧತಿಗಾಗಿ ಅವಶ್ಯಕ ನೀತಿ ಹಾಗೂ ಸಂಸ್ಕೃತಿಯ ನಿರ್ಮಾಣದ ವಿವರ ಮೇಲಿನ ಅಧ್ಯಾಯದಲ್ಲಿ ಉಲ್ಲೇಖವಾಗಿದೆ. ಈಗ ಭ್ರಷ್ಟವಿರೋದಿ ಸಂಸ್ಕೃತಿಯು ವಿಕಾಸಕ್ಕಾಗಿ ಎಂತಹ ನೀತಿ

ನಿರ್ಮಾಣವಾಗಬೇಕಿದೆ. ಈ ಕುರಿತು ವಿಚಾರ ಮಾಡಬೇಕು. ನಮ್ಮೊಂದಿಗೆ ಮಾನವ ಕಲ್ಯಾಣ ಮತ್ತು ಮಾನವೀಯ ಜೀವನ ಪದ್ಧತಿಯ ಶಾಶ್ವತ ನೀತಿ ಹಾಗೂ ಸಿದ್ಧಾಂತಗಳಿರುತ್ತವೆ. ಇದೇ ನೀತಿ ಹಾಗೂ ಸಿದ್ಧಾಂತವನ್ನು ಒಂದು ವೇಳೆ ಸತರ್ಕತೆಯೊಂದಿಗೆ ಪ್ರಚುರಗೊಳಿಸಿದಲ್ಲಿ ಆಗ ಭ್ರಷ್ಟ ವಿರೋಧಿ ಸಂಸ್ಕೃತಿಯ ವಿಕಾಸವಾಗಬಹುದು. ಈ ಸತ್ಯ ವಿಚಾರದಿಂದ ನಾವು ಪರಿಚಿತರಾಗಬಹುದು. ಇದೇ ಭ್ರಷ್ಟ ವಿರೋಧಿ ಸಂಸ್ಕೃತಿಯ ವಿಕಾಸಕ್ಕಾಗಿ ನವೀನ ಸಿದ್ಧಾಂತದ ಪ್ರಾದುರ್ಭಾವಗೊಳಿಸುವ ಆವಶ್ಯಕತೆಯೂ ಇಲ್ಲ. ಮಾನವೀಯ ಜೀವನ ನಿರ್ವಹಣೆಗಾಗಿ ಆಚರಿಸಿಕೊಂಡು ಬರುತ್ತಿರುವ ಸಂಸ್ಕೃತಿಯನ್ನು ಜೀವನ –1 ಪದ್ಧತಿಯಲ್ಲಿ ಅಳವಡಿಸಿ ಹಾಗೂ ಸಮಾಜದಲ್ಲಿ ಪ್ರಚಲಿತವಾಗಿ ಬರುತ್ತಿರುವ ನೀತಿ ನಿಯಮಗಳನ್ನು ತಮ್ಮದಾಗಿಸಿಕೊಳ್ಳುವ ವ್ಯಕ್ತಿ, ವರ್ಗ ಮತ್ತು ಸಮುದಾಯವನ್ನು ನಾವು ಭ್ರಷ್ಟವಿರೋಧಿ ಸಂಸ್ಕೃತಿಗಾಗಿ, ಮಾರ್ಗನಿರ್ದೇಶನ ಮಾಡಬಹುದಾಗಿದೆ. ವಿಶ್ವದ ವಿಕಸಿತ ಹಾಗೂ ವಿಕಾಸೋನ್ಮುಖ ಎಲ್ಲಾ ದೇಶಗಳಲ್ಲಿ ಅಭಾವಗ್ರಸ್ತ ಜೀವನ ಕಳೆಯುವುದಕ್ಕಾಗಿ ಬಾಧ್ಯರಾದ ವ್ಯಕ್ತಿ, ಸಮುದಾಯಗಳಿವೆ. ಅವರನ್ನು ಈ ನವೀನ ಸಂಸ್ಕೃತಿ ಪ್ರಭಾವಿತಗೊಳಿಸಲಾರದು. ಆದರೆ ದೇಶದ ಜನರು ಸುಸಂಸ್ಕೃತ ಸಭ್ಯ ಮತ್ತು ಜೀವನ ನಿರ್ವಹಣೆಯ ನಿಯಮಗಳಲ್ಲಿ ಅನುಶಾಸಿತರಾಗಿರುತ್ತಾರೋ, ಇಂತಹ ಜನರು ಹಾಗೂ ಸಮುದಾಯ ಈ ನವೀನ ಭ್ರಷ್ಟವಿರೋಧಿ ಸಂಸ್ಕೃತಿಯಿಂದ ಪ್ರಭಾವಿತರಾಗಬಹುದು. ಭ್ರಷ್ಟವಿರೋಧಿ ಸಂಸ್ಕೃತಿಯ ವಿಕಾಸಮಾಡುತ್ತಾ ಇದರ ಉದ್ದೇಶಿತ ಅಂಶವನ್ನು (ಭಾಗವನ್ನು) ಗುರುತಿಸಬೇಕು. ಇದರ ಉದ್ದೇಶ ಒಂದು ಭಾಗ (ಗುಂಪು) ಇದಾದ ನಂತರ ಸಮುದಾಯ, ಸಮಾಜವಾಗಿದೆ. ಸಂಸ್ಕೃತಿಯನ್ನು ವ್ಯಕ್ತಿಗಳು ಧಾರಣೆ ಮಾಡುತ್ತಾರೆ. ಅದಕ್ಕಾಗಿ ಇದನ್ನು ಜೀವನ ಪದ್ಧತಿ ಎನ್ನುತ್ತಾರೆ. ಯಾವಾಗ ಸಮುದಾಯ ಇದನ್ನು ಒಪ್ಪಿ ಸ್ವೀಕರಿಸುತ್ತಾನೋ, ಆಗ ಅದು ಸಂಸ್ಕೃತಿ ಎನಿಸಿಕೊಳ್ಳುತ್ತದೆ. ಅದಕ್ಕಾಗಿಯೇ ವ್ಯಕ್ತಿ ಸಂಸ್ಕೃತಿಯನ್ನು ರಕ್ಷಿಸುವ ಪ್ರಯತ್ನ ಮಾಡುತ್ತಾನೆ. ವ್ಯಕ್ತಿ ಮತ್ತು ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಸಂಸ್ಕೃತಿಯ ಅನುಸರಣೆ ಮಾಡುತ್ತಾನೆ ಮತ್ತು ಅದನ್ನು ಪಾಲನೆ ಮಾಡುವ ಪ್ರಯತ್ನವನ್ನು ಮಾಡುತ್ತಾನೆ.

ಭ್ರಷ್ಟವಿರೋಧಿ ಸಂಸ್ಕೃತಿಯ ವಿಕಾಸ ಹಾಗೂ ಸಂರಕ್ಷಣೆ, ಸಮುದಾಯ ಅಥವಾ ಸಮಾಜದಿಂದ ಸಂಭವವಿದೆ. ಇದರ ಸಾರ್ಥಕ ತತ್ವವನ್ನು ತಿಳಿಯುವುದಕ್ಕಾಗಿ ಈ ಕೆಳಗಿನ ಮೂರು ಪ್ರಶ್ನೆಗಳ ವಿಮರ್ಶೆ ಮಾಡಬೇಕಾಗಿದೆ.

**1. ಸಾಮೂಹಿಕ ಸ್ವಾರ್ಥವನ್ನು ಪ್ರಾಥಮಿಕೆಯೊಂದಿಗೆ ಹೇಗೆ ಮುಂದುವರೆಸಿಕೊಂಡು ಹೋಗಬಹುದು ?**

**2 ಸಾಮೂಹಿಕ ರೂಪದಲ್ಲಿ ಶಕ್ತಿವಂತ ( ಬಲಶಾಲಿ ) ಯಾಗುವವುದು ಹೇಗೆ ?**

**3. ಸಮೃದ್ಧ ಸಮಾಜದ ನಿರ್ಮಾಣ ಹೇಗಾಗಬೇಕು ?**

ಈ ಸಮಸ್ಯೆಗಳ ಪರಿಹಾರಕ್ಕಾಗಿ, ಯಾವುದೇ ನವೀನ ಸಿದ್ಧಾಂತದ ನಿರ್ಮಾಣ ಮಾಡುವ ಅವಶ್ಯಕತೆ ಇಲ್ಲ. ಮಾನವ ಸಮಾಜದಲ್ಲಿ ಎಷ್ಟೆಲ್ಲಾ ನೀತಿ ಮತ್ತು ಸಿದ್ಧಾಂತಗಳಿವೆಯೋ ಅವುಗಳನ್ನು ಪಾಲಿಸುವ ವಾತಾವರಣದ ನಿರ್ಮಾಣವಾಗಬೇಕು. ಮಾನವ ಜೀವನ ಶತಮಾನಗಳಿಂದ ಅಂಗೀಕರಿಸಿರುವ ಶಾಶ್ವತ ಸತ್ಯ, ಸದಾಚಾರ ಮತ್ತು ಸತ್ಯವಿಚಾರವಾಗಿವೆ. ಸದಾಚಾರ ಮತ್ತು ಸತ್ಯ ವಿಚಾರಗಳೇ ಮಾನವೀಯ ಮೌಲ್ಯ –ಮಾನ್ಯತೆಗಳನ್ನು ಸ್ಥಾಪಿಸುವ ತತ್ವವಾಗಿದೆ. ಇವುಗಳ ನೆಲೆಯಲ್ಲಿ ವ್ಯಕ್ತಿಗತ ಸ್ವಾರ್ಥ, ತ್ಯಾಗ, ಮಾಡುವ ಪ್ರವೃತ್ತಿಯ ವಿಕಾಸ ಸಮಾಜದಲ್ಲಿ ಸಹಜವಾಗಿ ಆಗುತ್ತದೆ ಮತ್ತು ಇದರ ಜೊತೆಗೆ ಭ್ರಷ್ಟವಿರೋಧಿ ಸಂಸ್ಕೃತಿಯ ವಿಕಾಸವೂ ಆಗುತ್ತದೆ.

ಭ್ರಷ್ಟವಿರೋಧಿ ಸಂಸ್ಕೃತಿಯ ವಿಕಾಸಕ್ಕಾಗಿ, ಈ ಕೆಳಗಿನ ತಥ್ಯ ( ತಾತ್ಪರ್ಯ) ವನ್ನು ತೆಗೆದುಕೊಂಡು ಯಾವುದೇ ಮಾಧ್ಯಮದ ಮೂಲಕ ಸರ್ವ ಸಾಧಾರಣ ನಾಗರಿಕನಲ್ಲಿ ತಿಳುವಳಿಕೆಯ ಮೂಲಕ ಕಾರ್ಯಕ್ರಮ ಸಂಚಾಲನೆ ಮಾಡಬೇಕು. ಈ ರೀತಿಯಿಂದ ಕಾರ್ಯಕ್ರಮದ ಪ್ರಚಾರ – ಪ್ರಸಾರದಿಂದ ವ್ಯಕ್ತಿಯನ್ನು ಸದಾ ಸತರ್ಕನಾಗಿರಿಸಬಹುದು. ಉದಾ –

**1.** ಭ್ರಷ್ಟಾಚಾರದ ಮೂಲಕ ಗಳಿಸಿದ ಸಂಪತ್ತು ಯಾವ ಸಮಯದಲ್ಲಾದರೂ ರಾಷ್ಟ್ರೀಕರಣವಾಗಬಹುದು. ಈ ರೀತಿ ಕೇವಲ ಸಂಪತ್ತಿನ ಹರಣ ಮಾತ್ರವಲ್ಲ ಬದಲಾಗಿ ಜೀವನ ಪೂರ್ತಿ ಸೆರೆವಾಸವನ್ನು ಅನುಭವಿಸಬೇಕಾಗುತ್ತದೆ.

**2.** ಪಡೆದ ಅಧಿಕಾರದ ದುರುಪಯೋಗ ಮಾಡಿದಾಗ ಕೇವಲ ಯೋಗ್ಯತೆಯನ್ನು ಪ್ರಶ್ನಿಸುವುದು ಮಾತ್ರವಲ್ಲ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ.ತಿಳಿದೂ ತಿಳಿದು ಅಧಿಕಾರ ದುರುಪಯೋಗ ಮಾಡಿದಲ್ಲಿ ದಂಡ (ಶಿಕ್ಷೆ) ಮತ್ತು ಅರ್ಥ ದಂಡ (ತಪ್ಪಿನ ಶುಲ್ಕ) ಎರಡರಲ್ಲೂ ಭಾಗಿದಾರನಾಗಬೇಕಾಗುತ್ತದೆ.

**3.** ಭ್ರಷ್ಟ ವ್ಯಕ್ತಿಯ ಸಾಮಾಜಿಕ ಬಹಿಷ್ಕಾರ ಮತ್ತು ಇದರ ಪ್ರಭಾವ ಅವನ ಪರಿವಾರ ಮತ್ತು ಸದಸ್ಯರ ಮೇಲಾಗುತ್ತದೆ.

**4**. ಬೇಗ ಮತ್ತು ತ್ವರಿತವಾದ ಗತಿಯಲ್ಲಿ ಹಣ ಸಂಪಾದನೆ ಮಾಡುವಲ್ಲಿ ವ್ಯಕ್ತಿ ಅಥವಾ ಸಮುದಾಯ ಭ್ರಷ್ಟಾಚಾರದ ಸಹಕಾರ ಪಡೆಯುತ್ತಾನೆ.

**5**. ಯಾವುದೇ ಪ್ರಾಯೋಜಿತ ರೀತಿಯಿಂದ ಸಂಪತ್ತನ್ನು ಶುದ್ಧಿಕರಿಸುವುದರಿಂದ ಭ್ರಷ್ಟಾಚಾರಿ ಸದಾಚಾರಿಯಾಗಿ ಪರಿವರ್ತಿತನಾಗಲಾರ. ಈ ತಿಳುವಳಿಕೆ ಎಲ್ಲರಿಗೂ ಇದ್ದರೆ ಒಳಿತು.

**6**. ಇದರ ಜೊತೆಗೆ ಆಧುನಿಕ ಯುಗದಲ್ಲಿ ರಾಜನೀತಿಯ ಕಾರ್ಯಕರ್ತರು ಮತ್ತು ಸಂಚಾರ ಕಾರ್ಯಕರ್ತರು ಬಲಗೊಳ್ಳುತ್ತಾರೆ. ಮೂಲತಃ ರಾಜನೀತಿಯ ಮುಖಂಡರು ಹಾಗೂ ಸಂಚಾರಗೃಹ ಈ ಎರಡರಲ್ಲಿ ಆರ್ಥಿಕ ಅನುಶಾಸನ ಸ್ಥಿರಗೊಳಿಸಿ ಆಚಾರ ಸಂಹಿತೆಯ ನಿರ್ಮಾಣ ಮಾಡಿ ಅದರೊಳಗೆ ಬಂಧಿಸಿಡಬೇಕಾಗುತ್ತದೆ.


ಈ ಮೇಲಿನ ವಿಚಾರಗಳನ್ನು ಅಕ್ಷರಶಃ ಪಾಲನೆ ಮಾಡುವುದರಿಂದ ಭ್ರಷ್ಟವಿರೋಧಿ ಸಂಸ್ಕೃತಿಯು ವಿಕಾಸಕ್ಕಾಗಿ ಹೊಸ ಆಕಾಶವೊಂದು ತಯಾರಾಗಬಹುದು. ಈ ರೀತಿ ಭ್ರಷ್ಟಾಚಾರದ ವಿರುದ್ಧವಾಗಿ ಸಮಾಜದಲ್ಲಿ ಭ್ರಷ್ಟ ವಿರೋಧಿ ಸಂಸ್ಕೃತಿಯ ಆರಂಭವಾಗಬಹುದು.

ನಾವು ತಿಳಿದುಕೊಳ್ಳಬೇಕಾಗಿರುವುದೇನೆಂದರೆ ಭ್ರಷ್ಟಾಚಾರ ವ್ಯಕ್ತಿಯ ಒಬ್ಬರ ನಿರ್ಣಯದಿಂದ ಅನ್ಯ ವ್ಯಕ್ತಿಗಳಲ್ಲಿ ತಲುಪುತ್ತದೆ. ಈ ರೀತಿ ಒಬ್ಬರಿಂದ ಇನ್ನೊಬ್ಬ ವ್ಯಕ್ತಿಯ ಮೂಲಕವೇ ಭ್ರಷ್ಟಾಚಾರದ ಸಮೂಹದ ನಿರ್ಮಾಣವಾಗುತ್ತದೆ. ಇದಕ್ಕಾಗಿ ಹೇಳುತ್ತಾರೆ ಸಮೂಹ ಭ್ರಷ್ಟಾಚಾರ ಮಾಡುವುದಿಲ್ಲ. ಆದರೆ ವರ್ತಮಾನ ಯುಗದಲ್ಲಿ ವ್ಯಕ್ತಿಯಿಂದ ಹೆಚ್ಚು ಸಮೂಹ ಭ್ರಷ್ಟಾಚಾರದಲ್ಲಿ ಸಿಲುಕುತ್ತದೆ. ಸಮೂಹ ಹಾಗೂ ಸಮಾಜವನ್ನು ಸರಿಯಾದ ಹಾದಿಯಲ್ಲಿ ನಡೆಸುವುದು ಸುಲಭವಾಗಿದೆ. ಆ ಹಾದಿಯಾಗಿಲ್ಲ. ಕಠಿಣ ಕಾನೂನಿನ ನಿರ್ಮಾಣ ಮತ್ತು ಕಾನೂನಿನ ಪಾಲನೆಯಾಗುವ ಅಥವಾ ಆಗದೆ ಇರುವಂತೆ ತಡೆಯುವುದರ ಜೊತೆಗೆ ಮುನ್ನಡೆಯುವುದು.

**1. ಕಾನೂನು ನಿರ್ಮಾಣದ ಅರ್ಥವೇ ನೀತಿಯ ನಿರ್ಮಾಣ**

**2. ಪಾಲನೆ ಮಾಡುವ ಅರ್ಥವೇ ಸಂಸ್ಕೃತಿಯ ವಿಕಾಸವಾಗಿದೆ.**

ಮೇಲಿನ ಚಿತ್ರ ನಂ. 1 ರ ಸ್ಥಿತಿಯನ್ನು ಪುನಃ ಚಿತ್ರ ನಂ. 2 ರಲ್ಲಿಯೂ ನೋಡಬಹುದು.




ಕಾನೂನಿನ ನಿರ್ಮಾಣ ಮತ್ತು ಅದನ್ನು ಅನುಸರಿಸಿಕೊಂಡು ಹೋಗುವ ಭಾಗದಲ್ಲಿ ಒಂದುಕಡೆ ಸಮಾಜದಲ್ಲಿ ಎಚ್ಚರಿಕೆ ಹಾಗೂ ಚೈತನ್ಯ (ಜಾಗೃತ ಸ್ಥಿತಿ) ದ ವಿಕಾಸವಾಗಿ ಕಾನೂನಿನ ಪಾಲನೆಯಾಗುತ್ತದೆ, ಅದೇ ಇನ್ನೊಂದೆಡೆ ಭ್ರಷ್ಟವಿರೋಧಿ ಸಂಸ್ಕೃತಿಯ ವಿಕಾಸವಾಗುತ್ತದೆ. ಇದಕ್ಕಾಗಿ ಭ್ರಷ್ಟವಿರೋಧಿ ಸಂಸ್ಕೃತಿಯ ವಿಕಾಸಕ್ಕಾಗಿ ಅವಶ್ಯಕ ನೀತಿ ನಿರ್ಮಾಣ ಮಾಡಬೇಕು. ಮತ್ತು ಅದನ್ನು ಕಾರ್ಯರೂಪಕ್ಕೆ ತರುವ ಸಂಸ್ಕೃತಿಯ ವಿಕಾಸವಾಗಬೇಕು.

## ನೀತಿಗತ ಸಂಸ್ಕೃತಿಯ ವಿಕಾಸ
## [Developement of Ethical Culture ]

ಭೂಗೋಳ, ಜಾತಿ ಮತ್ತು ಸಮಯದ ಮೂಲಕ ಸ್ವೀಕರಿಸುವ ಸಂಸ್ಕೃತಿಯೇ ವಿಕಸಿತ ಹಾಗೂ ವಿಕಾಸೋನ್ಮುಖ ದೇಶದ ಸಮುದಾಯ ಮತ್ತು ಸಮಾಜದಲ್ಲಿ ಪ್ರಾಚೀನ ಕಾಲದಿಂದ ವಿಭಿನ್ನ ರೀತಿ – ರಿವಾಜುಗಳಿಂದ ಸ್ಥಾಪಿತವಾಗುತ್ತದೆ. ಒಂದು ಸಮೂಹ ಅಥವಾ ಸಮುದಾಯದ ಸಂಸ್ಕೃತಿ ಇನ್ನೊಬ್ಬರೊಂದಿಗೆಯೂ ಭಾಗಿಯಾಗಿರುತ್ತಾರೆ. ಆದರೆ ಮಾನವ ಕಲ್ಯಾಣ ಮತ್ತು ಉನ್ನತಿಯ ದೃಷ್ಟಿಯಿಂದ ಅನೇಕ ನೀತಿ ಹಾಗೂ ಸಿದ್ಧಾಂತಗಳು ಒಂದನ್ನೊಂದು ಹೊಂದಿಕೊಂಡಿರುತ್ತದೆ. ಯಾವ ಸಮುದಾಯದ ಸಂಸ್ಕೃತಿ – ನೀತಿರೂಪದಲ್ಲಿ ವಿಕಸಿತವಾಗಿ ಸ್ಥಾಪಿತವಾಗುತ್ತದೆ. ಆ ಸಮುದಾಯ ಮತ್ತು ಸಮಾಜ ಉನ್ನತವೂ ಆಗಿರುತ್ತದೆ. ಕೆಲವೊಂದು ಸಮಾಜದಲ್ಲಿ ಬಹುಶಃ ವಿಕೃತ ಸಂಸ್ಕೃತಿ ಕಂಡು ಬರುತ್ತದೆ. ಇಂತಹ ಸಂಸ್ಕೃತಿಯನ್ನು ಸ್ವೀಕರಿಸುವ ಸಮುದಾಯ ಅಥವಾ ಸಮಾಜ ದುಃಖಮಯ ಜೀವನ ವ್ಯತೀತಗೊಳಿಸಲು ಬಾಧ್ಯವಾಗುತ್ತದೆ. ಇದಕ್ಕಾಗಿ ನೀತಿ ಗತ ಸಂಸ್ಕೃತಿಯ ವಿಕಾಸದಿಂದ ವ್ಯಕ್ತಿ, ಸಮುದಾಯ ಮತ್ತು ಸಮಾಜದ ಉನ್ನತಿಯಾಗುತ್ತದೆ.

ಒಂದು ವೇಳೆ ನೀತಿ ಒಳ್ಳೆಯ ಸಂಸ್ಕೃತಿಯನ್ನು ಸ್ಥಾಪಿಸಿದರೆ, ಆಗ ಸಂಸ್ಕೃತಿ ಸಭ್ಯತೆಯನ್ನು ಸ್ಥಾಪಿಸುತ್ತದೆ. ಸಭ್ಯ ಮತ್ತು ಸುಸಂಸ್ಕೃತ ವ್ಯಕ್ತಿ ಹಾಗೂ ಸಮಾಜ

ನೀತಿಗತ ಸಿದ್ಧಾಂತದ ಸ್ಥಾಪನೆ ಮಾಡುತ್ತದೆ. ನೀತಿಗತ ಸಿದ್ಧಾಂತ ಸದಾಚಾರಿ ಸಮಾಜದ ಸ್ಥಾಪನೆ ಮಾಡುವಲ್ಲಿ ಸಹಾಯ ಮಾಡುತ್ತದೆ. ನೀತಿಗತ ಸಂಸ್ಕೃತಿಯ ವಿಕಾಸ ಒಂದುವೇಳೆ ಆದರೆ, ಆಗ ವ್ಯಕ್ತಿ ಸಮುದಾಯ ಹಾಗೂ ಸಮುದಾಯದಲ್ಲಿ ಭ್ರಷ್ಟವಿರೋಧಿ ಸಂಸ್ಕೃತಿಯ ವಿಕಾಸವಾಗುತ್ತದೆ. ಇದರಿಂದಾಗಿ ಭ್ರಷ್ಟವಿರೋಧಿ ಶಾಸ್ತ್ರವು ಭ್ರಷ್ಟವಿರೋಧಿ ಸಂಸ್ಕೃತಿಯನ್ನು ವಿಕಾಸಗೊಳಿಸುವಲ್ಲಿ ಸಮರ್ಥವಾಗಬಹುದು.

***

# 26. ಮನಸ್ಥಿತಿಯ ಒಳಿತು ಮತ್ತು ಕೆಡುಕಿನ ಪಕ್ಷಗಳು (Good and bad aspects of the state of Mind)

ಮಾನವ ಮನಸ್ಸಿನ ವಿಶ್ಲೇಷಣೆ ಹಾಗೂ ವ್ಯಾಖ್ಯೆ ಮನೋವಿಜ್ಞಾನ ಶಾಸ್ತ್ರ ಮಾಡುತ್ತದೆ. ಮನೋ ವಿಜ್ಞಾನ ಶಾಸ್ತ್ರದ ಮೇರೆಯೊಳಗಿದ್ದು ಭ್ರಷ್ಟವಿರೋಧಿ ಶಾಸ್ತ್ರವು ಕೂಡ ಮಾನವ ಮನಸ್ಥಿತಿಯ ಒಳಿತು ಮತ್ತು ಕೆಡುಕಿನ ಪಕ್ಷಗಳ ವಿಶ್ಲೇಷಣೆಯನ್ನು ಮಾಡುತ್ತದೆ. ಅಧ್ಯಯನ ಅವಶ್ಯಕತೆಗನುಗುಣವಾಗಿ ಮನಃಸ್ಥಿತಿಯ ವಿಶ್ಲೇಷಣೆ ಮಾಡುವುದಕ್ಕಾಗಿ ಸೀಮಿತ ಪರಿಧಿಯೊಳಗಿದ್ದು, ಮಾನವ ಮನಸ್ಥಿತಿಯ ವಿಶ್ಲೇಷಣೆ ಮಾಡುತ್ತದೆ. ಮಾನವ ಪ್ರಕೃತಿ ಮತ್ತು ಮನೋಚಿಂತನೆಯ ವಿಚಾರ ಮಾಡಿದ ಮೇಲೆ ಮಾನವ ಮನಸ್ಥಿತಿಯನ್ನು ಐದು (5) ವರ್ಗಗಳಲ್ಲಿ ವಿಂಗಡಿಸಬಹುದಾಗಿದೆ. ಮಾನವ ಮನಸ್ಥಿತಿಯ ವಿಭಕ್ತ (ವಿಂಗಡಿಸಿದ) ಮಾಡಿರುವ ಐದು ವರ್ಗಗಳೆಂದರೆ – ಆಚಾರ, ವಿಚಾರ, ಕರ್ಮ, ಭಾವ ಮತ್ತು ಪ್ರವೃತ್ತಿ. ಈ ಐದು ತತ್ವಗಳು ಮನವೀಯ ಮನಸ್ಥಿತಿಯಲ್ಲಿ ಮೂಲ ತತ್ವಗಳಾಗಿವೆ. ಮತ್ತು ಇವುಗಳು ಸಕಾರಾತ್ಮಕ ಪ್ರಕೃತಿಯವು ಆಗಿವೆ. ಈ ತತ್ವಗಳು

ಕ) ಆಚಾರ

ಖ) ವಿಚಾರ

ಗ) ಕರ್ಮ

ಘ) ಭಾವ

ಙ) ಪ್ರವೃತ್ತಿ.

**ಕ) ಆಚಾರ [Conduct]**

ಆಚಾರದಿಂದ ಮಾನವೀಯ ಜೀವನ ನಿರ್ವಹಣೆಯ ಪದ್ಧತಿ ನಿಶ್ಚಿತವಾಗುತ್ತದೆ. ಆಚಾರ ಅರ್ಥಾತ್ ಆ ಮೂಲಕ ಮನುಷ್ಯನ ಒಳ್ಳೆಯ ಜೀವನ ನಿರ್ವಹಣೆ

ಮಾಡುವ ನಿಯಮ ಹಾಗೂ ಸಿದ್ಧಾಂತದ ಅನುಸಾರವಾಗಿ ಪಾಲನೆ ಮಾಡುವ ಆಚರಣೆ ಹಾಗೂ ವ್ಯವಹಾರವೆಂದು ತಿಳಿಯಬಹುದಾಗಿದೆ. ಆಚರಣೆಯಲ್ಲಿದ್ದು ಮತ್ತು ಆಚರಣೆಯ ಪಾಲನೆ ಮಾಡುವ ವ್ಯಕ್ತಿಯೇ ಸಮಾಜದಲ್ಲಿ ವಿಶೇಷ ಸ್ಥಾನವನ್ನು ಹೊಂದುತ್ತಾನೆ. ಅದರೊಂದಿಗೆ ಸಮಾಜದಲ್ಲಿ ಗೌರವವನ್ನು ಪಡೆಯುತ್ತಾನೆ. ಆಚಾರವನ್ನು ಮಾನವ ಆಚರಣೆಗಾಗಿ ಹಾಗೂ ವ್ಯವಹಾರದ ಪರಿಷ್ಕೃರ ರೂಪ ಮತ್ತು ನೈತಿಕ ರೂಪದಲ್ಲಿ ನೋಡುವ ಕಾರಣದಿಂದಾಗಿ ಮಾನವ ಜೀವನದಲ್ಲಿ ಇದರ ವಿಶೇಷ ಮಹತ್ವವಿರುತ್ತದೆ.

**ಖ) ವಿಚಾರ [Thought ]**

ಮಾನವ ಚಿಂತನೆಯ ವಿಕಸಿತ ರೂಪವೇ ವಿಚಾರ. ಮಾನವ ಮನಸ್ಸಿನಲ್ಲಿ ಯಾವುದೇ ಸಮಸ್ಯೆ, ವಿಷಯ ಅಥವಾ ಸ್ಥಿತಿಯ ಕುರಿತಾಗಿ ಆಳವಾಗಿ ಚಿಂತಿಸುವ ಕೆಲಸವನ್ನು ವಿಚಾರವೆನ್ನುತ್ತಾರೆ. ವಿಚಾರದಿಂದ ಸಂಕಲ್ಪ ತೆಗೆದುಕೊಳ್ಳುವ ವಿಚಾರವೇ ವ್ಯಕ್ತಿಯನ್ನು ಮತ್ತು ಅವನ ವ್ಯಕ್ತಿತ್ವದ ಪರಿವರ್ತನೆ ಮಾಡುತ್ತದೆ. ವಿಚಾರವೇ ವ್ಯಕ್ತಿ ಮತ್ತು ವ್ಯಕ್ತಿಯೇ ವಿಚಾರವಾಗಿದೆ.

**ಗ) ಕರ್ಮ [Action ]**

ಕರ್ಮದ ಅರ್ಥ ಕರ್ತವ್ಯ, ಅರ್ಥಾತ್, ಕೆಲಸ, ಮನುಷ್ಯ ಕೆಲಸ ಮಾಡುವುದಕ್ಕಾಗಿ, ಭೌತಿಕ ಶರೀರವನ್ನು ಪಡೆಯುತ್ತಾನೆ ಮತ್ತು ಆ ಶರೀರದ ಮಾಧ್ಯಮದಿಂದ ಕೆಲಸ ಮಾಡುತ್ತಾನೆ. ಮನುಷ್ಯ ಎರಡು ರೀತಿಯಲ್ಲಿ ಕೆಲಸ ಮಾಡುತ್ತಾನೆ. ಒಂದು ಶಾರೀರಿಕ ಮತ್ತು ಇನ್ನೊಂದು ಮಾನಸಿಕ, ಈ ಎರಡರ ಕೆಲಸಕ್ಕೂ ಸಮಾನವಾದ ಮಹತ್ವವಿರುತ್ತದೆ. ಕೆಲಸದಿಂದಲೇ ವ್ಯಕ್ತಿಯ ವ್ಯಕ್ತಿತ್ವದ ವಿಕಾಸವಾಗುತ್ತದೆ.


**ಘ) ಭಾವ [Intention ]** ಮಾನವನ ಮಸ್ತಿಷ್ಕದಲ್ಲಿ ಉಂಟಾಗುವ ಚಿಂತನೆ ಅಥವಾ ಕಲ್ಪನೆಯ ತರಂಗವೇ ಭಾವ. ಭಾವದಿಂದ ವಿಚಾರಗಳು ಹುಟ್ಟುತ್ತವೆ. ಮತ್ತು ವಿಚಾರಗಳು ಭಾವನೆಗಳಿಗೆ ಜನ್ಮ ನೀಡುತ್ತವೆ. ಮನುಷ್ಯನ ಗುಣ, ಶ್ರದ್ಧೆ ಆಸ್ಥೆ ಮತ್ತು ಸದ್ಭಾವನೆ ಕೂಡ ಭಾವನೆಗಳು ಪರಿಧಿಯೊಳಗೆ ಬರುತ್ತವೆ.

**ಙ) ಪ್ರವೃತ್ತಿ ) [Tendency ]**

ಪ್ರವೃತ್ತಿ ಮನುಷ್ಯನ ಸ್ವಾಭಾವಿಕ ಗುಣವಾಗಿದೆ. ಮನುಷ್ಯನ ಮನಸ್ಸಿನ ತೊಡಗುವಿಕೆ ಮತ್ತು ವ್ಯವಹಾರದಿಂದ ಜನಸುವ ( ಹುಟ್ಟುವ ) ಸ್ವಭಾವವೇ ಪ್ರವೃತ್ತಿಯಾಗಿರುತ್ತದೆ. ಮನುಷ್ಯ ಪ್ರವೃತ್ತಿ, ಮನುಷ್ಯನ ಆಚರಣೆ ಮತ್ತು ವಿಚಾರಗಳಿಗೆ

ಪ್ರೋತ್ಸಾಹನೆ ನೀಡುತ್ತದೆ. ಮನುಷ್ಯನ ಆಚಾರ ಮತ್ತು ವಿಚಾರ ಮನುಷ್ಯನ ಪ್ರವೃತ್ತಿಯನ್ನು ನಿಶ್ಚಿತಗೊಳಿಸುತ್ತದೆ.

ಮೇಲಿನ ಐದು ತತ್ವಗಳಿಂದ ವ್ಯಕ್ತಿಯ ವಿಕಾಸವಾಗುವ ವ್ಯಕ್ತಿತ್ವ ಪರಿವರ್ತನೆಯ ಕಾರ್ಯ ಜಾರಿಯಲ್ಲಿರುತ್ತದೆ.




ವ್ಯಕ್ತಿಯ ಆಚಾರ ಮತ್ತು ವಿಚಾರಗಳನ್ನು ಕರ್ಮ ನಿರ್ಧರಿಸುತ್ತದೆ. ಜೊತೆಗೆ ಭಾವ ಮತ್ತು ಪ್ರವೃತ್ತಿ ಕೂಡ ಕರ್ಮವನ್ನು ನಿರ್ಧರಿಸುತ್ತದೆ. ಕರ್ಮ ಸರಿಯಾಗಿದ್ದಲ್ಲಿ ವ್ಯಕ್ತಿತ್ವವು ಕೂಡ ಅದೇ ಲೆಕ್ಕದಲ್ಲಿ ( ಮಾನ್ಯತೆ) ಸ್ಥಾಪಿತವಾಗುತ್ತದೆ. ಈ ತಥ್ಯವನ್ನು ಮೇಲಿನ ಚಿತ್ರದಲ್ಲಿ ಮನಃ ಸ್ಥಿತಿಯ ಸಕಾರಾತ್ಮಕ ಮತ್ತು ನಕಾರಾತ್ಮಕ ಪಕ್ಷ ಮೇಲೆ ಉಲ್ಲೇಖಿಸಿರುವ

ಕ) ಆಚಾರ ಖ)ವಿಚಾರ ಗ) ಕರ್ಮ ಘ) ಭಾವ ಮತ್ತು ಙ) ಪ್ರವೃತ್ತಿ ಈ ತತ್ವಗಳು ತಮ್ಮೊಳಗೆ ಸಕಾರಾತ್ಮಕವಾಗಿವೆ. ಇವುಗಳು ಸಕಾರಾತ್ಮಕವಾಗಿವೆ. ಹಾಗೂ ಸಾಧನವಾಗಿವೆ. ಆದರೆ ಸಾಧ್ಯವಲ್ಲ. ಈ ಮಾನವೀಯ ಗುಣಗಳನ್ನು ಒಳ್ಳೆಯಮತ್ತು ಕೆಟ್ಟ ಶ್ರೇಣಿಗಳಲ್ಲಿಟ್ಟು ನೋಡಬಹುದು.

| | ಮನಸ್ಥಿತಿ | ಒಳ್ಳೆಯ (ಸರಿ )ಪಕ್ಷ | ಕೆಟ್ಟ ಪಕ್ಷ |
|---|---|---|---|
| ಕ) | ಆಚಾರ | ಸದಾಚಾರ | ಕೆಟ್ಟ ಆಚಾರ (ನಡವಳಿಕೆ ) |
| ಖ) | ವಿಚಾರ | ಸದ್ ವಿಚಾರ | ಕುವಿಚಾರ |
| ಗ) | ಕರ್ಮ | ಸತ್ಕರ್ಮ | ಕುಕರ್ಮ ( ಕೆಟ್ಟ ಕೆಲಸ |
| ಘ) | ಭಾವ | ಸದ್ಭಾವ | ಕೆಟ್ಟ ಭಾವ |
| ಙ) | ಪ್ರವೃತ್ತಿ | ಸದಪ್ರವೃತ್ತಿ | ಕುಪ್ರವೃತ್ತಿ ( ಕೆಟ್ಟ ಪ್ರವೃತ್ತಿ) |

ಮಾನವೀಯ ಒಳ್ಳೆಯ ಗುಣ ಹಾಗೂ ಕೆಟ್ಟ ಗುಣಗಳನ್ನು ಮಾವವೀಯ ತತ್ವ, ಆಚಾರ, ವಿಚಾರ, ಕರ್ಮ, ಭಾವ ಮತ್ತು ಪ್ರವೃತ್ತಿಯನ್ನು ನಾವು ನೋಡಿದೆವು. ಒಳಿತು ಹಾಗೂ ಕೆಡುಕು ಪಕ್ಷಗಳಲ್ಲಿ ವಿಭಜಿಸಿ, ಐದು ತತ್ವಗಳನ್ನು ಹತ್ತು ಖಂಡಗಳಲ್ಲಿ ವಿಭಜನೆ ಮಾಡಬಹುದಾಗಿದೆ. ಗಣಿತದ ದೃಷ್ಟಿಯಿಂದ ನಮ್ಮ ಬಳಿ ಹತ್ತು (10) ಅಂಕಗಳಿವೆ. ಈ ಹತ್ತು ಅಂಕಗಳೂ ಗಣಿತ ಶಾಸ್ತ್ರದ ಮೂಲ ಅಂಗವಾಗಿವೆ.

ಅರ್ಥಾತ್, 1,2,3,4,5,6,7,8,9,0 ಅಂಕಗಳ ಪ್ರಯೋಗ ಮಾಡಿ ಒಳಿತು ಮತ್ತು ಕೆಡುಕು ಪಕ್ಷಗಳ ಮನಸ್ಥಿತಿಯ ವಿಭಜನೆ ಮಾಡಿ ನೋಡೋಣ.

1. ಸದಾಚಾರ
2. ಕೆಟ್ಟ ಆಹಾರ
3. ಸದ್ವಿಚಾರ,
4. ಕುವಿಚಾರ.
5. ಸತ್ಕರ್ಮ
6. ಕುಕರ್ಮ,
7. ಸದ್ಬಾವ
8. ಕುಭಾವ.
9. ಸತ್ಪ್ರವೃತ್ತಿ.
10. ದುಷ್ಪ್ರವೃತ್ತಿ.

25. ಗುಣ ಪಕ್ಷ, 20. ಅವಗುಣ ಪಕ್ಷ

ಮಾನವೀಯ ಗುಣ ಪಕ್ಷದಲ್ಲಿ ಒಟ್ಟು 25 ಅಂಕಗಳಾದರೆ ಮತ್ತು ಅವಗುಣ ಪಕ್ಷದಲ್ಲಿ ಒಟ್ಟು 20 ಅಂಕಗಳಿವೆ. 25 ರಿಂದ 20 ಕಳೆದಾಗ ಶೇಷ 05 ಅಂಕಗಳು ಉಳಿಯುತ್ತವೆ. ಅಂಕ 05 ರಲ್ಲಿ ಸತ್ಕರ್ಮವಿದೆ. ಅದೇ ರೀತಿ 20+25 =45. 45/5=9 . 09 ಸತ್ ಪ್ರವೃತ್ತಿಯನ್ನು ಹೇಳುತ್ತವೆ. ಅಂಕ 05 ಸತ್ಕರ್ಮವನ್ನು ಮಾಡುವ ವಾತಾವರಣ ನಿರ್ಮಿಸುತ್ತದೆ. ಈ ತಥ್ಯವು ಪ್ರಮಾಣಿತವಾಗುತ್ತದೆ. ಮಾನವ ಮನಃಸ್ಥಿತಿಯ ಕೊರತೆ, ದೌರ್ಬಲ್ಯಗಳ ವಿಷಯದಲ್ಲಿ ಈ ಮೇಲೆ

ಸಂಕ್ಷಿಪ್ತ ರೂಪದಲ್ಲಿ ನೋಡಿದ್ದೇವೆ. ಇವುಗಳನ್ನು ಸಕಾರಾತ್ಮಕ ಹಾದಿಯಲ್ಲಿ ಕೊಂಡೊಯ್ಯುವ ತಥ್ಯವನ್ನು ಕೂಡ ನಾವು ಪ್ರಮಾಣೀಕರಿಸಿದ್ದೇವೆ. ಮಾನವೀಯ ಮನಸ್ಥಿತಿ ಸ್ವಾಭಾವಿಕವಾಗಿದೆ. ಇದನ್ನು ಒಳ್ಳೆಯ ಪಕ್ಷದಲ್ಲಿ ಅಳವಡಿಸಿ, ವ್ಯಕ್ತಿ, ಸಮುದಾಯ ಮತ್ತು ಸಮಾಜವು ವಿವೇಕಯುಕ್ತ ನಿರ್ಣಯವನ್ನು ತೆಗೆದುಕೊಳ್ಳುವ ಪರಿಸ್ಥಿತಿಯ ನಿರ್ಮಾಣ ಭ್ರಷ್ಟ ವಿರೋಧಿ ಶಾಸ್ತ್ರ ಮಾಡಬಹುದು.

# 27. ಉಚಿತ ಹಾಗೂ ಅನುಚಿತ ಕಾರ್ಯದ ಪರಿಚಯ
## [Identification of Proper and Improper activities]

ಸಮಾಜದಲ್ಲಿ ಉಚಿತ ಹಾಗೂ ಅನುಚಿತ ಕಾರ್ಯಗಳು ನಡೆಯುತ್ತಲೇ ಇರುತ್ತವೆ. ಯಾರು ಎಂತಹ ಕಾರ್ಯದ ಹೊಣೆ ಹೊರುತ್ತಾರೋ ಒಂದು ವೇಳೆ ಅವರು ತಮ್ಮ ಕಾರ್ಯವನ್ನು ಕ್ರಮಬದ್ಧವಾಗಿ ಮಾಡಿದರೆ, ಸರ್ವ ಪಕ್ಷೀಯ ವಿಕಾಸ ಸಂಭವವಿದೆ. ಹೊಣೆ ಹೊತ್ತಿರುವ ವ್ಯಕ್ತಿ, ಸಮುದಾಯ ಅಥವಾ ಸಂಸ್ಥೆ ಅನುಚಿತ ಕಾರ್ಯ ಮಾಡುತ್ತಾರಾದರೆ ಆಗ ಸಮಾಜ ದುರ್ಬಲಗೊಳ್ಳುತ್ತದೆ. ಮತ್ತು ವಿಕಾಸ ಕಾರ್ಯ ಸ್ಥಗಿತಗೊಳ್ಳುತ್ತದೆ. ಇದಕ್ಕಾಗಿ ಉಚಿತ ಮತ್ತು ಅನುಚಿತ ಕಾರ್ಯಗಳನ್ನು ಗುರುತಿಸುವಂತಹ ವಾತಾವರಣ ನಿರ್ಮಾಣ ಮಾಡುವ ಅವಶ್ಯಕತೆ ಇದೆ.

ಯಾವುದೇ ಕಾರ್ಯವನ್ನು ಉಚಿತ ರೀತಿಯಲ್ಲಿ ಮಾಡಬೇಕು. ಉಚಿತ ಕಾರ್ಯವನ್ನು ಮಾಡುವವನು ಸಫಲತೆಯನ್ನು ಪಡೆಯುತ್ತಾನೆ. ಸಫಲ ಹಾಗೂ ವಿಕಸಿತ ನಿರ್ಮಾಣ ಮಾಡುವುದಕ್ಕಾಗಿ ಉಚಿತ ಕಾರ್ಯಗಳನ್ನು ಮಾಡುವುದಕ್ಕಾಗಿ ವಾತಾವರಣ ನಿರ್ಮಾಣ ಮಾಡಬೇಕಾಗಿದೆ. ಯಾವುದೇ ಕಾರ್ಯಕ್ಕಾಗಿ ಜವಾಬ್ದಾರಿ ಇರುವ ವ್ಯಕ್ತಿ ಸಮುದಾಯ ಅಥವಾ ಸಂಸ್ಥೆಗಳು ಉಚಿತ ಕಾರ್ಯವನ್ನೇ ಮಾಡಬೇಕು. ಇಂತಹ ಉಚಿತ ಅಥವಾ ಅನುಚಿತ ಎರಡೂ ಪ್ರಕಾರದ ಕಾರ್ಯ ವಿಭಿನ್ನ ಜವಾಬ್ದಾರಿ ಹೊಂದಿದ ವ್ಯಕ್ತಿ ಸಮುದಾಯ ಹಾಗೂ ಸಂಸ್ಥೆಗಳಿಂದಲೇ ಆಗುತ್ತವೆ. ಸಮಾಜದಲ್ಲಿ ಇಂತಹ ಜವಾಬ್ದಾರ ಕ್ಷೇತ್ರಗಳು ಬಹಳಷ್ಟು ಆಗಿದ್ದರೂ ಕೂಡ ಮಹತ್ವ ಪೂರ್ಣ ಸಮೂಹ ಅಥವಾ ಕ್ಷೇತ್ರಗಳ ಕುರಿತು ವಿಚಾರ ಮಾಡೋಣ.

1. ಪ್ರಶಾಸನಿಕ ಹಾಗೂ ನ್ಯಾಯಿಕ ಅಧಿಕಾರ ಪ್ರಾಪ್ತ ವ್ಯಕ್ತಿ.
2. ರಾಜ್ಯ ವ್ಯವಸ್ಥೆಯಲ್ಲಿ ಸುರಕ್ಷೆಯ ಜವಾಬ್ದಾರಿ ಪಡೆದ ವ್ಯಕ್ತಿ.

3. ಸ್ವಾಸ್ಥ್ಯ ಹಾಗೂ ಶಿಕ್ಷಣ ಸೇವೆಯಲ್ಲಿ ಕ್ರಿಯಾಶೀಲ ವ್ಯಕ್ತಿ.

4. ಕ್ರೀಡೆ (ಆಟೋಟ) ಹಾಗೂ ಮನೋರಂಜನೆ ಕ್ಷೇತ್ರದಲ್ಲಿ ಸಕ್ರಿಯ ವ್ಯಕ್ತಿ.

5. ಜನಪ್ರತಿನಿಧಿ ಹಾಗೂ ಜನ ಅಧಿಕಾರ ಪ್ರಾಪ್ತ ವ್ಯಕ್ತಿ.

6. ಉದ್ಯೋಗ ವ್ಯಾಪಾರ ಹಾಗೂ ವ್ಯವಸಾಯ ಕ್ಷೇತ್ರದ ವ್ಯಕ್ತಿ

7. ಸಾಮಾಜಿಕ ಸೇವಾಕಾರ್ಯಗಳಲ್ಲಿ ತೊಡಗಿರುವ ವ್ಯಕ್ತಿ.

**1. ಪ್ರಶಾಸನಿಕ ಹಾಗೂ ನ್ಯಾಯಿಕ ಅಧಿಕಾರ ಪ್ರಾಪ್ತ ವ್ಯಕ್ತಿ [Service delivery in public administration**

**and Judiciary ]**

ಪ್ರಶಾಸನಿಕ ಹಾಗೂ ನ್ಯಾಯಿಕ ಅಧಿಕಾರ ಪಡೆದ ವ್ಯಕ್ತಿ ಅಥವಾ ಸಂಸ್ಥೆಯು ಕಾನೂನಿಗನುಸಾರವಾಗಿ ಕೆಲಸ ಮಾಡುವುದು ಮತ್ತು ಮಾಡಿಸುವುದು ಆಗಬೇಕಿದೆ. ಕಾನೂನಿನ ತಪ್ಪು ವ್ಯಾಖ್ಯಾನ ಮಾಡಿ ಅಥವಾ ಕಾನೂನಿನ ಅವಹೇಳನ ಮಾಡುವಂತಹ ಕಾರ್ಯವನ್ನು ಕೂಡ ಮಾಡಬಾರದು. ಇಷ್ಟಲ್ಲದೆ ಕಾನೂನಿನ ಪ್ರಯೋಗ ಮಾಡುವ ಅಧಿಕಾರಿಯು ತನ್ನ ವಿವೇಕದ ಪ್ರಯೋಗವನ್ನು ಮಾಡಬೇಕು. ವ್ಯಕ್ತಿ ಅಥವಾ ಸಂಸ್ಥೆಯಿಂದ ಪಡೆದುಕೊಂಡ ಅಧಿಕಾರವನ್ನನುಸರಿಸಿ ಕಾನೂನಿನ ತಪ್ಪು ವ್ಯಾಖ್ಯಾನ ಮಾಡಿ, ಮಾಡಿದ ಕಾರ್ಯ ಹಾಗೂ ಅಧಿಕಾರದ ದುರುಪಯೋಗ ಮಾಡುವುದು ಉಚಿತವಲ್ಲ.

**2. ರಾಜ್ಯ ವ್ಯವಸ್ಥೆಯಲ್ಲಿ ಸುರಕ್ಷೆಯ ಜವಾಬ್ದಾರಿ ಪಡೆದ ವ್ಯಕ್ತಿ. [Responsible Persons in Security of the State ]**

ರಾಜ್ಯ (ರಾಷ್ಟ್ರ) ವ್ಯವಸ್ಥೆಯಲ್ಲಿ ಸುರಕ್ಷೆಯ ಜವಾಬ್ದಾರಿ ಹೊಂದಿರುವ ವ್ಯಕ್ತಿ ಅಥವಾ ಸಂಸ್ಥೆಯು ತನ್ನ ಜವಾಬ್ದಾರಿಯನ್ನು ಪರಿಪೂರ್ಣವಾಗಿ ನಿರ್ವಹಿಸಬೇಕು. ದೇಶದ ರಕ್ಷಣೆಯ ಹೊಣೆ ಹೊತ್ತ ಸೈನಿಕರಿರಲಿ ಅಥವಾ ಆಂತರಿಕ ಸುರಕ್ಷೆಯ ಹೊಣೆಹೊತ್ತ ಕಾವಲುಗಾರರಿರಲಿ ಅಥವಾ ಇನ್ಯಾವುದೋ ಸುರಕ್ಷಾ ಸಮೂಹದೊಂದಿಗೆ ಸಂಬಂಧಿತ ವ್ಯಕ್ತಿ ಅಥವಾ ಸಂಸ್ಥೆ ಎಲ್ಲರೂ ತಮ್ಮ ತಮ್ಮ ಜವಾಬ್ದಾರಿಯನ್ನು ಪರಿಪೂರ್ಣವಾಗಿ ಪಾಲನೆ ಮಾಡಿ, ರಾಜ್ಯ ವ್ಯವಸ್ಥೆಯ ಮೂಲಕ ನಿರ್ದಿಷ್ಟಗೊಳಿಸಿರುವ ಕಾರ್ಯವನ್ನು ಪ್ರಾಮಾಣಿಕವಾಗಿ ಮಾಡಬೇಕಾಗುತ್ತದೆ. ರಾಜ್ಯ ವ್ಯವಸ್ಥೆಯ ಮೂಲಕ ನೀಡಲಾದ ಹೊಣೆಗಾರಿಕೆಯನ್ನು ಪೂರ್ಣಗೊಳಿಸದಿರುವ ವ್ಯಕ್ತಿ ಅಥವಾ ಸಂಸ್ಥೆಯನ್ನು ರಾಷ್ಟ್ರ ವಿರೋಧಿ ಅಪರಾಧಿ ಎಂದು ಪರಿಗಣಿಸಲಾಗುತ್ತದೆ.

**3. ಸ್ವಾಸ್ಥ್ಯ ಹಾಗೂ ಶಿಕ್ಷಣ ಸೇವೆಯಲ್ಲಿ ಕ್ರಿಯಾಶೀಲ ವ್ಯಕ್ತಿ. [ Person active in the health and Educaton]**

ಸ್ವಾಸ್ಥ್ಯ ಹಾಗೂ ಶಿಕ್ಷಣದ ಸೇವೆಯಲ್ಲಿ ಕ್ರಿಯಾಶೀಲ ವ್ಯಕ್ತಿ ಅಥವಾ ಸಂಸ್ಥೆಯು ಸೇವಾಭಾವದಿಂದ ಕೆಲಸ ಮಾಡಬೇಕು. ಸ್ವಾಸ್ಥ್ಯ ಮತ್ತು ಶಿಕ್ಷಣ ಕ್ಷೇತ್ರ ಲಾಭದಾಯಕ ಕ್ಷೇತ್ರವಲ್ಲ, ಆದರೆ, ಸೇವಾಕ್ಷೇತ್ರವಾಗಿದೆ. ಆದ್ದರಿಂದ ಈ ಕ್ಷೇತ್ರದಲ್ಲಿ ಸೇವಾಭಾವದಿಂದಲೇ ಕೆಲಸ ಮಾಡಬೇಕು. ಬಹುಶಃ ವಿಶ್ವದ ಎಲ್ಲಾ ದೇಶಗಳಲ್ಲಿ ಈ ಕ್ಷೇತ್ರಗಳಲ್ಲಿ ವ್ಯಾಪಾರೀಕರಣವಾಗಿದೆ. ಇದು ವಾಸ್ತವದಲ್ಲಿ ಸರಿಯಲ್ಲ. ಸೇವಾಕಾರ್ಯ ಯಾವಾಗಲೂ ನಿಃಶುಲ್ಕ ( ಉಚಿತ ) ವಾಗಿರಬೇಕು.

**4. ಕ್ರೀಡೆ ( ಆಟೋಟ ) ಹಾಗೂ ಮನೋರಂಜನೆ ಕ್ಷೇತ್ರದಲ್ಲಿ ಸಕ್ರಿಯ ವ್ಯಕ್ತಿ. [Active in Games and Recreation]**

ಕ್ರೀಡೆ ಹಾಗೂ ಮನೋರಂಜನೆ ಕ್ಷೇತ್ರದಲ್ಲಿ ಸಕ್ರಿಯವಾಗಿರುವ ವ್ಯಕ್ತಿ ಅಥವಾ ಸಂಸ್ಥೆ, ದೇಶ ಮತ್ತು ದೇಶದ ಜನತೆಯೊಂದಿಗೆ ಸಂಪೂರ್ಣವಾಗಿ ಪ್ರಾಮಾಣಿಕತೆಯಿಂದಿರಬೇಕು. ಕ್ರೀಡಾ ಜಗತ್ತು ರಾಷ್ಟ್ರೀಯ ಅಸ್ಮಿತೆಯನ್ನು ಹೊಂದಿಕೊಂಡಿರುತ್ತದೆ. ಆದ್ದರಿಂದ ಆಟಗಾರ ಬೇರೆ ಬೇರೆ ದೇಶಗಳವರ ಆಮಿಷಗಳಿಗೆ ಮಾರಾಟದ ಸರಕಾಗಿರಬಾರದು. ಬಹಳಷ್ಟು ಆಟಗಾರರು ವ್ಯಕ್ತಿ ಅಥವಾ ಸಂಸ್ಥಾಗತರೂಪದಲ್ಲಿ ವಿಪಕ್ಷದವರೊಂದಿಗೆ ಸೇರಿ ಆಟವನ್ನು ಸೋಲುತ್ತಾರೆ. ಇದು ಅನುಚಿತ ಕಾರ್ಯ. ಇದೇ ರೀತಿ ಮನೋರಂಜನೆಯ ಹೆಸರಿನಲ್ಲಿ ಅಕ್ರಮ ಚಟುವಟಿಕೆ ನಡೆಸುವ ತಾಣ ಹಾಗೂ ಮನೋರಂಜನೆಯ ಹೆಸರಿನಲ್ಲಿ ಅಕ್ರಮ ಚಟುವಟಿಕೆ ನಡೆಸುವ ತಾಣ ಹಾಗೂ ವೇಶ್ಯಾವಾಟಿಕೆಯಂತಹ ಸಾಮಾಜಿಕ ಕ್ರಿಯಾಕಲಾಪಗಳು ಮತ್ತು ಕ್ಲಬ್ –ಪಬ್ ಮುಂತಾದವುಗಳನ್ನು ತೆರೆಯಲು ನಡೆಸಲು ಬಿಡಬಾರದು.

**5. ಜನಪ್ರತಿನಿಧಿ ಹಾಗೂ ಜನಾಧಿಕಾರ ಪ್ರಾಪ್ತ ವ್ಯಕ್ತಿ [Peoples representation and exercises ]**

ಜನಪ್ರತಿನಿಧಿ ಹಾಗೂ ಜನಾಧಿಕಾರ ಪ್ರಾಪ್ತ ವ್ಯಕ್ತಿ ಅಥವಾ ಸಂಸ್ಥೆ ಯಾವಾಗಲೂ ಜನತೆ ಹಾಗೂ ದೇಶಕ್ಕೆ ಉತ್ತರ ನೀಡುವ ಸ್ಥಿತಿಯಲ್ಲಿರಬೇಕಾಗುತ್ತದೆ. ಜನಪ್ರತಿನಿಧಿ ಎಂದರೆ ( ಅರ್ಥಾತ್) ಸ್ಥಳೀಯ ಸಮುದಾಯದಿಂದ ಹಿಡಿದು, ರಾಷ್ಟ್ರೀಯ ಸಮುದಾಯದ ಉಚ್ಚ ಮಟ್ಟದವರೆಗಿನ ವ್ಯಕ್ತಿಯನ್ನು ತಿಳಿದಿರಬೇಕು. ಅಲ್ಲದೆ ಜನರ ಮೂಲಕ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಚುನಾವಣಾ ಪ್ರಣಾಲಿಯ ಮೂಲಕ ಆಚರಿಸಲ್ಪಟ್ಟಿರುವ ವ್ಯವಸ್ಥಾಪನೆಯಲ್ಲಿರುವ ಎಲ್ಲಾ ಪ್ರತಿನಿಧಿಗಳು ಕೂಡ

ಇದೇ ವರ್ಗದ ಭಾಗವಾಗಿರುತ್ತಾರೆ. ಇವರ ಮೂಲಕ ಯಾವ ಬೇಜವಾಬ್ದಾರಿಯುತ ಕಾರ್ಯಗಳು ನಡೆಯುತ್ತವೋ ಅದನ್ನು ಅಧಿಕಾರದ ದುರುಪಯೋಗವೆನ್ನುತ್ತಾರೆ. ಇಷ್ಟೇ ಅಲ್ಲ, ಹೆಚ್ಚಿನ ವಿಕಾಸೋನ್ಮುಖ ದೇಶಗಳಲ್ಲಿ ಅಧಿಕಾರ ಪ್ರಾಪ್ತಿಗಾಗಿ ವ್ಯವಸ್ಥೆಯಲ್ಲಿರುವ (ವ್ಯವಸ್ಥಾಪಕರು) ಅಥವಾ ಸಂಸತ್ತಿನ ಸದಸ್ಯರ ಬೆಲೆ (ಮೌಲ್ಯ) ನಿರ್ಧರಿಸಿ, ಜನಪ್ರತಿನಿಧಿಗಳ ಕ್ರಯ ವಿಕ್ರಯಗಳು ನಡೆಯುತ್ತವೆ. ಈ ಕಾರ್ಯ ಸಂಪೂರ್ಣ ಅನುಚಿತವಾಗಿದೆ. ಇಂತಹ ಕಾರ್ಯಗಳನ್ನು ತಡೆಯುವ ವಾತಾವರಣ ನಿರ್ಮಾಣ ಮಾಡಬೇಕಾಗಿದೆ.

**6. ಸಾಮಾಜಿಕ ಸೇವಾಕಾರ್ಯಗಳಲ್ಲಿ ತೊಡಗಿರುವ ವ್ಯಕ್ತಿ. [Industrialist businessmen and Professionals ]**

ಈ ಕ್ಷೇತ್ರದಲ್ಲಿ ತೊಡಗಿರುವ (ನಿರತ) ವ್ಯಕ್ತಿ ಹಾಗೂ ಸಂಸ್ಥೆಗಳು ತಮ್ಮ ವ್ಯವಸಾಯದ ಕುರಿತಾಗಿ ಪ್ರಾಮಾಣಿಕವಾಗಿ ವೃತ್ತಿಕಾರ್ಯವನ್ನು ಮಾಡಬೇಕು. ವ್ಯವಸಾಯದಲ್ಲಿ ಅವ್ಯವಸ್ಥೆ ಉಂಟಾಗಬಾರದು. ಆದರೆ ವಿಕಾಸೋನ್ಮುಖ ದೇಶಗಳ ಉದ್ಯೋಗಿಗಳು,ವ್ಯಾಪಾರಿಗಳು ಹಾಗೂ ವ್ಯವಸಾಯಗಳಲ್ಲಿರುವವರು ಹೆಚ್ಚಿನ ಲಾಭದಾಯಕ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಮತ್ತು ತಮ್ಮ ವ್ಯವಸಾಯಗಳ ಕುರಿತು ಪ್ರಾಮಾಣಿಕರಾಗಿರುವುದಿಲ್ಲ. ಕಾನೂನು ಬಾಹಿರ ವ್ಯವಸಾಯ ಕಾರ್ಯಗಳು ಕೂಡ ಅನುಚಿತ ಕಾರ್ಯಗಳೆ. ಇದಕ್ಕಾಗಿ ಇಂತಹ ಕಾರ್ಯಗಳನ್ನು ತಡೆಗಟ್ಟುವ ವಾತಾವರಣದ ನಿರ್ಮಾಣವಾಗಬೇಕಾಗಿದೆ.

**7. ಸಾಮಾಜಿಕ ಸೇವಾಕಾರ್ಯದಲ್ಲಿ ನಿರತ ವ್ಯಕ್ತಿ [Persons associated with Social Service )**

ಸಾವಾಜಿಕ ಸೇವಾಕಾರ್ಯದಲ್ಲಿ ನಿರತ ವ್ಯಕ್ತಿ ಅಥವಾ ಸಂಸ್ಥೆ ಸೇವಾಕಾರ್ಯದಲ್ಲಿ ನಿಸ್ವಾರ್ಥವಾಗಿ ಸೇವಾನಿರತರಾಗಿರಬೇಕಾಗುತ್ತದೆ. ಬೇರೆ ದೇಶಗಳ ಆಮಿಷಗಳಿಗೆ ವಶವಾಗಿ ಸಮಾಜ ಸೇವೆಯ ಹೆಸರಿನಲ್ಲಿ ವ್ಯವಸಾಯ (ಕಾರ್ಯ) ಮಾಡುವ ವ್ಯಕ್ತಿ ಅಥವಾ ಸಂಸ್ಥೆಗಳು ಸೇವಾಕಾರ್ಯದಲ್ಲಿ, ವ್ಯಾಪಾರೀಕರಣ ಮಾಡುತ್ತಾರೆ. ಇಂತಹ ವ್ಯಾವಸಾಯಿಕ ಕಾರ್ಯಗಳಿಂದ ಸಮಾಜಕ್ಕೆ ಒಳ್ಳೆಯದಾಗುವುದಿಲ್ಲ. ಇದರೊಂದಿಗೆ ವಿಕಾಸೋನ್ಮುಖ ದೇಶಗಳಲ್ಲಿ ಸರಕಾರೇತರ ಸಂಸ್ಥೆಗಳ ಹೆಸರಿನಲ್ಲಿ ಚಾಲನೆಯಲ್ಲಿರುವ ಇಂತಹ ಬಹಳಷ್ಟು ಸಾಮಾಜಿಕ ಸಂಸ್ಥೆಗಳು ಸೇವೆಗಿಂತ ಹೆಚ್ಚಾಗಿ ಲಾಭವನ್ನು ನೋಡುವ ಹಾಗೂ ಹಣ ಸಂಗ್ರಹ ಮಾಡುವ ಸಂಸ್ಥೆಗಳಾಗಿ ಕ್ರಿಯಾಶೀಲವಾಗುತ್ತವೆ. ಇದು ಅತ್ಯಂತ

ಅನುಚಿತ ಕಾರ್ಯವಾಗಿದೆ. ಇಂತಹ ಖಜಾನೆಯ ಉದ್ದೇಶ ಹೊಂದಿರುವ (ಖಜಾನೆ = ಸಂಪತ್ತು ) ಸಾಮಾಜಿಕ ಸಂಸ್ಥೆಗಳ ಮೇಲೆ ಪೂರ್ಣ ನಿಯಂತ್ರಣ ಪಡೆಯಬೇಕು.

ಉಚಿತ ಅಥವಾ ಅನುಚಿತ ಕಾರ್ಯದಲ್ಲಿ ಪ್ರಚಲಿತವಿರುವ ಕ್ಷೇತ್ರಗಳ ಕುರಿತು ಮೇಲಿನ ಭಾಗದಲ್ಲಿ ಸಂಕ್ಷಿಪ್ತ ಉಲ್ಲೇಖ ಮಾಡಲಾಗಿದೆ. ಆದರೆ ಇದಕ್ಕಿಂತಲೂ ಹೆಚ್ಚು ಇನ್ನಷ್ಟು ಕ್ಷೇತ್ರಗಳಿವೆ. ಅಲ್ಲೆಲ್ಲಾ ಉಚಿತ –ಅನುಚಿತ ಕಾರ್ಯಗಳು ನಡೆಯುತ್ತಿರುವತ್ತವೆ. ಈ ಎಲ್ಲಾ ಕ್ಷೇತ್ರಗಳನ್ನು ಅಧ್ಯಯನ ವ್ಯಾಪ್ತಿಗೆ ತರಬೇಕಾಗಿದೆ.

ಉಚಿತ – ಅನುಚಿತ ಕಾರ್ಯಗಳು ಸ್ಪಷ್ಟವಾಗಿ ಕಾಣುವುದಿಲ್ಲ. ಆದರೆ ಈ ಕಾರ್ಯಗಳ ಫಲಿತಾಂಶವೇ ಕಾರ್ಯಗಳನ್ನು ಉಚಿತ ಅಥವಾ ಅನುಚಿತತೆಯನ್ನು ನಿರ್ಧರಿಸುತ್ತದೆ. ಇಂತಹ ಎಲ್ಲಾ ಕ್ಷೇತ್ರಗಳ ಕಾರ್ಯಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡುವುದಕ್ಕಾಗಿ ರಾಜ್ಯದ ಆಡಳಿತ ಯಂತ್ರವನ್ನು ಸಿದ್ಧಗೊಳಿಸಬೇಕು. ಇಂತಹ ಆಡಳಿತ ಯಂತ್ರಗಳನ್ನು ವಿಭಿನ್ನ ಕ್ಷೇತ್ರಗಳಲ್ಲಿ ಆಗುತ್ತಿರುವ ಕಾರ್ಯಗಳ ಪರಿವೀಕ್ಷಣೆ ಮನ್ನಣೆ ಹಾಗೂ ಮೌಲ್ಯಾಂಕನ ಮಾಡಬೇಕು. ಆಗಲೇ ಅನುಚಿತ ಕಾರ್ಯಗಳನ್ನು ಮಾಡುವ ಪ್ರವೃತ್ತಿ ಉತ್ಸಾಹವನ್ನು ಕಳೆದುಕೊಳ್ಳುತ್ತದೆ.

***

# 28. ನೈತಿಕ ಹಾಗೂ ಆಧ್ಯಾತ್ಮಿಕ ಜಾಗೃತಿ (ಚೈತನ್ಯ ) [Moral and Spiritual Consciousness ]

ನಾಗರಿಕ ಜೀವನದಲ್ಲಿ ನೈತಿಕ ಜಾಗೃತಿಗೆ ವಿಶೇಷ ಮಹತ್ವವಿದೆ. ಜಾಗೃತಿ ಎಂಬುದು ಕೇವಲ ಮಾನವನಲ್ಲಿ ಮಾತ್ರವಲ್ಲ. ಪ್ರತಿ ಪ್ರಾಣಿಯಲ್ಲೂ ಇರುತ್ತದೆ. ಆದರೆ ಮನುಷ್ಯನಲ್ಲಿ ಅನ್ಯ ಪ್ರಾಣಿಗಳಿಗಿಂತ ಭಿನ್ನ ಪ್ರಕೃತಿಯ ಚೈತನ್ಯವು ಇರುತ್ತದೆ. ನೈತಿಕ ಹಾಗೂ ಆಧ್ಯಾತ್ಮಿಕ ಚೈತನ್ಯದ ಕಾರಣದಿಂದಾಗಿ ಮನುಷ್ಯ ಅನ್ಯ ಪ್ರಾಣಿಗಳಿಗಿಂತ ಭಿನ್ನವಾಗಿದ್ದಾನೆ. ಅರ್ಥಾತ್, ಚೈತನ್ಯದ ಪ್ರಾಕೃತಿಕ ಗುಣಗಳಿಂದಾಗಿಯೇ ಮನುಷ್ಯ ಗುರುತಿಸಲ್ಪಡುತ್ತಾನೆ. ಮನುಷ್ಯನಲ್ಲಿ ಕೇವಲ ನೈತಿಕ ಹಾಗೂ ಆಧ್ಯಾತ್ಮಿಕ ಚೈತನ್ಯವಿರುವುದು ಅಥವಾ ನೈತಿಕ ಚೈತನ್ಯವಿರುವುದರಲ್ಲಿ ಅಂತರವಿದೆ. ಇದೇ ಮಾನವೀಯ ಚೈತನ್ಯದ ಸೃಷ್ಟಿಯಿಂದಾಗಿ ಸಮಾಜ ಮತ್ತು ರಾಜ್ಯ ಉನ್ನತಿ ಅಥವಾ ಅವನತಿಯನ್ನು ಸಹಿಸಬೇಕಾಗುತ್ತದೆ.

ನೈತಿಕ ಚೈತನ್ಯದಿಂದ ಕೂಡಿದ ನಾಗರಿಕರು, ಇಂದಿನ ಅವಶ್ಯಕತೆಯಾಗಿದೆ. ಯಾವ ದೇಶದಲ್ಲಿ ನೈತಿಕ ಜಾಗರೂಕ ನಾಗರಿಕರು ವಾಸವಾಗಿರುತ್ತಾರೋ, ಅಲ್ಲಿಯ ಸಮಾಜ ಸರ್ವತೋಮುಖ ಅಭಿವೃದ್ಧಿಯನ್ನು ಹೊಂದುತ್ತದೆ. ಯಾವ ದೇಶದ ನಾಗರಿಕರು ನೈತಿಕ ಚೈತನ್ಯಪೂರ್ಣ ವಿಚಾರ, ಆಚಾರ ಮತ್ತು ಕರ್ಮಗಳನ್ನು ಮಾಡುತ್ತಾರೋ, ಆ ನಾಗರಿಕರು ಸಮಾಜದಲ್ಲಿ ಮಹತ್ವಪೂರ್ಣ ಸ್ಥಾನವನ್ನು ಪಡೆಯುತ್ತಾರೆ. ಇಂತಹ ನಾಗರಿಕರು ತಮ್ಮ ರಾಷ್ಟ್ರವನ್ನು ಉನ್ನತಿಯತ್ತ ಕೊಂಡೊಯ್ಯುತ್ತಾರೆ.

**ನೈತಿಕ ಚೈತನ್ಯ ( ಜಾಗೃತಿ ) [Moral Consciousness ]**

ನೈತಿಕ ಚೈತನ್ಯ ಅರ್ಥಾತ್ ಉತ್ತಮ ಆಚಾರಯುತ ಜ್ಞಾನ ತತ್ವವಾಗಿದೆ. ಇಂತಹ ಜ್ಞಾನ ತತ್ವದ ಪರಿಚಯ ನಾಗರಿಕನ ಕರ್ಮ (ಕಾರ್ಯ) ದಿಂದ ತಿಳಿಯುತ್ತದೆ. ಇದರ ವಿಕಾಸ ಕ್ರಮವನ್ನು ನೋಡೋಣ.

1. ವಿಚಾರ 2. ಆಚಾರ 3 ಕರ್ಮ

## 1. ವಿಚಾರ (ಚಿಂತನೆ ) [Thought ]


ಚೈತನ್ಯದ ಮೊದಲ ಉತ್ಪತ್ತಿ ವಿಚಾರ. ವಿಚಾರ ಒಳಿತು, ಕೆಡುಕು, ಎರಡೂ ಪಕ್ಷಗಳನ್ನು ಸ್ವೀಕರಿಸುತ್ತದೆ. ನೈತಿಕ ಚೈತನ್ಯ ಪೂರ್ಣ ವಿಚಾರ ಒಳಿತಾಗಿದ್ದರೆ ಆ ವ್ಯಕ್ತಿಯಿಂದ ಒಳ್ಳೆಯ ಕರ್ಮಗಳು ಪ್ರಾರಂಭವಾಗುತ್ತವೆ. ಚಿಂತನೆಯ ಪ್ರಾರಂಭ ಹೇಗಿರುತ್ತದೋ, ಕೊನೆಯೂ ಹಾಗೆಯೇ ಇರುತ್ತದೆ. ಆದ್ದರಿಂದ ವಿಚಾರವೇ (ಚಿಂತನೆಯೋ) ಪರಿಣಾಮ ಪ್ರಾಪ್ತಿಯ ಸ್ಥಿತಿಯಾಗಿದೆ.

## 2. ಆಚಾರ (Conduct )

ಆಚಾರವೆಂದರೆ ವ್ಯಕ್ತಿಯ ಆಚರಣೆಯಾಗಿದೆ. ಯಾವ ವ್ಯಕ್ತಿಯೇ ಇರಲಿ, ಅವನು ಯಾವ ಸಮಾಜದಲ್ಲಿ ಜನಿಸುತ್ತಾನೋ, ಅದೇ ಸಮಾಜದ ಸಂಸ್ಕೃತಿಯಿಂದ ಕೂಡಿದ ಆಚರಣೆ ಮತ್ತು ವ್ಯವಹಾರ ಆ ವ್ಯಕ್ತಿಯಲ್ಲೂ ನಿರ್ಮಾಣವಾಗುತ್ತದೆ. ಆಚರಣೆ ಮನುಷ್ಯನ ಸ್ವಂತಿಕೆಯ ಪರಿಚಯವನ್ನು ಸ್ಥಿರಗೊಳಿಸುತ್ತದೆ. ಆಚರಣೆಯೇ ಸರಿಯಾದ ವಿಚಾರ ಮತ್ತು ಸರಿಯಾದ ಕಾರ್ಯದ ಪ್ರಾರಂಭವನ್ನು ಮಾಡಬಲ್ಲುದು.

## 3. ಕರ್ಮ [Actiion]


ಚಿಂತನೆಯ ( ವಿಚಾರದ ) ಅಂತಿಮ ಪರಿಣಾಮವೇ ಕರ್ಮ. ವಿಚಾರ (ಚಿಂತನೆ) ನಿಶ್ಚಿತಮಾರ್ಗವನ್ನು ಸಿದ್ಧಗೊಳಿಸುತ್ತದೆ. ಯೋಜನೆ , ಕರ್ಮ (ಕೆಲಸ) ಸಂಪನ್ನವಾಗುವಲ್ಲಿ ಸಹಯೋಗ ನೀಡುತ್ತದೆ. ವಿಚಾರಗಳ ಅಂತಿಮ ಬಿಂದು ಕರ್ಮವೇ ಆಗಿದೆ. ನೈತಿಕ ಚೈತನ್ಯ ಪೂರ್ಣವಾದ ನಾಗರಿಕನ ಚಿಂತನೆ ಯಿಂದಲೇ ಸಮಾಜ ಮತ್ತು ರಾಷ್ಟ್ರದಲ್ಲಿ ಒಳ್ಳೆಯ ಕಾರ್ಯಗಳು ಪ್ರಾರಂಭವಾಗುವುವು. ನಾಗರಿಕನ ನೈತಿಕ ಚೈತನ್ಯ ಅರ್ಥಾತ್, ಜ್ಞಾನ ತತ್ವದಿಂದಲೇ ಉತ್ಪನ್ನವಾಗುವ, ವಿಚಾರ ಆಚಾರ ಮತ್ತು ಕರ್ಮ ಇವುಗಳನ್ನು ಕೆಳಗಿನ ಚಿತ್ರದಲ್ಲಿ ನೋಡೋಣ.



ಮೇಲಿನ ಚಿತ್ರದಲ್ಲಿ ನೈತಿಕ ಚೈತನ್ಯದ ಹೆಸರಿನಲ್ಲಿ 1. ವಿಚಾರ, 2. ಆಚಾರ ಮತ್ತು 3. ಕರ್ಮ ಈ ಮೂರು ತತ್ವಗಳು ಸಮಾನ ಅನುಪಾತದ ರೂಪದಲ್ಲಿ ನಿರ್ಮಾಣವಾದಂತೆ ಕಾಣುತ್ತವೆ. ನೈತಿಕ ಚೈತನ್ಯದ ಹೆಸರಿನಲ್ಲಿ ಈ ಮೂರು ತತ್ವಗಳು ಯಾವ ನಾಗರಿಕನಲ್ಲಿ ಅಳವಡಿಸಿಕೊಂಡಿರುತ್ತವೋ, ಅವನೇ ಸಮಾಜದ ಅಸಲಿ ನಾಗರಿಕನಾಗಿರುತ್ತಾನೆ.

ನಾಗರಿಕನಲ್ಲಿ ನೈತಿಕ ಜಾಗೃತಿ ಉಂಟಾಗುವುದರ ತಾತ್ಪರ್ಯವೆಂದರೆ, ಅವನಲ್ಲಿ ತನ್ನ ಸಮಾಜ ಮತ್ತು ರಾಷ್ಟ್ರದ ಕುರಿತಾದ ಹೊಣೆಗಾರಿಕೆಯನ್ನು ತಿಳಿದುಕೊಳ್ಳುವ ಸಾಮರ್ಥ್ಯ ಉಂಟಾಗುವುದು. ನಾಗರಿಕನ ಚೈತನ್ಯವೇ ಆತನಿಗೆ ಉತ್ತಮವಾದ ಆಚಾರಯುಕ್ತ ಜ್ಞಾನವನ್ನು ನೀಡುತ್ತದೆ. ಇಂತಹ ಜ್ಞಾನ ತತ್ವದಿಂದ ಕೂಡಿದ ವ್ಯಕ್ತಿ ಸಮಾಜ ಮತ್ತು ರಾಷ್ಟ್ರದ ಒಳ್ಳೆಯ (ಉತ್ತಮ) ನಾಗರಿಕನಾಗಬಲ್ಲ. ಉತ್ತಮ ನಾಗರಿಕನೇ ಸಮಾಜ ಮತ್ತು ರಾಷ್ಟ್ರದ ವಿಕಾಸ ಮಾಡಬಲ್ಲ. ಆದ್ದರಿಂದ ರಾಷ್ಟ್ರದೊಳಗೆ ಚೈತನ್ಯಯುಕ್ತವಾದ ನಾಗರಿಕರನ್ನು ಸಜ್ಜುಗೊಳಿಸುವುದು. ರಾಷ್ಟ್ರದ ಹೊಣೆಯಾಗಿರುತ್ತದೆ. ಯಾವಾಗ ರಾಷ್ಟ್ರ ಈ ಹೊಣೆಗಾರಿಕೆಯ ಅರಿವನ್ನು ಮೂಡಿಸುವುದೋ, ಆಗಲೇ ನಾಗರಿಕನಿಗೆ ಬದುಕುವುದಕ್ಕಾಗಿ ಆರ್ಥಿಕ ವ್ಯವಸ್ಥೆಯನ್ನು ನಿರ್ಮಾಣ ಮಾಡಬಹುದಾಗಿದೆ. ಆಧಾರಭೂತವಾದ ಶಿಕ್ಷಣ ನೀಡುವ ವ್ಯವಸ್ಥೆಯನ್ನು ಕೂಡ ರಾಷ್ಟ್ರ ಮಾಡಬೇಕು. ಇದೇ ರೀತಿ ನಾಗರಿಕನ ಆಧಾರಭೂತ ಅವಶ್ಯಕತೆ ಪೂರ್ಣಗೊಂಡ ನಂತರ ನಾಗರಿಕರು ಜಾಗರೂಕರಾಗತೊಡಗಿರುತ್ತಾರೆ. ಜಾಗರೂಕತೆಯೇ ನೈತಿಕ ಚೈತನ್ಯದ ಪ್ರಾರಂಭದ ಬಿಂದುವಾಗಿದೆ. ನೈತಿಕ ಚೈತನ್ಯದ ಅಭಿವೃದ್ಧಿ ಮಾಡಬೇಕಾಗಿದೆ. ಕೇವಲ ಘೋಷಣೆಗಳಿಂದ ನಾಗರಿಕನ ಜೀವನದಲ್ಲಿ ನೈತಿಕ ಚೈತನ್ಯ ಸ್ಫುರಿಸಲಾರದು. ನೈತಿಕ ಚೈತನ್ಯಯುಕ್ತ ನಾಗರಿಕನ ನಿರ್ಮಾಣಕ್ಕಾಗಿ ರಾಷ್ಟ್ರದಲ್ಲಿ ವಿಶೇಷ ಯೋಜನೆಗಳನ್ನು ರೂಪಿಸಬೇಕು. ಇದಕ್ಕಾಗಿ ರಾಷ್ಟ್ರದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕು. ನಾಗರಿಕನಿಗೆ ತಾನು ರಾಷ್ಟ್ರದಲ್ಲಿ ಸುರಕ್ಷಿತನಾಗಿದ್ದೇನೆ ಎಂಬ ಅನುಭವವಾಗಬೇಕು. ಅಂತಹ ವಾತಾವರಣದ ನಿರ್ಮಾಣವಾಗಬೇಕು. ರಾಷ್ಟ್ರದ ವತಿಯಿಂದ ಮೂಲಭೂತ ಅವಶ್ಯಕತೆಯಾದ ಶಿಕ್ಷಣ ನೀಡುವ ಮತ್ತು ಶಿಕ್ಷಣ ಕ್ಷೇತ್ರಗಳಿಂದ ಕೊಡಿಸುವ ಕಾರ್ಯದ ಜೊತೆಗೆ ಆರ್ಥಿಕ ಸುಧಾರಣೆ (ವ್ಯವಸ್ಥೆಯ ) ನಂತರವೇ ನಾಗರಿಕನಲ್ಲಿ ನೈತಿಕ ಚೈತನ್ಯದ ವೃದ್ಧಿಯಾಗುತ್ತದೆ. ಇದರ ಸ್ಥಾಯಿತ್ವಕ್ಕಾಗಿ ರಾಷ್ಟ್ರ ಸದಾ ಪ್ರಯತ್ನಶೀಲವಾಗಿರಬೇಕು. ನೈತಿಕ ಚೈತನ್ಯದ ವಿಕಾಸವನ್ನು ಕೆಳಗಿನ ಚಿತ್ರದಲ್ಲಿ ನೋಡೋಣ.

## ನೈತಿಕ ಪ್ರಜ್ಞಾವಂತ ನಾಗರಿಕ





ಉಪರೋಕ್ತ ನೈತಿಕ ಚೇತನಾಯಕ್ತ ನಾಗರಿಕ ಜೀವನವನ್ನು ಗಾಳಿಪಟದಂತೆ ಚಿತ್ರಿಸಲಾಗಿದೆ. ಮೂಲಭೂತ ಶಿಕ್ಷಣ ನಾಗರಿಕನಿಗೆ ಸಿಗಬೇಕಾದುದು ಅನಿವಾರ್ಯ. ಇನ್ನು ಜೀವಿಸುವುದಕ್ಕಾಗಿ ಆರ್ಥಿಕ ವ್ಯವಸ್ಥೆಯು ಕೂಡ ಸರಿಯಾಗಿ ಆಗಬೇಕು. ಇಷ್ಟಾದ ನಂತರವೇ ನಾಗರಿಕ ಸಮುದಾಯದಲ್ಲಿ ಚೈತನ್ಯ ವೃದ್ಧಿಯಾಗಬಲ್ಲುದು. ಸಾಮಾಜಿಕ ಚೈತನ್ಯಯುಕ್ತ ನಾಗರಿಕ ತನ್ನ ಸಮಾಜದಲ್ಲಿ ನೈತಿಕ ಚೈತನ್ಯದ ಜಾಗೃತಿಯನ್ನುಂಟುಮಾಡಬಲ್ಲ. ಈ ಚಲಿಸುವ ಚಕ್ರ ಯಾವಾಗಲೂ ಪ್ರಕೃತಿಯದ್ದಾಗಿಬೇಕಾಗುತ್ತದೆ. ಇದೇ ಗತಿ (ವಿಕಾಸ ) ಯಲ್ಲಿ ಸಮಾಜದ ವಿಕಾಸವು ಕೂಡ ತನ್ನದೇ ರೀತಿಯಲ್ಲಿ ಸ್ಥಿರವಾಗುತ್ತದೆ.

### ಆಧ್ಯಾತ್ಮಿಕ ಚೇತನದ ವಿಕಾಸ [The Developement of Spiritual Consciousness]

ಆಧ್ಯಾತ್ಮಿಕ ಚೇತನೆಯ ವಿಕಾಸ ಕ್ರಮದ ಇತಿಹಾಸ ಸಾವಿರಾರು ವರ್ಷಗಳಷ್ಟು ಹಳೆಯದು. ಪ್ರಾಚೀನಕಾಲದಿಂದಲೂ ಆಧ್ಯಾತ್ಮಿಕ ಚೈತನ್ಯವನ್ನು ಅಭ್ಯಾಸದಲ್ಲಿ ತಂದಿರುವ ಕಾರಣದಿಂದಲೇ ವಿಶ್ವ ಮಾನವ ಸಮಾಜದಲ್ಲಿ ಬಹಳಷ್ಟು ಸಮುದಾಯಗಳು ಸಭ್ಯ, ಸುಸಂಸ್ಕೃತ ಮತ್ತು ವಿಕಸಿತಗೊಂಡಿವೆ. ಆಧ್ಯಾತ್ಮಿಕ ಚೈತನ್ಯ ಪ್ರಾದುರ್ಭಾವವಾಗಿರುವ ಸ್ಥಾನಗಳು ಇತ್ತೀಚೆಗೆ ಲುಪ್ತವಾಗುವ ಸ್ಥಿತಿಯಲ್ಲಿವೆ. ಆಧ್ಯಾತ್ಮಿಕ ಮತ್ತು ಚೈತನ್ಯದ ಸ್ಥಾನಗಳು ಇತ್ತೀಚೆಗೆ ಲುಪ್ತವಾಗುವ ಸ್ಥಿತಿಯಲ್ಲಿವೆ. ಆಧ್ಯಾತ್ಮಿಕ ಮತ್ತು ಭೌತಿಕ ವಿಕಾಸದ ಪೈಪೋಟಿಯಲ್ಲಿ ಭೌತಿಕ ವಿಕಾಸವು ಸಮಾಜದಲ್ಲಿ ಹೆಚ್ಚಿನ ಸ್ಥಾನ ಪಡೆದುಕೊಂಡಿದೆ. ಆದರೂ ಆಧ್ಯಾತ್ಮಿಕ ಜ್ಞಾನದ ವಿಕಾಸ ಕಡಿಮೆಯಾಗುತ್ತಾ ಹೋಗುತ್ತಿದೆ. ಒಂದು ವೇಳೆ ಆಧ್ಯಾತ್ಮಿಕ ಮತ್ತು ಭೌತಿಕ

ಜ್ಞಾನವನ್ನು ಸಮಾನವಾಗಿ ವಿಸ್ತಾರಗೊಳಿಸಿದ್ದೇ ಆದರೆ ಆಗ ಸಮಾಜ ವಿಕಾಸದ ಗತಿಯನ್ನು ಸಾಕಷ್ಟು ತೀವ್ರಗೊಳಿಸಬಹುದು. ಇದರ ಅವಶ್ಯಕತೆ ಮತ್ತು ಮಹತ್ವವನ್ನು ತಿಳಿದು ಭೌತಿಕ ಮತ್ತು ಆಧ್ಯಾತ್ಮಿಕ ಜ್ಞಾನದ ವಿಕಾಸವನ್ನು ಸಂತುಲಿತಗೊಳಿಸಬಹುದು. ಇದಕ್ಕಾಗಿ ಇದರ ಅಧ್ಯಯನವನ್ನು ಇಲ್ಲಿ ಸೇರಿಸಲಾಗಿದೆ.


ಚೈತನ್ಯ ಜ್ಞಾನದ ಮೊದಲ ಬಿಂದುವಾಗಿದೆ. ಆದ್ದರಿಂದ ಚೈತನ್ಯದ ಆಧಾರದಲ್ಲಿ ಆಧ್ಯಾತ್ಮಿಕ ಮತ್ತು ಭೌತಿಕ ಪಕ್ಷವನ್ನು ನೋಡಬೇಕು. ಆಧ್ಯಾತ್ಮಿಕ ಮತ್ತು ಭೌತಿಕ ಪಕ್ಷವನ್ನು ತೋರಿಸುವುದಕ್ಕಾಗಿ ಮೂರು ಸಮಾನ ಸರಳ ರೀತಿಯಿಂದ ತ್ರಿಕೋಣದ ನಿರ್ಮಾಣ ಮಾಡೋಣ.




ಭೌತಿಕ ತಿಳುವಳಿಕೆ ( ಪರಿಜ್ಞಾನ)

ಮೇಲಿನ ಆಧ್ಯಾತ್ಮಿಕ ತ್ರಿಕೋಣದಲ್ಲಿ, ಚೈತನ್ಯದ ಸರಳ ರೇಖೆಯಲ್ಲಿ ಜ್ಞಾನ ಹಾಗೂ ಬುದ್ಧಿಯ ಸರಳ ರೇಖೆಯಿಂದ ನಿರ್ಮಿತ ತ್ರಿಕೋಣದ ಮೂಲ ಕೇಂದ್ರದಲ್ಲಿ ವಿವೇಕವು ಸ್ಥಾಪಿತವಾಗಿದೆ. ಏಕೆಂದರೆ, ವಿವೇಕ, ಆಧ್ಯಾತ್ಮಿಕ ಚೈತನ್ಯದ ಉತ್ಪತ್ತಿಯಾಗಿದೆ. ಇದೇ ರೀತಿ ಇನ್ನೊಂದು ಭೌತಿಕ ತ್ರಿಕೋಣದ ಸರಳ ರೇಖೆಯಲ್ಲಿ, ವಿಚಾರ ಮತ್ತು ಕರ್ಮವನ್ನು ಸರಳರೇಖೆಯಿಂದ ನಿರ್ಮಿತ ತ್ರಿಕೋಣದ ಮೂಲ ಕೇಂದ್ರದಲ್ಲಿ ಭೌತಿಕ ವಿಕಾಸವು ಸ್ಥಾಪಿತವಾಗಿದೆ. ಒಂದು ತ್ರಿಕೋಣ ವಿವೇಕವನ್ನು ಹುಟ್ಟು ಹಾಕಿದರೆ, ಇನ್ನೊಂದು ವಿಕಾಸವನ್ನು ಈ ಎರಡೂ ಮಾನವ ಹಿತ ಮತ್ತು ಸಮಾಜದ ವಿಕಾಸಕ್ಕಾಗಿ ಅವಶ್ಯಕವಾಗಿದೆ.

ಈ ಎರಡೂ ತ್ರಿಕೋಣಗಳನ್ನು ಒಂದು ವೇಳೆ ಒಂದನ್ನು ಇನ್ನೊಂದರಲ್ಲಿ ಸೇರಿಸಿದರೆ ಅದು ಷಡ್ಕೋಣವಾಗುತ್ತದೆ. ಅದು ಜ್ಞಾನದ ಮೂಲ ಭಂಡಾರವಾಗಿದೆ.




ಮೇಲಿನ ಚಿತ್ರದಲ್ಲಿ ಷಟ್ಕೋನ ವಿಶ್ವವಿಖ್ಯಾತ ಸುಚೈತನ್ಯ ಮತ್ತು ಜ್ಞಾನದ ಮೂಲ ಭಂಡಾರವಾಗಿದೆ. ಅದು ಅಧ್ಯಾತ್ಮಿಕ ಮತ್ತು ಭೌತಿಕ ಚೈತನ್ಯದಿಂದ ನಿರ್ಮಿತ ಎರಡೂ ಬೇರೆ ಬೇರೆ ತ್ರಿಕೋಣಗಳಿಂದ ನಿರ್ಮಾಣವಾಗಿದೆ. ಆದ್ದರಿಂದ ಆಧ್ಯಾತ್ಮಿಕ ಪಕ್ಷದ ಭೌತಿಕ ವಿಕಾಸವನ್ನು ಜೊತೆಜೊತೆಯಲ್ಲಿ ಕೊಂಡೊಯ್ಯುವುದರಿಂದ ಹೆಚ್ಚಿನ ಉಪಲಬ್ಧತೆಯನ್ನು ಪಡೆಯಬಹುದಾಗಿದೆ. ಈ ವಿಷಯವನ್ನು ಮೇಲಿನ ಚಿತ್ರ (ಷಡ್ಕೋಣ) ಪ್ರಮಾಣಿಕರಿಸುತ್ತದೆ.

## ನೈತಿಕ ಹಾಗೂ ಆಧ್ಯಾತ್ಮಿಕ ಚೇತನ

ನಾಗರಿಕ ಜೀವನದಲ್ಲಿ ನೈತಿಕ ಆಧ್ಯಾತ್ಮಿಕ ಚೇತನದ ಅವಶ್ಯಕತೆ ಇರುತ್ತದೆ. ಈ ಅವಶ್ಯಕತೆಯನ್ನು ಕೇವಲ ನಾಗರಿಕ ಸಮಾಜ ಪೂರ್ಣಗೊಳಿಸಲಾರದು. ಅದಕ್ಕಾಗಿ ರಾಜ್ಯವನ್ನು (ರಾಷ್ಟ್ರ) ಸಮಾಜದ ರಚನೆಗನುಸಾರವಾಗಿ ಯೋಜನೆಗಳನ್ನು ನಿರ್ಮಿಸಿ ಸಂಚಾಲನೆ ಮಾಡಬೇಕು. ನೈತಿಕತೆ ಚೈತನ್ಯದ ಪ್ರಾರಂಭಿಕ ಬಿಂದು, ಸತ್ ಜಾಗೃತಿಯೇ ಆಗಿದೆ. ಆಧ್ಯಾತ್ಮಿಕ ಚೇತನದ ವಿಕಾಸವಾಗುವುದು, ಸಮಾಜದ ಸಂಸ್ಕೃತಿಯನ್ನು ನಿಶ್ಚಿತಗೊಳಿಸಬೇಕಾಗಿದೆ. ರಾಜ್ಯದ ಮೂಲಕ ಪರಂಪರಾಗತ ಸಂಸ್ಕೃತಿಯ ಸಂರಕ್ಷಣೆ ಮತ್ತು ಸಂವರ್ಧನೆ ಮಾಡುತ್ತಾ, ಆಧ್ಯಾತ್ಮಿಕ ಚೈತನ್ಯದ ವಿಕಾಸಮಾಡುವ ವಾತಾವರಣ ಸಿದ್ಧಗೊಳಿಸಬೇಕಾಗಿದೆ. ಈ ವಿಷಯದ ಉಲ್ಲೇಖ ಭ್ರಷ್ಟವಿರೋಧಿ ಶಾಸ್ತ್ರದ ಅಧ್ಯಯನದಲ್ಲಿ ಮಾಡಲಾಗಿದೆ. ಅದಕ್ಕಾಗಿ ನೈತಿಕ ಚೈತನ್ಯ

ಮತ್ತು ಆಧ್ಯಾತ್ಮಿಕ ಚೇತನವನ್ನು ರಾಜ್ಯವ್ಯವಸ್ಥೆಯು ತನ್ನ ಜವಾಬ್ದಾರಿಯನ್ನರಿತು ವಿಕಸಿತಗೊಳಿಸಬೇಕಾಗುತ್ತದೆ ಮತ್ತು ನಾಗರಿಕರ ಜೀವನಮಟ್ಟಕ್ಕನುಸಾರವಾಗಿ ವಿಕಾಸಗೊಳಿಸುವ ವ್ಯವಸ್ಥೆಯನ್ನು ಮಾಡಬೇಕಾಗಿದೆ. ರಾಜ್ಯದ ಸೇವಾಯುಕ್ತ ಸೇವೆಯಿಂದ ನಾಗರಿಕ ಜೀವನದಲ್ಲಿ ನೈತಿಕ ಹಾಗೂ ಆಧ್ಯಾತ್ಮಿಕ ಚೈತನ್ಯ ವೃದ್ಧಿಯಾಗಬಹುದು. ಇದು ಮಾನವ ಹಾಗೂ ಮಾನವ ಸಮಾಜದ ವಿಕಾಸಕ್ಕೆ ಅವಶ್ಯಕವಾಗಿದೆ.

***

# 29. ಉತ್ತಮ ಶಾಸನ [Good Governance]

ವಿಶ್ವದ ಸಣ್ಣ ದೊಡ್ಡ ರಾಷ್ಟ್ರಗಳಿಂದ ಸಂಚಾಲಿತ ರಾಜ್ಯವ್ಯವಸ್ಥೆಯು ಉತ್ತಮವಾಗಿದ್ದರೂ ಶಾಸನ ಪದ್ಧತಿಯಲ್ಲಿ ಸ್ಥಿರತೆ – ನಿಶ್ಚಿತತೆ ಇರುವುದಕ್ಕಾಗಿ ಪ್ರಜಾತಾಂತ್ರಿಕ ದೇಶಗಳಲ್ಲಿ ಆ ದೇಶದ ನಾಗರಿಕರ ಮೌಲಿಕ ಹಕ್ಕುಗಳು ಪೂರ್ಣ ಸುರಕ್ಷಿತವಾಗಿರಬೇಕು. ಅರ್ಥಾತ್ ಉತ್ತಮ ಶಾಸನವನ್ನೇ ನಾಗರಿಕ ಅಧಿಕಾರದ ರೂಪದಲ್ಲಿ ಸ್ವೀಕರಿಸಲಾಗುತ್ತದೆ. ಉತ್ತಮ ಶಾಸನದಲ್ಲಿ ರಾಜ್ಯವ್ಯವಸ್ಥೆಯಿಂದ ತೆಗೆದುಕೊಳ್ಳುವ ನಿರ್ಣಯ – ಪ್ರಕ್ರಿಯೆಯ ಪ್ರತಿಯೊಂದು ಮಟ್ಟದಲ್ಲಿ ಆ ದೇಶದ ನಾಗರಿಕರ ಸಕ್ರಿಯ ಸಹಭಾಗಿತ್ವ ಇರಬೇಕು. ಇದರೊಂದಿಗೆ ಕಾನೂನು ಮೂಲಕ ನಿರ್ಧಾರಿತ ಕಾರ್ಯ ಸಂಬಂಧಿತ ಸಮುದಾಯದಿಂದ ಸಮಯ, ಸಂದರ್ಭಗಳಲ್ಲಿ ನಿಯಮ ಸಮ್ಮತ ರೀತಿಯಿಂದ ಸಂಪನ್ನವಾಗಬೇಕು. ರಾಜ್ಯದ ನಿರ್ಣಯಗಳನ್ನು ಮಾಡುವವರ ಮಟ್ಟದಿಂದಾದ ನಿರ್ಣಯ ಮತ್ತು ಅದರ ಕಾರ್ಯಾನ್ವಯನ ಮಾಡುವ ಜವಾಬ್ದಾರಯುಕ್ತ ವ್ಯಕ್ತಿ ಅಥವಾ ಸಮುದಾಯದಿಂದ ಆಗುವ ಕಾರ್ಯ ಸರಿಯಾದ ಕಾನೂನಿನಲ್ಲಿ ಇರುವ ಪ್ರಾವಧಾನಕ್ಕನುಸಾರವಾಗಿ ಆಗಬೇಕು. ಇಂತಹ ವಿಭಿನ್ನ ಮಟ್ಟದಿಂದ ನಿಶ್ಚಿತ ನಿರ್ಣಾಯಕ ಕಾರ್ಯ ಆ ದೇಶದ ಪ್ರತಿಯೊಬ್ಬ ನಾಗರಿಕನನ್ನು ತಿಳಿದುಕೊಳ್ಳುವುದು, ಅನುಭವಗಳನ್ನು ತಿಳಿದುಕೊಳ್ಳುವುದು ಮತ್ತು ಅನುಭೂತಿ ಮಾಡಿಸುವುದರ ವ್ಯವಸ್ಥೆಯೇ ಸರಿಯಾದ ಶಾಸನ ಪದ್ಧತಿಯನ್ನು ತಿಳಿದುಕೊಳ್ಳುವುದಾಗಿದೆ. ರಾಜ್ಯದ ನೀತಿ ಹಾಗೂ ನಿಯಮಗಳ ನಿರ್ಮಾಣ ಮಾಡುವ ಮತ್ತು ಇಂತಹ ನೀತಿ ಹಾಗೂ ನಿಯಮಗಳನ್ನು ಕಾರ್ಯಾನ್ವಯನ ಮಾಡುವುದಕ್ಕಾಗಿ ರಾಜ್ಯ ಸ್ವಯಂ ಆಡಳಿತದಲ್ಲಿ ಭ್ರಷ್ಟಾಚಾರ ಇರುವವರೆಗೆ ಒಳ್ಳೆಯ ಶಾಸನದ ತೊಡಕಾಗಿರುವುದರಿಂದಲೇ ಉತ್ತಮ ಶಾಸನದಲ್ಲಿ ಭ್ರಷ್ಟಾಚಾರದ ನಿಯಂತ್ರಣವಾಗಬೇಕು. ಅರ್ಥಾತ್ ಭ್ರಷ್ಟಾಚಾರದ ಶೂನ್ಯ ಸಹನಶೀಲತೆಯ ವ್ಯವಸ್ಥೆಯೇ ಉತ್ತಮ ಶಾಸನವನ್ನು ತರಬಲ್ಲದು. ಇಂತಹ ವ್ಯವಸ್ಥೆಯಲ್ಲಿ ನಾಗರಿಕನು

ರಾಜ್ಯದ ಯಾವುದೇ ನಿರ್ಣಯ ಖರೀದಿಸಬಾರದು. ನ್ಯಾಯವನ್ನು ಖರೀದಿ ಮಾರಾಟ ಮಾಡುವುದಿಲ್ಲ. ಮತ್ತು ನಾಗರಿಕನು ಸಹಜವಾಗಿ ಆರ್ಥಿಕ, ರಾಜನೀತಿಕ, ಸಾಮಾಜಿಕ ಮತ್ತು ಕಾನೂನಿ ನ್ಯಾಯವನ್ನು ಪಡೆಯಬಲ್ಲ. ಉತ್ತಮ ಶಾಸನದ ತಾತ್ಪರ್ಯವೆಂದರೆ ರಾಜ್ಯ ಮತ್ತು ರಾಜ್ಯ ವ್ಯವಸ್ಥೆಯಲ್ಲಿ ಕ್ರಿಯಾಶೀಲ ವಿಭಿನ್ನ ಕಾನೂನಿ ಸಂಸ್ಥೆಗಳ ಮೂಲಕ ಅಧಿಕಾರ ಪ್ರಯೋಗ ಮಾಡುವುದರಲ್ಲಿ ಸಾಮಾನ್ಯ ನಾಗರಿಕನ ಹಿತವಿದೆ. ಇಂತಹ ಅಧಿಕಾರವನ್ನು ಪ್ರಯೋಗ ಮಾಡುವವರು ರಾಜ್ಯ ಮಟ್ಟದ ಪದಾಧಿಕಾರಿಗಳನ್ನು ಯಾವಾಗಲೂ, ವಿಧಿ (ನಿಯಮ) ಪೂರ್ವಕ ಉತ್ತರದಾಯಿತ್ವ, ಪಾರದರ್ಶಕತೆ, ಜನಸಹಭಾಗಿತ್ವ ಮತ್ತು ಸೇವಾಮುಖವಿರುವ ಸಿದ್ಧಾಂತದ ಗೌರವ ಮತ್ತು ಪರಿಪಾಲನೆ ಮಾಡಿ ಮುಂದುವರಿಯಬೇಕಾಗಿದೆ.

ರಾಜ್ಯದ ರಾಜನೈತಿಕ ವ್ಯವಸ್ಥೆ ಮತ್ತು ಶಾಸಕೀಯ (ಆಡಳಿತದ) ಸ್ವರೂಪ ಭಿನ್ನ –ಭಿನ್ನವಾಗಿರಬಹುದು. ಇಂತಹ ಶಾಸಕೀಯ ಸ್ವರೂಪದ ಕಾರಣದಿಂದಾಗಿ ಉತ್ತಮ ಶಾಸನ ಸಂಚಾಲಿತವಾಗುವುದಿಲ್ಲ. ಯಾವುದೇ ರಾಜನೈತಿಕ ವ್ಯವಸ್ಥೆಯಲ್ಲಿ ಕೂಡ ಉತ್ತಮ ಶಾಸನ ಸ್ಥಾಪನೆ ಮಾಡಲು, ಸರಿಯಾದ ಶಾಸನದ ಸಿದ್ಧಾಂತದ ಪಾಲನೆ ಆಗಬೇಕು. ಇಂತಹ ಶಾಸನಕ್ಕಾಗಿ ನೈತಿಕತೆ, ಪ್ರಾಮಾಣಿಕತೆ ಮತ್ತು ವಿಶ್ವಾಸಯುಕ್ತ ಸಮಾಜದ ಅವಶ್ಯಕತೆ ಇರುತ್ತದೆ. ಇದರ ಹೊರತಾಗಿಯೂ ಇದರ ಆರು (6) ಅನಿವಾರ್ಯ ತತ್ವಗಳಿವೆ.

1. ಭ್ರಷ್ಟಾಚಾರ ನಿಯಂತ್ರಿತ ಸ್ಥಿತಿ.
2. ಕಾನೂನಿನ ಶಾಸನ,
3. ಸ್ಥಾನೀಯ ಸ್ವಾಯತ್ತ ಶಾಸನ,
4. ಪಾರದರ್ಶಕತೆ,
5. ಸೂಚನೆಗಳ ಅಧಿಕಾರ,
6. ಸಾರ್ವಜನಿಕ ಉತ್ತರದಾಯಿತ್ವ

### 1. ಭ್ರಷ್ಟಾಚಾರ ನಿಯಂತ್ರಿತ ಸ್ಥಿತಿ [Corruption Controlled Situation]

ಯಾವುದೇ ಸಮಾಜ ಮತ್ತು ರಾಷ್ಟ್ರದಲ್ಲಿ ಕಾನೂನು, ನೈತಿಕತೆ ಮತ್ತು ಪ್ರಜಾತಂತ್ರದಂತಹ ಸದ್ಗುಣಗಳ ವಿರೋಧದಲ್ಲಿ ಕಾರ್ಯ ಸಂಚಾಲಿತವಾಗುವವರೆಗೆ ಭ್ರಷ್ಟಾಚಾರ ವಿಕಸಿತವಾಗುವುದರಿಂದ ಆಡಳಿತ ಯಂತ್ರದಲ್ಲಿ ಭ್ರಷ್ಟಾಚಾರದ ಮೂಲಕ ದಾಳಿಯಾದ ಮೇಲೆ ಉತ್ತಮ ಶಾಸನದ ಕಲ್ಪನೆಯನ್ನು ಕೂಡ ಮಾಡಲಾಗದು.

ಉತ್ತಮ ಶಾಸನದ ವಿರುದ್ಧವಾಗಿರುವ ಭ್ರಷ್ಟಾಚಾರ ದೇಶದಲ್ಲಿ ಆರ್ಥಿಕ ಅಸಮಾನತೆಯನ್ನು ಸೃಷ್ಟಿಸುವುದು ಮಾತ್ರವಲ್ಲ ಸಮಾಜದ ನೈತಿಕ ಮೌಲ್ಯಗಳ ಅಪಮೌಲ್ಯ ಮಾಡಿ ಅರಾಜಕತೆಯನ್ನು ಉಂಟು ಮಾಡುತ್ತಾರೆ. ಅರಾಜಕತೆ ಕೇವಲ ರಾಜನೀತಿಯನ್ನು ಅಸ್ಥಿರಗೊಳಿಸುವುದಿಲ್ಲ ಅದು ರಾಜ್ಯದ ಅಸ್ತಿತ್ವವನ್ನೇ ನಾಶಮಾಡುವ ಸ್ಥಿತಿಯನ್ನುಂಟು ಮಾಡುತ್ತದೆ. ಉತ್ತಮ ಶಾಸನಕ್ಕಾಗಿ ಕಾನೂನು ಮೂಲಕ ನಿರ್ಧಾರಿತ ಕಾರ್ಯಗಳನ್ನು ಈ ಸಮುದಾಯದ ಮೂಲಕ ಉತ್ತಮ ಮತ್ತು ಶೀಘ್ರ ಗುಣಮಟ್ಟದಿಂದ ಕೂಡಿದ ರೀತಿಯಿಂದ ಕಾರ್ಯ ಸಂಪನ್ನಗೊಳಿಸಬೇಕು. ನಿರ್ಣಯಕರ್ತ ಮತ್ತು ನಿರ್ಣಯದ ಕಾರ್ಯಾನ್ವಯನಕರ್ತಾ (ಕಾರ್ಯರೂಪಕ್ಕೆ) ಇವರ ನಡುವೆ ಯಾವುದೇ ಸ್ವಾರ್ಥದ ಕಾರಣದಿಂದ ಕೆಲಸ ತಡೆಯಬಾರದು. ಮತ್ತು ಸೇವಾಗ್ರಾಹಿಗೆ ಸುಲಭ ರೀತಿಯಿಂದ ಸೇವೆ ಪಡೆಯುವ ಸ್ಥಿತಿಯ ವಿಕಾಸವಾಗಬೇಕಾಗಿದೆ. ಉತ್ತಮ ಶಾಸನ ಪದ್ಧತಿಯಲ್ಲಿ, ಚಿಕ್ಕದಿರಲಿ, ದೊಡ್ಡದಿರಲಿ ಲಂಚದ ಕೊಡು ಕೊಳ್ಳುವಿಕೆ ಆಗಬಾರದು. ಮತ್ತು ಅನಿವಾರ್ಯ ಸೇವೆಯ ಶರತ್ತಿನ ಲೆಕ್ಕಾಚಾರದಲ್ಲಿ ಸೇವೆಯನ್ನು ನೀಡುವ ಮೂಲಕ ಸೇವೆಯನ್ನು ನೀಡಬೇಕು.

ಭ್ರಷ್ಟಾಚಾರ ನಿಯಂತ್ರಣಕ್ಕಾಗಿ ಯಾರೇ ಒಬ್ಬ ವ್ಯಕ್ತಿ, ಸಮುದಾಯ ಮತ್ತು ಸಮೂಹದ ಸಕ್ರಿಯತೆ ಸಾಕಾಗುವುದಿಲ್ಲ. ದೇಶದ ಸ್ಥಾಯೀ ಹಾಗೂ ರಾಜನೀತಿಕ ಸರಕಾರಗಳು ಭ್ರಷ್ಟಾಚಾರದ ವಿರುದ್ಧವಾಗಿ ವಿಶೇಷ ಯೋಜನೆಗಳನ್ನು ತಂದು ಭ್ರಷ್ಟಾಚಾರ ನಿಯಂತ್ರಣ ಮಾಡಿ ತಮ್ಮ ಇಚ್ಛಾ ಶಕ್ತಿಯೊಂದಿಗೆ ಜನತೆಯ ಕುರಿತಾದ ಬದ್ಧತೆ ಮತ್ತು ಪ್ರಾಮಾಣಿಕತೆಯನ್ನು ತೋರಬಹುದಾಗಿದೆ. ಕಾನೂನಿನ ಅತ್ಯಧಿಕ ವಿವೇಕಯುತ ಅಧಿಕಾರ ಪ್ರಯೋಗಿಸಿ, ಹಸ್ತಕ್ಷೇಪ ಮಾಡುವ ವಾತಾವರಣ ನಿರ್ಮಾಣ ಮಾಡಬಾರದು. ಆರ್ಥಿಕ ಕ್ರಿಯಾಕಲಾಪ ಮತ್ತು ಹೆಚ್ಚಿನ ವಿವೇಕಾಧಿಕಾರದ ಪ್ರಯೋಗ, ಶಾಸಕೀಯ ಮಟ್ಟದಲ್ಲಿ ಮಾಡುವ ಕ್ಷೇತ್ರವನ್ನು ಕ್ರಿಯಾಶೀಲ ವ್ಯಕ್ತಿ ಅಥವಾ ಸಮುದಾಯದ ಮೇಲೆ ವಿಚಾರಣೆ ಮಾಡಿ ತನಿಖೆಯ ಪರಿಧಿಯೊಳಗೆ ತರಬೇಕು.

ಭ್ರಷ್ಟಾಚಾರ ನಿಯಂತ್ರಣದ ಉಪಾಯಗಳನ್ನು ಉಪಚಾರಾತ್ಮಕ ಉಪಾಯದಿಂದಲೇ ಅಲ್ಲ ಬದಲಾಗಿ ನಿಷೇಧಾತ್ಮಕ ಉಪಾಯದಿಂದ ಕೂಡ ನೋಡಬೇಕಾಗಿದೆ. ಯಾವುದೇ ಉಪಾಯದಿಂದ ಸಮಾಜ ಭ್ರಷ್ಟಾಚಾರದ ನಿಯಂತ್ರಿತ ಸ್ಥಿತಿಯಲ್ಲಿರುವುದರಿಂದ ಉತ್ತಮ ಶಾಸನ ಪದ್ಧತಿಯ ವಿಕಾಸ ಆಗಬಲ್ಲುದು. ಉತ್ತಮ ಶಾಸನದ ವಿಕಾಸಕ್ಕಾಗಿ ಭ್ರಷ್ಟಾಚಾರ ನಿಯಂತ್ರಿತ ಸಮಾಜದ ನಿರ್ಮಾಣವಾಗಬೇಕಿದೆ.

## 2. ಕಾನೂನಿನ ಶಾಸನ :–


ಕಾನೂನಿನ ಅರ್ಥವೆಂದರೆ – ಶಾಸನ ವ್ಯವಸ್ಥೆಯ ಸಂಪೂರ್ಣ ಕ್ರಿಯಾಕಲಾಪ ಕಾನೂನಿನ ಮೂಲಕ ಸ್ಥಾಪಿತವಾಗುವುದು ಹಾಗೂ ನಿಯಂತ್ರಿತವಾಗಬೇಕು. ಕಾನೂನಿ ಶಾಸನ ನಾಗರಿಕರು ಮತ್ತು ಸರಕಾರದ ನಡುವೆ ಅಂತರ್ ಸಂಬಂಧ ಮತ್ತು ಅದರಿಂದ ಸಂಬಂಧಿತ ಪದ್ಧತಿ ಮತ್ತು ಪ್ರಕ್ರಿಯೆಗಳ ಕುರಿತು ನಾಗರಿಕನ ಭಾವನೆಗನುಸಾರವಾಗಿ ವ್ಯಕ್ತವಾಗುತ್ತವೆ. ಇಂತಹ ಸಂವೇದನಾಶೀಲ ಅಂತರ ಸಂಬಂಧವನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾನೂನಿ ಶಾಸನದ ನಿಯಮ – ನೀತಿಯ ನಿರಂತರ ಅಭ್ಯಾಸದಿಂದಲೇ ಕಾನೂನಿ ಶಾಸನ ಸ್ಥಾಪಿತಗೊಳಿಸಲಾಗುತ್ತದೆ. ಸರಳ ಅರ್ಥದಲ್ಲಿ ಹೇಳುವುದಾರೆ ಕಾನೂನು ಆಧಾರಿತ, ಕಾನೂನಿನ ಮೂಲಕ ನಿರ್ದೇಶಿತ ಹಾಗೂ ಕಾನೂನಿನಿಂದ ಅಭಿನಿಶ್ಚಿತವಾದ ಶಾಸನ ವ್ಯವಸ್ಥೆಯೇ ಕಾನೂನಿ ಶಾಸನವಾಗಿದೆ. ಇನ್ನೊಂದರ್ಥದಲ್ಲಿ ಪ್ರತಿಯೊಬ್ಬ ನಾಗರಿಕನೂ ತಲೆಬಾಗಬೇಕು ಮತ್ತು ಕಾನೂನು ಮೂಲಕವೇ ಶಾಸನಕ್ಕೊಳಪಡುವ ಭಾವನೆಯ ವಿಕಾಸ ಮಾಡಬೇಕು. ಸರಕಾರದ ಸ್ವೀಕೃತಿಯಲ್ಲಿರುವ ನಿಯಮಿತತೆ ಸತ್ಯತೆ ಮತ್ತು ಕಾನೂನಾತ್ಮಕ ಜವಾಬ್ದಾರಿಯಿಂದ ಸರಕಾರವು ಕೂಡ ಹಿಂದೆ ಸರಿಯುವುದಿಲ್ಲ. ಆದ್ದರಿಂದ ನಾಗರಿಕ ಮತ್ತು ಸರಕಾರಿ ಎಲ್ಲಾ ಸಮುದಾಯಗಳು ಕಾನೂನಿನ ಶಾಸನದಲ್ಲಿ ಅನುಬಂಧಿತರಾಗಿ ಮುನ್ನಡೆಯಬೇಕು.

ಪ್ರಜಾತಂತ್ರಾತ್ಮಕ ಪದ್ಧತಿಯಲ್ಲಿ ಕಾನೂನಿ ಶಾಸನಕ್ಕಾಗಿ ಸರಕಾರ ಭಿನ್ನ ಭಿನ್ನ ಅಂಗ (ವಿಭಾಗ) ಗಳನ್ನು ನಿರ್ಮಾಣ ಮಾಡುತ್ತದೆ. ಈ ಸಮುದಾಯಗಳ ಕೆಲಸ ನಿರ್ಧಾರವಾಗುತ್ತವೆ. ಕಾರ್ಯಪಾಲಿಕೆ, ನ್ಯಾಯಪಾಲಿಕೆ ಮತ್ತು ವ್ಯವಸ್ಥಾಪಿಕೆ. ಶಕ್ತಿ ಬೇರ್ಪಡಿಸುವ ಸಿದ್ಧಾಂತದ ಆಧಾರದಲ್ಲಿ ಒಂದು ಸಮುದಾಯ ಇನ್ನೊಂದು ಸಮುದಾಯದ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಹಸ್ತಕ್ಷೇಪ ಮತ್ತು ಪ್ರಭಾವ ಬೀರದಿರುವ ಕಾನೂನನ್ನು ಸರ್ವಮಾನ್ಯ ಸಿದ್ಧಾಂತದ ವ್ಯಾಖ್ಯಾನ ಮಾಡಿ ಪ್ರತಿಷ್ಠಾಪಿತ ಮಾಡಲಾಯಿತು. ಈ ನಟ್ಟಿನಲ್ಲಿ ವಿಶ್ವದಲ್ಲಿ ಪ್ರಜಾತಾಂತ್ರಿಕ ವ್ಯವಸ್ಥೆ ಸುಗಮ ರೀತಿಯಲ್ಲಿ ಸಂಚಾಲಿತವಾಗಿವೆ. ಯಾವ ದೇಶದಲ್ಲಿ ನ್ಯಾಯಪಾಲಿಕೆಯ ಮೇಲೆ ಕಾರ್ಯಪಾಲಿಕೆ ಮತ್ತು ವ್ಯವಸ್ತಾಪನೆಯ ಮೇಲೆ ಕಾರ್ಯ ಪಾಲಿಕೆಯ ರಾಜನೀತಿಕ ಹಸ್ತಕ್ಷೇಪವಾಗುತ್ತದೆ. ಆ ದೇಶದಲ್ಲಿ ಶಕ್ತಿಯ ವಿಂಗಡಿಸುವ ಸಿದ್ಧಾಂತದ ಅನುಸಾರವಾಗಿ ಕಾರ್ಯಪಾಲಿಕೆ ನ್ಯಾಯಪಾಲಿಕೆ ಮತ್ತು ವ್ಯವಸ್ಥಾಪತೆ ಸ್ವತಂತ್ರವಾಗಿರಲಾರವು. ಸರಕಾರದ ಈ ಮೂರು ಅಂಗಗಳು ಒಂದು ಇನ್ನೊಂದರ ಪ್ರಭಾವದಲ್ಲಿ ಒಂದುವೇಳೆ ಕೆಲಸ ಮಾಡಿದರೆ ಆಗ ಆ ದೇಶದಲ್ಲಿ ಪ್ರಜಾತಂತ್ರ ಯಾವತ್ತೂ ಸ್ಥಾಯಿತ್ವ ಪಡೆಯಲಾರದು. ಅರ್ಥಾತ್

ಸರಕಾರ ಅಸ್ಥಿರಗೊಳ್ಳುತ್ತದೆ. ನ್ಯಾಯಪಾಲಿಕೆ ದುರ್ಬಲಗೊಳ್ಳುತ್ತದೆ. ಮತ್ತು ಕಾನೂನು ಅಸಹಾಯವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಕಾನೂನಿ ಶಾಸನದ ಸಿದ್ಧಾಂತ ಕೆಲಸ ಮಾಡುವುದಿಲ್ಲ. ಕಾನೂನಿನ ಶಾಸನ ಸಂಚಾಲನೆಗಾಗಿ, ನಾಗರಿಕನು ಕೂಡ ಅಷ್ಟೇ ಸಮರ್ಥನಾಗಿರಬೇಕಾಗುತ್ತದೆ ಎಷ್ಟೆಂದರೆ, ಕಾನೂನು ನಾಗರಿಕನನ್ನು ನಿರ್ದೇಶಿಸಲಚ್ಛಿಸುತ್ತದೆ. ರಾಜ್ಯದಿಂದ ನಿರ್ಮಾಣ ಮಾಡುವ ಸಂದರ್ಭದಲ್ಲಿ ನಾಗರಿಕನ ಚೈತನ್ಯದ ಮಟ್ಟವನ್ನು ಪರಿಶೀಲಿಸಿ, ಕಾನೂನಿನ ನಿರ್ಮಾಣ ಮಾಡಬೇಕು. ಜನರು ಅಭ್ಯಸ್ತರಾಗದಿರುವ ಕಾನೂನನ್ನು ರಾಜ್ಯ ಜಾರಿ ಮಾಡಲಾಗುವುದಿಲ್ಲ. ಜನತೆಯ ಭಾವನೆ ಜನಾವಶ್ಯಕತೆ ಮತ್ತು ಜನ ಸ್ವಯಂಚಾಲಿತವಾಗುವಂತಹ ಕಾನೂನಿನ ನಿರ್ಮಾಣವಾಗಬೇಕಾಗಿದೆ. ಆದ್ದರಿಂದ ಕಾನೂನಿನ ಅರ್ಥವೆಂದರೆ, ಜನರ ಅವಶ್ಯಕತೆಯಾಗಿದೆ. ವ್ಯವಸ್ಥಿತ ಕಾನೂನು ಮುಖಂಡನಿಗೆ ನ್ಯಾಯ ಪ್ರದಾನ ಮಾಡಬಲ್ಲುದು. ಇಂತಹ ಕಾನೂನಿನ ವ್ಯವಸ್ಥೆಯಾದರೇನೆ ಕಾನೂನಿನನ್ವಯ ಶಾಸನ ನಡೆಯುತ್ತದೆ. ಯಾವುದೇ ದೇಶದಲ್ಲಿ ಕಾನೂನು ಮಾಡುವಲ್ಲಿ, ಆ ಕಾನೂನು ಕಾನೂನಿನ ಮಾನ್ಯತೆ ಪ್ರಾಪ್ತವಲ್ಲ, ಜನತೆಯ ಶಿಕ್ಷಣ ಆರ್ಥಿಕ ಪರಸ್ಥಿತಿ ಮತ್ತು ರಾಜನೈತಿಕ ಜಾಗೃತಿಯ ಆಧಾರದಲ್ಲಿ ಶಾಸನ ವ್ಯವಸ್ಥೆಯ ಸಂಚಾಲನೆ ಮಾಡಲು ಯೋಗ್ಯ ಕಾನೂನಿನ ನಿರ್ಮಾಣ ಮಾಡುವುದಾಗಿದೆ. ಈ ಸಿದ್ಧಾಂತದ ಆಧಾರದಲ್ಲಿ ನಿರ್ಮಿತವಾದ ಸಂವಿಧಾನ, ಸ್ಥಿರತೆ, ನಿಯಮ ಮತ್ತು ವಿನಿಮಯದ ಚೈತನ್ಯ (ಜಾಗೃತಿ)ದ ಮಟ್ಟ, ಜಾತೀಯ ಸಂಸ್ಕೃತಿ ಸಾಮಾಜಿಕ ವ್ಯವಹಾರ ಮತ್ತು ಮೌಲ್ಯ ಮಾನ್ಯತೆಯ ಆಧಾರದಲ್ಲಿ ನಿರ್ಮಿತ ಕಾನೂನಿನ ಶಾಸನ ಸಂಚಾಲನೆ ಮಾಡಬೇಕಾಗುತ್ತದೆ.

ಕಾನೂನಿನ ಶಾಸನಕ್ಕಾಗಿ ಐದು ತತ್ವಗಳ ಮಹತ್ವ ಪೂರ್ಣ ಸ್ಥಾನವಿದೆ. ಈ ತತ್ವಗಳು ತಮ್ಮಲ್ಲಿ ಸಮನ್ವಯಾತ್ಮಕ ಸಂಬಂಧ ಸ್ಥಾಪಿಸುತ್ತಾ ಒಂದು ಇನ್ನೊಂದರ ಅಧಿಕಾರ, ಸ್ವಾತಂತ್ರ್ಯ ಮತ್ತು ಸರ್ವೋಚ್ಚತೆ ಸ್ವೀಕಾರ ಮಾಡಿ, ಅದಕ್ಕನುಸಾರವಾಗಿ ವ್ಯವಹಾರ ಮಾಡಬೇಕು. ಈ ಐದು ತತ್ವಗಳು – ಸಾರ್ವಭೌಮ ಜನತೆ, ಸಂವಿದಾನ, ಕಾರ್ಯಪಾಲಿಕೆ ನ್ಯಾಯಪಾಲಿಕೆ, ಪೂರ್ಣ ರೂಪದಲ್ಲಿ ಸಂಬಂಧಿತವಾದರೂ ಕೂಡ ಇವುಗಳ ಅಸ್ತಿತ್ವ ಬೇರೆ ವ್ಯವಸ್ಥಾಪನೆ ಬೇರೆ ರೂಪದಲ್ಲಿ ಸ್ಥಾಪಿತವಾಗುತ್ತದೆ.

ಇದನ್ನು ಈ ಕೆಳಗಿನ ಚಿತ್ರದಲ್ಲಿ ನೋಡಬಹುದಾಗಿದೆ.




ಇದನ್ನು ಕ್ರಮಬದ್ಧವಾಗಿ ನೋಡಿದಾಗ, ತಿಳಿದು ಬರುವುದು. ಇದು ಒಂದು ಬಿಂದುವಿನಿಂದ ಎರಡನೇ ಬಿಂದುವಿನವರೆಗೆ ಕ್ರಮಶಃ ಜೋಡಿಸಲ್ಪಟ್ಟಿವೆ. ಸಾರ್ವಭೌಮ ಜನತೆ, ವ್ಯವಸ್ಥಾಪನೆ ಕಾರ್ಯಪಾಲಿಕೆ ಸಂವಿಧಾನ ಮತ್ತು ನ್ಯಾಯಪಾಲಿಕೆ. ಹೀಗೆ ಒಂದು ತಮ್ಮೊಳಗೆ ಪೂರ್ಣರೂಪದಲ್ಲಿ ಸಂಬಂಧಿತವಾಗಿದ್ದರೂ, ಕೂಡ ತನ್ನ ಪ್ರತ್ಯೇಕ ಅಸ್ತಿತ್ವ (ಬಿಂದು) ಸ್ಥಾಪಿಸಿ ಅವುಗಳ ಸ್ವತಂತ್ರ ಅಸ್ತಿತ್ವವು ಕೂಡ ಸ್ಥಾಪಿತವಾಗುತ್ತದೆ. ಬಿಂದುವಿನಿಂದ ಪ್ರಾರಂಭವಾಗಿ ಜನತೆಯ ರೇಖೆ ಜನತೆಯಲ್ಲೇ ಬಂದು ಕೊನೆಗೊಳ್ಳುವುದರಿಂದ ಒಂದು ನಕ್ಷತ್ರ (ತಾರೆ) ದ ನಿರ್ಮಾಣವಾಗುತ್ತದೆ. ಅದು ಕಾನೂನಿನ ಶಾಸನದ ನಕ್ಷತ್ರವೆಂದು ಹೇಳಬಹುದಾಗಿದೆ.

### 3. ಸ್ಥಳೀಯ ಸ್ವತಂತ್ರ ಶಾಸನ [Local self Governance ]

ಯಾವುದೇ ರಾಜ್ಯದ ಶಾಸನ ವ್ಯವಸ್ಥೆಯಲ್ಲಿ ಜನತೆಯ ಸಕ್ರಿಯತೆ ಇಲ್ಲದಿರುವವರೆಗೆ ಪ್ರಜಾತಾಂತ್ರಿಕ ಶಾಸನ ವ್ಯವಸ್ಥೆ ಸಫಲವಾಗಲಾರದು. ಸ್ಥಳಿಯ ಜನತೆಯ ಸಹಭಾಗಿತ್ವ ಮತ್ತು ಸಹಮತಿಯಲ್ಲಿ ಸ್ಥಳಿಯ ಸಾಧನ ಸಂಪನ್ಮೂಲಗಳ ಪರಿಚಾಲನೆ (ಬಳಸುತ್ತಾ) ಸ್ಥಳಿಯ ಸಮಸ್ಯೆಗಳ ಸಮಾಧಾನಕ್ಕಾಗಿ ಸ್ಥಾನೀಯ ಸಮುದಾಯದವರನ್ನು ಅಧಿಕಾರ ಸಂಪನ್ನರಾಗಿಸುವುದೇ ಸ್ಥಾನೀಯ ಸ್ವಾಯತ್ತ ಶಾಸನಾಗಿದೆ. ಸ್ಥಳೀಯ ಮಟ್ಟದಲ್ಲಿ ರಾಜ್ಯವ್ಯವಸ್ಥೆಯನ್ನು ಮಾಡುವ ಸಂಪೂರ್ಣ ಕಾರ್ಯ ಕೇಂದ್ರಿಯ ಮಟ್ಟದಿಂದ ಸಾಧ್ಯವಾಗದ ಕಾರಣ ಸ್ಥಳಿಯ ಸಮಸ್ಯೆ ಇದ್ದ ಹಾಗೇ ಇರುತ್ತದೆ. ಇಲ್ಲಿ ವಿಕಾಸದ ಅವಶ್ಯಕತೆ ಇದೆ ಮತ್ತು ಇದನ್ನು ಯೋಜನೆಯ

ಸಂಚಾಲಕತ್ವದಿಂದ ಸ್ಥಳಿಯ ಜನರನ್ನು ಸಂಸ್ಥೆಯ ರೂಪದಲ್ಲಿ ಸಂಘಟಿಸಿ, ಸ್ಥಳಿಯ ನೆಲೆಯ ನಾಲ್ಕು ಕಡೆಗಳಿಂದ ವಿಕಾಸ ಮಾಡುವುದಕ್ಕಾಗಿ ಸ್ಥಾನೀಯ ಸ್ವಾಯತ್ತ ಶಾಸನದ ಅವಶ್ಯಕತೆ ಇದೆ.

ರಾಜ್ಯ ವ್ಯವಸ್ಥೆಯ ಕೇಂದ್ರಿಯ ಹಂತದಲ್ಲಿ ಯಾವುದೇ ಆಡಳಿತಾತ್ಮಕ ಅಧಿಕಾರದ ಸ್ವರೂಪವಿದ್ದರೂ ಕೆಳಹಂತದ ಊರು ಹಾಗೂ ನಗರಗಳ ವಿಕಾಸ ಮಾಡುವ ಮತ್ತು ಅಲ್ಲಿ ನೆಲೆಸಿರುವ ಜನರ ಜೀವನ ಮಟ್ಟವನ್ನು ಮೇಲೇರಿಸುವುದಕ್ಕಾಗಿ ಸ್ಥಾನೀಯ ಸ್ವಾಯುತ್ತ ಶಾಸನದ ಪದ್ಧತಿ ಸ್ಥಾಪಿತವಾಗಬೇಕು. ಇಂತಹ ಸ್ಥಾನೀಯ ಸ್ವಾಯತ್ತ ಸಮುದಾಯಗಳ ಶಕ್ತಿ ವಿಕೇಂದ್ರಿಕರಣದ ಸಿದ್ಧಾಂತದಕ್ಕನುಸಾರವಾಗಿ ಅವಶ್ಯಕವಾದ ಎಲ್ಲಾ ಶಕ್ತಿ ಸ್ಥಾನಯವಾಗಿ ಸಂಚಾಲಿಸುವ ವ್ಯವಸ್ಥೆ ಮಾಡಬೇಕಿದೆ. ಆಗ ಮಾತ್ರ ಸ್ಥಾನಿಯ ಸ್ವಾಯತ್ತ ಶಾಸನ ಸಂಚಾಲಿತವಾಗಬಹುದು. ಯಾವುದೇ ರಾಜ್ಯದಲ್ಲಿ ಸ್ಥಳೀಯ ಸಮುದಾಯ ಎಂದಿನವರೆಗೆ ಬಲಿಷ್ಠ ಮತ್ತು ಸಮರ್ಥವಾಗುವುದಿಲ್ಲವೋ ಅಷ್ಟರವರೆಗೆ ಸ್ಥಳೀಯ ಮಟ್ಟ ವಿಕಾಸವಾಗಲಾರದು. ಪ್ರಜಾತಂತ್ರದ ಜಗತ್ತು ಇರುವುದೇ ಸ್ಥಳಿಯ ಸಮುದಾಯದಲ್ಲಿ ವಾಸ್ತವವಾಗಿ ಕೇಂದ್ರದ ತಡೆ ಹಾಗೂ ತೊಂದರೆಯ ಹೊರತಾಗಿ, ಸ್ಥಳೀಯ ಸ್ವಾಯತ್ತ ಶಾಸನ ಸಂಚಾಲಿತವಾಗುವುದರಿಂದ ಪ್ರಜಾತಾಂತ್ರಿಕ ವ್ಯವಸ್ಥೆ ಸಫಲವಾಗುವುದೆಂದು ಒಪ್ಪಿತವಾಗಿದೆ.

### 4. ಶಾಸನದಲ್ಲಿ (ಆಡಳಿತದಲ್ಲಿ) ಪಾರದರ್ಶಕತೆ (Transparency)

ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ದೀರ್ಘ ಸಮಯದವರೆಗೆ (ದೀರ್ಘಾವಧಿ) ಸಂಚಾಲನೆ ಮಾಡುವುದಕ್ಕಾಗಿ ಪಾರದರ್ಶಕತೆಯ ಸಿದ್ಧಾಂತವನ್ನು ರಾಜ್ಯವು ಸ್ವೀಕಾರ ಮಾಡಬೇಕಾಗಿದೆ. ಯಾವ ರಾಜ್ಯವ್ಯವಸ್ಥೆಯಲ್ಲಿ ಶಾಸನ ಸಂಚಾಲನೆಯ ಪದ್ಧತಿಯಲ್ಲಿ ಪಾರದರ್ಶಕತೆ ಸ್ಥಾಪಿತವಾಗಿರುವುದಿಲ್ಲವೋ ಅಲ್ಲಿ ವಿಕೃತಿ ಮತ್ತು ವಿಸಂಗತಿ (ಕುವಿಚಾರ) ಹರಡುವ ಕಾರಣದಿಂದಾಗಿ ಭ್ರಷ್ಟಚಾರಕ್ಕೆ ಹರಡುವ ಅವಕಾಶವಾಗುತ್ತದೆ. ಭ್ರಷ್ಟಚಾರದ ಕಾರಣದಿಂದಾಗಿ ಶಾಸನ ವ್ಯವಸ್ಥೆಯಲ್ಲಿ ತೊಡಗಿರುವ ವ್ಯಕ್ತಿ, ಸಮುದಾಯ ಅಥವಾ ಸಮೂಹ ನಿರಂಕುಶ ಮತ್ತು ಸ್ವೇಚ್ಛಾಚಾರಿಗಳಾಗಿ ಸರ್ವಾಧಿಕಾರಿಗಳಾಗುತ್ತಾರೆ. ಈ ಪ್ರವೃತ್ತಿ ಪ್ರಜಾತಾಂತ್ರಿಕ ವ್ಯವಸ್ಥೆಯ ಶತ್ರುವಾಗಿದೆ.

ಪಾರದರ್ಶಕತೆಯ ಅರ್ಥ, ರಾಜ್ಯ ವ್ಯವಸ್ಥೆಯ ಎಲ್ಲಾ ನೀತಿ ನಿಯಮ, ಪರಂಪರಾಗತ, ಸಂಸ್ಕೃತಿ, ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಸ್ವಾಧೀನತೆ ರಾಷ್ಟ್ರೀಯ ಸುರಕ್ಷತೆಗಾಗಿ ಸ್ಥಾಪನೆಗೊಳ್ಳುವ ವಿಷಯದಲಿ ನೀತಿಯ ಸ್ಥಾಪನೆಯಾಗಬೇಕು.

ಹೇಗೆ ಮನುಷ್ಯ ಶರೀರ ಬಹಿರಂಗಕ್ಕೆ ತೋರ್ಪಡುವ (ಪ್ರದರ್ಶನ ) ಸಂದರ್ಭದಲ್ಲಿ ಮುಚ್ಚಲ್ಪಡಬೇಕಾದ ಅಂಗಗಳನ್ನು ಮುಚ್ಚಿ ಪ್ರದರ್ಶಿಸುತ್ತಾನೋ, ಅದೇ ರೀತಿ ರಾಜ್ಯದ ಮೂಲ ನೀತಿ ಹಾಗೂ ಸಿದ್ಧಾಂತದೊಂದಿಗೆ ಸ್ವಾಧೀನತೆ ಮತ್ತು ರಾಷ್ಟ್ರೀಯ ಸುರಕ್ಷೆಯಲ್ಲಿ ಯಾವುದೇ ಬಾಧೆಯುಂಟಾಗಬಾರದು. ಇಂತಹ ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆಯ ಸಿದ್ಧಾಂತವನ್ನು ರಾಜ್ಯವು ಅವಲಂಬಿಸಬೇಕಾಗುತ್ತದೆ.

ರಾಜ್ಯಾಡಳಿತದ ಹೊಣೆ ಹೊತ್ತ ಸರಕಾರ ನಾಗರಿಕರ ಹಿತ ಮತ್ತು ಕಲ್ಯಾಣಕ್ಕಾಗಿ, ಯಾವ ಯಾವ ಯೋಜನೆಗಳನ್ನು ಮಾಡಿದೆ ಮತ್ತು ಹೇಗೆ ಸಂಚಾಲನೆ ಮಾಡಿದೆ, ಇದರ ಮಾಹಿತಿಯನ್ನು ಪಡೆಯುವ ಅಧಿಕಾರ ಎಲ್ಲಾ ನಾಗರಿಕರದ್ದಾಗಿರುತ್ತದೆ. ಪಾರದರ್ಶಕತೆಯ ಸಿದ್ಧಾಂತಕ್ಕನುಸಾರವಾಗಿ ರಾಜನೈತಿಕ ಮುಂತಾದ ರಾಜ್ಯ ವ್ಯವಸ್ಥೆಯ ಯಾರಾದರೂ ಸಾರ್ವಜನಿಕ ಪಾತ್ರವಾಗಿ ಕಾರ್ಯ ಮಾಡುವವರು, ಪದಾಧಿಕಾರಿಗಳಿಂದ ಮಾಡಲ್ಪಟ್ಟ ಯಾವುದೇ ನಿರ್ಣಯ ಹಾಗೂ ಕಾರ್ಯಸಂಬಂಧಿತವಾದ ಸಾರ್ವಜನಿಕ ವಿಚಾರ ವಿಮರ್ಶೆ ಮತ್ತು ಶೋಧ ಪರಿಶೋಧ ಮಾಡಬಹುದಾಗಿದೆ. ಈ ರೀತಿಯಲ್ಲಿ ಪಾರದರ್ಶಕ ಮಾನ್ಯತೆಯನ್ನು ರಕ್ಷಿಸಲ್ಪಡುವ ಪದ್ಧತಿಯ ವಿಕಾಸವಾಗುವುದರಿಂದ ಸಾರ್ವಜನಿಕ ಹಿತದಲ್ಲಿ ನಿರತ ವ್ಯಕ್ತಿ ಸಮೂಹ ಮತ್ತು ಸಮುದಾಯಗಳ ನಡುವೆ ತಿಳುವಳಿಕೆ ( ಮಾಹಿತಿ ) ಹಾಗೂ ದಾಯಿತ್ವ ( ಹೊಣೆ ) ದ ಆದಾನ ಪ್ರದಾನವಾಗುವಂತಹ ವಾತಾವರಣದ ಸೃಷ್ಟಿಯಾಗುತ್ತದೆ. ಪ್ರಜಾತಾಂತ್ರಿಕ ಶಾಸನ ಪದ್ಧತಿಯಲ್ಲಿ ಪಾರದರ್ಶಕತೆ ಸ್ಥಿರಗೊಳಿಸುವುದು ಜನತೆಯ ಪ್ರಕೃತಿದತ್ತ ಅಧಿಕಾರವಾಗಿದೆ. ಜನಪ್ರತಿನಿಧಿಗಳ ರೂಪದಲ್ಲಿ ಸ್ಥಾಪಿತ ಸರಕಾರ, ಸರಿಯಾದ ರೀತಿಯಲ್ಲಿ ಕೆಲಸ ಮಾಡಿದೆಯೇ ಇಲ್ಲವೇ ರಾಜ್ಯ ಮತ್ತು ಜನತೆಯ ಹಿತಕ್ಕಾಗಿ ನೀತಿ ಮತ್ತು ಕಾರ್ಯಕ್ರಮಗಳನ್ನು ನೆರವೇರಿಸಿದೆಯೋ, ಇಲ್ಲವೋ ಮತ್ತು ಸಾರ್ವಜನಿಕ ಪದಾಧಿಕಾರಿಗಳ ಮೂಲಕ ಜವಾಬ್ದಾರಿಯುತ ಕಾರ್ಯಗಳು ಆಗಿವೆಯೇ ಇಲ್ಲವೇ ಈ ಎಲ್ಲಾ ವಿಚಾರಗಳನ್ನು ಪಾರದರ್ಶಕ ವ್ಯವಹಾರದಿಂದ ತಿಳಿಯಬಹುದಾಗಿದೆ. ಸಂಕ್ಷೇಪವಾಗಿ ಹೇಳುವುದಾದರೆ, ಪಾರದರ್ಶಕತೆ ಒಂದು ಮುಕ್ತ ಸಮಾಜದ ಚಿತ್ರವಾಗಿದೆ. ಅಲ್ಲಿ ಯಾವುದೇ ಸಾರ್ವಜನಿಕ ಕ್ಷೇತ್ರದಲ್ಲಿ ಕ್ರಿಯಾಶೀಲ ವ್ಯಕ್ತಿ, ಸಮುದಾಯ ಹಾಗೂ ಸಮೂಹದ ವ್ಯವಹಾರ ಆಚರಣೆ ಮತ್ತು ಕ್ರಿಯಾಕಲಾಪಗಳನ್ನು ಸರ್ವಸಾಧಾರಣವಾಗಿ ಎಲ್ಲರೂ ನರೀಕ್ಷಣೆ ಮತ್ತು ಪರಿಕ್ಷಣೆ (ವೀಕ್ಷಣೆ – ಪರೀಕ್ಷಣೆ) ಮಾಡಬಹುದಾಗಿದೆ.

ಪಾರದರ್ಶಕ ರಾಜನೀತಿಯ ವ್ಯವಸ್ಥೆಯಲ್ಲಿ ನಾಗರಿಕರಿಗೆ ಸಾರ್ವಜನಿಕ ನಿರ್ಮಾಣದ ವಿಷಯದಲ್ಲಿ ಸಾಕಷ್ಟು ಮಾಹಿತಿ ದೊರೆಯುತ್ತದೆ. ಸರಕಾರದ ಪ್ರತಿಯೊಂದು ಕ್ರಿಯಾಕಲಾಪಗಳ ಮಾಹಿತಿ ನಾಗರಿಕನಿಗಿರಬೇಕು. ನಾಗರಿಕರ ಹಿತಕ್ಕಾಗಿ ಕೈಗೊಳ್ಳುವ ಯಾವುದೇ ವಿಷಯವನ್ನು ಸರಕಾರ ಗೌಪ್ಯವಾಗಿಡಬಾರದು. ರಾಜ್ಯವ್ಯವಸ್ಥೆಯಲ್ಲಿ ಅಧಿಕಾರ ಪ್ರಯೋಗ ಮಾಡುವ ವ್ಯಕ್ತಿ ಹಾಗೂ ಸಮುದಾಯ ತಮ್ಮ ಕೆಲಸ ಕಾರ್ಯ ವಿಧಾನ ಸುಯೋಗ್ಯ ರೀತಿಯಿಂದ ನಿರ್ದೇಶಿಸುವಕ್ಕಾಗಿ ನಿಯಮಬದ್ಧಗೊಳಿಸುವುದಕ್ಕಾಗಿ ಮತ್ತು ನಿಯಂತ್ರಿಸುವುದಕ್ಕಾಗಿ ಕಾರ್ಯ ಮಾಡುತ್ತಾನೆ. ಇಂತಹ ಕಾರ್ಯದಲ್ಲಿ ನಿರತರಾಗುವವರಿಗೆ ವಿಧಾನ ಸಂಬಂಧಿತ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಯ ಸಿದ್ಧಾಂತದ ಪರಿಪಾಲನೆ ಮಾಡಿ, ಕಾರ್ಯಕಲಾಪವನ್ನು ಮುಂದುವರಿಸಬೇಕಾಗಿ ಬರುತ್ತದೆ.

ಸಾರ್ವಜನಿಕ ಸಂಬಂಧಿತ ಸಮೂಹದ ನಿರ್ಣಯ ಪ್ರಕ್ರಿಯೆ, ಪಾರದರ್ಶಕ ಹಾಗೂ ಪರಿಶೀಲನೆಗೆ ಮುಕ್ತವಾಗಿರಬೇಕು. ಯಾವುದೇ ಮಹತ್ವಪೂರ್ಣ ವಿಷಯದಲ್ಲಿ ನಿರ್ಣಯ ತೆಗೆದುಕೊಳ್ಳುವುದಕ್ಕಾಗಿ, ಸಹಭಾಗಿತ್ವವು ಮುಕ್ತವಾಗಿದ್ದು, ರಾಷ್ಟ್ರೀಯ ಮತ್ತು ಸ್ಥಾನಯ ಹಂತದಲ್ಲಿ ನಾಗರಿಕ ಸಮಾಜದ ಅಧಿಕಾಧಿಕವಾಗಿ ತೊಡಗಿಕೊಳ್ಳುವಿಕೆಯ ವಾತಾವರಣ ನಿರ್ಮಾಣ ಮಾಡಬೇಕು. ಇದರೊಂದಿಗೆ ಪಾರದರ್ಶಕತೆಯನ್ನು ಸುದೃಢಗೊಳಿಸುವುಕ್ಕಾಗಿ ಸೂಚನೆ – ಪ್ರವಾಹ ಪದ್ಧತಿಯ ವಿಕಾಸ ಮಾಡಿ ಜನಸಾಮಾನ್ಯರಲ್ಲಿ ಸ್ವತಃ ತಾನೂ ಸಹಭಾಗಿ ಎಂಬ ಭಾವನೆಯ ವಿಕಾಸವನ್ನುಂಟು ಮಾಡಬೇಕು. ಇಷ್ಟಾದಾಗ ಪಾರದರ್ಶಿ ಸಿದ್ಧಾಂತದ ಅವಲಂಬನೆಯಾಗಿದೆ ಎಂದು ತಿಳಿಯಬಹುದಾಗಿದೆ. ಒಂದು ವೇಳೆ ಹೀಗೆ ಆಗಿದ್ದೆ ಆದರೆ ಭ್ರಷ್ಟಾಚಾರ ನಡೆಯುವ ಸಂಭಾವ್ಯತೆ ಬಹಳಷ್ಟು ಕಡಿಮೆಯಾಗುತ್ತದೆ.

### 5. ಮಾಹಿತಿ ಹಕ್ಕು – [Right to Information ]

ಮಾಹಿತಿ ಹಕ್ಕು ಅರ್ಥಾತ್ ಕಾರ್ಯ– ಕಲಾಪಗಳು ಯೋಜನೆಗಳ ಬಗ್ಗೆ ತಿಳಿದುಕೊಳ್ಳುವುದು, ವರ್ತಮಾನ ಪ್ರಜಾತಾಂತ್ರಿಕ ಯುಗವು ಮಾಹಿತಿಯ ಯುಗವಾಗಿದೆ. ವ್ಯಕ್ತಿ, ಸಮುದಾಯ ಮತ್ತು ರಾಷ್ಟ್ರದ ವಿಕಾಸ ಮಾಡುವುದಕ್ಕಾಗಿ ಮಾಹಿತಿ – ಕಾರ್ಯವ್ಯವಸ್ಥೆಯ ಜ್ಞಾನ ಅತ್ಯಂತ ಮಹತ್ವದ್ದಾಗಿದೆ. ಮಾಹಿತಿ ಜ್ಞಾನಕ್ಕಿಂತ ಬಲವಾದ ವಿಚಾರ ಬೇರೊಂದಿಲ್ಲ. ದೇಶದ ಸಾಮಾಜಿಕ, ಆರ್ಥಿಕ, ರಾಜನೈತಿಕ ನೀತಿ ನಿರ್ಮಾಣದ ಜೊತೆಯಲ್ಲೇ ವ್ಯಕ್ತಿ ಮತ್ತು ಸಮುದಾಯದ ಹಕ್ಕು ಮತ್ತು ಸ್ವಾತಂತ್ರ್ಯದ ವಚನ ಬದ್ಧತೆಗಾಗಿ ಮಾಹಿತಿ ಬೇಕು. ಮಾಹಿತಿಯಿಂದ ವ್ಯಕ್ತಿ ಮತ್ತು ಸಮುದಾಯದ ಮಾನಸಿಕ ಸ್ವಾಸ್ಥ್ಯವನ್ನು ಬಲಗೊಳಿಸಿ, ಅವರ

ಕಾರ್ಯ ಕ್ಷಮತೆ (ಸಾಮರ್ಥ್ಯ) ಹೆಚ್ಚಿಸಿ, ಸಶಕ್ತಿಕರಣ ಮಾಡುವಲ್ಲಿ ಸಹಾಯಕವಾಗಿ ಪ್ರಜಾತಾಂತ್ರಿಕ ಅಭ್ಯಾಸವನ್ನು ಸಮಾಜದಲ್ಲಿ ಸ್ಥಾಪಿತಗೊಳಿಸಬಹುದಾಗಿದೆ.

ಮಾಹಿತಿ ಹಕ್ಕುಗಳ ಮಹತ್ವವನ್ನರಿತು ವರ್ತಮಾನ ಸಮಯದಲ್ಲಿ ಪ್ರಜಾತಾಂತ್ರಿಕ ದೇಶಗಳು ಈ ಸಿದ್ಧಾಂತವನ್ನು ಸ್ವೀಕರಿಸಿವೆ. ಇದು ಅತ್ಯಂತ ಅವಶ್ಯಕವೂ ಕೂಡ ಆಗಿದೆ. ಪ್ರತಿಪಾದಿಸಲ್ಪಟ್ಟ ಪ್ರಜಾತಾಂತ್ರಿಕ ಪದ್ಧತಿಯ ವ್ಯವಸ್ಥೆಯಲ್ಲಿ ಸರಕಾರ ನಿಯಮ ಬದ್ಧವಾಗಿರುತ್ತದೆ. ಸರಕಾರದ ನಿಯಮ ಬದ್ಧತೆ ಜನರ ಸಹಮತ ಮತ್ತು ಸಮರ್ಥನೆಯಲ್ಲಿ ಸ್ಥಾಪಿತವಾಗುತ್ತದೆ. ಜನರ ಸಹಭಾಗಿತ್ವವನ್ನು ಒಟ್ಟುಗೂಡಿಸಲು, ಜನರ ಮೂಲಕ ಜನರ ವಿಚಾರವನ್ನು ವ್ಯಕ್ತ ಪಡಿಸುವ. ಜನರ ಸಹಮತಿ (ಒಪ್ಪಿಗೆ) ಸ್ಥಿರಗೊಳಿಸುವ ವಿಧಾನವು, ಜನರು ಎಷ್ಟು ಪಾಲ್ಗೊಂಡಿದ್ದಾರೆಂಬ ಸ್ಥಿತಿಯನ್ನು ನಿರ್ಧರಿಸುತ್ತದೆ. ಆದ್ದರಿಂದ ಪ್ರಜಾತಂತ್ರ, ಜನತೆ ಮತ್ತು ಸರಕಾರಿ ಕ್ರಿಯಾಕಲಾಪಗಳ ಒಂದು ತಮ್ಮೊಳಗೆ ಸಂಬಂಧ ಸ್ಥಿರಗೊಳಿಸುವ ಮಾಧ್ಯಮದ ರೂಪದಲ್ಲಿ ಮಾಹಿತಿ ಹಕ್ಕು ಸ್ಥಾಪಿತವಾಗಿದೆ.

ಮಾಹಿತಿಯನ್ನು ಎರಡು ಭಾಗಗಳಲ್ಲಿ ಹಂಚಿ ನೋಡಬಹುದಾಗಿದೆ.

**1. ಸಕ್ರಿಯ ಪ್ರಕಾಶನ ( ಪ್ರಕಟಣೆ )**

**2. ನಿಷ್ಕ್ರಿಯ ಪ್ರಕಾಶನ (ಪ್ರಕಟಣೆ )**

ಮಾಹಿತಿಯನ್ನು ಪಡೆಯಲಿರುವ ವ್ಯಕ್ತಿ ಅಥವಾ ಸಮೂಹದ ಮೂಲಕ ಬೇಡಿಕೆ ಇಲ್ಲದೆಯೇ ಮಾಹಿತಿಯನ್ನು ಪಡೆಯುವ ರೀತಿಯನ್ನು ಸಕ್ರಿಯ ಪ್ರಕಟಣೆ ಎನ್ನುತ್ತಾರೆ ಮತ್ತು ಬೇಡಿಕೆ ಇಟ್ಟು ಮಾಹಿತಿ ಪಡೆಯುವ ರೀತಿಯನ್ನು ನಿಷ್ಕ್ರಿಯ ಪ್ರಕಟಣೆ ಎನ್ನುತ್ತಾರೆ. ಮಾಹಿತಿಯ ಪ್ರಕಟಣೆ ಮತ್ತು ಮಾಹಿತಿಯ ಹಕ್ಕನ್ನು ಸಂಪೂರ್ಣವಾದ ಸ್ಥಾಪಿತ ಸ್ಥಿತಿಯನ್ನು ತಿಳಿದುಕೊಳ್ಳಬೇಕಾಗಿದೆ. ಅದು ಪ್ರಜಾತಾಂತ್ರಿಕ ಉತ್ತರದಾಯಿತ್ವದಲ್ಲಿ ಮತ್ತು ಪ್ರಭಾವಕಾರಿಯಾಗಿರುತ್ತದೆ. ರಾಜ್ಯ ವ್ಯವಸ್ಥೆಯಲ್ಲಿ ಕ್ರಿಯಾಶೀಲ ವ್ಯಕ್ತಿ, ಸಮೂಹ ಮತ್ತು ಸರಕಾರದಿಂದ ಮಾಹಿತಿಯ ಅಪೇಕ್ಷೆ ಹೊಂದಿರುತ್ತಾರೆ. ಆದರೆ, ಈ ರೀತಿ ಅಪೇಕ್ಷಿತ ಮಾಹಿತಿ ಪಡೆಯಬಯಸುವ ಸಂಬಂಧವಾಗಿ ವಿಚಾರ ಮಾಡಿದಾಗ ಮಾಹಿತಿಯ ಹಕ್ಕು ಕೇವಲ ಸಾರ್ವಜನಿಕ ಮಹತ್ವದ ಮಾಹಿತಿಯೊಂದಿಗೆ ಸಂಬಂಧಿತವಾಗಿರಬೇಕಾಗುತ್ತದೆ. ಯಾವುದೇ ಸಾರ್ವಜನಿಕ ಮಹತ್ವದ ಮಾಹಿತಿಯನ್ನು ಮರೆಮಾಡಲಾರದು. (ಅಡಗಿಸುವಂತಿಲ್ಲ) ಇಂತಹ ಮಾಹಿತಿ, ಸಕ್ರಿಯ ಪ್ರಕಟಣೆಯ ರೂಪದಲ್ಲಿ, ಪ್ರಕಟಿತವಾಗುವ ವಾತಾವರಣ ಮಾಹಿತಿ, ಹಕ್ಕಿನಲ್ಲಿ ಸ್ಥಾಪಿತವಾಗುತ್ತದೆ.

## 6. ಸಾರ್ವಜನಿಕ ಹೊಣೆಗಾರಿಕೆ ( Public Accountability )

ವರ್ತಮಾನ ಯುಗದಲ್ಲಿ ವಿಶ್ವದ ಎಲ್ಲಾ ರಾಷ್ಟ್ರಗಳು, ಪ್ರಜಾತಾಂತ್ರಿಕ ವ್ಯವಸ್ಥೆಗಳ ಮಾಧ್ಯಮದಿಂದ ರಾಷ್ಟ್ರವ್ಯವಸ್ಥೆಯ ಸಂಚಾಲನೆಯನ್ನು ಮಾಡಿವೆ. ಯಾವ ಯಾವ ದೇಶದಲ್ಲಿ ಪ್ರಜಾತಾಂತ್ರಕ ವ್ಯವಸ್ಥೆಯು ಇದೆಯೋ, ಆ ಎಲ್ಲಾ ದೇಶಗಳಲ್ಲಿ ಶೀಘ್ರವೇ ಸಾರ್ವಜನಿಕ ಉತ್ತರದಾಯಿತ್ವದ ಸಿದ್ಧಾಂತದ ಅನುಸಾರವಾಗಿ ರಾಜ್ಯ ವ್ಯವಸ್ಥೆ ಸ್ಥಾಪಿತವಾಗಿದೆ. ಸಾರ್ವಜನಿಕ ಹೊಣೆಗಾರಿಕೆಯಿಂದಲೇ ಒಳ್ಳೆಯ ಶಾಸನ ಸ್ಥಾಪಿತವಾಗುತ್ತದೆ. ಸರಕಾರ ನಾಗರಿಕರ ಕುರಿತು ಸಂವೇದನಶೀಲವಾಗಿದ್ದಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ರಾಜನೈತಿಕ ಸಂಸ್ಕಾರಗಳು ಪರಿಮಾರ್ಜಿತವಾಗುತ್ತವೆ. ಸಾರ್ವಜನಿಕ ಉತ್ತರದಾಯಿತ್ವ (ಹೊಣೆ) ಎಷ್ಟು ಪ್ರಭಾವಕಾರಿಯಾಗಿ ಜಾರಿಯಾಗುತ್ತದೋ, ಅಷ್ಟೇ ಆ ದೇಶದಲ್ಲಿ ಪ್ರಜಾತಾಂತ್ರವು ಸಂಸ್ಥಾಗತವಾಗಿದೆ ಮತ್ತು ನಾಗರಿಕರ ಕುರಿತಾದ ಸರಕಾರಿ ಹೊಣೆ ಹೊತ್ತವರು, ದೇಶದಲ್ಲಿ ಸಾರ್ವಜನಿಕ ಹೊಣೆಯ ವಿಷಯದಲ್ಲಿ ಸರಕಾರವು ಸಂವೇದನಶೀಲವಾಗಬೇಕಾಗುತ್ತದೆ. ಇದರೊಂದಿಗೆ ನಾಗರಿಕರು ಕೂಡ ಅಷ್ಟೇ ಜಿಜ್ಞಾಸುಗಳಾಗಿ (ಸೂಕ್ಷ್ಮವಾಗಿ ಅರಿತುಕೊಳ್ಳುವವರಾಗಿ) ಸರಕಾರದ ಪ್ರತಿಯೊಂದು ಕ್ರಿಯಾ ಕಲಾಪಗಳಲ್ಲಿ ಸಹಭಾಗಿಗಳಾಗಬೇಕು.

ಸಾರ್ವಜನಿಕ ಉತ್ತರದಾಯಿತ್ವ ಅಂದರೆ ಸಾರ್ವಜನಿಕ ಕ್ಷೇತ್ರದಲ್ಲಿ ಪಡೆದುಕೊಂಡು ಅಧಿಕಾರ, ಕಾರ್ಯ–ಕರ್ತವ್ಯ ಮತ್ತು ಹೊಣೆ ಇತ್ಯಾದಿಗಳನ್ನು ಕೂಡ, ಪಾಲಿಸುವುದು ಅಥವಾ ಪಾಲಿಸದೇ ಇರುವುದರ ಸ್ಥಿತಿ. ಹೀಗೆ ಉತ್ತರಿಸುವ ಅನಿವಾರ್ಯ ವ್ಯವಸ್ಥೆಯಲ್ಲಿ ಸಾರ್ವಜನಿಕ ಹೊಣೆಯ ಸರಿಯಾದ ವ್ಯವಸ್ಥೆ ಜಾರಿಯಾಗಬೇಕೆಂಬುದನ್ನು ತಿಳಿಯಬಹುದಾಗಿದೆ. ಈ ವ್ಯವಸ್ಥೆಯಲ್ಲಿ ಸಾರ್ವಜನಿಕ ಪದಗ್ರಹಣ ಮಾಡುವ ಅಥವಾ ಅಧಿಕಾರ ಪಡೆದ ವ್ಯಕ್ತಿ, ಸಮೂಹ ಅಥವಾ ಸಂಘಟನೆ ಸಂಪೂರ್ಣ ರೀತಿಯಲ್ಲಿ ದೇಶ ರಾಜ್ಯ ಮತ್ತು ಜನತೆಯ ಕುರಿತಾದ ತಮ್ಮ ಹೊಣೆಗಾರಿಕೆಯನ್ನು ಅರಿತುಕೊಳ್ಳಗಬೇಕಾಗಿದೆ. ಸಾರ್ವಜನಿಕ ಜವಾಬ್ದಾರಿಯುಳ್ಳವರು ಅಥವಾ ಯಾವುದೇ ಶಕ್ತಿ ಕೇಂದ್ರದಲ್ಲಿ ಸ್ಥಾನ ಪಡೆದ ವ್ಯಕ್ತಿ ಒಂದು ವೇಳೆ ಸಾರ್ವಜನಿಕವಾದ ಹೊಣೆಯ ನಿರ್ವಹಣೆ ಮಾಡದಿದ್ದಲ್ಲಿ ಅವರ ಅಧಿಕಾರ ಮತ್ತು ಹುದ್ದೆ (ಸ್ಥಾನ) ದುರುಪಯೋಗವಾಗುತ್ತದೆ ಮತ್ತು ಭ್ರಷ್ಟಾಚಾರದ ಸಂಭವ ಅಧಿಕವಾಗುತ್ತದೆ. ಇದರ ಹೊರತಾಗಿಯೂ ಪ್ರಜಾತಾಂತ್ರಿಕ ದೇಶಗಳಲ್ಲಿ ಸಾರ್ವಜನಿಕ ಹೊಣೆಯ ಮಹತ್ವ ಹೆಚ್ಚಿದೆ. ಸಾರ್ವಜನಿಕ ದಾಯಿತ್ವದ ವಿಷಯದಲ್ಲಿ ವಿಚಾರ ಮಾಡಿದಾಗ, (ಕ) ಸಾರ್ವಜನಿಕದಾಯಿತ್ವದ ವಿಧಾನ

ಮತ್ತು (ಖ) ರಾಜ್ಯದ ವಿಭಿನ್ನ ಸಮುದಾಯಗಳಲ್ಲಿ ಸಾರ್ವಜನಿಕ ಉತ್ತರದಾಯಿತ್ವದ ವಿಷಯದಲ್ಲಿ ವಿಚಾರ ಮಾಡಬೇಕಾಗುತ್ತದೆ.

**ಕ) ಸಾರ್ವಜನಿಕದಾಯಿತ್ವದ ನಿಯಮಪಾಲನೆ [Legitimacy of Public accountability ]**

ಸಾರ್ವಜನಿಕ ಹೊಣೆಯನ್ನು (ಜವಾಬ್ದಾರಿಯನ್ನು) ಸ್ಥಿರಗೊಳಿಸುವುದಕ್ಕಾಗಿ ರಾಜ್ಯದ ಮೂಲಕ ಕಾನೂನು ನಿರ್ಮಾಣ ಮಾಡಿ ಹೊಣೆಗಾರಿಕೆಯನ್ನು ನಿರ್ಧರಿಸಲಾಗುತ್ತದೆ. ದೇಶದ ಮೂಲ ಕಾನೂನು ಸಂವಿಧಾನ ಮತ್ತು ಅದರ ಅಂತರಾಳದಲ್ಲಿ ನಿರ್ಮಿತವಾಗಿರುವ ಸ್ಪಷ್ಟ (ಸರಿಯಾದ) ನಿಯಮ ಮತ್ತು ನಿಯಂತ್ರಣದಲ್ಲಿ ಸಾರ್ವಜನಿಕ ಹೊಣೆಗಾರಿಕೆಯ ವಿಷಯದ ಉಲ್ಲೇಖವಾಗಬೇಕು. ಈ ರೀತಿ ಸ್ಪಷ್ಟ ನಿಯಮಗಳಿಂದ ನರ್ದಿಷ್ಟ ಕಾರ್ಯವನ್ನು ಸಾರ್ವಜನಿಕ ಸ್ಥಾನದಲ್ಲಿರುವ ವ್ಯಕ್ತಿ, ಸಮುದಾಯ ಅಥವಾ ಸರಕಾರ ಪಾಲಿಸಬೇಕಾಗುತ್ತದೆ. ಇದನ್ನು ಯಾರು ನಿರ್ಲಕ್ಷಿಸುತ್ತಾರೋ ಅವರು ರಾಷ್ಟ್ರದ ಮೂಲಕ ನೀಡುವ ದಂಡನೆಗೆ (ಶಿಕ್ಷೆಗೆ) ಪಾತ್ರರಾಗುತ್ತಾರೆ. ಇಂತಹ ಕಾನೂನಿನ ವ್ಯವಸ್ಥೆಯೇ ಸಾರ್ವಜನಿಕರು ಜವಾಬ್ದಾರಿಯನ್ನು ನಭಾಯಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

**2. ನೈತಿಕತೆ (Ethics )**

ಸಾರ್ವಜನಿಕ ಜವಾಬ್ದಾರಿ ಹೊತ್ತಿರುವ ವ್ಯಕ್ತಿ ಸಮೂಹ ಅಥವಾ ಸಂಸ್ಥೆಗಳಿಗೆ ಕಾನೂನಾತ್ಮಕ ಹೊಣೆ ಒಂದು ವೇಳೆ ನಿರ್ದೇಶಿಸದಿದ್ದರೂ ಅವರು ತಮ್ಮ ದಾಯಿತ್ವದಿಂದ ಹಿಂದೆ ಸರಿಯಲಾರರು. ಯಾವುದೇ ಜವಾಬ್ದಾರಿಯ ಹೊಣೆ ಹೊತ್ತಿರುವುದರೊಂದಿಗೆ ನೈತಿಕ ಜವಾಬ್ದಾರಿಯು ತಾನಾಗಿ ಬರುತ್ತದೆ. ಈ ನೈತಿಕ ಜವಾಬ್ದಾರಿ. ಕಾನೂನಿನ ಮೂಲಕ ನಿರ್ದೇಶಿತ ಜವಾಬ್ದಾರಿಗಿಂತಲೂ ಹೆಚ್ಚು ಪ್ರಭಾವಶಾಲಿಯಾಗಿರುತ್ತದೆ. ಏಕೆಂದರೆ ಕಾನೂನಿನ ನರೂಪಣೆಯಲ್ಲಿ ಉಲ್ಲೇಖಿತ ವಾಕ್ಯಗಳ ವ್ಯಾಖ್ಯಾನ ಆಗಬಹುದು. ಆದರೆ, ನೈತಿಕ ತಳಹದಿಯ ಮೇಲೆ ನಂತ, ನೈತಿಕ ಜವಾಬ್ದಾರಿ ವ್ಯಾಖ್ಯಾತೀತವಾಗಿರುತ್ತದೆ. ನೈತಿಕ ಹೊಣೆಗಾರ ಅಥವಾ ಜವಾಬ್ದಾರ ಜನ ವ್ಯಕ್ತಿಯ ಮೂಲಕ ನಿರ್ವಹಿಸಲ್ಪಡುವ ಕಾನೂನು ನಿಯಮಗಳ ಜವಾಬ್ದಾರಿಯೊಳಗೆ ಬರುತ್ತವೆ. ಹಾಗಾಗಿ ನೈತಿಕತೆಯಿಂದ ಉತ್ಪನ್ನವಾದ ಜವಾಬ್ದಾರಿ ಬರವಣಿಗೆಯುಲ್ಲಿರುವುದಿಲ್ಲ. ಆದರೆ ಜವಾಬ್ದಾರಿಯು ನಿರ್ವಹಣೆಯಾಗುತ್ತಿರುವುದು ಸ್ಪಷ್ಟವಾಗಿ ಕಾಣಿಸುತ್ತದೆ.

### 3.ಜಾಗರೂಕತೆ [Carefulness]

ಸಾರ್ವಜನಿಕ ಉತ್ತರದಾಯಿತ್ವ ಭಿನ್ನ ಭಿನ್ನ ಹಂತಗಳಲ್ಲಿ ಸ್ಥಾಪಿತವಾಗುತ್ತದೆ. ರಾಜ್ಯ ಅಥವಾ ಸಮಾಜದ ರಚನೆ, ಪರಂಪರೆ ಮತ್ತು ಜನ ಜಾಗೃತಿ ಇತ್ಯಾದಿಗಳಿಂದ ಸಾರ್ವಜನಿಕ ಉತ್ತರದಾಯಿತ್ವದ ಮಟ್ಟ ಸ್ಥಾಪಿತವಾಗುತ್ತದೆ. ಇಂತಹ ಯಾವುದೇ ಮಟ್ಟದ ಸಾರ್ವಜನಿಕ ಉತ್ತರದಾಯಿತ್ವವಿದ್ದರೂ ಕೂಡ ಇದರ ಉತ್ಪತ್ತಿಯ ಇನ್ನೊಂದು ಮೂಲ ಸ್ರೋತ ಜಾಗರೂಕತೆಯು ಕೂಡ ಆಗಿದೆ. ಜನಸ್ತರದಲ್ಲಿ ಜಾಗರೂಕತೆ ಸ್ಥಾಪಿತವಾದಲ್ಲಿ ಸತ್ಯವನ್ನು ( ಯಥಾರ್ಥ) ಸ್ವೀಕರಿಸಿ, ಜವಾಬ್ದಾರಿಯನ್ನು ಹೊರುವ ವ್ಯಕ್ತಿ ಸಮೂಹ ಅಥವಾ ಸಂಸ್ಥೇ ಜಾಗರೂಕವಾಗಿ ಸಾರ್ವಜನಿಕ ಉತ್ತರದಾಯಿತ್ವದ ನಿರ್ವಹಣೆಯನ್ನು ಮಾಡುತ್ತಾರೆ. ಜಾಗರೂಕತೆ, ಯಾವಾಗಲೂ ಸಕಾರಾತ್ಮಕವಾದ ಫಲಿತಾಂಶವನ್ನು ನೀಡುತ್ತದೆ. ಉತ್ತರದಾಯಿತ್ವದಂತಹ ಮಹತ್ವಪೂರ್ಣವಾದ ಹಾಗೂ ಜವಾಬ್ದಾರಿಯುತ ಕಾರ್ಯಗಳಿಗೆ ಸರಿಯಾದ ಮಾರ್ಗದರ್ಶನ ನೀಡುತ್ತದೆ. ಜನಸಾಮಾನ್ಯರು ಜಾಗರೂಕರಾಗುವುದಕ್ಕೆ ಮಹತ್ವದ ಕಾರಣವಿದೆ. ಈ ಜನರು ತಳಮಟ್ಟದಿಂದ ಮೇಲೆ ಬಂದು ವ್ಯಕ್ತಿ, ಸಮೂಹ ಮತ್ತು ಸಂಸ್ಥೆಗಳು ಸಾರ್ವಜನಿಕ ಪದವಿಯವರೆಗೆ ತಲುಪುತ್ತಾರೆ. ಇದಕ್ಕಾಗಿ ವ್ಯಕ್ತಿ, ಸಮುದಾಯ ಮತ್ತು ಸಮಾಜದಲ್ಲಿ ಜಾಗರೂಕತೆಯನ್ನು ಸ್ಥಿರಗೊಳಿಸಿದರೆ, ಆಗ ಸಾರ್ವಜನಿಕ ಉತ್ತರದಾಯಿತ್ವ ಸ್ಥಿರವಾಗಿ ಉಳಿಯಬಲ್ಲುದು.

### ರಾಜ್ಯದ ವಿಭಿನ್ನ ಸಮುದಾಯಗಳಲ್ಲಿ ಸಾರ್ವಜನಿಕ ಉತ್ತರದಾಯಿತ್ವ [Publi Accountability in different organs of State ]

ರಾಜ್ಯದ ವಿಭಿನ್ನ ಸಮುದಾಯಗಳ ಸಾರ್ವಜನಿಕ ಉತ್ತರದಾಯಿತ್ವವನ್ನು ರಾಜನೈತಿಕ ಮತ್ತು ಆಡಳಿತಾತ್ಮಕ ಕ್ಷೇತ್ರದ ಉತ್ತರದಾಯಿತ್ವ ಹಾಗೂ ಸಾರ್ವಜನಿಕ ಹೊಣೆ ಮತ್ತು ಜನತೆಯ ಜವಾಬ್ದಾರಿಯ ವಿಷಯದಲ್ಲಿ ಬೇರ್ಪಡಿಸಿ, ಈ ರೀತಿಯಲ್ಲಿ ವ್ಯಾಖ್ಯಾನಸಬಹುದಾಗಿದೆ.

### ರಾಜನೈತಿಕ ಕ್ಷೇತ್ರದ ಉತ್ತರದಾಯಿತ್ವ [Responsibility of Political Parties ]

ಯಾವುದೇ ದೇಶದ ರಾಜ್ಯವನ್ನು ಆಳ್ವಿಕೆ ಮಾಡಲು ರಾಜಕೀಯ ಪಕ್ಷ ಅಥವಾ ರಾಜನೀತಿಯ ವಿಚಾರಗಳಲ್ಲಿ ಸಂಬಂಧಿತ ಸಮುದಾಯದ ಮೂಲಕ ಕಾರ್ಯಪಾಲಿಕೆಯ ಪ್ರಮುಖ ಸ್ಥಾನ ಲಭಿಸುತ್ತದೆ. ರಾಜಕೀಯ ಅಧಿಕಾರವನ್ನು

ಚಲಾಯಿಸುವ ರಾಷ್ಟ್ರಪತಿ, ಸೈನಿಕ ಶಾಸನ, ಪ್ರಧಾನ ಮಂತ್ರಿ ಅಥವಾ ಸಾಮೂಹಿಕ ನೇತೃತ್ವ, ಕಾರ್ಯಪಾಲಿಕೆಯ ಜವಾಬ್ದಾರಿಯನ್ನು ಹೊತ್ತ ವ್ಯಕ್ತಿ, ಅಥವಾ ಸಮೂಹ ದೇಶದೊಳಗೆ ಸ್ಥಾಪಿತ ಸ್ಥಾಯಿ ಸರಕಾರದ ರೂಪದಲ್ಲಿ ತಿಳಿಯಲ್ಪಡುವ ಆಡಳಿತ ಯಂತ್ರದ ನೇತೃತ್ವ ಪ್ರದಾನ ಮಾಡುತ್ತದೆ. ಯಾವ ರೂಪದಲ್ಲಾದರೂ ಅಧಿಕಾರವನ್ನು ಪಡೆದ ನಂತರವೂ ಅಧಿಕಾರ ಚಲಾವಣೆಯಾಗುವವರೆಗೆ ರಾಜ್ಯ ವ್ಯವಸ್ಥೆಯ ಅಧಿಕಾರ ರಾಜನೈತಿಕ ಕ್ಷೇತ್ರ ಅಥವಾ ಸಮುದಾಯಕ್ಕೆ ಪ್ರಾಪ್ತವಾಗುತ್ತದೆ. ಈ ರೀತಿಯಲ್ಲಿ ಸರಕಾರದ ನೇತೃತ್ವ ಪಡೆದುಕೊಂಡಿರುವ ರಾಜಕೀಯ ಪಕ್ಷ ಅಥವಾ ರಾಜನೈತಿಕ ಸಮುದಾಯ ಸಾರ್ವಜನಿಕ ಹೊಣೆಯಿಂದ ಹಿಂದೆ ಸರಿಯಲಾಗುವುದಿಲ್ಲ. ಅಧಿಕಾರ ಪಡೆದುಕೊಂಡ ವ್ಯಕ್ತಿ ಅಥವಾ ಸಮುದಾಯವು ಜನಸಾಮಾನ್ಯರಿಂದ ಹಿಡಿದು ಎಲ್ಲಾ ಕ್ಷೇತ್ರಗಳ ಕುರಿತು ಸಂಪೂರ್ಣ ಜವಾಬ್ದಾರಿಯನ್ನು ಸ್ಥಿರಗೊಳಿಸಬೇಕಾಗುತ್ತದೆ.


## ಆಡಳಿತ ಕ್ಷೇತ್ರದ ಉತ್ತರದಾಯಿತ್ವ – Responsibility of Political Parties

ಯಾವುದೇ ದೇಶದ ರಾಜ್ಯ ವ್ಯವಸ್ಥೆಯ ಹೊಣೆಗಾರಿಕೆಯನ್ನು ಆ ದೇಶದ ಸ್ಥಾಯಿ ಸರಕಾರದಲ್ಲಿನ ಕ್ರಿಯಾಶೀಲ ರಾಷ್ಟ್ರಸೇವಕರಿಗೆ ಕೊಡಲಾಗುತ್ತದೆ. ರಾಜ್ಯದ ನೀತಿ ಹಾಗೂ ಸಿದ್ಧಾಂತದ ಪ್ರತಿಪಾದನೆಯಿಂದ ರಾಜ್ಯದ ಮೂಲಕ ನಿರ್ದೇಶಿಸಲ್ಪಟ್ಟ ಸಿದ್ಧಾಂತವನ್ನು ಸ್ವಯಂ ಸೇವಕರದ್ದಾಗಿರುತ್ತದೆ. ರಾಜಕೀಯ ವ್ಯಕ್ತಿ ಅಥವಾ ಸಮುದಾಯವು ರಾಜ್ಯದಲ್ಲಿ ಬರ ಹೋಗುವ ಕ್ರಮ ಜಾರಿಯಲ್ಲಿರುತ್ತದೆ. ಆದರೆ ದೇಶದ ಆಡಳಿತದ ಜವಾಬ್ದಾರಿ ಹೊಂದಿದವರಿಂದ ಈ ರಾಷ್ಟ್ರಸೇವಕರು ಸ್ಥಿರವಾಗಿ ಇರುತ್ತಾರೆ. ಸಾರ್ವಜನಿಕ ಸಂಬಂಧಿತ ಪ್ರತಿಯೊಂದು ಚಿಕ್ಕದಿರಲಿ, ದೊಡ್ಡದಿರಲಿ, ವಿಷಯಗಳನ್ನು ನೀತಿಯುತವಾಗಿ ಮಾಡಿಸುವ ನಿರ್ಣಯ, ಇಂತಹ ನಿಯಮಗಳನ್ನು ಪಾಲನೆ ಮಾಡುವ ಕಾರ್ಯ ಮತ್ತು ಜನತೆ ಹಾಗೂ ರಾಷ್ಟ್ರದ ನಡುವಿನಲ್ಲಿರುವ ಎರಡೂ ಕ್ಷೇತ್ರಗಳಲ್ಲಿ, ಸೇವೆ ಮಾಡುವ ಕಾರ್ಯವನ್ನು ಈ ಕ್ಷೇತ್ರ ಮಾಡುತ್ತದೆ. ಇದಕ್ಕಾಗಿ, ಆಡಳಿತ ಕ್ಷೇತ್ರದ ಉತ್ತರದಾಯಿತ್ವ ಸಂಪೂರ್ಣವಾಗಿ ಸ್ಥಿರವಾಗಿರಬೇಕಾಗುತ್ತದೆ. ಈ ಕ್ಷೇತ್ರಕ್ಕೆ ತನ್ನ ಕಾರ್ಯದ ಕುರಿತಾದ ಉತ್ತರದಾಯಿತ್ವವಿಲ್ಲದಿದ್ದಾಗ ಭ್ರಷ್ಟಾಚಾರ ಚಿಗುರಿಕೊಳ್ಳಲು ಅವಕಾಶ ಸಿಗುತ್ತದೆ ಮತ್ತು ಅದು ಹಂತ ಹಂತವಾಗಿ ಬೇರು ಗಟ್ಟಿ ಮಾಡಿಕೊಳ್ಳುತ್ತದೆ.

## ಸಾರ್ವಜನಿಕ ದಾಯಿತ್ವ ಮತ್ತು ಜನತೆಯ ಹೊಣೆಗಾರಿಕೆ [Public responsibility and the duty of People ]


ವರ್ತಮಾನ ರಾಜ್ಯ ವ್ಯವಸ್ಥೆಯಲ್ಲಿ ಜನತೆಯ ಪಾತ್ರ ಪ್ರಮುಖವಾಗಿರುತ್ತದೆ. ಸರ್ವ ಸಾಧಾರಣ ಜನತಾ ರಾಜ್ಯದ ಮೂಲಕ ಶಾಸನಕ್ಕೊಳಪಟ್ಟಿದ್ದರೂ ಕೂಡ ಸಮಯ ಸಮಯದಲ್ಲಿ ಜನತೆಯೇ ಸಾರ್ವಭೌಮ ಅಧಿಕಾರ ಸಂಪನ್ನ ರಾಜ್ಯ ಪೂರ್ಣ ಪ್ರಭುತ್ವದ ಪ್ರತೀಕ ಮತ್ತು ರಾಜ್ಯ ಶಕ್ತಿಯ ಮೂಲಸ್ರೋತದ ರೂಪದಲ್ಲಿ ಪ್ರಸ್ತುತವಾಗಿ ನಿರ್ಣಾಯಕವಾಗಿ ಸ್ಥಾಪಿತವಾಗುತ್ತವೆ. ಜನತೆಯ ಮೂಲಕ ಚುನಾಯಿತ ಪ್ರತಿನಿಧಿಗಳಿಂದ ದೇಶದ ಶಾಸನ ವ್ಯವಸ್ಥೆ ಚಾಲನೆಗೊಂಡು, ರಾಜ್ಯ ವ್ಯವಸ್ಥೆಯ ಎಲ್ಲಾ ಸಾರ್ವಜನಿಕ ಹುದ್ದೆಗಳ ಸೃಷ್ಟಿಯ ಅಧಿಕಾರ ಹೊಂದಿರುತ್ತದೆ. ಇಷ್ಟು ಮಾತ್ರವಲ್ಲದೆ ರಾಜ್ಯಕ್ಕೆ ಮಾರ್ಗದರ್ಶನ ನೀಡುವುದು. ಅವಶ್ಯಕ ಕಾನೂನಿನ ನಿರ್ಮಾಣ ಮಾಡುವುದು ಮತ್ತು ರಾಜ್ಯ ವ್ಯವಸ್ಥೆಯನ್ನು ನಡೆಸುವುದಕ್ಕಾಗಿ, ಎಲ್ಲಾ ರೀತಿಯ ಅವಶ್ಯಕ ತತ್ವಗಳ ಅಧಿಕಾರ ಪಡೆದ ಜನಪ್ರತಿನಿಧಿ ಜನತೆಯಿಂದ ಚುನಾಯಿತರಾದ ಕಾರಣದಿಂದ ಕೂಡ, ಜನತಾರಾಜ್ಯ (ಪ್ರಜಾರಾಜ್ಯ) ಶಕ್ತಿಯ ಮೂಲ ಸ್ರೋತವಾಗಿದೆ. ಇದು ಪ್ರಮಾಣಿತವೂ ಆಗಿದೆ. ಜನರು ಜಾಗರೂಕರಾಗಿ ಅಸಲಿ ನಾಗರಿಕರಲ್ಲಿ (ಪ್ರಬುದ್ಧ ನಾಗರಿಕ) ಕಂಡು ಬರುವ ಗುಣಗಳನ್ನು ವಿಕಾಸಗೊಳಿಸುವ ಹೊಣೆಗಾರಿಕೆಯೂ ಜನರದ್ದೇ ಆಗಿದೆ. ಆದರೆ ಜನರ ಹೆಸರಿನಲ್ಲಿ ಅಶಿಕ್ಷಿತರು, ನಿರುದ್ಯೋಗಿಗಳು ಮತ್ತು ಬೇಜವಾಬ್ದಾರ ವ್ಯಕ್ತಿಗಳ ಸಮೂಹದಿಂದ ಯಾವುದೇ ಪರಿಸ್ಥಿತಿಯಲ್ಲಿ ಸಾರ್ವಜನಿಕ ಉತ್ತರದಾಯಿತ್ವ ಸ್ಥಾಪಿತವಾಗಲಾರದು. ಆದ್ದರಿಂದ ಒಂದು ವೇಳೆ ಜನ ಜಾಗೃತರಾಗಿ ಸಕ್ರಿಯರಾಗಿ ಮತ್ತು ಜವಾಬ್ದಾರಿಯುಳ್ಳ ವ್ಯಕ್ತಿ ಅಥವಾ ಸಮುದಾಯದೊಂದಿಗೆ ವ್ಯವಸ್ಥೆಯನ್ನು ಪ್ರಶ್ನಿಸುವ ಸಾಮರ್ಥ್ಯವಿದ್ದರೆ ಆಗ ಸಾರ್ವಜನಿಕ ಉತ್ತರದಾಯಿತ್ವದ ವ್ಯವಸ್ಥೆಯಲ್ಲಿ ಕೂಡ ಪ್ರಭಾವಿಯಾಗಿ ಸ್ಥಾಪಿತರಾಗಬಲ್ಲರು. ಇದಕ್ಕಾಗಿಯೇ ಸಾರ್ವಜನಿಕ ಉತ್ತರದಾಯಿತ್ವ ಸ್ಥಾಪಿಸುವುದಕ್ಕಾಗಿ ಜನರೂ ಜವಾಬ್ದಾರರಾಗಬೇಕಾಗುತ್ತದೆ. ದೇಶದಲ್ಲಿ ಸಾರ್ವಜನಿಕ ಸ್ಥಾನದಲ್ಲಿರುವವರು ಸಾರ್ವಜನಿಕರ ಹೊಣೆಹೊತ್ತ ವ್ಯಕ್ತಿ ಸಮೂಹ ಅಥವಾ ಸಮುದಾಯದಲ್ಲಿ ಸಾರ್ವಜನಿಕ ಉತ್ತರದಾಯಿತ್ವವನ್ನು ನಿಭಾಯಿಸುವ ಮತ್ತು ಸ್ವಚ್ಛ ವ್ಯವಸ್ಥೆಯ ನಿರ್ಮಾಣ ಮಾಡಬಲ್ಲರಾದರೆ, ಭ್ರಷ್ಟಾಚಾರ ನಿಯಂತ್ರಿತ ಸ್ಥಿತಿಯಲ್ಲಿರಬಹುದಾಗಿದೆ. ಸಾರ್ವಜನಿಕ ಉತ್ತರದಾಯಿತ್ವವನ್ನು ಮೂಲ ವಿಷಯವನ್ನಾಗಿ ಮಾಡಿ, ವ್ಯಕ್ತಿಯ ನಿಯಂತ್ರಣ ಮತ್ತು ಸಂತುಲಿತ ಆಧಾರದಲ್ಲಿ ಚಿತ್ರದ ಮೂಲಕ ಹೀಗೆ ನೋಡಬಹುದಾಗಿದೆ.

ಸರ್ವಸಾಧಾರಣ ಜನತಾ, ರಾಜ್ಯ ವ್ಯವಸ್ಥೆ ಮತ್ತು ಸಾರ್ವಜನಿಕ ಉತ್ತರ ದಾಯಿತ್ವ




ಚಿತ್ರದಲ್ಲಿ ಅಂಕಿತವಾದ ಜನ ಸಾಮಾನ್ಯರು ಕೆಳಹಂತದಲ್ಲಿರುವರು. ಹಾಗಿದ್ದರೂ ಕೂಡ ಸಮಯ ಮತ್ತು ಪರಿಸ್ಥಿತಿಯ ಕಾರಣದಿಂದಾಗಿ ರಾಜಕೀಯ ಅಧಿಕಾರದ ಸ್ರೋತವಾಗಿ (ಮೂಲಶಕ್ತಿ) ಪ್ರಯೋಗವಾಗುವುದರಿಂದ ಅವರ ಸರ್ವೋಚ್ಚತೆ ಗೋಚರಿಸುತ್ತದೆ. ಶಾಸಕಿಯ ವ್ಯವಸ್ಥೆ ನಿರ್ಮಿಸುವಲ್ಲಿ ಪ್ರಮುಖ ಪಾತ್ರ ಜನತೆಯದ್ದೇ ಆಗಿರುತ್ತದೆ. ಇದಕ್ಕಾಗಿ ಅಧಿಕಾರದಲ್ಲಿರುವ ವ್ಯಕ್ತಿ ಮತ್ತು ಸಮುದಾಯ ಜನಸಾಮಾನ್ಯರ ಕುರಿತು ಪೂರ್ಣ ಜವಾಬ್ದಾರಿಯುತವಾಗಿರಬೇಕಾಗುತ್ತದೆ. ನೈತಿಕತೆ ಕಾನೂನು ಮತ್ತು ಜಾಗರೂಕತೆಯಂತಹ ಮಹತ್ವಪೂರ್ಣ ತತ್ವಗಳನ್ನು ಸಾಮಾನ್ಯ

ಜನತೆ. ಶಾಸಕೀಯ ನ್ಯಾಯಪಾಲಿಕೆ ಮತ್ತು ಕಾರ್ಯ ಪಾಲಿಕೆಯ ಎಲ್ಲಾ ಅಂಗಗಳನ್ನು ಅಂಗೀಕರಿಸಿ, ಸಾರ್ವಜನಿಕ ಉತ್ತರದಾಯಿತ್ವ ಸಂಪೂರ್ಣವಾಗಿ ಪಾಲಿಸುವ ವ್ಯವಸ್ಥೆ ಜಾರಿಯಲ್ಲಿರುತ್ತದೆ. ಇದರಿಂದ ಭ್ರಷ್ಟಾಚಾರ ಜನ್ಯ ಕಾರ್ಯ ನಿರುತ್ಸಾಹಿತವಾಗಿ ಭ್ರಷ್ಟಾಚಾರ ನಿಯಂತ್ರಣದ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಉತ್ತಮ ಶಾಸನಕ್ಕಾಗಿ ಮೇಲಿನ (ಉಪಯುಕ್ತ) ಆರು (6) ಮಹತ್ವಪೂರ್ಣ ತತ್ವಗಳ ಅಧ್ಯಯನ ಮಾಡಲಾಗಿದೆ. ಈ ಮಹತ್ವಪೂರ್ಣ ಆರು ತತ್ವಗಳು ಉತ್ತಮ ಶಾಸನದಲ್ಲಿ ಸೇರಿ ಸಮಾಹಿತಗೊಳ್ಳುತ್ತವೆ. ಈ ವಿಚಾರ ಚಿತ್ರದ ಮಾಧ್ಯಮದಿಂದ ಕೂಡ ಅಧ್ಯಯನ ಮಾಡಬಹುದಾಗಿದೆ.




**01. ಒಳ್ಳೆಯ ಆಡಳಿತ**

**02.ನಿಯಮ ಮತ್ತು ಕಾನೂನು**

**03.ಸ್ಥಳೀಯ ಸಾಯುತ್ತ ಆಡಳಿತ**

**04. ಪಾರದರ್ಶಕತೆ**

**05. ಸರಿಯಾದ ನಿರ್ದೇಶನ**

**06. ಉತ್ತರದಾಯಿತ್ವ**

# 30. ಕಪ್ಪು ಹಣದ ನಿಯಂತ್ರಣ [Control of Black money ]

ವಿಶ್ವದಲ್ಲಿ ಹಣಗಳಿಸುವ ಪೈಪೋಟಿಯಲ್ಲಿ ಹಣವನ್ನು ಕೂಡ ಎರಡುವರ್ಗಗಳಲ್ಲಿ (ಭಾಗಗಳಲ್ಲಿ) ವಿಭಜಿಸಿ ನೋಡಲಾಗುತ್ತಿದೆ. ಯಾವ ಹಣವನ್ನು ಸಾಮಾನ್ಯ ಉದ್ಯೋಗ ವ್ಯಾಪಾರ ಹಾಗೂ ಕಲೆಯ ವಿಕ್ರಯದಿಂದ ಸಂಪಾದಿಸಲ್ಪಡುತ್ತದೋ... ಅಂತಹ ಹಣವನ್ನು ನ್ಯಾಯಯುತ ಹಣವೆಂದು ಹೇಳಲಾಗುತ್ತದೆ. ಇದೇ ರೀತಿ ಅಸಾಧಾರಣ ಹಾಗೂ ಅನ್ಯಾಯದಿಂದ ಗಳಿಸಿದ ಹಣವನ್ನು (ಸಂಪತ್ತನ್ನೂ) ಅನ್ಯಾಯದ ಅರ್ಥಾತ್ ಕಪ್ಪು ಹಣವೆಂದೂ ತಿಳಿಯಲಾಗುತ್ತದೆ. ಈ ರೀತಿಯ ಸಂಪತ್ತಿನ ವರ್ಗೀಕರಣ ಹಿಂದೆ ಇರಲಿಲ್ಲ. ಆದರೆ ವರ್ತಮಾನದ ಆಧುನಿಕ ಯುಗದಲ್ಲಿ ಸಂಪತ್ತನ್ನು (ಧನವನ್ನು) ವರ್ಗಿಕರಿಸಿ ನೋಡಲಾಗುತ್ತಿದೆ. ವರ್ತಮಾನದ ಈ ವಿಶ್ವದ ಎಲ್ಲಾ ಭಾಗಗಳಲ್ಲಿ ಕಪ್ಪು ಹಣದ ಬಾಹುಳ್ಯ ಉಂಟಾಗಿದೆ. ಇದರ ಕುರಿತು ಗಹನವಾದ ಅಧ್ಯಯನವಾಗಬೇಕಾಗಿದೆ.

ಕಪ್ಪು ಹಣ ಅರ್ಥಾತ್ ಅಕ್ರಮವಾಗಿ ಸಂಪಾದಿಸಿದ  ಧನ, ಇದು ಸ್ಪಷ್ಟವಾಗಿ ದೃಷ್ಟಿಗತವಾಗುತ್ತಿಲ್ಲ. ಆದರೆ ವಿಭಿನ್ನ ರೀತಿಯಲ್ಲಿ ಮಾರ್ಕೆಟ್‌ನಲ್ಲಿ, ವ್ಯವಹಾರದಲ್ಲಿ ಸಮ್ಮಿಳಿತವಾಗುತ್ತವೆ. ಹೆಚ್ಚಿರಲಿ, ಕಮ್ಮಿಯಿರಲಿ, ಯಾವುದೇ ಪರಿಣಾಮದಿಂದ ವ್ಯವಹಾರ ನಡೆದರೂ ಜನಸಾಮಾನ್ಯ ಇಂತಹ ವ್ಯವಹಾರಗಳಿಂದ ಅನಭಿಜ್ಞ (ತಿಳುವಳಿಕೆ ಇಲ್ಲದ)ನಾಗಿರುತ್ತಾನೆ. ಯಾರು, ಯಾವ ಮಟ್ಟದಲ್ಲಿ ಕಪ್ಪುಹಣದ ವ್ಯವಹಾರ ಮಾಡುತ್ತಾರೆ.  ಆ ವ್ಯಕ್ತಿ ಸಮುದಾಯ ಅಥವಾ ತಳಮಟ್ಟದಲ್ಲಿರುವವರಿಗೆ ಮಾತ್ರ ಈ ಕಪ್ಪು ಹಣದ ವ್ಯವಹಾರಗಳ ಮಾಹಿತಿ ಇರುವುದರಿಂದ ವ್ಯವಹಾರಗಳ ಪ್ರಕೃತಿಯ (ವ್ಯವಸ್ಥೆಯ) ಅರಿವು ಜನಸಾಮಾನ್ಯನಗೆ ಇರುವುದಿಲ್ಲ. ಹೀಗೆ ಭೂಗತವಾಗಿ ಆಗುವ ವ್ಯವಹಾರಗಳು ಅಕ್ರಮ ವಸ್ತುಗಳು, ಸಾಮಾಗ್ರಿಗಳಲ್ಲಿ ವಿನಿಮಯವಾಗುತ್ತಾ ಮತ್ತೆ ಹಣದ ರೂಪದಲ್ಲಿ ಪರವರ್ತಿತವಾಗುತ್ತವೆ. ಈ

ರೀತಿ ಕಪ್ಪು ಹಣ ವಿನಿಮಯಗೊಳ್ಳುತ್ತಾ ಪರಿವರ್ತಿತವಾಗಿ ಇದರ ಪ್ರತಿಯೊಂದು ಪರಿವರ್ತನೆಯಲ್ಲಿ ಹಣದ ಪರಿಣಾಮ ಹೆಚ್ಚಿರುವ ಕಾರಣದಿಂದಲೂ ಇಂತಹ ವ್ಯವಹಾರಗಳಲ್ಲಿ ಹೆಚ್ಚಳ ಉಂಟಾಗಿದೆ.

ಬಹುಶಃ ಎಲ್ಲಾ ದೇಶಗಳಲ್ಲಿ ಕಪ್ಪು ಹಣದ ವ್ಯವಹಾರಗಳ ಪ್ರಕೃತಿ ಒಂದೇ ರೀತಿಯಲ್ಲಿರುವಂತೆ ಕಂಡುಬರುತ್ತದೆ. ದೇಶದ ಕಾನೂನಿನ ಮೂಲಕ ಪ್ರತಿಬಂಧಿತ ವಸ್ತು ಸೇವೆ ಮತ್ತು ಸಾಮಾಗ್ರಿಗಳ ಕೊಳ್ಳುವುದು ಮಾರಾಟ ಮಾಡುವುದರಲ್ಲಿ ಇಂತಹ ಹಣದ ಪ್ರಯೋಗವಾಗುತ್ತದೆ. ಹೆಚ್ಚಿನ ವಿಕಾಸೋನ್ಮುಖ ದೇಶಗಳಲ್ಲಿ ಇಂತಹ ಅಕ್ರಮ ಹಣ ರಾಜನೈತಿಕ ಪರಿವರ್ತನೆಗಾಗಿ ಖರ್ಚು ಮಾಡಲಾಗುತ್ತದೆ. ಕೆಲವೊಂದು ದೇಶಗಳಲ್ಲಿ ಆತಂಕದ ಗತಿ– ವಿಧಿಗಳನ್ನು ತೀವ್ರಗೊಳಿಸಲು ಕಪ್ಪುಹಣದ ಪ್ರಯೋಗ ಮಾಡಲಾಗುತ್ತದೆ. ಆದ್ದರಿಂದ ವಿಕಾಸೋನ್ಮುಖ ದೇಶಗಳ ರಾಜ್ಯಾಧಿಕಾರದ ಪರಿವರ್ತನೆಯಲ್ಲಿ ಕೂಡ ಈ ಕಪ್ಪು ಹಣದ ವಿಶೇಷ ಪಾತ್ರವಿರುತ್ತದೆ. ಅಧಿಕಾರದಲ್ಲಿರುವ ವ್ಯಕ್ತಿ ಹಾಗೂ ಸಮುದಾಯಕ್ಕೆ ಈ ಕಟು ಸತ್ಯದ ಅರಿವಿರುತ್ತದೆ. ಆದರೂ ಜನರ ಎದುರಲ್ಲಿ ಈ ಸತ್ಯವನ್ನು ತೆರೆದಿಡುವಲ್ಲಿ ಅಸಮರ್ಥನಾಗುತ್ತಾನೆ.

ಕಪ್ಪು ಹಣದ ಎರಡು ವಿಶೇಷತೆಗಳಿವೆ. 1. ಕಪ್ಪು ಹಣ ಗೋಚರವಾಗುವುದಿಲ್ಲ. ಮರೆಯಲ್ಲಿರುತ್ತದೆ. 2. ಕಪ್ಪು ಮರೆಯಲ್ಲಿದ್ದರೂ ಕಾರ್ಯಗಳನ್ನು ಸಂಪನ್ನಗೊಳಿಸಿಯೇ ಬಿಡುತ್ತದೆ.

ಇಂತಹ ವಿಶೇಷತೆಗಾಗಿ ಕಪ್ಪು ಹಣದಿಂದ ಎಲ್ಲಾ ದೇಶಗಳು ಅಧಿಕಾರಾರೂಢ ವ್ಯಕ್ತಿ ಮತ್ತು ಸಮುದಾಯ ಲಾಭವನ್ನು ಪಡೆಯುತ್ತಿದ್ದಾರೆ. ವಿಶ್ವದ ಎಲ್ಲಾ ರಾಷ್ಟ್ರಗಳ ಅಧಿಕಾರಾರೂಢ ವ್ಯಕ್ತಿಗಳು ಸ್ವಚ್ಛ ಬಿಳುಪಿನ ಉಡುಗೆಯಲ್ಲಿ ತಮ್ಮನ್ನು ತಾವು ಎಷ್ಟು ಕಾಂತಿಯುತವಾಗಿ ಪ್ರಕಾಶಿಸಿಕೊಳ್ಳುತ್ತಾರೋ, ಅಷ್ಟು ಅವರು ಸ್ಪಷ್ಟ ಮತ್ತು ಕಾಂತಿಯುತರಾಗಿರುವುದಿಲ್ಲ. ಈ ಸತ್ಯ ಜನರಿಗಿಂತ ಹೆಚ್ಚು, ವ್ಯವಹಾರ ಸಂಬಂಧಿತ ವ್ಯಕ್ತಿ ಮತ್ತು ಸಮುದಾಯದವರಿಗೆ ಇದರ ಮಾಹಿತಿ ಇರುತ್ತದೆ. ಇದು ಕೂಡ ಕಪ್ಪು ಹಣದ ವಿಶೇಷತೆಯೇ ಆಗಿದೆ.

ಈ ಮೇಲಿನ ವಿವರಣೆಯಿಂದ ಸೂಚಿತವಾಗುವುದು. ಕಪ್ಪು ಹಣವು ಮರೆಯಾಗಿರುತ್ತದೆಯಾದರೂ ತನ್ನ ಕಾರ್ಯ ಕಲಾಪವನ್ನು ಸಂಪನ್ನಗೊಳಿಸುತ್ತದೆ. ಕಪ್ಪು ಹಣದ ಅಂತರ್ ನಿಹಿತ ತತ್ವಗಳನ್ನು ಮೂರು ವರ್ಗಗಳಲ್ಲಿ (ಭಾಗ) ವಿಭಜಿಸಿ ನೋಡಬಹುದಾಗಿದೆ.

1. ಆತಂಕಿತ ಚಟುವಟಿಕೆಗಳು

2. ಅಕ್ರಮ ವಸ್ತುಗಳ ವ್ಯವಹಾರ

3. ಅಸಾಮಾಜಿಕ ( ಹಾನಿಕಾರಕ) ಕಾರ್ಯಕಲಾಪಗಳು.

## 1. ಆತಂಕಿತ ಚಟುವಟಿಕೆಗಳು (Terrorist Activities )

ಕಪ್ಪು ಹಣ, ವ್ಯಕ್ತಿ ಅಥವಾ ಸಮುದಾಯದಲ್ಲಿ ಆತಂತಕಿತ ಚಟುವಟಿಕೆಗಳನ್ನು ನಡೆಸುವ ಇಚ್ಛೆಯನ್ನು ಜಾಗೃತಗೊಳಿಸುತ್ತದೆ ಮತ್ತು ಈ ಆತಂಕಿತ ಚಟುವಟಿಕೆಗಳ ಎರಡು ಉದ್ದೇಶಗಳಿವೆ. ಅವು ಹೀಗಿವೆ.

**ಕ) ಧಾರ್ಮಿಕ ಹಾಗೂ ಜಾತಿಯ ಪರಿಚಯದ ಸಂರಕ್ಷಣೆ**

**ಖ) ರಾಜ್ಯ ಶಾಸನಾಧಿಕಾರ ಪಡೆದುಕೊಳ್ಳುವ (ಸ್ವಾಧೀನ ಪಡಿಸಿಕೊಳ್ಳುವ) ಆಕಾಂಕ್ಷೆ.**

**ಕ)** ಧಾರ್ಮಿಕ ಹಾಗೂ ಜಾತಿ ಪರಿಚಯವನ್ನು ಸಂರಕ್ಷಿಸುವುದಕ್ಕಾಗಿ ಬೇರೊಂದು ಧರ್ಮ ಮತ್ತು ಜಾತಿಯ ಮೇಲೆ ಆಕ್ರಮಣ ಮಾಡುವ ಕಾರ್ಯಕಲಾಪದಿಂದ ಆತಂಕವು ಜನ್ಮ ತಳೆಯುತ್ತದೆ. ಇದರಿಂದ ಎರಡೂ ಪಕ್ಷಗಳೂ ಆತಂಕಕ್ಕೊಳಗಾಗುತ್ತವೆ. ಆದರೆ ಲಾಭ ಯಾರೊಬ್ಬರಿಗೂ ಆಗುವುದಿಲ್ಲ. ಏಕೆಂದರೆ ಕಪ್ಪು ಹಣದ ಪ್ರಯೋಗದಿಂದ ಸ್ಥಾಪಿತವಾಗುವ ಚಟುವಟಿಕೆಗಳ ಸಮಯವನ್ನು ಕಪ್ಪು ಹಣದ ಪ್ರಯೋಗ ನಿರ್ಧರಿಸುತ್ತದೆ. ಆದ್ದರಿಂದ ಕಪ್ಪು ಹಣದಿಂದ ಹುಟ್ಟಿಕೊಂಡ ಘಟನೆ ಸ್ಥಿರತೆಯನ್ನು ಹೊಂದಿರುವುದಿಲ್ಲ. ಕಪ್ಪು ಹಣ ಕೇವಲ ಆತಂಕವನ್ನೇ ಹರಡುತ್ತದೆ, ದುಃಖವನ್ನು ನೀಡುತ್ತದೆ ಮತ್ತು ಸಮಾಜಕ್ಕೆ ಹಾನಿಯನ್ನುಂಟುಮಾಡುತ್ತದೆ. ಹಾಗಿದ್ದರೂ ಇಂತಹ ಚಟುವಟಿಕೆಗಳಿಗೆ ಕೆಲವೊಮ್ಮೆ ಕ್ಷಣಿಕವಾದ ಸಫಲತೆ ದೊರೆಯುವುದೂ ಇದೆ. ಆದರೆ ಇದು ನಿರರ್ಥಕವಾಗಿರುತ್ತದೆ.

**ಖ)** ರಾಜ್ಯ ಶಾಸನದ ಅಧಿಕಾರ ಪಡೆಯುವ ಆಸೆಯ ಕಾರಣದಿಂದಾಗಿ ದೇಶದ ಒಳಗೆ ಮತ್ತು ಹೊರಗೆ ಆತಂಕದ ಚಟುವಟಿಕೆಗಳು ಹೆಚ್ಚುತ್ತವೆ. ಶಾಸನಾಧಿಕಾರ ಸ್ವಾಧೀನಪಡಿಸಿಕೊಳ್ಳುವ ಮಹತ್ವಾಕಾಂಕ್ಷೆಯುಳ್ಳ ವ್ಯಕ್ತಿ ಅಥವಾ ಸಮುದಾಯ ಕಪ್ಪು ಹಣದಿಂದ ಎರಡು ರೀತಿ ಕಾರ್ಯವಿಧಾನಗಳಿಂದ ಅಧಿಕಾರವನ್ನು ಪಡೆಯುವ ಯೋಜನೆಯನ್ನು ಸಿದ್ಧಗೊಳಿಸುತ್ತಾರೆ.

**1. ಪ್ರಜಾತಾಂತ್ರಿಕವಾದ ಹಾದಿ (ಮಾರ್ಗ)**

**2. ಪ್ರಜಾತಂತ್ರವಲ್ಲದ ಮಾರ್ಗ**

**01**. ಪ್ರಜಾತಂತ್ರವಲ್ಲದ ಮಾರ್ಗದಿಂದ ಅಧಿಕಾರ ಪಡೆದುಕೊಳ್ಳುವುದಕ್ಕಾಗಿ ಜನರ ಸಂಪರ್ಕಕ್ಕೆ ಹೋಗುತ್ತಾರೆ. ಜನರಿಗೆ ಅನೇಕ ರೀತಿಯ ಆಮಿಷಗಳನ್ನು ನೀಡಿ, ಚುನಾಯಿತರಾಗುವುದಕ್ಕಾಗಿ ಕಪ್ಪು ಹಣ ಖರ್ಚು ಮಾಡಿ, ಜನಪ್ರತಿನಿಧಿಗಳಾಗಬಹುದಾಗಿದೆ. ಈ ಪ್ರಕ್ರಿಯೆ ಪ್ರಜಾತಾಂತ್ರಿಕ ವಿಧಾನವಾಗಿದ್ದರೂ ಸ್ವೀಕೃತ ವ್ಯವಸ್ಥೆಯಲ್ಲ. ಆದರೆ ಈ ವಿಧಾನ ಎಲ್ಲಾ ವಿಕಾಸೋನ್ಮುಖ ದೇಶಗಳಲ್ಲಿ ಆಚರಿಸಲಾಗುತ್ತದೆ ಮತ್ತು ಇದನ್ನು ಪ್ರಜಾತಾಂತ್ರಿಕವೆಂದೇ ಬಿಂಬಿಸಲಾಗುತ್ತದೆ. ವಾಸ್ತವವಾಗಿ ಇದು ಸಂಪೂರ್ಣ ಪ್ರಜಾತಾಂತ್ರಿಕವಿಹೀನವಾಗಿದೆ.

**02**. ಪ್ರಜಾತಾಂತ್ರಿಕ ವಿಹೀನ ಮಾರ್ಗ ಅರ್ಥಾತ್ ಶಾಸನದ ವಿರುದ್ಧ, ಜಾತಿ, ಧರ್ಮ ಮತ್ತು ಸಮುದಾಯಗಳ ಗುಂಪುಗಳನ್ನು ಮಾಡಿ ರಾಜ್ಯ ವ್ಯವಸ್ಥೆಯ ವಿರುದ್ಧ ಜನರನ್ನು ಕೆರಳಿಸುವ ಮತ್ತು ರಾಜ್ಯ ವ್ಯವಸ್ಥೆಯ ಕೆಲಸ ಕಾರ್ಯಗಳನ್ನು ಮಾಡಲಾಗದಂತಹ ವಾತಾವರಣವನ್ನು ನಿರ್ಮಾಣ ಮಾಡುವುದು. ವಿಶೇಷವಾಗಿ ವಿಕಾಸೋನ್ಮುಖ ದೇಶಗಳಲ್ಲಿ ಇಂತಹ ಪ್ರಜಾತಾಂತ್ರಿಕಲ್ಲದ ಕಾರ್ಯಕಲಾಪಗಳನ್ನು ಹೆಚ್ಚಿಸಿ, ರಾಜ್ಯವ್ಯವಸ್ಥೆಯನ್ನು ದುರ್ಬಲಗೊಳಿಸುವ ಕೆಲಸ ಕಪ್ಪು ಹಣದ ಮೂಲಕ ನಡೆಸಲಾಗುತ್ತದೆ. ಈ ಕಪ್ಪು ಹಣ ಪ್ರಯೋಗದ ಉದ್ದೇಶವೇ ದೇಶದೊಳಗೆ ದ್ವಂದ್ವ (ಭಿನ್ನಾಭಿಪ್ರಾಯಗಳು) ಉಂಟುಮಾಡುವುದು ಹಾಗೂ ಆತಂಕ ವನ್ನುಂಟುಮಾಡುವುದು. ಇಷ್ಟಲ್ಲದೆ, ಇಂತಹ ಸ್ಥಿತಿಯಲ್ಲಿ ಅಧಿಕಾರವನ್ನು ವಶಪಡಿಸಿಕೊಂಡು ಮತ್ತೇ ಕಪ್ಪು ಹಣದ ಸಂಗ್ರಹಮಾಡುವುದು. ಇಂತಹ ವರ್ತುಲ (ಚಕ್ರೀಯ) ಪದ್ಧತಿಯ ಕಾರಣದಿಂದಾಗಿ ಕಪ್ಪು ಹಣದ ಸಂಗ್ರಹವನ್ನು ತಡೆಗಟ್ಟುವ ಕಾರ್ಯದಲ್ಲಿ ಸಂಭವನೀಯತೆ ಅತಿ ಕಡಿಮೆ. ಆದರೂ ಇದರ ಪರಿಚಯದ ಹಿನ್ನಲೆಯುಲ್ಲಿ ಅವಶ್ಯಕ ವ್ಯವಸ್ಥಾಪನೆ ಮಾಡಬಹುದಾಗಿದೆ ಎಂಬ ನಂಬಿಕೆಯನ್ನಿಟ್ಟುಕೊಳ್ಳಬೇಕಾಗಿದೆ.

### 2. ಕಾನೂನುಬಾಹಿರ ವಸ್ತುಗಳ ವ್ಯವಹಾರ [Transaction of illicit goods]

ಕಾನೂನುಬಾಹಿರ ವಸ್ತುಗಳ ವ್ಯವಹಾರ ಕಪ್ಪು ಹಣದಿಂದಲೇ ನಡೆಯುತ್ತದೆ. ಕಾರಣ ಕಪ್ಪು ಹಣವೇ ಕಾನೂನುಬಾಹಿರವಾದುದು. ಆದ್ದರಿಂದ ನ್ಯಾಯಬಾಹಿರವಾಗಿ ವಸ್ತುಗಳ ವ್ಯವಹಾರ ನಡೆಯುತ್ತದೆ. ಇದರಿಂದ ಈ ಕೆಳಗಿನ ನ್ಯಾಯರಹಿತ ವಸ್ತುಗಳ ವ್ಯವಹಾರ ನಡೆಯುತ್ತದೆ.

**ಕ) ಬಳಕೆಯ ಪದಾರ್ಥ**

**ಖ) ಪ್ರತಿಬಂಧಿತ ವಸ್ತು (ನಿಯಂತ್ರಿಸಲ್ಪಟ್ಟ).**

**ಗ) ಹಿಂಸಾತ್ಮಕ ಆಯುಧಗಳು.**

**ಕ)** ಬಳಕೆಯ ವಸ್ತುಗಳ ಉತ್ಪಾದನೆ ಮಾಡುವುದು ಮತ್ತು ಅವುಗಳನ್ನು ಅನ್ಯದೇಶಗಳಲ್ಲಿ ವ್ಯಾಪಾರ ಮಾಡುವುದು ಕಾನೂನು ಬಾಹಿರವಾಗಿದೆ. ಹೀಗಿದ್ದರೂ ವಿಶ್ವದ ಅನೇಕ ದೇಶಗಳಲ್ಲಿ ಇಂತಹ ಬಳಕೆಯ ವಸ್ತುಗಳ ಉತ್ಪಾದನೆಯಾಗುತ್ತದೆ. ಅವುಗಳನ್ನು ಮತ್ತೇ ಇನ್ನಿತರ ದೇಶಗಳಿಗೆ ಕಳುಹಿಸಲಾಗುತ್ತದೆ. ಇಂತಹ ಪ್ರತಿಬಂಧಿತ ಪದಾರ್ಥಗಳ ಉತ್ಪಾದನೆ ಮತ್ತು ಪುನಃ ಅನ್ಯದೇಶಗಳಲ್ಲಿ ವ್ಯಾಪಾರವನ್ನು ಈ ಕಪ್ಪು ಹಣದಿಂದಲೇ ಇಂತಹ ಹಣದಿಂದಲೇ ಈ ಪ್ರತಿಬಂಧಿತ ವಸ್ತುಗಳನ್ನು ಕದ್ದು ಮುಚ್ಚಿಯೇ ಅನ್ಯದೇಶಗಳಿಗೆ ಕಳುಹಿಸಲಾಗುತ್ತದೆ. ಇಂತಹ ಪ್ರಯೋಗ ಬಹಿರಂಗವಾಗಿಯೇ ನಡೆಯುತ್ತದೆ. ಮತ್ತು ಇಂತಹ ವ್ಯಾಪಾರಗಳಲ್ಲಿ ಹೂಡಿದ ಕಪ್ಪುಹಣ ಸ್ಪಷ್ಟವಾಗಿ ಕಂಡುಬರುತ್ತದೆ.

**ಖ)** ಪ್ರತಿಬಂಧಿತ (ನಿಷೇಧಿತ) ವಸ್ತುಗಳನ್ನು ಅತ್ತಿತ್ತ ಮಾಡುವಲ್ಲಿಯೂ ಕಪ್ಪು ಹಣದ ಪ್ರಯೋಗ ಮಾಡಲಾಗುತ್ತದೆ. ಯಾವುದೇ ವಸ್ತುವಿನಲ್ಲಿ ನಿಷೇಧಿತ ನೀತಿ ಹಾಗೂ ಅವಶ್ಯಕತೆಗನುಗುಣವಾಗಿ ಯಾವುದೇ ವಸ್ತುವಿನ ಮೇಲೆ ನಿಷೇಧ ಹೇರಲಾಗುತ್ತದೆ. ಇಂತಹ ನಿಷೇಧಿತ ವಸ್ತುಗಳಿಗೆ ಬೇರೆ ದೇಶಗಳಲ್ಲಿ ಹೆಚ್ಚು ಬೇಡಿಕೆ ಇರುತ್ತದೆ. ಆದ್ದರಿಂದ ಅಂತಹ ದೇಶಗಳಿಗೆ ಈ ವಸ್ತುಗಳನ್ನು ತಲುಪಿಸುವ ಕೆಲಸವನ್ನು ಕೂಡ ಈ ಕಪ್ಪು ಹಣದ ಮೂಲಕವೇ ಮಾಡಲಾಗುತ್ತದೆ.

**ಗ)** ಹಿಂಸಾತ್ಮಕ ಆಯುಧಗಳೆಂದರೆ – ಭೌತಿಕ ಹಾಗೂ ರಾಸಾಯನಿಕ ಆಯುಧಗಳೆಂದು ತಿಳಿಯಬೇಕು. ಈ ಆಯುಧಗಳಿಂದ ಜೀವ ಜೀವಾತ್ಮಗಳ ಸರ್ವನಾಶ ಮಾಡಲಾಗುತ್ತದೆ. ಇಂತಹ ಹಿಂಸಾತ್ಮಕ ಆಯುಧಗಳನ್ನು ತಯಾರಿಸುವಲ್ಲಿ ಹೆಚ್ಚಾಗಿ ವಿಕಸಿತ ದೇಶಗಳು ನಿರತವಾಗಿರುತ್ತದೆ. ಬಡ ಹಾಗೂ ಸಣ್ಣ ದೇಶಗಳಲ್ಲಿ ಹರಡುವ ಆತಂಕ ಹಾಗೂ ರಾಷ್ಟ್ರಗಳ ಗಡಿಗಳಲ್ಲಿ ಅತಿಕ್ರಮಣ ಮಾಡುವಲ್ಲಿ ಪ್ರಯೋಗಿಸಲ್ಪಡುವ ಅನೇಕ ಆಯುಧಗಳಲ್ಲಿ ಕಪ್ಪು ಹಣದ ಹೂಡಿಕೆಯಾಗುತ್ತದೆ. ಹಿಂಸಾತ್ಮಕ ಆಯುಧಗಳಿಂದ ಕಪ್ಪು ಹಣ ಸಂಗ್ರಹಿಸಲಾಗುತ್ತದೆ ಮತ್ತು ಅದೇ ಕಪ್ಪು ಹಣದಿಂದ ಆಯುಧ (ಶಸ್ತ್ರಾಸ್ತ್ರಗಳನ್ನು ) ಉತ್ಪಾದಿಸಲಾಗುತ್ತದೆ. ರಾಷ್ಟ್ರರಕ್ಷಣೆಯ ನೆಪವಿಟ್ಟುಕೊಂಡು ಇಂತಹ ಆಯುಧ ಸಾಮಗ್ರಿಗಳ ಉತ್ಪಾದನೆಗೆ ಹೆಚ್ಚೆಚ್ಚು ಲಾಭಾಂಶದ (ಪಾಲು) ಕೊಡು ಕೊಂಡುಕೊಳ್ಳುವಿಕೆಯಿಂದ ಕಪ್ಪು ಹಣದ ಸಂಗ್ರಹವಾಗುತ್ತದೆ.

### 3) ಸಾಮಾಜಿಕವಲ್ಲದ ಕಾರ್ಯಕಲಾಪ ( Antisocial activity )

ಸಮಾಜಕ್ಕೆ ಹಾನಿಯುಂಟುಮಾಡುವ ಯಾವುದೇ ಕಾರ್ಯವೂ ಕೂಡ ಸಮಾಜ ಬಾಹಿರ ಕಾರ್ಯ ಕಲಾಪವೆನಿಸುತ್ತದೆ. ಕಪ್ಪು ಹಣದ ಸಂರಕ್ಷಣೆಗಾಗಿ ದೇಶಗೊಳಗೆ ಹಲವು ರೀತಿಯ ಸಮಾಜ ಬಾಹಿರ ಕಾರ್ಯಗಳು, ಕ್ರಿಯಾಕಲಾಪಗಳು ನಡೆಯುತ್ತವೆ. ಉದಾಹರಣೆಗೆ ಈ ಕೆಳಗಿನ ಕಾರ್ಯಗಳನ್ನು ಗಮನಸಬಹುದು.

**1. ಜೂಜು (ಕೆಸಿನೋ ಮತ್ತು ಭ್ರಮಿತಗೊಳಿಸಿ ಮೋಸದ ವ್ಯಾಪಾರ (ಸಟ್ಟಾಬಜಾರ್)**

**2. ವೇಶ್ಯಾವೃತ್ತಿ**

**3. ಅನಾರೋಗ್ಯಕರ ಮನೋರಂಜನಾ ಕೇಂದ್ರಗಳು**


**1. ಜೂಜು –** ಪಂಥಕಟ್ಟಿ ಆಡುವ ಹಾಗೂ ಇದೇ ರೀತಿಯ ಕಾರ್ಯಗಳನ್ನೊಳೊಂಡಿರುತ್ತದೆ. ಅವುಗಳೆಂದರೆ ಹಣವನ್ನು ಪಣಕ್ಕಿಟ್ಟು ಜೂಜಾಡುವುದು, ಇಸ್ಪೀಟು (ಕಾರ್ಡು) ಆಡುವುದು. ಕೈಸಿನೋ ಸ್ಥಾಪಿಸುವುದು ಮತ್ತು ಅಲ್ಲಿ ರಂಜನೆಗಾಗಿ ಹೋಗುವುದು. ಅಥವಾ ಸಟ್ಟಾ ಬಜಾರ್‌ನಲ್ಲಿ ಪಂಥ ಕಟ್ಟಿ ವ್ಯವಹಾರ ಇತ್ಯಾದಿ. ಇವೆಲ್ಲದರಲ್ಲಿ ಜೂಜು ಕೇಂದ್ರಗಳಿಂದ ಕಪ್ಪು ಹಣ ಸಂಗ್ರಹಿಸುವುವವರು ಹೂಡಿಕೆ ಮಾಡುತ್ತಾರೆ. ಹೆಚ್ಚಿನ ದೇಶಗಳಲ್ಲಿ ಪಾಲುದಾರಿಕೆಯ ಹೆಸರಿನಲ್ಲಿ ಸಾಧಾರಣ ತೆರಿಗೆ ವಸೂಲಿಯ ಹೆಸರಲ್ಲಿ ಜೂಜು ಕೇಂದ್ರವನ್ನು ನಡೆಸಲು ಅನುಮತಿ (ಸ್ವೀಕೃತಿ)ಯನ್ನಿತ್ತು, ಜೂಜು ಕೇಂದ್ರವನ್ನು ನಡೆಸುತ್ತಾರೆ ಮತ್ತು ಇದರಿಂದಲೇ ಕಪ್ಪುಹಣದ ವಹಿವಾಟು ನಡೆಯುತ್ತದೆ.

**2. ವೇಶ್ಯಾವೃತ್ತಿ** – ವೇಶ್ಯಾವೃತ್ತಿ – ವೇಶ್ಯಾವೃತ್ತಿ ಎಂದರೆ, ದೇಹ ವ್ಯಾಪಾರ ಎನ್ನಬಹುದು. ಇದೂ ಅಲ್ಲದೇ ಅಮಾನವೀಯವಾದ ಎಲ್ಲಾ ರೀತಿಯ ಕ್ರಿಯಾಕಲಾಪಗಳನ್ನು ಕೂಡ ಇದರೊಂದಿಗೆ ಸಂಕಲಿಸಬಹುದು. ಕಪ್ಪು ಹಣದ ಸಂಗ್ರಹಕ್ಕಾಗಿ ವೇಶ್ಯಾವೃತ್ತಿಯ ವಿಕಾಸವಾಗುತ್ತದೆ. ಅಂತೆಯೇ ಕಪ್ಪು-ಹಣದಿಂದಾಗಿ ವೇಶ್ಯಾವೃತ್ತಿಯೂ ವಿಕಸಿತವಾಗುತ್ತ ವೇಶ್ಯಾವೃತ್ತಿಯ ಪ್ರಾರಂಭ, ಬೆಳವಣಿಗೆ ಮತ್ತು ಅದರ ಉಪಲಬ್ಧತೆಯ ಮೂಲ ಸ್ರೋತವೂ ಕಪ್ಪು ಹಣವೇ ಆಗಿದೆ. ವಿಶ್ವದ ಬಹುತೇಕ ಎಲ್ಲಾ ದೇಶಗಳಲ್ಲಿ ವೇಶ್ಯಾವೃತ್ತಿಯನ್ನು ಸ್ವೀಕಾರ ಮಾಡಲಾಗಿದೆ. ಎಲ್ಲಿಯವರೆಗೆ ಈ ಕಪ್ಪು ಹಣದ ನಿಯಂತ್ರಣವಾಗುವುದಿಲ್ಲವೋ ಅಲ್ಲಿಯಿವರೆಗೆ ಮಾನವ –ಸಮಾಜದಿಂದ ವೇಶ್ಯಾವೃತ್ತಿಯಂತಹ ಪ್ರವೃತ್ತಿಗಳು ಕೊನೆಗೊಳ್ಳಲಾರವು.

**3. ಅನಾರೋಗ್ಯಕರ ಮನರಂಜನಾ ಕೆಂದ್ರ** – ಅರ್ಥಾತ್ ಮನೋರಂಜನೆಯ ಹೆಸರಲ್ಲಿ ತೆರೆಯಲ್ಪಡುವ ಅನಾರೋಗ್ಯಕರ ಮನೋರಂಜನಾ ಕೇಂದ್ರಗಳು, ಅಂದರೆ,

ವಿನೋದ ವಿಹಾರ ಕೇಂದ್ರ, ಸೋಷಲ್ ಕ್ಲಬ್ (ಸಾಮಾಜಿಕ ಕೂಟ) ಮತ್ತು ಯುವ ಮನಸ್ಸುಗಳನ್ನು ಆಕರ್ಷಿಸುವ ಕೇಂದ್ರಗಳಲ್ಲಿ ಮಾನವೀಯ ಸಂವೇದನಾಶೀಲತೆಯನ್ನು ನಗದು ರೂಪದಲ್ಲಿ ಪರಿವರ್ತನೆ ಮಾಡಿ ಉಪಚರಿಸುವ ಪ್ರಯತ್ನ ನಡೆಯುತ್ತದೆ. ಕಟ್ಟಕಡೆಗೆ ವ್ಯಕ್ತಿ ಮತ್ತು ಸಮುದಾಯಗಳಿಗೆ ನಷ್ಟವುಂಟಾಗುತ್ತದೆ. ಕೇಂದ್ರಗಳಿಗೆ ಲಾಭವಾಗುತ್ತದೆ. ಇಂತಹ ಕೇಂದ್ರಗಳಲ್ಲಿ ಕಪ್ಪುಹಣದ ಪ್ರಯೋಗವಾಗುತ್ತದೆ.

ಮೇಲಿನ ವಿಶ್ಲೇಷಣೆಯನ್ನು ಈ ಚಿತ್ರದ ಮೂಲಕ ನೋಡೋಣ.




ಈ ಮೇಲಿನ ಚಿತ್ರದಲ್ಲಿ ಕಪ್ಪು ಹಣದ ಮೂಲಕ ನಡೆಯುತ್ತಿರುವ ಸಮಾಜ ಬಾಹಿರ ತತ್ವಗಳನ್ನೂ ಸ್ಪಷ್ಟವಾಗಿ ತೋರಿಸುವ ಪ್ರಯತ್ನ ಮಾಡಲಾಗಿದೆ. ತಮ್ಮೊಳಗೆ ಎಲ್ಲಾ ತತ್ವಗಳು (ಚಟುವಟಿಕೆಗಳು) ಒಂದಕ್ಕೊಂದು ಸಂಬಂಧಿತವಲ್ಲದಿದ್ದರೂ ಒಂದೇ ಮೂಲದಿಂದ ವಿಕಸಿತವಾಗಿವೆ. ಈ ರೀತಿಯಲ್ಲಿ ನಿಯಂತ್ರಣ ನಿಯಮದ

ನಿರ್ಮಾಣದಲ್ಲಿ ಸಹಜತೆ ಸ್ಥಾಪಿತವಾಗುತ್ತದೆ. ಮೇಲಿನ ಚಿತ್ರದಲ್ಲಿ ಕಪ್ಪು ಹಣದ ಅಂತ್ಯದೊಂದಿಗೆ ಮಾತ್ರ, ಈ ಎಲ್ಲಾ ಸಮಾಜಬಾಹಿರ ಚಟುವಟಿಕೆಗಳು ಕೊನೆಗೊಳ್ಳಬಹುದಾಗಿದೆ.

***

# 31. ನಾಗರಿಕರಿಗೆ ಶಿಕ್ಷಣ, ಆರೋಗ್ಯ ಮತ್ತು ನ್ಯಾಯ ಒದಗಿಸುವ ರಾಜ್ಯದ ಹೊಣೆಗಾರಿಕೆ

## [Responsibility of the State in Education, Health and Justice]

ಈ ಜಗತ್ತಿನಲ್ಲಿ ಅನ್ಯಾನ್ಯ ಜೀವಿಗಳಂತೆಯೇ ಮನುಷ್ಯನೂ ಜನ್ಮ ತಳೆಯುತ್ತಾನೆ. ಆದರೆ ಅನ್ಯ ಜೀವಿಗಳಿಗಿಂತ ಭಿನ್ನವಾಗಿ ಮನುಷ್ಯ ಸಂಬಂಧ ಪರಿವಾರ, ಸಮುದಾಯ, ಸಮಾಜ ಹೀಗೆ ಸಾಗುತ್ತಾ ರಾಷ್ಟ್ರದೊಂದಿಗೆ ಬೆಸೆಯುತ್ತಾ ಹೋಗುತ್ತದೆ. ಹಾಗೆ ನೋಡಿದರೆ ವಿಶ್ವ ಮಾನವ ಸಮಾಜದ ಏಕರೂಪತೆಯ ವಿಚಾರವಾಗಿ ಸಾಕಷ್ಟು ಅಭಿಪ್ರಾಯಗಳು ಚರ್ಚೆಗಳು, ವ್ಯಾಖ್ಯಾನಗಳು ಆಗುತ್ತಿರುತ್ತವೆ. ಆದರೆ ಸಮುದಾಯ, ಸಮಾಜ, ಜಾತಿ ಮತ್ತು ಸಂಸ್ಕೃತಿಯ ಕಾರಣದಿಂದಾಗಿ ವಿಭಿನ್ನ ರಾಜನೈತಿಕ ವಾದ, ಪದ್ಧತಿ ಮತ್ತು ವ್ಯಾಖ್ಯಾನಗಳ ಅಧೀನದಲ್ಲಿ ರಾಜ್ಯ ನಿರ್ಮಾಣಕ್ಕಾಗಿ ವಿಶ್ವ ಮಾನವ ಸಮುದಾಯವನ್ನು ವಿಭಜಿಸಬಲಾಗಿದೆ. ಭಾಷೆ, ಸಂಸ್ಕೃತಿ, ಧರ್ಮ, ಜಾತಿ ಮತ್ತು ಜಾತಿಯ ಸ್ವಭಾವಗಳ ಆಧಾರದಲ್ಲಿ ಮಾನವ ವಿಭಜಿತವಾಗಿ ಖುಷಿಪಡುವ ಪ್ರವೃತ್ತಿಯಿಂದಿರುವ ಕಾರಣವೇ ವಿಶ್ವದಲ್ಲಿ ಬೇರೆ ಬೇರೆ ಸಮುದಾಯ ಮತ್ತು ರಾಜ್ಯಗಳು ಸ್ಥಾಪಿತವಾಗಿವೆ. ಆಧುನಿಕ ರಾಜ್ಯ ವ್ಯವಸ್ಥೆಯಲ್ಲಿರುವಂತೆ ಶಾಸಕ ಮತ್ತು ಶಾಸಿತ ( ಶಾಸನಕ್ಕೆ ಒಳಪಟ್ಟವರು) ರ ನಡುವಿನ ಬಹು ದೊಡ್ಡ ಅಂತರದ ಸ್ಥಾಪನೆ, ಪುರಾತನ ರಾಜ್ಯವ್ಯವಸ್ಥೆಯಲ್ಲಿ ಮಾಡಲಾಗಿರಲಿಲ್ಲ. ರಾಜ್ಯದ ಹೊಣೆಗಾರಿಕೆಯನ್ನು ಉಲ್ಲೇಖಿಸುವುದಕ್ಕಾಗಿ, ಇದರ ಅವಶ್ಯಕತೆ ಹಾಗೂ ಮೂಲ ವಿಷಯದ ಕುರಿತು ವಿಚಾರ ಮಾಡೋಣ.

ಕ) ಜೀವನ ಮತ್ತು ಪ್ರಕೃತಿ.

ಖ) ರಾಜ್ಯ ಮತ್ತು ನಾಗರಿಕ

ಗ) ರಾಜ್ಯದ ಹೊಣೆಗಾರಿಕೆ

ಘ) ನಾಗರಿಕ ಅಧಿಕಾರ

**ಕ) ಜೀವನ ಮತ್ತು ಪ್ರಕೃತಿ (Life and Nature )**

ಮನುಷ್ಯನ ಅವಶ್ಯಕತೆಗಳಿಗೆ ಮಿತಿ ಎಂಬುದಿಲ್ಲ. ಎಲ್ಲಾ ಅವಶ್ಯಕತೆಗಳ ಪೂರೈಕೆ ಮನುಷ್ಯ ತಾನೇ ಮಾಡಿಕೊಳ್ಳಬೇಕು. ಮನುಷ್ಯನನ್ನು ಮನುಷ್ಯನ ರೂಪದಲ್ಲಿ ವಿಕಾಸಮಾಡುವ ಕೆಲಸ ಪ್ರಕೃತಿ ಮಾಡುತ್ತದೆ. ಪ್ರಕೃತಿಯು ತನ್ನ ಹೊಣೆಯನ್ನು ಮರೆಯುವುದಿಲ್ಲ. ಪ್ರಕೃತಿಯ ವರದಾನದಿಂದಲೇ ಮನುಷ್ಯನ ಶಾರೀರಿಕ ವಿಕಾಸವಾಗುವುದು. ಆದ್ದರಿಂದಲೇ ಆತ ಬಾಲಕನಿಂದ ಯುವಕ ಮತ್ತು ಯುವಾವಸ್ಥೆಯ ನಂತರ ಪರಿಪಕ್ವನಾಗಿ ಸಮುದಾಯ, ಸಮಾಜ ಮತ್ತು ರಾಷ್ಟ್ರದ ಹಿತವನ್ನು ಮಾಡುವಲ್ಲಿ ಸಮರ್ಥವಾಗುತ್ತಾನೆ. ಮನುಷ್ಯ ಹುಟ್ಟಿದ ನಂತರದಿಂದ ಹಿಡಿದು ಮನುಷ್ಯರೂಪದಲ್ಲಿ ಸ್ಥಾಪಿತವಾಗುವವರೆಗೆ ಪ್ರಕೃತಿಯು ಯಾವ ಪ್ರತಿಫಲಾಪೇಕ್ಷೆ ಇಲ್ಲದೆ ಎಲ್ಲವನ್ನೂ ಕೊಡುತ್ತದೆ. ಆದ್ದರಿಂದ ಮನುಷ್ಯನು ಪ್ರಕೃತಿಯ ಕುರಿತು ಸದಾ ಕೃತಜ್ಞನಾಗಿರಬೇಕು. ಯಾವ ರೀತಿಯಲ್ಲಿ ಪ್ರಕೃತಿಯು ಮನುಷ್ಯನಿಗೆ ಸಂರಕ್ಷಣೆಯನ್ನು ನೀಡುತ್ತದೋ ಅಂತೆಯೇ ಮನುಷ್ಯನೂ ಪ್ರಕೃತಿಯ ಸಂರಕ್ಷಣೆ ಮಾಡುತ್ತಿರಬೇಕು. ಈ ರೀತಿಯ ಸಮನ್ವಯಾತ್ಮಕ ಸ್ಥಿತಿಯಿಂದಾಗಿಯೇ ಜೀವನ ಪ್ರಕೃತಿ ಮತ್ತು ಪ್ರಕೃತಿಯೇ ಜೀವನವಾಗಿದೆ. ಇದು ಪ್ರಮಾಣಿತ ಸತ್ಯ.

**ಖ) ರಾಜ್ಯ ಮತ್ತು ನಾಗರಿಕ ( State and Citizen )**

ಯಾವುದಾದರೊಂದು ವಿಭಜಿತವಾದ ರಾಜ್ಯದ ನಾಗರಿಕನಾಗಿ ಮನುಷ್ಯ ಬಾಳುತ್ತಾನೆ. ನಾಗರಿಕನ ಹೊರತು ರಾಜ್ಯ ಮತ್ತು ರಾಜ್ಯದ ಹೊರತು ನಾಗರಿಕನ ಕಲ್ಪನೆಯೇ (ಅಸಂಭವ) ಮಾಡಲಾಗದು. ಆದ್ದರಿಂದ ರಾಜ್ಯ ಮತ್ತು ನಾಗರಿಕ ಒಬ್ಬರು ಇನ್ನೊಬ್ಬರ ಪೂರಕವಾಗಿ ಪ್ರಮಾಣಿಸಲ್ಪಡುತ್ತಾರೆ. ರಾಜ್ಯದ ಮೂಲ ಉದ್ದೇಶ್ಯವು ತನ್ನ ರಾಜ್ಯದಲ್ಲಿ ವಾಸಿಸುವ ಮನುಷ್ಯನಿಗೆ ತನ್ನದೇ ಆದ ಜವಾಬ್ದಾರಿಯುತ ಸುಯೋಗ್ಯ ನಾಗರಿಕತ್ವವನ್ನು ನೀಡುವುದು. ಈ ರೀತಿ ಒಬ್ಬ ನಾಗರಿಕನನ್ನು ಸತ್ಪ್ರಜೆಯನ್ನಾಗಿ ಮಾಡುವುದಕ್ಕಾಗಿ, ಮುಖ್ಯವಾಗಿ ಮೂರು ಅನಿವಾರ್ಯ ನಿಃಶುಲ್ಕ ಸೇವೆಗಳನ್ನು ರಾಜ್ಯವು ನೀಡಬೇಕಾಗುತ್ತದೆ. ಯಾವ ರೀತಿ ಮನುಷ್ಯನ ವಿಕಾಸಕ್ಕೆ ಅವಶ್ಯಕವಾದ ತತ್ವಗಳು – ಜಲ, ವಾಯು ಮತ್ತು ಪ್ರಕಾಶ ಪ್ರಕೃತಿಯಿಂದ ನಿಃಶುಲ್ಕವಾಗಿ ಪ್ರಾಪ್ತವಾಗುತ್ತವೆಯೋ, ಅದೇ ರೀತಿ ನಾಗರಿಕನ ವಿಕಾಸಕ್ಕಾಗಿ ಅವಶ್ಯಕ ತತ್ವಗಳನ್ನು ರಾಜ್ಯವು ನಿಃಶುಲ್ಕವಾಗಿ ನೀಡಬೇಕು. ಈ ತತ್ವಗಳೆಂದರೆ ಶಿಕ್ಷಣ, ಆರೋಗ್ಯ ಮತ್ತು ನ್ಯಾಯ.

**1. ಶಿಕ್ಷಣ – [ Education ]**

ಶಿಕ್ಷಣವು ಮಾನವ ಜಾತಿಯ ವಿಕಾಸ ಹಾಗೂ ಉನ್ನತಿಗೆ ಮಹತ್ವಪೂರ್ಣ ವಿಷಯವಾಗಿದೆ. ಶಿಕ್ಷಣ ಮಾನವ ಜೀವನಕ್ಕೆ ಪ್ರಕಾಶವಾಗಿದೆ. ಇದು ಮಾನವ ಜೀವನದ ಪ್ರತಿಯೊಂದು ಅಂಗಗಳಿಗೂ ಪ್ರಕಾಶವನ್ನು ನೀಡುತ್ತದೆ. ಶಿಕ್ಷಣದ ಹೊರತು ಮಾನವನು ಒಬ್ಬ ನಾಗರಿಕನಾಗಿ ಪ್ರಸ್ತುತವಾಗಲು ಸಾಧ್ಯವಾಗಲಾರದು. ಶಿಕ್ಷಣ ಮಾನವೀಯ ವಿಕಾಸದ ಶಕ್ತಿಯಾಗಿದೆ. ಶಿಕ್ಷಣ ಕೇವಲ ಅನ್ಯಾಯದ ವಿರುದ್ಧ ಹೋರಾಡುವುದಕ್ಕಾಗಿ ಮಾತ್ರವಲ್ಲ ಅದು ಸಮಾಜ ಮತ್ತು ರಾಷ್ಟ್ರ ವಿಕಾಸದ ಅಡಿಪಾಯವೂ ಹೌದು, ಶಿಕ್ಷಣವಿಲ್ಲದ ಮನುಷ್ಯ ಜೀವನ ಕೇವಲ ಬದುಕುಳಿಯುವುದಕ್ಕಾಗಿ ಇರುತ್ತದೆ. ಅದೇ ವಿದ್ಯಾವಂತ ಮನುಷ್ಯ ಶಕ್ತಿವಂತನಾಗಿ ಸಮಾಜದಲ್ಲಿ ಸ್ಥಾಪಿತವಾಗುತ್ತಾನೆ. ಆದ್ದರಿಂದ ವಿದ್ಯಾವಂತ ವ್ಯಕ್ತಿ ರಾಷ್ಟ್ರದ ಉತ್ತಮ ನಾಗರಿಕನಾಗುತ್ತಾನೆ. ಮತ್ತು ಈ ನಾಗರಿಕ ದೇಶದ ಸಂಪತ್ತು ಕೂಡ ಆಗಿರುತ್ತಾನೆ.

**2. ಆರೋಗ್ಯ ( ಸ್ವಾಸ್ಥ್ಯ) – [ Justice ]**

ಆರೋಗ್ಯವು ಮಾನವ ಜೀವನಕ್ಕೆ ಆಧಾರ ಶಿಲೆಯಂತೆ ಅವಶ್ಯಕತೆಯಾಗಿದೆ. ರಾಷ್ಟ್ರದ ಸರ್ವಾಂಗೀಣ ವಿಕಾಸಕ್ಕೆ ಆರೋಗ್ಯವಂತ ಜನಶಕ್ತಿ ಮೂಲತತ್ವವಾಗಿದೆ. ಅರ್ಥಾತ್ ಮಾನವೀಯವಾಗಿ ಆರೋಗ್ಯವಂತ ವ್ಯಕ್ತಿ ಸಮಾಜ ಮತ್ತು ರಾಷ್ಟ್ರದ ಉತ್ಥಾನದ ಮೂಲ ಆಧಾರ. ಸ್ವಾಸ್ಥ್ಯವು ಮನುಷ್ಯನ ಕಾರ್ಯದಕ್ಷತೆಯಲ್ಲಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಪ್ರಭಾವ ಬೀರುತ್ತದೆ. ಉತ್ತಮ ಸ್ವಾಸ್ಥ್ಯ ಮನುಷ್ಯನ ಕಾರ್ಯದಕ್ಷತೆಯಲ್ಲಿ ವೃದ್ಧಿಯನ್ನುಂಟುಮಾಡುತ್ತದೆ. ಮನುಷ್ಯನ ಕಾರ್ಯ ದಕ್ಷತೆಯಲ್ಲಿ ವೃದ್ಧಿಯಾದಾಗ ವ್ಯಕ್ತಿ, ಸಮುದಾಯ, ಸಮಾಜ ಮತ್ತು ರಾಷ್ಟ್ರದ ಸಮಗ್ರಭಾಗಗಳಲ್ಲಿ ವಿಕಾಸವಾಗುತ್ತದೆ. ಆದ್ದರಿಂದ ಸ್ವಚ್ಛ ಹಾಗೂ ಸ್ವಸ್ಥವಾಗಿರುವುದು ಪ್ರತಿರಾಷ್ಟ್ರದ ನಾಗರಿಕನ ಅಧಿಕಾರವಾಗಿದೆ.

**3. ನ್ಯಾಯ ( ಕಾನೂನು ) [Justice ]**

ಮಾನವ ಸಮಾಜದಲ್ಲಿ ಎಲ್ಲಾ ಸದಸ್ಯರ ಬಲ, ಬುದ್ಧಿ ಮತ್ತು ಸಾಮರ್ಥ್ಯ ಸಮಾನವಾಗಿರುವುದಿಲ್ಲ. ವಯಸ್ಸೂ ಸಮಾನವಾಗಿರುವುದಿಲ್ಲ. ಲಿಂಗ ಮತ್ತು ವಯಸ್ಸಿನ ಸ್ಥಿತಿ, ಪರಿವಾರದ ಅಂತಸ್ತು, ಜಾತಿ, ಸಂಸ್ಕೃತಿ ಮತ್ತು ಸ್ವಭಾವದ ಕಾರಣದಿಂದಲೂ ಮನುಷ್ಯ ಮನುಷ್ಯನ ನಡುವೆ ತಿಳಿಯದ (ಅಜ್ಞಾತ) ಭಿನ್ನಾಭಿಪ್ರಾಯಗಳ ಅಸ್ತಿತ್ವ ಬೇರೂರಿರುತ್ತವೆ. ಮಾನವ ಸ್ವಭಾವ ಮತ್ತು ಪ್ರಕೃತಿಯ ಕಾರಣದಿಂದಾಗಿ ಸಮಾಜದಲ್ಲಿ ನೆಲೆಸಿರುವ ಮನುಷ್ಯರಲ್ಲಿ ಏಕರೂಪತೆ ಬರಲು

ಸಾಧ್ಯವಾಗುವುದಿಲ್ಲ. ಮನುಷ್ಯನಲ್ಲಿ ಆಗಾಗ ವಿಕಸಿತವಾಗುವ ಬಲ, ಅಭ್ಯಾಸ ಮತ್ತು ಅಹಮಿಕೆ ಮನುಷ್ಯನನ್ನು ತಪ್ಪು ದಾರಿಯತ್ತ ಕೊಂಡೊಯ್ಯುತ್ತವೆ. ಈ ತಪ್ಪು ಪ್ರವೃತ್ತಿಯ ಕಾರಣದಿಂದಾಗಿ ಮನುಷ್ಯನೇ ಮನುಷ್ಯನೊಂದಿಗೆ ಅನ್ಯಾಯ ಮಾಡತೊಡಗುತ್ತಾನೆ. ನ್ಯಾಯವೇ ಸತ್ಯ. ಅನ್ಯಾಯವೇ ತಪ್ಪು. ಹೀಗಿದ್ದರೂ ಮಾನವ ಸಮಾಜದಲ್ಲಿ ಒಬ್ಬರು ಇನ್ನೊಬ್ಬರಿಗೆ ಅನ್ಯಾಯವನ್ನು ಮಾಡುತ್ತಾರೆ. ಇಂತಹ ಅನ್ಯಾಯದ ವಿರುದ್ಧವಾಗಿ ದುರ್ಬಲ ಮನುಷ್ಯ ಮತ್ತು ಸಮುದಾಯಕ್ಕೆ ನ್ಯಾಯ ಸಿಗಬೇಕು. ನ್ಯಾಯ ಒದಗಿಸುವ ಕೆಲಸವನ್ನು ಕೂಡ ಅದೇ ಸಮಾಜದ ಮನುಷ್ಯ ಸಮುದಾಯ ಅಥವಾ ರಾಜ್ಯವೇ ಕೊಡಬೇಕು. ನ್ಯಾಯ ಪಡೆಯುವುದು ಮನುಷ್ಯನ ನೈಸರ್ಗಿಕ ಅಧಿಕಾರವಾಗಿದೆ.

ಆದರೆ ವರ್ತಮಾನದ ಕಾಲಘಟ್ಟದಲ್ಲಿ ನ್ಯಾಯ ನೀಡುವ ಪದ್ಧತಿ ವೈಜ್ಞಾನಿಕವಾಗಿಲ್ಲದಿರುವುದರಿಂದ ಜಗತ್ತಿನಲ್ಲಿ ವಿಕಾಸೋನ್ಮುಖ ದೇಶಗಳ ನಾಗರಿಕರು ಸುಲಭವಾಗಿ ನ್ಯಾಯ ಪಡೆಯಲು ಸಾಧ್ಯವಾಗುತ್ತಿಲ್ಲ. ನ್ಯಾಯ ಪಡೆಯುವುದರಕ್ಕೂ ಶುಲ್ಕ ನೀಡಬೇಕಾಗುತ್ತದೆ. ಅನೇಕ ವಿಕಾಸೋನ್ಮುಖ ದೇಶಗಳಲ್ಲಿ ಶುಲ್ಕ ನೀಡದರೂ ನ್ಯಾಯದ ಬದಲಿಗೆ ಅನ್ಯಾಯವೇ ಪ್ರಾಪ್ತವಾಗುತ್ತದೆ. ಇದಕ್ಕೆ ಕಾರಣ ನ್ಯಾಯವನ್ನು ಹಣದಿಂದ ತೂಗಲಾಗುತ್ತದೆ. ಇಂತಹ ದೇಶಗಳಲ್ಲಿ ನ್ಯಾಯ ಸಿಗುವುದು ಕಷ್ಟವಾಗುತ್ತದೆ. ನ್ಯಾಯ ಪ್ರಾಪ್ತವಾಗುವುದೇ ಜೀವನ ಮತ್ತು ಅನ್ಯಾಯವನ್ನು ಸಹಿಸುವುದು ಮೃತ್ಯು.

### ಗ) ರಾಜ್ಯದ ಹೊಣೆಗಾರಿಕೆ – ( Responsibility of the State )

ರಾಜ್ಯಗಳು ಯಾವುದೇ ಇರಲಿ, ರಾಜ್ಯದಲ್ಲಿ ಶಾಸನ ವ್ಯವಸ್ಥೆ ನಡೆಸಲು ವ್ಯಕ್ತಿ, ಸಮುದಾಯ ಮತ್ತು ಸಂಘಟಿತ ಸಂಸ್ಥೆಯಿಂದ ತೆರಿಗೆ ವಸೂಲಿ ಮಾಡಲಾಗುತ್ತದೆ. ಈ ತೆರಿಗೆಯಿಂದ ನಿರ್ಮಿತವಾದ ರಾಜ್ಯಕೋಶದಿಂದ ರಾಜ್ಯವು ತನ್ನ ಕ್ಷೇತ್ರದೊಳಗಿರುವ ವ್ಯಕ್ತಿ, ಸಮುದಾಯ ಮತ್ತು ಸಮಾಜದ ಹಿತಕ್ಕಾಗಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತದೆ. ಮತ್ತು ರಾಜ್ಯವನ್ನು ವಿಕಾಸದ ಹಾದಿಯಲ್ಲಿ ಮುನ್ನಡೆಸುತ್ತದೆ. ಈ ರಾಜ್ಯ ವ್ಯವಸ್ಥೆಯಲ್ಲಿ ರಾಜ್ಯದ ಮೂಲ ಸಿದ್ಧಾಂತದಿಂದ ದೂರವಾಗಿ ಕೆಲಸ ಮಾಡಲಾಗದು. ರಾಜ್ಯದ ಮೂಲ ಸಿದ್ಧಾಂತದ ತಾತ್ಪರ್ಯವೆಂದರೆ ತನ್ನ ನಾಗರಿಕರು ಮತ್ತು ರಾಜ್ಯದ ವಿಕಾಸದ ಮಟ್ಟವನ್ನು ಹೆಚ್ಚಿಸುವುದು. ಇದಕ್ಕಿಂತಲೂ ಮಹತ್ವಪೂರ್ಣ ಹೊಣೆಗಾರಿಕೆ ಎಂದರೆ ಜನತೆಗೆ ತಮ್ಮ ನಾಗರಿಕ ಅಸ್ತಿತ್ವವನ್ನು ನೀಡಿ, ಅವರ ಹಿತಕ್ಕಾಗಿ ವಿಕಾಸ ಕಾರ್ಯದ ಯೋಜನೆಗಳನ್ನು ಕಾರ್ಯಾನ್ವಿತಗೊಳಿಸುವುದು. ರಾಜ್ಯದ ವಿಭಿನ್ನ

ಹೊಣೆಗಾರಿಕೆಗಳಲ್ಲಿ ಪ್ರಮುಖವಾದ ಹೊಣೆಯೆಂದರೆ ಆ ರಾಜ್ಯದಲ್ಲಿ ವಾಸಿಸುವ ಪ್ರತಿ ನಾಗರಿಕನಿಗೆ ತಾನು ಈ ರಾಜ್ಯದ ನಾಗರಿಕ ಇಲ್ಲಿಯ ಸತ್ಪ್ರಜೆ ಎಂಬ ಅನುಭವವಾಗಬೇಕು. ಈ ನಟ್ಟಿನಲ್ಲಿ ಪ್ರತಿ ವ್ಯಕ್ತಿಗೆ ಅರ್ಹ ನಾಗರಿಕನ ಸ್ಥಾನ ಪ್ರದಾನ ಮಾಡಿ, ಆತ ಯೋಗ್ಯ ನಾಗರಿಕನಾಗುವಂತಹ ಅನಿವಾರ್ಯ ಶಿಕ್ಷಣ, ಸುಲಭ ಸ್ವಾಸ್ಥ್ಯ ಮತ್ತು ನ್ಯಾಯ ಪಡೆಯಲು ಅವಶ್ಯಕವಾದ ನೀತಿ ನಿರ್ಮಾಣ ಮಾಡಿ, ಅದನ್ನು ಜಾರಿಗೆ ತರುವುದು. ಜನತೆಗೆ ಶಿಕ್ಷಣ, ಸ್ವಾಸ್ಥ್ಯ ಮತ್ತು ನ್ಯಾಯ ಉಚಿತವಾಗಿ ದೊರೆಯಬೇಕು. ಇಂತಹ ವ್ಯವಸ್ಥೆಯಲ್ಲಿ ಜನತೆ ತಮ್ಮ ರಾಜ್ಯದಲ್ಲಿ ಜಾಗರೂಕ ಹಾಗೂ ಜವಾಬ್ದಾರಯುತ ನಾಗರಿಕರಾಗಿರಬಲ್ಲರು. ಇದರಿಂದ ದೇಶದ ಸರ್ವಾಂಗೀಣ ವಿಕಾಸ ಸಾಧ್ಯವಾಗಬಹುದು. ಜನರು ಅರ್ಹ ನಾಗರಿಕತ್ವವನ್ನು ಪಡೆದಾಗ ಆ ರಾಜ್ಯವು ಒಂದು ಆದರ್ಶ ರಾಜ್ಯವಾಗಿ ಸ್ಥಾಪಿತವಾಗಬಹುದು.

**ಫ) ನಾಗರಿಕರ ಅಧಿಕಾರ – ( Rights of Citizens )**

ವ್ಯಕ್ತಿಯು ಯಾವ ರಾಜ್ಯದ ಯಾವ ಭೂಭಾಗದಲ್ಲಿ ಜನಿಸುತ್ತಾನೋ, ಆತ ಆ ರಾಜ್ಯದ ನಾಗರಿಕನೆನಿಸಿಕೊಳ್ಳುತ್ತಾನೆ. ಅವನು ಆ ರಾಜ್ಯದ ಕಾನೂನನ್ನು ಮಾನ್ಯ ಮಾಡಬೇಕು. ವಿಧಿಸಲ್ಪಡುವ ತೆರಿಗೆಯನ್ನು ನೀಡಬೇಕು. ಮತ್ತು ಮತದಾನದ ಅಧಿಕಾರವನ್ನು ಪಡೆದಿರಬೇಕು. ಇಂತಹ ವ್ಯಕ್ತಿಯನ್ನು ನಾಗರಿಕನೆನ್ನುತ್ತೇವೆ. ಹೆಚ್ಚಿನ ವಿಕಾಸೋನ್ಮುಖ ದೇಶಗಳಲ್ಲಿ ನಾಗರಿಕರನ್ನು ರಾಜಕೀಯ ಕಾರ್ಯ ಕಲಾಪಗಳಲ್ಲಿ ತೊಡಗಿಸಿಕೊಳ್ಳಲು ಚುನಾವಣೆಯಲ್ಲಿ ಮತ ಹಾಕುವ ಅಸ್ತ್ರವನ್ನಾಗಿ ಉಪಯೋಗಿಸಲಾಗುತ್ತದೆ. ವ್ಯಕ್ತಿ ಇದೇ ತನ್ನ ನಾಗರಿಕ ಹಕ್ಕು ಎಂದುಕೊಳ್ಳುತ್ತಾನೆ. ಆದರೆ ವಾಸ್ತವವಾಗಿ ಚಾಲಾಕಿ ರಾಜಕಾರಣಿ ಮತ್ತು ಅವಕಾಶವಾದಿ ವ್ಯಕ್ತಿಯ ಸ್ವಾರ್ಥ ಸಾಧನೆಯಾಗುತ್ತದೆ ಮತ್ತು ಆತ ರಾಜಕೀಯ ಶಕ್ತಿ ಹೊಂದಿ ನಾಗರಿಕರ ಮೇಲೆ ಅಧಿಕಾರ ಚಲಾಯಿಸುತ್ತಾನೆ.

ರಾಜಕೀಯ ಅಧಿಕಾರದಿಂದ ನಾಗರಿಕರ ಸರ್ವತೋಮುಖ ವಿಕಾಸವಾಗಲಾರದು. ಆದ್ದರಿಂದ ಯಾವುದೇ ರಾಜ್ಯದ ಭೂಭಾಗದಲ್ಲಿ ಜನಿಸಿದ ಪ್ರತಿಯೊಬ್ಬರಿಗೂ ತನ್ನ ರಾಜ್ಯದಿಂದ ಕಡ್ಡಾಯ ಶಿಕ್ಷಣ, ಉಚಿತ ಸ್ವಾಸ್ಥ್ಯ, ಉಚಿತ ನ್ಯಾಯ ಸಿಗಬೇಕು. ಇದು ಪ್ರತಿಯೊಬ್ಬ ನಾಗರಿಕನ ಮೌಲಿಕ ಅಧಿಕಾರಗಳಾಗಿವೆ.

**1. ಉಚಿತ ಹಾಗೂ ಕಡ್ಡಾಯ ಶಿಕ್ಷಣ [Free and Compulsory Education ]**

ಪ್ರಾಥಮಿಕ ಹಂತದಿಂದಲೇ ರಾಜ್ಯವ್ಯವಸ್ಥೆಯಿಂದ ಉಚಿತ ಶಿಕ್ಷಣದ ವ್ಯವಸ್ಥೆಯಾಗಬೇಕು. ಪ್ರಾಥಮಿಕ, ಮಾಧ್ಯಮಿಕ ಮತ್ತು ಉಚ್ಚ ಮಾಧ್ಯಮಿಕದವರೆಗಿನ ಶಿಕ್ಷಣ ಕಡ್ಡಾಯವಾದಾಗ ಪ್ರತಿಯೊಬ್ಬ ನಾಗರಿಕನು ಜ್ಞಾನ ಮತ್ತು ಗುಣ ಪಡೆದುಕೊಳ್ಳಬಲ್ಲವನಾಗುತ್ತಾನೆ. ಆದ್ದರಿಂದ ಉಚ್ಚ ಮಾಧ್ಯಮಿಕ ಹಂತದವರೆಗಿನ ಶಿಕ್ಷಣವನ್ನು ನೀಡುವುದು ರಾಜ್ಯದ (ಸರಕಾರದ ) ಹೊಣೆಯಾಗಿದೆ. ಮತ್ತು ಈ ಶಿಕ್ಷಣವನ್ನು ಪಡೆಯುವುದು ಪ್ರತಿಯೊಬ್ಬ ನಾಗರಿಕನ ಅಧಿಕಾರವೂ ಆಗಿದೆ.

**2. ಸುಲಭ ಹಾಗೂ ಉಚಿತ ಸ್ವಾಸ್ಥ್ಯ (Free and easily accessed health Service )**


ವ್ಯಕ್ತಿಯ ಶರೀರ ಪ್ರಾಕೃತಿಕವಾಗಿದೆ. ಸಮಯ ಮತ್ತು ಪ್ರಕೃತಿಯ ಪರಿವರ್ತನೆಯೊಂದಿಗೆ ವ್ಯಕ್ತಿಯ ಸ್ವಾಸ್ಥ್ಯವು ಕೂಡ ಪರಿವರ್ತನೆಗೊಳ್ಳುತ್ತದೆ. ಒಂದು ವೇಳೆ ರಾಜ್ಯವು (ಸರಕಾರ) ನಾಗರಿಕರನ್ನು ಆರೋಗ್ಯವಂತನನ್ನಾಗಿಟ್ಟರೆ, ಆಗ ದೇಶದ ಸರ್ವಾಂಗೀಣ ವಿಕಾಸ ಸಾಧ್ಯವಾಗುತ್ತದೆ. ಆದ್ದರಿಂದ ಹುಟ್ಟಿನಿಂದ ಸಾಯುವವರೆಗೂ ರಾಜ್ಯವನ್ನು ಸ್ವಸ್ಥವಾಗಿಡುವುದಕ್ಕಾಗಿ ವಿಶೇಷ ಯೋಜನೆಗಳನ್ನು ಚಾಲನೆಗೆ ತರಬೇಕು. ಇಂತಹ ಯೋಜನೆಗಳಿಂದ ನಾಗರಿಕರು ಸುಲಭವಾಗಿ ಹಾಗೂ ಉಚಿತ ಆರೋಗ್ಯ ಹಾಗೂ ಚಿಕಿತ್ಸೆಯನ್ನು ಪಡೆಯಬಹುದಾಗಿದೆ.

**3. ಉಚಿತ ಹಾಗೂ ಶೀಘ್ರ ನ್ಯಾಯ ( Free and Prompt Justice )**

ಶುಲ್ಕ ನೀಡಿ ಪಡೆದ ನ್ಯಾಯ, ವ್ಯಕ್ತಿಗೆ ನಿಜ ನ್ಯಾಯ ಪಡೆದ ಅನುಭೂತಿಯನ್ನುಂಟು ಮಾಡುವುದಿಲ್ಲ. ಇಂಥದರಲ್ಲಿ ಒಂದು ವೇಳೆ ತಡವಾಗಿ (ವಿಳಂಬ) ನ್ಯಾಯ ಸಿಕ್ಕಿದರೂ ಅದು ಅನ್ಯಾಯದಂತೆಯೇ ಅನಿಸುತ್ತದೆ. ಆದ್ದರಿಂದ ನ್ಯಾಯವು ಶೀಘ್ರ ಮತ್ತು ಉಚಿತವಾಗಿ ಸಿಗುವ ವ್ಯವಸ್ಥೆಯ ಹಕ್ಕೊತ್ತಾಯವನ್ನು ರಾಜ್ಯ ಮಾಡಬೇಕು. ಯಾರೇ ವ್ಯಕ್ತಿಯಾಗಲಿ ಆತನಗೆ ಅನ್ಯಾಯವಾದಾಗ ಆತನಗೆ ನ್ಯಾಯ ಪಡೆಯುವ ಅಧಿಕಾರ ನಿಸರ್ಗದತ್ತವಾದುದು. ಅದು ಸಿಗಬೇಕು. ನಾಗರಿಕನ ಇಂತಹ ನಿಸರ್ಗದತ್ತ ಹಾಗೂ ಮೌಲಿಕ ಅಧಿಕಾರದ ಸಂರಕ್ಷಣೆ ಮಾಡುವುದು ರಾಜ್ಯದ ಜವಾಬ್ದಾರಿಯಾಗಿರುತ್ತದೆ.

**ಐ) ರಾಜ್ಯ ಮತ್ತು ನಾಗರಿಕರ ನಡುವಿನ ಆಂತರಿಕ ಸಂಬಂಧ (Interelatioship between State and Citizen)**

ರಾಜ್ಯ ಮತ್ತು ನಾಗರಿಕರ ನಡುವಲ್ಲಿ ವಿಶೇಷವಾದ ಆಂತರಿಕ ಸಂಬಂಧವಿರುತ್ತದೆ. ಒಂದು ವೇಳೆ ಇಂತಹ ಸಂಬಂಧ ತ್ಯಜಿಸಬೇಕಾದ ಸಂದರ್ಭ ಬಂದಲ್ಲಿ, ಎರಡೂ ಪಕ್ಷಗಳಿಗೆ ನಷ್ಟವಾಗುತ್ತದೆ. ಆದ್ದರಿಂದ ಈ ಆಂತರಿಕ ಸಂಬಂಧವನ್ನು ರಾಜ್ಯ ಮತ್ತು ನಾಗರಿಕರು ಇಬ್ಬರೂ ಪಾಲಿಸಬೇಕಾಗುತ್ತದೆ. ಆಗಲೇ ಇಬ್ಬರ ಉನ್ನತಿ ಮತ್ತು ಪ್ರಗತಿ ಸಾಧ್ಯವಾಗುತ್ತದೆ. ಈ ವಿಶೇಷ ಆಂತರಿಕ ಸಂಬಂಧವನ್ನು ಈ ಕೆಳಗಿನಂತೆ ತಿಳಿಯಬಹುದಾಗಿದೆ. ರಾಜ್ಯದ ಹೊಣೆಗಾರಿಕೆ ಮತ್ತು ನಾಗರಿಕರ ಜವಾಬ್ದಾರಿಯ ಕುರಿತಾದ (ಸಂಬಂಧಿತ) ನಕ್ಷೆ.




ಮೇಲಿನ ನಕ್ಷೆಯಲ್ಲಿ ನಾಗರಿಕನ ಕುರಿತಾದ ರಾಜ್ಯದ ಕರ್ತವ್ಯ ಮತ್ತು ರಾಜ್ಯದ ಕರ್ತವ್ಯ ಮತ್ತು ರಾಜ್ಯದ ಕುರಿತಾದ ನಾಗರಿಕ ಹೊಣೆಗಾರಿಕೆ (ಕರ್ತವ್ಯ)

ಯನ್ನು ತೋರಿಸಲಾಗಿದೆ. ಪ್ರತಿಯೊಬ್ಬ ವ್ಯಕ್ತಿಗೆ ಕಡ್ಡಾಯ ಶಿಕ್ಷಣ ನೀಡುವ ವ್ಯವಸ್ಥೆ ರಾಜ್ಯವು ಮಾಡಬೇಕಾಗುತ್ತದೆ. ಶಿಕ್ಷಣವು ಮನುಷ್ಯನ ಜ್ಞಾನ ಮತ್ತು ಬುದ್ಧಿಯನ್ನು ವಿಕಾಸ ಮಾಡುತ್ತದೆ. ಜ್ಞಾನ ಮತ್ತು ಬುದ್ಧಿಯ ವಿಕಾಸದಿಂದ ನಾಗರಿಕನ ಚೈತನ್ಯದ ಅಭಿವೃದ್ಧಿಯೂ ಆಗಿ ವಿವೇಕ ಶೀಲ ನಾಗರಿಕರು ತಯಾರಾಗುತ್ತಾರೆ. ಇಂತಹ ಚೈತನ್ಯ ಮತ್ತು ವಿವೇಕಯುಕ್ತ ನಾಗರಿಕರು ರಾಜ್ಯದ ಕುರಿತು ಜವಾಬ್ದಾರಿಯುತರಾಗಿರುತ್ತಾರೆ. ಈ ರೀತಿಯಲ್ಲಿ ರಾಜ್ಯವು ಒಳ್ಳೆಯ ನಾಗರಿಕರನ್ನು ತಯಾರು ಮಾಡುವಲ್ಲಿ ಸದಾ ಕ್ರಿಯಾಶೀಲವಾಗಿರಬೇಕಾಗುತ್ತದೆ. ಹೀಗಾದರೆ, ಮಾತ್ರ ರಾಜ್ಯದ ಸರ್ವಾಂಗೀಣ ವಿಕಾಸ ಸಾಧ್ಯವಾಗುತ್ತದೆ. ಈ ರೀತಿಯಲ್ಲಿ ರಾಜ್ಯ ಮತ್ತು ನಾಗರಿಕರ ನಡುವಿನ ಆಂತರಿಕ ಸಂಬಂಧವನ್ನು ಸ್ಥಿರವಾಗಿಡಬಹುದಾಗಿದೆ.

***

# 32. ಕೇವಲ ಕಾನೂನಿನ ಮೂಲಕ ಭ್ರಷ್ಟಾಚಾರವನ್ನು ನಿಯಂತ್ರಿಸಲಾಗದು.

## [Law alone cannot control corruption]


ಭ್ರಷ್ಟಾಚಾರವನ್ನು ಕಾನೂನಿನ ಮೂಲಕ ನಿಯಂತ್ರಿಸಬಹುದು ಎಂಬುದು ಅನೇಕರ ವಿಚಾರವಾಗಿದೆ. ಅದಕ್ಕಾಗಿ ಭ್ರಷ್ಟಾಚಾರ ವಿರುದ್ಧದ ಕಾನೂನು ನಿರ್ಮಾಣವಾಗಬೇಕು. ಈ ಅಭಿಮತ ಒಂದು ಹಂತದವರೆಗೆ ಪ್ರಸ್ತುತವು ಹೌದು. ಆದರೆ ಭ್ರಷ್ಟಾಚಾರವನ್ನು ಕಾನೂನಿನ ಮೂಲಕ ಸಂಪೂರ್ಣವಾಗಿ ನಿಯಂತ್ರಿಸಲು ಸಾಧ್ಯವಾಗದು. ಭ್ರಷ್ಟಾಚಾರಜನ್ಯ ಕಾರ್ಯಗಳು ಇರುವ ಸ್ಥಿತಿಯಲ್ಲಿ ಕಾನೂನಿನ ಕಾರ್ಯಾಚರಣೆಗಾಗಿ ದೂರು ದಾಖಲಿಸುವುದು, ಅನುಸಂಧಾನ ಮಾಡುವುದು ಮತ್ತು ಕಾನೂನು ಮಾಡಬಹುದಾಗಿದೆ. ಇಷ್ಟು ಮಾತ್ರವಲ್ಲ ಭ್ರಷ್ಟಾಚಾರ ಜನ್ಯ ಕಾರ್ಯಗಳು ನಡೆದಾಗ ನಿಶ್ಚಿತ ನ್ಯಾಯಾಲಯಗಳಿಂದ ನ್ಯಾಯಯುತ ನಿರ್ಣಯಗಳ ಮೂಲಕ ಶಿಕ್ಷೆ, ಅರ್ಥದಂಡ (ಹಣದ ರೂಪದಲ್ಲಿ ದಂಡ ಕಟ್ಟುವುದು) ಬಂಧನ ಅಥವಾ ಮೃತ್ಯುದಂಡ ನೀಡುವ ವ್ಯವಸ್ಥೆಯನ್ನು ಕೂಡ ಮಾಡಬಹುದಾಗಿದೆ. ಇದರಿಂದ ಭ್ರಷ್ಟಾಚಾರವು ಶಿಕ್ಷಾರ್ಹವಾಗಿದೆ. ಇಂತಹ ತಪ್ಪು ಮಾಡಬಾರದೆಂಬ ಸಂದೇಶ ಸಮಾಜಕ್ಕೆ ರವಾನೆಯಾಗುತ್ತದೆ. ಆದರೆ ಇಂತಹ ಕಾರ್ಯಾಚರಣೆಯಿಂದ ಭ್ರಷ್ಟಾಚಾರವನ್ನು ನಿಯಂತ್ರಿಸಲಾಗುವುದಿಲ್ಲ. ಭ್ರಷ್ಟಾಚಾರ ಮಾಡುವ ವ್ಯಕ್ತಿ, ಸಮುದಾಯ ಅಥವಾ ಸಂಸ್ಥೆಗಳನ್ನು ಕಾನೂನಿನ ಮೂಲಕ ದಂಡಿಸಬಹುದು. ಎಂಬ ಸಂದೇಶವನ್ನು ಜಾರಿಗೊಳಿಸಬಹುದು. ಇಂತಹ ಕಾನೂನಿನ ಕಾರ್ಯಾಚರಣೆಯಿಂದ ಸಮಾಜದಲ್ಲಿ ಭ್ರಷ್ಟಾಚಾರಿಗಳಿಗೆ ಭಯವೇನೋ ಉಂಟಾಗಬಹುದು.ಆದರೆ ಭ್ರಷ್ಟಾಚಾರ ಜನ್ಯ ಕಾರ್ಯಗಳನ್ನು ನಿಷೇಧಿಸಲಾಗದು.

ಕಾನೂನಿನ ಮಾನ್ಯವಾದ ಸಿದ್ಧಾಂತಗಳ ಆಧಾರದಲ್ಲಿ ಸಮಯಾನುಸಾರ ಉದ್ಭವಿಸುವ ಸರಿಯಾದ ಕಾನೂನು ಹಾಗೂ ಕಾನೂನಿನ ಸಿದ್ದಾಂತದ ವಿಶೇಷ ವ್ಯಾಖ್ಯೆಯನ್ನು ಮಾಡಬಹುದು. ಏಕೆಂದರೆ ವಿಷಯ ಮತ್ತು ಸಮಯವನ್ನು ಕಾನೂನಿನ ಅಪರಿಹಾರ್ಯ ಸಿದ್ಧಾಂತದ ಮೇರೆಯೊಳಗಿಟ್ಟು ಸಹ ನಿರೀಕ್ಷಿಸಬಹುದು. ಕಾನೂನೇ ಸ್ವತಃ ಪರಿಣಾಮವಲ್ಲ, ಕಾರಣದಿಂದ ಜನಿಸಿದ ಪರಿಣಾಮಮುಖಿ ಮಾರ್ಗಮಾತ್ರವಾಗಿದೆ. ಕಾನೂನಿನ ಮೂಲಕ ಪರಿಣಾಮ ಪ್ರಮಾಣಿತವಾಗಿ ಬರಬಲ್ಲದು.

ಕಾನೂನು ಅನಪೇಕ್ಷಿತ ಕಾರ್ಯಗಳನ್ನು ತಡೆಯುತ್ತದೆ. ಇಂತಹ ಅನಪೇಕ್ಷಿತ ಕಾರ್ಯಗಳು ಕೂಡ ಕಾನೂನಿನಲ್ಲಿ ಉಲ್ಲೇಖಿಸಿರಬೇಕು. (ಬರೆದಿರಬೇಕು) ಒಂದು ವೇಳೆ ಬರವಣಿಗೆಯ ರೂಪದಲ್ಲಿ ಕಾನೂನಿನಲ್ಲಿ ಇಲ್ಲದೆ ಹೋದಲ್ಲಿ ಮನಷ್ಯ ಈ ಅನಪೇಕ್ಷಿತ ಕಾರ್ಯಗಳನ್ನು ಮಾಡಬಹುದಾಗಿದೆ. ಮನುಷ್ಯ ಮತ್ತು ಮನುಷ್ಯ ಸಮುದಾಯ ಎಷ್ಟು ಸ್ವತಂತ್ರರಾಗುತ್ತಾರೆಂದರೆ, ಕಾನೂನು ಅವರನ್ನು ಕಟ್ಟಿ ಹಾಕಲಾಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಅವನು ಯಾವಾಗಲೂ ಕಾನೂನಿನಿಂದ ಹೊರಗುಳಿಯುತ್ತಾನೆ.

ಮನುಷ್ಯ ಒಬ್ಬ ಪ್ರಾಕೃತಿಕ ಪ್ರಾಣಿಯಾಗಿದ್ದಾನೆ. ಆತ ಸ್ವತಂತ್ರ ಸ್ವಭಾವದವನಾಗಿದ್ದಾನೆ. ಸ್ವೇಚ್ಛಾಚಾರಿಯು ಆಗಬಹುದು. ವಿವೇಕಿಯೂ ಆಗಬಹುದು. ವಿಕಾಸ ಮುಖಿಯಾಗುತ್ತಾನೆ. ಆದ್ದರಿಂದಲೇ ಆತ ಕಾನೂನಿನ ಹೊರಗುಳಿಯು ಬಯುಸುತ್ತಾನೆ. ಮಾನವೀಯು ಸ್ವಭಾವವನ್ನು ಗುರಿಯಾಗಿಟ್ಟುಕೊಂಡು ವಾತಾವರಣದ ಸೃಷ್ಟಿಯಾಗಬೇಕು. ಈ ವಿಚಾರದ ಜ್ಞಾನವನ್ನು ಕೊಡುವಲ್ಲಿ ಭ್ರಷ್ಟವಿರೋಧಿ ಶಾಸ್ತ್ರವು ಸಮರ್ಥವಾಗಿದೆ.

ವ್ಯಕ್ತಿಯಿಂದ ಸಮಾಜ ಮತ್ತು ಸಮಾಜದಿಂದ ರಾಷ್ಟ್ರವಾಗುತ್ತದೆ. ವ್ಯಕ್ತಿಗಳಿಂದ ಕೂಡಿದ ಯಾವುದೇ ಸಮುದಾಯವನ್ನು ಕಾನೂನು ನಿಯಂತ್ರಿಸಬಲ್ಲುದು. ಆದರೆ ವ್ಯಕ್ತಿ ಮತ್ತು ವ್ಯಕ್ತಿ ಚೈತನ್ಯವನ್ನು ಕಾನೂನು ನಿಯಂತ್ರಣ ಮಾಡಲಾರದು. ಇದನ್ನು ಈ ಕೆಳಗಿನ ಚಿತ್ರದಲ್ಲಿ ನೋಡಬಹುದು.




ಈ ಮೇಲಿನ ಚಿತ್ರ ವ್ಯಕ್ತಿಯೇ ಸರ್ವೋಪರಿ ಎಂಬುದನ್ನು ತೋರಿಸುತ್ತದೆ. ವ್ಯಕ್ತಿಯು ಸಮ್ಮಿಳಿತವಾಗುವಲ್ಲಿ ಸಮಾಜ ಪ್ರಸ್ತುತವಾಗಿ ನಿಲ್ಲುತ್ತದೆ. ನಾಗರಿಕನು ಸಮಾಜ ವ್ಯವಸ್ಥೆಯಲ್ಲಿ ಸೇರಿ ಹೋಗುತ್ತಾನೆ. ರಾಜ್ಯ ವ್ಯವಸ್ಥೆಯ ಮೂಲಕ ತಯಾರಾದ ಕಾನೂನು ಮತ್ತು ಆ ಕಾನೂನನ್ನು ಕಾರ್ಯಾನ್ವಿತಗೊಳಿಸುವ ನ್ಯಾಯಿಕ ಸಮುದಾಯ ಎಲ್ಲವೂ ಒಂದು ಇನ್ನೊಂದರೊಂದಿಗೆ ಸಂಬಂಧಿತವಾಗಿರುತ್ತದೆ. ಆದರೆ ಭ್ರಷ್ಟಾಚಾರ ಜನ್ಯ ಕ್ಷೇತ್ರ ನೇರವಾಗಿ ವ್ಯಕ್ತಿಯೊಂದಿಗೆ ಸಂಬಂಧಿತವಾಗಿರುತ್ತದೆ. ಏಕೆಂದರೆ ವ್ಯಕ್ತಿಯೇ ಭ್ರಷ್ಟಾಚಾರದ ಮೂಲ ಸ್ರೋತವಾಗಿದ್ದಾನೆ. ವ್ಯಕ್ತಿ ಮತ್ತು ನಾಗರಿಕ ಸಮಾಜವೇ ಭ್ರಷ್ಟಾಚಾರ ಜನ್ಯ ಕಾರ್ಯದ ಉತ್ಪಾದಕರು, ಇವರ ಕಾರಣದಿಂದಲೇ ರಾಜ್ಯ ವ್ಯವಸ್ಥೆ ಮತ್ತು ಅದರೊಳಗಿನ ಕಾನೂನು ಮತ್ತು ನ್ಯಾಯಿಕ ಸಮುದಾಯವು ಭ್ರಷ್ಟಾಚಾರವನ್ನು ನಿಯಂತ್ರಿಸಲಾಗುವುದಿಲ್ಲ.

ಇದೇ ರೀತಿ ಕಾನೂನಿನಿಂದ ಮಾನ್ಯ ಮಾಡಲ್ಪಟ್ಟ ಸಿದ್ಧಾಂತ ವ್ಯಕ್ತಿ ಮತ್ತು ವ್ಯಕ್ತಿಗಳಿಂದ ನಿರ್ಮಿತ ಸಮುದಾಯವನ್ನು ವಿಭಿನ್ನ ರೂಪಗಳಲ್ಲಿ ಪ್ರಸ್ತುತ ಪಡಿಸುತ್ತವೆ. ರಾಜ್ಯದೊಳಗೆ ರಾಜ್ಯದ ವ್ಯವಸ್ಥೆಯನ್ನು ನಿರ್ವಹಿಸುವ ವ್ಯಕ್ತಿ ಮತ್ತು ವ್ಯಕ್ತಿಯ ಅಸ್ತಿತ್ವ ಸ್ಥಾಪಿಸಿ, ವಿಭಿನ್ನ ಕಾರ್ಯಗಳನ್ನು ಮಾಡುವುದಕ್ಕಾಗಿ ಸಮುದಾಯದ ಅವಶ್ಯಕತೆಯನ್ನು ಕಾನೂನು ಕೂಡ ಸ್ವೀಕರಿಸಿದೆ. ಇದನ್ನು ಹೀಗೆ ಹೇಳಬಹುದು. ಪ್ರಾಕೃತಿಕ ವ್ಯಕ್ತಿ ಎಂದರೆ ಜೀವಿತ ಮಾನವನಾಗಿದ್ದಾನೆ ಮತ್ತು ಕಾನೂನಿ ವ್ಯಕ್ತಿ ಎಂದರೆ ವ್ಯಕ್ತಿಯಿಂದ ಸ್ಥಾಪಿತ ಚಿಕ್ಕದು ಅಥವಾ ದೊಡ್ಡದು ಸಮುದಾಯಗಳಿವೆ.

ಇಂತಹ ಸಮುದಾಯಗಳಲ್ಲಿ ರಾಜ್ಯವನ್ನು ವ್ಯವಸ್ಥಿತಗೊಳಿಸುವ ಸರಕಾರಗಳು ಕೂಡ ಇರುತ್ತವೆ.

**ಕಾನೂನು ಮಾಡಿರುವ ಪರಿಕಲ್ಪನೆ :–**

**ಪ್ರಾಕೃತಿಕ ವ್ಯಕ್ತಿ :–** ಅನಪೇಕ್ಷಿತ ಕಾರ್ಯಗಳನ್ನು ಹೊರತುಪಡಿಸಿ, ಬೇರೆಲ್ಲಾ ಕಾರ್ಯಗಳನ್ನು ಮಾಡುವ ಅನುಮತಿ.

**ಕಾನೂನಿ ವ್ಯಕ್ತಿ :–** ಅಪೇಕ್ಷಿತ ಕಾರ್ಯದ ಹೊರತಾಗಿ ಬೇರೆ ಯಾವ ಕಾರ್ಯಗಳನ್ನು ಮಾಡುವ ಅನುಮತಿ ಇಲ್ಲದಿರುವುದು.

ಕಾನೂನಿನ ಮೂಲಕ ಪ್ರತಿಬಂದಿತ ಕಾರ್ಯವನ್ನು ಹೊರತುಪಡಿಸಿ, ಪ್ರಾಕೃತಿಕ ವ್ಯಕ್ತಿ ಪ್ರತಿಯೊಂದು ಕೆಲಸ ಮಾಡಬಹುದಾಗಿದೆ. ಕಾನೂನಿನ ಮೂಲಕ ನಿರ್ಧಾರಿತ ಕಾರ್ಯವನ್ನು ಮಾಡುವ ಅಧಿಕಾರವಲ್ಲದೆ, ಮತ್ತು ಯಾವುದಾದರೂ ಕಾನೂನಿ ಅಧಿಕಾರ ವ್ಯಕ್ತಿಗಿರುವುದಿಲ್ಲ.. ಆದ್ದರಿಂದ ನಾಗರಿಕ ಸಮಾಜದಿಂದ ನಿರ್ಮಿತ ಚಿಕ್ಕ ಅಥವಾ ದೊಡ್ಡ ಸಮುದಾಯ ಅಥವಾ ರಾಜ್ಯ ವ್ಯವಸ್ಥೆ ನಿರ್ವಹಿಸುವ ಸರಕಾರ ಮತ್ತು ಅದರ ಅಂಗಗಳು ಪೂರ್ಣ ರೂಪದಲ್ಲಿ ಕಾನೂನಿಗೆ ಒಳಪಟ್ಟಿರುತ್ತವೆ. ಆದರೆ ಅದೇ ರಾಜ್ಯದೊಳಗೆ ಇರುವ ವ್ಯಕ್ತಿಗೆ ಕಾನೂನು ಮೂಲಕ ನಿಷೇಧಿತ ಕಾರ್ಯದ ಹೊರತಾಗಿ ಉಳಿದೆಲ್ಲಾ ಕಾರ್ಯಗಳನ್ನು ಮಾಡುವ ಅಧಿಕಾರ ಪ್ರಾಪ್ತವಾಗುತ್ತದೆ. ಆದ್ದರಿಂದ ಭ್ರಷ್ಟಾಚಾರದ ಸ್ರೋತವೇ ವ್ಯಕ್ತಿಯಾಗಿರುವುದರಿಂದ ವ್ಯಕ್ತಿಗೆ ಕಾನೂನು ಬೇರೆ ಸಮುದಾಯಗಳಂತೆ ನಿಯಂತ್ರಣ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಭ್ರಷ್ಟಾಚಾರವನ್ನು ಕೂಡ ಕಾನೂನು ನಿಯಂತ್ರಿಸಲಾರದು. ವ್ಯಕ್ತಿ ಮತ್ತು ವ್ಯಕ್ತಿಯ ಇಚ್ಛಿತ ಕಾರ್ಯ ಮುಂದೆ ಮುಂದೆ ಇರುತ್ತದೆ. ಮತ್ತು ಕಾನೂನು ವ್ಯಕ್ತಿಯ ಕಾರ್ಯ ಕಲಾಪಗಳ ಹಿಂದೆ ಹಿಂದೆ ಇರುತ್ತದೆ.

ಪ್ರಾಕೃತಿಕ ವ್ಯಕ್ತಿಯಲ್ಲಿ ಬುದ್ಧಿ, ವಿವೇಕ ಮತ್ತು ಚೈತನ್ಯದಂತಹ ವಿಶಿಷ್ಟ ಮಾನವೀಯ ಗುಣಗಳು ಕೂಡ ಇರುತ್ತವೆ. ಇದನ್ನು ಕಾನೂನು ತಿಳಿಯಲಾರದು. ಇದೇ ಬುದ್ಧಿ, ವಿವೇಕ ಮತ್ತು ಚೈತನ್ಯ ಸಂಪನ್ನ ವ್ಯಕ್ತಿ ಭ್ರಷ್ಟಾಚಾರ ವಿರುದ್ಧದ ಸಂಸ್ಕೃತಿಯನ್ನು ಗ್ರಹಿಸುವ ಸಾಮರ್ಥ್ಯವು ಕೂಡ ಇರುತ್ತದೆ. ವಿಶ್ವದ ಮಾನವ ಸಮುದಾಯದಿಂದ ಅತಿ ಸರಳವಾಗಿ ಗ್ರಹಿಸುವ ಮತ್ತು ಅಭ್ಯಾಸ ಮಾಡುವವರು ಭ್ರಷ್ಟಾಚಾರ ವಿರುದ್ಧದ ಸಂಸ್ಕೃತಿಯ ವಿಕಾಸ ಮಾಡುವ ಕಾರ್ಯದಲ್ಲಿ ಈ ಭ್ರಷ್ಟ ವಿರೋಧಿ ಶಾಸ್ತ್ರ ಸಫಲ ಸಿದ್ಧವಾಗಬಹುದು.

# 33. ಒತ್ತಡ ಸಮೂಹ [Pressure Group]

ಒತ್ತಡದ ಸಮೂಹವೆಂದರೆ – ಸರಕಾರ, ವ್ಯಕ್ತಿ, ಸಮುದಾಯದ ಕಡೆಯಿಂದ ಒಂದು ವೇಳೆ ನಡೆಯುವ ಅಹಿತಕರ ಕಾರ್ಯಗಳ ನಡೆಯುವ ಮತ್ತು ಅದನ್ನು ತಡೆಯುವುದಕ್ಕಾಗಿ ಒತ್ತಡದ ವಾತಾವರಣ ಸೃಷ್ಟಿಸುವುದು. ಇನ್ನೊಂದರ್ಥದಲ್ಲಿ ಒತ್ತಡದ ಸಮೂಹವೆಂದರೆ ತಮ್ಮ ಸ್ವಾರ್ಥ ಲಾಭಕ್ಕಾಗಿ ಸಮಾನ ಮನಸ್ಕರಾದ ವ್ಯಕ್ತಿಗಳು ಸಂಘಟಿತರಾಗಿ ತಮ್ಮಲ್ಲಿ ಬದ್ಧತೆಯನ್ನು ಹೊಂದಿರುತ್ತಾರೆ. ಇವರುಗಳು ತಮ್ಮ ಉದ್ದೇಶ್ಯ ಪ್ರಾಪ್ತಿಗಾಗಿ ಕ್ರಿಯಾಶೀಲರಾಗಿರುತ್ತಾರೆ. ದೇಶ ಮತ್ತು ಆ ದೇಶದಲ್ಲಿ ಪ್ರಚಲಿತ ರಾಜನೈತಿಕ ಪದ್ಧತಿಗನುಸಾರವಾಗಿ ಚಿಕ್ಕದಿರಲಿ, ದೊಡ್ಡದಿರಲಿ, ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಈ ಒತ್ತಡದ ಸಮೂಹಗಳು ಸಂಘಟಿತವಾಗುತ್ತವೆ. ಕೆಲವು ಸಮೂಹಗಳು ಜನತೆಯ ಹಿತವನ್ನುಂಟುಮಾಡಿದರೆ, ಇನ್ನು ಕೆಲವು ಸರಕಾರದ ಮೇಲೆ ಕಣ್ಣಿಟ್ಟಿರುತ್ತಾರೆ. ಇದೀಗ ನಾವು ಇಲ್ಲಿ ಚರ್ಚಿಸುತ್ತಿರುವ ಒತ್ತಡದ ಸಮೂಹವು ಜನರ ಹಾಗೂ ರಾಷ್ಟ್ರದ ಹಿತಕ್ಕಾಗಿ ಕಾರ್ಯ ಮಾಡುತ್ತದೆ.

ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಹೆಚ್ಚು ಲೋಕಕಲ್ಯಾಣಕಾರಕ ವ್ಯವಸ್ಥೆಯಾಗಿ ಸ್ಥಾಪಿಸುವ ಕಾರ್ಯದಲ್ಲಿ ಈ ಒತ್ತಡದ ಸಮೂಹವು ವಿಶೇಷ ಪಾತ್ರವನ್ನು ನಿರ್ವಹಿಸುತ್ತದೆ. ಜಗತ್ತಿನಲ್ಲಿ ಎಲ್ಲೆಲ್ಲಿ ಪ್ರಜಾತಾಂತ್ರಿಕ ವ್ಯವಸ್ಥೆ, ಪದ್ಧತಿಯಲ್ಲಿ ಸಫಲತೆ ಪ್ರಾಪ್ತವಾಗಿದೆಯೋ, ಅಲ್ಲೆಲ್ಲಾ ರಚನಾತ್ಮವಾಗಿ ಸ್ಥಾಪಿತ ಒತ್ತಡದ ಸಮೂಹವು ಉತ್ಕೃಷ್ಟವಾದ ಕಾರ್ಯಗಳನ್ನು ಮಾಡಿದೆ. ಆದ್ದರಿಂದ ಸಫಲ ಪ್ರಜಾತಾಂತ್ರಿಕ ಪದ್ಧತಿಯ ವಿಕಾಸಕ್ಕಾಗಿ ಒತ್ತಡ ಸಮೂಹದ ಅವಶ್ಯಕತೆ ಇದೆ. ಸಫಲ ರಾಜನೈತಿಕ ಪದ್ಧತಿ ಸಂಚಾಲಿತವವಾಗುವ ದೇಶಗಳಲ್ಲಿ ಸಮಾಜದ ಜಾಗೃತಿಯ ಆಧಾರದಲ್ಲಿ

ಒತ್ತಡ ಸಮೂಹದ ನಿರ್ಮಾಣವಾಗಿದೆ. ಸಮಾಜ ಎಷ್ಟು ವಿಕಸಿತವಾಗುತ್ತಾ ಹೋಗುತ್ತದೋ, ಒತ್ತಡ ಸಮೂಹದ ನಿರ್ಮಾಣವಾಗಿದೆ. ಸಮಾಜ ಎಷ್ಟು ವಿಕಸಿತವಾಗುತ್ತಾ ಹೋಗುತ್ತದೋ, ಒತ್ತಡ ಸಮೂಹಗಳ ಸಂಖ್ಯೆ ಮತ್ತು ಕಾರ್ಯಕ್ಷೇತ್ರವೂ ವಿಕಾಸವಾಗುತ್ತಾ ಹೋಗುತ್ತದೆ. ಪ್ರಜಾತಂತ್ರದ ಪಕ್ಷವೇ ( ವಿಚಾರವೇ) ನಿಸ್ವಾರ್ಥ ಮತ್ತು ರಚನಾತ್ಮಕ ಒತ್ತಡ ಸಮೂಹದ ನಿರ್ಮಾಣವಾಗಬೇಕು. ಯಾವುದೇ ಸಮಾಜದಲ್ಲಿ ವ್ಯಾವಸಾಯಿಕ ಆರ್ಥಿಕ, ರಾಜನೈತಿಕ, ಸಾಮಾಜಿಕ ಸಾಂಸ್ಕೃತಿಕ , ದಾರ್ಮಿಕ ಭಾಷಿಕ ಜಾತಿಯ ಹಾಗೂ ಪ್ರಜಾತಾಂತ್ರಿಕ ಇತ್ಯಾದಿ ಸಮೂಹಗಳು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಕ್ರಿಯಾಶೀಲವಾಗಿರುತ್ತವೆ. ಈ ಸಮೂಹಗಳ ಭಿನ್ನ ಭಿನ್ನ ಸ್ವಾರ್ಥ ಆಕಾಂಕ್ಷೆಗಳು ಮತ್ತು ಗುರಿಗಳಿರುತ್ತವೆ. ರಾಜಕೀಯ ವಾತಾವರಣ ಮತ್ತು ಅವಶ್ಯಕತೆಗನುಸಾರವಾಗಿ ಈ ಸಮೂಹಗಳು ಸರಕಾರದ ಯಾವುದೇ ಪಾರ್ಶ್ವದ ಮೇಲೆ ಒತ್ತು ಕೊಡಬಲ್ಲವು. ಇವುಗಳನ್ನು ಕೂಡ ಒತ್ತಡ ಸಮೂಹವೆಂದೇ ಹೇಳಲಾಗುತ್ತದೆ. ಆದರೆ ಇಲ್ಲಿ ಚರ್ಚಿತವಾಗುವ ಒತ್ತಡ ಸಮೂಹ ಲೋಕಕಲ್ಯಾಣಕಾರಕ ರಾಜನೈತಿಕ ವ್ಯವಸ್ಥೆಯ ಸ್ಥಾಪನೆಗಾಗಿ ಕ್ರಿಯಾಶೀಲ ಒತ್ತಡದ ಸಮೂಹವಾಗಿವೆ. ಇವು ಭ್ರಷ್ಟಾಚಾರವನ್ನು ಕನಿಷ್ಟಕರ (ಅಲ್ಪ) ಮಟ್ಟಕ್ಕೆ ತರುವಲ್ಲಿ ಸಹಾಯ ಮಾಡುತ್ತವೆ. ಸರಿಯಾದ ಮತ್ತು ರಚನಾತ್ಮಕ ನೀತಿಯಿಂದ ಮತ್ತು ಅದೇ ರೀತಿಯ ವ್ಯವಹಾರ ಮಾಡುವುದಕ್ಕಾಗಿ ಈ ಒತ್ತಡ ಸಮೂಹವೇ ನಿಜವಾದ ಪ್ರಜಾತಂತ್ರದ ವಿಕಾಸವನ್ನು ಮಾಡಬಲ್ಲದಾಗಿದೆ. ವರ್ತಮಾನ ಸಮಾಜದಲ್ಲಿ ಕ್ರಿಯಾಶೀಲ ಕ್ರಿಯಾಶೀಲ ಒತ್ತಡ ಸಮೂಹವನ್ನು ಈ ಕೆಳಗೆ ನೀಡಿರುವ ಪ್ರಕಾರದಿಂದ ವರ್ಗೀಕರಿಸಬಹುದಾಗಿದೆ.

**1. ರಚನಾತ್ಮಕ**

**2. ಧ್ವಂಸಾತ್ಮಕ**

**1. ರಚಾನಾತ್ಮಕ :–** ಸಮೂಹದ ನಿರ್ಮಾಣಕ್ಕಾಗಿ ಸಮಾಜದ ಜಾಗರೂಕ ನಾಗರಿಕ ಸ್ವಯಂಸ್ಫೂರ್ತಿಗೊಂಡು ಸಮೂಹದಲ್ಲಿ ಸಂಘಟಿತನಾಗುತ್ತಾನೆ. ಹೀಗೆ ಸಮೂಹ ಸಂಘಟಿತನಾಗಿ ತನ್ನ ನೀತಿ ಮತ್ತು ವ್ಯವಹಾರ ಎರಡರ ಕಾರ್ಯಯೋಜನೆಗಳನ್ನು ಸ್ಪಷ್ಟವಾಗಿ ರೂಪಗೊಳಿಸಿ ಪ್ರಸ್ತುತಗೊಳಿಸುತ್ತಾನೆ. ಆಗಲೇ ಈ ಜನತೆ ಮತ್ತು ರಾಷ್ಟ್ರಕ್ಕಾಗಿ ಇಂತಹವರು ಹಿತೈಷಿಗಳಾಗಿ ಪರಿಚಿತರಾಗುತ್ತಾರೆ. ಈ ಸಂಘಟನೆಯು ಯಾರದೇ ಅಧೀನದಲ್ಲಿರುವುದಿಲ್ಲ. ಬದಲಾಗಿ ಯಾವಾಗಲೂ ತಮ್ಮ ನೀತಿ ಮತ್ತು ವ್ಯವಹಾರಗಳ ಅಧೀನವಾಗಿರುತ್ತವೆ.

2. **ಧ್ವಂಸಾತ್ಮಕ :–** ಒತ್ತಡ ಸಮೂಹಗಳು ವಿಕಾಸೋನ್ಮುಖ ದೇಶಗಳಲ್ಲಿ ಸಕ್ರಿಯವಾಗಿರುತ್ತವೆ. ಇಂತಹ ಸಮೂಹ ಯಾರಿಂದಲೂ ಪ್ರಾಯೋಜಿಸಲ್ಪಟ್ಟ ಅಥವಾ ನಿರ್ದೇಶಿಸಲ್ಪಟ್ಟದ್ದಾಗಿರುತ್ತವೆ. ಅಲ್ಲಿ ಹಣದ ಆದಾಯವಿರುತ್ತದೆ. ಅಲ್ಲಿ ಇಂತಹ ಸಮೂಹ ಸಂಘಟನೆಯಾಗುತ್ತದೆ. ಅಂದರೆ, ಇಂತಹ ಒತ್ತಡ ಸಮೂಹಗಳನ್ನು ರಾಜಕೀಯ ಪಕ್ಷಗಳು ತಮ್ಮ ಉದ್ದೇಶ್ಯ ಪ್ರಾಪ್ತಿಗಾಗಿ ಬಳಸಿಕೊಳ್ಳುತ್ತವೆ. ಈ ಸಮೂಹಗಳು ಆಂತರಿಕ ಮತ್ತು ಬಾಹ್ಯ ಎರಡು ಕಡೆಗಳಿಂದ ಸಂಚಾಲಿತಗೊಳ್ಳುವ ಕಾರಣದಿಂದ ಜನತೆ ಹಾಗೂ ರಾಷ್ಟ್ರ ಇಬ್ಬರ ಅಹಿತವನ್ನು ಮಾಡುತ್ತವೆ. ಮೇಲೆ ಉಲ್ಲೇಖಿತ ಒತ್ತಡದ ಸಮೂಹದಲ್ಲಿ ರಚನಾತ್ಮಕ ಒತ್ತಡ ಸಮೂಹ ನಮಗೆ ಗ್ರಾಹ್ಯವಾಗಿದೆ. (ಸ್ವೀಕೃತವಾಗಿದೆ) ಇಂತಹ ರಚನಾತ್ಮಕ ಒತ್ತಡ ಸಮೂಹವನ್ನು ಕೂಡ ನಾವು ಈ ಕೆಳಗಿನಂತೆ ವರ್ಗೀಕರಿಸಬಹುದಾಗಿದೆ.

1. **ಉಪಭೋಕ್ತಾ ಸಮೂಹ (ಲಾಭಪಡೆಯುವ)**
2. **ಹಿತಸಮೂಹ**
3. **ರಾಜನೈತಿಕ ಸಮೂಹ**

**1.** ಉಪಭೋಕ್ತಾ ಸಮೂಹ –

ಉಪಭೋಕ್ತಾ ಸಮೂಹವನ್ನು ಎರಡು ಪಕ್ಷಗಳು ಸ್ವೀಕಾರ ಮಾಡುತ್ತವೆ.

ಕ) ಅವಶ್ಯಕ ವಸ್ತುಗಳ ಪೂರೈಕೆ.

ಖ) ವಿಕಾಸ ಹಾಗೂ ಪೂರ್ವಾಧಾರದ ಸಿದ್ಧತೆ.

**2.** ಹಿತಸಮೂಹಗಳಿಂದ ಸ್ವೀಕರಿಸಲ್ಪಡುವ ವಿಷಯ

ಕ) ಬಾಲ ಕಲ್ಯಾಣ.

ಖ) ವೃದ್ಧರ ಸೇವೆ.

ಗ) ಮಹಿಳೆಯರ ಹಕ್ಕು ಹಿತಗಳ ರಕ್ಷಣೆ.

ಘ) ಅಸಹಾಯಕರ ಹಕ್ಕು. ಹಿತಗಳ ಸ್ಥಾಪನೆ.

ಙ) ಜಾತಿಯ ಮತ್ತು ಸಾಂಸ್ಕೃತಿಕ ಸಂರಕ್ಷಣೆ. ಚ)ಪ್ರಜಾತಿಗಳ ಸಂರಕ್ಷಣೆ ಇತ್ಯಾದಿ.


**3.** ರಾಜನೈತಿಕ ಸಮೂಹ :–

ಕ) ರಾಜನೈತಿಕ ಸಿದ್ಧಾಂತದ ಚೈತನ್ಯಾಭಿವೃದ್ಧಿ.

ಖ) ರಾಜನೈತಿಕ ಸಿದ್ಧಾಂತದ ಅನುಸರಣೆ ಮಾಡುವ ವಾತಾವರಣದ ಸಿದ್ಧತೆ.


ಮೇಲಿತ ಉಲ್ಲೇಖಿತ ಒತ್ತಡ ಸಮೂಹವನ್ನು ಈ ಕೆಳಗಿನ ಚಿತ್ರದ ಮೇಲಿನ ಉಲ್ಲೇಖಿತ ಒತ್ತಡ ಸಮೂಹವನ್ನು ಈ ಕೆಳಗಿನ ಚಿತ್ರದ ಮೂಲಕ ನೋಡಬಹುದು.

ಕೆಳಗಿನ ಚಿತ್ರದ ಮೂಲಕ ನೋಡಬಹುದು.




ಮೇಲಿನ ಉಲ್ಲೇಖಿತ ಚಿತ್ರದಲ್ಲಿ ಮೂರು ಸಮೂಹಗಳ ಕ್ಷೇತ್ರನಿರ್ಧಾರ ಮಾಡಲಾಗಿದೆ. ಸಮೂಹಗತ ರೂಪದಲ್ಲೇ ಕ್ಷೇತ್ರ ಮತ್ತು ಹೊಣೆಗಾರಿಕೆಯನ್ನು ತಿಳಿದುಕೊಳ್ಳಲಾಗುತ್ತದೆ. ಈ ರೀತಿಯಲ್ಲಿ ಒತ್ತಡ ಸಮೂಹದ ನಿರ್ಮಾಣ ಮಾಡಿ, ಪ್ರಜಾತಂತ್ರದ ವಿಕಾಸಮಾಡಿ ರಾಜನೈತಿಕ ಪದ್ಧತಿಯನ್ನು ಸ್ಥಾಪಿತಗೊಳಿಸ

ಬಹುದಾಗಿದೆ. ಮೇಲಿನ ಸಮೂಹದ ಮೂಲಕ ಒತ್ತಡ ಸೃಷ್ಟಿಸಿದ ಮೇಲೆ ನೀತಿಗತ ಒತ್ತಡ ಹಾಗೂ ವ್ಯಾವಹಾರಿಕ ಒತ್ತಡ ಎರಡೂ ರೀತಿಯಿಂದ ಸಂಬಂಧಿತ ಸಮುದಾಯಗಳ ಮೇಲೆ ಒತ್ತಡ ಸೃಷ್ಟಿಸಿ, ಆ ಸಮುದಾಯವನ್ನು ತಮ್ಮದೇ ಸ್ಥಿತಿಯಲ್ಲಿ (ವಶದಲ್ಲಿ) ಇಟ್ಟುಕೊಳ್ಳಬಹುದಾಗಿದೆ. ಈ ತಥ್ಯವನ್ನು ಈ ಕೆಳಗಿನ ಚಿತ್ರ ಸೂಚಿಯಲ್ಲಿ ನೋಡಬಹುದಾಗಿದೆ.




ಒತ್ತಡ ಸಮೂಹದ ಕಾರ್ಯ ಸಂಚಾಲನೆಯ ರೀತಿ ಮತ್ತು ನಿಯಮ, ಸಂಬಂಧಿತ ದೇಶದ ಕಾನೂನಿಗನುಸಾರವಾಗಿ ಕಾರ್ಯಗತವಾಗಬೇಕು. ಸರಕಾರದ ನಿರ್ಮಾಣ ನಿಯಮ ಹಾಗೂ ಆ ರೀತಿಯ ಆಧಾರದಲ್ಲಿ ಒತ್ತಡ ಸಮೂಹವನ್ನು ತಮ್ಮ ಕಾರ್ಯಕ್ಷೇತ್ರವಾಗಿ ಸಿದ್ಧಗೊಳಿಸಬೇಕಾಗಿದೆ. ಒಂದೇ ಒತ್ತಡ ಸಮೂಹವು ಕೂಡ ಸಮಯ ಹಾಗೂ ಆ ದೇಶದ ಪರಿಸ್ಥಿತಿಗನುಗುಣವಾಗಿ ಭಿನ್ನ ಭಿನ್ನ ಕಾರ್ಯ ವಿಧಾನಗಳ ನಿರ್ಮಾಣ ಮಾಡಬಹುದಾಗಿದೆ. ಇದಕ್ಕಾಗಿ ಒತ್ತಡದ ಸಮೂಹವು ಅಪ್ರತ್ಯಕ್ಷ , ತೀಕ್ಷ್ಣ ಮತ್ತು ಸಮರ್ಥವೂ ಆಗಬೇಕಾಗಿದೆ. ಸರಿಯಾದ ಹಾಗೂ ರಚನಾತ್ಮಕ ಪ್ರಕೃತಿಯ ಒತ್ತಡ ಸಮೂಹವೇ ಭ್ರಷ್ಟ ವಿರೋಧಿ ಶಾಸ್ತ್ರದ ಮೂಲಕ ಸಿದ್ಧವಾದ ಒತ್ತಡ ಸಮೂಹವಾಗಿದೆ. ಇಂತಹ ಒತ್ತಡ ಸಮೂಹದ ನಿರ್ಮಾಣದಿಂದ ಲೋಕ ಕಲ್ಯಾಣಕರ ಪ್ರಜಾತಾಂತ್ರಿಕ ರಾಜ್ಯದ ಸ್ಥಾಪನೆ ಆಗಬಹುದು. ಆದರೆ ಒತ್ತಡ ಸಮೂಹದಲ್ಲಿ ರಾಜನೈತಿಕ ಬಣ್ಣದ ಪ್ರಭಾವ ಉಂಟಾದ ಮೇಲೆ ಈ ಸಮೂಹ ದುರ್ಬಲಗೊಳ್ಳುತ್ತದೆ. ಇದರೊಂದಿಗೆ ವಿವಶ

ದೇಶಗಳಿಂದ ಅತಿಕ್ರಮಣ ಮಾಡಿ ಒತ್ತಡ ಸಮೂಹ ಸಂಚಾಲಿತವಾದ ಮೇಲೆ ಒತ್ತಡ ಸಮೂಹದ ಪ್ರಭಾವ ದೇಶ ಮತ್ತು ಜನತೆ ಕಾರ್ಯನೀತಿ ಮತ್ತು ಕ್ರಿಯಾಶೀಲತೆಯನ್ನು ರಾಜ್ಯದ ವಿಶೇಷ ಕಾನೂನಿನ ಮೂಲಕ ನರೀಕ್ಷಣೆ ಅನುಗಮನ ಮತ್ತು ನಿರ್ದೇಶಿತವಾಗಬೇಕು. ಆಗಲೇ ಒತ್ತಡ ಸಮೂಹವು ಸಕಾರಾತ್ಮಕ ಕಾರ್ಯ ಮಾಡಬಲ್ಲುದಾಗಿದೆ. ಅರ್ಥಾತ್ ಒತ್ತಡ ಸಮೂಹ ಸಂಚಾಲನೆಗೊಳಿಸುವಲ್ಲಿ ದೇಶದ ಕಾನೂನಿಗನುಗುಣವಾಗಿ ನಿರ್ಮಾಣ ಮಾಡುವುದಕ್ಕಾಗಿ ಎಷ್ಟು ಅವಶ್ಯಕವಾಗಿದೆಯೋ ಅಷ್ಟೇ ಚೈತನ್ಯಶೀಲ ಜನತೆಯಲ್ಲಿ ಕೂಡ ಈ ಕುರಿತಾದ ಜವಾಬ್ದಾರಿಯ ತಿಳುವಳಿಕೆ ಇರುವುದು ಅವಶ್ಯಕವಾಗಿದೆ. ಇಂತಹ ದೇಶ ಮತ್ತು ಜನತೆಯ ಹಿತವನ್ನುಂಟುಮಾಡುವ ಒತ್ತಡ ಸಮೂಹದ ನಿರ್ಮಾಣ ಮಾಡಿ ಅದಕ್ಕೆ ಸ್ಥಾಯಿತ್ವ ಪ್ರದಾನ ಮಾಡುವ ವಾತಾವರಣದ ನಿರ್ಮಾಣ ಮಾಡಬೇಕಾಗಿದೆ. ಆಗಲೇ ಸಮಾಜದಲ್ಲಿ ಭ್ರಷ್ಟಾಚಾರ ಶೂನ್ಯ ಸಹನಶೀಲತೆಯ ಪರಿಸ್ಥಿತಿ ಸ್ಥಾಪಿತಗೊಳ್ಳುತ್ತದೆ.

***

# 34. ರಾಜ್ಯ ಹಾಗೂ ರಾಜನೈತಿಕ ಪಕ್ಷ
## (State and the Political Party )

ರಾಜ್ಯ ಹಾಗೂ ರಾಜನೈತಿಕ ಪಕ್ಷಗಳು ಭಿನ್ನ ಭಿನ್ನ ಪ್ರಕೃತಿಯ ಸಮುದಾಯಗಳಿವೆ. ಇವೆರಡರ ಕೆಲಸ, ಕರ್ತವ್ಯ, ಅಧಿಕಾರ ಮತ್ತು ಹೊಣೆಗಾರಿಕೆ ಭಿನ್ನ ಭಿನ್ನವಾಗಿರುತ್ತವೆ. ಆದರೆ ಕಾರ್ಯಕ್ಷೇತ್ರ ಒಂದೇ ರೀತಿಯದ್ದಾಗಿರುತ್ತದೆ. ಈ ರೀತಿಯಲ್ಲಿ ಯಾವ ರಾಜ್ಯದಲ್ಲಿ ರಾಜನೈತಿಕ ಪಕ್ಷಗಳಿರುತ್ತವೆಯೋ, ಅದೇ ರಾಜ್ಯ ಅದರ ಕಾರ್ಯಕ್ಷೇತ್ರವಾಗಿರುತ್ತದೆ. ಅದೇ ರೀತಿ ಯಾವ ರಾಜನೈತಿಕ (ರಾಜಕೀಯ) ಪಕ್ಷವು ರಾಜ್ಯದ ಮೇಲೆ ತನ್ನ ಪ್ರಭಾವ ಬೀರುತ್ತದೋ, ಅದೇ ರಾಜ್ಯದ ರಾಜ್ಯ ವ್ಯವಸ್ಥೆಯು ಕೂಡ ಅಲ್ಲಿ ಸ್ಥಾಪಿತವಾಗುತ್ತದೆ. ವಾಸ್ತವವೆಂದರೆ ರಾಜ್ಯ ಶಕ್ತಿ ಎಂಬುದು ಒಂದು ಶಕ್ತಿ ಶಾಲಿ ಸಂಸ್ಥೆಯಾಗಿದೆ. ಆದರೂ ರಾಜಕೀಯ ಪಕ್ಷಗಳಿಗೆ ವ್ಯವಸ್ಥೆಯನ್ನು ಸ್ಥಾಪಿಸುವ ಜವಾಬ್ದಾರಿ ಲಭಿಸುತ್ತದೆ. ಅಂದರೆ ರಾಜ್ಯದೊಳಗೆ ರಾಜ್ಯವನ್ನು ಸಂಚಾಲಿಸುವಲ್ಲಿ ರಾಜಕೀಯ ಪಕ್ಷಗಳು ವಿಶೇಷ ಪಾತ್ರವನ್ನು ನಿರ್ವಹಿಸುತ್ತವೆ. ಈ ದೃಷ್ಟಿಕೋನದಿಂದ ವಿಚಾರ ಮಾಡಿದಾಗ ರಾಜ್ಯ ಮತ್ತು ರಾಜಕೀಯ ಪಕ್ಷಗಳು ಬೇರೆ ಬೇರೆ ಸಮುದಾಯವಾಗಿದ್ದರೂ ಕೂಡ ಅವರ ಕಾರ್ಯ ಕ್ಷೇತ್ರ ಒಂದೇ ಎಂಬುದು ಸ್ಪಷ್ಟವಾಗುತ್ತದೆ. ರಾಜ್ಯವು ತನ್ನಲ್ಲೇ ಶಕ್ತಿಶಾಲಿ ಸಂಸ್ಥೆಯಾಗಿರುವುದರಿಂದ ರಾಜ್ಯಕ್ಕೆ ವಿಶೇಷವಾದ ವೈಧಾನಿಕ ಪ್ರಾಧ್ಯಾನ್ಯತೆ ಸಿಗುತ್ತದೆ. ಅದು ರಾಜಕೀಯ ಪಕ್ಷಗಳಿಗೆ ಲಭಿಸುವುದಿಲ್ಲ. ವೈಧಾನಿಕ (ಕಾನೂನಾತ್ಮಕ) ದೃಷ್ಟಿಯಿಂದ ರಾಜ್ಯಕ್ಕಿಂತ ರಾಜಕೀಯ ಪಕ್ಷಗಳು ಅತ್ಯಂತ ದುರ್ಬಲವಾಗಿರುತ್ತವೆ. ಹೀಗಿದ್ದರೂ ರಾಜಕೀಯ ಪಕ್ಷಗಳೇ ರಾಜ್ಯವ್ಯವಸ್ಥೆಯಲ್ಲಿ ತಮ್ಮ ಅಧಿಪತ್ಯವನ್ನು ಸ್ಥಾಪಿಸುವಲ್ಲಿ ಸಮರ್ಥವಾಗುತ್ತವೆ. ಇನ್ನೊಂದು ಕಡೆ ರಾಜ್ಯ ಶಕ್ತಿಯನ್ನು ಬಲಿಷ್ಠ ಅಥವಾ ದುರ್ಬಲಗೊಳಿಸುವ ಕೆಲಸವನ್ನೂ ರಾಜಕೀಯ ಪಕ್ಷವೇ ಮಾಡುತ್ತದೆ. ಅದಕ್ಕಾಗಿ ಇವೆರಡರ ಸಂಕ್ಷೇಪವಾಗಿ ಅಧ್ಯಯನ ಮಾಡುವ

ಅವಶ್ಯಕತೆ ಇದೆ. ಈ ಸಂದರ್ಭದಲ್ಲಿ ರಾಜ್ಯ ಮತ್ತು ರಾಜಕೀಯ ಪಕ್ಷಗಳ ಸ್ವಭಾವ ಮತ್ತು ಅವಶ್ಯಕ ತತ್ವಗಳ ಮೇಲೆ ಒಂದು ನೋಟ ಹರಿಸೋಣ.

**ರಾಜ್ಯ ( State )**


1. ರಾಜ್ಯ ಒಂದು ಸ್ವಾಭಾವಿಕ ಸಮುದಾಯ
2. ರಾಜ್ಯವನ್ನು ರಾಜನೈತಿಕ ಸಮುದಾಯವೆನ್ನುತ್ತಾರೆ.
3. ರಾಜ್ಯದ ಸ್ಥಾಪನೆ ಮಾನವ ವಿಕಾಸ ಹಾಗೂ ಮಾನವ ಹಿತಕ್ಕಾಗಿ ಆಗುತ್ತದೆ.
4. ಇದು ಚಿಕ್ಕದು ಅಥವಾ ದೊಡ್ಡದು ಆಗಿರಬಹುದಾಗಿದೆ
5. ಇದು ವೈದ್ಯ ವೈಧಾನಿಕ ಶಕ್ತಿಯ ಪ್ರಯೋಗ ಮಾಡುತ್ತದೆ.
6. ರಾಜ್ಯದಲ್ಲಿ ಜನಸಂಖ್ಯೆ, ಭೂಮಿ, ಸರಕಾರ ಮತ್ತು ಪೂರ್ಣಪ್ರಭುತ್ವದಂತಹ ನಾಲ್ಕು ತತ್ವಗಳ ಸಮಾವೇಶವಾಗುತ್ತದೆ.

**ರಾಜಕೀಯ ಪಕ್ಷ (Political Party )**

1. ರಾಜಕೀಯ ಪಕ್ಷ ಸ್ವಾಭಾವಿಕ ಸಮುದಾಯವಾಗಿದೆ.
2. ರಾಜಕೀಯ ಪಕ್ಷವನ್ನು ರಾಜನೈತಿಕ ಸಮುದಾಯವೆನ್ನುತ್ತಾರೆ.
3. ರಾಜಕೀಯ ಪಕ್ಷ ಮಾನವ ವಿಕಾಸ ಹಾಗೂ ಮಾನವ ಹಿತಕ್ಕಾಗಿ ಸ್ಥಾಪಿತವಾಗುತ್ತದೆ.
4. ರಾಜಕೀಯ ಪಕ್ಷವು ಚಿಕ್ಕದು. ಅಥವಾ ದೊಡ್ಡದೂ ಆಗಿರಬಹುದಾಗಿದೆ.
5. ರಾಜಕೀಯ ಪಕ್ಷವು ವೈಧಾನಿಕ ನಿಶ್ಚಿತ ಸಿದ್ಧಾಂತ, ನಾಯಕ ಕಾರ್ಯಕರ್ತರು ಮತ್ತು ಆ ಪಕ್ಷದ ಅನುಯಾಯಿ

   ಪಕ್ಷ ಅನುಯಾಯಿಗಳಂತಹ ನಾಲ್ಕು ತತ್ವಗಳು ಅಡಕವಾಗಿರುತ್ತವೆ.

ಮೇಲೆ ಉಲ್ಲೇಖಿತ ರಾಜ್ಯ ಮತ್ತು ರಾಜಕೀಯ ಪಕ್ಷಗಳ ಸ್ವಭಾವ ಮತ್ತು ಅವಶ್ಯಕ ತತ್ವಗಳಲ್ಲಿ ಬಹುತೇಕ (ಹೆಚ್ಚಾಗಿ) ಹೋಲಿಕೆ ಇದೆ. ಕೇವಲ ಕೊನೆಯ ಕ್ರಮ ಸಂಖ್ಯೆ ಆರರಲ್ಲಿ (6) ವ್ಯತ್ಯಾಸವಿದೆ. ಈ ದೃಷ್ಟಿಕೋನದಿಂದಲೂ ರಾಜ್ಯ ಮತ್ತು ರಾಜಕೀಯ ಪಕ್ಷಗಳನ್ನೂ ಸಮಾನ ಮಹತ್ವವಿತ್ತು ನೋಡಬೇಕು. ಇದನ್ನು ಖಂಡ –ಖಂಡಗಳಲ್ಲಿ (ವಿಭಾಗಿಸಿ) ವಿಭಾಜಿಸಿ ನೋಡಬಹುದು.




ಮೇಲಿನ ವರ್ಗೀಕರಣದಲ್ಲಿ ರಾಜ್ಯ ಮತ್ತು ರಾಜಕೀಯ ಪಕ್ಷಗಳ ಸ್ವಭಾವ ಮತ್ತು ಅವಶ್ಯಕ ತತ್ವಗಳನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ಮೂಲತಃ ರಾಜಕೀಯ ಪಕ್ಷಗಳ ವಿಷಯದಲ್ಲಿ ಅಧ್ಯಯನ ಮಾಡಿರುವುದರಿಂದ ರಾಜಕೀಯ ಪಕ್ಷಗಳ ನಾಲ್ಕು ತತ್ವಗಳು ಎಷ್ಟು ಮಹತ್ವಪೂರ್ಣವಾಗಿವೆ ಎಂಬುದನ್ನು ತಿಳಿಯಲು ಪ್ರಯತ್ನ ಮಾಡೋಣ.

## ರಾಜಕೀಯ ಪಕ್ಷ (Political Party )

ಈ ಅಧ್ಯಯನದ ಕ್ರಮದಲ್ಲಿ ರಾಜಕೀಯ ಪಕ್ಷಗಳ ನಾಲ್ಕು ಅವಶ್ಯಕ ತತತ್ವಗಳ ವಿಷಯದಲ್ಲಿ ತಿಳಿದುಕೊಳ್ಳುವ ಅವಶ್ಯಕತೆ ಇದೆ. ಇವುಗಳು ಹೀಗಿವೆ.

1. ರಾಜಕೀಯ ಪಕ್ಷಗಳ ನಿಶ್ಚಿತ ಸಿದ್ಧಾಂತ.
2. ರಾಜಕೀಯ ಪಕ್ಷವನ್ನು ಸಂಚಾಲಿಸುತ್ತಿರುವ ಮುಖಂಡರು.
3. ರಾಜಕೀಯ ಪಕ್ಷಗಳನ್ನು ವಿಕಾಸಮಾಡುತ್ತಿರುವ ಕಾರ್ಯಕರ್ತರು.
4. ರಾಜಕೀಯ ಪಕ್ಷದ ಅನುಯಾಯಿ

ಮೇಲಿನ ನಾಲ್ಕು ತತ್ವಗಳಲ್ಲಿ ಒಂದರ ಕೊರತೆಯಾದರೂ ರಾಜಕೀಯ ಪಕ್ಷಗಳು ಸಾರ್ಥಕವಾಗಿ ಸಂಚಾಲಿತವಾಗಲಾರವು. ಈ ನಾಲ್ಕು ಅಂಗಗಳು ಒಂದನ್ನೊಂದು ಸಹಕರಿಸಿದಾಗ ರಾಜಕೀಯ ಪಕ್ಷ ಪೂರ್ಣತ್ವವನ್ನು ಹೊಂದುತ್ತದೆ.

**1. ರಾಜಕೀಯ ಪಕ್ಷದ ನಿಶ್ಚಿತ ಸಿದ್ಧಾಂತ – ( Specific Principle of the Party)**

ಒಂದು ನಿಶ್ಚಿತವಾದ ಸಿದ್ಧಾಂತವನ್ನಿಟ್ಟುಕೊಂಡು ರಾಜಕೀಯ ಪಕ್ಷವು ಸಂಘಟಿತವಾಗುತ್ತದೆ. ಹಾಗೆ ಆಗಿರಲೂ ಬೇಕು. ಜಗತ್ತಿನ ರಾಜನೈತಿಕ ಕ್ಷೇತ್ರದಲ್ಲಿ ವಿಭಿನ್ನ ಸಿದ್ಧಾಂತಗಳನ್ನು ಸ್ವೀಕರಿಸಿ (ಹೊಂದಿಕೊಂಡು) ರಾಜಕೀಯ ಪಕ್ಷಗಳ ನಿರ್ಮಾಣವಾಗುತ್ತದೆ. ಇಂತಹ ಪಕ್ಷಗಳಲ್ಲಿ ಪರಂಪರಾವಾದಿ ಹಾಗೂ ಆಧುನಿಕ ಪ್ರಜಾತಂತ್ರವಾದಿಗಳಿವೆ. ಆಧುನಿಕ ಪ್ರಜಾತಂತ್ರವಾದಿಗಳಲ್ಲಿ ಸಂಸದವಾದಿ, ಸಮಾಜವಾದಿ, ಸೌಮ್ಯವಾದಿ ಮತ್ತು ಉಗ್ರ ಸೌಮ್ಯವಾದಿಗಳಾಗಿವೆ. ಇವೆಲ್ಲಾ ರಾಜನೈತಿಕ ದರ್ಶನದ ಆಧಾರದಲ್ಲಿ ನಿಶ್ಚಿತ ಪ್ರತಿಪಾದನೆ ಮಾಡಿ ಸಮಾಜದಲ್ಲಿ ಪ್ರಸ್ತುತವಾಗುತ್ತವೆ. ಈ ರಾಜಕೀಯ ಪಕ್ಷಗಳ ಸಿದ್ಧಾಂತಗಳಲ್ಲಿ ಚಂಚಲತೆ (ವಿಮುಖತೆ) ಬರಬಾರದು.

**2. ರಾಜಕೀಯ ಪಕ್ಷಗಳ ನಿರ್ವಹಣೆ ಮಾಡುವ ಮುಖಂಡರು (Leaders to run the Party )**

ರಾಜಕೀಯ ಪಕ್ಷದ ನಿರ್ವಹಣೆ ಮಾಡುವ ಮುಖಂಡರೇ ಆ ಪಕ್ಷದ ಸಿದ್ಧಾಂತವನ್ನು ಪ್ರತಿಪಾದಿಸುವ ಮೂಲ ಪ್ರತಿನಿಧಿಯಾಗಿರುತ್ತಾರೆ. ಮುಖಂಡರು ಕೇವಲ ಸಿದ್ಧಾಂತವಾದಿ ಮಾತ್ರವಲ್ಲ ಅನುಶಾಸನಕ್ಕೊಳಪಟ್ಟು ತ್ಯಾಗಿ, ನಸ್ವಾರ್ಥಿ, ನೈತಿಕತೆ ಉಳ್ಳವನು ಹಾಗೂ ಭ್ರಷ್ಟಾಚಾರಿಯಾಗಿದ್ದರೆ ಕೇವಲ ರಾಜಕೀಯ ಪಕ್ಷ ಮಾತ್ರವಲ್ಲ, ಯಾವ ರಾಜ್ಯದಲ್ಲಿ ಇಂತಹ ಬೇಜವಾಬ್ದಾರ ಮುಖಂಡರಿರುತ್ತಾರೋ ಆ ರಾಜ್ಯಕ್ಕೂ ಕೂಡ ಹಾನಿ ಅಥವಾ ನಷ್ಟವಾಗುವ ಸಂಭವವಿರುತ್ತದೆ. ಆದ್ದರಿಂದ ಮುಖಂಡನ ಸದ್ಗುಣದಿಂದಲೇ ರಾಜಕೀಯ ಪಕ್ಷ ಜನಪ್ರಿಯವಾಗುತ್ತದೆ ಮತ್ತು ಸ್ಥಿರತೆಯನ್ನು ಪಡೆಯುತ್ತದೆ.

**3. ರಾಜಕೀಯ ಪಕ್ಷದ ವಿಕಾಸವನ್ನುಂಟುಮಾಡುವ ಕಾರ್ಯಕರ್ತ (Cadres to run the Party )**

ಯಾವುದೇ ರಾಜಕೀಯ ಪಕ್ಷದಲ್ಲಿ ಕಾರ್ಯಕರ್ತನ ಪಾತ್ರ ಮಹತ್ವದ್ದಾಗಿರುತ್ತದೆ. ರಾಜಕೀಯ ಪಕ್ಷದಲ್ಲಿ ಕಾರ್ಯಕರ್ತನು ವಿಶೇಷ ಮಹತ್ವವನ್ನು ಹೊಂದಿರುತ್ತಾನೆ.

ರಾಜಕೀಯ ಪಕ್ಷದಲ್ಲಿ ಕಾರ್ಯಕರ್ತರೇ ರಾಜಕೀಯ ಪಕ್ಷದ ಮುಖ್ಯ ಅಂಗವಾಗಿರುತ್ತಾರೆ. ಇದೇ ಆಧಾರದಲ್ಲಿ ರಾಜಕೀಯ ಪಕ್ಷದ ನಿರ್ಮಾಣವಾಗುತ್ತದೆ. ಅರ್ಥಾತ್ ಮಾನವ ಶರೀರವನ್ನು ನಿರ್ವಹಿಸುವ ಅಂಗಗಳು ಜೀವಿತಕ್ಕೆ ಎಷ್ಟು ಅವಶ್ಯಕವೋ ಅದೇ ರೀತಿ ರಾಜಕೀಯ ಪಕ್ಷವನ್ನು ನಿರ್ವಹಿಸುವ ಕಾರ್ಯಕರ್ತರ ಅವಶ್ಯಕತೆ ಇರುತ್ತದೆ. ಕಾರ್ಯಕರ್ತನಲ್ಲಿ ವಿಮುಖತೆ ಉಂಟಾಗುವುದರಿಂದ ಸ್ವಾರ್ಥಿ, ಅವಕಾಶವಾದಿಯಾಗುವುದರಿಂದ ರಾಜಕೀಯ ಪಕ್ಷಕ್ಕೆ ನಷ್ಟವಾಗುತ್ತದೆ. ಇದಕ್ಕಾಗಿ ರಾಜಕೀಯ ಪಕ್ಷದ ಕಾರ್ಯಕರ್ತನು ನಿಷ್ಠಾವಂತ ಅನುಶಾಸಿತ, ನೈತಿಕ ಹಾಗೂ ಸಚ್ಚಾರಿತ್ರ್ಯವಂತನಾಗಿರಬೇಕು.

**4. ರಾಜಕೀಯ ಪಕ್ಷದ ಅನುಯಾಯಿ – (Followers to support the Party )**

ಅನುಯಾಯಿ ಎಂದರೆ, ವ್ಯಕ್ತಿಯಾಗಿ ಅಥವಾ ಸಮುದಾಯವಾಗಿರಬಹುದು. ಅವರು ಯಾವುದೇ ರಾಜಕೀಯ ಪಕ್ಷದ ಪ್ರತಿಪಾದನೆ, ವಿಸ್ತಾರ ಹಾಗೂ ವಿಕಾಸ ಕಾರ್ಯಕ್ರಮದಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಂಡಿರುತ್ತಾರೆ. ರಾಜಕೀಯ ಪಕ್ಷಗಳ ಸಿದ್ಧಾಂತ ಮತ್ತು ಘೋಷಣಾ ಪತ್ರ ಜನಮನದಲ್ಲಿ ತಲುಪಿಸುವ ಮತ್ತು ಪಕ್ಷದ ಕುರಿತು ಆಕರ್ಷಣೆ ಉಂಟುಮಾಡುವ ಕೆಲಸದಲ್ಲಿ ಕಾರ್ಯಕರ್ತರಿಂದ ಮಾಡಲ್ಪಟ್ಟ ಕಾರ್ಯಗಳಲ್ಲಿ ವಿಶ್ವಾಸವನ್ನುಂಟು ಮಾಡುವುದಕ್ಕಾಗಿ ಈ ಅನುಯಾಯಿಗಳ ಸನ್ನದ್ಧರಾಗಿರುತ್ತಾರೆ.

ಈ ರಾಜಕೀಯ ಪಕ್ಷಗಳಿಗೆ ಅನುಯಾಯಿಗಳಿಲ್ಲದಿದ್ದಲ್ಲಿ ಚುನಾವಣೆಯಲ್ಲಿ ರಾಜಕೀಯ ಪಕ್ಷ ಗೆಲುವು ಸಾಧಿಸಲು ಸಾಧ್ಯವಾಗದು. ಇದಕ್ಕಾಗಿ ರಾಜನೈತಿಕ ಸಿದ್ಧಾಂತ, ರಾಜಕೀಯ ಮುಖಂಡ ಮತ್ತು ಕಾರ್ಯಕರ್ತರೊಂದಿಗೆಯೇ ರಾಜಕೀಯ ಸಿದ್ಧಾಂತದ ಅನುಯಾಯಿಗಳಿರುವುದೂ ಅವಶ್ಯಕವಾಗಿದೆ. ಈ ಅನುಯಾಯಿಗಳ ದಂಡೇ (ಸಮೂಹ) ರಾಜಕೀಯ ಪಕ್ಷವನ್ನು ಅಧಿಕಾರದಲ್ಲಿ ಸ್ಥಾಪಿಸುವ ಕೆಲಸವನ್ನು ಮಾಡುತ್ತವೆ.

ರಾಜಕೀಯ ಪಕ್ಷಗಳ ನಾಲ್ಕು ಅವಶ್ಯಕ ತತ್ವಗಳನ್ನು ಕುರಿತು ಮೇಲೆ ಉಲ್ಲೇಖಿಸಲಾಗಿದೆ. ರಾಜಕೀಯ ಪಕ್ಷ ಈ ಸೈದ್ಧಾಂತಿಕ ಪಕ್ಷಗಳಲ್ಲಿ ವಿಕಾಸೋನ್ಮುಖ ದೇಶಗಳ ರಾಜಕೀಯ ಪಕ್ಷದಲ್ಲಿ ಮೇಲಿನ ತತ್ವಗಳಲ್ಲಿ ವಿಮುಖತೆಯುಂಟಾಗುವ ಕಾರಣ ಈ ದೇಶಗಳ ರಾಜ್ಯವ್ಯವಸ್ಥೆಯಲ್ಲಿ ಅಸ್ಥಿರತೆ ಉತ್ಪನ್ನವಾಗುತ್ತದೆ. ರಾಜಕೀಯ ಅಸ್ಥಿರತೆಯಿಂದಾಗಿ ದೇಶ ಮತ್ತು ಜನತೆಯ ಉನ್ನತಿಯಾಗಲಾರದು. ಅದಕ್ಕಾಗಿ ರಾಜಕೀಯ ಪಕ್ಷಗಳು ಮೇಲೆ ಉಲ್ಲೇಖಿಸಲಾಗಿರುವ ಸಿದ್ಧಾಂತದ ಆಧಾರದಲ್ಲಿ

ಆಡಳಿತ ನಡೆಸುವ ಮತ್ತು ನಡೆಸುವ ವ್ಯವಸ್ಥೆಯನ್ನು ಮಾಡಿಸಬೇಕು. ವಿಕಾಸೋನ್ಮುಖಗಳ ಉನ್ನತಿಯಾಗದಿರಲು ಮೂಲ ಕಾರಣವೇ ರಾಜಕೀಯ ಅಸ್ಥಿರತೆ. ರಾಜ್ಯದಲ್ಲಿ ರಾಜನೈತಿಕ ಅಸ್ಥಿರತೆಯನ್ನುಂಟು ಮಾಡುವ ರಾಜಕೀಯ ಪಕ್ಷಗಳೇ ಇವೆ. ರಾಜಕೀಯ ಪಕ್ಷದಲ್ಲಿ ಮೇಲೆ ಉಲ್ಲೇಖಿತ ಯಾವುದೇ ತತ್ವದಲ್ಲಿ ಒಂದು ವೇಳೆ ವಿಮುಖತೆ ಬಂದರೆ, ಅದು ದೇಶದ ರಾಜಕೀಯ ವಾತಾವರಣದಲ್ಲಿ ಪರಿವರ್ತನೆ ತರುತ್ತದೆ. ವಿಕಾಸೋನ್ಮುಖ ದೇಶಗಳಲ್ಲಿ ವ್ಯವಸ್ಥೆಯನ್ನು ನಿರ್ವಹಿಸಲ್ಪಡುವ ರಾಜಕೀಯ ಪಕ್ಷಗಳಲ್ಲಿ ಉಂಟಾಗುವ ಅಸ್ಥಿರತೆ (ವಿಮುಖತೆ) ನೋಡೋಣ.

**1. ವಿಕಾಸೋನ್ಮುಖ ದೇಶಗಳಲ್ಲಿ ಪಕ್ಷಗಳ ಸಿದ್ಧಾಂತ ಎರಡು ರೀತಿಯದ್ದಾಗಿರುತ್ತದೆ.**

ಒಂದು ತೋರ್ಗಾಣಿಕೆಯಿದ್ದು ಮತ್ತೊಂದು ಕಾರ್ಯಗತ ಮಾಡುವಂಥದ್ದು ಸಿದ್ಧಾಂತಕ್ಕಿಂತ ಹೆಚ್ಚಾಗಿ ರಾಜ್ಯದ ಅಧಿಕಾರಕ್ಕಾಗಿ ರಾಜಕೀಯ ಮಾಡುವ ಪ್ರವೃತ್ತಿಯ ಕಾರಣದಿಂದಾಗಿ ಬಹುಶಃ ರಾಜಕೀಯ ಪಕ್ಷಗಳು ತಾವು ಘೋಷಿಸಿಕೊಂಡು ಸಿದ್ಧಾಂತದಲ್ಲಿ ಅಚಲವಾಗಿರುತ್ತಾರೆ. ಚುನಾವಣೆಯಲ್ಲಿ ಭಾಗಿಯಾಗುವ ಸಮಯದಲ್ಲಿ ಸಿದ್ಧಾಂತದ ಆಧಾರದಲ್ಲಿ ಘೋಷಣಾ ಪತ್ರ ಸಿದ್ಧಪಡಿಸಿಕೊಂಡು ಜನರ ಬಳಿ ಹೋಗುತ್ತಾರೆ. ಆದರೆ ಅಧಿಕಾರಕ್ಕೆ ಬಂದ ಮೇಲೆ ಅದೇ ಘೋಷಣಾದಲ್ಲಿರುವ ಘೋಷಿತ ನೀತಿಯಲ್ಲಿರುವ ಹತ್ತು ಪ್ರತಿಶತವನ್ನು ಕೂಡ ಪಾಲನೆ ಮಾಡುವುದಿಲ್ಲ. ನೆಪಗಳನ್ನು ಮುಂದಿಟ್ಟು ಜನರನ್ನು ಭ್ರಮಿತಗೊಳಿಸುವ ಕಲೆಯೊಂದಿಗೆ ರಾಜಕೀಯ ಪಕ್ಷಗಳು ಸಿದ್ಧಾಂತವನ್ನು ಬಹು ಸರಳವಾಗಿ ಮರೆ ಮಾಡುತ್ತವೆ.

**2. ರಾಜಕೀಯ ಪಕ್ಷಗಳ ಮುಖಂಡರ ಜವಾಬ್ದಾರಿ (Responsibility of Political Leaders)**

ರಾಜಕೀಯ ಪಕ್ಷಗಳ ಮುಖಂಡರ ಆಚರಣೆಯಿಂದ ಪಕ್ಷ ಸದೃಢವಾಗುತ್ತದೆ. ಆದರೆ ವಿಕಾಸೋನ್ಮುಖ ದೇಶಗಳಲ್ಲಿ ಸ್ಥಾಪಿತವಾಗುವ ಬಹುಶಃ ಅಧಿಕಾರದ ಮೋಹಕ್ಕೆ ಸಿಲುಕಿ, ರಾಜಕೀಯ ಮಾಡುವಲ್ಲಿ ತೊಡಗಿಕೊಳ್ಳುತ್ತಾರೆ. ಮುಖಂಡನೆ ಭ್ರಷ್ಟನಾದಾಗ ರಾಜಕೀಯ ಪಕ್ಷ, ಪಥ ಭ್ರಷ್ಟವಾಗುವುದು ಸ್ವಾಭಾವಿಕವೇ ಆಗಿದೆ. ಅಧಿಕಾರವನ್ನೇ ಕೇಂದ್ರಬಿಂದುವನ್ನಾಗಿಟ್ಟುಕೊಂಡು ರಾಜಕೀಯ ಮಾಡುವ ಮುಖಂಡರು ಎಂದೂ ರಾಷ್ಟ್ರನಾಯಕರಾಗಲಾರರು. ರಾಷ್ಟ್ರನಾಯಕನಾಗದೆ ಜನರ ಉನ್ನತಿಯುನ್ನು ಮಾಡಲಾರರು. ಆದ್ದರಿಂದ ಭ್ರಷ್ಟನಾಯುಕ ಮತ್ತು ಹೊರದೇಶಗಳಿಂದ ಸಂಚಾಲಿತವಾಗುವ ಹಾಗೂ ಸಿದ್ಧಾಂತಹೀನ ನಾಯಕನ ನೇತೃತ್ವವುಳ್ಳ ರಾಜಕೀಯ ಪಕ್ಷ, ರಾಷ್ಟ್ರ ಮತ್ತು ಜನತೆಗೆ ಹಿತವನ್ನುಂಟುಮಾಡಲಾರವು.

### 03. ರಾಜಕೀಯ ಪಕ್ಷಗಳ ಕಾರ್ಯಕರ್ತರ ಹೊಣೆಗಾರಿಕೆ (Responsibilities of Political Cadres)

ರಾಜಕೀಯ ಪಕ್ಷಗಳ ಕಾರ್ಯಕರ್ತರ ಜವಾಬ್ದಾರಿ ರಾಜಕೀಯ ಪಕ್ಷಗಳಿಗೆ ಮಹತ್ವಪೂರ್ಣದ್ದಾಗಿರುತ್ತದೆ. ಆದರೆ ವಿಕಾಸೋನ್ಮುಖ ದೇಶಗಳಲ್ಲಿ ಉದ್ಯೋಗ ಸಿಗದಿದ್ದಾಗ ತಮ್ಮ ವ್ಯವಸಾಯವನ್ನು ನಿರ್ವಹಿಸಲು ಆಗದ ಹೆಚ್ಚಿನ ಚಾಲಾಕಿನ ವ್ಯಕ್ತಿಗಳು ರಾಜಕೀಯ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಸಿದ್ಧಾಂತಕ್ಕಿಂತ ಹೆಚ್ಚು ನಾಯಕನೊಂದಿಗಿನ ಸಂಬಂಧಕ್ಕೆ ಹೆಚ್ಚಿನ ಪ್ರಾಶಸ್ತವನ್ನು ಕೊಡುವ ವ್ಯಕ್ತಿಗಳು ರಾಜಕೀಯ ಪಕ್ಷಗಳಲ್ಲಿ ಸ್ವಯಂ ಸೇವಕರಾಗಿ ಅಥವಾ ದುಡಿಮೆಯನ್ನು ಪಡೆದು ಕಾರ್ಯಕ್ರಮಗಳನ್ನು ಸಂಚಾಲನೆ ಮಾಡುತ್ತಾರೆ. ಶ್ರಮಕ್ಕೆ ಆದಾಯ ಪಡೆಯುವ ರಾಜಕಾರಣಿಯಿಂದ ಹಪ್ತಾ (ವಾರದ) ಅಥವಾ ತಿಂಗಳ (ಮಾಸಿಕ) ಭತ್ತೆಯನ್ನು ಪಡೆಯುತ್ತಾರೆ. ಇವರು ಜನಸಾಮಾನ್ಯರ ಗಮನವನ್ನು; ತಮ್ಮ ರಾಜಕೀಯ ಪಕ್ಷದ ಕಡೆಗೆ ಸೆಳೆಯುವ ಕೆಲಸವನ್ನು ಮಾಡುತ್ತಾರೆ. ಚುನಾವಣಾ ಸಮಯದಲ್ಲಿ ಇವರ ಜವಾಬ್ದಾರಿ ಮುಖ್ಯವಾಗುತ್ತದೆ. ಭ್ರಮಿತಗೊಳಿಸಿ, ಪ್ರಭಾವಕ್ಕೊಳಪಡಿಸಿ ಭಯ ಹುಟ್ಟಿಸಿ ಹಣ ಖರ್ಚು ಮಾಡಿ ಹೇಗಾದರೂ ಸರಿ ರಾಜಕೀಯ ಪಕ್ಷದ ತಮ್ಮ ಅಭ್ಯರ್ಥಿಯನ್ನು ಗೆಲ್ಲಿಸುವ ಪ್ರಯತ್ನ ಮಾಡುತ್ತಾರೆ. ಆ ಸಮಯದಲ್ಲಿ ನೀತಿ, ನೈತಿಕತೆ ಹಾಗೂ ಸಿದ್ಧಾಂತದ ಯಾವುದೇ ಅನುಸರಣೆ ಈ ಕಾರ್ಯಕರ್ತರು ಮಾಡುವುದಿಲ್ಲ. ಯಾವ ರೀತಿಯಲ್ಲಾದರೂ ತಮ್ಮ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸುವುದೊಂದೇ ಇವರ ಗುರಿಯಾಗಿರುತ್ತದೆ. ಇದು ರಾಜಕೀಯ ಕಾರ್ಯಕರ್ತನ ಹೊಣೆಗಾರಿಕೆ ಮತ್ತು ವ್ಯವಹಾರದ ವಿರುದ್ಧವಾದ ಪ್ರವೃತ್ತಿಯಾಗಿದೆ.

### 4. ರಾಜಕೀಯ ಪಕ್ಷಗಳ ಅನಯಾಯಿಗಳ ಜವಾಬ್ದಾರಿ – ( Responsibility of Political followers )

ರಾಜನೈತಿಕ ಸಿದ್ಧಾಂತದ ಅನುಯಾಯಿಗಳೆಂದರೆ ಜನಸಾಮಾನ್ಯ ನಾಗರಿಕನಿಂದ ಸಂಬಂಧಿತವಾಗಿದೆ. ರಾಜಕೀಯ ಪಕ್ಷದ ಸಿದ್ಧಾಂತ, ನಾಯಕನ ವ್ಯಕ್ತಿತ್ವ ಮತ್ತು ಕಾರ್ಯಕರ್ತನ ವ್ಯವಹಾರ ಇವರನ್ನು ಆಕರ್ಷಿಸುತ್ತದೆ. ಆದರೆ ವಿಕಾಸೋನ್ಮುಖ ದೇಶಗಳಲ್ಲಿ ಇಂತಹ ಅನುಯಾಯಿಗಳು ಕೂಡ ಚುನಾವಣಾ ಸಮಯದಲ್ಲಿ ವಿಮುಖರಾಗಿ ಪರವರ್ತಿತರಾಗಿ ವ್ಯವಹಾರಗಳನ್ನು ಮಾಡುತ್ತಾರೆ. ರಾಜಕೀಯ ಪಕ್ಷದ ನಾಯಕ ಮತ್ತು ಕಾರ್ಯಕರ್ತನ ಸಂಬಂಧದ ಆಧಾರದಲ್ಲಿ ಅಥವಾ ಹಣದ ಆಮಿಷದಲ್ಲಿ ಈ ಅನುಯಾಯಿಗಳು ಚುನಾವಣಾ ಕಾರ್ಯದಲ್ಲಿ ಭಾಗಿಗಳಾಗುತ್ತಾರೆ. ಇದು ಪ್ರಜಾತಂತ್ರದ ಹೆಸರಿನಲ್ಲಿ ಮಾಡಲ್ಪಡುವ ಅನೀತಿಯಿಂದ ಕೂಡಿದ (ತಪ್ಪಾಗಿ) ಕ್ರಿಯಾಕಲಾಪವಾಗಿದೆ.

ವಿಕಾಸೋನ್ಮುಖ ದೇಶಗಳಲ್ಲಿ ಸಂಚಾಲಿತ (ನಿರ್ವಹಣೆಯಲ್ಲಿರುವ) ರಾಜಕೀಯ ಪಕ್ಷದ ಕುರಿತು ನಾವು ತಿಳಿದುಕೊಂಡೆವು. ಇಂತಹ ಸ್ಥಿತಿಯನ್ನು ಹೇಗೆ ನಿಯಂತ್ರಿಸಬಹುದು, ಈ ಕುರಿತು ವಿಚಾರ ಮಾಡುವುದು ಅವಶ್ಯಕವಾಗಿದೆ. ರಾಜಕೀಯ ಪಕ್ಷದ ನಾಲ್ಕು ಅವಶ್ಯಕ ತತ್ವಗಳ ಆಧಾರದಲ್ಲಿ ರಾಜಕೀಯ ಪಕ್ಷಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ರಾಜಕೀಯ ಪಕ್ಷಗಳನ್ನು ಸಂಚಾಲಿಸುವ ವಿಸ್ತೃತವಾದ ವಿಧಿ ವಿಧಾನಗಳ ಅವಶ್ಯಕತೆ ಇದೆ.

ರಾಜಕೀಯ ಪಕ್ಷಗಳ ಉತ್ಪತ್ತಿ, ಈ ಪಕ್ಷಗಳು ಸಮಾವೇಶಗೊಳ್ಳುವಿಕೆ, ಕೇವಲ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಮಾತ್ರ ಸಾಧ್ಯವಾಗುತ್ತದೆ. ಏಕ ಪಕ್ಷೀಯ ಅಥವಾ ಬಹುಪಕ್ಷೀಯ ಎರಡೂ ರೀತಿಯ ರಾಜಕೀಯ ವ್ಯವಸ್ಥೆಯನ್ನು ಪಕ್ಷೀಯ ವ್ಯವಸ್ಥೆ ಎಂದೇ ಹೇಳಲಾಗುತ್ತದೆ. ಏಕಪಕ್ಷೀಯ ವ್ಯವಸ್ಥೆ ವಿಶ್ವದ ಕೆಲವೇ ದೇಶಗಳಲ್ಲಿ ಆಳ್ವಿಕೆಯಲ್ಲಿದೆ. ವರ್ತಮಾನದಲ್ಲಿ ಬಹುಶಃ ಹೆಚ್ಚಿನ ದೇಶಗಳಲ್ಲಿ ಬಹುದಲಿಯ (ಬಹುಪಕ್ಷಗಳ) ರಾಜಕೀಯ ವ್ಯವಸ್ಥೆ ಇದೆ. ವಿಕಸಿತ ದೇಶಗಳಲ್ಲಿ ರಾಜಕೀಯ ಪಕ್ಷಗಳು ಕಡಿಮೆ ಕ್ರಿಯಾಶೀಲತೆ ಹೊಂದಿರುತ್ತಾರೆ. ಅದೇ ವಿಕಾಸೋನ್ಮುಖ ದೇಶಗಳಲ್ಲಿ ಅತ್ಯಧಿಕ ಕ್ರಿಯಾಶೀಲವಾಗಿರುತ್ತವೋ ಆ ದೇಶಗಳು ಆರ್ಥಿಕ ಮತ್ತು ರಾಜನೈತಿಕವಾಗಿ ದುರ್ಬಲಗೊಳ್ಳುತ್ತವೆ. ಅರ್ಥಾತ್ ಆರ್ಥಿಕ ಉನ್ನತಿಯಲ್ಲಿ ಕೊರತೆಯುಂಟಾಗುವುದು ಹಾಗೂ ಹೆಚ್ಚು ರಾಜಕೀಯ ಅಸ್ಥಿರತೆಯುಂಟಾಗುತ್ತದೆ. ಇದಕ್ಕೆಲ್ಲಾ ಕಾರಣ ರಾಜಕೀಯ ಪಕ್ಷಗಳ ಸಿದ್ಧಾಂತದಲ್ಲಿ ವಿಮುಖತೆ ಉಂಟಾಗುವುದೇ ಆಗಿದೆ. ರಾಜಕೀಯ ಪಕ್ಷಗಳನ್ನು ನಿಯಂತ್ರಣದಲ್ಲಿಟ್ಟು ಕೊಳ್ಳುವುದಕ್ಕಾಗಿ ಈ ಕೆಳಗಿನ ಅಂಶಗಳನ್ನು (ಬಿಂದುಗಳನ್ನು) ಸ್ವೀಕಾರ ಮಾಡಿ ನಿರ್ಮಾಣವನ್ನು ಮಾಡಬೇಕು ಮತ್ತು ಚಾಲನೆಗೆ ತರಬೇಕು.

1. ರಾಜಕೀಯ ಪಕ್ಷದಲ್ಲಿ ಸ್ಪಷ್ಟ ಸೇವಾ ಭಾವ ಸ್ಪಷ್ಟವಾಗಿರಬೇಕು.
2. ರಾಜಕೀಯ ಪಕ್ಷಗಳು ಚಂದಾ ವಸೂಲಿ ಮಾಡಬಾರದು.
3. ಪಕ್ಷದ ನಾಯಕ ಹಾಗೂ ಕಾರ್ಯಕರ್ತನ ಸಂಪತ್ತಿನ ವಿವರಗಳು ಪಾರದರ್ಶಕವಾಗಿರಬೇಕು.
4. ಹೊರದೇಶಗಳಿಂದ ಅಕ್ರಮ ಪ್ರವೇಶ (ನುಸುಳುವಿಕೆ) ಆಗಬಾರದು.
5. ಸಹಯೋಗದಲ್ಲಿ ಒಂದೇ ದ್ವಾರದ ಪದ್ಧತಿ ಜಾರಿಗೊಳಿಸಬೇಕು.
6. ಚುನಾವಣಾ ವೆಚ್ಚದಲ್ಲಿ ಪಾರದರ್ಶಕತೆ
7. ಚುನಾವಣೆಯಲ್ಲಿ ಚೌಕಟ್ಟು (ಕಡಿವಾಣ) ಹಾಕಬೇಕು.

8. ಚುನಾವಣಾ ಪ್ರಣಾಲಿಯನ್ನು ಸ್ಥಿರಗೊಳಿಸುವುದು.

9. ರಾಜ್ಯಾಡಳಿತದಲ್ಲಿ ಹಸ್ತಕ್ಷೇಪ ಮುಕ್ತವನ್ನಾಗಿಸುವುದು.

10. ಮುಖಂಡ ಹಾಗೂ ಕಾರ್ಯಕರ್ತರ ಮೇಲೆ ಕಾನೂನಿಕಾರ್ಯಾಚರಣೆಯ ವ್ಯವಸ್ಥೆ ಮಾಡುವುದು.

**01. ರಾಜಕೀಯ ಪಕ್ಷಗಳಲ್ಲಿ ಸ್ಪಷ್ಟ ಸೇವಾ ಭಾವ ಇರಬೇಕು. (Political Parties Should be Service Oriented )**

ರಾಜಕೀಯ ಪಕ್ಷಗಳ ನಾಯಕರು ಹಾಗೂ ಕಾರ್ಯಕರ್ತರು ದೇಶ ಮತ್ತು ಜನರ ಸೇವೆ ಮಾಡುವ ಭಾವನೆಯೊಂದಿಗೆ ರಾಜನೀತಿಯೊಂದಿಗೆ ರಾಜನೀತಿಯಲ್ಲಿ ಬರಬೇಕು ಮತ್ತು ಇಂತಹ ವ್ಯವಸ್ಥೆಯನ್ನು ಮಾಡಬೇಕು. ರಾಜಕೀಯ ಪಕ್ಷಗಳು ದೇಶ ಮತ್ತು ಜನತೆಯ ಸೇವೆಗಾಗಿ ಸ್ಥಾಪಿತವಾಗಬೇಕು.

**02. ರಾಜಕೀಯ ಪಕ್ಷಗಳಿಂದ ಚಂದಾ ಪಡೆಯದಂತಹ ವ್ಯವಸ್ಥೆ ಆಗಬೇಕಿದೆ. (No extrorition by Political Party)**

ವಿಶ್ವದ ವಿಕಸಿತ ದೇಶಗಳಲ್ಲಿ ರಾಜಕೀಯ ಪಕ್ಷಗಳು ವ್ಯಾಪಾರಿ, ಔದ್ಯೋಗಿಕ ಕ್ಷೇತ್ರಗಳಿಂದ ಮತ್ತು ಅನ್ಯ ವ್ಯವಸಾಯಗಳಿಂದ ಚಂದಾ ವಸೂಲಿ ಮಾಡುತ್ತಾರೆ. ಇದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಇದೇ ರೀತಿ ವಿಕಾಸೋನ್ಮುಖ ದೇಶಗಳಲ್ಲಿ ಕೂಡ ಚಂದಾದ ಭಯ ಮತ್ತು ಭಯ ಹುಟ್ಟಿಸಿ ವಸೂಲಿ ಮಾಡಲಾಗುತ್ತದೆ. ರಾಜಕೀಯ ಪಕ್ಷದ ನಿರ್ವಹಣೆ ಮಾಡಲು ಅಥವಾ ಚುನಾವಣಾ ಖರ್ಚಿನ ಹೆಸರಿನಲ್ಲಿ ಚಂದಾ ವಸೂಲಿಯ ಕೆಲಸ ಸಂಪೂರ್ಣವಾಗಿ ನಿಲ್ಲಿಸಬೇಕು.

**3. ಪಕ್ಷದ ನಾಯಕ ಹಾಗೂ ಕಾರ್ಯಕರ್ತರ ಸಂಪತ್ತಿನ ವಿವರಣೆ ಪಾರದರ್ಶಕವಾಗಿರಬೇಕು. (Financial Transaction and Property of leaders and Cadres must be Trasnsparent )**

ಪಕ್ಷದ ನಾಯಕ ಹಾಗೂ ಕಾರ್ಯಕರ್ತರ ಸಂಪತ್ತಿನ ವಿವರಣೆ ಪ್ರತಿ ವರ್ಷ ರಾಜ್ಯದಲ್ಲಿ ಸಾರ್ವಜನಿಕವಾಗಿ ಬಹಿರಂಗಪಡಿಸುವ ವ್ಯವಸ್ಥೆಯಾಗಬೇಕು. ತಾತ್ಪರ್ಯವಿಷ್ಟೇ, ರಾಜಕೀಯದಲ್ಲಿ ತೊಡಗಿಕೊಂಡಿರುವ ವ್ಯಕ್ತಿ, ರಾಜಕಾರಣದ ವೃತ್ತಿಯವನಲ್ಲ ಎಂಬುದು ಸ್ಪಷ್ಟವಾಗಬೇಕು.

**4. ಹೊರದೇಶಗಳ ಅಕ್ರಮ ಪ್ರವೇಶ ನಿಲ್ಲಬೇಕು.(No influence and interference from other countries)**

ದೇಶದ ಹೊರಗಿನ ಯಾವುದಾದರೂ ರಾಜ್ಯ ಅಥವಾ ಸಮುದಾಯ, ರಾಜಕೀಯ ಪರಿವರ್ತನೆಗಾಗಿ ಅಥವಾ ಸಂಸ್ಕೃತಿಯ ಪರಿವರ್ತನೆಗಾಗಿ ಅಕ್ರಮ ಪ್ರವೇಶ ಮಾಡುತ್ತವೆ. ವಿಶೇಷವಾಗಿ ಬಡದೇಶಗಳಲ್ಲಿ ಹೊರಗಿನಿಂದ ಅಕ್ರಮ ಪ್ರವೇಶ ಆಗುತ್ತಿರುತ್ತದೆ. ಇಂತಹ ಕಾರ್ಯಗಳನ್ನು ಸಂಪೂರ್ಣವಾಗಿ ನಿಲ್ಲಿಸಬೇಕು.

**5. ಸಹಯೋಗದಲ್ಲಿ ಏಕಗವಾಕ್ಷ ಪದ್ಧತಿ ಜಾರಿಯಾಗಬೇಕು (One Door Policy in Financial Support)**

ಹೊರದೇಶಗಳ ಅಥವಾ ಅಲ್ಲಿಯ ಸರಕಾರೇತರ ಕ್ರಿಯಾಶೀಲ ಸಂಸ್ಥೆಗಳಿಂದ, ದೇಶದ ಯಾವುದಾದರೂ ಸಮುದಾಯಗಳಲ್ಲಿ ಅನ್ಯ ಕ್ಷೇತ್ರಗಳಲ್ಲಿ ಸಹಯೋಗರೂಪವಾಗಿ ಸಾಮಾನು (ವಸ್ತುಗಳು) ಅಥವಾ ಹಣದ ರೂಪದ ಸಹಯೋಗದಲ್ಲಿ ಕೊಡುಕೊಳ್ಳುವ ಕೆಲಸ ನಡೆಯುತ್ತದೆ. ಆದರೆ ಬೇರೆ ದೇಶ ಅಥವಾ ಯಾವುದಾದರೂ ಸಮುದಾಯದೊಂದಿಗೆ ಯಾವುದೇ ಸಹಯೋಗ ಬಂದಲ್ಲಿ ಅದು ಏಕಗವಾಕ್ಷಿ ಪದ್ಧತಿಯ ವ್ಯವಸ್ಥೆ ಆಗಬೇಕು.

**6. ಚುನಾವಣಾ ವೆಚ್ಚದಲ್ಲಿ ಪಾರದರ್ಶಕತೆ (Trasnparency in Election Expenses)**

ರಾಜಕೀಯ ಪಕ್ಷಗಳಿಂದ ಮಾಡುವ ವೆಚ್ಚದಲ್ಲಿ ಪಾರದರ್ಶಕತೆ ಇರಬೇಕು.

**7. ಚುನಾವಣಾ ಕಾರ್ಯದಲ್ಲಿ 'ಏಕಗವಾಕ್ಷ' ಜಾರಿಯಾಗಬೇಕು. (Provision of threshold in Election )**

ವಿಕಾಸೋನ್ಮುಖ ದೇಶಗಳಲ್ಲಿ ಚುನಾವಣೆಗಳಲ್ಲಿ 'ಏಕಗವಾಕ್ಷ' ಪದ್ಧತಿ ಜಾರಿಯಲ್ಲಿಲ್ಲದ ಕಾರಣ ರಾಜಕೀಯ ಪಕ್ಷಗಳು ಹೆಚ್ಚೆಚ್ಚು ಸಂಖ್ಯೆಯಲ್ಲಿ ಹುಟ್ಟಿಕೊಳ್ಳುತ್ತಿವೆ. ಇದರ ನಿಯಂತ್ರಣಕ್ಕಾಗಿ ಚುನಾವಣೆಯಲ್ಲಿ ಭಾಗಿಯಾಗುವ ಸಮಯದಲ್ಲಿ ಐದು (5) ಪ್ರತಿಶತ ಮತಗಳನ್ನು ಪಡೆಯದವರಿಗೆ ಮತ್ತೊಮ್ಮೆ ಚುನಾವಣೆಯಲ್ಲಿ ಭಾಗವಹಿಸದಂತೆ ಮಾಡಬೇಕು. ಇದರಿಂದ ಹೆಚ್ಚಳದಲ್ಲಿ ಕಡಿವಾಣ ಹಾಕಬಹುದು. ಇದರಿಂದ ರಾಜಕೀಯ ವ್ಯವಸ್ಥೆಯಲ್ಲಿ ಶುದ್ಧತೆಯುಂಟಾಗಬಹುದು.

**8. ಚುನಾವಣಾ ಪ್ರಣಾಲಿ ಸ್ಥಾಪಿತವಾಗಬೇಕು. (Provision of Election System )**

ಚುನಾವಣಾ ಪ್ರಣಾಲಿ ಜಾರಿಗೊಳಿಸುವ ಸಮಯದಲ್ಲಿ ನಾಗರಿಕನ ಶಿಕ್ಷಣ ಮತ್ತು ಆರ್ಥಿಕ ಪರಿಸ್ಥಿತಿಯನ್ನು ನೋಡಬೇಕು. ಪ್ರತ್ಯಕ್ಷ ಚುನಾವಣಾ ಪ್ರಣಾಲಿ ಅಥವಾ ಆ ಪ್ರತ್ಯಕ್ಷ ಚುನಾವಣಾ ಪದ್ಧತಿ (ಪ್ರಣಾಲಿ) ಯಾವುದೇ ಒಂದು ಪ್ರಣಾಲಿಯನ್ನೇ ಸ್ಥಾಪಿತಗೊಳಿಸಬೇಕು. ಮತ ನೀಡಲು ಅರ್ಹತೆ ಪಡೆದವರು, ಮತಾಧಿಕಾರದ ಪ್ರಯೋಗವನ್ನು ಮಾಡುವ (ಮತಚಲಾಯಿಸುವ) ಅಥವಾ ಮಾಡಿಸುವುದಕ್ಕಾಗಿ ಶತ ಪ್ರತಿಶತ ಜನರು ರಾಜಕೀಯವಾಗಿ ಜಾಗೃತವಾಗಬೇಕು. ಇಲ್ಲವಾದಲ್ಲಿ ಪ್ರಬುದ್ಧ ಮತಾಧಿಕಾರ ವ್ಯವಸ್ಥೆಯಿಂದ ಸ್ವಚ್ಛ ಚುನಾವಣಾ ಪ್ರಣಾಲಿಯ ಮೇಲೆ ಪ್ರಭಾವ ಬೀಳುತ್ತದೆ. ಜನ ಸಾಮಾನ್ಯ ಜನತೆಯ ಶಿಕ್ಷಣದ ಮಟ್ಟವನ್ನು ನೋಡಿ ಚುನಾವಣಾ ಪ್ರಣಾಲಿಯನ್ನು ಜಾರಿ ಮಾಡಬೇಕು.

**9. ರಾಜ್ಯದ ಆಡಳಿತವು ಪಕ್ಷಗಳ ಹಸ್ತಕ್ಷೇಪದಿಂದ ಮುಕ್ತವಾಗಿರಬೇಕು. (No political interference in Bureaucracy )**

ರಾಜ್ಯದ ಆಡಳಿತವು ಹಸ್ತಕ್ಷೇಪಗಳಿಂದ ಮುಕ್ತವಾಗಿರಬೇಕು. ಯಾವ ದೇಶದಲ್ಲಿ ಸೇನೆ, ಕಾವಲುಗಾರರು ಮತ್ತು ವ್ಯವಸ್ಥಾಪಕಸೇವೆ ರಾಜಕೀಯವಾಗಿ ಅತಿಕ್ರಮಣವಾಗುತ್ತದೋ, ಅಂತಹ ದೇಶಗಳಲ್ಲಿ ಪ್ರಜಾತಂತ್ರದ ಸ್ಥಾಯಿತ್ವ ಉಳಿಯಲಾರದು. ಆದ್ದರಿಂದ ರಾಜ್ಯದ ಆಡಳಿತ ರಾಜಕೀಯ ಪಕ್ಷಗಳ ಹಸ್ತಕ್ಷೇಪದಿಂದ ಮುಕ್ತವಾಗಿರಬೇಕು.

**10. ನಾಯಕರು ಹಾಗೂ ಕಾರ್ಯಕರ್ತರ ಮೇಲೂ ಕಾನೂನು ಕಾರ್ಯಾಚರಣೆಯ ವ್ಯವಸ್ಥೆ ಇರಬೇಕು. (Leagal Provision to punish Leaders and Cadres )**

ಹೆಚ್ಚಿನ ದೇಶಗಳಲ್ಲಿ ರಾಜಕೀಯ ನಾಯಕರು ಹಾಗೂ ಕಾರ್ಯಕರ್ತರ ಮೇಲೆ ಕಾನೂನಿ ಕಾರ್ಯಾಚರಣೆಯ ವ್ಯವಸ್ಥೆ ಇರುವುದಿಲ್ಲ. ರಾಜಕೀಯ ಮುಖಂಡ ಹಾಗೂ ಕಾರ್ಯಕರ್ತರ ಅನುಚಿತ ಕಾರ್ಯಗಳಿಗಾಗಿ ಕಾನೂನಿ ಕಾರ್ಯಾಚರಣೆಯ ವ್ಯವಸ್ಥೆ ಆಗಬೇಕು.

ಈ ಮೇಲಿನ ಎಲ್ಲಾ ಅಂಗಗಳನ್ನು ತಿಳಿದುಕೊಂಡು ಪ್ರತಿಯೊಂದು ರಾಜ್ಯವ್ಯವಸ್ಥೆಯ ರಾಜಕೀಯ ಪಕ್ಷಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ವಿಧಾನಗಳ ನಿರ್ಮಾಣ ಮಾಡಬೇಕು. ರಾಜಕೀಯ ಪಕ್ಷಗಳ ಮೂಲಕ ರಾಜ್ಯವ್ಯವಸ್ಥೆಯ

ಮೂಲಕ ರಾಜಕೀಯ ಪಕ್ಷಗಳನ್ನು ಒಳ್ಳೆಯ ರೀತಿಯಿಂದ ಸಂಚಾಲಿಸುವ ಪರಂಪರೆಯ ವಿಧಾನದ ಮೂಲಕ ಎರಡೂ ಕಡೆಗಳ ಪಕ್ಷಗಳಿಂದ ಸಂಚಾಲನೆಗೊಳ್ಳುವ ವ್ಯವಸ್ಥೆಯಾಗಬೇಕು.

## ರಾಜಕೀಯ ಪಕ್ಷಗಳ ಆಚಾರ ಸಂಹಿತೆ (Code of Ethics of Political Party)

ಆಚಾರ ಸಂಹಿತೆಯೆಂದರೆ ಯಾವುದೇ ಸಮುದಾಯದಿಂದ ದೇಶ, ಕಾಲ ಪರಿಸ್ಥಿತಿಗನುಗುಣವಾಗಿ ಸರಿಯಾದ ನಡವಳಿಕೆಯನ್ನು ವ್ಯವಸ್ಥೆಯಲ್ಲಿಡುವುದಕ್ಕಾಗಿ ನೀತಿಯ, ವಿಧಿಯ ಆಧಾರದಲ್ಲಿ ಮಾಡಲ್ಪಟ್ಟ ನಿಯಮ. ಯಾವ ಕ್ಷೇತ್ರ ಹಾಗೂ ವರ್ಗಕ್ಕಾಗಿ ಆಚಾರ ಸಂಹಿತೆಯನ್ನು ಮಾಡಬೇಕಾಗಿರುತ್ತದೋ, ಆ ಕ್ಷೇತ್ರ ಮತ್ತು ವರ್ಗವನ್ನು ಸಂಪೂರ್ಣವಾಗಿ ನಿಯಂತ್ರಣದಲ್ಲಿಡುವುದಕ್ಕಾಗಿ ಆಚಾರ ಸಂಹಿತೆಯನ್ನು ಸಿದ್ಧಗೊಳಿಸಲಾಗುತ್ತದೆ. ರಾಜಕೀಯ ಪಕ್ಷವನ್ನು ಕೂಡ ಆಚಾರ ಸಂಹಿತೆ (ವ್ಯವಸ್ಥೆ) ಯೊಳಗೆ ಇಡುವುದು ಅವಶ್ಯಕತೆಯಾಗಿದೆ. ವಿಕಸಿತ ದೇಶವಾಗಿರಲಿ, ವಿಕಾಸೋನ್ಮುಖ ದೇಶವಿರಲಿ, ಆ ದೇಶದಲ್ಲಿ ಸಂಚಾಲಿತ ರಾಜಕೀಯ ಪಕ್ಷವು ದೇಶದ ಪರಿಸ್ಥಿತಿಗನುಸಾರವಾಗಿ ಆಚಾರ ಸಂಹಿತೆಯನ್ನು ಮಾಡಬೇಕಾಗುತ್ತದೆ. ಬಹಳಷ್ಟು ದೇಶಗಳಲ್ಲಿ ಇಂತಹ ಆಚಾರ ಸಂಹಿತೆ ಇದ್ದರೂ ಕೂಡ ವಿಕಾಸೋನ್ಮುಖ ದೇಶಗಳಲ್ಲಿ ದುರ್ಬಲ ಆಚಾರಸಂಹಿತೆ ಇರುವುದರಿಂದ ರಾಜಕೀಯ ಪಕ್ಷಗಳು ಮನಬಂದಂತೆ ವರ್ತಿಸುವ ಸ್ಥಿತಿ ಪ್ರಚಲಿತವಿದೆ. ಕಾನೂನನ್ನು ಕಡೆಗಣಿಸುವುದು. (ಅವಹೇಳನ ಮಾಡುವುದು) ಮುಖಂಡ ಹಾಗೂ ಕಾರ್ಯಕರ್ತರ ಹಿತಕ್ಕಾಗಿ (ಬೇಕಾದಂತೆ) ಎಲ್ಲಾ ರೀತಿಯ ನೀತಿ ನಿರ್ಮಾಣ ಮಾಡುವುದು, ಪಕ್ಷದ ಪರವಾಗಿ ನಿರ್ಣಯ ಕೈಗೊಳ್ಳುವಂತಹ ಕಾನೂನು ಬಾಹಿರಕೆಲಸವೂ ಕೂಡ, ಅದು ರಾಜನೈತಿಕ ನಿರ್ಣಯವೆಂದೇ ಬಿಂಬಿಸಿ, ತಮ್ಮ ಮನದಿಚ್ಛೆಯಂತೆ ನಿರ್ಣಯ ತೆಗೆದುಕೊಳ್ಳುವ ಕೆಲಸವನ್ನು ರಾಜಕೀಯ ಪಕ್ಷಗಳು ಮಾಡುತ್ತವೆ ಮತ್ತು ಕಾನೂನು ಬದ್ಧ, ಸರಿಯಾದ ಶಾಸನ ಪದ್ಧತಿಯನ್ನು ಅಪಹಾಸ್ಯ ಮಾಡುತ್ತಾರೆ.

ಇಂತಹ ಕಾರ್ಯವನ್ನು ಸಂಪೂರ್ಣವಾಗಿ ನಿಯಂತ್ರಿಸುವುದಕ್ಕಾಗಿ ರಾಜಕೀಯ ಪಕ್ಷಗಳಿಗೆ ಕಟ್ಟುನಿಟ್ಟಿನ ಆಚಾರ ಸಂಹಿತೆಯನ್ನು ನಿರ್ಮಾಣ ಮಾಡಿ ಹಾಗೂ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದು ಅವಶ್ಯಕವಾಗಿದೆ.

**ರಾಷ್ಟ್ರವಾದ ( Nationalism)**

ರಾಜಕೀಯ ಪಕ್ಷಗಳ ಸಂಪೂರ್ಣವಾಗಿ ರಾಷ್ಟ್ರವಾದಿಯಾಗಿರಬೇಕು. ರಾಜಕೀಯ ಪಕ್ಷ ಯಾವ ದೇಶದ್ದಾಗಿರುತ್ತದೋ, ಅದು ಆ ದೇಶದ ರಾಜ್ಯವ್ಯವಸ್ಥೆ ಮತ್ತು ಜನತೆಯ ಕುರಿತು ಬದ್ಧತೆಯನ್ನು ಹೊಂದಿರಬೇಕು. ಆದ್ದರಿಂದ ರಾಜಕೀಯ ಪಕ್ಷಗಳು ಅಂತಾರಾಷ್ಟ್ರೀಯವಾಗಿರಬಾರದು. ಒಂದು ವೇಳೆ ಹಾಗೆ ಆದಲ್ಲಿ ದೇಶ ಮತ್ತು ದೇಶದ ಜನತೆ ಇಬ್ಬರೂ ಅಂತಹ ಪಕ್ಷಗಳಿಂದ ಮೋಸಕ್ಕೊಳಗಾಗುತ್ತಾರೆ. ರಾಜನೈತಿಕ ಸಿದ್ಧಾಂತಗಳು ಯಾವುದೇ ದೇಶದಿಂದ ಆಮದಾಗಬಹುದು. ಆದರೆ ಆ ದೇಶದೊಂದಿಗೆ ಸಂಬಂಧವಿಟ್ಟುಕೊಳ್ಳುವುದು ಸರಿಯಲ್ಲ. ಯಾವ ದೇಶದಲ್ಲಿ ರಾಜಕೀಯ ಪಕ್ಷ ಸ್ಥಾಪಿತವಾಗಿದೆಯೋ ಅದೇ ದೇಶ ಮತ್ತು ಜನತೆಗಾಗಿ ಬದ್ಧತೆಯನ್ನು ಹೊಂದಿರಬೇಕು. ರಾಜಕೀಯ ಪಕ್ಷಗಳಿಗಿದು ಸರ್ವಮಾನ್ಯ ಸಿದ್ಧಾಂತವಾಗಿದೆ.

**ವಿಭಿನ್ನ ಪಕ್ಷಗಳಿಂದ ಕೂಡಿದ ಸರಕಾರ ಹಾನಿಕಾರಕವಾಗಿರುತ್ತದೆ.**
**(Caolition Government may be harmful )**

ಒಂದೇ ರಾಜಕೀಯ ಪಕ್ಷಕ್ಕೆ ಯಾವಾಗ ಬಹುಮತ ಪ್ರಾಪ್ತವಾಗುವುದಿಲ್ಲವೋ ಆಗ ಒಂದಕ್ಕಿಂತ ಹೆಚ್ಚಿನ ಪಕ್ಷಗಳು ಸೇರಿ ಸರಕಾರ ರಚಿಸುತ್ತಾರೆ. ಮತ್ತು ರಾಜ್ಯವ್ಯವಸ್ಥೆಯನ್ನು ನಡೆಸುತ್ತಾರೆ. ಇಂತಹ ಸರಕಾರಗಳು ಸಾಮಾನ್ಯವಾಗಿ ವಿಕಾಸೋನ್ಮುಖಿ ದೇಶಗಳಲ್ಲಿ ಸಂಚಾಲಿತಗೊಳ್ಳುತ್ತವೆ. ಇಂತಹ ಸಂದರ್ಭಗಳಲ್ಲಿ ಸರಕಾರಗಳು ಅಸ್ಥಿರಗೊಳ್ಳುತ್ತವೆ. ಮತ್ತು ರಾಜಕೀಯ ಪಕ್ಷಗಳು ದೇಶ ಜನತೆಯ ವಿಕಾಸಕ್ಕಿಂತ ಹೆಚ್ಚು ತಮ್ಮ ಶಾಸನಾಧಿಕಾರ ಉಳಿಸಿಕೊಳ್ಳುವತ್ತ ಹೆಚ್ಚು ಗಮನ ಹರಿಸುತಾರೆ, ಮತ್ತು ರಾಜಕೀಯ ಚದುರಂಗದಾಟವನ್ನು ಆಡುತ್ತಾರೆ. ಈ ಕಾರಣದಿಂದಾಗಿ ದೇಶ ಮತ್ತು ಜನತೆ ಆರ್ಥಿಕವಾಗಿ ದುರ್ಬಲಗೊಳ್ಳುತ್ತವೆ. ರಾಜಕೀಯ ಪಕ್ಷಗಳ ಸಂಖ್ಯೆ ಕಡಿಮ ಇದ್ದಷ್ಟು ಬಹುಮತದ ಸರಕಾರ ಗಠಿತ (ರಚಿತ)ವಾಗುತ್ತದೆ. ಆದ್ದರಿಂದ ಅನ್ಯ ಪಕ್ಷಗಳೊಂದಿಗೆ ಸೇರಿ ರಚಿತವಾದ ಸರಕಾರ ದೇಶ ಹಾಗೂ ಜನರ ದೃಷ್ಟಿಯಿಂದ ಅಪಾಯಕಾರಿಯೆಂದೇ ಪ್ರಮಾಣಿತವಾಗುತ್ತವೆ.

ವಿದ್ರೋಹದಿಂದ (ಒಮ್ಮತವಿಲ್ಲದ) ಹುಟ್ಟಿದ ಸರಕಾರ ಅಲ್ಪಕಾಲೀನವಾಗಿರುತ್ತದೆ. (There is no future of a party based on insurgency) ವಿದ್ರೋಹದಿಂದ ಉತ್ಪನ್ನವಾದ ರಾಜಕೀಯ ಪಕ್ಷ ಅಥವಾ ಸಣ್ಣ ಅಥವಾ ದೊಡ್ಡ ವಿದ್ರೋಹದಿಂದ ಸಂಘಟಿತ ರಾಜಕೀಯು ಪಕ್ಷಗಳ ಭವಿಷ್ಯ ದೀರ್ಘಕಾಲಿದ್ದಾಗಿರುವುದಿಲ್ಲ. ಇಂತಹ ರಾಜಕೀಯ ಪಕ್ಷಗಳು ದೇಶ ಹಾಗೂ

ಜನರ ಹಿತಕ್ಕಾಗಿ ಕೆಲಸ ಮಾಡಲಾರವು. ಜನರು ಅಭಾವ ಹಾಗೂ ಸೌಲಭ್ಯವಂಚಿತರಾಗುತ್ತಾರೆ. ಮತ್ತು ಸಕಾರಾತ್ಮಕ ಪ್ರವೃತ್ತಿಯಿಂದ ಸಮಾಜದಲ್ಲಿ ತಮ್ಮ ಬೇರುಗಳನ್ನು ಗಟ್ಟಿಗೊಳಿಸುತ್ತಾರೆ. ಆಗಲೇ ವಿದ್ರೋಹ ಉತ್ಪನ್ನವಾಗುತ್ತದೆ. ವಿದ್ರೋಹದಿಂದ ಉತ್ಪನ್ನವಾದ ರಾಜಕೀಯ ಪಕ್ಷ, ದೇಶ ಮತ್ತು ಜನತೆಯ ಹಿತವನ್ನು ಮಾಡಲಾರದು.

**ರಾಜಕೀಯ ಪಕ್ಷಗಳ ಸರ್ವಾಧಿಕಾರಿ ಪಕ್ಷ (Dictatorial aspect of Political Party )**

ರಾಜಕೀಯ ಪಕ್ಷಗಳು ಆಂತರಿಕವಾಗಿ ಸರ್ವಾಧಿಕಾರಿ ಪ್ರವೃತ್ತಿಯದ್ದಾಗಿರುತ್ತವೆ. ಈ ನಿರಂಕುಶತೆಯನ್ನು ಹೊರಗೆ ತೋರ್ಪಡಿಸಲಾಗುವುದಿಲ್ಲ. ಆದರೆ ವಿಕಾಸೋನ್ಮುಖ ದೇಶಗಳಲ್ಲಿ ರಾಜಕೀಯ ಪಕ್ಷಗಳ ಸರ್ವಾಧಿಕಾರ ಪಾರ್ಟಿಯೊಳಗೆಷ್ಟಿರುತ್ತದೋ, ಅಷ್ಟೇ ಹೊರಗೆಯೂ ಚಲಾಯಿಸುವ ಪ್ರಯತ್ನ ಮಾಡುತ್ತಾರೆ. ಇದೇ ಕಾರಣದಿಂದಾಗಿ ರಾಜಕೀಯ ಪಕ್ಷಗಳು ಲೋಕಪ್ರಿಯತೆಯನ್ನು ಕಳೆದುಕೊಳ್ಳಲು ಸಾಕ್ಷಿಯಗುತ್ತವೆ. ವಿಕಾಸೋನ್ಮುಖ ದೇಶಗಳಲ್ಲಾದರೋ ಸರ್ವಾಧಿಕಾರಿ ಪ್ರವೃತ್ತಿ ತಮ್ಮ ಬೆತ್ತಲೆ (ನಗ್ನ) ರೂಪದಲ್ಲಿ ಪ್ರದರ್ಶಿತವಾಗುತ್ತದೆ. ಇದು ರಾಜಕೀಯ ಪಕ್ಷಗಳ, ಪಕ್ಷಸಿದ್ಧಾಂತಕ್ಕೆ ವಿರುದ್ಧವಾಗಿದೆ. ಇದನ್ನು ನಿಯಂತ್ರಿಸಲು ರಾಜ್ಯ ವ್ಯವಸ್ಥೆಯಲ್ಲಿ ಬಹಳಷ್ಟು ಕಾನೂನು ಕಾರ್ಯಾಚರಣೆಗೆ ಅವಕಾಶವಾಗಬೇಕು. ರಾಜ್ಯ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷವನ್ನು ಸರಿಯಾದ ರೀತಿಯಲ್ಲಿ ಸಂಚಾಲನೆ ಮಾಡಲು ವಿಧಿ ನಿಯಮಗಳ ನಿರ್ಮಾಣವಾಗಬೇಕು.

**ಹುದ್ದೆ ಮತ್ತು ಪದಾಧಿಕಾರಿಗಳ ಆಯ್ಕೆ (Selection of Executives Posts)**

ಹುದ್ದೆ ಹಾಗೂ ಅಧಿಕಾರಿಗಳ ಆಯ್ಕೆ ಮಾಡುವ ಸಮಯದಲ್ಲಿ ರಾಜಕೀಯ ಪಕ್ಷಗಳಲ್ಲಿ ಹಂಚಿಕೆ ಮತ್ತು ನಾಯಕನ ಹತ್ತಿರದ ಸಂಬಂಧಿ ಎಂಬ ಆಧಾರದಲ್ಲಿ, ಹುದ್ದೆ ಹಾಗೂ ಅಧಿಕಾರಗಳ ಆಯ್ಕೆ ಮಾಡುವ ಪ್ರಕ್ರಿಯೆ ಸರಿಯಲ್ಲ. ಆದರೆ ವಿಕಾಸೋನ್ಮುಖ ದೇಶಗಳಲ್ಲಿ ಯೋಗ್ಯತೆ ಕಾರ್ಯಕ್ಷಮತೆ (ಸಾಮರ್ಥ್ಯ) ಅಥವಾ ಪಾಂಡಿತ್ಯಕ್ಕೆ ಸ್ಥಾನ ಸಿಗುವುದಿಲ್ಲ. ನಾಯಕನಗೆ ಹತ್ತಿರವಾಗಿ ಯಾರೂ ಇರುತ್ತಾರೋ, ಅವರ ಹೊಗಳು ಭಟ್ಟರಾಗಿರುತ್ತಾರೋ, ಚಾಲಾಕಿಗಳಾಗಿರುತ್ತಾರೋ, ಅವರು ರಾಜಕೀಯ ನಾಯಕನಗೆ ಪ್ರಿಯರಾಗಿರುತ್ತಾರೆ. ಇಂತಹ ರೀತಿಯ ವ್ಯವಸ್ಥೆ ದೇಶಕ್ಕೆ ಹಾನಿಕಾರಕವಾಗಿರುತ್ತದೆ.


**ರಾಜ್ಯ ಮತ್ತು ರಾಜಕೀಯ ಪಕ್ಷಗಳಲ್ಲಿ ವಿಭೇದ ( ಭಿನ್ನತೆ ) (Difference between State and Political Party )**

ರಾಜ್ಯ ಮತ್ತು ರಾಜಕೀಯ ಪಕ್ಷಗಳಲ್ಲಿ ಭಿನ್ನತೆ (ಅಂತರ) ಇದೆ. ರಾಜಕೀಯ ಪಕ್ಷಗಳೇ ರಾಜ್ಯವ್ಯವಸ್ಥೆಯಲ್ಲಿ ಪ್ರವೇಶಮಾಡುತ್ತವೆ ಮತ್ತು ರಾಜಕೀಯ ಪಕ್ಷಗಳೇ ರಾಜ್ಯ ವ್ಯವಸ್ಥೆಯನ್ನು ಸಂಚಾಲಿಸುತ್ತವೆ. ಇಷ್ಟಾದರೂ ರಾಜ್ಯದಲ್ಲಿ ಅಂತರನಿಹಿತ (ಅಂತರಾಳದ) ಸಿದ್ಧಾಂತವಿರುತ್ತವೆ. ಅವು ರಾಜಕೀಯ ಪಕ್ಷಗಳಾಗಿರುವುದಿಲ್ಲ. ಆದ್ದರಿಂದ ಈ ಎರಡು ವ್ಯವಸ್ಥೆಗಳ ಪ್ರಕೃತಿ ಒಂದೇ ರೀತಿಯದ್ದಾಗಿದ್ದರೂ ಇವೆರಡರಲ್ಲಿ ಅಂತರವಿದೆ. ಆದರೆ ಒಂದು ವೇಳೆ ಸಫಲ ರಾಜಕೀಯ ಸಿದ್ಧಾಂತವನ್ನು ಸ್ವೀಕಾರ ಮಾಡುವುದಾದರೆ ಆಗ ಈ ಎರಡು ವ್ಯವಸ್ಥೆಗಳಲ್ಲಿರುವ ಸಿದ್ಧಾಂತಗಳು ಏಕಮತವಾಗಬೇಕು. ಜಗತ್ತಿನ ದೇಶಗಳಲ್ಲಿ ರಾಜ್ಯ ಮತ್ತು ರಾಜಕೀಯ ಪಕ್ಷಗಳ ಮೂಲ ಸಿದ್ಧಾಂತ ಒಂದೇ ತೆರನಾಗಿರುವುದು ಅತಿ ವಿರಳ. ಯಾವ ದೇಶದಲ್ಲಿ ರಾಜ್ಯ ಮತ್ತು ರಾಜಕೀಯ ಪಕ್ಷಗಳಲ್ಲಿ ಅಂತರವಿದೆ. ಆ ದೇಶ ಮತ್ತು ಜನತೆ ಉನ್ನತಿ ಮಾಡಲಾರದು. ಇಂತಹ ದೇಶಗಳಲ್ಲಿ ಸುಧಾರಣೆ ಅವಶ್ಯಕವಾಗಿದೆ. ಮೂಲ ರೂಪದಲ್ಲಿ ಈ ಕೆಳಗಿನ ಅತ್ಯಾವಶ್ಯಕ ತತ್ವಗಳನ್ನು ಮರೆಮಾಚಲು ಸಾಧ್ಯವಿಲ್ಲ.

1. ರಾಜಕೀಯ ಸ್ಥಿರತೆ
2. ರಾಷ್ಟ್ರದ ಉನ್ನತಿ
3. ರಾಷ್ಟ್ರದಲ್ಲಿ ಶಾಂತಿ ಸ್ಥಾಪನೆ
4. ರಾಷ್ಟ್ರ ಮತ್ತು ಜನತೆಯ ಸುರಕ್ಷೆ.
5. ದೇಶ ಮತ್ತು ಜನತೆಯ ಆರ್ಥಿಕ ಅಭಿವೃದ್ಧಿ.

ಈ ಮೇಲಿನ ಐದು ತತ್ವಗಳು ರಾಜ್ಯ ಮತ್ತು ರಾಜಕೀಯ ಪಕ್ಷಗಳಿಗೆ ಅತ್ಯಾವಶ್ಯಕವಾಗಿರುತ್ತವೆ. ಆದರೆ ವಿಕಾಸೋನ್ಮುಖ ದೇಶಗಳಲ್ಲಿ ರಾಜಕೀಯ ಪಕ್ಷಗಳ ದೌರ್ಬಲ್ಯದಿಂದಾಗಿ ಈ ಅವಶ್ಯಕ ತತ್ವಗಳು ವಿರುದ್ಧ (ಉಲ್ಟಾ) ರೂಪವನ್ನು ಧರಿಸುತ್ತವೆ. ಸಿದ್ಧಾಂತವಾದಿ ರಾಜಕೀಯ ಪಕ್ಷ ಮತ್ತು ಸಿದ್ಧಾಂತಹೀನ ರಾಜಕೀಯ ಪಕ್ಷಗಳ ರಾಜಕೀಯ ವ್ಯವಸ್ಥೆಯಲ್ಲಿ ಪ್ರವೇಶಿಸುವುದರಿಂದ ಯಾವ ಫಲಿತಾಂಶ ಬರುವುದೋ....

ಅದು ಈ ಕೆಳಗಿನಂತಿದೆ. (ವರ್ಗೀಕರಿಸಲಾಗಿದೆ)




ರಾಜ್ಯವ್ಯವಸ್ಥೆಯ ಸಿದ್ಧಾಂತ ಒಂದೇ ಆಗಿದ್ದರೂ ಕೂಡ ಅದನ್ನು ಚಾಲನೆಗೆ ತರುವ ರಾಜಕೀಯ ಪಕ್ಷದ ಸಿದ್ಧಾಂತದಲ್ಲಿ ವಿಮುಖ (ಅತಂತ್ರ) ಸ್ಥಿತಿ ಉತ್ಪನ್ನವಾಗುತ್ತದೆ. ಈ ಕಾರಣದಿಂದಾಗಿ ಪ್ರತಿಕೂಲ ವ್ಯವಸ್ಥೆ ಸಂಚಾಲಿತವಾಗುವುದು. ಇದಕ್ಕಾಗಿ ಸಿದ್ಧಾಂತವಾದಿ ರಾಜಕೀಯ ಪಕ್ಷಗಳನ್ನು ಹೇಗೆ ಸಿದ್ಧಗೊಳಿಸಲಾಗುತ್ತದೆ, ಇದೇ ಭ್ರಷ್ಟವಿರೋಧಿ ಶಾಸ್ತ್ರದ ಚಿಂತನೆಯ ವಿಷಯವಾಗಿದೆ. ಪ್ರಸ್ತುತ ರಾಜಕೀಯ ಪಕ್ಷಗಳೇ ರಾಷ್ಟ್ರದಲ್ಲಿ ಸ್ಥಿತವಾಗಿದ್ದು, ನಿರ್ದೇಶಿತ ಸಿದ್ಧಾಂತದ ಮರೆಯಲ್ಲಿ ಸಂಚಾಲನೆ ಮಾಡುವ / ಮಾಡಿಸುವ ವ್ಯವಸ್ಥೆ ಆಗಬೇಕು. ಇದಕ್ಕಾಗಿ ರಾಜಕೀಯ ಪಕ್ಷಗಳನ್ನು ನಿಯಮಾನುಸಾರ ನಿಯಂತ್ರಿಸುತ್ತಾ, ನ್ಯಾಯಸಮ್ಮತವಾಗಿ ನಡೆಯುವ ರಾಜನೈತಿಕ ಸಂಸ್ಕೃತಿಯ ವಿಕಾಸ ಮಾಡಬೇಕು. ರಾಜ್ಯದ ಮೂಲ ಸಿದ್ಧಾಂತದ ಆಧಾರದಲ್ಲಿ ರಾಜಕೀಯ ಪಕ್ಷಗಳು ನಡೆದುಕೊಳ್ಳಬೇಕು. ಇದು ಸ್ಪಷ್ಟವಾಗುತ್ತದೆ.

ದೇಶದಲ್ಲಿ ರಾಜಕೀಯ ಪಕ್ಷಗಳ ಸಂಖ್ಯೆ ಎಷ್ಟು ಹೆಚ್ಚುತ್ತದೋ, ದೇಶ ಮತ್ತು ಜನತೆ ಅದೇ ಅನುಪಾತದಲ್ಲಿ ಬಡವರು ಮತ್ತು ಶೋಷಿತರಾಗುವರು. ಆದ್ದರಿಂದ ಯಾವ ದೇಶದಲ್ಲಿ ರಾಜಕೀಯ ಪಕ್ಷಗಳು ಹೆಚ್ಚಾಗಿವೆಯೋ ಆ ದೇಶ ದುರ್ಬಲಗೊಳ್ಳುತ್ತದೆ. ಮತ್ತು ಅಲ್ಲಿ ವಿಕಾಸವಾಗುವುದಿಲ್ಲ. ಇದರೊಂದಿಗೆ ರಾಜಕೀಯ ವ್ಯವಸ್ಥೆ ಅಸ್ಥಿರಗೊಳ್ಳುತ್ತದೆ.

ಯಾವುದೇ ದೇಶದಲ್ಲಿ ಯಾವುದಾದರೂ, ಆಡಳಿತಾತ್ಮಕ ಸ್ವರೂಪದಿಂದಲೂ ಕೂಡ ರಾಜ್ಯದ ಸಂಚಾಲನೆ ಆಗಬಹುದಾಗಿದೆ. ಆದರೆ ರಾಜಕೀಯ ಪಕ್ಷದಲ್ಲಿ ವಿಚಲನೆಯುಂಟಾದ ಮೇಲೂ ಯಾವುದೇ ರಾಜಕೀಯ ಪದ್ಧತಿ ಸ್ಥಾಯಿ ರೂಪದಲ್ಲಿ ಜಾರಿಯಾಗದು. ಆದ್ದರಿಂದ ಇದನ್ನು ನಿಯಂತ್ರಿಸುವುದಕ್ಕಾಗಿ ರಾಜಕೀಯ ಪಕ್ಷಗಳಿಗಾಗಿ ವಿಶೇಷ ನೀತಿ ಜಾರಿಯಾಗಬೇಕು.

ಯಾವುದೇ ರಾಜಕೀಯ ಪಕ್ಷ ಎರಡು ವರ್ಗಗಳಲ್ಲಿ ವಿಭಜಿಸಲ್ಪಟ್ಟಿರುತ್ತವೆ. ಮೊದಲನೆಯದು ನೇತೃತ್ವ ವರ್ಗ ಮತ್ತು ಎರಡನೆಯದು ಕಾರ್ಯಕರ್ತರ ವರ್ಗ. ಈ ಎರಡೂ ವರ್ಗಗಳೇ ಅಧಿಕಾರದ ಹಕ್ಕುದಾರರಾಗುತ್ತಾರೆ. ಕಾರ್ಯಕರ್ತ ವರ್ಗವು ನೇತೃತ್ವದಲ್ಲಿ ಹೋದಮೇಲೆ ಅವರು ನೇತಾ (ನಾಯಕ) ಆಗುತ್ತಾರೆ. ಮತ್ತು ರಾಜ್ಯದ ಆಡಳಿತದಲ್ಲಿ ಭಾಗಿಯಾಗುವುದಕ್ಕಾಗಿ ಪೈಪೋಟಿ ನಡೆಯುತ್ತದೆ. ಇದೇ ಅಧಿಕಾರದ ಲಾಲಸೆ (ಆಸೆ) ಯ ಕಾರಣದಿಂದ ರಾಜಕೀಯ ಪಕ್ಷದೊಳಗೆ ಗುಂಪುಗಾರಿಕೆ ಶುರುವಾಗುತ್ತದೆ. ಹೀಗಾದ ಮೇಲೆ ಒಡಕು ಹೆಚ್ಚುತ್ತಲೇ ಹೋಗುತ್ತದೆ. ಇದೇ ರಾಜಕೀಯ ಪಕ್ಷದ ಕೆಟ್ಟ ಪಕ್ಷವಾಗಿರುತ್ತದೆ. ಸೇವೆಗಾಗಿ ರಾಜನೀತಿ ಇರಬೇಕು. ಆದರೆ ಅಧಿಕಾರಕ್ಕಾಗಿ ರಾಜಕೀಯವಿರುವುದರಿಂದ ಚಿಕ್ಕ ಹಾಗೂ ವಿಕಾಸೋನ್ಮುಖ ದೇಶಗಳಿಗೆ ರಾಜಕೀಯ ಪಕ್ಷ ಅಭಿಶಾಪವೆಂದು ಪ್ರಮಾಣಿತವಾಗಿದೆ.

## ಸುಧಾರಣೆಯ ಪಕ್ಷ (Aspects of Improvement)

ರಾಜಕೀಯ ನಾಯಕರು ಎರಡು ವರ್ಗಗಳಲ್ಲಿ ವಿಭಜಿತರಾಗಿ ಒಂದು ವರ್ಗ ಪಕ್ಷದ ಸಿದ್ಧಾಂತದ ಪ್ರತಿಪಾದನೆ ಮಾಡುವುದಕ್ಕಾಗಿ ನೀತಿ ನಿರ್ಮಾಣ ಮಾಡುತ್ತಾರೆ ಮತ್ತು ಅದನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ನಿರ್ದೇಶನ ನೀಡುವ ಕಾರ್ಯ ಮಾಡುತ್ತಾರೆ. ಇನ್ನೊಂದು ವರ್ಗ ಮೊದಲ ವರ್ಗದ ನಿರ್ದೇಶನ ಮತ್ತು ಸಹಯೋಗದಲ್ಲಿ ಅಧಿಕಾರ ಪಡೆಯಲು ಜನತೆಯ ಬಳಿ ಹೋಗುತ್ತಾರೆ. ಅರ್ಥಾತ್ ರಾಜಕೀಯ ಪಕ್ಷಗಳ ಒಳಗೆ ಅಧಿಕಾರದಲ್ಲಿ ಹೋಗುವ ಮತ್ತು ಹೋಗದೆ ಇರುವ ವರ್ಗದಲ್ಲಿ ವಿಭಜಿತವಾಗುವ ಪ್ರಕ್ರಿಯೆ ಒಂದು ವೇಳೆ ಮುಗಿದು ಹೋದರೆ ಪಕ್ಷ ವಿಭಜಿತವಾಗುವ ಕೆಲಸ (ಕಾರ್ಯ) ನಿಲ್ಲಬಹುದು. ಮತ್ತು ಯಾರು ಅಧಿಕಾರವನ್ನು ಪಡೆದುಕೊಳ್ಳುತ್ತಾರೋ ಅವರ ಕಾರ್ಯ ಮೌಲ್ಯಾಂಕನ ಮಾಡಿ ರಾಜಕೀಯ ಪಕ್ಷ ಪ್ರಭಾವಕಾರಿ ರೂಪದಲ್ಲಿ ಸಂಚಾಲಿತಗೊಳ್ಳುತ್ತವೆ.

ಪಕ್ಷದ ನೀತಿ ನಿರ್ಮಾತೃ ಹಾಗೂ ಸಿದ್ಧಾಂತ ಪ್ರತಿಪಾದಕರ ಸಮೂಹದಲ್ಲಿ ಇರುವ ನಾಯಕ ವರ್ಗದಲ್ಲಿ ಅಧಿಕಾರ ಹೊಂದಲಾಗಿದ್ದ ಪರಿಸ್ಥಿತಿಯಿಂದ ರಾಜಕೀಯ ಪಕ್ಷದೊಳಗೆ ಸೇವಾಪರ ಭಾವನೆ ಜಾಗೃತವಾಗಬಹುದು. ಏಕೆಂದರೆ ಪಕ್ಷದಲ್ಲಿ ಕಾರ್ಯನಿರತ ನಾಯಕನೇ ಅಧಿಕಾರಕ್ಕೇರುವ ವ್ಯವಸ್ಥೆ ಕೊನೆಗೊಳ್ಳುವ ಸ್ಥಿತಿಯಲ್ಲಿ ರಾಜಕೀಯ ನಾಯಕರ ಸ್ವಾರ್ಥ ಮತ್ತು ಮನಬಂದಂತೆ ನಿರ್ಣಯ ತೆಗೆದುಕೊಳ್ಳುವ ಪ್ರವೃತ್ತಿಯನ್ನು ತಡೆಯಬಲ್ಲ. ಒಂದು ವೇಳೆ ಅಧಿಕಾರವನ್ನು ಹೊಂದಲಿರುವ ನಾಯಕ ಹಾಗೂ ಜವಾಬ್ದಾರ ವ್ಯಕ್ತಿ, ರಾಜವ್ಯವಸ್ಥೆ ಮತ್ತು ಪಕ್ಷದ ಅಹಿತವನ್ನುಂಟು ಮಾಡುವ ಕಾರ್ಯ ಮಾಡಿದ್ದೇ ಆದರೆ, ಅಧಿಕಾರದಿಂದ ಹೊರಗುಳಿದವರು, ಅಂತಹವರನ್ನು ಅಧಿಕಾರದಿಂದ ಕೆಳಗಿಳಿಸುವ ಕೆಲಸವನ್ನು ಮಾಡುತ್ತಾರೆ. ಇದರಿಂದ ರಾಜಕೀಯ ಪಕ್ಷದ ವರ್ಚಸ್ಸಿನಿಂದ ಸುಧಾರಣೆಯಾಗಿ ಸೇವಾಪರ ಕಾರ್ಯಗಳ ಪ್ರಾರಂಭವಾಗಬಹುದು.

## ಭ್ರಷ್ಟವಿರೋಧಿ ಶಾಸ್ತ್ರದ ಶಿಕ್ಷಣ ನೀತಿ
## (The Education Policy of Anticorruptology )

ಮನುಷ್ಯ ಸಾಮಾಜಿಕ ಪ್ರಾಣಿಯಾಗಿದ್ದಾನೆ. ಇದು ಜಗತ್ತಿನ ಎಲ್ಲೆಡೆ ಸರ್ವಮಾನ್ಯ ಕಥನವಾಗಿದೆ. ಈ ಸರ್ವ ಮಾನ್ಯ ಪರಿಭಾಷೆಯ ಮೇಲೆ ವಿಚಾರ ಮಾಡುವ ಅವಶ್ಯಕತೆ ಇದೆ. ಮನುಷ್ಯನು ಅನ್ಯ ಪ್ರಾಣಿಗಳಂತೆಯೇ ಇದ್ದಾನೆ. ಆದರೆ ಪಶುವಿನಂತಿಲ್ಲ. ಪಶು ಮತ್ತು ಮನುಷ್ಯ ಭಿನ್ನ ಪ್ರಕೃತಿಯವರಾಗಿದ್ದಾರೆ. ಮತ್ತು ಈ ಭಿನ್ನತೆ ಸಹಜವೂ ಹೌದು. ಆದರೆ ಅನೇಕ ವಿಕಾಸೋನ್ಮುಖ ಅಥವಾ ಅವಿಕಸಿತ ದೇಶಗಳಲ್ಲಿ ಮನುಷ್ಯ ಅನ್ಯ ಪಶುಗಳಿಗಿಂತ ಭಿನ್ನವಾಗಿಸುತ್ತಾನೆ. ಆದ್ದರಿಂದ ಮನುಷ್ಯ ಮತ್ತು ಪಶುವಿನ ನಡುವಿನ ಅಂತರ ಆತನ ಶಿಕ್ಷಣದ ಮೂಲಕ ಸ್ಪಷ್ಟವಾಗುತ್ತದೆ. ಆದ್ದರಿಂದ ಮಾನವ ಸಮಾಜದಲ್ಲಿ ಶಿಕ್ಷಣಕ್ಕೆ ಅತ್ಯಧಿಕ ಮಹತ್ವವಿದೆ.

ಮಾನವ ಸೃಷ್ಟಿಯ ಜೊತೆ ಜೊತೆಗೆ ಶಿಕ್ಷಣ ನೀತಿಯೂ ವಿಕಸಿಸುತ್ತಾ ಸಾಗಿರುವುದನ್ನು ಇತಿಹಾಸದ ಪುಟಗಳಲ್ಲಿ ಕಾಣುತ್ತೇವೆ. ಅಕ್ಷರ ಮತ್ತು ಲೇಖನ ಕಲೆ ಇಲ್ಲದಿದ್ದ ಕಾಲದಲ್ಲೂ ಮಾನವ ಸಮಾಜದಲ್ಲಿ ಶಿಕ್ಷಣ ನೀತಿಯ ಅಸ್ತಿತ್ವವಿತ್ತು. ಇದೇ ಕಾರಣದಿಂದ ಮಾನವ ವಿಕಾಸದ ಇತಿಹಾಸದಲ್ಲಿ ಸಂಸ್ಕೃತಿ, ಸಭ್ಯತೆ ಮತ್ತು ಆಧ್ಯಾತ್ಮಿಕ ಜ್ಞಾನದ ಹಿಡಿತ ಭದ್ರವಾಗಿದೆ. ಎಂಬುದನ್ನು ತಿಳಿಯಬಹುದಾಗಿದೆ. ಆದರೆ ಇಂತಹ ಸಭ್ಯ ಹಾಗೂ ಸುಸಂಸ್ಕೃತ ಮಾನವ ಸಭ್ಯತೆ ಜಗತ್ತಿನ ಎಲ್ಲಾ ಕಡೆಗಳಲ್ಲಿ ಮತ್ತು ಎಲ್ಲಾ ಯುಗಗಳಲ್ಲಿ ಒಂದೇ ಕಾಲಮಾನದಲ್ಲಿ ಬಂದುದಲ್ಲ. ಬೇರೆ ಬೇರೆ ಸಮಾಜಗಳಲ್ಲಿ ಬೇರೆ ಬೇರೆ ಯುಗಗಳಲ್ಲಿ ಇಂತಹ ಮಾನವೋಚಿತ

ಸ್ಥಿತಿಯು ಉಂಟಾದ ಕಾರಣ ವರ್ತಮಾನದಲ್ಲಿ ಮಾನವ ಸಭ್ಯತೆ ಪ್ರಭಾವಿತವಾಗಿದೆ. ಎಂಬುದನ್ನು ಸಹಜವಾಗಿ ಊಹಿಸಬಹುದಾಗಿದೆ.

ವಾಸ್ತವವೆಂದರೆ, ಲೇಖನ ಕಲೆ ಪ್ರಾರಂಭವಾಗುವುದಕ್ಕಿಂತಲೂ ಮೊದಲು ಶ್ರುತಿ ಪದ್ಧತಿ ಹಾಗೂ ವ್ಯಾವಹಾರಿಕ ಅಭ್ಯಾಸಗಳ ಮಾಧ್ಯಮದಿಂದ ಜ್ಞಾನವನ್ನು ಒಬ್ಬ ಮನುಷ್ಯನಿಂದ ಇನ್ನೊಬ್ಬನಿಗೆ ತಲುಪಿಸುವ ಕಾರ್ಯ ನಡೆಯುತ್ತಿತ್ತು. ನಂತರದಲ್ಲಿ ಲೇಖನ ಕಲೆಯ ಆವಿಷ್ಕಾರವಾದ ಮೇಲೆ ಮನುಷ್ಯನ ಜ್ಞಾನ ಹಾಗೂ ಅನುಭವದ ಅಭಿಲೇಖ (ಲೇಖನ ರೂಪ) ದಲ್ಲಿಡುವ ಕಾರ್ಯ ಸಂಪನ್ನವಾಯಿತು. ಇಂದಿನ ವಿಕಸಿತ ಶಿಕ್ಷಣದ ಇತಿಹಾಸದ ಪ್ರಾರಂಭ ಮಾತು ಮತ್ತು ವ್ಯವಹಾರದಿಂದ ಆಗಿದೆ. ಆದ್ದರಿಂದ ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಕೂಡ ಮಾತು ಮತ್ತು ವ್ಯವಹಾರಕ್ಕೆ ಅಷ್ಟೇ ಮಹತ್ವವಿದೆ.

ಯಾವ ಸಮಾಜದಲ್ಲಿ ಸರಿಯಾದ ಶಿಕ್ಷಣದ ವಿಸ್ತಾರವಾಗುತ್ತದೊ, ಅದು ವಿಕಸಿತ ಸಮಾಜ ಎನಿಸಿಕೊಳ್ಳುತ್ತದೆ. ಶಿಕ್ಷಣ ನೀತಿಯನ್ನು ಸರಿಯಾದ ರೀತಿಯಲ್ಲಿ ಜಾರಿ ಮಾಡುವುದರಿಂದ ನಿಶ್ಚಿತವಾಗಿ ಸಮಾಜದ ವಿಕಾಸವಾಗುತ್ತದೆ. ವ್ಯಕ್ತಿಯ ಸಕ್ಷಮತೆಯ ಮೂಲ ಆಧಾರವೇ ಶಿಕ್ಷಣ. ವ್ಯಕ್ತಿಯು ಯಾವ ರೀತಿಯ ಶಿಕ್ಷಣವನ್ನು ಪಡೆಯುತ್ತಾನೋ ಅವನ ಕ್ಷಮತೆ (ಸಾಮರ್ಥ್ಯ)ಯ ಪ್ರಕೃತಿಯೂ ಅದಕ್ಕನುಸಾರವಾಗಿಯೇ ಇರುತ್ತದೆ. ಆದ್ದರಿಂದ ಸಮಾಜದಲ್ಲಿ ಒಳ್ಳೆಯ ಶಿಕ್ಷಣ ವಿಸ್ತಾರಗೊಳ್ಳಬೇಕಾದ ಅವಶ್ಯಕತೆ ಇದೆ.

ವಿಶ್ವದ ಎಲ್ಲಾ ವಿಕಾಸೋನ್ಮುಖ ಹಾಗೂ ವಿಕಸಿತ ದೇಶಗಳು ಶಿಕ್ಷಣ ನೀತಿಯ ಮೂಲ ಉದ್ದೇಶದ ರೂಪದಲ್ಲಿ ಸ್ವೀಕರಿಸಿ ಶಿಕ್ಷಣ ನೀತಿಯನ್ನು ತರ್ಜುಮೆಗೊಳಿಸುತ್ತಾರೆ. ಆದರೆ ಹೆಚ್ಚಿನ ದೇಶಗಳಲ್ಲಿ ಶಿಕ್ಷಣ ನೀತಿ ಸಫಲವಾಗುವುದಿಲ್ಲ. ಶಿಕ್ಷಣ ನೀತಿಯಲ್ಲಿ ಆಗುತ್ತಿರುವ ಕೊರತೆಯ ಕಾರಣದಿಂದಲೇ ಸಮಾಜದಲ್ಲಿ ಭ್ರಷ್ಟಾಚಾರ ಉತ್ಪನ್ನವಾಗುತ್ತದೆ ಮತ್ತು ಆತಂಕವಾದ ಹರಡುವ ಪರಿಸ್ಥಿತಿಯುಂಟಾಗುತ್ತದೆ. ಈ ರೀತಿಯಲ್ಲಿ ಮಾನವೋಚಿತ ಶಿಕ್ಷಣ ಪ್ರದಾನವಾಗದಿರುವುದರಿಂದ ಸಮಾಜವು ಸಮಸ್ಯಾಗ್ರಸ್ತವಾಗುತ್ತದೆ. ಶಿಕ್ಷಣ ನೀತಿ ಸಬಲವಾದಾಗಲೇ ಸಮಾಜ ವ್ಯವಸ್ಥಿತ ರೀತಿಯಲ್ಲಿ ಸಂಚಾಲಿತಹೊಳ್ಳಬಹುದಾಗಿದೆ. ಈ ವಿಚಾರವನ್ನು ಇಲ್ಲಿ ಸಂಕ್ಷೇಪವಾಗಿ ವಿಶ್ಲೇಷಿಸುತ್ತೇವೆ.

ವರ್ತಮಾನದಲ್ಲಿ ಸಮಾಜದ ಎಲ್ಲಾ ಪ್ರಕಾರಗಳಲ್ಲಿ ಭ್ರಷ್ಟಾಚಾರ ಸಾಮಾಜಿಕ ಸಮಸ್ಯೆಯ ರೂಪದಲ್ಲಿ ಸ್ಥಾಪಿತವಾಗಿದೆ. ಚಿಕ್ಕದಿರಲಿ, ದೊಡ್ಡದಿರಲಿ, ವ್ಯಕ್ತಿಗತ ಅಥವಾ ಸಂಸ್ಥಾಗತವಾಗಿರಲಿ ಪ್ರತ್ಯಕ್ಷ ಅಥವಾ ಪರೋಕ್ಷ ರೂಪದಲ್ಲಿ ಹರಡಿರುವ ಭ್ರಷ್ಟಾಚಾರ ಜನ್ಯ ಕಾರ್ಯಗಳನ್ನು ನಿಯಂತ್ರಿಸುವುದಕ್ಕಾಗಿ ಉತ್ತಮ ಶಿಕ್ಷಣ

ನೀತಿಯನ್ನು ರೂಪಿಸಬೇಕಾಗಿದೆ. ಇಂತಹ ಶಿಕ್ಷಣ ನೀತಿ ರೂಪುಗೊಂಡ ಮೇಲೆ ಮೂರು ಕ್ಷೇತ್ರಗಳನ್ನು ಪ್ರಭಾವಿತಗೊಳಿಸುವ ಶಿಕ್ಷಣನೀತಿಯನ್ನು ತಯಾರಿಸಬೇಕಾಗಿದೆ.

ಇದರಲ್ಲಿ ಮೂರು ಕ್ಷೇತ್ರಗಳಿವೆ.

1. ವ್ಯಕ್ತಿ ಅಥವಾ ನಾಗರಿಕ ನಿರ್ಮಾಣ,

2. ಸಮೂಹ ಅಥವಾ ಸಮಾಜ ನಿರ್ಮಾಣ,

3. ರಾಜನೈತಿಕ ಸಮೂಹ ಅಥವಾ ರಾಜಕೀಯ ಪಕ್ಷ ನಿರ್ಮಾಣ.

**1. ವ್ಯಕ್ತಿ ಅಥವಾ ನಾಗರಿಕ ನಿರ್ಮಾಣ (Making good Citizens )**

ಒಂದು ಪ್ರಾಣಿಯಂತೆ ಮನುಷ್ಯ ಜನಿಸುತ್ತಾನೆ. ನಂತರದಲ್ಲಿ ಅವನು ಪಡೆದ ತಿಳುವಳಿಕೆ ಅಥವಾ ಜ್ಞಾನದಿಂದ ಅವನು ಸಮಾಜದಲ್ಲಿ ತನ್ನ ಸ್ಥಾನಮಾನವನ್ನು ನಿರ್ಧರಿಸಿಕೊಳ್ಳಬೇಕಾಗುತ್ತದೆ. ಈ ರೀತಿಯ ಮಾನವೋಚಿತ ಜ್ಞಾನ ಅಥವಾ ವ್ಯವಹಾರವನ್ನು ಪಡೆದುಕೊಂಡು ನಂತರ ಸಮಾಜದಲ್ಲಿ ಮಾನವರೂಪದಲ್ಲಿ ಸ್ಥಾಪಿತನಾಗುತ್ತಾನೆ. ಅದೇ ಸ್ಥಾಪಿತಗೊಂಡ ಮನುಷ್ಯ ಸಮಾಜದ ಉನ್ನತಿ ಅಥವಾ ಅವನತಿಗೆ ಕಾರಣನಾಗುತ್ತಾನೆ. ಹಾಗಾಗಿ ವ್ಯಕ್ತಿಯ ಜ್ಞಾನದ ಮಾನದಂಡದ ಆಧಾರದಲ್ಲಿ ವ್ಯಕ್ತಿಯ ಯೋಗ್ಯತೆ ಮನುಷ್ಯ ಪಡೆದುಕೊಳ್ಳಬೇಕು. ಭೌತಿಕ ಜ್ಞಾನದಿಂದ ಅವನ ಸ್ಥೂಲ ಶರೀರವನ್ನು ಹೆಗೆ ರಕ್ಷಿಸಿಕೊಳ್ಳಬಹುದು ಮತ್ತು ಸಮಾಜದ ವಿಕಾಸ ಹೇಗೆ ಮಾಡಬಹುದು ಎಂಬುದನ್ನು ಪಡೆಯಬಹುದು. ಅದೇ ಆಧ್ಯಾತ್ಮಿಕ ಜ್ಞಾನದಿಂದ ಅವನ ವ್ಯಕ್ತಿತ್ವದ ನಿರ್ಮಾಣವಾಗಬೇಕು ಮತ್ತು ಸಮಾಜವು ಸತ್ಯದ ಮಾರ್ಗದಲ್ಲಿ ಹೇಗೆ ಮುಂದುವರಿಯಬೇಕು ಈ ಕುರಿತ ಜ್ಞಾನ ಸಿಗಬೇಕು. ಈ ಎರಡು ಭೌತಿಕ ಹಾಗೂ ಆಧ್ಯಾತ್ಮಿಕ ಮಾರ್ಗಗಳನ್ನು ಮುನ್ನಡೆಸುವ ಮೂಲ ತತ್ವಜ್ಞಾನವಾಗಿದೆ. ವ್ಯಕ್ತಿಗೆ ಶಿಕ್ಷಣನೀತಿಯ ನಿರ್ಮಾಣ ಮಾಡುವುದಕ್ಕಾಗಿ ಈ ಕೆಳಗಿನ ನಾಲ್ಕು ವಿಷಯಗಳನ್ನು ಸ್ಥಾಪಿಸುವ ನೀತಿಯ ನಿರ್ಮಾಣ ಮಾಡಬೇಕಾಗಿದೆ.

ಕ) ಸದಾಚಾರಿ.

ಖ) ಸಕಾರಾತ್ಮಕ ಚಿಂತನೆ

ಗ) ಪ್ರಾಮಾಣಿಕ

ಘ) ಅನುಶಾಸಿತ

**ಕ) ಸದಾಚಾರಿ (Benevolence)** ವ್ಯಕ್ತಿ ಅಥವಾ ನಾಗರಿಕ ಸಮಾಜದ ವಿಕಾಸದಲ್ಲಿ ತನ್ನ ಯೋಗದಾನವನ್ನು ನೀಡುವನು. ಸದಾಚಾರದ ಇನ್ನೊಂದು

ರೂಪವೆಂದರೆ ನೈತಕತೆಯೂ ಕೂಡ ಆಗಿದೆ. ನೈತಿಕ ಹಾಗೂ ಸದಾಚಾರಿ (ಒಳ್ಳೆಯ ಆಚಾರವಂತ) ವ್ಯಕ್ತಿ ಅಥವಾ ನಾಗರಿಕನ ನಿರ್ಮಾಣಕ್ಕನುಸಾರವಾಗಿ ಶಿಕ್ಷಣನೀತಿಯನ್ನು ಸಿದ್ಧಗೊಳಿಸಬೇಕಾಗಿದೆ. ಶಿಕ್ಷಣನೀತಿಯನ್ನು ತಯಾರಿಸುವ ಸಮಯದಲ್ಲಿ ಪುಸ್ತಕದ ಜ್ಞಾನ ಮತ್ತು ವ್ಯವಸಾಯಿಕ ಜ್ಞಾನ ಎರಡೂ ರೀತಿಯ ವ್ಯವಸ್ಥೆ ಪ್ರಾರಂಭಿಕ ಹಂತದಿಂದಲೇ ಆಗುವ ವ್ಯವಸ್ಥೆ ಆಗಬೇಕು. ಆಚಾರ ವಿಚಾರ ಮತ್ತು ನೈತಿಕತೆಯ ಜ್ಞಾನ ಪ್ರಾರಂಭದಲ್ಲೇ ಆಗುವುದರಿಂದ ವ್ಯಕ್ತಿಗಳು ಸದಾಚಾರಿಗಳಾಗುತ್ತಾರೆ.

**ಖ) ಸಕಾರಾತ್ಮಕ ಚಿಂತನೆ (Positive thinking)**

ಸಕಾರಾತ್ಮಕ ಚಿಂತನೆಯಿಂದ ವ್ಯಕ್ತಿಯ ಸರ್ವಪಕ್ಷೀಯ ವಿಕಾಸವಾಗುತ್ತದೆ. ಚಿಂತನೆ ಹಾಗೂ ವಿಚಾರಗಳಲ್ಲಿ ಒಂದು ವೇಳೆ ವಿಮುಖವಾದ (ಅತಂತ್ರ) ಉಂಟಾಗುತ್ತದೋ ಆಗ ಕೇವಲ ವ್ಯಕ್ತಿಯ ಮಾತ್ರವಲ್ಲ ಸಮಗ್ರ ಸಮಾಜದ ಅಸ್ತಿತ್ವ ಅಪಾಯಕ್ಕೆ ಗುರಿಯಾಗುತ್ತದೆ. ಅದಕ್ಕಾಗಿ ವ್ಯಕ್ತಿ ಮತ್ತು ಸಮಾಜ ವಿಕಾಸಕ್ಕಾಗಿ ಸಕಾರಾತ್ಮಕ ಚಿಂತನೆ ಅನಿವಾರ್ಯ ತತ್ವವಾಗಿದೆ. ವ್ಯಕ್ತಿಯ ಸಕಾರಾತ್ಮಕ ಚಿಂತನೆಯಿಂದ ವ್ಯಕ್ತಿಯ್ಲಲಿ ವಿವೇಕ ಉತ್ಪನ್ನವಾಗುತ್ತದೆ. ವಿವೇಕಶೀಲತೆ ಪ್ರಮುಖ ಮಾನವೀಯ ಗುಣವಾಗಿದೆ. ಆದ್ದರಿಂದ ಸಕಾರಾತ್ಮಕ ಚಿಂತನೆಯ ನಿರ್ಮಾಣಕ್ಕಾಗಿ ಅದಕ್ಕೆ ಅನುರೂಪವಾದ ಶಿಕ್ಷಣನೀತಿಯ ನಿರ್ಮಾಣ ಮಾಡುವ ಅವಶ್ಯಕತೆ ಇದೆ.

**ಗ) ಪ್ರಾಮಾಣಿಕತೆ ( Honesty)**

ಮನುಷ್ಯನ ಗುಣಗಳಲ್ಲಿ ಪ್ರಾಮಾಣಿಕತೆ ಒಂದು ತತ್ವವಾಗಿದೆ. ಮನುಷ್ಯ ಈ ಪ್ರಾಮಾಣಿಕತೆ ಕಳೆದುಕೊಂಡಾಗ ಆತ ಮಾನವ ಸಮಾಜದಲ್ಲಿ ಎಂದೂ ತನ್ನನ್ನೂ ಸ್ಥಿರವಾಗಿ ಸ್ಥಾಪಿಸಿಕೊಳ್ಳಲಾರ. ಪ್ರಾಮಾಣಿಕತೆ ಮಾನವನ ವ್ಯಕ್ತಿತ್ವ ವಿಕಾಸದ ರಾಜಮಾರ್ಗವಾಗಿದೆ. ಯಾರಲ್ಲಿ ಪ್ರಾಮಾಣಿಕತೆ ಇದೆಯೋ ಅವರು ಎಲ್ಲರಿಂದಲೂ ಸ್ವೀಕೃತರಾಗುತ್ತಾರೆ. ಮಾನವ ಜೀವನದಲ್ಲಿ ಮಾನವೀಯತೆ ಸ್ಥಾಪಿತಗೊಳ್ಳುವಂತಹ ಶಿಕ್ಷಣ ನೀತಿಯ ವ್ಯವಸ್ಥೆ ಆಗಬೇಕಿದೆ.

**ಘ) ಅನುಶಾಸಿತ (ಶಾಸನ ಬದ್ಧತೆ ) ( Discipline )**

ಪ್ರಾರಂಭಿಕ ಹಂತದಿಂದಲೇ ಒಂದು ವೇಳೆ ಶಾಸನಬದ್ಧ ಶಿಕ್ಷಣ ನೀಡಿದಲ್ಲಿ ಮಾನವನ ವ್ಯಕ್ತಿತ್ವ ವಿಕಾಸ ಆಗಬಹುದು. ಮನುಷ್ಯನ ಗುಣ ತತ್ವಗಳಲ್ಲಿ ಶಾಸನ ಬದ್ಧತೆ ಒಳಗೊಂಡಿರುತ್ತದೆ. ಆದ್ದರಿಂದ ಜೀವನ ಪದ್ಧತಿಯಲ್ಲಿ ಅಥವಾ

ವ್ಯವಹಾರದಲ್ಲಿ ಸಾಧಾರಣ ರೀತಿಯಲ್ಲಿದ್ದುಕೊಂಡು ಕೂಡ ಮನುಷ್ಯ ಶಾಸನಬದ್ಧನಾಗಿರಬಲ್ಲ.

ಈ ಮೇಲಿನ ನಾಲ್ಕು ವಿಷಯಗಳನ್ನು ಸ್ಥಾಪಿಸಿದ ಮೇಲೆ ವ್ಯಕ್ತಿ ಮತ್ತು ನಾಗರಿಕನಲ್ಲಿ ವಿಶೇಷವಾದ ಚರಿತ್ರ ನಿರ್ಮಾಣವಾಗುತ್ತದೆ. ಇದರಿಂದ ಮಹತ್ವಪೂರ್ಣ ಪರಿಣಾಮ ಉಂಟಾಗುತ್ತದೆ. ಈ ಪರಿಣಾಮಗಳು ವ್ಯಕ್ತಿ ಮತ್ತು ವ್ಯಕ್ತಿತ್ವ ವಿಕಾಸಕ್ಕೆ ಅವಶ್ಯಕ ತತ್ವಗಳಾಗಿವೆ. ಅವು ಈ ಕೆಳಗಿನಂತಿವೆ. 1. ಸಮೃದ್ಧಿ, 2. ಸಫಲತೆ, 3. ಉಪಲಬ್ಧಿ. (ಪ್ರಾಪ್ತಿ) ಗಳಿಸುವುದು. 4. ಸುಖ ಮತ್ತು ಶಾಂತಿ.

## 2. ಸಮೂಹ ಅಥವಾ ಸಮಾಜ ನಿರ್ಮಾಣ (Building up Community or Society )

ವ್ಯಕ್ತಿ ಅಥವಾ ನಾಗರಿಕನ ನಿರ್ಮಾಣಕ್ಕೆ ಹೇಗೆ ಶಿಕ್ಷಣನೀತಿಯ ನಿರ್ಮಾಣದ ಅವಶ್ಯಕತೆ ಇದೆಯೋ ಅದೇ ರೀತಿ ಸಮುದಾಯ ಮತ್ತು ಸಮಾಜದ ನಿರ್ಮಾಣಕ್ಕಾಗಿಯೂ ಶಿಕ್ಷಣ ನೀತಿಯ ನಿರ್ಮಾಣ ಅವಶ್ಯಕತೆಯಾಗಿದೆ. ವ್ಯಕ್ತಿಯ ಚಿಂತನೆ ಹಾಗೂ ಚಾರಿತ್ರ್ಯದಲ್ಲಿ ವಿಮುಖತೆ ( ವಿಕೃತಿ ) ಬರಬಹುದು. ಈ ಸ್ಥಿತಿಯಲ್ಲಿ ಸಮುದಾಯ ಹಾಗೂ ವಾತಾವರಣವನ್ನು ಒಳ್ಳೆಯ ವಾತಾವರಣ ಸುಧಾರಣೆ ತರಬಲ್ಲದು. ಆದ್ದರಿಂದ ಸಮುದಾಯ ಅಥವಾ ಸಮಾಜದಲ್ಲಿ ಒಳ್ಳೆಯ ವಾತಾವರಣ ನಿರ್ಮಾಣ ಮಾಡುವುದಕ್ಕಾಗಿ ಈ ಕೆಳಗಿನ ವಿಷಯಗಳು ಸ್ಥಾಪಿತವಾಗುವ ಶಿಕ್ಷಣ ನೀತಿಯ ವಿಕಾಸ ವಿಸ್ತಾರ ಆಗಬೇಕಾಗಿದೆ.

ಕ) ನೈತಿಕ ಮೌಲ್ಯಗಳ ಸ್ಥಾಪನೆ

ಖ) ಸಹಕಾರಿ ವಿಕಾಸ

ಗ) ಹೊಣೆಗಾರಿಕೆಯ ಬೋಧನೆ

ಘ) ನ್ಯಾಯಯುತ ಪರಿಸ್ಥಿತಿ.

### ಕ) ನೈತಿಕ ಮೌಲ್ಯಗಳ ಸ್ಥಾಪನೆ (Practice of Moral Value )

ಸಮುದಾಯ ಅಥವಾ ಸಮಾಜದಲ್ಲಿ ನೈತಿಕ ಮೌಲ್ಯಗಳ ಪರಿಮಿತಗಳಿಂದ ಸಾಮಾಜಿಕ ಸಮಸ್ಯೆ ಉತ್ಪನ್ನವಾಗುತ್ತದೆ. ಇದಕ್ಕಾಗಿಯೂ ಸಮಾಜದಲ್ಲಿ ಎಲ್ಲಾ ರೀತಿಯ ಮಹತ್ವದ ಮೌಲ್ಯಗಳಿಗಿಂತ ನೈತಿಕ ಮೌಲ್ಯಕ್ಕೆ ಹೆಚ್ಚಿನ ಮಹತ್ವವಿದೆ. ಇದರ ಸ್ಥಾಯಿತ್ವ ಮತ್ತು ಸಂವರ್ಧನೆ ಇರುವ ಪರಿಸ್ಥಿತಿಯ ಸೃಷ್ಟಿ ಮಾಡಬೇಕಾಗಿದೆ.

## ಖ) ಸಹಕಾರಿತ್ವದ ವಿಕಾಸ – (Developement of a co-operative Society)

ಒಬ್ಬರಿಗಿಂತ ಹೆಚ್ಚು ಜನರು ಸೇರಿ ಮಾಡುವ ಕೆಲಸವನ್ನು ಸಹಕಾರಿ ಸಿದ್ಧಾಂತದ ಅನುಸಾರವಾದ ಕಾರ್ಯವೆನ್ನುತ್ತಾರೆ. ಸಮುದಾಯ ಹಾಗೂ ಸಮಾಜ ವಿಕಾಸದಲ್ಲಿ ಸಹಕಾರಿ ಸಿದ್ಧಾಂತದ ಅನುಸಾರವಾದ ಕಾರ್ಯವೆನ್ನುತ್ತಾರೆ. ಸಮುದಾಯ ಹಾಗೂ ಸಮಾಜ ವಿಕಾಸದಲ್ಲಿ ಸಹಕಾರಿ ಸಿದ್ಧಾಂತವು ಅತ್ಯಂತ ಸಫಲ ಹಾಗೂ ಉಪಯೋಗಿ ಎಂಬುದು ಪ್ರಮಾಣಿತವಾಗಿದೆ. ಇದರಿಂದ ಮನುಷ್ಯರಲ್ಲಿ ಎಲ್ಲರೂ ಸೇರಿ ಕೆಲಸ ಮಾಡುವ ಪರಸ್ಪರರು ಸೇರಿ ಸಫಲತೆಯನ್ನು ಗಳಿಸುವ ಭಾವನೆ ಉತ್ಪನ್ನವಾಗುತ್ತದೆ. ಅದು ಸಮುದಾಯ ಹಾಗೂ ಸಮಾಜ ವಿಕಾಸದಲ್ಲಿ ಲಾಭವನ್ನುಂಟು ಮಾಡುತ್ತದೆ.

## ಗ) ಹೊಣೆಗಾರಿಕೆಯ ಬೋಧನೆ (Feeling of Responsibility )

ಯಾವುದೇ ಒಳ್ಳೆಯ ಅಥವಾ ಕೆಟ್ಟ ಕೆಲಸದ ಹೊಣೆಯನ್ನು ತೆಗೆದುಕೊಳ್ಳುವುದು ಅಥವಾ ನೀಡುವುದು ಇದೇ ಹೊಣೆಗಾರಿಗಕೆಯ ಬೋಧೆಯ ಸ್ಥಿತಿಯಾಗಿದೆ. ಸಮೂಹದಲ್ಲಿ ಅಥವಾ ಸಮಾಜದ ಪ್ರತಿಯೊಂದು ಭಾಗವು ಸಾಮಾಜಿಕ ಆರ್ಥಿಕ ಮತ್ತು ರಾಜನೈತಿಕ ಇತ್ಯಾದಿ ವಿಷಯಗಳಲ್ಲಿ ಆಗುವ ಕಾರ್ಯಗಳಲ್ಲಿ ಈ ಹೊಣೆಗಾರಿಕೆಯ ಬೋಧೆಯ ವ್ಯವಸ್ಥೆಯ ಆಗಬೇಕು.

## ಘ) ನ್ಯಾಯಯುತ ವ್ಯವಸ್ಥೆ – ( Rule of Law )

ನ್ಯಾಯಯುತ ವ್ಯವಸ್ಥೆ ಎಂದರೆ – ಪರಂಪರಾಗತವಾಗಿ ಆಚರಿಸಿಕೊಂಡು ಬರುತ್ತಿರುವ ರೀತಿ ರಿವಾಜು ಹಾಗೂ ಸಂಸ್ಕೃತಿ ಸಾಮಾಜಿಕ ಮೌಲ್ಯ ಹಾಗೂ ಮಾನ್ಯತೆಗಳು ಮತ್ತು ರಾಜ್ಯ ವ್ಯವಸ್ಥೆಯಿಂದ ಚಾಲನೆಯಲ್ಲಿ ಬಂದ ಕಾನೂನಿನ ಪಾಲನೆಯಾಗುವ ಸ್ಥಿತಿಯು ನಿರ್ಮಾಣವಾಗುವಂತಹ ಶಿಕ್ಷಣದ ನೀತಿ ಜಾರಿ ಮಾಡುವ ಅವಶ್ಯಕತೆ ಇದೆ. ಹೀಗಾದಾಗಲೇ ಬಲೀಯವಾದ (ಗಟ್ಟಿಯಾದ) ಪರಿಣಾಮ ಪ್ರಾಪ್ತವಾಗಬಹುದು. ಇವುಗಳು ಹೀಗಿವೆ.

1. ಸಾರ್ವಜನಿಕ ವಿಕಾಸ
2. ಆರ್ಥಿಕ ಸಫಲತೆ.
3. ಸರ್ವಪಕ್ಷೀಯ ಉಪಲಬ್ಧ ( ಪ್ರಾಪ್ತಿ)
4. ಸಹಜ ಅವಕಾಶ ಹಾಗೂ ಸ್ವಾತಂತ್ರ್ಯ.

### 3. ರಾಜಕೀಯ ಸಮೂಹ ಅಥವಾ ರಾಜಕೀಯ ಪಕ್ಷದ ನಿರ್ಮಾಣ (Political Community or organisation of Political Parties )

ಯಾವುದೇ ದೇಶದಲ್ಲಿ ಇರುವ ಜನರ ಜೀವನಮಟ್ಟ ಉತ್ತಮಗೊಳಿಸಲು ಹಾಗೂ ದೇಶದ ಉನ್ನತಿ ಮಾಡುವ ಹೊಣೆ ಆ ದೇಶದೊಳಗಿನ ಕ್ರಿಯಾಶೀಲ ರಾಜಕೀಯ ಸಮೂಹ ಅಥವಾ ರಾಜಕೀಯ ಪಕ್ಷದ್ದಾಗಿರುತ್ತದೆ. ಆದ್ದರಿಂದ ರಾಜಕೀಯ ಸಮೂಹ ಅಥವಾ ರಾಜಕೀಯ ಪಕ್ಷ, ಒಂದ ವೇಳೆ ಜನತೆಯ ಮತ್ತು ದೇಶದ ಹಿತವನ್ನು ಮಾಡುತ್ತದೆಂದರೆ ಆಗ ಆ ದೇಶದಲ್ಲಿ ಕ್ರಿಯಾಶೀಲತೆ ಸ್ಥಿರವಾಗುತ್ತದೆ. ಕ್ರಿಯಾಶೀಲತೆ ಸ್ಥಿರವಾಗಿರುವ ರಾಜಕೀಯ ಸಮೂಹ ಅಥವಾ ರಾಜಕೀಯ ಪಕ್ಷವೇ ದೇಶದಲ್ಲಿ ರಾಜಕೀಯ ಸ್ಥಿರತೆಯನ್ನು ಸ್ಥಾಪಿಸುತ್ತದೆ. ರಾಜಕೀಯ ವಾತಾವರಣ ಸ್ಥಿರವಾಗಿರುವಲ್ಲಿ ಜನರು ಹಾಗೂ ದೇಶ ಉನ್ನತಿಯನ್ನು ಹೊಂದುತ್ತದೆ. ರಾಜಕೀಯ ವಾತಾವರಣ ಸ್ಥಿರವಾಗಿರಬೇಕಾದರೆ, ಈ ಕೆಳಗಿನ ವಿಷಯಗಳ ಸಂಪೂರ್ಣ ಪರಿಪಾಲನೆಯಾಗುವ ವ್ಯವಸ್ಥೆ ಆಗಬೇಕು.

ಕ) ನಿಶ್ಚಿತ ಸಿದ್ಧಾಂತ

ಖ) ಸೇವಾ ಮುಖಿ ಭಾವನೆ

ಗ) ಉತ್ತರದಾಯಿ (ಬದ್ಧತೆ)

ಘ) ಸೂಕ್ತ (ಸರಿಯಾದ) ಶಾಸನ ಪದ್ಧತಿ

**ಕ) ನಿಶ್ಚಿತ ಸಿದ್ಧಾಂತ – ( Definite Principles )**

ರಾಜಕೀಯ ಸಮೂಹ ಅಥವಾ ರಾಜಕೀಯ ಪಕ್ಷಗಳು ನಿಶ್ಚಿತ ಸಿದ್ಧಾಂತವನ್ನವಲಂಬಿಸಿ ದೇಶ ಮತ್ತು ಜನತೆಯ ಹಿತವನ್ನು ಮಾಡುವ ಯೋಜನೆಗಳನ್ನು ಸಿದ್ಧಪಡಿಸಬೇಕು. ಈ ರೀತಿಯ ಸ್ಪಷ್ಟವಾದ ರಾಜನೈತಿಕ ಸಿದ್ಧಾಂತವನ್ನು ಅಂಗೀಕರಿಸಿ ಪ್ರಸ್ತುತವಾಗುವ ರಾಜಕೀಯ ಸಮೂಹ ಅಥವಾ ರಾಜಕೀಯ ಪಕ್ಷದಿಂದಲೇ ದೇಶ ಹಾಗೂ ಜನರ ಒಳಿತು ಆಗಬೇಕು.

**ಖ) ಸೇವಾ ಮುಖಿ ಭಾವನೆ (Service mentality )**

ಜಗತ್ತಿನ ರಾಜನೈತಿಕ ದೃಷ್ಟಿಕೋನದಲ್ಲಿ ಯಾವುದೇ ರಾಜಕೀಯ ಸಮೂಹ ಅಥವಾ ಪಕ್ಷವಿರಲಿ, ಅವರ ಉದ್ದೇಶ್ಯ ಎರಡು ರೀತಿಯದ್ದಾಗಿರುತ್ತದೆ.

1. ಅಧಿಕಾರ ಪಡೆಯುವುದು.

2. ಸೇವಾ ಭಾವನೆ

ಅಧಿಕಾರ ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಕ್ರಿಯಾಶೀಲವಾಗುವ ರಾಜಕೀಯ ಸಮೂಹ ಅಥವಾ ಪಕ್ಷ ಕ್ಷಣಿಕವಾಗಿ ಸಫಲರಾಗುವರಾದರೂ ವಾಸ್ತವದಲ್ಲಿ ಅಸಫಲರಾಗಿರುತ್ತಾರೆ. ಅದೇ ಸೇವಾ ಭಾವದಿಂದ ಪ್ರೇರಿತರಾದವರು ಸಫಲರಾಗುತ್ತಾರೆ. ಆದ್ದರಿಂದ ಸೇವಾಮುಖಿ ರಾಜಕೀಯ ಸಮೂಹ ಅಥವಾ ಪಕ್ಷವು ಕೇವಲ ದೇಶದ ಮತ್ತು ಜನರ ಸೇವೆ ಮಾಡುವುದು ಮಾತ್ರವಲ್ಲದೆ ದೇಶದಲ್ಲಿ ರಾಜಕೀಯ ಸ್ಥಿರತೆಯನ್ನುಂಟುಮಾಡಿ ದೇಶದ ಸರ್ವತೋಮುಖಿ ವಿಕಾಸವನ್ನು ಮಾಡುತ್ತಾರೆ.

### ಗ) ಉತ್ತರದಾಯಿತ್ವ (ಬದ್ಧತೆ) (Accountibility )

ಯಾವುದೇ ದೇಶದಲ್ಲಿ ಕ್ರಿಯಾಶೀಲ ರಾಜಕೀಯ ಸಮೂಹ ಅಥವಾ ಪಕ್ಷ ಆ ದೇಶದ ಜನತೆ ಹಾಗೂ ರಾಜ್ಯವ್ಯವಸ್ಥೆಯ ಕುರಿತು ಸಂಪೂರ್ಣ ಉತ್ತರದಾಯಿಯಾಗಿರಬೇಕು. ರಾಜಕೀಯ ಸಮೂಹ ಅಥವಾ ಪಕ್ಷದಲ್ಲಿ ತೊಡಗಿಕೊಂಡಿರುವ ಪ್ರತಿನಿಧಿಗಳು ನಾಯಕರು, ಹಾಗೂ ಕಾರ್ಯಕರ್ತರು, ವ್ಯಕ್ತಿಗತವಾಗಿ ಜನತೆ ಮತ್ತು ದೇಶದ ಅನ್ಯ ಆಡಳಿತದ ಕುರಿತು ಪೂರ್ಣ ಪ್ರಾಮಾಣಿಕ ಹಾಗೂ ಉತ್ತರದಾಯಿಯಾಗುವ ಪದ್ಧತಿಯ ಸ್ಥಾಪನೆಯ ವ್ಯವಸ್ಥೆಯುಳ್ಳ ನೀತಿಯ ನಿರ್ಮಾಣ ಆಗಬೇಕು. ಆಗಲೇ ಉತ್ತರದಾಯಿತ್ವದಿಂದ ಸ್ಥಿರತೆ ಸ್ಥಾಪಿತವಾಗುತ್ತದೆ.

### ಘ) ಉತ್ತಮ ಶಾಸನ ಪದ್ಧತಿ (Good Governance )

ಮೂಲತಃ ಕಾನೂನಿ ರಾಜ್ಯದ ವಿಚಾರಗಳನ್ನು ಅಂಗೀಕರಿಸುವ ಶಾಸನ ವ್ಯವಸ್ಥೆಯನ್ನು ಉತ್ತಮ ಶಾಸನ ಪದ್ಧತಿಯೊಳಗೆ, ಈ ಕೆಳಗಿನ ಆರು ತತ್ವಗಳು ಅನಿವಾರ್ಯವಾಗಿವೆ.


1. ಕಾನೂನಿ ರಾಜ್ಯದ ವಿಚಾರಗಳಿಗನುಸಾರವಾಗಿ ರಾಜ್ಯ ವ್ಯವಸ್ಥೆ.
2. ಭ್ರಷ್ಟಾಚಾರ ನಿಯಂತ್ರಿತ ರಾಜ್ಯದ ಸ್ಥಾಪನೆ.
3. ಸಾರ್ವಜನಿಕ ಉತ್ತರದಾಯಿತ್ವದ ಸ್ಥಿರತೆ.
4. ಜನತೆಯ ಸೂಚಿತ ಅಧಿಕಾರಿಗಳ ಸುನಿಶ್ಚಿತತೆ.
5. ಪಾರದರ್ಶಕತೆ.
6. ಸ್ಥಳೀಯ ಸ್ವಾಯತ್ತ ಶಾಸನ ಪದ್ಧತಿ.

ರಾಜಕೀಯ ಸಮೂಹ ಅಥವಾ ಪಕ್ಷಗಳ ನಿರ್ಮಾಣಕ್ಕೆ ಈ ಮೇಲಿನ ಉಲ್ಲೇಖಿತ ಆಧಾರಗಳನ್ನು ಸಿದ್ಧಪಡಿಸುವುದು ಅವಶ್ಯಕವಾಗಿದೆ. ಈ ಅವಶ್ಯಕ ಆಧಾರಗಳೇ ಕಾರಣವಾಗಿ ಈ ಕೆಳಗಿನ ಪರಿಣಾಮವನ್ನು ನೀಡಬಲ್ಲವು. ಅವುಗಳೆಂದರೆ

1. ಸಮೃದ್ಧ ಸಮಾಜ ನಿರ್ಮಾಣ.
2. ಸಫಲ ರಾಜನೀತಿ.
3. ರಾಜಕೀಯ ಸ್ಥಿರತೆ.
4. ಶಾಂತಿ ಹಾಗೂ ಸುವ್ಯವಸ್ಥೆ.

ಈ ಅವಶ್ಯಕ ತತ್ವಗಳು ಪೂರ್ಣ ರೂಪದಲ್ಲಿ ಸ್ಥಾಪಿಸುವುದಕ್ಕಾಗಿ ವಿಶೇಷ ಶಿಕ್ಷಣ ನೀತಿಯ ನಿರ್ಮಾಣ ಅವಶ್ಯಕವಾಗಿದೆ. ಮೇಲಿನ ಅಧ್ಯಯನದ ಆಧಾರದಲ್ಲಿ ವಿಶ್ವವಿಖ್ಯಾತ ಶುಭ ಚಿನ್ಹೆಯನ್ನು ಪ್ರಯೋಗದಲ್ಲಿ ತಂದು ನೋಡೋಣ.

**01. ವ್ಯಕ್ತಿ ಅಥವಾ ನಾಗರಿಕರ ನಿರ್ಮಾಣದ ಕಾರಣ ಹಾಗೂ ಅದರ ಪರಿಣಾಮ**




ಉದ್ದೇಶ : ಪರೋಪಕಾರ, ಸಕಾರಾತ್ಮಕ ಚಿಂತನೆ, ಪ್ರಾಮಾಣಿಕತೆ, ಸಭ್ಯತೆ

ಫಲಿತಾಂಶ ಮತ್ತು ಪರಿಣಾಮ – ಅಭಿವೃದ್ಧಿ, (ಉನ್ನತಿ) ಸಫಲತೆ, ಸಾಧನೆ, ಶಾಂತಿ ಮತ್ತು ಸಮಷ್ಟಿ (ಸಂತೋಷ)

ಕಾರಣ – ಸದಾಚಾರಿ , ಸಕಾರಾತ್ಮಕ ಚಿಂತನೆ, ಪ್ರಾಮಾಣಿಕ, ಶಾಸನಬದ್ಧ

ಪರಿಣಾಮ – ಸಮೃದ್ಧಿ , ಸಫಲತೆ, ಫಲಪ್ರಾಪ್ತಿ, ಸುಖ ಮತ್ತು ಶಾಂತಿ.


**02. ಸಮುದಾಯ ಸಮಾಜ ನಿರ್ಮಾಣದ ಕಾರಣ ಹಾಗೂ ಅದರ ಪರಿಣಾಮ**




ಕಾರಣ – ನೈತಿಕ ಮೌಲ್ಯ, ಸಹಕಾರ್ಯ, ಹೊಣೆಗಾರಿಕೆಯ ಬೋಧೆ, ನಿಯಮಬದ್ಧ ವ್ಯವಸ್ಥೆ.

ಪರಿಣಾಮ – ಸಾರ್ವತ್ರಿಕ ವಿಕಾಸ, (ಅಭಿವೃದ್ಧಿ) ಆರ್ಥಿಕ ಸಫಲತೆ, ಸರ್ವತೋಮುಖ ಅಭಿವೃದ್ಧಿ, ಪ್ರಾಣರಕ್ಷಣೆ ಮತ್ತು ಸ್ವಾತಂತ್ರ್ಯ.

## 03. ರಾಜನೈತಿಕ ಸಮೂಹ ಹಾಗೂ ರಾಜಕೀಯ ಪಕ್ಷಗಳ ನಿರ್ಮಾಣದ ಕಾರಣ ಹಾಗೂ ಅದರ ಪರಿಣಾಮ




ಉದ್ದೇಶ (ಕಾರಣ) – ನಿಶ್ಚಿತ ಉದ್ದೇಶ, ಸೇವಾಮನೋಭಾವನೆ,ಹೊಣೆಗಾರಿಕೆ, ಒಳ್ಳೆಯ ಆಡಳಿತ

ಪರಿಣಾಮ ಮತ್ತು ಫಲಿತಾಂಶ– ವಿಕಾಸಶೀಲ ಸಮಾಜದ ನಿರ್ಮಾಣ, ಸಫಲ ರಾಜನೀತಿ, ರಾಜಕೀಯ ಸ್ಥಿರತೆ, ಶಾಂತಿ ಹಾಗೂ ಆದೇಶ.

ಈ ಮೇಲಿನ ಶುಭ ಚಿಹ್ನೆಯನ್ನು ಆಧಾರವಾಗಿಸಿ, ನಾಗರಿಕ, ಸಮಾಜ ಮತ್ತು ರಾಜನೀತಿ ಈ ಮೂರು ಪಕ್ಷಗಳ ಅವಶ್ಯಕ ಕಾರಣವನ್ನು ಆಧಾರ ಮಾಡಿಕೊಂಡು ನಾವು ಪರಿಣಾಮವನ್ನು ನೋಡಿದೆವು. ಇದೇ ವಿಷಯ ಪ್ರಾಪ್ತಿಗಾಗಿ ಶಿಕ್ಷಣ ನೀತಿಯ ನಿರ್ಮಾಣವಾದ ಮೇಲೆ ಅದರಿಂದ ಉಂಟಾಗುವ ಪರಿಣಾಮ ಅತ್ಯಂತ ಲಾಭದಾಯಕವಾಗಿದೆ. ಇದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಮೇಲಿನ ಶುಭ ಚಿಹ್ನೆಯ ಕೇಂದ್ರ ಬಲಗಡೆಯಿಂದ ನಿರಂತರವಾಗಿ ಕೀಲುಗಳಿಂದ ಸುತ್ತುತ್ತದೆ. ಇದು ವಿಷಯಕ್ಕೆ ನಿರಂತರತೆಯನ್ನು ಕೊಡುವುದಾಗಿದೆ. ಇದು ವಿಷಯಕ್ಕೆ

ಜೀವಂತಿಕೆಯನ್ನು ನೀಡುತ್ತದೆ. ಆದ್ದರಿಂದ ಇದು ಶಾಶ್ವತ ಹಾಗೂ ಸತ್ಯವಾಗಿದೆ. ಇದೇ ರೀತಿ ಭ್ರಷ್ಟ ವಿರೋಧಿ ಶಾಸ್ತ್ರದಲ್ಲಿ ಕೂಡ ಅವಶ್ಯಕ ಶಿಕ್ಷಣ ನೀತಿಯ ಸಮಯಾನುಸಾರ ಪರಿವರ್ತನೆಯಾಗುತ್ತಾ ನಿರಂತರತೆಯನ್ನೂ ಪಡೆದುಕೊಳ್ಳುತ್ತದೆ. ಆಗಲೇ ಸಾರ್ಥಕ ಪರಿಣಾಮದ ಅಪೇಕ್ಷೆಯನ್ನು ಮಾಡಬಹುದಾಗಿದೆ.

***

# 35. ಉಪಸಂಹಾರ ಹಾಗೂ ಸಲಹೆಗಳು (Conclusion and Recommendations )

ಜಗತ್ತಿನ ಎಲ್ಲಾ ದೇಶಗಳಲ್ಲಿ ಭ್ರಷ್ಟಾಚಾರ ಜನ್ಯ ಕಾರ್ಯಗಳಾಗುತ್ತಿವೆ. ಆಗುತ್ತಲೇ ಬಂದಿವೆ. ಯಾವ ದೇಶವೂ ಭ್ರಷ್ಟಾಚಾರ ಮುಕ್ತವಾಗಿಲ್ಲ. ದೇಶ ದೊಡ್ಡದಾಗಿರಲಿ, ಚಿಕ್ಕದಾಗಿರಲಿ ದೊಡ್ಡ ಹಾಗೂ ವಿಕಸಿತ ದೇಶಗಳಲ್ಲಿ ಆಗುತ್ತಿರುವ ಭ್ರಷ್ಟಾಚಾರದ ಪ್ರಕೃತಿ (ರೀತಿ) ಮತ್ತು ಚಿಕ್ಕ ಹಾಗೂ ವಿಕಾಸೋನ್ಮುಖ ದೇಶಗಳಲ್ಲಿ ಆಗುವ ಭ್ರಷ್ಟಾಚಾರದ ಪ್ರಕೃತಿ ಭಿನ್ನವಾಗಿದೆ. ವಿಕಸಿತ ದೇಶಗಳಲ್ಲಿ ಆಗುವ ಭ್ರಷ್ಟಾಚಾರ ದೃಶ್ಯವೂ (ಗೋಚರಿಸುವಂಥದ್ದು) ಅದೃಶ್ಯವೂ ಕೂಡ ಆಗಿರುತ್ತವೆ. ತಾತ್ಪರ್ಯವಿಷ್ಟೆ, ಈ ಭ್ರಷ್ಟಾಚಾರವು ಸಮಗ್ರ ವಿಶ್ವವನ್ನು ತನ್ನ ವಶಮಾಡಿಕೊಂಡಿದೆ. ಭ್ರಷ್ಟಾಚಾರದಿಂದ ಮುಕ್ತಿ ಹೊಂದುವುದು ಇಂದು ಮಾನವ ಸಮಾಜಕ್ಕೆ ಅನಿವಾರ್ಯವಾಗಿದೆ.

ಮಾನವ ಸಮಾಜದ ವಿಕಾಸದ ಜೊತೆಜೊತೆಗೆ ಭ್ರಷ್ಟಾಚಾರವು ಕೂಡ ಅಷ್ಟೇ ವೇಗವಾಗಿ ವಿಕಾಸಗೊಂಡಿದೆ. ಮತ್ತು ತನ್ನ ಬೇರುಗಳನ್ನು ಈ ಸಮಾಜದಲ್ಲಿ ಅಷ್ಟೇ ಭದ್ರವಾಗಿ ಬೇರೂರಿಸಿದೆ. ಅದರ ಬೇರು ಎಷ್ಟೊಂದು ಆಳವಾಗಿ ಹುದುಗಿಕೊಂಡಿವೆಯೆಂದರೆ ಅದನ್ನು ಪತ್ತೆಹಚ್ಚುವುದು ಕಷ್ಟವಾಗುತ್ತಿದೆ. ಇದನ್ನು ನಿರ್ಮೂಲನೆ ಮಾಡುವುದು ಸಮಾಜ ಸುಧಾರಕರು, ಸಮಾಜದ ಪ್ರತಿನಿಧಿಗಳು ಮತ್ತು ವಿಚಾರವಂತರಿಗೂ ಈ ಕಾರ್ಯ ಕಠಿಣವಾಗಿದೆ. ಭ್ರಷ್ಟಾಚಾರಜನ್ಯ ಕಾರ್ಯಗಳ ಪ್ರಕೃತಿಯೇ ಹಾಗಿದೆ. ಅದು ಮಾನವ ವಿಕಾಸದ ಜೊತೆಜೊತೆಗೆ ವಿಕಸಿತವಾಗುತ್ತಲೇ ಹೋಗುತ್ತಿದೆ. ವಿಕಸಿತ ದೇಶಗಳು ವಿಕಾಸೋನ್ಮುಖ ದೇಶಗಳು, ಅವಿಕಸಿತ (ಹಿಂದುಳಿದ) ದೇಶಗಳು ಎಲ್ಲಾ ಈ ಭ್ರಷ್ಟಾಚಾರದ ಜಾಲದಲ್ಲಿವೆ. ಭ್ರಷ್ಟಾಚಾರದಿಂದ ಪೀಡಿತವಾದ ದೇಶ ಇದರಿಂದ ಮುಕ್ತಿ ಪಡೆಯಲು ಬಯಸುತ್ತದೆ. ಇದೇ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಭ್ರಷ್ಟವಿರೋಧಿ ಶಾಸ್ತ್ರ (ಸಿದ್ಧಾಂತ) ನಿರ್ಮಾಣವಾಗಿದೆ.

ಇಡೀ ವಿಶ್ವವನ್ನೇ ಆವರಿಸಿಕೊಂಡಿರುವ ಭ್ರಷ್ಟಾಚಾರದಿಂದ ಸಮಾಜದಲ್ಲಿ ಅನೇಕ ರೀತಿಯ ಸಮಸ್ಯೆಗಳು ಉತ್ಪನ್ನವಾಗುತ್ತವೆ. ಹೀಗಿದ್ದರೂ ಇದರ ನಿವಾರಣೆಗಾಗಿ ಯಾರು ಕೂಡ ಗಂಭೀರವಾಗಿ ಕಾರ್ಯತತ್ಪರರಾಗುವುದು ಕಂಡು ಬರುವುದಿಲ್ಲ. ಸಮಾಜದ ಪ್ರತಿನಿಧಿ, ರಾಜಕೀಯ ಮುಖಂಡರು ಹಾಗೂ ಸ್ವತಃ ರಾಜ್ಯವ್ಯವಸ್ಥೆಯು ಇದನ್ನು ಸರಿಯಾಗಿ ತಿಳಿದುಕೊಳ್ಳಲಿಲ್ಲವೆಂದು ಹೇಳಬೇಕಾಗುತ್ತದೆ. ವಾಸ್ತವವಾಗಿ ಭ್ರಷ್ಟಾಚಾರದ ವಿರುದ್ಧ ಪ್ರತಿಪಾದಿತ ಕಾನೂನು ವ್ಯವಸ್ಥೆ ಪ್ರತಿಯೊಂದು ದೇಶಗಳಲ್ಲೂ ಇದೆ. ಅದು ಜಾರಿಯಲ್ಲೂ ಇದೆ. ಇನ್ನು ಅನೇಕ ರಾಜ್ಯಗಳ ವ್ಯವಸ್ಥೆಯಲ್ಲಿ ಭ್ರಷ್ಟಾಚಾರದ ವಿರುದ್ಧ ಕಾರ್ಯಾಚಣೆಗಾಗಿ ಸ್ವತಂತ್ರವಾದ ಆಯೋಗಗಳೂ ರಚಿತವಾಗಿವೆ. ಆದರೆ ಭ್ರಷ್ಟಾಚಾರ ವಿರುದ್ಧದ ಕಾನೂನು ಜಾರಿಯಾದ ಮೇಲೆಯೂ ಇದನ್ನು ನಿಯಂತ್ರಿಸಲಾಗುತ್ತಿಲ್ಲ. ವಾಸ್ತವವೆಂದರೆ ಕೇವಲ ಕಾನೂನಿನ ಮೂಲಕ ಭ್ರಷ್ಟಾಚಾರದ ವಿರುದ್ಧ ನಿಯಂತ್ರಣ ಮಾಡುವುದು ಸಾಧ್ಯವಿಲ್ಲ. ಕಾನೂನು ಒಂದು ವೇಳೆ ಯಾವುದೇ ವ್ಯಕ್ತಿ, ಸಂಸ್ಥೆ, ಸಮುದಾಯ ಭ್ರಷ್ಟಾಚಾರ ಮಾಡಿದರೆ ಅಂತಹ ಸಂದರ್ಭಗಳಲ್ಲಿ ಅವರ ವಿರುದ್ಧ ಪ್ರಮಾಣ ಅಥವಾ ಸಾಕ್ಷಿಯನ್ನು ಕಂಡು ಹಿಡಿದು ಕಾನೂನಿನ ವ್ಯಾಪ್ತಿಗೆ ತಂದು ಅವರ ಮೇಲೆ ಮಾತ್ರ ಕಾರ್ಯಾಚರಣೆ ಮಾಡಬಹುದಾಗಿದೆ. ಇಂತಹ ಕಾರ್ಯಾಚರಣೆಯಿಂದ ಒಂದು ಸಂದೇಶ ಮಾತ್ರ ಸಿಗುತ್ತದೆ. ಅದೆಂದರೆ ಕೆಟ್ಟ ಕೆಲಸವನ್ನು ಮಾಡಬಾರದು. ಭ್ರಷ್ಟಾಚಾರವೇ ನಡೆಯಬಾರದು. ಈ ಸ್ಥಿತಿಯನ್ನು ಕಾನೂನಿನಿಂದ ಮಾಡಲಾಗುವುದಿಲ್ಲ. ಆದ್ದರಿಂದ ಭ್ರಷ್ಟಾಚಾರವೇ ಇರಬಾರದು ಎಂಬ ಸ್ಥಿತಿಯ ನಿರ್ಮಾಣದ ಅವಶ್ಯಕತೆ ಇದೆ.

ದೊಡ್ಡ ರಾಷ್ಟ್ರಗಳಿಂದ ಚಿಕ್ಕ ರಾಷ್ಟ್ರಗಳಲ್ಲಿ ರಾಜನೈತಿಕ ಸ್ವರೂಪದಲ್ಲಿ ಹೂಡಿಕೆ ಮಾಡುವ ವ್ಯವಸ್ಥೆ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬರುತ್ತಿದೆ. ವರ್ತಮಾನ ಪರಿಸ್ಥಿತಿಯಲ್ಲಿ ರಾಜನೈತಿಕವಾಗಿ ಪ್ರತ್ಯಕ್ಷ ರೂಪದಲ್ಲಿ ಹೂಡಿಕೆ ಮಾಡಲು ಸಾಧ್ಯವಾಗುತ್ತಿಲ್ಲ. ಆದರೂ ಆರ್ಥಿಕ ಮತ್ತು ಸಾಂಸ್ಕೃತಿಕ ರೂಪದಲ್ಲಿ ಒಂದು ದೇಶ ಇನ್ನೊಂದು ದೇಶದಲ್ಲಿ ಹೂಡಿಕೆ ಮಾಡಿ ತನ್ನ ಅಸ್ತಿತ್ವವನ್ನು ಸ್ಥಾಪಿಸಲು ತತ್ಪರವಾಗಿರುತ್ತದೆ. ಈ ವ್ಯವಸ್ಥೆಯಿಂದ ಬಹುಶಃ ಚಿಕ್ಕ ದೇಶಗಳು ದೊಡ್ಡ ದೇಶಗಳ ಆಧಿಪತ್ಯಕ್ಕೆ ಒಳಗಾಗುತ್ತವೆ. ಪ್ರಜಾಸತ್ತಾತ್ಮಕ ಸಾರ್ವಭೌಮ ಸಂಪನ್ನ ರಾಷ್ಟ್ರವೆಂದು ಹೇಳಲ್ಪಟ್ಟರೂ ವ್ಯವಹಾರದಲ್ಲಿ ಹೂಡಿಕೆದಾರನ ಸ್ವಾಮಿತ್ವ ಸ್ಥಾಪಿತವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸಣ್ಣ ಹಾಗೂ ದೊಡ್ಡ ದೇಶದಲ್ಲಿರುವ

ನಾಗರಿಕರಿಗೆ ತಮ್ಮದೇ ಆದ ಸ್ವಾತಂತ್ರ್ಯ ಸ್ಥಾಪಿಸಿಕೊಳ್ಳಲಾಗುವುದಿಲ್ಲ. ಇಂತಹ ದೇಶಗಳಲ್ಲಿರುವ ಎಲ್ಲಾ ಕ್ಷೇತ್ರಗಳು ಭ್ರಷ್ಟಾಚಾರದಂತಹ ಸಾಮಾಜಿಕ ರೋಗದಿಂದ ಶೋಷಣೆಗೊಳಗಾಗುತ್ತವೆ. ಇಂತಹ ದೇಶ ಮತ್ತು ಜನತೆಗೆ ಮುಕ್ತಿ ದೊರಕಿಸುವುದಕ್ಕಾಗಿ ವರ್ತಮಾನದಲ್ಲಿ ಹೊಸ ಬಂಡವಾಳ ವ್ಯವಸ್ಥೆಯನ್ನು ಕೊನೆಗೊಳಿಸಬೇಕಾದ ಅವಶ್ಯಕತೆ ಇದೆ.

ಬಹುಶಃ ವಿಕಸಿತ ದೇಶಗಳಲ್ಲಿ ಸರಕಾರೇತರ ಸಂಸ್ಥೆಗಳ ಕ್ರಿಯಾಶೀಲತೆಯ ಕಾರಣದಿಂದಾಗಿ ಅವರಿಗೆ ದೇಶದ ಜನತೆಯ ಸೇವಾಕಾರ್ಯವನ್ನು ನೀಡಲಾಗುತ್ತದೆ. ವಿಕಾಸೋನ್ಮುಖ ದೇಶಗಳಲ್ಲಿ ಅದೇ ವ್ಯವಸ್ಥೆಯನ್ನು ಅಳವಡಿಸಿಕೊಂಡಲ್ಲಿ ಆ ದೇಶಗಳು ಜನತೆ ಭ್ರಷ್ಟಾಚಾರದ ಚಕ್ರವ್ಯೂಹದಲ್ಲಿ ಸಿಲುಕಿಕೊಳ್ಳುತ್ತಾರೆ. ವಿಕಾಸೋನ್ಮುಖ ದೇಶಗಳಲ್ಲಿ ಸರಕಾರೇತರ ಸಂಸ್ಥೆಯನ್ನು ನಡೆಸುವ ವ್ಯಕ್ತಿ, ಸಮುದಾಯ ಮತ್ತು ಸಂಸ್ಥೆ ಲಾಭದಲ್ಲಿರುತ್ತವೆ. ಕಾರಣ ಕಡಿಮೆ ಕೆಲಸ ಮತ್ತು ಹೆಚ್ಚಿನ ಅರ್ಥೋರ್ಪಾರ್ಜನೆ (ಹಣಸಂಪಾದನೆ)ಯ ನೀತಿಯನ್ನನುಸರಿಸಿ ವಿಕಾಸೋನ್ಮುಖ ದೇಶಗಳಲ್ಲಿ ಸರಕಾರೇತರ ಸಂಸ್ಥೆ ವ್ಯಾವಸಾಯಿಕ ರೂಪದಲ್ಲಿ ಸಂಚಾಲಿತವಾಗಿವೆ. ಇವರ ಕಾರ್ಯಶೀಲತೆಯೇ ಇವರನ್ನು ಸಂಶಯದ ಸುಳಿಯಲ್ಲಿ ತರುತ್ತದೆ. ಇಂತಹ ಸರಕಾರೇತರ ಸಂಸ್ಥೆಗಳ ಮೇಲೆ ಕೇವಲ ಸಂಶಯ ಮಾತ್ರವಲ್ಲ, ಇಂತಹವರ ಮೇಲೆ ದೇಶದ ಅಸ್ಮಿತೆಯನ್ನು ಮಾರುವವರು ಎಂಬ ಆರೋಪವೂ ಸುತ್ತಿಕೊಳ್ಳುತ್ತದೆ. ಹೀಗಿದ್ದರೂ ಇಂತಹ ಸಂಸ್ಥೆಗಳು ಬಡದೇಶಗಳಲ್ಲಿ ಹೆಚ್ಚು ಸಂಚಾಲಿತವಾಗಿವೆ. ಬಡದೇಶಗಳಲ್ಲಿ ಇಂತಹ ಚಾಲಾಕಿ ವ್ಯಕ್ತಿಗಳನ್ನೇ ವಿದ್ವಾಂಸರೆಂದು ಅರ್ಥೈಸಲಾಗುತ್ತದೆ. ಯಾರು ಹೆಚ್ಚು ಲಾಭ ಪಡೆಯುತ್ತಾರೋ ಮತ್ತು ದೇಶಕ್ಕೆ ಹೆಚ್ಚು ನಷ್ಟ ಮಾಡುತ್ತಾರೋ ಅವರೇ ಶ್ರೇಷ್ಟರೆನಿಸಿಕೊಂಡವರ ಸಾಲಿನಲ್ಲಿರುತ್ತಾರೆ. ಕೆಲವೇ ಕೆಲವು ಸರಕಾರೇತರ ಒಳ್ಳೆಯ ಸಂಸ್ಥೆಗಳೂ ಇವೆ. ಆದರೆ ಅತಿ ವಿರಳ. ಇಂತಹ ಸಂಸ್ಥೆಗಳನ್ನು ನಿರುತ್ಸಾಹಿಗೊಳಿಸುವುದು ಅವಶ್ಯಕವಾಗುತ್ತದೆ.

ಇಂದಿನ ಯುಗವು ಪ್ರಜಾತಂತ್ರ ಯುಗವಾಗಿದೆ. ಜಗತ್ತಿನ ಹೆಚ್ಚಿನ ದೇಶಗಳಲ್ಲಿ ಪ್ರಜಾತಂತ್ರದ ಸ್ಥಾಪನೆಯಾಗಿದೆ. ಕೆಲವೊಂದು ಸೌಮ್ಯವಾದಿ ವ್ಯವಸ್ಥೆಯಲ್ಲಿ ಸಂಚಾಲನೆಗೊಳ್ಳುವ ದೇಶಗಳು ತಮ್ಮದು ಪ್ರಜಾತಾಂತ್ರಿಕ ವ್ಯವಸ್ಥೆಯೆಂದು ಮಾನ್ಯ ಮಾಡಿಕೊಂಡಿವೆ. ಏಕೆಂದರೆ, ಒಂದೇ ರಾಜಕೀಯ ಪಕ್ಷ ರಾಜ್ಯ ವ್ಯವಸ್ಥೆಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡರೂ ಅದು ರಾಜಕೀಯ ಪಕ್ಷವೇ ಆದ್ದರಿಂದ ಅವರನ್ನು ಜನತಾ ಪ್ರತಿನಿಧಿಗಳೆಂದು ತಿಳಿಯಲಾಗುತ್ತದೆ. ಈ ಕಾರಣದಿಂದ ಒಂದೇ ಪಕ್ಷದ

ಸಾಮ್ಯವಾದಿ ವ್ಯವಸ್ಥೆಯನ್ನು ಕೂಡ ಪ್ರಜಾತಾಂತ್ರಿಕ ವ್ಯವಸ್ಥೆಯೇ ಎಂದುಕೊಂಡು ಸ್ವೀಕರಿಸಲಾಗುತ್ತದೆ. ಏಕಪಕ್ಷೀಯ ಅಥವಾ ಬಹುಪಕ್ಷೀಯ ರಾಜಕೀಯ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷದ್ದೇ ಆಡಳಿತದಲ್ಲಿ ಹೆಚ್ಚುಗಾರಿಕೆ ಸ್ಥಾಪಿತವಾಗುತ್ತದೆ. ಆದ್ದರಿಂದ ರಾಜಕೀಯ ಪಕ್ಷವು ಸ್ವಚ್ಛ, ಸಿದ್ಧಾಂತವಾದಿ ಮತ್ತು ಜನತೆಯ ಉತ್ತರದಾಯಿತ್ವವನ್ನು ಅರಿತಿರಬೇಕು. ಬಡ ಮತ್ತು ಹಿಂದುಳಿದ ದೇಶಗಳಲ್ಲಿ ಚಾಲಾಕಿ ಮತ್ತು ಧೂರ್ತ ವ್ಯಕ್ತಿಗಳು ಸಾಮ್ಯವಾದಿ ಸಿದ್ಧಾಂತದ ಮುಖವಾಡವನ್ನು ಧರಿಸಿ ರಾಜ್ಯದ ಆಡಳಿತದಲ್ಲಿ ಹಿಡಿತ ಸಾಧಿಸುತ್ತಾರೆ. ಇದೇ ರೀತಿಯಲ್ಲಿ ಅನೇಕ ದೇಶಗಳಲ್ಲಿ ಇಂತಹ ಸಾಮ್ಯವಾದಿ ಮತ್ತು ಉಪಸಾಮ್ಯವಾದಿ ರಾಜ್ಯಾಧಿಕಾರವನ್ನು ವಶದಲ್ಲಿಟ್ಟುಕೊಳ್ಳುತ್ತಾರೆ. ಈ ರೀತಿ ರಾಜ್ಯಾಧಿಕಾರ ವಶದಲ್ಲಿರಿಸಿಕೊಂಡ ಮೇಲೂ ದುರ್ಬಲ ಬಹುಪಕ್ಷೀಯ ಒಕ್ಕೂಟದಲ್ಲಿ ಪರಿವರ್ತನೆಯಾಗುತ್ತಾ ಹೋಗುತ್ತದೆ. ರಾಜ್ಯಾಡಳಿತವು ಪ್ರಭಾವಕಾರಿಯಾಗಿ ನಡಸಲ್ಪಡುವುದಕ್ಕಾಗಿ ಯಾವ ರೀತಿಯ ರಾಜಕೀಯ ಪಕ್ಷದ ಅವಶ್ಯಕತೆ ಇದೆ. ಎಂಬ ವಿಚಾರದಲ್ಲಿ ವಿಶ್ವಾಸವಿಲ್ಲದಿದ್ದರೂ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಒಂದಕ್ಕಿಂತ ಹೆಚ್ಚು ರಾಜಕೀಯ ಪಕ್ಷಗಳಿರುವುದು ಅವಶ್ಯಕವಾಗಿದೆ.

ಇದರ ಅರ್ಥ ಡಜನ್ ಗಟ್ಟಲೆ ರಾಜಕೀಯ ಪಕ್ಷಗಳ ಸ್ಥಾಪನೆಯಾಗ ಬೇಕೆಂದಿಲ್ಲ. ಹಾಗೂ ಈ ಬಹು ಪಕ್ಷಗಳೇ ಸ್ಥಿರವಾಗಿಬೇಕೆಂದಲ್ಲ. ವಿಕಾಸಗೊಂಡ ದೇಶಗಳಲ್ಲಿ ಪ್ರಮುಖವಾಗಿ ಎರಡು ಅಥವಾ ಮೂರು ಪಕ್ಷಗಳೇ ಕ್ರಿಯಾಶೀಲವಾಗುತ್ತವೆ ಆದ್ದರಿಂದ ವಿಕಾಸೋನ್ಮುಖ ದೇಶಗಳಲ್ಲಿಯೂ ಎರಡರಿಂದ ನಾಲ್ಕು ಪಕ್ಷಗಳ ವ್ಯವಸ್ಥೆ ಇರಬೇಕು. ವಿಕಾಸೋನ್ಮುಖ ಹಾಗೂ ಬಡ ದೇಶಗಳಲ್ಲಿ ನಾಯಿಕೊಡೆಗಳಂತೆ ಜನ್ಮ ತಳೆಯುವ ಪಕ್ಷಗಳು ಹಾಗೂ ಅವುಗಳಲ್ಲಿ (ತಮ್ಮತಮ್ಮಲ್ಲಿ) ದ್ವಂದ್ವ ಅಥವಾ ಭಿನ್ನಾಭಿಪ್ರಾಯಗಳು ಉಂಟಾಗುವುದನ್ನು ತಡೆಯುವ ವ್ಯವಸ್ಥೆ ಆಗಬೇಕು. ಹೀಗೆ ರಾಜಕೀಯ ಪಕ್ಷಗಳನ್ನು ಸೀಮಿತ ಮೇರೆಯೊಳಗಿಟ್ಟುಕೊಂಡ ಮೇಲೆ ಇಂತಹ ರಾಜಕೀಯ ಪಕ್ಷಗಳನ್ನು ಸಿದ್ಧಾಂತವಾದಿ ಹಾಗೂ ಬದ್ಧತೆಯನ್ನು ಹೊಂದಿದವರಾಗಿ ಮಾಡಬಹುದಾಗಿದೆ.

ರಾಜ್ಯ ವ್ಯವಸ್ಥೆ ಮತ್ತು ರಾಜಕೀಯ ಪಕ್ಷಗಳ ವಿಷಯದ ಅಧ್ಯಯನ, ರಾಜನೀತಿಶಾಸ್ತ್ರದೊಳಗೆ ಇರುತ್ತದೆ. ರಾಜನೀತಿ ಶಾಸ್ತ್ರ ಯಾವಾಗ ಜನ್ಮ ತಳೆಯಿತೋ, ಆಗ ಆ ಸಮಯದಲ್ಲಿ ರಾಜಕೀಯ ಪಕ್ಷಗಳ ಕಲ್ಪನೆಯನ್ನು ಮಾಡಲಾಗುತ್ತಿರಲಿಲ್ಲ. ಬಹಳ ಸಮಯದ ನಂತರ ರಾಜಕೀಯ ಪಕ್ಷಗಳು ರಾಜನೀತಿಯಲ್ಲಿ ಅತಿಕ್ರಮಣ ಮಾಡಿದವು. ರಾಜನೈತಿಕ ಕ್ಷೇತ್ರವು ರಾಜಕೀಯ ಪಕ್ಷಗಳಿಂದ ಅತಿಕ್ರಮಿತವಾದ

ಮೇಲೆ ರಾಜಕೀಯಪಕ್ಷ, ರಾಜನೀತಿಶಾಸ್ತ್ರದ ಅಧ್ಯಯನದ ವಿಷಯವಾಯಿತು. ಆನಂತರದಲ್ಲಿ ರಾಜಕೀಯ ಪಕ್ಷಗಳು ಅಧ್ಯಯನದ ವಿಷಯಗಳಾದುವಾದ್ದರಿಂದ ಇವುಗಳ ಗುಣಾವಗುಣಗಳ ಆಳ ಅಧ್ಯಯನ ಮಾಡಲಾಗಲಿಲ್ಲ. ಈ ಕಾರಣದಿಂದಾಗಿ ವಿಶ್ವದ ರಾಜಕೀಯ ಪಕ್ಷಗಳು ತಮ್ಮ ತಮ್ಮ ರೀತಿಯಲ್ಲಿ ಸಂಚಾಲನೆಗೊಳ್ಳುತ್ತವೆ. ಈ ಕಾರಣದಿಂದಾಗಿ ಅನೇಕ ಸಮಸ್ಯೆಗಳು ಕೂಡ ಉತ್ಪನ್ನವಾಗುತ್ತವೆ. ಚುನಾವಣಾ ಪದ್ಧತಿಯೇ ರಾಜಕೀಯ ಪಕ್ಷಗಳ ಬಹುಮುಖ್ಯ ಸಮಸ್ಯೆಯಾಗಿದೆ. ಚುನಾವಣಾ ಸಮಯದಲ್ಲಿ ವ್ಯಕ್ತಿ ಅಥವಾ ಪಕ್ಷದ ಘೋಷಣಾ ಪತ್ರದ ಪ್ರಚಾರದ ಸಮಯದಲ್ಲಿ, ಮಾನಸಿಕ ಭೌತಿಕ ಮತ್ತು ಆರ್ಥಿಕ ಬಂಡವಾಳದ ಅವಶ್ಯಕತೆ ಇರುತ್ತದೆ. ಇದಕ್ಕಾಗಿ ಹಣ ಸಂಗ್ರಹದ ಸ್ಥಿತಿಯ ಬಾಧ್ಯತೆಯು ಉಂಟಾಗುತ್ತದೆ. ಈ ಕಾರಣಕ್ಕಾಗಿ ಅಸಹಜ ಅಕ್ರಮ ಕಾರ್ಯಗಳಾಗುವುದು ಮಾತ್ರವಲ್ಲ, ರಾಷ್ಟ್ರೀಯ ಸಂಪತ್ತಿನ ದುರುಪಯೋಗವೂ ಆಗುತ್ತದೆ. ಈ ಕಾರಣದಿಂದಾಗಿ ಈ ಕ್ಷೇತ್ರದಲ್ಲಿ ಭ್ರಷ್ಟಾಚಾರ ಹರಡುತ್ತದೆ. ರಾಜನೀತಿ ಶಾಸ್ತ್ರದ ಅಧ್ಯಯನದಲ್ಲಿ ಈಗ ಭ್ರಷ್ಟವಿರೋಧಿ ಶಾಸ್ತ್ರದ ವಿಷಯವನ್ನು ಕೂಡ ಅಧ್ಯಯನದಲ್ಲಿ ತಂದು ಸೇರಿಸಿ ಇದರ ನಿಯಂತ್ರಣ ವಿಧಾನದ ನಿರ್ಮಾಣ ಅವಶ್ಯಕವಾಗಿದೆ.

ಅರ್ಥಶಾಸ್ತ್ರಕ್ಕೂ ಒಂದು ಪ್ರಾಚೀನ ಇತಿಹಾಸವಿದೆ. ಅರ್ಥಶಾಸ್ತ್ರ ಆರ್ಥಿಕ ಸ್ಥಿತಿಯ ನೀತಿಯನ್ನು ದೀರ್ಘ ಸಮಯದಿಂದ ವ್ಯಾಖ್ಯಾನಿಸುತ್ತಾ ಮತ್ತು ವಿಶ್ಲೇಷಿಸುತ್ತಾ ಬಂದಿದೆ ಮತ್ತು ಆರ್ಥಿಕ ವ್ಯವಹಾರವನ್ನು ವ್ಯವಸ್ಥಿತಗೊಳಿಸುವ ಕಾರ್ಯ ಮಾಡುತ್ತದೆ. ಹಣದ ವಹಿವಾಟಿನಿಂದ ಹಿಡಿದು ವಸ್ತುಗಳ ಉತ್ಪಾದನೆ ಮತ್ತು ಮಾರುಕಟ್ಟೆಯ ಅಧ್ಯಯನ ಮಾಡುವ ಅರ್ಥಶಾಸ್ತ್ರ. ನಿಯಮಬಾಹಿರ ಅರ್ಥ ಸಂಗ್ರಹ ಮತ್ತು ಅದರ ವಹಿವಾಟಿನ ವಿಷಯದಲ್ಲಿ ಮೌನವಾಗಿದೆ. ವರ್ತಮಾನದಲ್ಲಿ ಎಲ್ಲಾ ಕ್ಷೇತ್ರಗಳನ್ನು ಅರ್ಥವೇ ನಿಯಂತ್ರಿಸುತ್ತದೆ. ಅರ್ಥ ಶಾಸ್ತ್ರದಲ್ಲಿ ಒಳಗೊಂಡ ಎಲ್ಲಾ ಕ್ಷೇತ್ರಗಳಲ್ಲಿ ಭ್ರಷ್ಟಾಚಾರಿ ವಹಿವಾಟು. ಆಮದು ರಫ್ತು ವಿನಿಮಯದಿಂದ ಹಿಡಿದು ವಿತ್ತೀಯ ವಹಿವಾಟು ನಡೆಸುವ ಎಲ್ಲಾ ರೀತಿಯ ಚಿಕ್ಕ ದೊಡ್ಡ ಅಪರಾಧಗಳು ಬಚ್ಚಿಟ್ಟುಕೊಂಡಿರುತ್ತವೆ. ಇದೇ ಆರ್ಥಿಕ ಅಪರಾಧಿಗಳ ಅಧ್ಯಯನ ಮತ್ತು ವಿಶ್ಲೇಷಣೆ ಅಧ್ಯಯನದಲ್ಲಿ ಕೂಡ ಈ ಶಾಸ್ತ್ರವನ್ನು ವಿಷಯದ ರೂಪದಲ್ಲಿ (ಪಠ್ಯರೂಪದಲ್ಲಿ) ಸಮಾವೇಶ ಮಾಡಿಕೊಳ್ಳಬೇಕು.

ಸಾಮಾಜಿಕ ಸಮಸ್ಯೆಯಾಗಿ ಪರಿಚಿತವಾಗಿರುವ ಭ್ರಷ್ಟಾಚಾರವನ್ನು ಎಂದಿನವರೆಗೆ ನಿಶ್ಚಿತ ಸ್ಥಿತಿಯಲ್ಲಿಡಲಾಗುವುದಿಲ್ಲವೋ ಅಂದಿನವರೆಗೆ ಸಮಾಜದ ಸಮಗ್ರ

ವಿಕಾಸವಾಗಲಾರದು. ಹಿಂದೆ ಒಂದು ವೇಳೆ ಸಮಾಜದಲ್ಲಿ ಒಬ್ಬ ಭ್ರಷ್ಟ ವ್ಯಕ್ತಿ ಇದ್ದರೆ ಆತನನ್ನು ತುಚ್ಛವಾಗಿ ಕಾಣಲಾಗುತ್ತಿತ್ತು. ಕಾರಣ ಆ ಕಾಲದಲ್ಲಿ ಭ್ರಷ್ಟಾಚಾರ ಅತ್ಯಲ್ಪ ಪ್ರಮಾಣದಲ್ಲಿತ್ತು. ಆದರೆ ವರ್ತಮಾನದಲ್ಲಿ ಯಾರು ಎಷ್ಟೋ ದೊಡ್ಡ ಭ್ರಷ್ಟಾಚಾರಿಯಾದರೇನು ? ಕಾನೂನನ್ನು ಧಿಕ್ಕರಿಸಿ ವ್ಯವಸ್ಥೆಗೆ ಮೋಸ ಮಾಡುವವನು ಸಮಾಜದಲ್ಲಿ ಪ್ರತಿಷ್ಠಿತ ಜೀವನ ನಿರ್ವಹಿಸುತ್ತಾನೆ. ಆದ್ದರಿಂದ ವ್ಯಕ್ತಿ ಭ್ರಷ್ಟಾಚಾರದ ಮೂಲಕ ಹೆಚ್ಚು ಹೆಚ್ಚಾಗಿ ಧನ ಸಂಗ್ರಹಿಸುತ್ತಾನೆ. ಸಮಾಜದಲ್ಲಿ ಪ್ರತಿಷ್ಠಿತನೆನಿಸಿಕೊಳ್ಳುತ್ತಾನೆ. ಇದರ ಬಾಹುಳ್ಯ ಹೆಚ್ಚಾದಂತೆ ಭ್ರಷ್ಟಾಚಾರವು ಹೆಚ್ಚುತ್ತಲೇ ಹೋಗುತ್ತಿದೆ. ಸಮಾಜ ಶಾಸ್ತ್ರದಲ್ಲಿ ಸಾಮಾಜಿಕ ವಿಷಯಗಳ ಅಧ್ಯಯನ ಅಧ್ಯಾಪನ ಆಗುತ್ತದೆ. ಆದರೆ, ಭ್ರಷ್ಟಾಚಾರವನ್ನು ಒಂದು ಸ್ವತಂತ್ರ ವಿಷಯವಾಗಿ ಅಧ್ಯಯನ ಮಾಡುವ ವ್ಯವಸ್ಥೆ ಇಂದಿನವರೆಗೂ ಆಗಿಲ್ಲ. ವರ್ತಮಾನ ಸಮಾಜ ಭ್ರಷ್ಟಾಚಾರದಿಂದ ಗ್ರಸಿತವಾಗಿದೆ. ಪ್ರತಿಯೊಂದು ಸಮಸ್ಯೆಯ ಮೂಲ ಭ್ರಷ್ಟಾಚಾರಜನ್ಯ ಕಾರ್ಯಗಳೇ ಆಗಿರುತ್ತವೆ. ಈ ಸತ್ಯ ಪ್ರತಿಯೊಬ್ಬರಿಗೂ ತಿಳಿದಿದೆ. ಸಮಾಜದಲ್ಲಿ ವ್ಯಾಪಿಸಿರುವ ಅನೇಕ ರೀತಿಯ ಭ್ರಷ್ಟಾಚಾರವನ್ನು ನಿಯಂತ್ರಿತ ಸ್ಥಿತಿಯಲ್ಲಿಡಬೇಕಾಗಿದೆ. ಈ ಜ್ಞಾನ ಎಲ್ಲರಲ್ಲೂ ಇದೆ. ಇಷ್ಟಾದರೂ ಭ್ರಷ್ಟಾಚಾರ ವಿರುದ್ಧದ ವಿಷಯ ಸಮಾಜಶಾಸ್ತ್ರದಲ್ಲಿ ಸೇರಿಸಲಾಗಿಲ್ಲ. ಭ್ರಷ್ಟಾಚಾರವೆಂಬುದು ಸಾಮಾಜಿಕ ರೋಗವಾಗಿದೆ. ಇದು ಸಾಮಾಜಿಕ ರೋಗವಾಗಿ ಸ್ಥಾಪಿತವಾಗಿದೆ. ಮತ್ತು ಇದರ ನರಾಕರಣವೂ (ನಿಷೇಧ) ಅತ್ಯಂತ ಅವಶ್ಯಕವಾಗಿದೆ. ಈ ತಥ್ಯವನ್ನು ಮನಗಂಡು ಆದಷ್ಟು ಬೇಗ ಭ್ರಷ್ಟವಿರೋಧಿ ಶಾಸ್ತ್ರವನ್ನು ಸಮಾಜ ಶಾಸ್ತ್ರ ಹಾಗೂ ಅನ್ಯ ಸಾಮಾಜಿಕ ಶಾಸ್ತ್ರಗಳಲ್ಲಿ ಅಳವಡಿಸಿಕೊಂಡು ಅಧ್ಯಯನ ಮತ್ತು ಅಧ್ಯಾಪನ ವಿಚಾರ ಕಾರ್ಯಗತವಾಗಬೇಕು. ವಿಕಾಸೋನ್ಮುಖ ರಾಷ್ಟ್ರಗಳಲ್ಲಿ ಸ್ಥಳೀಯ ಅರ್ಥಾತ್ ಗ್ರಾಮೀಣ ವಿಕಾಸಕ್ಕೆ ಹೆಚ್ಚಿನ ಮಹತ್ವ ನೀಡುತ್ತಿರುವ ಕಾರಣದಿಂದಾಗಿ ಅನೇಕ ವಿಶ್ವವಿದ್ಯಾಲಯಗಳಲ್ಲಿ ಗ್ರಾಮೀಣ ವಿಕಾಸವನ್ನು ಪಠ್ಯವಾಗಿ ಅಳವಡಿಸಿ, ಅದರ ಅಧ್ಯಯನ ಅಧ್ಯಾಪನ ಕಾರ್ಯ ಈಗಾಗಲೇ ಆರಂಭವಾಗಿದೆ. ಇದೊಂದು ಹೊಸ ವಿಚಾರವಾಗಿದೆ. ಆದ್ದರಿಂದ ಬಹುಶಃ ಎಲ್ಲಾ ವಿಕಾಸೋನ್ಮುಖ ರಾಷ್ಟ್ರಗಳು ಈ ವಿಷಯಕ್ಕೆ ಹೆಚ್ಚಿನ ಪ್ರಾಧ್ಯಾನ್ಯತೆಯನ್ನು ನೀಡಿವೆ ಮತ್ತು ಇದರ ಅಧ್ಯಯನ ಪ್ರಾರಂಭವಾಗಿದೆ. ಗ್ರಾಮೀಣ ವಿಕಾಸವಾಗದಿರಲು ಮುಖ್ಯ ಕಾರಣ ಸ್ಥಳೀಯ ರಾಜಕೀಯ ಕಿತ್ತಾಟಗಳೇ ಕಾರಣ. ಈ ಮುಖ್ಯ ತಥ್ಯವನ್ನು ಗ್ರಾಮೀಣ ವಿಕಾಸದ ಅಧ್ಯಯನದಲ್ಲಿ ತಿಳಿದುಕೊಳ್ಳಲಾಗುತ್ತಿಲ್ಲ. ಎಲ್ಲಿ ರಾಜಕೀಯ ಹಸ್ತಕ್ಷೇಪವಿರುತ್ತದೆಯೋ ಅಲ್ಲಿ ಧೂರ್ತರ ಪ್ರವೇಶವಾಗುತ್ತದೆ ಮತ್ತು ಅಲ್ಲಿಯ ನಿವಾಸಿಗಳು (ಗ್ರಾಮೀಣ ಜನರು ) ನಿರಕ್ಷರಿಗಳು ಮತ್ತು ಮುಗ್ಧರಾಗಿರುತ್ತಾರೆ.

ಅಂತಹ ಕಡೆಗಳಲ್ಲಿ ಭ್ರಷ್ಟಾಚಾರದ ಪೂರ್ಣ ಪ್ರಭಾವವಿರುತ್ತದೆ. ಎಲ್ಲಿ ಭ್ರಷ್ಟಾಚಾರವಿರುತ್ತದೋ ಅಲ್ಲಿ ಗ್ರಾಮೀಣ ವಿಕಾಸಕ್ಕೆ ತಡೆಯಾಗುತ್ತದೆ. ಅದಕ್ಕಾಗಿ ಗ್ರಾಮೀಣ ವಿಕಾಸದ ಅಧ್ಯಯನದಲ್ಲಿ ಭ್ರಷ್ಟವಿರೋಧಿ ಶಾಸ್ತ್ರವು ಮಹತ್ವದ ಯೋಗದಾನವನ್ನು ನೀಡಬಹುದಾಗಿದೆ. ರಾಜ್ಯ ವ್ಯವಸ್ಥೆಯನ್ನು ಸಂಚಾಲನೆ ಮಾಡುವ ಸರಕಾರದ ಮಹತ್ವಪೂರ್ಣ ಮೂರು ಅಂಗಗಳಲ್ಲಿ ಒಂದು ಕಾರ್ಯಪಾಲಿಕೆಯೂ ಆಗಿದೆ. ಸರಕಾರಿ ಸಮುದಾಯಗಳು ಒಂದೇ ರೀತಿಯಿದ್ದರೂ ಇದರಲ್ಲಿ ಎರಡು ರೀತಿಯ ಸಮುದಾಯಗಳು ಒಳಗೊಂಡಿವೆ.

ಒಂದು ರಾಜಕೀಯ ಸಮುದಾಯ ಮತ್ತು ಇನ್ನೊಂದು ನಿಯೋಜಿತ ಕರ್ಮಚಾರಿಗಳ ( ನೌಕರಿವರ್ಗ) ಸಮೂಹ. ಈ ನಿಯೋಜಿತ ಸಮೂಹವು ಸ್ಥಾಯಿ ಸರಕಾರದ ರೂಪದಲ್ಲಿ ಸ್ಥಾಪಿತವಾಗುತ್ತವೆ. ಈ ಸಮುದಾಯವನ್ನು ಸಬಲ, ಸಮರ್ಥ ಮತ್ತು ಒತ್ತಡದಿಂದ ಸಿದ್ಧಗೊಳಿಸಲು ಜನಾಡಳಿತದ ವಿಷಯದ ಅಧ್ಯಯನ – ಅಧ್ಯಾಪನವು ಪ್ರಚಲಿತವಿದೆ. ವಿಶ್ವದ ಬಹುತೇಕ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಜನಾಡಳಿತದ ಕಲಿಕೆ ಇರುತ್ತದೆ. ಎಲ್ಲಾ ದೇಶಗಳ ರಾಜ್ಯ ವ್ಯವಸ್ಥೆಯಲ್ಲಿ ವಾಸ್ತವವಾಗಿ ಸರಕಾರದ ತಾತ್ಪರ್ಯ, ಸ್ಥಾಯಿ ಪ್ರಕೃತಿಯ ಸರಕಾರದ್ದೆಂದೇ ಹೇಳಬಹುದಾಗಿದೆ. ಏಕೆಂದರೆ ಈ ಸಮುದಾಯದ ಜೊತೆಗೆ ರಾಜ್ಯದ ನೀತಿ ನಿರ್ದೇಶಕ ಸಿದ್ಧಾಂತ ಮತ್ತು ಪ್ರಾದೇಶಿಕ ರಣನೀತಿ ಒಳಗೊಂಡಿರುತ್ತದೆ. ಇದನ್ನು ರಾಷ್ಟ್ರೀಯ ಮುಖ್ಯ ನೀತಿಯಾಗಿ ಸ್ವೀಕಾರ ಮಾಡಲಾಗುತ್ತದೆ. ರಾಜಕೀಯವಾಗಿ ಸಮಾವೇಶಗೊಳ್ಳುವ ಅಸ್ಥಾಯಿ ಸರಕಾರಗಳು ಬರುತ್ತವೆ. ಹೋಗುತ್ತವೆ. ಆದರೆ ರಾಷ್ಟ್ರೀಯ ನೀತಿಯಲ್ಲಿ ಸಂಚಲನೆಗೊಳ್ಳುವುದಿಲ್ಲ. ಇದೇ ರಾಷ್ಟ್ರೀಯ ಮುಖ್ಯ ನೀತಿಯನ್ನು ಹಸ್ತಕ್ಷೇಪ ಮುಕ್ತವಾಗಿಡುವುದಕ್ಕಾಗಿ ನಿಯೋಜಿತ ಸೇವೆಯಲ್ಲಿ ನಿರತರಾಗಿರುವ ವ್ಯಕ್ತಿ ಅಥವಾ ಸಮುದಾಯ ಯಾವ ರೀತಿ ಜವಾಬ್ದಾರಿ ನಿಭಾಯಿಸಬಹುದು ಈ ವಿಷಯದಲ್ಲಿ ಜ್ಞಾನ (ತಿಳುವಳಿಕೆ) ಜನಾಡಳಿತದ ಅಧ್ಯಯನದಲ್ಲಿ ಸೇರಿರುತ್ತದೆ. ಸ್ಥಾಯಿ ಸರಕಾರದ ರೂಪದಲ್ಲಿ ಕಾರ್ಯನಿರತರಾಗಿ ಸೇವೆಯಲ್ಲಿ ನಿಯೋಜಿತ ಕರ್ಮಚಾರಿಗಳೇ ( ನೌಕರರೇ ) ಭ್ರಷ್ಟಾಚಾರದ ಕಾರ್ಯದಲ್ಲಿ ತೊಡಗುತ್ತಾರೆ. ಸ್ಥಾಯಿ ಸರಕಾರದಲ್ಲಿ ಕಾರ್ಯನಿರತ ವ್ಯಕ್ತಿ ಅಥವಾ ಸಮುದಾಯವೇ ಅತ್ಯಧಿಕ ಭ್ರಷ್ಟಕಾರ್ಯಗಳನ್ನು ಮಾಡುವವರು. ಆದ್ದರಿಂದ ಈ ಕ್ಷೇತ್ರದಲ್ಲಿ ಪೂರ್ಣ ನಿಗಾ (ಗಮನ) ಇಡುವುದಾಗಿ ಕೂಡ ಭ್ರಷ್ಟವಿರೋಧಶಾಸ್ತ್ರ ಸಹಾಯಕವಾಗಬಹುದೆಂದು ಪ್ರಮಾಣಿತವಾಗಬಹುದು.

ರಾಜ್ಯ ವ್ಯವಸ್ಥೆಯಲ್ಲಿ ಪೂರ್ಣಕಾಲಿನ ಕಾರ್ಯ ಮಾಡುವ ಸೈನಿಕರು ದ್ವಾರಪಾಲಕರು, ಆಡಳಿತ ಕ್ಷೇತ್ರ ನ್ಯಾಯಕ್ಷೇತ್ರ ಮತ್ತು ಅನ್ಯ ಕ್ಷೇತ್ರಗಳಲ್ಲಿ ಕೆಲಸ ಮಾಡುವ ರಾಷ್ಟ್ರಸೇವಕರು ದೀರ್ಘಕಾಲೀನ ಅವಧಿಯ ನಂತರ ಕಾರ್ಯದಿಂದ (ಕೆಲಸದಿಂದ ) ಮುಕ್ತರಾದ ಮೇಲೆ ಅವರಿಗೆ ಜೀವನೋಪಾಯಕ್ಕಾಗಿ ನಿವೃತ್ತಿ ವೇತನ ನೀಡುವ ವ್ಯವಸ್ಥೆ ಇರುತ್ತದೆ. ಈ ರೀತಿ ಪೂರ್ಣಕಾಲಿಕ ಕೆಲಸ ಮಾಡುವ ರಾಷ್ಟ್ರಸೇವಕರ ಉಳಿದ ಜೀವನ ಒಳ್ಳೆಯ ರೀತಿಯಲ್ಲಿ ಕಳೆಯಲಿ ಎಂಬ ಉದ್ದೇಶಕ್ಕಾಗಿ ನಿವೃತ್ತಿ ವೇತನ ನೀಡುವುದು ಒಳ್ಳೆಯ ವಿಚಾರವಾಗಿದೆ. ಆದರೆ ವಿಕಾಸೋನ್ಮುಖ ದೇಶಗಳಲ್ಲಿ ಇಂತಹ ದೀರ್ಘಕಾಲೀನ ಕೆಲಸ ಮಾಡುವವರು ಕೇವಲ ರಾಷ್ಟ್ರ ಸೇವಕರು ಮಾತ್ರವಲ್ಲ, ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವ ಜನಪ್ರತಿನಿಧಿಗಳು ಮತ್ತು ರಾಜ್ಯದ ಉನ್ನತ ಪದವಿಗಳಲ್ಲಿದ್ದ ವ್ಯಕ್ತಿಗಳಿಗೂ ಕೂಡ ಅನೇಕ ರೀತಿಯ ಸೌಲಭ್ಯಗಳನ್ನು ನೀಡುವ ಪ್ರತೀತಿ ಇದೆ. ಇಷ್ಟು ಮಾತ್ರವಲ್ಲ, ಭೂತಪೂರ್ವ (ಮಾಜಿ) ಪದಾಧಿಕಾರಿಗಳ ಸುರಕ್ಷೆಯ ಹೆಸರಿನಲ್ಲಿ ರಾಜ್ಯ ಕೋಶದಿಂದ (ಖಜಾನೆಯಿಂದ) ದೊಡ್ಡ ಮಟ್ಟದ ಮೊತ್ತ ಖರ್ಚು ಮಾಡಿ ರಕ್ಷಣಾ ಕರ್ಮಚಾರಿಗಳಿಂದ ಸೌಲಭ್ಯಗಳನ್ನು ಪಡೆದು ಮೋಜಿನ ಜೀವನ ನಡೆಸುತ್ತಾರೆ. ರಾಜ್ಯ ಕೋಶಕ್ಕೆ ಹೆಚ್ಚಿನ ಭಾರ ಹಾಕಿ, ಸೈನಿಕರು, ಕಾವಲುಗಾರರು ಮತ್ತು ನಿಯೋಜಿತ ಸೇವೆಯ ಉಚ್ಚ ಅಧಿಕಾರಿಗಳು ರಾಜ್ಯದ ಖಜಾನೆಯಿಂದ ವೇತನವನ್ನು ಪಡೆದು, ರಾಷ್ಟ್ರ ಸೇವಕರಿಂದಲೇ (ರಾಜ್ಯ ನೌಕರರು) ತಮ್ಮ ಸ್ವಂತದ ಕೆಲಸಗಳನ್ನು ಮಾಡಿಸುತ್ತಾರೆ. ಉನ್ನತಾಧಿಕಾರದಲ್ಲಿದ್ದವರಿಗೆ ಸವಲತ್ತು ನೀಡಬೇಕು ಎಂಬ ಕಾರಣಕ್ಕೆ ಉನ್ನತ ಅಧಿಕಾರದಲ್ಲಿದ್ದವರು ಕೆಳ ಹಂತದ ರಾಷ್ಟ್ರ ಸೇವಕರನ್ನು ತಮ್ಮ ನೌಕರರಂತೆ ಬಳಸಿಕೊಳ್ಳುತ್ತಾರೆ. ಇಂದಿನ ಕಾಲಘಟ್ಟದಲ್ಲಿ ಇದು ಉಚಿತವಲ್ಲ. ಆದ್ದರಿಂದ ಇಂತಹ ನೌಕರ ಪದ್ಧತಿ ಕೊನೆಗೊಳ್ಳಬೇಕು.

ಒಳ್ಳೆಯ ಶಾಸನ ವ್ಯವಸ್ಥೆ ಇಂದಿನ ಅವಶ್ಯಕತೆಯಾಗಿದೆ. ಯಾವುದೇ ದೊಡ್ಡ ಯಂತ್ರೋಪಕರಣಗಳ ಕಾರಖಾನೆ (ಫ್ಯಾಕ್ಟರಿ ) ಮತ್ತು ದೊಡ್ಡ ಉದ್ಯೋಗಗಳಲ್ಲಿ ಮಾತ್ರವಲ್ಲ, ಮಾರುಕಟ್ಟೆ ಮತ್ತು ವಿತ್ತೀಯ ಕ್ಷೇತ್ರಗಳಲ್ಲಿ ಕೂಡ ಒಳ್ಳೆಯ ಶಾಸನ ವ್ಯವಸ್ಥೆಯ ಅವಶ್ಯಕತೆ ಇದೆ. ವ್ಯಾಪಾರಿ ಸಂಸ್ಥೆಗಳು, ಸೇವಾಪರ ಸ್ವಾಸ್ಥ್ಯ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಕೂಡ ಒಳ್ಳೆಯ ಶಾಸನ ವ್ಯವಸ್ಥೆಯ ಅವಶ್ಯಕತೆ ಇದೆ. ಶಾಸನ ವ್ಯವಸ್ಥೆಯ ವಿಚಾರ ಎಷ್ಟು ಅವಶ್ಯಕವೆಂದರೆ ಎಲ್ಲಿ ಒಳ್ಳೆಯ ಶಾಸನ ವ್ಯವಸ್ಥೆ ಇರುವುದೋ ಅಲ್ಲಿ ಸಫಲತೆ ಇದೆ, ವಿಕಾಸವಿದೆ ಎಲ್ಲಿ ಶಾಸನ ಕೆಟ್ಟಿರುತ್ತದೋ,

ಅಲ್ಲಿ ಅಸಫಲತೆ, ಅವನತಿ ನಿಶ್ಚಿತ, ಈಗಲಾದರೂ ಮಾನವೀಯ ಶ್ರಮಸಾಧನಕ್ಕೆ ಕೂಡ ಒಳ್ಳೆಯ ಶಾಸನದ ಅವಶ್ಯಕತೆ ಕಂಡುಬರುತ್ತಿದೆ. ಆದ್ದರಿಂದ ಜಗತ್ತಿನ ಅನೇಕ ವಿಶ್ವವಿದ್ಯಾಲಯಗಳಲ್ಲಿ ಮಾನವೀಯ ಶ್ರಮ ಸಾಧನದ ವಿಷಯವನ್ನು ಅಧ್ಯಯನ – ಅಧ್ಯಾಪನದಲ್ಲಿ ಪ್ರಾರಂಭಿಸಲಾಗಿದೆ. ಶಾಸನ ವ್ಯವಸ್ಥೆಯ ವಿಷಯ ಮತ್ತಷ್ಟು ವ್ಯಾಪಕ ಕ್ಷೇತ್ರಗಳನ್ನು ತನ್ನೊಳಗೆ ಸೇರಿಸಿಕೊಳ್ಳಲಿದೆ. ಶಾಸನ ವ್ಯವಸ್ಥೆಯ ಪಕ್ಷ, ಕುಶಲ, ಅನುಶಾಸನ ನೀತಿ ಬದ್ಧ ಮತ್ತು ವ್ಯವಸ್ಥಿತವಾಗಿರುವುದನ್ನೇ ಶಾಸನ ವ್ಯವಸ್ಥೆಯು ಒಳ್ಳೆಯ ಶಾಸನ ವ್ಯವಸ್ಥೆ ಎಂದು ಹೇಳಲಾಗುತ್ತದೆ. ನಿರೀಕ್ಷಣೆ, ಅನುಸರಣೆ ಮತ್ತು ಮೌಲ್ಯಾಂಕನವು ಶಾಸನ ವ್ಯವಸ್ಥೆಯ ಮೂಲ ಸೂತ್ರವಾಗಿದೆ. ಈ ಸೂತ್ರದ ನಿರಾಧಾರ (ನಿರಾಕರಣೆ)ವೂ ಅನುಸಾಶನಹೀನತೆ, ಅನೈತಿಕ ಕಾರ್ಯ ಬೇಜವಾಬ್ದಾರಿತನ ಅನುಚಿತ ಕಾರ್ಯ ಮತ್ತು ನಿಯಮಬಾಹಿರ ಕಾರ್ಯವನ್ನು ಭ್ರಷ್ಟಾಚಾರಜನ್ಯ ಕ್ರಿಯಾಕಲಾಪವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ ಶಾಸನ ವ್ಯವಸ್ಥೆಯೊಂದಿಗೆ ಅನೇಕ ವಿಷಯಗಳಲ್ಲಿ ಭ್ರಷ್ಟ ವಿರೋಧಿ ಶಾಸ್ತ್ರದ ನೀತಿ ಹಾಗೂ ಸಿದ್ಧಾಂತದ ಶಿಕ್ಷಣವೂ ಅವಶ್ಯಕವಾಗಿದೆ.

**ರಾಜ್ಯ ಶಕ್ತಿಯ ವಿಭಜಕ ಸಿದ್ಧಾಂತ :–** ರಾಜ್ಯ ವ್ಯವಸ್ಥೆಯ ಆಧಾರದಲ್ಲಿ ನ್ಯಾಯಪಾಲಿಕೆಯನ್ನು ಸ್ವತಂತ್ರ ಶಕ್ತಿ ಸಂಪನ್ನ ರೂಪದಲ್ಲಿರಿಸುವ ವ್ಯವಸ್ಥೆ ಇದೆ. ಶಾಸನ ವಿಧಾನದಲ್ಲಿ ನ್ಯಾಯಪಾಲಿಕೆಯೇ ದೇಶ ಮತ್ತು ಜನತೆಯ ಸಂರಕ್ಷಕವಾಗಿ ಸ್ಥಾಪಿತವಾಗಿದೆ. ಇಂತಹ ಶಾಸನ ವ್ಯವಸ್ಥೆಯನ್ನು ಸ್ಥಾಪಿಸುವುದಕ್ಕೆ ನ್ಯಾಯ ಶಾಸ್ತ್ರದ್ದೇ ಜವಾಬ್ದಾರಿಯಾಗಿರುತ್ತದೆ. ಈ ಸತ್ಯ ಹಾಗೂ ಅಪರಿಹಾರ್ಯ ಪದ್ಧತಿಯನ್ನು ಕಾನೂನು ನಿರ್ಮಾಣದ ಜವಾಬ್ದಾರಿಯುಳ್ಳ ವ್ಯವಸ್ಥಾಪಕರು ಅದರ ಅರಿವು ಇಲ್ಲದವರಾಗಿದ್ದಾರೆ. ಏಕೆಂದರೆ ವ್ಯವಸ್ಥಾಪಕತೆಯ ಸದಸ್ಯರು ಒಂದಲ್ಲ ಒಂದು ರೀತಿಯಲ್ಲಿ ರಾಜಕೀಯ ಬಣ್ಣವನ್ನು ಹೊಂದಿರುತ್ತಾರೆ. ಇಂತಹ ರಾಜಕೀಯ ವ್ಯಕ್ತಿಗಳು ಕಾನೂನನ್ನು ಪರಿವರ್ತಿಸಿ, ತಮ್ಮ ಅನುಕೂಲಕ್ಕನುಸಾರವಾಗಿ ಮಾಡಿಕೊಳ್ಳುತ್ತಾರೆ. ಇಂತಹ ವ್ಯವಸ್ಥೆಯಲ್ಲಿರುವ ಇದರ ಸದಸ್ಯರು ಸ್ವಾರ್ಥಿಗಳು ಹಾಗೂ ಸಂಕೀರ್ಣ ಮನಸ್ಸಿನವರಾಗಿರುತ್ತಾರೆ. ಆದ್ದರಿಂದ ಇಂತಹವರನ್ನು ತಡೆಯುವುದಕ್ಕಾಗಿ ನ್ಯಾಯ ಶಾಸ್ತ್ರವು ಕೂಡ ಪ್ರಭಾವಶಾಲಿಯಾಗಿರಬೇಕು. ದೇಶದ ಮೂಲ ಕಾನೂನು ಸಂವಿಧಾನವಾಗಿದೆ. ಸಂವಿದಾನದ ಯಾವುದೇ ವಿಧಿಯಿಂದ ಹೊರತಾದ ಕಾನೂನು ಮಾನ್ಯ ಮಾಡಲಾಗದು. ಇದು ಕಾನೂನಿ ಸಿದ್ದಾಂತವಾಗಿದೆ. ಆದರೆ ಅನೇಕ ದೇಶಗಳಲ್ಲಿ ರಾಜಕೀಯ ವ್ಯಕ್ತಿಗಳ ಸ್ವಾರ್ಥವನ್ನು

ಪೂರ್ಣಗೊಳಿಸುವುದಕ್ಕಾಗಿ, ನಿಯಮ ಮತ್ತು ಕಾನೂನುಗಳನ್ನು ಮಾಡಲಾಗುತ್ತದೆ. ಈ ರೀತಿ ಕಾನೂನು ಬಾಹಿರ ನಿಯಮಗಳನ್ನು ಮಾಡುವ ವ್ಯಕ್ತಿಯ ವಿರುದ್ಧ ಹೇಗೆ, ಯಾವ ರೀತಿಯ ಕಾನೂನಿ ವ್ಯವಸ್ಥೆಯಾಗಬೇಕು. ಈ ವಿಚಾರದಲ್ಲಿ ನಿಯಮಶಾಸ್ತ್ರವು ಮೌನವಾಗಿದೆ. ಎಲ್ಲಾ ರೀತಿಯ ನ್ಯಾಯಿಕ ಸಿದ್ದಾಂತವನ್ನು ಅಧ್ಯಯನದಲ್ಲಿ ಅಳವಡಿಸಿಕೊಳ್ಳುವಂತಹ ನಿಯಮಗಳ ಶಾಸ್ತ್ರ ಭ್ರಷ್ಟಾಚಾರಿ ಅನುಚಿತಕಾರ್ಯ ಮಾಡುವವರು ಮತ್ತು ಅಧಿಕಾರದ ದುರುಪಯೋಗ ಮಾಡುವವರ ವಿರುದ್ಧದ ಸಿದ್ಧಾಂತದ ನಿರ್ಮಾಣ ಮಾಡಲು ಸಾಧ್ಯವಾಗಿಲ್ಲ. ಇದಕ್ಕಾಗಿ ಭ್ರಷ್ಟವಿರೋಧಿ ಶಾಸ್ತ್ರದ ನೀತಿ ಹಾಗೂ ಸಿದ್ಧಾಂತವನ್ನು ಕೂಡ ನ್ಯಾಯ ಸಮ್ಮತ ನಿಯಮಶಾಸ್ತ್ರದಲ್ಲಿ ಅಳವಡಿಸುವ ಅವಶ್ಯಕತೆ ಇದೆ.

ವರ್ತಮಾನ ಯುಗ ಸಂಚಾರ ಯುಗವಾಗಿದೆ. ವಿಶ್ವದ ಎಲ್ಲಾ ದೇಶಗಳಲ್ಲಿ ಪ್ರಜಾತಂತ್ರದ ಸ್ಥಾಪನೆಯ ನಂತರ ಪತ್ರಿಕೋದ್ಯಮವು ಪಾರಂಭವಾಯಿತು. ಮುದ್ರಣಾಲಯಗಳ ಮಾಧ್ಯಮದಿಂದ ಪ್ರಾರಂಭವಾದ ಪತ್ರಿಕೋದ್ಯಮ, ರೇಡಿಯೋ, ಮತ್ತು ಟೆಲಿವಿಷನ್ ಗಳಿಗಾಗಿ (ಆಕಾಶವಾಣಿ, ದೂರದರ್ಶನ) ಸಾಗುತ್ತಾ ಇಂದು ಆನ್‌ಲೈನ್‌ವರೆಗೂ ಬಂದು ತಲುಪಿದೆ. ಮುಂದೆಯೂ ವಿಶ್ವ ಪ್ರವೃತ್ತ ವಿಧಾನದ ವಿಕಾಸದೊಂದಿಗೆ ಇದು ಮುಂದುವರಿಯಬಹುದು. ಇದು ನಿಶ್ಚಿತ. ಪ್ರಜಾತಾಂತ್ರಿಕ ರಾಜಕೀಯ ವ್ಯವಸ್ಥೆಯುಳ್ಳ ದೇಶಗಳಲ್ಲಿ ಪತ್ರಿಕೋದ್ಯಮದ ಹಿಡಿತವಿರುತ್ತದೆ. ಆದ್ದರಿಂದ ಕೆಲವು ದಶಕಗಳಿಂದ ಪತ್ರಿಕೋದ್ಯಮವು ಅಧ್ಯಯನದ ವಿಷಯವನ್ನಾಗಿ ಮಾಡಲಾಗಿದೆ. ಪ್ರಜಾತಾಂತ್ರಿಕ ದೇಶಗಳಲ್ಲಿ ಪತ್ರಿಕೋದ್ಯಮವನ್ನು ರಾಜ್ಯದ (ಸಂವಿಧಾನದಲ್ಲಿ ) ನಾಲ್ಕನೇ ಅಂಗವೆಂದು ಮಾನ್ಯ ಮಾಡಲಾಗಿದೆ. ಇದರಿಂದ ಪತ್ರಿಕೋದ್ಯಮದ ಮಹತ್ವ ಮತ್ತಷ್ಟು ಹೆಚ್ಚಿದೆ. ಈ ವಿಷಯ ಸಾಮಾನ್ಯ ಪತ್ರಿಕೆಗಳಿಂದ ಸಾಮಾನ್ಯ ಸಂಚಾರ ಮಾಧ್ಯಮದಲ್ಲಿಯವರೆಗೆ ತಲುಪಿದೆ. ಇದನ್ನು ವ್ಯವಸ್ಥಿತ ಅಧ್ಯಯನದ ವಿಷಯವನ್ನಾಗಿ ಮಾಡುವ ಹೊಣೆಗಾರಿಕೆ ಶಿಕ್ಷಣಕ್ಷೇತ್ರದಲ್ಲಿ ವಿಶ್ವವಿದ್ಯಾಲಯಗಳದ್ದಾಗಿದೆ. ಪತ್ರಿಕೋದ್ಯಮದ ವಿರುದ್ಧವಾಗಿ ಮಾತನಾಡುವುದು, ಶಬ್ದ, “ಹಳದಿ ಪತ್ರಕಾರಿಕೆ (ವಾಸ್ತವಿಕಕ್ಕೆ ಹೊರತಾದ ಭ್ರಾಮಿಕ ಸುದ್ದಿ ಹರಡುವಿಕೆ) ಇದೆ. ಆದರೆ ಇಂದಿನ ಯುಗಗಳ ಸಂಚಾರ ಅಪರಾಧ ಎಷ್ಟು ಹೆಚ್ಚಿದೆಯೆಂದರೆ, ಈ ಹಳದಿ ಪತ್ರಕಾರಿಕೆಯ ರೂಪವು ನ್ಯೂನತಮವಾಗಿದೆ. ರಾಜಕೀಯದಲ್ಲಿ ಚೆಲ್ಲಾಟವಾಡುವವರು, ಕಾನೂನು ಬಾಹಿರ ದಂಧೆಗಳನ್ನು ನಡೆಸುವವರು, ಕಪ್ಪು ಹಣದ ರಕ್ಷಣೆ ಮಾಡುವವರು, ಸಾಮಾನ್ಯ ಸಂಚಾರ ಮಾಧ್ಯಮದ ಸಮುದಾಯಗಳು, ಕ್ರಿಯಾಶೀಲವಾಗಿವೆ. ವಿಕಸಿತ ದೇಶವಾಗಿರಲಿ, ಅಥವಾ ವಿಕಾಸಶೀಲ ದೇಶ

ಬಹುಶಃ ಎಲ್ಲಾ ದೇಶಗಳಲ್ಲಿ ಸಾಮಾನ್ಯ ಸಂಚಾರ ಮಾಧ್ಯಮವು ತನ್ನ ವರ್ಚಸ್ಸನ್ನು ಕಾಪಾಡಿಕೊಂಡಿದೆ. ಈ ಕ್ಷೇತ್ರವು, ಎಷ್ಟು ಭ್ರಷ್ಟವಾಗಿದೆಯೆಂದರೆ, ಅವಶ್ಯವಾಗಿ ಇದನ್ನು ನಿಯಂತ್ರಿಸಲೇಬೇಕೆಂಬ ವಿಚಾರ ಇಂದು ಮನವರಿಕೆಯಾಗಿದೆ. ಇದಕ್ಕಾಗಿ ಸತ್ಯ, ನಿಷ್ಟೆ ಮತ್ತು ವಿಶ್ವಾಸ – ಪ್ರಾಮಾಣಿಕತೆಯ ಜೊತೆ ಜೊತೆಗೆ ಒಂದು ವೇಳೆ ಸಾಮಾನ್ಯ ಸಂಚಾರ ಮಾಧ್ಯಮವು ನಡೆಸುವುದೇ ಆದರೆ ಭ್ರಷ್ಟವಿರೋಧಿ ಶಾಸ್ತ್ರದ ಸಿದ್ಧಾಂತಗಳನ್ನು, ಈ ಸಾಮಾನ್ಯ ಸಂಚಾರ ಮಾಧ್ಯಮವು ಅಂಗೀಕರಿಸಲೇಬೇಕು. ಈ ಸಾಮಾನ್ಯ ಸಂಚಾರ ಮಾಧ್ಯಮ ಸತ್ಯದ ಹಾದಿಯಲ್ಲಿ, ಸಾಗುತ್ತಿದ್ದರೆ, ಅಲ್ಲಿಯ ರಾಜ್ಯ ವ್ಯವಸ್ಥೆ ಶೀಘ್ರವಾಗಿ ಸಫಲತೆಯನ್ನು ಪಡೆಯಲಿದೆ.

ಹೊಸ ದೇಶಗಳಲ್ಲದೆ, ಆಪ್ರಿಕಾ, ಯುರೋಪ್ ಮತ್ತು ಏಷ್ಯಾ ಮಹಾದೇಶದ, ತನ್ನ ದೇಶದ ಪರಿಸ್ಥಿತಿಗನುಗುಣವಾಗಿ ಪ್ರಾಚೀನ ಕಾಲದಿಂದಲೂ ಮಾನವ ಸಭ್ಯತೆಯ ವಿಕಾಸದಲ್ಲಿ ತೊಡಗಿವೆ. ಮಾನವ ಸಮಯಾನುಸಾರ ತನ್ನ ಜೀವನ ಪದ್ಧತಿಯಲ್ಲಿ ವಿಕಾಸ ಮಾಡುತ್ತಾ ಬಂದಿದ್ದಾನೆ. ಯಾವ ಮಾನವ ಸಮಾಜದಲ್ಲಿ ಇರುತ್ತಾನೋ, ಅಲ್ಲಿಯದೇ ಮಸ್ತಿಷ್ಕದ ಚಿಂತನೆಯೊಂದಿಗೆ ಜನ್ಮ ಪಡೆದು ಮಾನವೋಪಯೋಗಿ ವಿಚಾರಗಳಿಂದಲೇ ಆ ಮಾನವ ಸಮಾಜದ ವಿಕಾಸದ ಮಟ್ಟವನ್ನು ಸ್ಥಾಪಿಸುತ್ತಾನೆ. ಇಂತಹ ಉಚ್ಚಮಟ್ಟದ ಮಾನವ ವಿಕಾಸದಲ್ಲಿ ಯುರೋಪ್ ಹಾಗೂ ಏಷಿಯಾ ಮಹಾದೇಶದ ದೇಶ ಹೀಗೆ ಪ್ರಾಚೀನ ಕಾಲದಿಂದ ನಡೆದುಕೊಂಡು ಬಂದ ಪರಂಪರೆಯಲ್ಲಿ ಆಧ್ಯಾತ್ಮಿಕ ಕ್ಷೇತ್ರಗಳ ಬಾಹುಳ್ಯ (ಹೆಚ್ಚುಗಾರಿಕೆ) ಸ್ಥಾಪಿತವಾಗುತ್ತದೆ. ಯಾವ ಸಮಾಜವು, ಆಧ್ಯಾತ್ಮಿಕ ಚಿಂತನೆಯ ಆಧಾರದಲ್ಲಿ ಸಮಾಜವು ಸ್ಥಾಪಿತವಾಗುತ್ತದೋ, ಆ ಸಮಾಜದಲ್ಲಿ ವಾಸಿಸುವ ವ್ಯಕ್ತಿಗಳು ಸುಖ, ಶಾಂತಿ ಮತ್ತು ಸಮೃದ್ಧಿಯ ಜೀವನ ನಿರ್ವಹಣೆ ಮಾಡುತ್ತಾರೆ. ಕೆಲವು ವರ್ಷಗಳಿಂದ ಅನೇಕ ದೇಶಗಳಲ್ಲಿ ಆಧ್ಯಾತ್ಮಿಕ ಜ್ಞಾನದ ಪ್ರಚಾರ – ಪ್ರಸಾರವು ಸಾರ್ವಜನಿಕವಾಗಿ, ಆಗಿಲ್ಲ. ಹೀಗೆ ಆಧ್ಯಾತ್ಮಿಕ ಹಾದಿಯನ್ನು ತೊರೆಯುವ ಸಮಾಜದಲ್ಲಿ ಸುಖ ಶಾಂತಿ ಇರುವುದಿಲ್ಲ. ಮಾನವ ಮತ್ತೆ ಸಾವಿರಾರು ವರ್ಷಗಳ ಹಿಂದಕ್ಕೆ ಹೋಗುತ್ತಾನೆ. ಭೌತಿಕವಾದ ಚಿಂತನೆಯಿಂದ ಸಮಾಜ ಆಕ್ರಮಿಸಲ್ಪಟ್ಟಿದೆ. ಭೌತಿಕ ಅವಶ್ಯಕತೆಗಳ ಶೋಧದಲ್ಲಿ ಮಾನವರ ಓಟ ಮುಂದುವರಿದಿದೆ. ಇದೇ ಕಾರಣದಿಂದಾಗಿ ಇಂದಿನ ಮಾನವ ಸಮಾಜ ದ್ವಂದ್ವದಲ್ಲಿ ಸಿಲುಕಿದೆ. ಭೌತಿಕವಾದದ ಚಿಂತನೆಯಿಂದ ಒಂದೆಡೆ ಸಮಾಜ ವಿಕಾಸಾಗಿದ್ದರೆ, ಅಲ್ಲಿ ಇನ್ನೊಂದೆಡೆ ಮಾನವ ಜೀವನ ಸಂಘರ್ಷಮಯವೂ ಆಗಿದೆ. ಅನೈತಿಕತೆ

ಮತ್ತು ಭ್ರಷ್ಟಾಚಾರ ಹೆಚ್ಚಿದೆ. ಆದ್ದರಿಂದ ಆಧ್ಯಾತ್ಮಿಕ ಶಿಕ್ಷಣವನ್ನೊಳಗೊಂಡ ವಿಷಯಗಳಿಗೆ ಪ್ರಾಧಾನ್ಯತೆಯನ್ನು ನೀಡಿ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಅಧ್ಯಾಪನವನ್ನು ಪ್ರಾರಂಭಿಸುವ ಅವಶ್ಯಕತೆ ಇದೆ.

ಭೌತಿಕವಾದದ ಚಿಂತನೆಯ ಪರಿಣಾಮವೇ ಯುದ್ಧ ಸಾಮಗ್ರಿಗಳ ಉತ್ಪಾದನೆ ಮತ್ತು ಅದರ ಮಾರಾಟವನ್ನು ಹೆಚ್ಚಿಸುವುದು. ವಿಶ್ವದ ವಿಕಸಿತ ದೇಶಗಳಲ್ಲಿ ಯುದ್ಧ ಸಾಮಗ್ರಿಯ ಉತ್ಪಾದನೆಯಾಗುತ್ತದೆ ಮತ್ತು ಇವುಗಳನ್ನು ಅತ್ಯಧಿಕ ಬೆಲೆಗೆ ಸಣ್ಣ – ಸಣ್ಣ ದೇಶಗಳಿಗೆ ಮಾರಾಟ ಮಾಡಿ ಪರಸ್ಪರರಲ್ಲಿ ದ್ವಂದ್ವ ಹರಡುವ ಪ್ರಯತ್ನದಲ್ಲಿ ತೊಡಗಿರುತ್ತದೆ. ಸಣ್ಣ ದೇಶಗಳ ಸಾಮಗ್ರಿಗಳ ಕೊಡುಕೊಳ್ಳುವಿಕೆ ನಡೆಯುತ್ತದೆ. ಇದರಿಂದಾಗಿ, ಸಣ್ಣ ದೇಶಗಳ ಜನತೆ ಶೋಷಿತವಾಗುತ್ತಾರೆ, ಯುದ್ಧ ಸಾಮಗ್ರಿಗಳ ಅವಶ್ಯಕತೆ ಇಲ್ಲದಿದ್ದರೂ, ಕಮಿಷನ್ ಗಳಿಸುವ ಆಸೆಯಿಂದ ವಿಕಾಸೋನ್ಮುಖ ದೇಶಗಳು ಇಂತಹ ಸಾಮಗ್ರಿಗಳನ್ನು ಖರೀದಿಸುವ ನಿರ್ಣಯವನ್ನು ಮಾಡುತ್ತವೆ. ಈ ಕಾರಣದಿಂದಾಗಿ ದೇಶದ ವಿಕಾಸ ನಿಂತಂತಾಗುತ್ತದೆ. ಯುದ್ಧ ಸಾಮಗ್ರಿಗಳ ಉತ್ಪಾದನೆ ಮತ್ತು ಖರೀದಿ ಮಾರಾಟದಿಂದ ಭ್ರಷ್ಟಾಚಾರಕ್ಕೆ ಉತ್ತೇಜನ ದೊರೆಯುತ್ತದೆ. ಆದ್ದರಿಂದ ಇದನ್ನು ಕೊನೆಗೊಳಿಸುವುದು ಅವಶ್ಯಕವಾಗಿದೆ.

ಮಾನವ ಕಾಡು ಮನುಷ್ಯನಾಗಿದ್ದಾಗಲೂ ಅವನಲ್ಲಿ ನೈತಿಕತೆಯ ಜ್ಞಾನವಿತ್ತು. ಆದ್ದರಿಂದಲೇ ಅವನು ಆ ಸಮಯದಲ್ಲಿ ಪಶುವಿಗಿಂತ ಭಿನ್ನವಾಗಿದ್ದ. ಮಾನವನಿಗೆ ಹುಟ್ಟಿದ ಮೇಲೆ ಬದುಕಲು ಊಟ ಬೇಕು. ವಾಸಿಸಲು ಛತ್ರ ಛಾಯೆ ಬೇಕು. ಮತ್ತು ಶರೀರ ಮುಚ್ಚಿಕೊಳ್ಳಲು ಬಟ್ಟೆ ಬೇಕು. ಉಡುಗೆ (ಬಟ್ಟೆ) ನೈತಿಕ ಜಾಗೃತಿಯ ಪ್ರತೀಕ. ಇಂತಹ ನೈತಿಕ ಜಾಗೃತಿಯ ಆಧಾರದಲ್ಲಿ ಮಾನವ ಸರ್ವಾಂಗೀಣ ವಿಕಾಸವನ್ನು ಮಾಡಿದ್ದಾನೆ. ನೈತಿಕತೆಯಿಂದ ಕೂಡಿದ ಜಾಗೃತಿಯಿಂದಲೇ ಮನುಷ್ಯ ಸರಳ ಜೀವನ ನಿರ್ವಹಣೆ ಮಾಡುವಲ್ಲಿ ಸಫಲವಾಗಿದ್ದಾನೆ. ಇಂತಹ ಸರಳ, ಸುಖಮಯ ಮತ್ತು ಉನ್ನತಿಶೀಲ ಜೀವನ ಸರಿಯಾದ ರೀತಿಯಿಂದ ಸಂಚಾಲಿತವಾದ ನಂತರವೇ ಸಂಸ್ಕೃತಿಯ ವಿಕಾಸವಾಯಿತು. ಕಲೆ ಮತ್ತು ಸಂಸ್ಕೃತಿಯ ವಿಕಾಸದಿಂದಲೇ ಇದೇ ತಥ್ಯದ ಬೋಧೆ (ತಿಳುವಳಿಕೆ)ಯಾದ ನಂತರ ವರ್ತಮಾನ ಯುಗದಲ್ಲಿ ನೈತಿಕ ವಿಜ್ಞಾನ ಪ್ರಾದುರ್ಭಾವವಾಯಿತು. ಆಚಾರ ವಿಚಾರ, ವಿಶ್ವಾಸ–ಪ್ರಾಮಾಣಿಕತೆ ಮತ್ತು ಮಾನವೋಚಿತ ಶಿಕ್ಷಣದ ಜೊತೆಗೇ ಮಾನವ ವ್ಯವಹಾರ ಹಾಗೂ ನೈತಿಕತೆಯ ಅಧ್ಯಯನ, ನೈತಿಕ

ವಿಜ್ಞಾನದಿಂದ ಆಗುತ್ತದೆ. ಆದರೆ ಶಿಕ್ಷಣದ ಪ್ರಾರಂಭಿಕ ಹಂತದ ತರಗತಿಗಳಲ್ಲಿ ನೈತಿಕ ಶಿಕ್ಷಣದ ಅಭಾವ ಕಂಡು ಬರುತ್ತದೆ. ಕೆಲವು ದೇಶಗಳಲ್ಲಿ ಪ್ರಾರಂಭಿಕ ಹಂತದಲ್ಲಿ ನೈತಿಕ ಶಿಕ್ಷಣವನ್ನು ಸೇರಿಸಲಾಗಿದೆ. ಆದರೆ ನೈತಿಕತೆಯ ವಿಷಯದಲ್ಲಿ ಜ್ಞಾನ ಕೊಡುವ ಶಿಕ್ಷಣ ಸಾಮಗ್ರಿಯ ಅಭಾವವಿದೆ. ನೈತಿಕ ಶಿಕ್ಷಣ ಮನುಷ್ಯನ ಆಂತರಿಕ ಮನೋಭಾವದೊಂದಿಗೆ ಸಂಬಂಧಿತವಾಗಿರುತ್ತದೆ. ಅದೇ ಭ್ರಷ್ಟ ವಿರೋಧಿ ಶಿಕ್ಷಣ ವ್ಯವಹಾರದೊಂದಿಗೆ ಸಂಬಂಧಿತವಾಗಿರುತ್ತದೆ. ಹೀಗಿರುವುದರಿಂದ ಈ ಎರಡು ರೀತಿಯ ಶಿಕ್ಷಣವನ್ನು ಜೊತೆ ಜೊತೆಯಾಗಿ ಅಳವಡಿಸಿಕೊಂಡು ಅಧ್ಯಯನ ಅಧ್ಯಾಪನವನ್ನು ಮಾಡಿದ್ದೇ ಆದಲ್ಲಿ ಒಂದು ಉತ್ತಮ ಮಟ್ಟದ ಮಾನವ ಸಮಾಜದ ವಿಕಾಸವಾಗಬಹುದು.

ಒಂದು ದೇಶದ ಪ್ರಾಕೃತಿಕ ಸಂಪತ್ತಿನ ಮೇಲೆ ಅನ್ಯ ದೇಶಗಳಿಂದ ಹಸ್ತಕ್ಷೇಪ ಮಾಡಿ ಅಧಿಕಾರ ಸ್ಥಾಪಿಸುವ ಪ್ರವೃತ್ತಿ ಹೆಚ್ಚುತ್ತಿದೆ. ಯಾವುದೇ ದೇಶದ ಪ್ರಾಕೃತಿಕ ಸಂಪನ್ಮೂಲ ಸಾಧನಗಳಲ್ಲಿ ಆ ದೇಶದ ಸಂಪೂರ್ಣ ಅಧಿಕಾರವಿರುತ್ತದೆ. ಆದರೆ ದೊಡ್ಡ ದೇಶಗಳ ಕೆಟ್ಟ ನೀತಿಯಿಂದಾಗಿ ಸಣ್ಣ ಹಾಗೂ ಬಡ ದೇಶಗಳ ಪ್ರಾಕೃತಿಕ ಸಂಪನ್ಮೂಲ ಸಾಧನಗಳನ್ನು ಅನ್ಯಾಯವಾಗಿ ಪ್ರಯೋಗಿಸುವ ಪ್ರವೃತ್ತಿಯ ವಿಕಾಸವಾಗಿದೆ. ಜಲಸ್ರೋತ, ಪೆಟ್ರೋಲಿಯಂ ಪದಾರ್ಥಗಳು, ಬೆಲೆಬಾಳುವ ಖನಿಜಗಳು ಮತ್ತು ಶಿಲೆಗಳು ಇತ್ಯಾದಿ ಎಲ್ಲಾ ರೀತಿಯ ಖನಜ ಪದಾರ್ಥಗಳು ಬಡ ದೇಶಗಳಿಂದ ಸರಿಯಾದ ರೀತಿಯಲ್ಲಿ ಉಪಯೋಗಿಸುವ ಪ್ರಕ್ರಿಯೆ ಆಗದಿರುವುದರಿಂದ ದೇಶಗಳು ಮತ್ತಷ್ಟು ಬಡವಾಗುತ್ತವೆ. ಇವರ ಈ ಅಜ್ಞಾನದ ಕಾರಣದಿಂದಾಗಿ ವಿಕಸಿತ ದೇಶಗಳು ಚಿಕ್ಕ ದೇಶಗಳ ಅಧಿಕಾರಿಗಳನ್ನು ವ್ಯಕ್ತಿಗತವಾಗಿ ಅಥವಾ ಸಾಮೂಹಿಕವಾಗಿ ಖರೀದಿಸಿ, ಅಲ್ಲಿಯ ಪ್ರಾಕೃತಿಕ ಸಂಪತ್ತು ಹಾಗೂ ಮೂಲ ಸ್ರೋತಗಳ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿಬಿಡುತ್ತಾರೆ. ಇದು ನಿಶ್ಚಿತವಾಗಿಯೂ ಅನ್ಯಾಯ ಪೂರ್ಣ ಕಾರ್ಯವೇ ಆಗಿದೆ. ಶೋಷಣೆಯಿಂದ ಕೂಡಿದ ಕಾರ್ಯವಾಗಿದೆ. ಮತ್ತು ಭ್ರಷ್ಟಾಚಾರ ಜನ್ಯ ಕಾರ್ಯವೂ ಆಗಿದೆ. ಎಲ್ಲಾ ದೇಶಗಳು ಪ್ರಾಕೃತಿಕ ಸಂಪನ್ಮೂಲಗಳಿಂದ ಪರಿಪೂರ್ಣವಾಗಿರುತ್ತವೆ. ಕೇವಲ ಅದನ್ನು ಉಪಯೋಗಿಸುವ ಪ್ರಯೋಗಿಸುವ ವಾತಾವರಣ ನಿರ್ಮಾಣ ಮಾಡಬೇಕಾಗಿದೆ. ಯಾವುದೇ ದೇಶದ ರಾಜ್ಯಾಧಿಕಾರವನ್ನು ಹೊಂದುವ ವ್ಯಕ್ತಿ ಅಥವಾ ಸಮೂಹ ತಮ್ಮ ದೇಶದ ಕುರಿತು ಪ್ರಾಮಾಣಿಕರಾದಲ್ಲಿ ಜನತೆಯ ಹಿತದಲ್ಲಿ ಕೆಲಸಮಾಡುವ ವಿಚಾರವುಳ್ಳವರಾದರೆ, ಆಗ ಆ ದೇಶವು, ಅನ್ಯ

ದೇಶಗಳಂತೆ ಉನ್ನತಿಯನ್ನು ಹೊಂದಬಲ್ಲದು. ಈ ಶ್ರೀಮಂತ ಮತ್ತು ಬಡವ ಎಂಬ ವಿಭೇದಗಳಿಗೆ ಅಜ್ಞಾನವೇ ಆಗಿದೆ. ಮತ್ತು ಬಡ ದೇಶಗಳ ತಳಮಟ್ಟದಲ್ಲಿರುವರಾದಿಯಾಗಿ ಮನುಷ್ಯನಿಂದ ಮಾಡಲ್ಪಟ್ಟ ಭ್ರಷ್ಟಾಚಾರಜನ್ಯ ಕಾರ್ಯವಾಗಿದೆ. ಇದನ್ನು ಭ್ರಷ್ಟವಿರೋಧಿ ಶಾಸ್ತ್ರದ ಅಂತರ್ಗತವಾಗಿ ವ್ಯಾಖ್ಯಾನಿಸುವ ಹಾಗೂ ವಿಶ್ಲೇಷಿಸುತ್ತಾ ಅಧ್ಯಯನದಲ್ಲಿ ಅಳವಡಿಸಿಕೊಂಡಿದ್ದೇ ಆದರೆ, ಜಗತ್ತಿನಲ್ಲಿ ಧನಿಕ ಮತ್ತು ಬಡ ದೇಶಗಳಲ್ಲಿಯ ಭೇದವೂ ಸಮಾಪ್ತವಾಗಬಹುದು.

ವರ್ತಮಾನ ಸಮಯವು ವಿಶ್ವವ್ಯಾಪಕತ್ವದ ಸಮಯವಾಗಿದೆ. ಒಂದೇ ದೇಶ ಎಲ್ಲಾ ಅವಶ್ಯಕ ವಸ್ತುಗಳ ಪರಿಪೂರ್ಣತೆಯನ್ನು ಮಾಡಲಾರದು. ಅದು, ಉತ್ಪಾದನೆ ಇರಲಿ, ನಿರ್ಮಾಣದಲ್ಲಿರಲಿ, ವ್ಯಾಪಾರ ವಹಿವಾಟಿನಲ್ಲಿರಲಿ ಅಥವಾ ಮಾನವ ಶ್ರಮ ಸಾಧನಗಳಿರಲಿ, ಈ ಎಲ್ಲಾ ಅವಶ್ಯಕತೆಗಳಿಗೆ ಒಂದು ದೇಶಕ್ಕೆ ಇನ್ನೊಂದು ದೇಶದ ಅವಶ್ಯಕತೆ ಇರುತ್ತದೆ. ಪ್ರಾಕೃತಿಕ ಸಂಪನ್ಮೂಲಗಳ ಆದಾನ –ಪ್ರದಾನಗಳು ನಡೆಯುತ್ತವೆ. ಸಂಧಿ–ಒಪ್ಪಂದಿಗಳು ಆಗುತ್ತವೆ. ಇದರೊಂದಿಗೆ ನಿರ್ಮಾಣಕಾರ್ಯಗಳಿಗೆ ಗ್ಲೋಬಲ್ ಟೆಂಡರ್‌ಗಳು ನಡೆಯುತ್ತವೆ. ಈ ಎಲ್ಲಾ ಕಾರ್ಯಗಳಲ್ಲಿ ಭ್ರಷ್ಟಾಚಾರವೂ ನಡೆಯುತ್ತದೆ. ಆದ್ದರಿಂದ ಇಂತಹ ಸಂಧಿ ಒಪ್ಪಂದಗಳು ಅಥವಾ ಗ್ಲೋಬಲ್ ಟೆಂಡರ್ ಗಳ ಒಪ್ಪಂದ ಪ್ರಾಮಾಣಿಕತೆಯಿಂದ ನ್ಯಾಯಪೂರ್ಣ ರೀತಿಯಿಂದ ಆಗುವ ವ್ಯವಸ್ಥೆ ಆಗಬೇಕಾಗಿದೆ. ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ನೆಲೆ, ತಿಳುವಳಿಕೆ, ಸಹಮತ ಅಥವಾ ಒಪ್ಪಂದಗಳು ಭ್ರಷ್ಟಾಚಾರದ ಕೇಂದ್ರಬಿಂದುವಾಗಿದೆ ಮತ್ತು ಇವುಗಳ ಭ್ರಷ್ಟಾಚಾರದ ಅಡ್ಡೆಗಳಾಗಿವೆ. ಆದರೆ, ಒಪ್ಪಂದಗಳನ್ನು ಮುರಿಯಲಾಗುವುದಿಲ್ಲ. ಆದ್ದರಿಂದ ಇಂತಹ ಸಂಧಿ ಒಪ್ಪಂದಗಳು ಮತ್ತು ಅಡ್ಡೆಗಳ ವ್ಯವಹಾರ ಕಾರ್ಯವನ್ನು ಭ್ರಷ್ಟವಿರೋಧಿ ಶಾಸ್ತ್ರದ ಸಿದ್ಧಾಂತದ ಆಧಾರದಲ್ಲಿ ಮಾಡುವ ಅಥವಾ ಮಾಡಿಸುವ ವ್ಯವಸ್ಥೆ ಮಾಡಬೇಕಾಗಿದೆ.

## ಒಳ್ಳೆಯ ಶಾಸನ ಪದ್ಧತಿ ಆಧುನಿಕ ಪ್ರಜಾತಂತ್ರದ ಕೇಂದ್ರ ಬಿಂದುವಾಗಿದೆ.

ಒಳ್ಳೆಯ ಶಾಸನದ ಅರ್ಥವೇ ಕಾನೂನಿ (ನ್ಯಾಯಯುತ ) ಶಾಸನವಾಗಿದೆ. ಒಳ್ಳೆಯ ಶಾಸನ ವ್ಯವಸ್ಥೆಯೊಳಗೆ ಕಾನೂನಿ ರಾಜ್ಯದ ಸರಿಯಾದ ಕಾಯಾನ್ವಯನ ಮಾತ್ರವಲ್ಲ, ಬದಲಾಗಿ, ಇದರಲ್ಲಿ, ಸ್ಥಾನೀಯ ಶಾಸನ ಸೂಚನೆಗಳ (ವಿಧಿಗಳ)

ಹಕ್ಕಿನ ರಕ್ಷಣೆ, ಪಾರದರ್ಶಕತೆ ಮತ್ತು ಸಾರ್ವಜನಿಕ ಉತ್ತರದಾಯಿತ್ವವು ಒಳಗೊಂಡಿರುತ್ತದೆ. ಪ್ರಜಾತಂತ್ರದ ಸುದೃಢೀಕರಣಕ್ಕಾಗಿ, ಒಳ್ಳೆಯ ಶಾಸನ ಪದ್ಧತಿಯ ವಿಕಾಸದ ಅವಶ್ಯಕತೆ ಇದ್ದರೂ ಕೂಡ ಈ ಕಡೆಗೆ ಎಲ್ಲಾ ಪ್ರಜಾತಾಂತ್ರಿಕ ದೇಶಗಳ ಗಮನ ಹರಿದಿಲ್ಲ. ಕೆಲವು ದೇಶಗಳು ಈ ನಿಟ್ಟಿನಲ್ಲಿ ಕಾರ್ಯಾರಂಭ ಮಾಡಿವೆಯಾದರೆ, ಇನ್ನು ಕೆಲವರು, ಇದರ ಗಂಭೀರತೆಯನ್ನು ಇನ್ನೂ ಅರಿತಿಲ್ಲ. ಯಾವುದೇ ದೇಶದಲ್ಲಿ ಪ್ರಜಾತಾಂತ್ರಿಕ ವ್ಯವಸ್ಥೆಯ ಸ್ಥಾಯಿತ್ವ ನೀಡಬೇಕಾದಲ್ಲಿ ಅಲ್ಲಿ ಒಳ್ಳೆಯ ಶಾಸನ ವ್ಯವಸ್ಥೆಯನ್ನು ಜಾರಿ ಮಾಡಬೇಕಾದಿತು. ಒಳ್ಳೆ ಶಾಸನ ಪದ್ಧತಿಯನ್ನು ಸ್ವೀಕಾರ ಮಾಡುವ ಪ್ರಜಾತಾಂತ್ರಿಕ ದೇಶವೇ ಸಫಲ ಪ್ರಜಾತಂತ್ರವೆನಸಿಕೊಳ್ಳುತ್ತದೆ. ಒಳ್ಳೆಯ ಶಾಸನ ಪದ್ಧತಿಯ ಸ್ಥಾಪನೆ ಇಂದಿನ ಅವಶ್ಯಕತೆಯಾಗಿದೆ.

ಭ್ರಷ್ಟವಿರೋಧಿ ಶಾಸ್ತ್ರವು, ಜಗತ್ತಿನಲ್ಲಿ, ಪ್ರಾಜ್ಞರ ಕ್ಷೇತ್ರದಲ್ಲಿ, ಹೊಸ ಪರಿಚಯವನ್ನು ಸ್ಥಾಪಿಸಿದೆ. ಆದ್ದರಿಂದ ಇದಕ್ಕೆ ಶಿಕ್ಷಣ ಕ್ಷೇತ್ರದಲ್ಲಿ ಅವಶ್ಯಕ ಸ್ಥಾನ ಸಿಗಬೇಕು. ಭ್ರಷ್ಟವಿರೋಧಿ ಶಾಸ್ತ್ರ ಸ್ವಯಂ ಒಂದು ವಿಜ್ಞಾನವಾಗಿದೆ. ಇದರಲ್ಲಿ ಸರಳ ಮತ್ತು ಕಠಿಣ ಎರಡೂ ಸೂತ್ರಗಳು ಅಡಕವಾಗಿವೆ. ಆದ್ದರಿಂದ ಪ್ರಯೋಗಕ್ಕೆ ಈ ಮಾರ್ಗ ಸಹಜ ಸರಳವಾಗಿದೆ. ಭೌತಿಕ ಹಾಗೂ ರಾಸಾಯನಕ ಶಾಸ್ತ್ರದಂತಹ ವಿಜ್ಞಾನದ ಸೂತ್ರಗಳು ಇದರಲ್ಲಿ ಒಳ್ಳೆಯ ರೀತಿಯಲ್ಲಿ ಪ್ರಯೋಗಿಸಲಾಗಿದೆ. ಇದರೊಂದಿಗೆ ಗಣತೀಯ ಸೂತ್ರದ ಆಧಾರದಲ್ಲೂ ಈ ವಿಷಯವು ವ್ಯಾಖ್ಯಾನಸುವ ಸಾಮರ್ಥ್ಯವನ್ನು ಹೊಂದಿದೆ. ಮಾನವತ್ವದ ಶಾಸ್ತ್ರದೊಂದಿಗೆ ಇದರ ಸಂಬಂಧ ಮತ್ತಷ್ಟು ಹತ್ತಿರವಾದದ್ದು. ಆದ್ದರಿಂದ ಭ್ರಷ್ಟವಿರೋಧಿ ಶಾಸ್ತ್ರದ ನೀತಿ ಹಾಗೂ ಸಿದ್ಧಾಂತವನ್ನು ಪ್ರಾಥಮಿಕ ಹಂತದಿಂದ ಮಾಧ್ಯಮಿಕ ಹಂತದ ಶಿಕ್ಷಣದಲ್ಲಿ ಸಮಾವೇಶಗೊಳಿಸಿ ಪಠ್ಯ ಸಾಮಗ್ರಿಯನ್ನು ಸಿದ್ಧಗೊಳಿಸುವ ಅವಶ್ಯಕತೆ ಇದೆ. ಇನ್ನು ಎಲ್ಲೆಡೆ ಉಚ್ಚ ಮಟ್ಟದಲ್ಲಿ ಅಧ್ಯಯನ ಮಾಡುವುದಕ್ಕಾಗಿ ಪಠ್ಯ ಸಾಮಗ್ರಿಯನ್ನು ಸಿದ್ಧಗೊಳಿಸಿ ಇದನ್ನು ಸರ್ವತ್ರ ಎಲ್ಲಾ ಹಂತಗಳಲ್ಲಿ ತಲುಪಿಸುವ ಅವಶ್ಯಕತೆ ಇದೆ. ಪಾಠ್ಯ ಸಾಮಗ್ರಿಯನ್ನ ಮಾಡುವುದು. ಇದರ ಆಧಾರದಲ್ಲಿ ಪಠ್ಯಪುಸ್ತಕಗಳನ್ನು ಸಿದ್ಧಗೊಳಿಸುವುದು ಮತ್ತು ಈ ಪುಸ್ತಕಗಳ ಅಧ್ಯಯನ ಮತ್ತು ಅಧ್ಯಾಪನ ಮಾಡಿಸುವ ಕಾರ್ಯವನ್ನು ವಿಶ್ವವಿದ್ಯಾಲಯಗಳು ಮಾತ್ರವಲ್ಲದೆ, ಸಂಬಂಧಿತ ರಾಜ್ಯ ಸರಕಾರದ ಶಿಕ್ಷಣದ ಉಸ್ತುವಾರಿಯಲ್ಲಿರುವ ಸಮೂಹಗಳು ಕೂಡ ಮಾಡಬಹುದಾಗಿದೆ. ಹಾಗೂ ಪರೀಕ್ಷಕ ವೀಕ್ಷಣೆ ಮಾಡಿ ಇದನ್ನು ಪ್ರಾಜ್ಞರ ದೃಷ್ಟಿಕೋನದಿಂದ ವಿಸ್ತೃತ ವ್ಯಾಖ್ಯಾನದ ಅವಶ್ಯಕತೆ ಇರುವುದರಿಂದ ಭ್ರಷ್ಟ ವಿರೋಧಿ ಶಾಸ್ತ್ರದ ಪ್ರಚಾರ

ಪ್ರಸಾರ ಮತ್ತು ವಿಕಾಸದಾಯಿತ್ವ (ಹೊಣೆ) ವಿಶ್ವದ ಎಲ್ಲಾ ವಿಶ್ವವಿದ್ಯಾಲಯಗಳದ್ದಾಗಿರುತ್ತದೆ.

***

## 36. ಅಧ್ಯಯನ ಮತ್ತು ಸಂಶೋಧನೆ (Study and Amendment)

ಭ್ರಷ್ಟವಿರೋಧಿ ಶಾಸ್ತ್ರವು ವಿಶ್ವ ಪ್ರಾಜ್ಞವಂತಿಕೆಯ ಯಾತ್ರೆಯಲ್ಲಿ ಪ್ರಾರಂಭದ ಹೆಜ್ಜೆಯಾಗಿದೆ. ಈ ಶಾಸ್ತ್ರವು ವಿಚಾರ, ನೀತಿ, ವಿಧಿ ಹಾಗೂ ವಿಧಾನಗಳ ಮೂಲಕ ಪ್ರಸ್ತುತ ನವೀನ ದರ್ಶನವಾಗಿದೆ. ಅಂತೆಯೇ ಅನೇಕ ಅವಶ್ಯಕ ಸೂತ್ರಗಳು ಹಾಗೂ ತಥ್ಯಗಳಿಂದ ಪ್ರಮಾಣಿತವಾದ ಸಿದ್ಧಾಂತವಾಗಿದೆ. ವರ್ತಮಾನ ಸಮಯದಲ್ಲಿ ಈ ಭ್ರಷ್ಟವಿರೋಧಿ ಶಾಸ್ತ್ರ ಪೂರ್ಣವಾಗಿದೆ. ಆದರೂ ಅಧ್ಯಯನ ಮತ್ತು ಸಂಶೋಧನೆಯ ದೃಷ್ಟಿಯಿಂದ ಇದು ಪರಿಪೂರ್ಣವೆನಿಸದು. ಯಾವುದೇ ವಿಚಾರ ಹಾಗೂ ದರ್ಶನದ ಹುಟ್ಟು ಸಮಯದ ಅವಶ್ಯಕತೆಯನ್ನು ಬೋಧಿಸುವುದಕ್ಕಾಗಿಯೇ ಆಗಿರುತ್ತದೆ. ಈ ಸಮಯದಲ್ಲಿ ಈ ಶಾಸ್ತ್ರದ ಔಚಿತ್ಯ ಮತ್ತು ಅವಶ್ಯಕತೆ ಪುಷ್ಟೀಕರಿಸುತ್ತಾ ಭ್ರಷ್ಟಾಚಾರ ವಿರುದ್ಧದ ವಿಜ್ಞಾನವವನ್ನು ಅವಶ್ಯಕ ನೀತಿ ಹಾಗೂ ಸಿದ್ಧಾಂತದ ನಿರ್ಮಾಣ ಮಾಡಿ ಸಾಮಾಜಿಕ ವಿಜ್ಞಾನದ ಮೇರೆಯೊಳಗೆ ತಂದು ಮಹತ್ವಪೂರ್ಣವಾದ ಸ್ಥಾನವನ್ನು ಕೊಡಬೇಕು. ಪ್ರಜ್ಞಾವಂತರ ಕ್ಷೇತ್ರದಲ್ಲಿ ಭ್ರಷ್ಟಾಚಾರ ವಿರೋಧಿ ಶಾಸ್ತ್ರ ಇದು ವಿಜ್ಞಾನದ ರೂಪದಲ್ಲಿ ಸ್ಥಾಪಿತವಾಗಿ ಹೋಗಿದೆ.

ಪ್ರಸ್ತಾವನೆ, ಉದ್ದೇಶ ಮತ್ತು ಪರಿಭಾಷೆಯನ್ನು ವೈಜ್ಞಾನಿಕ ರೀತಿಯಿಂದ ಪರಿಭಾಷೆಯನ್ನು ಪ್ರಸ್ತುತ ಪಡಿಸುತ್ತಾ, ಭ್ರಷ್ಟಾಚಾರ ವಿರುದ್ಧದ ವಿಜ್ಞಾನ ಅನ್ಯ ಸಾಮಾಜಿಕ ವಿಜ್ಞಾನದ ಹೊರತಾಗಿ, ಅನ್ಯ ಶಾಸ್ತ್ರಗಳೊಂದಿಗೆ ಸಂಬಂಧ ಸ್ಥಾಪಿಸುವಲ್ಲಿ ಸಮರ್ಥವಾಗಿದೆ. ಗುಣ ಅವಗುಣಗಳ ಟಿಪ್ಪಣಿ, ನೀತಿ ಹಾಗೂ ಸಿದ್ಧಾಂತದ ವ್ಯಾಖ್ಯಾನ, ಅಧ್ಯಯನ ಹಾಗೂ ಸಂಶೋಧಯ ಮಹತ್ವದ ವಿಷಯದಲ್ಲಿ ವ್ಯಾಖ್ಯಾನ ಮಾಡುತ್ತಾ ಅನ್ಯ ಶಾಸ್ತ್ರಗಳ (ಸಿದ್ಧಾಂತಗಳ) ಸಾಲಿನಲ್ಲಿ ಸೇರಿಕೊಂಡಿದೆ. ಭ್ರಷ್ಟಾಚಾರ ಒಂದು ಮನೋರೋಗವಾಗಿದೆ. ಇದರ ಉಪಚಾರವು (ಚಿಕಿತ್ಸೆ)

ಸಂಭವವುದೆ, ಆದ್ದರಿಂದ ಉಪಚಾರದ ವಿಧಿ ವಿಧಾನಗಳ ವ್ಯಾಖ್ಯಾನವನ್ನು ಮಾಡಿ, ಪ್ರಸ್ತುತಪಡಿಸಲಾಗಿದೆ. ಈ ಶಾಸ್ತ್ರವು ಮಾನವ ಸಮಸ್ಯೆಗೆ ಸಮಾಧಾನ (ಪರಿಹಾರ) ನೀಡುತ್ತಾ ಮಾನವ ಸಮಾಜದ ವಿಕಾಸವನ್ನು ಮಾಡಬಲ್ಲುದಾಗಿದೆ. ಇದು ಕೂಡ ಪ್ರಮಾಣಿತವಾಗಿದೆ. ಸಂಕ್ಷೇಪವಾಗಿ ಹೇಳುವುದಾದರೆ, ಭ್ರಷ್ಟ ವಿರೋಧಿ ಶಾಸ್ತ್ರ, ಭ್ರಷ್ಟಾಚಾರ ವಿರುದ್ಧದ ವಿಜ್ಞಾನದ ರೂಪದಲ್ಲಿ ಪರಿಪೂರ್ಣವಾಗಿದೆ. ಇದೇ ಪೂರ್ಣತ್ವದ ಕಾರಣದಿಂದಾಗಿ ಇದು ಭ್ರಷ್ಟಾಚಾರ ವಿರುದ್ಧದ ಅಧ್ಯಯನ ಅಧ್ಯಾಪನದ ಕಾರ್ಯ ಪ್ರಾರಂಭ ಮಾಡಬಲ್ಲುದಾಗಿದೆ. ಆದರೂ ಇದು ಪೂರ್ಣವೆನಸಿದರೂ, ಅಪೂರ್ಣವಾಗಿದೆ. ಕಾರಣ ಸಮಯಾನುಸಾರ ತತ್ಕಾಲೀನ ಸಮಯಕ್ಕನುಗುಣವಾಗಿ ಇದರ ಅಧ್ಯಯನ ಹಾಗೂ ಸಂಶೋಧನೆಯಿಂದ ಇದರಲ್ಲಿ ಶೋಧಗಳು ಆಗುತ್ತಿರಬಹುದು. ಇದು ನಿಶ್ಚಿತ.

ಈ ಸಿದ್ಧಾಂತವು ಇಂದಿನ ಪ್ರಾರಂಭಿಕ ಅವಶ್ಯಕತೆಯನ್ನು ಪೂರ್ತಿಗೊಳಿಸಬಹುದು. ಆದರೆ ಸಮಯದ ಗತಿಯಿಂದ ಉತ್ಪನ್ನವಾಗುವ ಪರಿಣಾಮವನ್ನು ಇದು ಸ್ವೀಕಾರ ಮಾಡಲೇ ಬೇಕಾಗುತ್ತದೆ. ಇದೀಗ ಇಪ್ಪತ್ತೊಂದನೇ ಶತಮಾನದ ಮೂರನೇ ದಶಕವಿದು. ಸಮಯದ ಶೀಘ್ರ ಪರಿವರ್ತನೆಯನ್ನು ಇದು ಸಂಭೋಧಿಸಲಾರದೆ ಹೋದರೆ, ಇದರ ಸಫಲತೆಯಲ್ಲಿ ಅಡ್ಡಿ ಯುಂಟಾಗಬಹುದು. ಸಮಯದ ಗತಿಯು ಸಮಾಜದ ಪರಿಸ್ಥಿತಿಯನ್ನು ಪರಿವರ್ತಿಸಿ ಯಾವ ರೀತಿ ಮುಂದುವರೆಯುತ್ತಿದೆ, ಅದೇ ಗತಿಯಲ್ಲಿ ಈ ಭ್ರಷ್ಟವಿರೋಧಿ ಶಾಸ್ತ್ರವನ್ನು ಕೂಡ ಸಮಯಾನುಸಾರವಾಗಿ ಪರಿವರ್ತನೆ ಮಾಡುತ್ತಾ ಮುಂದುವರಿಯಬೇಕಾಗುತ್ತದೆ. ಇದಕ್ಕಾಗಿ ಅಧ್ಯಯನ ವಿಶ್ಲೇಷಣೆ ಮತ್ತು ಶೋಧ ಕಾರ್ಯವನ್ನು ನಿರಂತರವಾಗಿಸುತ್ತಾ ಸಂಶೋಧನೆಯನ್ನು ಸ್ವೀಕರಿಸುತ್ತಾ ಹೋಗಬೇಕಾಗುತ್ತದೆ.

ಈ ಭ್ರಷ್ಟವಿರೋಧಿ ಶಾಸ್ತ್ರ ಸ್ವಭಾವದಿಂದಲೇ ಅಧ್ಯಯನ ಶೀಲ, ಪರಿವರ್ತನಶೀಲವಾಗಿದೆ ಮತ್ತು ಸಂಶೋಧನೆಯನ್ನು ಆತ್ಮವಶವಾಗಿ ಸ್ವೀಕರಿಸುವಲ್ಲಿ ಸಮರ್ಥವಾಗಿದೆ. ಆದ್ದರಿಂದ ಈ ಭ್ರಷ್ಟವಿರೋಧಿ ಶಾಸ್ತ್ರದ ಅಧ್ಯಯನ ಶೋಧ, ವಿಶ್ಲೇಷಣೆ ಹಾಗೂ ಸಂಶೋಧನೆಯನ್ನು ಸರ್ವತ್ರ ತೆರೆದಿಡಲಾಗಿದೆ. ಇದಕ್ಕಾಗಿ ವಿದ್ವಾಂಸರು ಅಧ್ಯಯನಶೀಲರು, ಸಮಾಜ ಶಾಸ್ತ್ರಜ್ಞರು, ಅಧ್ಯಯನ ಸಂಸ್ಥಾನ ಹಾಗೂ ಪ್ರಜ್ಞಾವಂತರ ಕ್ಷೇತ್ರದಿಂದ ವಿಶೇಷ ಯೋಗದಾನದ (ಸಹಯೋಗದ) ಅವಶ್ಯಕತೆ ಇದೆ. ಇದರೊಂದಿಗೆ ಜಗತ್ತಿನ ಎಲ್ಲಾ ಶಿಕ್ಷಣ ಕ್ಷೇತ್ರಗಳಲ್ಲಿ ಕ್ರಿಯಾಶೀಲ ವಿಶ್ವವಿದ್ಯಾಲಯಗಳಲ್ಲಿ ಭ್ರಷ್ಟ ವಿರೋಧಿ ಶಾಸ್ತ್ರದ ಅಧ್ಯಯನ ಅನುಸಂಧಾನ ವಿಶ್ಲೇಷಣ ಮತ್ತು ಶೋಧ ಕಾರ್ಯಗಳನ್ನು ಸಮಯದ ಬೇಡಿಕೆಯಂತೆ

(ಅಪೇಕ್ಷಾನುಸಾರ) ಸಂಶೋಧನೆ ಮಾಡುವ ವಾತಾವರಣ ಸಿದ್ಧಗೊಳಿಸುವುದು ಅವಶ್ಯಕವಾಗಿದೆ. ದೇಶ ಮಾನವ ಸಮಾಜ ಮತ್ತು ಸಮಯಾನುಸಾರವಾಗಿ ಸಂಶೋಧನೆಯನ್ನು ಸ್ವೀಕರಿಸಿ, ಭ್ರಷ್ಟವಿರೋಧಿ ಶಾಸ್ತ್ರ ಮಾನವ ಸಮಾಜದ ವಿಕಾಸದಲ್ಲಿ ಸಹಯೋಗದ ಪಾತ್ರವನ್ನು ನಿರ್ವಹಿಸುವ ವಿಶ್ವಾಸವನ್ನು ಹೊಂದಿದೆ.

**" ಓಂ ಶಿವಂ ಭೂಯಾತ್ "**